# ಕರ್ನಾಟಕ ವಿಧಾನಮಂಡಲ

**ಕರ್ನಾಟಕ ಶಾಸಕಾಂಗ ಪತ್ರಿಕೆ**

**(ತ್ರೈಮಾಸಿಕ ಪತ್ರಿಕೆ)**

**ಏಪ್ರಿಲ್ – ಮೇ – ಜೂನ್ 2020**

**ಸಂಖ್ಯೆ – 2**

**ಪ್ರಕಟಣೆ:**

**ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ,**

**ಕರ್ನಾಟಕ ವಿಧಾನ ಸಭೆ ಸಚಿವಾಲಯ, ವಿಧಾನಸೌಧ,**

**ಬೆಂಗಳೂರು – 560 233.**

## ವಿಶೇಷ ಸೂಚನೆ

ಕರ್ನಾಟಕ ಶಾಸಕಾಂಗ ಪತ್ರಿಕೆಯು ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತಿನ ಸದಸ್ಯರುಗಳ ಪರಾಮರ್ಶೆಗಾಗಿ ಪ್ರಕಟಿಸಲಾಗುತ್ತಿದ್ದು, ಇದು ಆಂತರಿಕ ಪ್ರಕಟಣೆಗೆ ಮಾತ್ರ ಸೀಮಿತವಾಗಿರುತ್ತದೆ.

ಈ ಪತ್ರಿಕೆಯಲ್ಲಿ ಅಳವಡಿಸಲಾಗಿರುವ ಮಾಹಿತಿಗಳು ವಿವಿಧ ದಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗಳ ಆಧಾರಿತವಾಗಿದ್ದು, ಇದರಲ್ಲಿ ನ್ಯೂನತೆ, ವ್ಯತ್ಯಾಸಗಳಿಂದ ಅಥವಾ ನಿಖರತೆಯ ಕೊರತೆಯಿಂದ ಯಾವುದೇ ವ್ಯಕ್ತಿಗೆ ಉಂಟಾಗಬಹುದಾದ ನಷ್ಟ/ಹಾನಿಗೆ ವಿಧಾನ ಸಭಾ ಸಚಿವಾಲಯವು ಯಾವುದೇ ರೀತಿ ಜವಾಬ್ದಾರವಾಗುವುದಿಲ್ಲ.

# ಮುನ್ನುಡಿ

ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಮಾನ್ಯ ಸದಸ್ಯರುಗಳ ಉಪಯೋಗಕ್ಕಾಗಿ ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪುಟ – II ರ ದ್ವಿತೀಯ ಸಂಚಿಕೆಯನ್ನು ಪ್ರಕಟಪಡಿಸುತ್ತಿದೆ.

ತ್ರೈಮಾಸಿಕ ಶಾಸಕಾಂಗ ಪತ್ರಿಕೆಯು ಮುಖ್ಯವಾಗಿ ಕರ್ನಾಟಕ ವಿಧಾನಮಂಡಲದ ಎರಡೂ ಸದನಗಳ ಶಾಸಕಾಂಗದ ಸುದ್ದಿಗಳು, ಲೋಕಸಭೆ, ರಾಜ್ಯಸಭೆಗಳ, ಸಂಸದೀಯ ವ್ಯವಹಾರಗಳಿಗೆ ಸಂಬಂಧಿಸಿದ ಪ್ರಮುಖ ಸುದ್ದಿಗಳು, ರಾಜ್ಯಗಳ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಹಾಗೂ ಇತರೆ ವಿಷಯಗಳನ್ನೊಳಗೊಂಡಿರುತ್ತದೆ.

ಈ ಸಂಚಿಕೆಯಲ್ಲಿ 2020ನೇ ಸಾಲಿನ ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಅವಧಿಯಲ್ಲಿನ ಪ್ರಮುಖ ಸುದ್ದಿ, ಮಾಧ್ಯಮಗಳಲ್ಲಿ ಪ್ರಕಟವಾದ ದೈನಂದಿನ ಸುದ್ದಿಗಳನ್ನು ಸಂಗ್ರಹಿಸಿ ಪ್ರಕಟಿಸಲಾಗಿದೆ.

ಸಂಶೋಧನಾ ಮತ್ತು ಉಲ್ಲೇಖನಾ ವಿಭಾಗವು ಸಿದ್ಧಪಡಿಸಿ ಹೊರತರುತ್ತಿರುವ ಈ ಪತ್ರಿಕೆಯ ಗುಣಮಟ್ಟವನ್ನು ಉನ್ನತೀಕರಿಸಲು ಹಾಗೂ ಹೆಚ್ಚು ವಿಷಯಾಸಕ್ತವಾಗಿಸಲು ಇದರ ಬೆಳವಣಿಗೆಯ ಸುಧಾರಣೆಗೆ ಮಾನ್ಯ ಸದಸ್ಯರುಗಳಿಂದ ಅಮೂಲ್ಯ ಸಲಹೆ ಮತ್ತು ಸೂಚನೆಗಳನ್ನು ಬರಹ ರೂಪದಲ್ಲಿ ಸ್ವೀಕರಿಸಲು ಸದಾ ಸ್ವಾಗತವಿರುತ್ತದೆ.

**ಎಂ.ಕೆ.ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ),
ಕರ್ನಾಟಕ ವಿಧಾನ ಸಭೆ.

ಬೆಂಗಳೂರು
ದಿನಾಂಕ: 30–11–2020

## ಕರ್ನಾಟಕ ಶಾಸಕಾಂಗ ತ್ರೈಮಾಸಿಕ ಪತ್ರಿಕೆಯ ಸಂಪಾದಕ ವರ್ಗ

### ಕರ್ನಾಟಕ ವಿಧಾನ ಸಭೆ ಸಚಿವಾಲಯ

| | |
|---|---|
| 1. ಶ್ರೀಮತಿ ಎಂ.ಕೆ. ವಿಶಾಲಾಕ್ಷಿ | : ಕಾರ್ಯದರ್ಶಿ (ಪ್ರ) |
| 2. ಶ್ರೀಮತಿ ಎಂ. ಮಂಜುಳ | : ಜಂಟಿ ನಿರ್ದೇಶಕರು |
| 3. ಶ್ರೀಮತಿ ಎಸ್. ಶೋಭಾವತಿ | : ಉಪ ನಿರ್ದೇಶಕರು |
| 4. ಶ್ರೀಮತಿ ಜಿ. ಮಮತ | : ಸಹಾಯಕ ನಿರ್ದೇಶಕರು |

### ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ

| | |
|---|---|
| 1. ಶ್ರೀಮತಿ ಕೆ. ಆರ್. ಮಹಾಲಕ್ಷ್ಮಿ | : ಕಾರ್ಯದರ್ಶಿ |
| 2. ಶ್ರೀಮತಿ ಎಸ್. ನಿರ್ಮಲ | : ಜಂಟಿ ಕಾರ್ಯದರ್ಶಿ |

# ಕರ್ನಾಟಕ ಶಾಸಕಾಂಗ ಪತ್ರಿಕೆ

## (ತ್ರೈಮಾಸಿಕ ಪತ್ರಿಕೆ)

## ಏಪ್ರಿಲ್, ಮೇ, ಜೂನ್ 2020

## ಸಂಪುಟ–II ಸಂಚಿಕೆ – 2

## ಪರಿವಿಡಿ


| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| | **ಭಾಗ–1**<br>**ವಿಧಾನ ಮಂಡಲದ ಸುದ್ದಿಗಳು** | |
| 1. | ವಿಧಾನ ಸಭಾಧ್ಯಕ್ಷರಿಗೆ ಪರಮೋಚ್ಚ ಅಧಿಕಾರವಿರಲಿ<br>ಪಕ್ಷಾಂತರ ನಿಷೇಧ ಕಾಯ್ದೆ: ಸ್ಪೀಕರ್ ಬಳಿ ಸಂಸದೀಯ ಗಣ್ಯರ ಅಭಿಪ್ರಾಯ | 01 |
| | **ಭಾಗ–2**<br>**ಕೇಂದ್ರ ಸರ್ಕಾರದ ಸುದ್ದಿಗಳು** | |
| 1. | ಉದ್ಯೋಗ: ನಿಯಮಾವಳಿ ರೂಪಿಸಿದ ಕೇಂದ್ರ | 08 |
| 2. | ದಿಗ್ಬಂಧನ: ಸಲಹೆ ಕೇಳಿದ ಮೋದಿ | 08 |
| 3. | 9 ನಿಮಿಷ ದೀಪ ಹಚ್ಚಿ : ಮೋದಿ ಕರೆ | 08 |
| 4. | ಮನೆಯಿಂದ ಹೊರ ಬರುವಾಗ ಮಾಸ್ಕ್ ಧರಿಸಿ | 09 |
| 5. | ಸೋನಿಯಾ, ಪ್ರಣವ್ ಜೊತೆ ಮೋದಿ ಚರ್ಚೆ | 09 |
| 6. | ಅಭಯಾರಣ್ಯಗಳಲ್ಲಿ ಸಂಚಾರ ನಿರ್ಬಂಧಕ್ಕೆ ಕೇಂದ್ರದ ಆದೇಶ | 10 |
| 7. | ವೇತನ ನಿಧಿಗೆ ಕತ್ತರಿ | 10 |
| 8. | ಸೋಂಕು ನಿಯಂತ್ರಣಕ್ಕೆ ಮತ್ತಷ್ಟು ಕ್ರಮ | 10 |
| 9. | ಐದು ಪ್ರತಿಜ್ಞೆ: ಕಾರ್ಯಕರ್ತರಿಗೆ ಮೋದಿ ಸಲಹೆ | 11 |
| 10. | ರಾಜ್ಯಗಳಿಗೆ ರೂ. 14,103 ಕೋಟಿ ಬಿಡುಗಡೆ | 11 |
| 11. | ಕೇಂದ್ರದ ಜೊತೆ ನಿಂತ ಪ್ರತಿಪಕ್ಷಗಳು | 12 |
| 12. | 20ರ ಬಳಿಕ ಸೀಮಿತ ವಿನಾಯಿತಿ | 13 |
| 13. | ಸೋಂಕು ದುಪ್ಪಟ್ಟು ಅವಧಿ ದ್ವಿಗುಣ | 14 |
| 14. | ದೇಶಿ ಕಂಪೆನಿಗಳ ರಕ್ಷಣೆಗೆ ಕೇಂದ್ರದ ನೀತಿ | 15 |
| 15. | ದೇಶಕ್ಕೆ ಅಗೋಚರ ಯುದ್ಧ | 15 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 16. | ಭಾರತಕ್ಕೆ ರೂ.45.16 ಕೋಟಿ ನೆರವು | 16 |
| 17. | ಕೋವಿಡ್–19: ನಾಲ್ಕು ರಾಜ್ಯಕ್ಕೆ ಕೇಂದ್ರ ತಂಡ | 16 |
| 18. | ರಸಗೊಬ್ಬರ ಸಬ್ಸಿಡಿ ಹೆಚ್ಚಿಸಿದ ಕೇಂದ್ರ | 16 |
| 19. | ಹಾಟ್‌ಸ್ಪಾಟ್‌ನಲ್ಲಿ ಕಠಿಣ ನಿರ್ಬಂಧ | 16 |
| 20. | ಅಂತರರಾಜ್ಯ ರಸ್ತೆ ತಡೆ ತೆರವಿಗೆ ಗಡ್ಕರಿ ಸೂಚನೆ | 17 |
| 21. | ಐಟಿ ವಲಯಕ್ಕೆ ಕಾರ್ಯತಂತ್ರ ಸಮಿತಿ ರಚನೆ | 17 |
| 22. | ಒಗ್ಗಟ್ಟಿನ ಉತ್ತರವೇ ಮುಖ್ಯವಾಗಲಿ | 18 |
| 23. | ವಲಸಿಗರ ಸಂಚಾರಕ್ಕೆ ಅನುಮತಿ | 18 |
| 24. | ಅಧಿವೇಶನ ಪರಿಸ್ಥಿತಿ ಆಧರಿಸಿ ನಿರ್ಧಾರ | 19 |
| 25. | ಆರೋಗ್ಯ ಸೇತು ಕಡ್ಡಾಯ | 19 |
| 26. | ವಂದೇ ಭಾರತ್ ಏರ್ ಲಿಫ್ಟ್‌ಗೆ ಚಾಲನೆ | 20 |
| 27. | ಸಿಎಂಗಳ ಜೊತೆ ಪಿಎಂ ಐದನೇ ಸುತ್ತಿನ ಸಭೆ ಲಾಕ್‌ಡೌನ್ ಕುರಿತಂತೆ ನಿರ್ಧಾರ | 20 |
| 28. | ಹೈನುಗಾರಿಕೆಗೆ ಪ್ರಧಾನಿ ನೆರವು : ಕೇಂದ್ರ ಸರ್ಕಾರದಿಂದ ರೂ.15,000 ಕೋಟಿ ಘೋಷಣೆ | 21 |
| 29. | ರೈತರು, ವಲಸಿಗರು, ರಸ್ತೆ ಬದಿ ಕಾರ್ಮಿಕರಿಗೆ ಕೇಂದ್ರದ ಬಂಪರ್ ನೆರವಿನ ಘೋಷಣೆ | 21 |
| 30. | ಕೃಷಿಕರಿಗೆ ಬಂಪರ್ | 22 |
| 31. | ಆರ್ಥಿಕ ಪ್ಯಾಕೇಜ್ 5.0 | 23 |
| 32. | ನರೇಗಾ ನೆಮ್ಮದಿ : ಹೆಚ್ಚುವರಿಯಾಗಿ ರೂ.40,000 ಕೋಟಿ ಅನುದಾನ | 25 |
| 33. | ಕೆಲಸದ ಸ್ಥಳಗಳಲ್ಲಿ ಉಗುಳಿದರೆ ದಂಡ | 25 |
| 34. | ಕಚೇರಿ ಕೆಲಸಕ್ಕೆ ಮಾರ್ಗಸೂಚಿಗಳು | 25 |
| 35. | ಆರ್ಥಿಕತೆಗೆ ಶಕ್ತಿ ತುಂಬಲು ಆರ್‌ಬಿಐ ಹರಸಾಹಸ | 26 |
| 36. | ಭಾರತ – ಚೀನಾ ಟೆನ್ಷನ್ | 27 |
| 37. | ಆಧಾರ್ ನೀಡಿದರೆ 10 ನಿಮಿಷಗಳಲ್ಲೇ ಪ್ಯಾನ್ ಸೌಲಭ್ಯ ಶುರು | 28 |
| 38. | ಮಿತಿ ಮೀರಿದ ಮಿಡತೆ ಹಾವಳಿ | 28 |
| 39. | ಜೂನ್ 8ಕ್ಕೆ ಭಾರತ ಅನ್‌ಲಾಕ್ | 28–30 |
| 40. | ಸಮಸ್ತ ಸ್ವಾಭಿಮಾನಿ ಭಾರತೀಯರಿಗೆ ಪ್ರಧಾನಿ ಮೋದಿ ಬಹಿರಂಗ ಪತ್ರ | 30–31 |
| 41. | ಕೊರೊನಾ: ಭಾರತ ಈಗ ನಂ.7 | 32 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 42. | ಆನೆ ಹತ್ಯೆ: ಕೇಂದ್ರದಿಂದಲೇ ತನಿಖೆ | 33 |
| 43. | 11788 ಸೋಂಕು, 389 ಸಾವು | 33–34 |
| 44. | ಕೇಂದ್ರ ಗೃಹ ಸಚಿವಾಲಯದಿಂದ ರಾಜ್ಯ ಸರ್ಕಾರಗಳಿಗೆ ಕಟ್ಟುನಿಟ್ಟಿನ ನಿರ್ದೇಶನ | 35 |
| 45. | ಲೇಟ್ ರಿಟರ್ನ್ಸ್ ಫೀನಿಂದ ವಿನಾಯ್ತಿ | 35 |
| 46. | ಮಾಸ್ಕ್, ಸಾಮಾಜಿಕ ಅಂತರ ಕಡ್ಡಾಯಕ್ಕೆ ಪ್ರಧಾನಿ ಸಲಹೆ | 36 |
| 47. | ಚೀನಾ ಗಡಿಯಲ್ಲಿ ಯುದ್ಧ ಭೀತಿ | 36 |
| 48. | ಕೋವಿಡ್ ನಿರ್ವಹಣೆಯಲ್ಲಿ ರಾಜ್ಯದ ಕಾರ್ಯವೈಖರಿಗೆ ಕೇಂದ್ರ ಆರೋಗ್ಯ ಸಚಿವಾಲಯ ಮೆಚ್ಚುಗೆ | 37 |
| 49. | ಗರೀಬ್ ಕಲ್ಯಾಣ ಯೋಜನೆಗೆ ಪ್ರಧಾನಿ ಚಾಲನೆ | 37 |
| 50. | ಪ್ಯಾನ್ – ಆಧಾರ್ ಲಿಂಕ್ ಗಡುವು ವಿಸ್ತರಣೆ | 38 |
| 51. | ರಾಜ್ಯಕ್ಕೆ ರೂ. 4314 ಕೋಟಿ : ಜಿ.ಎಸ್.ಟಿ ಪರಿಹಾರ ಬಿಡುಗಡೆ | 38 |
| 52. | ಸಹಕಾರ ಬ್ಯಾಂಕ್‌ಗಳು ಆರ್‌ಬಿಐ ಉಸ್ತುವಾರಿಗೆ | 39 |
| 53. | ದೆಹಲಿಯಲ್ಲಿ ದೇಶದ ಅತಿ ದೊಡ್ಡ ಕೋವಿಡ್ ಕೇರ್ ಸೆಂಟರ್ | 39 |
| 54. | ಸಿಬಿಎಸ್‌ಇ, ಐಸಿಎಸ್‌ಇ 10, 12ನೇ ತರಗತಿ ಬಾಕಿ ಪರೀಕ್ಷೆ ರದ್ದು | 40 |
| 55. | ರಾಷ್ಟ್ರ ರಾಜಧಾನಿ ಬಾಗಿಲಲ್ಲಿ ಮಿಡತೆಗಳ ಸೈನ್ಯ | 40 |
| 56. | ಕೇಂದ್ರ ಮಾರ್ಗದರ್ಶಿ ಸೂತ್ರ ಬದಲಾವಣೆ | 41 |
| | **ಭಾಗ–3**<br>**ರಾಜ್ಯ ಸರ್ಕಾರದ ಸುದ್ದಿಗಳು** | |
| 1. | ಇನ್ಫೋಸಿಸ್ ಫೌಂಡೇಷನ್‌ನಿಂದ ರೂ.100 ಕೋಟಿ ದೇಣಿಗೆ | 42 |
| 2. | ನಂದಿನಿ ಮಳಿಗೆಗಳಲ್ಲಿ ಹಣ್ಣು, ತರಕಾರಿ | 42 |
| 3. | ಕರಗ ಆಚರಣೆಗೆ ಷರತ್ತುಬದ್ಧ ಅನುಮತಿ | 42 |
| 4. | ಕೋವಿಡ್: ಸಚಿವ ಸುರೇಶ್ ಕುಮಾರ್ ಸರ್ಕಾರದ ವಕ್ತಾರ | 42 |
| 5. | ಕನ್ನಡದಲ್ಲೂ 'ಆರೋಗ್ಯ ಸೇತು' ಮೊಬೈಲ್ ಆ್ಯಪ್ | 43 |
| 6. | ಕೋವಿಡ್ 19–ಡ್ಯಾಶ್ ಬೋರ್ಡ್ ಉದ್ಘಾಟಿಸಿದ ವೈದ್ಯಕೀಯ ಶಿಕ್ಷಣ ಸಚಿವ | 43 |
| 7. | ಸಚಿವರು, ಶಾಸಕರ ಶೇ.30ರಷ್ಟು ವೇತನ, ಭತ್ಯೆ ಕಡಿತ | 43 |
| 8. | ರಾಜ್ಯದಲ್ಲೇ ಮೊದಲ ಪ್ರಯೋಗ – ಜನ ಹೊರಬಂದರೆ ಕೇಸ್, ವಾಹನ ಓಡಾಟ ಬಂದ್, ಸೀಲ್ ಡೌನ್ | 44 |
| 9. | ಮನೆ ಹೊರಗೆ ಮಾಸ್ಕ್ ಕಡ್ಡಾಯ | 44 |
| 10. | ಏಪ್ರಿಲ್–30ರವರೆಗೆ ಲಾಕ್‌ಡೌನ್ ನಿಶ್ಚಿತ | 45 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 11. | ದಿಢೀರ್ ನಗರ ಸುತ್ತಾಟ: ಅಹವಾಲು ಆಲಿಸಿ ಭರವಸೆ ತುಂಬಿದ ಮುಖ್ಯಮಂತ್ರಿ | 45 |
| 12. | ಪ್ರತಿ ಜಿಲ್ಲೆಯಲ್ಲೂ ಕೇಂದ್ರ ತೆರೆಯಲು ಸಚಿವರ ಸಭೆಯಲ್ಲಿ ನಿರ್ಧಾರ ಎರಡು ಪರೀಕ್ಷಾ ಕೇಂದ್ರ ಸ್ಥಾಪನೆ | 46 |
| 13. | 12 ಸಾವಿರ ಮೂಲೆ ನಿವೇಶನ ಹರಾಜು | 46 |
| 14. | ಕೋವಿಡ್–19 ಸೋಂಕು ನಿಯಂತ್ರಣಕ್ಕೆ ಕ್ರಮ | 47 |
| 15. | ಕೋವಿಡ್ ಸಮಗ್ರ ಮಾಹಿತಿಗೆ ಡ್ಯಾಶ್ ಬೋರ್ಡ್ | 48 |
| 16. | ಕೋವಿಡ್: ಆಯುರ್ವೇದ ಚಿಕಿತ್ಸೆಗೆ ರಾಜ್ಯ ಸರ್ಕಾರ ಸಮ್ಮತಿ | 48 |
| 17. | ಎಂಟು ಹಾಟ್‌ಸ್ಪಾಟ್ ಜಿಲ್ಲೆಗಳಲ್ಲಿ ಹೆಚ್ಚು ನಿಗಾ | 48 |
| 18. | ಕೃಷಿ ಉತ್ಪನ್ನ ಸಾಗಾಣೆಗೆ ಅಡ್ಡಿಯಿಲ್ಲ: ಸಚಿವರು | 49 |
| 19. | 2 ಲಕ್ಷ ತ್ವರಿತ ಪರೀಕ್ಷಾ ಕಿಟ್ ಖರೀದಿ | 49 |
| 20. | ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 315ಕ್ಕೆ ಏರಿಕೆ, ಹೊಸದಾಗಿ 152 ಮಂದಿ ಆಸ್ಪತ್ರೆಗೆ 2,780 ಶಂಕಿತರ ಮಾದರಿ ಪರೀಕ್ಷೆಗೆ ರವಾನೆ | 49 |
| 21. | ಕೋವಿಡ್ ಸೋಂಕು ಮಾದರಿ ಸಂಗ್ರಹಕ್ಕೆ 'ಮೊಬೈಲ್ ಟೆಸ್ಟಿಂಗ್ ಕಿಯೋಸ್ಕ್' | 50 |
| 22. | 35 ಲಕ್ಷ ಕಟ್ಟಡಗಳ ಸಕ್ರಮಕ್ಕೆ ಒಪ್ಪಿಗೆ | 51 |
| 23. | ಸೋಂಕಿತರ ಪರೀಕ್ಷೆ ಪ್ರಮಾಣ ಹೆಚ್ಚಿಸಿ | 51 |
| 24. | ಐಟಿ–ಬಿಟಿ ಶೇ.50 ರಷ್ಟು ಸಿಬ್ಬಂದಿ ಕಚೇರಿಗೆ | 52 |
| 25. | 10 ಪ್ರಯೋಗಾಲಯಗಳು ಶೀಘ್ರ ಆರಂಭ | 52 |
| 26. | ಎಪಿಎಲ್, ಬಿಪಿಎಲ್ ಕುಟುಂಬಗಳಿಗೆ ಸರ್ಕಾರದ ಕೊಡುಗೆ | 53 |
| 27. | ಹೆಜ್ಜೆ ಹಿಂದಿಟ್ಟ ಸರ್ಕಾರ | 53 |
| 28. | 3 ಲಕ್ಷ ಪಿಪಿಇ ಕಿಟ್ ಖರೀದಿಗೆ ಆದೇಶ | 54 |
| 29. | ಜಿಲ್ಲೆಗಳಲ್ಲಿ ಪ್ರಯೋಗಾಲಯ ಸ್ಥಾಪಿಸಿ | 54 |
| 30. | 3 ತಿಂಗಳು ಉಚಿತ ಸಿಲಿಂಡರ್, ಸಂಪುಟ ಸಭೆ ತೀರ್ಮಾನ | 55 |
| 31. | ಬಜೆಟ್: ಕೋವಿಡ್ ಕಡೆಗಣನೆ | 55 |
| 32. | ರಾಜ್ಯದಲ್ಲಿ ಪ್ಲಾಸ್ಮಾ ಚಿಕಿತ್ಸೆಗೆ ಕೇಂದ್ರ ಸರ್ಕಾರದ ಒಪ್ಪಿಗೆ | 56 |
| 33. | ಬಡವರಿಗೆ ಉಚಿತ ಹಾಲು: ಬಿ.ಎಸ್.ವೈ | 57 |
| 34. | ಜಿಟಿಟಿಸಿಯಲ್ಲಿ ವೆಂಟಿಲೇಟರ್ ಬಿಡಿಭಾಗ ಅಭಿವೃದ್ಧಿ | 57 |
| 35. | ವೈದ್ಯರ ಮೇಲಿನ ಹಲ್ಲೆಗೆ ಏಳು ವರ್ಷಗಳ ಸಜೆ | 57 |
| 36. | ಕೊರೊನಾ ನಿರ್ವಹಣೆಗೆ "ಆಪ್ತಮಿತ್ರ" | 58 |
| 37. | ಭೂಕುಸಿತ: ಅಧ್ಯಯನ ಸಮಿತಿ ರಚನೆ | 58 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 38. | ರೈತರ ನೆರವಿಗೆ ಸರ್ಕಾರ | 58 |
| 39. | ಎಸ್.ಎಸ್.ಎಲ್.ಸಿ ಪರೀಕ್ಷೆ ರದ್ದಾಗುವುದಿಲ್ಲ ಸಚಿವರ ಸ್ಪಷ್ಟನೆ | 59 |
| 40. | ಆರೋಗ್ಯ ಕೇಂದ್ರಕ್ಕೆ ರೂ.50 ಸಾವಿರ | 59 |
| 41. | ಪ್ರಾಯೋಗಿಕ ಪ್ಲಾಸ್ಮಾ ಚಿಕಿತ್ಸೆಗೆ ಚಾಲನೆ | 59 |
| 42. | ಕಿದ್ವಾಯಿಯಲ್ಲಿ ಸೋಂಕು ಪತ್ತೆ ಪರೀಕ್ಷೆಗೆ ಚಾಲನೆ | 60 |
| 43. | ಸರಳವಾಗಿ ಬಸವ ಜಯಂತಿ ಆಚರಣೆ. ಸಾಮಾಜಿಕ ಮಾಧ್ಯಮಗಳಲ್ಲಿ ಗೌರವ ಸಂದೇಶ | 60 |
| 44. | ತರಕಾರಿ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ನೀಡಿ: ದೇವೇಗೌಡ | 61 |
| 45. | ಲಾಕ್‌ಡೌನ್ ಸದ್ಯಕ್ಕೆ ಮುಗಿಯದು | 61 |
| 46. | ಬಿಸಿಯೂಟ ನೌಕರರ ಸಂಭಾವನೆ ಹೆಚ್ಚಿಸಿ : ಕೇಂದ್ರ ಸರ್ಕಾರಕ್ಕೆ ಸಚಿವರ ಮನವಿ | 62 |
| 47. | ಶ್ರಮಿಕರಿಗೆ ವಿಶೇಷ ಪ್ಯಾಕೇಜ್ ನೀಡಿ | 62 |
| 48. | 14 ಜಿಲ್ಲೆಗಳಲ್ಲಿ ತೆರೆದ ಬಾಗಿಲು | 63 |
| 49. | ರಸಗೊಬ್ಬರ ದರಪಟ್ಟಿ ಪ್ರದರ್ಶನ ಕಡ್ಡಾಯ | 63 |
| 50. | ಕನ್ನಡಿಗರನ್ನು ಕರೆತರಲು ಸಿದ್ಧತೆ | 63 |
| 51. | ಇಲಾಖೆಗಳ ವೆಚ್ಚಕ್ಕೆ ಮೂಗುದಾರ | 64 |
| 52. | ಉತ್ಪನ್ನ ಮಾರಾಟಕ್ಕೆ ವಾರ್ ರೂಂ ಸಂಪರ್ಕಿಸಿ | 64 |
| 53. | ನೂತನ ಮರಳು ನೀತಿಗೆ ಸಂಪುಟ ಒಪ್ಪಿಗೆ | 64 |
| 54. | ಮಾಸ್ಕ್ ಧರಿಸದಿದ್ದರೆ ದಂಡ ಪ್ರಯೋಗ | 65 |
| 55. | ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ | 66 |
| 56. | ಪದವಿ ಕಾಲೇಜುಗಳಿಗೆ ಕಾರ್ಯಸೂಚಿ ಬಿಡುಗಡೆ | 67 |
| 57. | ಶ್ರಮಿಕರಿಗೆ ಬಿಎಸ್‌ವೈ ಟಾನಿಕ್ | 68 |
| 58. | ತರಕಾರಿ ಹಣ್ಣು ಬೆಳೆಗಾರರಿಗೆ ಪ್ಯಾಕೇಜ್ | 69 |
| 59. | ಪ್ಯಾಕೇಜ್ ಪಡೆಯಲು ಶೀಘ್ರ ಮಾರ್ಗಸೂಚಿ, ಸೇವಾ ಸಿಂಧು ಮೂಲಕ ಅರ್ಜಿಗೆ ಅವಕಾಶ: ನೋಡಲ್ ಅಧಿಕಾರಿ ನೇಮಿಸಲು ನಿರ್ಧಾರ | 70 |
| 60. | ವಿಶೇಷ ರೈಲಿನಲ್ಲಿ ಕಾರ್ಮಿಕರು ಊರಿಗೆ | 70 |
| 61. | ಚೀನಾದಿಂದ ಕಂಪನಿಗಳು ಹೊರಕ್ಕೆ | 71 |
| 62. | ರಾಜ್ಯದ ಕಾರ್ಮಿಕ ರಕ್ಷಣೆಗೆ ಸಿದ್ದು ಆಗ್ರಹ | 71 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 63. | ಝೋನ್‌ಗಳ ವಿಂಗಡಣೆ ಮಾಡುವುದು ಬೇಡ ಕಂಟೈನ್‌ಮೆಂಟ್ ಮಾತ್ರ ಬಿಗಿ : ಸಿಎಂ ಪ್ರಸ್ತಾವನೆಗೆ ಮೋದಿ ಸಮ್ಮತಿ | 72 |
| 64. | ವೃದ್ಧರು, ಬಡವರಿಗೆ ಉಚಿತ ಔಷಧ | 72 |
| 65. | ರಾಜ್ಯ ವಿಪತ್ತು ನಿಧಿಯಿಂದ ತ್ರಿಸೂತ್ರ | 73 |
| 66. | ಕೇಂದ್ರದ ಆತ್ಮನಿರ್ಭರ ಭಾರತ ಪ್ಯಾಕೇಜ್: 'ಸರ್ವರಿಗೂ ಪಾಲು' | 74 |
| 67. | ಆಟೋ–ಟ್ಯಾಕ್ಸಿ ಚಾಲಕರಿಗೆ ಪರಿಹಾರ | 74 |
| 68. | ಆರ್ಥಿಕ ಸಂಚಾರ ಮುಕ್ತ | 75 |
| 69. | ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟ | 76 |
| 70. | ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನದ ಚೆಕ್ | 76 |
| 71. | ಮರಳು ಗಣಿಗಾರಿಕೆಗೆ ಗ್ರಾಮ ಪಂಚಾಯತ್ ಪವರ್‌ಫುಲ್ | 77 |
| 72. | ಯುವ ಸಬಲೀಕರಣ ಕೇಂದ್ರಗಳ ಸ್ಥಾಪನೆ | 77 |
| 73. | ಪದವಿ ಪರೀಕ್ಷೆಗೆ ಸಿಎಂ ಸಮ್ಮತಿ | 78 |
| 74. | ಆಯುಷ್ ವೈದ್ಯರ ವೇತನ ಹೆಚ್ಚಳಕ್ಕೆ ಸರ್ಕಾರ ಸಮ್ಮತಿ | 78 |
| 75. | ಜೂನ್ 1 ರಿಂದ ದೇಗುಲ ದರ್ಶನ | 78 |
| 76. | ಲಾಕ್‌ಡೌನ್ 4.0 : 7 ಜಿಲ್ಲೆಗಳಲ್ಲಿ ಸೋಂಕಿನ ಶತಕ | 79 |
| 77. | ರೈತರ ಖಾತೆಗೆ ಶೀಘ್ರ 5 ಸಾವಿರ | 79 |
| 78. | ಹೆಲ್ತ್ ರಿಜಿಸ್ಟರ್ ಯೋಜನೆಗೆ ಸುಧಾಕರ್ ಚಾಲನೆ | 80 |
| 79. | ತ್ಯಾಜ್ಯ : 10 ಗ್ರಾಮ ಪಂಚಾಯತ್‌ಗಳಿಗೆ ಜಾಗ ಮಂಜೂರು | 80 |
| 80. | ಬೆಂಗಳೂರು ಕೇಂದ್ರ ವಿವಿ ಅಭಿವೃದ್ಧಿಗೆ 150 ಕೋಟಿ | 81 |
| 81. | ಸಂಚಾರಿ ಸ್ವ್ಯಾಬ್ ಬೂತ್‌ಗೆ ಚಾಲನೆ | 81 |
| 82. | ಮಿಡತೆ ನಿಯಂತ್ರಣಕ್ಕೆ ರಾಜ್ಯ ಸಿದ್ಧ | 82 |
| 83. | ಸ್ಫೋಟಗೊಂಡ ಕಿಟ್ ಅವ್ಯವಹಾರ ಆರೋಪ | 82 |
| 84. | ಸಚಿವರ ಆಫೀಸ್‌ಗೆ ಇ– ಕಚೇರಿ | 83 |
| 85. | ಅಕ್ರಮ ಕಲ್ಲು ಗಣಿಗಾರಿಕೆ ತಡೆಗೆ ಸರ್ಕಾರ ಕ್ರಮ | 83 |
| 86. | ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉಗುಳುವಂತಿಲ್ಲ | 84 |
| 87. | ತಳವಾರ, ಪರಿವಾರ ಎಸ್ಟಿಗೆ: ಗೆಜೆಟ್ ಅಧಿಸೂಚನೆಗೆ ಆದೇಶ | 84 |
| 88. | ಎರಡು ವರ್ಷಗಳಲ್ಲಿ ಹತ್ತು ಲಕ್ಷ ಮನೆ ನಿರ್ಮಾಣ | 85 |
| 89. | ಖಾಸಗಿ ಸಹಭಾಗಿತ್ವಕ್ಕೆ ಇನ್ನು ಆದ್ಯತೆ | 85 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 90. | ಮಳೆ ಅನಾಹುತ, ಜನರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಕಠಿಣ ಕ್ರಮ : ಎಚ್ಚರಿಕೆ | 86 |
| 91. | ದೇವಾಲಯ ತೆರೆಯಲು ಸಿದ್ಧತೆಗೆ ಧಾರ್ಮಿಕ ದತ್ತಿ ಇಲಾಖೆ ಸೂಚನೆ | 86 |
| 92. | ಕೊರೊನಾ ಸಮಗ್ರ ಮಾಹಿತಿಗೆ ನ್ಯಾಸ್ಕಾಮ್ ಟೂಲ್ | 87 |
| 93. | ರೂ.500 ಕೋಟಿ ಮೌಲ್ಯದ ಪಿಪಿಪಿ ಯೋಜನೆಗಳಿಗೆ ಅಸ್ತು | 87 |
| 94. | ಗ್ರಾಮಗಳಲ್ಲೂ ಕ್ವಾರಂಟೈನ್ ವ್ಯವಸ್ಥೆ | 87 |
| 95. | ರೂ. 666 ಕೋಟಿ ಪರಿಹಾರ ರೈತರ ಖಾತೆಗೆ | 88 |
| 96. | ಪರಿಹಾರ ಧನ ವಿಳಂಬ ಬೇಡ | 88 |
| 97. | ಬೆಂಗಳೂರಲ್ಲೂ ಪ್ಲಾಸ್ಮಾ ಥೆರಪಿ ಯಶಸ್ವಿ | 89 |
| 98. | ಬೆಸ್ತರೂ, ಪಶುಪಾಲಕರಿಗೂ ಕಿಸಾನ್ ಕ್ರೆಡಿಟ್ ಕಾರ್ಡ್ | 89 |
| 99. | ಎಸ್‌ಸಿ, ಎಸ್‌ಟಿ ಅಭಿವೃದ್ಧಿಗೆ ರೂ.27 ಸಾವಿರ ಕೋಟಿ | 89 |
| 100. | ಪಡಿತರ ಅಕ್ರಮ ದಾಸ್ತಾನು ಮಾಡಿದ್ರೆ ಕ್ರಿಮಿನಲ್ ಕೇಸ್ | 90 |
| 101. | ಕಸ ನಿರ್ವಹಣೆ ಉಪ ನಿಯಮಕ್ಕೆ ಸರ್ಕಾರ ಅಸ್ತು | 91 |
| 102. | ಪೌರ ಕಾರ್ಮಿಕರ ಸುವಿಧಾ ಕ್ಯಾಬಿನ್ | 92 |
| 103. | ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಹೊಸ ಆಯಾಮ: ಸಿಎಂ | 92 |
| 104. | ಶಿಕ್ಷಕರಿಗೆ ಗುಡ್‌ನ್ಯೂಸ್: ಕಡ್ಡಾಯ ವರ್ಗಾವಣೆ ಇಲ್ಲ | 93 |
| 105. | ರಾಜ್ಯ ಸರ್ಕಾರ ಮಹತ್ವದ ನಿರ್ಧಾರ 5ನೇ ತರಗತಿವರೆಗೆ ಆನ್‌ಲೈನ್ ಕ್ಲಾಸಿಲ್ಲ. | 93 |
| 106. | ಎಸ್ಸಿ, ಎಸ್ಟಿ ಯೋಜನೆಗಳ ಸಮರ್ಪಕ ಜಾರಿಗೆ ಡಿಸಿಎಂ ಸೂಚನೆ | 94 |
| 107. | ಆಟೋ, ಟ್ಯಾಕ್ಸಿ ಚಾಲಕರಿಗೆ 40 ಕೋಟಿ ಬಿಡುಗಡೆ | 94 |
| 108. | ರಾಜ್ಯದಲ್ಲಿ ಶಿಕ್ಷಣ ಸುಧಾರಣೆಗೆ ದೊರೆಸ್ವಾಮಿ ನೇತೃತ್ವದ ಸಮಿತಿ | 94 |
| 109. | ಕೃಷಿ ಭೂಮಿ ಖರೀದಿ ನಿರ್ಬಂಧ ರದ್ದು | 95 |
| 110. | 2–3 ತಿಂಗಳಲ್ಲಿ ಗ್ರಾಪಂ ಚುನಾವಣೆ – ಸಂಪುಟ ತೀರ್ಮಾನ | 96 |
| 111. | ಉದ್ಯಮಸ್ನೇಹಿ ಕರ್ನಾಟಕ | 97 |
| 112. | ಭೂಮಿ ಖರೀದಿ ನಿಯಮ ಸಡಿಲಿಕೆ | 98 |
| 113. | ಭೂ ಸುಧಾರಣಾ ಕಾಯ್ದೆಯ ಸರ್ಕಾರಿ ಮಾರ್ಗಸೂಚಿ ಪ್ರಕಟ | 98 |
| 114. | ಖಾಸಗಿ ಆಸ್ಪತ್ರೆ ಚಿಕಿತ್ಸೆಗೆ ದರ ನಿಗದಿ | 99 |
| 115. | ಅನ್‌ಲಾಕ್ ಮಾಡಿ, ಆರ್ಥಿಕತೆ ಉತ್ತೇಜಿಸಿ | 99 |
| 116. | ಕಟ್ಟುನಿಟ್ಟಿನ ಸೀಲ್‌ಡೌನ್ | 100 |
| 117. | ಕೋವಿಡ್ ಚಿಕಿತ್ಸೆ ದರ ನಿಗದಿ | 100 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 118. | ಡಿಕೆಶಿ ಪದಗ್ರಹಣಕ್ಕೆ ಭರ್ಜರಿ ಡಿಜಿಟಲ್ ತಾಲೀಮು | 101 |
| 119. | ಮೀನುಗಾರರಿಗೂ ಕಿಸಾನ್ ಕಾರ್ಡ್ | 102 |
| 120. | ಶಾಸಕ, ಸಚಿವರಿಗೆ ಕುಮಾರಕೃಪಾ ಅತಿಥಿಗೃಹವೇ 'ಕೊರೋನಾ ಆಸ್ಪತ್ರೆ' | 103 |
| 121. | ಪಾಲಿಕೆ ವಾರ್ಡ್‌ವಾರು ಪುನರ್ ವಿಂಗಡಣೆ ಕರಡು ಅಧಿಸೂಚನೆ | 104 |
| 122. | ನಗರದಲ್ಲಿ 10 ಸಾವಿರ ಹಾಸಿಗೆ ಸೌಲಭ್ಯ | 104 |
| 123. | ಬೃಹತ್ ಕೆಂಪೇಗೌಡ ಪ್ರತಿಮೆಗೆ ಶಂಕು ಸ್ಥಾಪನೆ | 104 |
| 124. | ನಿರಂತರ ಉತ್ಪಾದನೆಗೆ ಅನುವು | 104 |
| 125. | ಕೋವಿಡ್–19 ಜಿಲ್ಲಾವಾರು ವರದಿ | 105 |
| 126. | ಹಂಗಾಮಿ ಮಾರ್ಗಸೂಚಿ | 106 |
| 127. | ಕೌಶಲ ಸಂಪರ್ಕ, ಪೋರ್ಟಲ್‌ಗೆ ಚಾಲನೆ | 106 |
| 128. | ಕರ್ಫ್ಯೂ: ರಾತ್ರಿ 8ರಿಂದ ಸಂಚಾರ ನಿರ್ಬಂಧ | 107 |
| 129. | ಯಂತ್ರದಿಂದ ಸೋಂಕು ನಿವಾರಕ ಸ್ಪ್ರೇ | 107 |
| | **ಭಾಗ–4**<br>**ರಾಜ್ಯ ಜಲ–ನೆಲ–ಭಾಷೆ ಸುದ್ದಿಗಳು** | |
| 1. | ಇಂಗ್ಲೀಷ್ ಮಾಧ್ಯಮ ಶಾಲೆ ರದ್ದುಪಡಿಸಿ: ಕಸಾಪ ಪತ್ರ | 108 |
| 2. | ನಗರದಲ್ಲಿ ತಗ್ಗಿತು ವಾಯುಮಾಲಿನ್ಯ | 108 |
| 3. | ಜಲಶಕ್ತಿ ಸಚಿವಾಲಯ ವ್ಯಾಪ್ತಿಗೆ ಕಾವೇರಿ ಪ್ರಾಧಿಕಾರ | 109 |
| 4. | ಮೈಸೂರಿಗೆ ಮತ್ತೆ ಫೈವ್ ಸ್ಟಾರ್ | 109 |
| 5. | ಆರೋಗ್ಯ ವಿವಿ ಬೆಳ್ಳಿಹಬ್ಬ : ಮೋದಿ ಚಾಲನೆ | 109 |
| 6. | ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸೂಚನೆ | 110 |
| 7. | ಕನ್ನಡ ನಿರ್ಲಕ್ಷ್ಯಿಸುವ ಶಾಲೆಗಳ ವಿರುದ್ಧ ಕ್ರಮ | 111 |
| 8. | ಅಂತರ್ಜಲ ವೃದ್ಧಿಗಾಗಿ ಇಂಗುಗುಂಡಿಗಳ ಪರ್ವ | 111 |
| 9. | ಅರಸು ಕೊಡುಗೆಗಳ ಸ್ಮರಣೆ | 112 |
| 10. | ಕೃಷ್ಣೆ ಒಡಲಿಗೆ ನೀರು | 112 |
| 11. | ಕನ್ನಡ ಜಾರಿಗೆ ಮತ್ತೊಂದು ಯತ್ನ | 113 |
| 12. | ಉನ್ನತ ಶಿಕ್ಷಣದಲ್ಲಿ ಬೆಂಗಳೂರು ಬೆಸ್ಟ್ | 113 |
| 13. | ಮೈಸೂರು ಮುಕ್ತ ವಿವಿಯಲ್ಲಿ ಮಾತ್ರವೇ ದೂರಶಿಕ್ಷಣ | 114 |
| 14. | ರಾಜ್ಯದ ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಭಾರಿ ವರ್ಷಧಾರೆ | 114 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 15. | ಮಹಾ ಮಳೆಗೆ ಬೆಳಗಾವಿಯ 3 ಸೇತುವೆ ಜಲಾವೃತ | 114 |
| 16. | ಕಾರವಾರ–ಅಣಶಿ ಘಟ್ಟದಲ್ಲಿ ಭಾರಿ ಮಳೆ | 115 |
| 17. | ಗಾಜನೂರು ಡ್ಯಾಮ್ ಭರ್ತಿಗೆ ಕ್ಷಣಗಣನೆ | 115 |
| 18. | ಮಲಪ್ರಭಾ, ಕೃಷ್ಣಾ ನೀರಿನ ಪ್ರಮಾಣ ಏರಿಕೆ | 116 |
| 19. | ಕರ್ನಾಟಕ ಮುಕ್ತ ವಿವಿಯಲ್ಲಿ ಮಾತ್ರ ದೂರಶಿಕ್ಷಣ: ಸರ್ಕಾರ ಸುಗ್ರೀವಾಜ್ಞೆ | 116 |
| 20. | ರಾಜ್ಯದಲ್ಲಿ 2 ತಿಂಗಳಲ್ಲಿ ಸಿಡಿಲು, ಗಾಳಿ–ಮಳೆ ಆರ್ಭಟಕ್ಕೆ 50 ಬಲಿ | 116 |
| 21. | ರಾಜ್ಯದ ಹಲವೆಡೆ ಧಾರಾಕಾರ ಮಳೆ | 117 |
| 22. | ವಿಜಯಪುರದಲ್ಲಿ ಕುಂಭದ್ರೋಣ ಮಳೆ | 118 |
| 23. | ಜಲ ವಿದ್ಯುತ್ ಯೋಜನೆಗೆ ಸಹಿ | 119 |
| | **ಭಾಗ– 5**<br>**ಚುನಾವಣಾ ಸುದ್ದಿಗಳು** | |
| 1. | ಪಾಲಿಕೆ ಚುನಾವಣೆ ಮುಂದೂಡಿಕೆ ಸುಳಿವು | 119 |
| 2. | ರಾಜ್ಯ ಸಭೆಗೆ ಅವಿರೋಧ ಆಯ್ಕೆಯಾಗುವ ಸಾಧ್ಯತೆ | 119 |
| 3. | ವಿಧಾನ ಪರಿಷತ್ 29 ರಂದು ಚುನಾವಣೆ | 119 |
| 4. | ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳ ನೇಮಕ | 120 |
| 5. | ರಾಜ್ಯಸಭೆಗೆ ಅವಿರೋಧ ಆಯ್ಕೆ | 120 |
| 6. | ರಾಜ್ಯ ಸಭೆಯಲ್ಲಿ ಮೇಲುಗೈ ಸಾಧಿಸಿದ ಬಿಜೆಪಿ | 120 |
| 7. | ಮೂರು ರಾಜ್ಯಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಜಯ | 121 |
| 8. | ವಿಧಾನ ಪರಿಷತ್‌ಗೆ ಏಳು ಮಂದಿ ಅವಿರೋಧ ಆಯ್ಕೆ | 122 |
| 9. | ಗ್ರಾಮ ಪಂಚಾಯಿತಿ ಚುನಾವಣೆ ಮುಂದಕ್ಕೆ | 122 |
| | **ಭಾಗ–6**<br>**ಸರ್ವೋಚ್ಚ /ಉಚ್ಚ ನ್ಯಾಯಾಲಯದ ಸುದ್ದಿಗಳು** | |
| 1 | ಕೃಷಿ ಉತ್ಪನ್ನ ರವಾನೆ: ರಾಜ್ಯಕ್ಕೆ ನಿರ್ದೇಶನ | 124 |
| 2 | ಕೇರಳ ಗಡಿ: ಕ್ರಮಕ್ಕೆ ಮುಂದಾಗಬೇಡಿ | 124 |
| 3 | ಉಚಿತ ಪರೀಕ್ಷೆಗೆ ಸುಪ್ರೀಂ ಸೂಚನೆ | 124 |
| 4 | ಕೋವಿಡ್ ಎದುರಿಸಲು ಸಿದ್ಧತೆ | 125 |
| 5 | ಕೋರ್ಟ್‌ಗಳ ಬೇಸಿಗೆ ರಜೆ ರದ್ದು | 125 |
| 6 | ಮೀಸಲಾತಿ ಪಟ್ಟಿ ಪರಿಷ್ಕರಣೆ ಸರ್ಕಾರಗಳ ಕರ್ತವ್ಯ: ಸುಪ್ರೀಂಕೋರ್ಟ್ | 125 |
| 7 | ಆರೋಗ್ಯ ಕಾರ್ಯಕರ್ತರ ರಕ್ಷಣೆ ಮಾಹಿತಿ | 126 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 8 | ಹೈಕೋರ್ಟ್ ನ್ಯಾಯಮೂರ್ತಿಯಾಗಿ ಎಸ್.ವಿಶ್ವಜಿತ್ ಶೆಟ್ಟಿ ನೇಮಕ | 126 |
| 9 | ವಲಸೆ ಕಾರ್ಮಿಕರ ಕುರಿತ ಅರ್ಜಿ ವಿಚಾರಣೆ – ಪ್ರಶಾಂತ್ ವಿರುದ್ಧ ಕಿಡಿಕಾರಿದ ಸುಪ್ರೀಂಕೋರ್ಟ್ | 126 |
| 10 | ವಿಡಿಯೋ ಕಾನ್ಫರೆನ್ಸ್ ವಿಚಾರಣೆ ಸಹಾಯವಾಣಿ ಆರಂಭ | 127 |
| 11 | ನೈಸ್ ವಾದಕ್ಕೆ ಸುಪ್ರೀಂನಲ್ಲಿ ಹಿನ್ನಡೆ | 127 |
| 12 | ಮಾಧ್ಯಮಗಳ ಸ್ವಾತಂತ್ರ್ಯ ಪ್ರಶ್ನಾತೀತವೆಂದ ಸುಪ್ರೀಂ | 128 |
| 13 | ಮಾರ್ಗಸೂಚಿ ಪಾಲನೆ ಬಗ್ಗೆ ವಿವರಣೆ ನೀಡಿ | 128 |
| 14 | ಭೂ ನ್ಯಾಯಮಂಡಳಿ ರಚನೆ | 129 |
| 15 | ಕೋರ್ಟ್‌ಗಳಿಗೆ ಮಾರ್ಗಸೂಚಿ | 129 |
| 16 | ಜೂನ್.1 ರಿಂದ ಕೋರ್ಟ್‌ಲ್ಲಿ ವರ್ಚುವಲ್ ಕಲಾಪ | 129 |
| 17 | ಮನೆಯಲ್ಲೇ ಕೂತು ಕೋರ್ಟ್‌ಗೆ ಹಾಜರಾಗಿ | 129 |
| 18 | ವಲಸಿಗರ ಬವಣೆ ನಿವಾರಣೆಗೆ ಸುಪ್ರೀಂ ಕಟ್ಟಪ್ಪಣೆ | 130 |
| 19 | ಚಿಕಿತ್ಸೆಗೆ ಶುಲ್ಕದ ಮಿತಿ | 131 |
| 20 | ವಲಸಿಗರ ರಕ್ಷಣೆಗೆ ಹುಕುಂ | 131 |
| | **ಭಾಗ– 7**<br>**ಹೊರ ರಾಜ್ಯ ಸುದ್ದಿಗಳು** | |
| 1 | ಮುಖಗವಸು ಧರಿಸದಿದ್ದರೆ ಬಂಧನ | 132 |
| 2 | ಮುಖಗವಸು ಧರಿಸದಿದ್ದರೆ ರೂ.5 ಸಾವಿರ ದಂಡ | 132 |
| 3 | ದೇಶದ ಅತಿದೊಡ್ಡ ಚಿಕಿತ್ಸಾ ಕೇಂದ್ರ | 132 |
| 4 | ಮಹಾರಾಷ್ಟ್ರದಲ್ಲೇ ಅಧಿಕ ಮರಣ ಪ್ರಮಾಣ | 132 |
| 5 | ಕೇರಳದಲ್ಲಿ ಕೋವಿಡ್‌ಗೆ ದಿಗ್ಬಂಧನ | 133 |
| 6 | ಕೇಂದ್ರ–ಪಶ್ಚಿಮ ಬಂಗಾಳ ಜಟಾಪಟಿ | 133 |
| 7 | ಲಾಕ್‌ಡೌನ್ ಸಡಿಲವಾದರೆ ಕೋವಿಡ್ ಎಚ್ಚರಿಕೆ: ಮುಂಬೈ ವಿಜ್ಞಾನಿಗಳ ತಂಡ | 134 |
| 8 | ಕೇರಳ : ತಿಂಗಳ ವೇತನ ಕಂತುಗಳಲ್ಲಿ | 134 |
| 9 | ಅಂತ್ಯಕ್ರಿಯೆಗೆ ಅಡ್ಡಿಪಡಿಸಿದರೆ ಜೈಲು | 134 |
| 10 | ವಿನಾಯಿತಿ ಇಲ್ಲ:ಕೇಜ್ರಿವಾಲ್ | 135 |
| 11 | ಚಂಡಮಾರುತ: ಬಂಗಾಳಕ್ಕೆ ರೂ.1,000 : ಒಡಿಶಾಗೆ ರೂ.500 ಕೋಟಿ ನೆರವು | 135 |
| 12 | ಮಹಾರಾಷ್ಟ್ರದತ್ತ ಮಿಡತೆ ದಂಡು | 135 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 13 | ಸಚಿವರಿಗೆ ಸೋಂಕು: ಉತ್ತರಖಂಡದ ಇಡೀ ಸಂಪುಟ ಕ್ವಾರಂಟೈನ್ | 136 |
| 14 | ಪ್ರಕೋಪ ತೋರಿದ ನಿಸರ್ಗ | 136 |
| 15 | ಚೀನಾ ಸೇನೆ ಹಿಂತೆಗೆತಕ್ಕೆ ಪಟ್ಟು | 137 |
| 16 | ಮೂರು ರಾಜ್ಯಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದು | 138 |
| | **ಭಾಗ–8**<br>**ಅಂತರರಾಷ್ಟ್ರೀಯ ಸುದ್ದಿಗಳು** | |
| 1. | ಜಾಗತಿಕ ಆರ್ಥಿಕತೆಯ ಕುಸಿತ : ವಿಶ್ವಸಂಸ್ಥೆಯ ವರದಿಯಲ್ಲಿ ವ್ಯಕ್ತವಾದ ಆತಂಕ | 139 |
| 2. | ವುಹಾನ್: ಮತ್ತೆ ಕೊರೊನಾ ಸೋಂಕು ಭೀತಿ | 139 |
| 3. | ಅಮೆರಿಕ: 10 ಸಾವಿರಕ್ಕೂ ಹೆಚ್ಚು ಸಾವು | 140 |
| 4. | ಟ್ರಂಪ್ ಬೆದರಿಕೆ: ಔಷಧ ರಫ್ತಿಗೆ ಭಾರತ ನಿರ್ಧಾರ | 140 |
| 5. | ವಿಶ್ವಸಂಸ್ಥೆಯ ಅಂಗವಾಗಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಆತಂಕ | 141 |
| 6. | ಹಲವು ದೇಶಗಳು ಈಗ ನಿರಾಳ | 142 |
| 7. | ಚೀನಾದ ಹಿಡಿತದಿಂದ ಮುಕ್ತವಾಗಿದೆ ಎಂಬುದನ್ನು ಸಾಬೀತುಪಡಿಸಲು ತಾಕೀತು | 142 |
| 8. | ವಿಶ್ವದಾದ್ಯಂತ ಸೋಂಕಿತರ ಸಂಖ್ಯೆ:50 ಲಕ್ಷ ಸನಿಹ | 143 |
| 9. | ನಿಶ್ಯಸ್ತ್ರಯುದ್ಧದಿಂದ ಫ್ರಾನ್ಸ್ ಕಂಗಾಲು | 144 |
| 10. | ಪೋಲೆಂಡ್ ಬಾವಿಯಲ್ಲಿ ಹಿಟ್ಲರ್‌ನ 28 ಟನ್ ಚಿನ್ನ | 145 |
| 11. | ಸಾಮಾಜಿಕ ಜಾಲತಾಣಗಳಿಗೆ ಮೂಗುದಾರ: ಟ್ರಂಪ್ ಸಿದ್ಧತೆ | 145 |
| 12. | ಹಾಂಕಾಂಗ್ ಮೇಲೆ ಚೀನಾ ಕಪಿಮುಷ್ಟಿಗೆ ಸಂಸತ್ ಸಮ್ಮತಿ | 145 |
| 13. | ಅಮೆರಿಕದಲ್ಲಿ ಭುಗಿಲೆದ್ದ ಜನಾಂಗೀಯ ಸಂಘರ್ಷ | 146 |
| 14. | ಜಿ7 ವಿಸ್ತರಿಸಿ ಭಾರತಕ್ಕೂ ಸ್ಥಾನ ನೀಡಲು ಟ್ರಂಪ್ ಒಲವು | 146 |
| 15. | ಕಮರಿದ ಅಮೆರಿಕ ಕನಸು | 147 |
| | **ಭಾಗ–9**<br>**ಶ್ರದ್ಧಾಂಜಲಿ** | |
| 1. | ಪ್ರೊ : ಕೆ. ಎಸ್. ನಿಸಾರ್‌ಅಹಮದ್, ನಿತ್ಯೋತ್ಸವ ಕವಿ | 148 |
| 2. | ಎಂ.ವಿ ರಾಜಶೇಖರನ್, ಕೇಂದ್ರದ ಮಾಜಿ ಸಚಿವ | 148 |
| 3. | ವಿನ್ನಿಫ್ರೆಡ್ ಫರ್ನಾಂಡಿಸ್, ಮಾಜಿ ಶಾಸಕಿ | 148 |
| 4. | ಗಜಾನನ ಭಟ್ಟ, ಯಕ್ಷಗಾನ ಕಲಾವಿದ | 149 |
| 5. | ರಾಜಾ ರಂಗಪ್ಪನಾಯಕ, ಮಾಜಿ ಸಂಸದ | 149 |
| 6. | ಶಾಂತಾದೇವಿ ಕಣವಿ, ಹಿರಿಯ ಕವಿ | 149 |
| 7. | ಶ್ಯಾಮಲಾ ಜಿ. ಭಾವೆ, ಗಾನಕೋಗಿಲೆ | 149 |

| ಕ್ರ. ಸಂ. | ವಿಷಯ | ಪುಟ ಸಂಖ್ಯೆ |
|---|---|---|
| 8. | ವೀರೇಂದ್ರ ಕುಮಾರ್ , ಕೇಂದ್ರದ ಮಾಜಿ ಮಂತ್ರಿ | 150 |
| 9. | ಎಂ.ಸಿ.ನರಸಿಂಹನ್, ಮಾಜಿ ಶಾಸಕ | 150 |
| 10 | ಗೀತಾ ನಾಗಭೂಷಣ, ಖ್ಯಾತ ಕಾದಂಬರಿಗಾರ್ತಿ | 150 |
| | **ಭಾಗ–10**<br>**ಪ್ರಶಸ್ತಿಗಳು** | |
| 1. | ಡಾ : ಪ್ರಭಾಶಂಕರಗೆ ಹಿಂದಿ ರಾಷ್ಟ್ರ ಪ್ರಶಸ್ತಿ | 151 |
| 2. | ಸಾಹಿತ್ಯ ಸಂಸ್ಕೃತಿ ಪ್ರಶಸ್ತಿಗೆ ಆಯ್ಕೆ | 151 |
| 3 | ಗದ್ದಿಗೌಡರ ಸ್ಥಾಯಿ ಸಮಿತಿಗೆ ಸಂಸದ್ ರತ್ನ | 151 |
| | **ಭಾಗ–11**<br>**ಪ್ರಮುಖ ಲೇಖನಗಳು** | |
| 1. | ಜೀವ ಜಗತ್ತು ಮತ್ತು ಜೈವಿಕ ವಿಪತ್ತು | 152–153 |
| 2. | ದಿಗ್ಬಂಧನದ ಅವಧಿಯ ಆಲೋಚನೆ | 154–155 |
| 3. | ಪರೀಕ್ಷೆಯ ನಿರೀಕ್ಷೆಯಲ್ಲಿ | 156–157 |
| 4. | ಸಮಷ್ಟಿ ಹಿತ ಎಂಬ ಭ್ರಮೆ | 158–159 |
| 5. | ಹರಿಯಲಿ ಚಿತ್ತ ಸರ್ಕಾರಿ ಶಾಲೆಯತ್ತ | 160–161 |
| 6. | ಪಂಚಾಯತ್ ಚುನಾವಣೆ ನಡೆಯಲಿ | 162–164 |
| 7. | ಮುನ್ನಡೆಗೆ ಸ್ವಾವಲಂಬನೆ ಅನಿವಾರ್ಯ | 165–167 |
| 8. | ಶಿಕ್ಷಣದ ಪ್ರಗತಿಗೆ ಉನ್ನತ ಮಾರ್ಗದರ್ಶನವೇ ದಾರಿ<br>ವಿದ್ಯಾರ್ಥಿಗಳಿಗೂ, ಶಿಕ್ಷಣ ಸಂಸ್ಥೆಗಳಿಗೂ 'ಮೆಂಟರ್' ವ್ಯವಸ್ಥೆ ಕಲ್ಪಿಸುವುದು<br>ಸರ್ಕಾರದ ನೀತಿಯಾಗಬೇಕು | 168–170 |
| 9. | ಪಕ್ಷಾಂತರ ಪಿಡುಗು–ಸಮ್ಮಿಶ್ರ ಸರ್ಕಾರದ ಗೊಣಗು | 171–172 |
| 10 | ನಾಡು ಕಟ್ಟುವವರ ನಡುವೆ ದಕ್ಷ ಸಮುದಾಯ | 173–175 |
| 11 | ಕೆಂಪೇಗೌಡ ಪ್ರತಿಮೆ – ನುಡಿದಂತೆ ನಡೆದ ಸರ್ಕಾರ | 176–177 |
| 12 | ಬೆಂಗಳೂರು ಕಟ್ಟಿದ ಕೆಂಪೇಗೌಡರ ಮೌಲ್ಯ ಚಿರಸ್ಥಾಯಿಯಾಗಬೇಕು | 178–179 |
| 13 | ಕೋವಿಡ್–19 ವಿರುದ್ಧದ ಹೋರಾಟ ಜನರೇ ನಿಭಾಯಿಸಬೇಕಾದ ಸವಾಲು | 180 |


ಸೂಚನೆ: – ಇಲ್ಲಿ ಆಯ್ಕೆ ಮಾಡಿರುವ ಲೇಖನಗಳು ಪ್ರಮುಖ ದಿನಪ್ರತಿಕೆಗಳಿಂದ ಆಯ್ದು ಪ್ರಕಟಿಸಲಾಗಿದೆ.
ಇಲ್ಲಿನ ಅಭಿಪ್ರಾಯಗಳು ಸಂಪೂರ್ಣ ಲೇಖಕರದ್ದಾಗಿರುತ್ತದೆ.

# ಭಾಗ – 1

# ವಿಧಾನ ಮಂಡಲದ ಸುದ್ದಿಗಳು

## 1. ವಿಧಾನ ಸಭಾಧ್ಯಕ್ಷರಿಗೆ ಪರಮೋಚ್ಛ ಅಧಿಕಾರವಿರಲಿ

### ಪಕ್ಷಾಂತರ ನಿಷೇಧ ಕಾಯ್ದೆ: ಸ್ಪೀಕರ್ ಬಳಿ ಸಂಸದೀಯ ಗಣ್ಯರ ಅಭಿಪ್ರಾಯ

ಪಕ್ಷಾಂತರ ನಿಷೇಧ ಕಾಯ್ದೆಯನ್ನು ಇನ್ನಷ್ಟು ಕಠಿಣಗೊಳಿಸಲು ಲೋಕಸಭಾಧ್ಯಕ್ಷರಾದ ಅಖಿಲ ಭಾರತ ಪೀಠಾಸೀನಾಧಿಕಾರಿಗಳ ಸಮ್ಮೇಳನದ ಅಧ್ಯಕ್ಷರಾದ ಓಂ ಬಿರ್ಲಾ ಅವರು ರಾಜಸ್ಥಾನದ ವಿಧಾನ ಸಭಾಧ್ಯಕ್ಷ ಡಾ. ಸಿ.ಪಿ. ಜೋಷಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿದ್ದಾರೆ. ಆ ಸಮಿತಿ ಸದಸ್ಯನಾದ ನನಗೆ ಕಾಯ್ದೆ ಬದಲಾವಣೆಯ ಅಂಶಗಳ ಬಗ್ಗೆ ವರದಿ ಸಲ್ಲಿಸಲು ಸೂಚಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಭೆ ಆಯೋಜಿಸಲಾಗಿದೆ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಸಭೆಯಲ್ಲಿದ್ದ ಮುಖ್ಯಮಂತ್ರಿಯವರು ಆರೋಗ್ಯಕರ ಜನತಾಂತ್ರಿಕ ವ್ಯವಸ್ಥೆಗೆ ಪಕ್ಷಾಂತರ ಒಂದು ಶಾಪ. 1960ರ ದಶಕದಲ್ಲಿ ಆರಂಭವಾದ ಪಕ್ಷಾಂತರ ಪಿಡುಗಿನಿಂದ ದೇಶದ ಉದ್ದಗಲಕ್ಕೆ ಅನೇಕ ಸರ್ಕಾರಗಳು ಅಧಿಕಾರ ಕಳೆದುಕೊಳ್ಳಬೇಕಾಯಿತು. ಕೇಂದ್ರದಲ್ಲಿ ಅಧಿಕಾರ ಹಿಡಿದ ರಾಜಕೀಯ ಪಕ್ಷಗಳು ತಮ್ಮ ತಾಳಕ್ಕೆ ಕುಣಿಯದ ರಾಜ್ಯ ಸರ್ಕಾರಗಳನ್ನು ಪಕ್ಷಾಂತರಕ್ಕೆ ಪ್ರಚೋದಿಸಿ ಉರುಳಿಸುತ್ತಿದ್ದುದು ಸಾಮಾನ್ಯ ಪ್ರಕ್ರಿಯೆಯಾಗಿತ್ತು. ಇಂತಹ ಸಂದರ್ಭದಲ್ಲಿ 1985ರಲ್ಲಿ ಅಂದಿನ ಪ್ರಧಾನಿ ರಾಜೀವ್ ಗಾಂಧಿ ಸರ್ಕಾರ 52ನೇ ತಿದ್ದುಪಡಿ ಮೂಲಕ 10ನೇ ಅನುಸೂಚಿ ಅನ್ವಯ ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿತು ಎಂದು ಹೇಳಿದರು.

ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹತೆ ಸಂಬಂಧ ವಿಧಾನ ಸಭಾಧ್ಯಕ್ಷರಿಗೆ ಪರಮೋಚ್ಛ ಅಧಿಕಾರವಿರಬೇಕು. ಕಾಲಮಿತಿಯಲ್ಲಿ ಅನರ್ಹತೆ ಪ್ರಕರಣಗಳ ವಿಚಾರಣೆ ಮುಗಿಯಬೇಕು. ರಾಜೀನಾಮೆ ನೀಡದ ಶಾಸಕರು ಮರುಚುನಾವಣೆಗೆ ಸ್ಪರ್ಧಿಸದಂತೆ ತಿದ್ದುಪಡಿ ತರಬೇಕು ಎಂದು ಸಂಸದೀಯ ಗಣ್ಯರು ಅಭಿಪ್ರಾಯ ಪಟ್ಟಿದ್ದಾರೆಂದು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಪಕ್ಷಾಂತರ ನಿಷೇಧ ಕಾಯ್ದೆಯ ಸಂವಿಧಾನದ 10ನೇ ಅನುಸೂಚಿಯಡಿ ಪೀಠಾಸೀನಾಧಿಕಾರಿಗಳ ಅಧಿಕಾರಗಳು ಮತ್ತು ಅದರಡಿ ರಚಿಸಲಾದ ನಿಯಮಗಳ ಮರುಪರಿಶೀಲನೆ ಸಂಬಂಧ ಸಂಸದೀಯ ಗಣ್ಯರೊಂದಿಗೆ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಯಡಿಯೂರಪ್ಪ, ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಸೇರಿ 25 ಸಂಸದೀಯರೊಂದಿಗೆ ಸಮಾಲೋಚನೆ ನಡೆಸಲಾಗಿದೆ. ಪ್ರಸಕ್ತ ರಾಜಕೀಯ ಪರಿಸ್ಥಿತಿ, ರಾಜಕೀಯ ಪಕ್ಷಗಳು, ಚುನಾವಣಾ ಆಯೋಗ, ನ್ಯಾಯಾಂಗ ವ್ಯವಸ್ಥೆ ಬಗ್ಗೆಯೂ ಗಣ್ಯರು ಅಭಿಪ್ರಾಯ ನೀಡಿದ್ದಾರೆ. ಶಾಸಕಾಂಗದ ಘನತೆ, ಗೌರವವನ್ನೂ ಕಾಪಾಡುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೊತೆಗೆ ಚುನಾವಣೋತ್ತರ ಮೈತ್ರಿಗೂ ಅವಕಾಶ ನೀಡಬಾರದೆಂಬ ಸಲಹೆ ಕೇಳಿಬಂದಿದೆ ಎಂದು ಹೇಳಿದರು. ಅನರ್ಹತೆ ವಿಚಾರದಲ್ಲಿ ನ್ಯಾಯಾಂಗದ ಹಸ್ತಕ್ಷೇಪವಿರಬಾರದು ಸ್ಪೀಕರ್‌ಗೆ ಪರಮಾಧಿಕಾರವಿರಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟಿದ್ದಾರೆ. ಜೂನ್ 10ರೊಳಗೆ ಸಾರ್ವಜನಿಕರು ವಿಧಾನ ಸಭೆಯ ಕಾರ್ಯದರ್ಶಿಗಳಿಗೆ ತಮ್ಮ ಅಭಿಪ್ರಾಯ ನೀಡಬೇಕು. ಜೂನ್ 5 ರಂದು ವಿಧಾನ ಪರಿಷತ್ತಿನ ಸದಸ್ಯರೊಂದಿಗೆ ಚರ್ಚಿಸಲಾಗುವುದು ಎಂದರು.

**ಅನರ್ಹರಿಗೆ 10 ವರ್ಷ ಚುನಾವಣೆಗೆ ಸ್ಪರ್ಧೆ ಬೇಡ:** ಪಕ್ಷಾಂತರ ನಿಷೇಧ ಕಾಯ್ದೆಯಡಿ ಶಾಸಕರನ್ನು ಸದಸ್ಯತ್ವದಿಂದ ಅನರ್ಹಗೊಳಿಸುವ ಅಧಿಕಾರ ವಿಧಾನ ಸಭಾಧ್ಯಕ್ಷರಿಗೆ ಇರಬೇಕು. ಅನರ್ಹಗೊಂಡವರು 10 ವರ್ಷ ಚುನಾವಣೆಗೆ ಸ್ಪರ್ಧಿಸಲು, ಯಾವುದೇ ರಾಜಕೀಯ ಅಧಿಕಾರ ಅನುಭವಿಸಲು ಅವಕಾಶವಿರಬಾರೆಂದು ವಿಧಾನ ಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಪಕ್ಷಾಂತರ ನಿಷೇಧ ಕಾಯ್ದೆ ನಿಯಮಗಳ ಮರು ಪರಿಶೀಲನೆಗೆ ಅಭಿಪ್ರಾಯ ಸಂಗ್ರಹಕ್ಕಾಗಿ ವಿಧಾನ ಸಭಾಧ್ಯಕ್ಷರು ನಡೆಸಿದ ಸಂಸದೀಯ ಗಣ್ಯರ ಸಭೆಯಲ್ಲಿ ಪಾಲ್ಗೊಂಡ ಬಳಿಕ ಪ್ರತಿಕ್ರಿಯಿಸಿ ಕಾಯ್ದೆಯಲ್ಲಿನ ಕೆಲ ನ್ಯೂನತೆ ಬಗ್ಗೆ ಚರ್ಚಿಸಲು ಸಮಿತಿ ರಚನೆಯಾಗಿದ್ದು, ಅದರಂತೆ ವಿಧಾನ ಸಭಾಧ್ಯಕ್ಷರು ಅಭಿಪ್ರಾಯ ಕೇಳಿದ್ದಾರೆ. ಪಕ್ಷಾಂತರ ನಿಷೇಧ ಕಾಯ್ದೆಯಡಿ ಅನರ್ಹಗೊಂಡವರು ಎರಡು ಚುನಾವಣೆಗೆ ಸ್ಪರ್ಧಿಸಬಾರದು ಹಾಗೂ ಅವರಿಗೆ ಯಾವುದೇ ಅಧಿಕಾರ ಕೊಡಬಾರದು ಎಂದು ನಾನು ಸ್ಪಷ್ಟವಾಗಿ ಅಭಿಪ್ರಾಯ ಹೇಳಿದ್ದೇನೆಂದು ಹಾಗೂ ಶಾಸಕರು, ಪರಿಷತ್ ಸದಸ್ಯರೊಂದಿಗೆ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸುವುದಾಗಿ ಸ್ಪೀಕರ್ ಹೇಳಿದ್ದಾರೆ.

ಒಟ್ಟಾರೆ ಪಕ್ಷಾಂತರ ಕಾಯ್ದೆ ಯಾವುದೇ ನ್ಯೂನತೆ ಇಲ್ಲದೆ ಪಕ್ಷಾಂತರ ಮಾಡಿದವರಿಗೆ ಶಿಕ್ಷೆಯಾಗುವಂತಾಗಬೇಕು. ಪ್ರಜಾಪ್ರಭುತ್ವದ ಬೇರುಗಳಿಗೆ ಪಕ್ಷಾಂತರ ಮಾರಕವಾಗಿದೆ. ಪ್ರಜಾಪ್ರಭುತ್ವದ ಬೇರುಗಳನ್ನು ಗಟ್ಟಿ ಮಾಡುವ ಕೆಲಸ ಮಾಡಬೇಕೆಂದು ಸಿದ್ದರಾಮಯ್ಯನವರು ತಿಳಿಸಿದರು.

ಆಧಾರ: ಉದಯವಾಣಿ, ದಿನಾಂಕ:29.05.2020



**ದಿನಾಂಕ: 28–05–2020 ರಂದು, ಭಾರತ ಸಂವಿಧಾನದ ಹತ್ತನೆಯ ಅನುಸೂಚಿ ಅಡಿಯಲ್ಲಿ ಪೀಠಾಸೀನಾಧಿಕಾರಿಗಳ ಅಧಿಕಾರಗಳು ಹಾಗೂ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮರು ಪರಿಶೀಲನೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರೂ ಸೇರಿದಂತೆ ವಿಧಾನ ಸಭೆಯ ಸಂಸದೀಯ ಗಣ್ಯರುಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರ ಸಮಾಲೋಚನಾ ಸಭೆ ಹಾಗೂ ಅಭಿಪ್ರಾಯ ಸಂಗ್ರಹ.**



**ದಿನಾಂಕ: 04–06–2020 ರಂದು, ಭಾರತ ಸಂವಿಧಾನದ ಹತ್ತನೆಯ ಅನುಸೂಚಿ ಅಡಿಯಲ್ಲಿ ಪೀಠಾಸೀನಾಧಿಕಾರಿಗಳ ಅಧಿಕಾರಗಳು ಹಾಗೂ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮರು ಪರಿಶೀಲನೆ ಬಗ್ಗೆ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಯವರು ಹಾಗೂ ವಿಧಾನ ಪರಿಷತ್ತಿನ ಸಂಸದೀಯ ಗಣ್ಯರುಗಳೊಂದಿಗೆ ಸನ್ಮಾನ್ಯ ಸಭಾಧ್ಯಕ್ಷರ ಸಮಾಲೋಚನಾ ಸಭೆ ಹಾಗೂ ಅಭಿಪ್ರಾಯ ಸಂಗ್ರಹ.**

**ದಿನಾಂಕ: 05–06–2020 ರಂದು ವಿಶ್ವ ಪರಿಸರ ದಿನದ ಅಂಗವಾಗಿ ಸನ್ಮಾನ್ಯ ಸಭಾಪತಿ ಹಾಗೂ ಸನ್ಮಾನ್ಯ ಸಭಾಧ್ಯಕ್ಷರು ಅವರುಗಳು ಶಾಸಕರ ಭವನದ ಆವರಣದಲ್ಲಿ ಗಿಡ ನೆಡುವ ಮೂಲಕ ಪರಿಸರ ದಿನವನ್ನು ಆಚರಿಸಿದರು**



**ದಿನಾಂಕ: 06–06–2020 ರಂದು ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ಡಿ.ದೇವರಾಜ ಅರಸು ಅವರ 38 ನೇ ಪುಣ್ಯಸ್ಮರಣೆ ದಿನದಂದು ಅವರ ಭಾವಚಿತ್ರಕ್ಕೆ ಸನ್ಮಾನ್ಯ ಸಭಾಧ್ಯಕ್ಷರಿಂದ ಮಾಲಾರ್ಪಣೆ**



ದಿನಾಂಕ: 25–06–2020 ಮತ್ತು 26–06–2020 ರಂದು, ಭಾರತ ಸಂವಿಧಾನದ ಹತ್ತನೆಯ ಅನುಸೂಚಿ ಅಡಿಯಲ್ಲಿ ಪೀಠಾಸೀನಾಧಿಕಾರಿಗಳ ಅಧಿಕಾರಗಳು ಹಾಗೂ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಮರು ಪರಿಶೀಲನೆ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರು ರಾಜ್ಯದ ಹಿಂದಿನ ಅಡ್ವೋಕೇಟ್ ಜನರಲ್ ಅವರುಗಳೊಂದಿಗೆ ಸಮಾಲೋಚನೆ ನಡೆಸಿ ಅವರುಗಳ ಅಭಿಪ್ರಾಯ ಪಡೆದರು.

1. ಶ್ರೀ ಉದಯ ಹೊಳ್ಳ ಅವರೊಂದಿಗೆ:



2. ಶ್ರೀ ಅಶೋಕ್ ಹಾರ್ನಳ್ಳಿ ಅವರೊಂದಿಗೆ:



**3. ಪ್ರೊ.ರವಿವರ್ಮಕುಮಾರ್ ಅವರೊಂದಿಗೆ:**




**4. ಶ್ರೀ ಮಧುಸೂದನ ನಾಯಕ್ ಅವರೊಂದಿಗೆ:**



**ದಿನಾಂಕ: 30-06-2020ರಂದು ನಿವೃತ್ತಿ ಹೊಂದಿದ ವಿಧಾನ ಪರಿಷತ್ತಿನ ಸದಸ್ಯರುಗಳಿಗೆ ಸನ್ಮಾನ್ಯ ಸಭಾಪತಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 21-6-2020ರಂದು ಏರ್ಪಡಿಸಲಾದ ಬೀಳ್ಕೊಡುಗೆ ಸಮಾರಂಭದ ಸಂದರ್ಭ.**



**ದಿನಾಂಕ: 10-07-2020ರಂದು ಏರ್ಪಡಿಸಲಾದ ಬೀಳ್ಕೊಡುಗೆ ಸಮಾರಂಭ**



# ಭಾಗ–2

## ಕೇಂದ್ರ ಸರ್ಕಾರದ ಸುದ್ದಿಗಳು

### 1. ಉದ್ಯೋಗ: ನಿಯಮಾವಳಿ ರೂಪಿಸಿದ ಕೇಂದ್ರ

ದೇಶಾದಾದ್ಯಂತ ಕೊರೊನಾ ಲಾಕ್‌ಡೌನ್ ನಡುವೆಯೇ ಕೇಂದ್ರ ಸರ್ಕಾರವು ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ನಿವಾಸಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿನ ಅವಕಾಶಗಳಿಗೆ ಸಂಬಂಧಿಸಿದ ಕಾನೂನಿಗೆ ತಿದ್ದುಪಡಿ ತಂದಿದೆ. ಈ ಸಂಬಂಧ ಕೇಂದ್ರ ಗೃಹ ಸಚಿವಾಲಯವು ಜಮ್ಮು ಮತ್ತು ಕಾಶ್ಮೀರ ಮರುವಿಂಗಡಣೆ – 2020 ಆದೇಶ ಹೊರಡಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ 15 ವರ್ಷ ವಾಸವಿರುವ ವ್ಯಕ್ತಿಯನ್ನು ಕೇಂದ್ರಾಡಳಿತ ಪ್ರದೇಶದ ನಿವಾಸಿ ಎಂದು ಪರಿಗಣಿಸಲಾಗುವುದು. ಇಲ್ಲವೇ ಕೇಂದ್ರಾಡಳಿತ ಪ್ರದೇಶದಲ್ಲಿ ಕನಿಷ್ಠ ಏಳು ವರ್ಷ ವಿದ್ಯಾಭ್ಯಾಸ ಪೂರೈಸಿ 10 ಮತ್ತು 12ನೇ ತರಗತಿಯ ಪರೀಕ್ಷೆಗೆ ಹಾಜರಾದವರನ್ನು ಕೂಡ ಇಲ್ಲಿನ ನಿವಾಸಿಗಳೆಂದು ಪರಿಗಣಿಸಲಾಗುವುದು ಎಂಬ ಷರತ್ತುಗಳನ್ನು ರೂಪಿಸಲಾಗಿದೆ. ಹೊಸ ಕಾಯ್ದೆಯನ್ವಯ ಕೆಳ ದರ್ಜೆಯ (ನಾನ್‌ಗೆಜೆಟೆಡ್) ಹುದ್ದೆಗಳನ್ನು ಸ್ಥಳೀಯರಿಗೆ ಮೀಸಲಿಡಲಾಗಿದೆ. ಈ ಹುದ್ದೆಗಳಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿದವರ ಮಕ್ಕಳು ಹಾಗೂ ಹೊರ ರಾಜ್ಯಗಳಿಂದ ಬಂದು 15 ವರ್ಷ ನೆಲೆ ನಿಂತವರ ಮಕ್ಕಳು ಅರ್ಹರಾಗಲಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:02.04.2020

### 2. ದಿಗ್ಬಂಧನ: ಸಲಹೆ ಕೇಳಿದ ಮೋದಿ

ಲಾಕ್‌ಡೌನ್ ಹಿಂದಕ್ಕೆ ಪಡೆದ ಬಳಿಕ ಜನರು ಹಂತ ಹಂತವಾಗಿ ಹೊರಗೆ ಬರುವಂತಾಗಬೇಕು. ಅದಕ್ಕಾಗಿ, ಸಮಾನ ಕಾರ್ಯತಂತ್ರವನ್ನು ಸೂಚಿಸುವಂತೆ ಪ್ರಧಾನಿ ಮೋದಿ ಅವರು ಮುಖ್ಯಮಂತ್ರಿಗಳನ್ನು ಕೋರಿದರು.

ಕೊರೊನಾ ವಿರುದ್ಧದ ಹೋರಾಟದ ತೀವ್ರತೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ. ಲಾಕ್‌ಡೌನ್ ಅನ್ನು ಎಲ್ಲ ರಾಜ್ಯಗಳು ಗಂಭೀರವಾಗಿ ಪರಿಗಣಿಸಬೇಕು. 21 ದಿನಗಳ ದಿಗ್ಬಂಧನದಿಂದ ಸ್ವಲ್ಪ ಮಟ್ಟಿನ ಯಶಸ್ಸು ಸಿಕ್ಕಿದೆ. ಮುಂದಿನ ಕೆಲವು ವಾರಗಳಲ್ಲಿ ಸೋಂಕು ಪರೀಕ್ಷೆ, ಗುರುತಿಸುವಿಕೆ ಮತ್ತು ಪ್ರತ್ಯೇಕವಾಗಿ ಇರಿಸುವಿಕೆಯನ್ನು ಹೆಚ್ಚಿಸುವ ಮೂಲಕ ಸೋಂಕು ಹರಡುವಿಕೆ ತಡೆಯಬೇಕು ಹಾಗೂ ಕೆಲವು ದೇಶಗಳಲ್ಲಿ ಸೋಂಕಿನ ಎರಡನೇ ಅಲೆ ಕಾಣಿಸಿಕೊಂಡಿದೆ ಎಂಬ ಆತಂಕಕಾರಿ ವಿಚಾರವನ್ನು ಅವರು ಪ್ರಸ್ತಾಪಿಸಿದರು. ಪಿಡುಗು ತಡೆಗೆ ಎಲ್ಲ ರಾಜ್ಯಗಳು ಸಮುದಾಯ ಆಧಾರಿತ ಕಾರ್ಯತಂತ್ರವನ್ನು ಅನುಸರಿಸಬೇಕು. ದೇಶದ ಹಲವು ಭಾಗಗಳಲ್ಲಿ ಕೊಯ್ಲು ಋತು ಆರಂಭವಾಗಿದೆ. ಕೃಷಿ ಚಟುವಟಿಕೆಗಳಿಗೆ ದಿಗ್ಬಂಧನದಿಂದ ವಿನಾಯಿತಿ ನೀಡಬಹುದು. ಆದರೆ, ಹೊಲದಲ್ಲಿ ಕೂಡ ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆಯನ್ನು ಕೈಬಿಡಬಾರದು. ಬಿಕ್ಕಟ್ಟಿನಿಂದ ಪಾರಾಗಲು ಆರ್ಥಿಕ ಮತ್ತು ವೈದ್ಯಕೀಯ ಸಂಪನ್ಮೂಲದ ನೆರವು ಬೇಕು. ಲಾಕ್‌ಡೌನ್ ಹೇರಿಕೆಯ ಬಳಿಕ ಮೋದಿ ಅವರು ಮುಖ್ಯಮಂತ್ರಿಗಳ ಜೊತೆಗೆ ಎರಡನೇ ಬಾರಿ ವಿಡಿಯೋ ಕಾನ್ಫರೆನ್ಸ್ ನಡೆಸಿದರು.

**ಮೋದಿ ವಿಡಿಯೋ ಸಂದೇಶ ಇಂದು:** ದೇಶದ ಜನರಿಗಾಗಿ ಪ್ರಧಾನಿಯವರು ವಿಡಿಯೊ ಸಂದೇಶವನ್ನು ಬೆಳಿಗ್ಗೆ 9 ಗಂಟೆಗೆ ಬಿಡುಗಡೆಗೊಳಿಸುವ ಬಗ್ಗೆ ಟ್ವೀಟ್ ಮೂಲಕ ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:04.04.2020

### 3. 9 ನಿಮಿಷ ದೀಪ ಹಚ್ಚಿ: ಮೋದಿ ಕರೆ

ಕೊರೊನಾ ವೈರಾಣು ಹರಡುವುದನ್ನು ತಡೆಯುವ ಉದ್ದೇಶದಿಂದ ಹೇರಲಾದ ಲಾಕ್‌ಡೌನ್ 9ನೇ ದಿನ ಪೂರ್ಣಗೊಳಿಸಲಿದೆ. ಅಂದು, ರಾತ್ರಿ ಒಂಭತ್ತು ಗಂಟೆಗೆ ಜನರು ದೀಪ, ಮೊಂಬತ್ತಿ, ಟಾರ್ಚ್ ಅಥವಾ ಮೊಬೈಲ್ ಫೋನ್‌ನ ಫ್ಲ್ಯಾಷ್ ಲೈಟ್‌ಗಳನ್ನು ಒಂಭತ್ತು ನಿಮಿಷ ಬೆಳಗಿಸಬೇಕು. ಆ ಹೊತ್ತಿನಲ್ಲಿ ಮನೆಯ ವಿದ್ಯುತ್ ದೀಪಗಳನ್ನು ಆರಿಸಿ, ಕೊರೊನಾ ವೈರಾಣುವನ್ನು ಸೋಲಿಸುವ ನಮ್ಮ 'ಸಾಮೂಹಿಕ ದೃಢ ನಿಶ್ಚಯ'ವನ್ನು ತೋರಿಸುವುದಕ್ಕಾಗಿ ಇದನ್ನು ಮಾಡಬೇಕು. ಲಾಕ್‌ಡೌನ್ ಕಾರಣದಿಂದ ಮನೆಯಲ್ಲಿ ಇರುವ ಜನರಲ್ಲಿ

ಏಕಾಂಗಿಯಾಗಿದ್ದೇವೆ ಎಂಬ ಭಾವನೆ ಬರಬಹುದು. ಆದರೆ, ಇಡೀ ದೇಶದ 130 ಕೋಟಿ ಜನರ ಸಾಮೂಹಿಕ ಶಕ್ತಿ ತಮ್ಮಲ್ಲಿ ಇದೆ ಎಂಬುದನ್ನು ಮರೆಯಬಾರದು. ಎಲ್ಲೆಡೆ ಜನರು ದೀಪ, ಮೊಂಬತ್ತಿ ಅಥವಾ ತಮ್ಮ ಮೊಬೈಲ್ ಫೋನ್‌ನ ಫ್ಲ್ಯಾಷ್ ಲೈಟ್ ಬೆಳಗಿಸಿದಾಗ ಅದು ಬೆಳಕಿನ ಮಹಾಶಕ್ತಿಯಾಗಿ ಪರಿವರ್ತನೆಯಾಗುತ್ತದೆ ಮತ್ತು ನಮ್ಮ ಹೋರಾಟದ ಸಾಮೂಹಿಕ ದೃಢ ನಿಶ್ಚಯವನ್ನು ತೋರುತ್ತದೆ. ಈ ಬೆಳಕಿನಲ್ಲಿ ನಾವು ಏಕಾಂಗಿಯಲ್ಲ, ಯಾರೂ ಏಕಾಂಗಿಯಲ್ಲ ಎಂಬ ದೃಢ ನಿಶ್ಚಯವನ್ನೂ ಕೈಗೊಳ್ಳಬೇಕು ಹಾಗೂ ಲಾಕ್‌ಡೌನ್‌ನಿಂದಾಗಿ ಭಾರಿ ಸಂಖ್ಯೆಯ ಬಡಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಅವರೆಲ್ಲರನ್ನೂ ನಿಮ್ಮ ಮನಸ್ಸಿನಲ್ಲಿ ಇರಿಸಿಕೊಳ್ಳಿ. ಕೊರೊನಾ ವೈರಾಣು ಹರಡಿರುವ ಕತ್ತಲಿನಿಂದ ಅವರೆಲ್ಲರೂ ಬೆಳಕು ಮತ್ತು ಆಶಾವಾದದತ್ತ ನಡೆಯಲು ಸಹಕರಿಸಿ ಎಂದು ಮೋದಿ ಅವರು ದೇಶದ ಜನರನ್ನು ಕೋರಿದರು.

ಆಧಾರ:ಪ್ರಜಾವಾಣಿ, ದಿನಾಂಕ:04.04.2020

## 4. ಮನೆಯಿಂದ ಹೊರ ಬರುವಾಗ ಮಾಸ್ಕ್ ಧರಿಸಿ

ಜನರು ಮನೆಯಿಂದ ಹೊರಗೆ ಹೋಗುವಾಗ ಮನೆಯಲ್ಲಿಯೇ ತಯಾರಿಸಿದ ಮುಖಗವಸುಗಳನ್ನು ಧರಿಸಬೇಕು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ. ದೇಶದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಈ ಸಲಹೆ ನೀಡಲಾಗಿದೆ. ಮುಖ ಮತ್ತು ಬಾಯಿ ಮುಚ್ಚುವಂತಹ ಗವಸುಗಳನ್ನು ಧರಿಸುವುದರಿಂದ ಸಮುದಾಯವನ್ನು ಸೋಂಕಿನಿಂದ ರಕ್ಷಿಸಬಹುದು. ಮನೆಯಲ್ಲಿಯೇ ತಯಾರಿಸಿದ ಮುಖಗವಸುಗಳನ್ನು ಧರಿಸುವುದರಿಂದ ಅನುಕೂಲ ಇದೆ ತಯಾರಿಸುವುದು ಹೇಗೆ ಎಂಬುದನ್ನೂ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ವಿವರಿಸಿದೆ.

ಇಂತಹ ಮಾಸ್ಕ್‌ಗಳು ಆರೋಗ್ಯ ಕಾರ್ಯಕರ್ತರು, ಕೋವಿಡ್ ರೋಗಿಗಳು ಮತ್ತು ರೋಗಿಗಳ ಜೊತೆಗೆ ಸಂಪರ್ಕದಲ್ಲಿ ಇರುವವರ ಬಳಕೆಗೆ ಅಲ್ಲ. ಅಂಥವರು ನಿರ್ದಿಷ್ಟವಾಗಿ ಶಿಫಾರಸ್ಸು ಮಾಡಿದ ಮಾಸ್ಕ್‌ಗಳನ್ನೇ ಬಳಸಬೇಕು.

ಮನೆಯಲ್ಲಿರುವ ಎಲ್ಲರಿಗೂ ಪ್ರತ್ಯೇಕವಾದ ಮಾಸ್ಕ್ ತಯಾರಿಸಿಕೊಳ್ಳಬೇಕು. ಯಾವ ಕಾರಣಕ್ಕೂ ಒಬ್ಬರ ಮಾಸ್ಕ್ ಅನ್ನು ತೊಳೆಯದೆ ಮತ್ತೊಮ್ಮೆ ಬಳಸಲೇಬೇಡಿ. ಮಾಸ್ಕ್ ತೇವವಾದ ತಕ್ಷಣ ಅದನ್ನು ಬದಲಾಯಿಸಿ, ಮಾಸ್ಕ್ ಬಳಸುವ ಮುನ್ನ ಸಾಬೂನು ಹಾಕಿ ಕೈತೊಳೆದುಕೊಳ್ಳಬೇಕು. ಬಳಕೆಯ ನಂತರ ಮಾಸ್ಕ್ ಅನ್ನು ಸಾಬೂನು ಮತ್ತು ಬಿಸಿ ನೀರಿನಲ್ಲಿ ತೊಳೆಯಬೇಕು. ಸೂರ್ಯನ ಬೆಳಕಿನಲ್ಲಿ ಕನಿಷ್ಠ ಐದು ಗಂಟೆ ಒಣಗಿಸಬೇಕು.

ಆಧಾರ:ಪ್ರಜಾವಾಣಿ, ದಿನಾಂಕ:05.04.2020

## 5. ಸೋನಿಯಾ, ಪ್ರಣವ್ ಜೊತೆ ಮೋದಿ ಚರ್ಚೆ

'ಕೋವಿಡ್–19' ಪರಿಣಾಮ ದೇಶವ್ಯಾಪಿ ಆವರಿಸುತ್ತಿರುವ ಪರಿಸ್ಥಿತಿ ಕುರಿತು ಪ್ರಧಾನಿ ನರೇಂದ್ರ ಮೋದಿ ವಿವಿಧ ಪಕ್ಷಗಳ ಮುಖಂಡರ ಜೊತೆ ಚರ್ಚೆ ನಡೆಸಿದರು.

ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ಮಾಜಿ ರಾಷ್ಟ್ರಪತಿಗಳಾದ ಪ್ರಣವ್ ಮುಖರ್ಜಿ, ಪ್ರತಿಭಾ ಪಾಟೀಲ್ ಮತ್ತು ಮಾಜಿ ಪ್ರಧಾನಿಗಳಾದ ಮನಮೋಹನ್ ಸಿಂಗ್ ಮತ್ತು ಎಚ್.ಡಿ.ದೇವೇಗೌಡ ಅವರಿಗೆ ದೂರವಾಣಿ ಕರೆ ಮಾಡಿ ಮೋದಿ ಚರ್ಚಿಸಿದರು.

ಮಾಜಿ ಪ್ರಧಾನಿ, ರಾಷ್ಟ್ರಪತಿಗಳಲ್ಲದೇ ವಿವಿಧ ಪಕ್ಷಗಳ ಮುಖಂಡರಾದ ಮುಲಾಯಂ ಸಿಂಗ್ ಯಾದವ್, ಅಖಿಲೇಶ್ ಯಾದವ್ (ಉತ್ತರ ಪ್ರದೇಶ), ಪ್ರಕಾಶ್‌ಸಿಂಗ್ ಬಾದಲ್ (ಪಂಜಾಬ್), ಮುಖ್ಯಮಂತ್ರಿಗಳಾದ ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ), ನವೀನ್ ಪಟ್ನಾಯಕ್ (ಒಡಿಶಾ), ಕೆ.ಚಂದ್ರಶೇಖರ ರಾವ್ (ತೆಲಂಗಾಣ) ಹಾಗೂ ಡಿಎಂಕೆ ಮುಖಂಡ ಎಂ.ಕೆ.ಸ್ಟಾಲಿನ್ ಜೊತೆಗೂ ಚರ್ಚಿಸಿದರು.

ಸಂಸತ್ತಿನ ಉಭಯ ಸದನಗಳ ಮುಖಂಡರ ಜೊತೆಗೆ ಪ್ರಧಾನಿ ಚರ್ಚಿಸುವರು ಎಂದು ಸರ್ಕಾರ ಪ್ರಕಟಿಸಿತ್ತು. ಆದರೆ, ಇದಕ್ಕೆ ತಕ್ಷಣವೇ ತಕರಾರು ತೆಗೆದಿದ್ದ ತೃಣಮೂಲ ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ಈ ವಿಷಯ ಕುರಿತು ಚರ್ಚೆಯಾಗಬೇಕು ಎಂದು ಪ್ರಸ್ತಾಪಿಸಿತು.

ಆಧಾರ:ಪ್ರಜಾವಾಣಿ, ದಿನಾಂಕ:06.04.2020

### 6. ಅಭಯಾರಣ್ಯಗಳಲ್ಲಿ ಸಂಚಾರ ನಿರ್ಬಂಧಕ್ಕೆ ಕೇಂದ್ರದ ಆದೇಶ

'ನಾಡಿಯಾ' ಹುಲಿಯು ಕೊರೊನಾ ಸೋಂಕಿಗೆ ಒಳಗಾಗಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಸರ್ಕಾರವು ದೇಶದಾದ್ಯಂತ ಕಟ್ಟೆಚ್ಚರ ವಹಿಸಲು ಮುಂದಾಗಿದೆ. ಈ ಬಗ್ಗೆ ರಾಜ್ಯ ಸರ್ಕಾರಗಳಿಗೆ ಕೆಲವು ನಿರ್ದೇಶನಗಳನ್ನು ನೀಡಿರುತ್ತದೆ.

ಮಾನವನಿಂದ ಪ್ರಾಣಿಗಳಿಗೆ ಅಥವಾ ಪ್ರಾಣಿಗಳಿಂದ ಮಾನವನಿಗೆ ಕೊರೊನಾ ಸೋಂಕು ತಗಲುವುದನ್ನು ತಡೆಯಲು ರಾಷ್ಟ್ರೀಯ ಉದ್ಯಾನ ಹಾಗೂ ಅಭಯಾರಣ್ಯಗಳಲ್ಲಿ ಜನ ಸಂಚಾರವನ್ನು ನಿರ್ಬಂಧಿಸುವಂತೆ ರಾಜ್ಯಗಳಿಗೆ ತಿಳಿಸಿ, ಸೋಂಕಿಗೊಳಗಾದ ಪ್ರಾಣಿಗಳಿಗೆ ತುರ್ತು ಚಿಕಿತ್ಸೆ ನೀಡಿ, ಬಳಿಕ ಅವುಗಳನ್ನು ತಮ್ಮ ನೈಸರ್ಗಿಕ ವಾಸಸ್ಥಳಕ್ಕೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಕಾಯಿಲೆಯ ಕಣ್ಗಾವಲು, ಮ್ಯಾಪಿಂಗ್ ಹಾಗೂ ಮೇಲ್ವಿಚಾರಣಾ ವ್ಯವಸ್ಥೆಯನ್ನು ಬಲಪಡಿಸಬೇಕು. ಈ ಕುರಿತು ಗರಿಷ್ಠ ಎಚ್ಚರ ವಹಿಸಬೇಕು ಎಂದು ಎಲ್ಲಾ ಮೃಗಾಲಯಗಳಿಗೆ ಸೂಚಿಸಿರುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:07.04.2020

### 7. ವೇತನ ನಿಧಿಗೆ ಕತ್ತರಿ

ಕೋವಿಡ್–19 ವಿರುದ್ಧದ ಹೋರಾಟಕ್ಕೆ ನಿಧಿ ಸಂಗ್ರಹಿಸುವ ಉದ್ದೇಶದಿಂದ ರಾಷ್ಟ್ರಪತಿ, ಪ್ರಧಾನಿ, ಉಪರಾಷ್ಟ್ರಪತಿ, ಎಲ್ಲಾ ರಾಜ್ಯಪಾಲರು ಮತ್ತು ಎಲ್ಲಾ ಸಂಸದರ ವೇತನದಲ್ಲಿ ಶೇ.30ರಷ್ಟು ಕಡಿತವಾಗಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ನಡೆದ ವಿಡಿಯೊ ಸಂವಾದದ ಮೂಲಕ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಇದಕ್ಕಾಗಿ 'ಸಂಸತ್ ಸದಸ್ಯರ ವೇತನ' ಭತ್ಯೆಗಳು ಮತ್ತು ಪಿಂಚಣಿ ಕಾಯ್ದೆ–1954ಕ್ಕೆ' ತಿದ್ದುಪಡಿ ತರುವ ಸುಗ್ರೀವಾಜ್ಞೆಯನ್ನು ಜಾರಿಗೆ ತರಲಾಗಿದೆ. 2020ರ ಏಪ್ರಿಲ್ 1 ರಿಂದ ಇದು ಅನ್ವಯವಾಗಲಿದೆ.

ಕೋವಿಡ್–19 ವಿರುದ್ಧದ ಹೋರಾಟಕ್ಕೆ ದೊಡ್ಡ ಮೊತ್ತದ ಹಣ ಅಗತ್ಯವಿದೆ. ಇದಕ್ಕಾಗಿ ಸಂಸತ್ ಸದಸ್ಯರ ವೇತನದಲ್ಲಿ ಕಡಿತ ಮಾಡಲಾಗುತ್ತಿದೆ. ಇದರಿಂದ ನಿಧಿ ಸಂಗ್ರಹಕ್ಕೆ ಅನುಕೂಲವಾಗಲಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ಮಾಹಿತಿ ನೀಡಿದರು .

ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ವಾರ್ಷಿಕ 'ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ'ಯನ್ನು (ಎಂಪಿಎಲ್‌ಎಡಿಎಸ್) ಎರಡು ಆರ್ಥಿಕ ವರ್ಷಗಳ ಮಟ್ಟಿಗೆ ಸ್ಥಗಿತಗೊಳಿಸಲಾಗುತ್ತಿದೆ.

ಗುಜರಾತ್‌ನಲ್ಲೂ ಶಾಸಕರು, ಸಚಿವರ ವೇತನದಲ್ಲಿ ಒಂದು ವರ್ಷದ ಮಟ್ಟಿಗೆ ಶೇ.30ರಷ್ಟು ಕಡಿತ ಮಾಡಲು ನಿರ್ಧರಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:09.04.2020

### 8. ಸೋಂಕು ನಿಯಂತ್ರಣಕ್ಕೆ ಮತ್ತಷ್ಟು ಕ್ರಮ

'ಹೈ ರಿಸ್ಕ್' ಎಂದು ಗುರುತಿಸಲಾದ ಪ್ರದೇಶಗಳ ಮೇಲೆ ತಿಂಗಳ ಮಟ್ಟಿಗೆ ಸಂಪೂರ್ಣ ದಿಗ್ಬಂಧನ ಹೇರುವುದು ಸೇರಿದಂತೆ ಕೊರೊನಾ ಸೋಂಕು ಹರಡುವುದನ್ನು ನಿಯಂತ್ರಿಸಲು ಆರೋಗ್ಯ ಸಚಿವಾಲಯ ಮತ್ತಷ್ಟು ಕಠಿಣ ಕ್ರಮಗಳನ್ನು ಒಳಗೊಂಡ ಯೋಜನೆಯನ್ನು ರೂಪಿಸಿದೆ.

ಸದ್ಯ 274 ಜಿಲ್ಲೆಗಳಲ್ಲಿ ಕೋವಿಡ್–19 ಪ್ರಕರಣಗಳು ವರದಿಯಾಗಿವೆ. ಸೋಂಕು ಹರಡುವ ಸರಪಳಿಯನ್ನು ತುಂಡರಿಸುವ ಉದ್ದೇಶದಿಂದ 'ಜನತಾ ಕರ್ಫ್ಯೂ'ವನ್ನೂ ಹೇರಲಾಗಿತ್ತು. ಅದಾದ ನಂತರವೂ ಈ ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಬಂದಿಲ್ಲ. ಬದಲಾಗಿ, ಪ್ರಕರಣಗಳಲ್ಲಿ ಮೂರುಪಟ್ಟು ಹೆಚ್ಚಳ ಕಂಡು ಬಂದ ಕಾರಣ ಮತ್ತಷ್ಟು ಬಿಗಿ ಕ್ರಮಗಳಿಗೆ ಕೇಂದ್ರ ಮುಂದಾಗಿದೆ.

'ವ್ಯಕ್ತಿಯೊಬ್ಬರಲ್ಲಿ ಕೋವಿಡ್–19 ಇರುವುದನ್ನು ದೃಢಪಡಿಸಲು ಇತ್ತೀಚೆಗೆ ನಡೆದ ಪರೀಕ್ಷೆಯನ್ನು ಪರಿಗಣಿಸಬೇಕು. ಈ ಪ್ರಕರಣದ ಪರೀಕ್ಷೆ ನಡೆದು ನಾಲ್ಕು ವಾರಗಳ ನಂತರ, ಮತ್ತೆ ಪ್ರಕರಣಗಳು ವರದಿಯಾಗದಿದ್ದರೆ ಮಾತ್ರ ಕಠಿಣ ದಿಗ್ಬಂಧನವನ್ನು ಸಡಿಲಗೊಳಿಸಲಾಗುತ್ತದೆ' ಎಂದು ಸಚಿವಾಲಯ ಹೇಳಿದೆ.

ಸಾಂಕ್ರಾಮಿಕ ಪಿಡುಗಿಗೆ ಸಂಬಂಧಿಸಿದಂತೆ 'ಹೈ ರಿಸ್ಕ್' ಎಂದು ಗುರುತಿಸಿದ ಪ್ರದೇಶಗಳಿಂದ ಹೊರಗೆ ಮತ್ತು ಆ ಪ್ರದೇಶಗಳಿಗೆ ಜನರ ಸಂಚಾರವನ್ನು ಸ್ಥಗಿತಗೊಳಿಸಲಾಗುವುದು. ಎಲ್ಲ ಶಂಕಿತ ವ್ಯಕ್ತಿಗಳನ್ನು ಕೋವಿಡ್–19 ಚಿಕಿತ್ಸೆಗಾಗಿ ಗುರುತಿಸಿರುವ ಆಸ್ಪತ್ರೆಗಳ ಐಸೋಲೇಷನ್ ವಾರ್ಡ್‌ಗಳಲ್ಲಿ ಇರಿಸುವುದು ಈ ಯೋಜನೆಯಲ್ಲಿರುವ ಕೆಲವು ಅಂಶಗಳು.

ಶಂಕಿತ ವ್ಯಕ್ತಿಯ ಗಂಟಲ ದ್ರವವನ್ನು ಒಳಗೊಂಡ ಮಾದರಿಯನ್ನು ಎರಡು ಬಾರಿ ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಎರಡೂ ಬಾರಿ ನೆಗೆಟಿವ್ ಬಂದರೆ ಮಾತ್ರ ಅಂಥವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವುದು. ಸಾಧಾರಣವಾದ ರೋಗ ಲಕ್ಷಣಗಳು ಕಂಡು ಬರುವ ವ್ಯಕ್ತಿಗಳನ್ನು ಕೋವಿಡ್–19 ಚಿಕಿತ್ಸೆಗಾಗಿ ಗುರುತಿಸಿದ ಆಸ್ಪತ್ರೆಗಳಲ್ಲಿ ಹಾಗೂ ತೀವ್ರಸ್ವರೂಪದ ಲಕ್ಷಣಗಳನ್ನು ಹೊಂದಿದವರನ್ನು ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯ ಇರುವ ಆಸ್ಪತ್ರೆಗಳಿಗೆ ದಾಖಲಿಸುವಂತಹ ಅಂಶಗಳನ್ನು ಈ ಯೋಜನೆ ಒಳಗೊಂಡಿದೆ.

'ಬಫರ್ ವಲಯ'ಗಳನ್ನು ಗುರುತಿಸಿ, ಈ ಪ್ರದೇಶಗಳಲ್ಲಿ ಶಾಲಾ–ಕಾಲೇಜುಗಳು, ಕಚೇರಿಗಳನ್ನು ಬಂದ್ ಮಾಡಬೇಕು. ಅಗತ್ಯ ಸೇವೆಗಳಿಗೆ ಹೊರತುಪಡಿಸಿ, ಯಾವುದೇ ಸಾರ್ವಜನಿಕ ಮತ್ತು ಖಾಸಗಿ ಸಾರಿಗೆಗೆ ಅವಕಾಶವನ್ನೂ ನೀಡುವುದಿಲ್ಲ. ಕೋವಿಡ್–19 ಪ್ರಕರಣಗಳು ವರದಿಯಾದ ಪ್ರದೇಶಗಳಲ್ಲಿನ ಪರಿಸ್ಥಿತಿಯ ಆಧಾರದ ಮೇಲೆ ಬೇರೆ ಬೇರೆ ಸ್ವರೂಪದ ದಿಗ್ಬಂಧನದ ಕಾರ್ಯತಂತ್ರಗಳನ್ನು ಅನುಷ್ಠಾನಗೊಳಿಸಬೇಕು. ಹಾಟ್‌ಸ್ಪಾಟ್ ಎಂದು ಘೋಷಿಸಿರುವ ಪ್ರದೇಶಗಳಲ್ಲಿ ಗರಿಷ್ಠ ಮಟ್ಟದ ದಿಗ್ಬಂಧನಕ್ಕೆ ಈ ಯೋಜನೆ ಅವಕಾಶ ನೀಡುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:10.04.2020

## 9. ಐದು ಪ್ರತಿಜ್ಞೆ: ಕಾರ್ಯಕರ್ತರಿಗೆ ಮೋದಿ ಸಲಹೆ

ಕೊರೊನಾ ವೈರಾಣು ವಿರುದ್ಧದ ಹೋರಾಟದಲ್ಲಿ ಯಶಸ್ಸಿಗೆ ಐದು ಪ್ರತಿಜ್ಞೆ ಸ್ವೀಕರಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಪಕ್ಷದ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಬಿಜೆಪಿಯ 40ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅವರು, ಬಡವರಿಗೆ ದವಸ–ಧಾನ್ಯ ನೀಡಲು ನಿರಂತರ ಕಾರ್ಯಾಚರಣೆ ನಡೆಸಬೇಕು, ಕನಿಷ್ಠ 5–7 ಜನರಿಗೆ ಮಾಸ್ಕ್ ವಿತರಿಸಬೇಕು, ವೈದ್ಯರು, ನರ್ಸ್‌ಗಳು, ಪೊಲೀಸರು ನೈರ್ಮಲ್ಯ ಕಾಪಾಡುವ ಸಿಬ್ಬಂದಿ ಹಾಗೂ ಅಗತ್ಯ ಸೇವೆ ಒದಗಿಸುವ ಸಿಬ್ಬಂದಿಗೆ ಕೃತಜ್ಞತೆ ಸಲ್ಲಿಸಲು ಆಂದೋಲನ ರೀತಿಯ ಕಾರ್ಯಕ್ರಮ ನಡೆಸಬೇಕು, ಇದಕ್ಕಾಗಿ ಪಕ್ಷ ರಚಿಸಿದ ಐದು ತಂಡಗಳ ನೆರವು ಪಡೆಯಬೇಕು. ಆರೋಗ್ಯಸೇತು ಆ್ಯಪ್ ಅನ್ನು ಕನಿಷ್ಠ 40 ಜನರು ಮೊಬೈಲ್‌ಗಳಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳುವಂತೆ ಪ್ರತಿಯೊಬ್ಬ ಕಾರ್ಯಕರ್ತ ಶ್ರಮಿಸಬೇಕು, ಪಿಎಂ–ಕೇರ್ಸ್ ನಿಧಿಗೆ ದೇಣಿಗೆ ನೀಡುವಂತೆ ಕನಿಷ್ಠ 40 ಜನರ ಮನವೊಲಿಸಬೇಕು ಎಂದು ತಿಳಿಸಿದರು.

'ಭಾನುವಾರ ರಾತ್ರಿ 9ಕ್ಕೆ ದೇಶದ 130 ಕೋಟಿ ಜನರು ದೀಪ ಬೆಳಗುವ ಮೂಲಕ ವೈರಾಣು ವಿರುದ್ಧ ಒಗ್ಗಟ್ಟಿನ ಹೋರಾಟದ ಸಂಕಲ್ಪ ಮಾಡಿದರು. ಲಾಕ್‌ಡೌನ್ ಸಂದರ್ಭದಲ್ಲಿ ಸಹ ಜನರು ಅದ್ಭುತ ಪ್ರಬುದ್ಧತೆಯನ್ನು ಪ್ರದರ್ಶಿಸುತ್ತಿದ್ದಾರೆ. ಭಾರಿ ಜನಸಂಖ್ಯೆ ಹೊಂದಿರುವ ರಾಷ್ಟ್ರವೊಂದರಲ್ಲಿ ಇಂತಹ ಶಿಸ್ತು, ಸೇವಾ ಮನೋಭಾವವೂ ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದೀರಿ ಎಂದು ಜನರಿಗೆ ಕೃತಜ್ಞತೆ ಸಲ್ಲಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:11.04.2020

## 10. ರಾಜ್ಯಗಳಿಗೆ ರೂ.14,103 ಕೋಟಿ ಬಿಡುಗಡೆ

ಜಿಎಸ್‌ಟಿಯಿಂದ ರಾಜ್ಯಗಳಿಗೆ ಆಗಲಿರುವ ವರಮಾನ ನಷ್ಟ ತುಂಬಿಕೊಳ್ಳಲು ಕೇಂದ್ರ ಹಣಕಾಸು ಸಚಿವಾಲಯವು ಪರಿಹಾರ ಸೆಸ್ ರೂಪದಲ್ಲಿ ರೂ. 14,103 ಕೋಟಿ ಬಿಡುಗಡೆ ಮಾಡಿದೆ.

ಕೊರೊನಾದಿಂದಾಗಿ ರಾಜ್ಯಗಳ ಆರ್ಥಿಕ ಬಿಕ್ಕಟ್ಟು ಹೆಚ್ಚಾಗುತ್ತಿರುವುದರಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅಕ್ಟೋಬರ್–ನವೆಂಬರ್ ಅವಧಿಗೆ ರಾಜ್ಯಗಳಿಗೆ ಒಟ್ಟಾರೆ ರೂ.34,053 ಕೋಟಿ ಮೊತ್ತದ ಪರಿಹಾರ ನೀಡಿದಂತಾಗಿದೆ. ಮೊದಲ ಕಂತಿನಲ್ಲಿ ರೂ.19,950 ಕೋಟಿ ನೀಡಲಾಗಿತ್ತು. ಡಿಸೆಂಬರ್ ಮತ್ತು ಜನವರಿ ಅವಧಿಗೆ ರಾಜ್ಯಗಳಿಗೆ ನೀಡಬೇಕಿರುವ ಬಾಕಿ ಮೊತ್ತವನ್ನೂ ಹಂತ ಹಂತವಾಗಿ ಶೀಘ್ರವೇ ನೀಡುವ ಬಗ್ಗೆ ಸಚಿವಾಲಯ ಚಿಂತನೆ ನಡೆಸುತ್ತಿದೆ.

ಕೇಂದ್ರ ಸರ್ಕಾರವು ಇದುವರೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟಾರೆ ರೂ.1.35 ಲಕ್ಷ ಕೋಟಿಗಳನ್ನು ನೀಡಿದೆ. ಜಿಎಸ್‌ಟಿ ಸಂಗ್ರಹವು ರೂ. 1 ಲಕ್ಷ ಕೋಟಿಯಿಂದ ಕೆಳಕ್ಕಿಳಿದಿದ್ದು, ರೂ.97,597 ಕೋಟಿಗಳಷ್ಟಾಗಿದೆ. ಕೊರೊನಾದಿಂದಾಗಿ ಆರ್ಥಿಕ ಚಟುವಟಿಕೆಗಳು ಸ್ಥಗಿತಗೊಂಡಿದ್ದು, ಈಗಾಗಲೇ ಮಂದಗತಿಯಲ್ಲಿ ಸಾಗುತ್ತಿರುವ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಹೆಚ್ಚಿಸಿದೆ.

**ಸಾಲ ಪಡೆಯಲು ಅನುಮತಿ**

ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಮಾರುಕಟ್ಟೆಯಿಂದ ರೂ.3.20 ಲಕ್ಷ ಕೋಟಿ ಸಾಲ ಪಡೆಯಲು ಹಣಕಾಸು ಸಚಿವಾಲಯವು ಎಲ್ಲ ರಾಜ್ಯಗಳಿಗೂ ಅವಕಾಶ ಕಲ್ಪಿಸಿದೆ. ಕೋವಿಡ್ ನಿಯಂತ್ರಿಸಲು ಗರಿಷ್ಠ ನೆರವು ನೀಡುವಂತೆ ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸುತ್ತಿವೆ. ಹೀಗಾಗಿ ಸಚಿವಾಲಯ ಈ ನಿರ್ಧಾರಕ್ಕೆ ಬಂದಿದೆ.

2020–21ನೇ ಹಣಕಾಸು ವರ್ಷಕ್ಕೆ ರಾಜ್ಯಗಳ ನಿವ್ವಳ ಸಾಲ ಮಿತಿಯ ಆಧಾರದ ಮೇಲೆ ಶೇ.50ರಷ್ಟನ್ನು ಮಾರುಕಟ್ಟೆಯಿಂದ ಪಡೆಯಲು ಅನುಮತಿ ನೀಡಲು ನಿರ್ಧರಿಸಲಾಗಿದೆ ಹಾಗೂ ಮುಕ್ತ ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹಿಸಲು ರಾಜ್ಯಗಳಿಗೆ ಅಗತ್ಯವಾದ ನೆರವು ನೀಡುವಂತೆ ಆರ್‌ಬಿಐಗೆ ಮನವಿ ಮಾಡಲಾಗಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

| **ರಾಜ್ಯಗಳ ವಿವರ** | |
|---|---|
| **ರಾಜ್ಯ** | **ಮೊತ್ತ (ಕೋಟಿಗಳಲ್ಲಿ)** |
| ಮಹಾರಾಷ್ಟ್ರ | ರೂ.46,182 |
| ಕರ್ನಾಟಕ | ರೂ.27.054 |
| ಗುಜರಾತ್ | ರೂ.26,112 |
| ಪಶ್ಚಿಮ ಬಂಗಾಳ | ರೂ.20,363 |
| ರಾಜಸ್ಥಾನ | ರೂ.16,387 |

ಆಧಾರ:ಪ್ರಜಾವಾಣಿ, ದಿನಾಂಕ:12.04.2020

## 11. ಕೇಂದ್ರದ ಜೊತೆ ನಿಂತ ಪ್ರತಿ ಪಕ್ಷಗಳು

ಕೊರೊನಾ ವಿರುದ್ಧದ ಹೋರಾಟದಲ್ಲಿ ಸರ್ಕಾರದ ಜೊತೆ ಕೈಜೋಡಿಸುವುದಾಗಿ ದೇಶದ ವಿವಿಧ ರಾಜಕೀಯ ಪಕ್ಷಗಳ ನಾಯಕರು ಭರವಸೆ ನೀಡಿದರು. ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ನಡೆದ ವಿಡಿಯೋ ಸಂವಾದದಲ್ಲಿ ಮುಖಂಡರು ಸರ್ಕಾರಕ್ಕೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು.

ಹಿಂಗಾರು ಬೆಳೆಯು ಕಟಾವಿಗೆ ಬಂದಿರುವುದರಿಂದ ಲಾಕ್‌ಡೌನ್‌ನಿಂದ ರೈತರಿಗೆ ವಿನಾಯಿತಿ ನೀಡುವಂತೆ ಕಾಂಗ್ರೆಸ್ ಮನವಿ ಮಾಡಿತು. ಸಂವಾದದ ನಂತರ ಸುದ್ದಿಸಂಸ್ಥೆಯ ಜೊತೆ ಮಾತನಾಡಿದ ಕಾಂಗ್ರೆಸ್ ಪಕ್ಷದ ನಾಯಕ ಅಧಿರ್ ರಂಜನ್ ಚೌಧರಿ, 'ಲಾಕ್‌ಡೌನ್ ಅನ್ನು ಸರ್ಕಾರವು ಮುಂದುವರಿಸುವ ಸಾಧ್ಯತೆ ಇದೆ. ರೈತರಿಗೆ ಇದರಿಂದ ವಿನಾಯಿತಿ ನೀಡಬೇಕು ಮತ್ತು ರಸಗೊಬ್ಬರಗಳ ಮೇಲಿನ ತೆರಿಗೆಯನ್ನು ರದ್ದು ಮಾಡಬೇಕು ಎಂದು ಕಾಂಗ್ರೆಸ್ ಮನವಿ ಮಾಡಿದೆ' ಎಂದರು.

'ಜನರ ಆರೋಗ್ಯಕ್ಕೆ ಯಾವುದೇ ಅಪಾಯವಾಗುವುದಿಲ್ಲ ಎಂಬುದು ಖಚಿತವಾಗದ ಹೊರತು ನಿರ್ಬಂಧ ಸಡಿಲಿಸಬಾರದು. ದೇಶದ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯ ಮೇಲೆ ಕೊರೊನಾದ ತೀವ್ರ ಪರಿಣಾಮ ಉಂಟಾಗಿದೆ. ಅರ್ಥವ್ಯವಸ್ಥೆಯನ್ನು ಮೇಲೆತ್ತುವ ಕ್ರಮಗಳನ್ನು ಈಗಿನಿಂದಲೇ ಆರಂಭಿಸಬೇಕು' ಎಂದು ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಸಲಹೆ ನೀಡಿದರು.

ಪ್ರಧಾನಿಗೆ ನೀಡಿರುವ ಸಲಹೆಗಳ ಮಾಹಿತಿಯನ್ನು ಅವರು ತಮ್ಮ ಫೇಸ್‌ಬುಕ್‌ನಲ್ಲೂ ಹಂಚಿಕೊಂಡಿದ್ದಾರೆ. 'ಯೋಜನೇತರ ವೆಚ್ಚಗಳನ್ನು ಕಡಿತಗೊಳಿಸಬೇಕು, ಹೊಸ ಸಂಸದ್ ಭವನ ನಿರ್ಮಾಣ ಯೋಜನೆಯನ್ನು ಮುಂದೂಡಬೇಕು, ಕೈಗಾರಿಕೆ ಮತ್ತು ಕೃಷಿ ಕ್ಷೇತ್ರದ ಚೇತರಿಕೆಗೆ ಯೋಜನೆ ರೂಪಿಸಬೇಕು' ಎಂಬ ಸಲಹೆಗಳನ್ನು ನೀಡಿರುವುದಾಗಿ ಶರದ್ ಪವಾರ್ ಅವರು ಹೇಳಿದ್ದಾರೆ.

'ಕೇಂದ್ರ ಸರ್ಕಾರವು ಸದ್ಯಕ್ಕೆ ಯಾವುದೇ ಹೊಸ ಯೋಜನೆ ಕೈಗೆತ್ತಿಕೊಳ್ಳಬಾರದು. ಲಾಕ್‌ಡೌನ್‌ನಿಂದಾಗಿ ಸಂಕಷ್ಟ ಎದುರಿಸುತ್ತಿರುವ, ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲಾ ರೂ.10,000 ನೆರವನ್ನು (ರೂ.5000ರ ಎರಡು ಕಂತುಗಳಲ್ಲಿ) ಒದಗಿಸಬೇಕು' ಎಂದು ಡಿಎಂಕೆ ನಾಯಕ ಟಿ.ಆರ್.ಬಾಲು ಸಲಹೆ ನೀಡಿದರು. ತಮಿಳುನಾಡಿನ 300 ಮೀನುಗಾರರು ಇರಾನ್‌ನಲ್ಲಿ ಸಿಲುಕಿದ್ದು, ಅವರನ್ನು ಮರಳಿ ಭಾರತಕ್ಕೆ ಕರೆತರಲು ಕ್ರಮ ಕೈಗೊಳ್ಳುವಂತೆಯೂ ಮನವಿ ಮಾಡಿದರು.

'ಸೋಂಕು ಕಾಣಿಸದ ಕಡೆಗಳಲ್ಲಿ ಲಾಕ್‌ಡೌನ್ ತೆರವುಗೊಳಿಸಬಹುದು. ಆದರೆ ಅದನ್ನು ಹಂತಹಂತವಾಗಿ ಜಾರಿ ಮಾಡಬೇಕು. ಜಿಲ್ಲಾ ಮತ್ತು ರಾಜ್ಯ ಗಡಿಗಳನ್ನು ಇನ್ನೂ ಸ್ವಲ್ಪ ಕಾಲದವರೆಗೆ ಮುಚ್ಚಬೇಕು. ಚಿತ್ರ ಮಂದಿರ, ಮಾಲ್‌ಗಳ ಲಾಕ್‌ಡೌನ್ ಮುಂದುವರಿಸಬೇಕು' ಎಂದು ಎಲ್‌ಜೆಪಿ ಸಂಸದ ಚಿರಾಗ್ ಪಾಸ್ವಾನ್ ಸಲಹೆ ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:13.04.2020

## 12. 20ರ ಬಳಿಕ ಸೀಮಿತ ವಿನಾಯಿತಿ

ಕೊರೊನಾ ವೈರಾಣು ತಡೆಗಾಗಿ ಎರಡನೇ ಹಂತದ ದಿಗ್ಬಂಧನ ಸಂದರ್ಭದಲ್ಲಿ ಕೆಲವು ಚಟುವಟಿಕೆಗಳಿಗೆ ಅವಕಾಶ ನೀಡಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಇದಕ್ಕೆ ಸಂಬಂಧಿಸಿದ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಗ್ರಾಮೀಣ ಪ್ರದೇಶದಲ್ಲಿನ ಕೈಗಾರಿಕೆಗಳು, ನಿರ್ಮಾಣ ಕಾಮಗಾರಿ, ಮಾಹಿತಿ ತಂತ್ರಜ್ಞಾನ ಮತ್ತು ಸಂಬಂಧಿಸಿದ ಸೇವೆಗಳು, ವಿಶೇಷ ಆರ್ಥಿಕ ವಲಯಗಳು, ಕೃಷಿ ಚಟುವಟಿಕೆಗಳು, ಗ್ರಾಮೀಣ ಉದ್ಯೋಗ ಖಾತರಿ ಅಡಿಯಲ್ಲಿನ ಕಾಮಗಾರಿಗಳನ್ನು ನಡೆಸಬಹುದು ಎಂದು ಮಾರ್ಗದರ್ಶಿಯಲ್ಲಿ ಹೇಳಲಾಗಿದೆ. ಇವುಗಳಿಗೆ ಕೆಲವು ಷರತ್ತುಗಳೂ ಇವೆ. ಈ ಎಲ್ಲಾ ಚಟುವಟಿಕೆಗಳಿಗೆ ಲಾಕ್‌ಡೌನ್‌ನಿಂದ ನೀಡಿರುವ ವಿನಾಯಿತಿಯು ಇದೇ 20ರಿಂದ ಅನ್ವಯವಾಗಲಿದೆ.

ಮನೆಯಿಂದ ಹೊರಗೆ ಬರುವಾಗ ಮುಖಗವಸು ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ನಿಷೇಧಿಸಲಾಗಿದೆ. ಮದ್ಯ, ಗುಟ್ಕಾ ಮತ್ತು ಜಗಿಯುವ ತಂಬಾಕು ಉತ್ಪನ್ನಗಳ ಮಾರಾಟದ ಮೇಲೆ ನಿಷೇಧ ಹೇರಲಾಗಿದೆ. ಕೆಲವು ಚಟುವಟಿಕೆಗಳ ಆರಂಭಕ್ಕೆ ಅವಕಾಶ ಕೊಟ್ಟಿದ್ದರೂ, ಅದಕ್ಕೆ ಮೊದಲು ವ್ಯವಸ್ಥೆಯನ್ನು ಸಜ್ಜುಗೊಳಿಸುವ ಕೆಲಸವನ್ನು ರಾಜ್ಯ ಸರ್ಕಾರಗಳು ಮಾಡಬೇಕು ಎಂಬ ಸೂಚನೆಯನ್ನು ಕೇಂದ್ರ ನೀಡಿದೆ.

ನಗರ ಪ್ರದೇಶದಿಂದ ಹೊರಗೆ ಇರುವ ವಿಶೇಷ ಆರ್ಥಿಕ ವಲಯಗಳು, ರಫ್ತು ಆಧಾರಿತ ಘಟಕಗಳು, ಕೈಗಾರಿಕಾ ಎಸ್ಟೇಟ್‌ಗಳು ಮತ್ತು ಕೈಗಾರಿಕಾ ಟೌನ್‌ಶಿಪ್‌ಗಳು ಕೆಲಸ ಆರಂಭಿಸುವುದಕ್ಕೆ ಮುಂಚೆ ಹಲವು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಿದೆ. ಕಾರ್ಮಿಕರ ವಸತಿಗೆ ಕಾರ್ಖಾನೆ ಕಟ್ಟಡದಲ್ಲಿ ಅಥವಾ ಸಮೀಪದ ಕಟ್ಟಡಗಳಲ್ಲಿ ವ್ಯವಸ್ಥೆ ಮಾಡಬೇಕು. ಕಾರ್ಮಿಕರ ಸಂಚಾರಕ್ಕಾಗಿ ವಿಶೇಷ ವಾಹನಗಳ ವ್ಯವಸ್ಥೆಯನ್ನೂ ಮಾಡಬೇಕು.

ಹಳ್ಳಿಗಳ ಜನರು ಮತ್ತು ಗ್ರಾಮಗಳಿಗೆ ಹಿಂದಿರುಗಿರುವ ವಲಸೆ ಕಾರ್ಮಿಕರಿಗೆ ನೆರವಾಗುವುದಕ್ಕಾಗಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಅವಕಾಶ ನೀಡಲಾಗಿದೆ. ಈ ಚಟುವಟಿಕೆ ಆರಂಭವಾದರೆ, ಈಗ ಕಂಗೆಟ್ಟಿರುವ ಕಾರ್ಮಿಕರ ಕೈಗೆ ಸ್ವಲ್ಪ ಪ್ರಮಾಣದಲ್ಲಿಯಾದರೂ ನಗದು ದೊರೆಯಬಹುದು.

**ಸಡಿಲಿಕೆ ಅವಕಾಶ ರಾಜ್ಯಕ್ಕಿಲ್ಲ:** ಎರಡನೇ ಹಂತದ ಲಾಕ್‌ಡೌನ್ ಅನ್ನು ಹೆಚ್ಚು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು ಎಂದು ಕೇಂದ್ರ ಗೃಹ ಸಚಿವಾಲಯವು ಹೇಳಿದೆ. ದಿಗ್ಬಂಧನವನ್ನು ಸಡಿಲಿಸುವ ಅವಕಾಶ ರಾಜ್ಯ ಸರ್ಕಾರಗಳಿಗೆ ಇಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಈ ಹಿಂದೆ, ಕೇಂದ್ರವು ಹೊರಡಿಸಿದ ಮಾರ್ಗದರ್ಶಿಯನ್ನು ಪಾಲಿಸದೆ ಕೆಲವು ರಾಜ್ಯಗಳು ನಿಯಮ ಸಡಿಲಿಕೆ ಮಾಡಿದ್ದರಿಂದ ಈ ಬಾರಿ ಸ್ಪಷ್ಟವಾಗಿಯೇ ಇದನ್ನು ಹೇಳಲಾಗಿದೆ.

- ಲಾಕ್‌ಡೌನ್ ನಿಯಮ ಉಲ್ಲಂಘಿಸಿದರೆ ಎರಡು ವರ್ಷಗಳವರೆಗೆ ಸಜೆ ಮತ್ತು ದಂಡಕ್ಕೆ ಅವಕಾಶ.
- ಎರಡು ಪಾಳಿಗಳ ಕೆಲಸದ ನಡುವೆ ಒಂದು ತಾಸು ಅಂತರ ಇರಬೇಕು. ಊಟದ ಸಮಯದಲ್ಲಿ ಸಿಬ್ಬಂದಿ ಒಟ್ಟು ಸೇರುವುದನ್ನು ತಡೆಯಲು ಪ್ರತ್ಯೇಕ ಸಮಯ ನಿಗದಿ ಮಾಡಬೇಕು.
- ಪ್ರವೇಶ ದ್ವಾರ, ಕಾರ್ಖಾನೆ, ಉಪಕರಣ ಕೊಠಡಿ, ಲಿಫ್ಟ್, ಶೌಚಾಲಯ, ಗೋಡೆಗಳಿಗೆ ಆಗಾಗ ಸೋಂಕು ನಿರೋಧಕ ಸಿಂಪಡಿಸಬೇಕು.
- ಸಿಬ್ಬಂದಿ ಸಂಚಾರದ ವಾಹನಗಳಲ್ಲಿ ಒಟ್ಟು ಸಾಮರ್ಥ್ಯದ ಶೇ.40ಕ್ಕಿಂತ ಹೆಚ್ಚು ಜನರು ಇರಬಾರದು.
- ಕೆಲಸದ ಸ್ಥಳ, ತರಬೇತಿ ಕೊಠಡಿ ಮತ್ತು ಸಭೆಗಳಲ್ಲಿ ವ್ಯಕ್ತಿಗಳ ನಡುವೆ ಕನಿಷ್ಠ ಆರು ಅಡಿ ಅಂತರ ಇರಬೇಕು.

ಆಧಾರ:ಪ್ರಜಾವಾಣಿ, ದಿನಾಂಕ:15.04.2020

## 13. ಸೋಂಕು ದುಪ್ಪಟ್ಟು ಅವಧಿ ದ್ವಿಗುಣ

ಲಾಕ್‌ಡೌನ್ ಹೇರಿಕೆಗೂ ಮುನ್ನ ಕೇವಲ ಮೂರು ದಿನದಲ್ಲಿ ಕೊರೊನಾ ವೈರಾಣು ಸೋಂಕಿತರ ಸಂಖ್ಯೆಯು ದುಪ್ಪಟ್ಟಾಗುತ್ತಿತ್ತು. ಆದರೆ, ಈಗ ಸೋಂಕಿತರ ಸಂಖ್ಯೆ ದುಪ್ಪಟ್ಟಾಗಲು 6.2 ದಿನಗಳು ಬೇಕಾಗುತ್ತಿವೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಕೋವಿಡ್ ಬಾಧಿತರು ಗುಣಮುಖರಾಗುತ್ತಿರುವ ಸಂಖ್ಯೆ ಮತ್ತು ಸಾವಿನ ಸಂಖ್ಯೆಯ ಅನುಪಾತದಲ್ಲಿ ಭಾರತದ ಸ್ಥಿತಿಯು ಹಲವು ದೇಶಗಳಿಗಿಂತ ಉತ್ತಮವಾಗಿದೆ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ ಅಗರ್‌ವಾಲ್ ಹೇಳಿದ್ದಾರೆ.

ಕರ್ನಾಟಕ, ಕೇರಳ, ತಮಿಳುನಾಡು ಸೇರಿ 19 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರಕರಣಗಳು ದ್ವಿಗುಣಗೊಳ್ಳುತ್ತಿರುವ ದರವು ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ. ಕೋವಿಡ್‌ಗೆ ಒಳಗಾದ ಶೇ. 80ರಷ್ಟು ರೋಗಿಗಳು ರೋಗಮುಕ್ತರಾಗುತ್ತಿದ್ದಾರೆ. ಶೇ.20ರಷ್ಟು ಪ್ರಕರಣಗಳಲ್ಲಿ ಮಾತ್ರ ಸಾವು ವರದಿಯಾಗುತ್ತಿದೆ. ಆ್ಯಂಟಿಬಾಡಿ ಪರೀಕ್ಷೆಯ ಐದು ಲಕ್ಷ ಕಿಟ್‌ಗಳು ಚೀನಾದಿಂದ ಬಂದಿವೆ. ಅವುಗಳನ್ನು ರಾಜ್ಯಗಳಿಗೆ ವಿತರಿಸಲಾಗುವುದು. ಹೆಚ್ಚು ಪ್ರಕರಣಗಳನ್ನು ಹೊಂದಿರುವ ರಾಜ್ಯಗಳಿಗೆ ಆದ್ಯತೆಯಲ್ಲಿ ಹಂಚಲಾಗುವುದು ಎಂದು ಅವರು ಹೇಳಿದ್ದಾರೆ.

**ಪರೀಕ್ಷೆ ಹೆಚ್ಚಳ:** ದೇಶದಲ್ಲಿ ಕೊರೊನಾ ಪರೀಕ್ಷೆಯು ಗಣನೀಯವಾಗಿ ಏರಿಕೆಯಾಗುತ್ತಿದೆ. ಈವರೆಗೆ, 3.19 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ ಎಂದು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್‌ನ (ಐಸಿಎಂಆರ್) ವಿಜ್ಞಾನಿ ಡಾ:ರಾಮನ್ ಆರ್.ಗಂಗಾಖೇಡ್ಕರ್ ತಿಳಿಸಿದ್ದಾರೆ.

ಒಂದೇ ದಿನ 28,340 ಪರೀಕ್ಷೆಗಳು ನಡೆದಿವೆ. ಅವುಗಳ ಪೈಕಿ 23,932 ಪರೀಕ್ಷೆಗಳು ಐಸಿಎಂಆರ್‌ನ ಜಾಲದಲ್ಲಿರುವ ಪ್ರಯೋಗಾಲಯಗಳಲ್ಲಿ ನಡೆದಿವೆ. ಉಳಿದವುಗಳನ್ನು 80 ಖಾಸಗಿ ಪ್ರಯೋಗಾಲಯಗಳಲ್ಲಿ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ.

**ಬಳಸಿದ ವೆಂಟಿಲೇಟರ್ ಆಮದಿಗೆ ಅನುಮತಿ:** ಬಳಸಿದ ವೆಂಟಿಲೇಟರ್‌ಗಳನ್ನು ಆಮದು ಮಾಡಿಕೊಳ್ಳಲು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು ಅನುಮತಿ ನೀಡಿದೆ. ಬಳಸಿದ ವೆಂಟಿಲೇಟರ್‌ಗಳ ಆಮದಿನ ಮೇಲೆ

ನಿಷೇಧ ಹೇರಿ ಸಚಿವಾಲಯವು 2008ರಲ್ಲಿಯೇ ಆದೇಶ ಹೊರಡಿಸಿತ್ತು. ಆದರೆ, ಈಗ ಕೋವಿಡ್ ಬಾಧೆಯಿಂದಾಗಿ ದೇಶದಲ್ಲಿ ವೆಂಟಿಲೇಟರ್‌ಗಳ ಕೊರತೆ ತೀವ್ರವಾಗಿದೆ.

ಮೂರು ವರ್ಷಕ್ಕಿಂತ ಹಳೆಯದಾದ ವೈದ್ಯಕೀಯ ಉಪಕರಣಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳ ಆಮದಿಗೆ ತಡೆ ಒಡ್ಡುವ ಅಪಾಯಕಾರಿ 'ತ್ಯಾಜ್ಯ ನಿಯಮ'ವನ್ನು 2008ರಲ್ಲಿ ಜಾರಿಗೆ ತರಲಾಗಿತ್ತು.

ಈಗ ಈ ನಿಯಮವನ್ನು ಬದಲಾಯಿಸಲಾಗಿದೆ. ಈಗಾಗಲೇ ಆಮದಾಗಿ ಬಂದರುಗಳಲ್ಲಿ ಉಳಿದಿರುವ ವೆಂಟಿಲೇಟರ್‌ಗಳನ್ನು ಬಳಸುವುದಕ್ಕೂ ಅನುಮತಿ ದೊರೆಯಲಿದೆ. ಬಳಸಿದ 200 ವೆಂಟಿಲೇಟರ್‌ಗಳನ್ನು ಚೆನ್ನೈನ ಕಂಪೆನಿಯೊಂದು 2018ರಲ್ಲಿ ಅಮೆರಿಕದಿಂದ ಆಮದು ಮಾಡಿಕೊಂಡಿತ್ತು. ಆದರೆ, ನಿಷೇಧದ ಕಾರಣಕ್ಕೆ, ಅದನ್ನು ಬಂದರಿನಿಂದ ಹೊರಗೆ ತರುವುದಕ್ಕೆ ಸಾಧ್ಯವಾಗಿರಲಿಲ್ಲ. ಈಗ, ಅದನ್ನೂ ಹೊರಗೆ ತಂದು ಬಳಸಬಹುದಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:16.04.2020

## 14. ದೇಶಿ ಕಂಪೆನಿಗಳ ರಕ್ಷಣೆಗೆ ಕೇಂದ್ರದ ನೀತಿ

ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳ ವಿದೇಶಿ ನೇರ ಹೂಡಿಕೆಗೆ (ಎಫ್‌ಡಿಐ) ಕೇಂದ್ರ ಸರ್ಕಾರದ ಪೂರ್ವಾನುಮತಿ ಕಡ್ಡಾಯ ಎಂಬ ನಿಯಮವನ್ನು ರೂಪಿಸಲಾಗಿದೆ.

ಕೊರೊನಾ ಪಿಡುಗಿನ ಕಾರಣದಿಂದಾಗಿ ಉದ್ಯಮ ಸಂಸ್ಥೆಗಳು ಸಂಕಷ್ಟಕ್ಕೆ ಒಳಗಾಗಿವೆ. ಕಂಪೆನಿಗಳ ಮೌಲ್ಯ ಕೂಡ ಇಳಿಕೆಯಾಗಿದೆ. ಈ ಅವಕಾಶವನ್ನು ಬಳಸಿಕೊಂಡು ಚೀನಾದ ಕಂಪೆನಿಗಳು ಭಾರತದ ಕಂಪೆನಿಗಳು ಹೂಡಿಕೆ ಮಾಡುವ ಸಾಧ್ಯತೆ ಇದೆ. ಇದನ್ನು ತಡೆಯುವುದಕ್ಕಾಗಿ ಎಫ್‌ಡಿಐ ಮೇಲೆ ನಿರ್ಬಂಧ ಹೇರಲಾಗಿದೆ. ಭಾರತದ ಜೊತೆ ಗಡಿ ಹಂಚಿಕೊಂಡಿರುವ ದೇಶಗಳೆಂದರೆ ಚೀನಾ, ಬಾಂಗ್ಲಾದೇಶ, ಪಾಕಿಸ್ತಾನ, ಭೂತಾನ್, ನೇಪಾಳ, ಮ್ಯಾನ್ಮಾರ್ ಮತ್ತು ಆಫ್ಘಾನಿಸ್ತಾನ, ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಎಫ್‌ಡಿಐಗೆ ಸಂಬಂಧಿಸಿದ ಈ ನಿಯಮ ಈಗಾಗಲೇ ಜಾರಿಯಲ್ಲಿದೆ. ಈ ದೇಶದ ಕಂಪೆನಿಗಳ ಎಫ್‌ಡಿಐಗೆ ಸರ್ಕಾರದ ಪೂರ್ವಾನುಮತಿ ಕಡ್ಡಾಯ.

ಭಾರತದ ಯಾವುದೇ ಕಂಪೆನಿಯಲ್ಲಿ ಈಗ ಇರುವ ಮತ್ತು ಭವಿಷ್ಯದ ವಿದೇಶಿ ನೇರ ಹೂಡಿಕೆಯ ಮಾಲೀಕತ್ವದ ಬದಲಾವಣೆಗೆ ಸರ್ಕಾರದ ಅನುಮತಿ ಅಗತ್ಯ ಎಂದು ಹೊಸ ನಿಯಮಗಳಲ್ಲಿ ಹೇಳಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:17.04.2020

## 15. ದೇಶಕ್ಕೆ ಅಗೋಚರ ಯುದ್ಧ

ಕೊರೊನಾ ಸೋಂಕಿನ ಪರಿಣಾಮದಿಂದ ಸೇನೆ ಮತ್ತು ದೇಶದ ರಕ್ಷಣಾತ್ಮಕ ಉದ್ದೇಶದ ಆಸ್ತಿಗಳ ರಕ್ಷಣೆಗೆ ಅಗತ್ಯ ಯಾಂತ್ರೀಕೃತ ವ್ಯವಸ್ಥೆಯನ್ನು ಭಾರತ ಹೊಂದಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ದೇಶ ಸದ್ಯ ಕೊರೊನಾ ಸೋಂಕಿನ ವಿರುದ್ಧ ಹೋರಾಟ ನಡೆಸಿದೆ. ಇದರ ಹೊರತಾಗಿ ಯಾವುದೇ ವ್ಯತಿರಿಕ್ತ ದಾಳಿಗಳಿಂದ ರಕ್ಷಿಸಿಕೊಳ್ಳಲು ಸೇನೆ ಪೂರ್ಣ ಸಜ್ಜಾಗಿದೆ.

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು, 'ಕೊರೊನಾ ದೇಶದ ಮುಂದಿರುವ ಅಗೋಚರ ಯುದ್ಧ ಭಾರತ ಸಮರೋಪಾದಿಯಲ್ಲಿ ಇದನ್ನು ಎದುರಿಸುತ್ತಿದೆ' ಎಂದರು.

ಸೇನೆಯ ಮೂರೂ ತುಕಡಿಗಳು ಪ್ರಧಾನ ಮಂತ್ರಿಗಳ ಕಚೇರಿ, ಆರೋಗ್ಯ ಇಲಾಖೆ ಮತ್ತು ಸೇನೆಯ ವೈದ್ಯಕೀಯ ವಿಭಾಗದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿವೆ. ಸೇನೆಯ ಕಾರ್ಯನಿರ್ವಹಣೆ ಮೇಲೆ ಸೋಂಕಿನ ಪರಿಣಾಮ ಆಗಿದೆಯೇ ಎಂಬ ಪ್ರಶ್ನೆಗೆ, ಯಾವುದೇ ಸಂದರ್ಭದಲ್ಲಿ ದೇಶದ ಸಾರ್ವಭೌಮತ್ವದ ರಕ್ಷಣೆಗೆ ಸೇನೆ ಸನ್ನದ್ಧವಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ನಿರ್ದಿಷ್ಟ ಗುರಿಯ ತಾಣಗಳ ಮೇಲೆ ನಿರಂತರ ದಾಳಿ ನಡೆಸುವ ಮೂಲಕ ಭಾರತೀಯ ಸೇನೆ ಪ್ರಾಬಲ್ಯ ಹೊಂದಿದೆ ಎಂದರು.

ಸಂವಹನ, ಸರಬರಾಜು ನಿರ್ವಹಣೆ, ವೈದ್ಯಕೀಯ ಚಿಕಿತ್ಸೆ, ಪರಿಸ್ಥಿತಿ ನಿರ್ವಹಣೆ ಕುರಿತಂತೆ ಸೇನೆಯ ಪರಿಣಿತರ ನೆರವನ್ನು ಕೊರೊನಾ ತಡೆಯ ಸೇವೆಗೆ ಬಳಸಲಾಗುತ್ತಿದೆ. ಸೋಂಕು ವ್ಯಾಪಿಸುವುದರ ವಿರುದ್ಧ ಸೇನೆಯೂ ಮುಂಜಾಗ್ರತೆ ವಹಿಸಿದೆ. ರಜೆಯಿಂದ ಮರಳುವ ಸಿಬ್ಬಂದಿಗೆ ಕಡ್ಡಾಯವಾಗಿ 14 ದಿನ ಕ್ವಾರಂಟೈನ್‌ನಲ್ಲಿ ಇಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:18.04.2020

## 16. ಭಾರತಕ್ಕೆ ರೂ.45.16 ಕೋಟಿ ನೆರವು

ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಭಾರತಕ್ಕೆ ರೂ.45.16 ಕೋಟಿ ವೈದ್ಯಕೀಯ ನೆರವನ್ನು ಅಮೆರಿಕ ಘೋಷಿಸಿದೆ. ಸೋಂಕಿತರಿಗೆ ಚಿಕಿತ್ಸೆ ನೀಡಲು ಆರೋಗ್ಯ ತಪಾಸಣೆ ನಡೆಸಲು ಮತ್ತು ಸಾರ್ವಜನಿಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಈ ಆರ್ಥಿಕ ನೆರವು ನೀಡಲಾಗಿದೆ ಎಂದು ಅಮೆರಿಕ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:18.04.2020

## 17. ಕೋವಿಡ್–19: ನಾಲ್ಕು ರಾಜ್ಯಕ್ಕೆ ಕೇಂದ್ರ ತಂಡ

ಲಾಕ್‌ಡೌನ್ ನಿಯಮಾವಳಿಗಳನ್ನು ಉಲ್ಲಂಘಿಸಿದ್ದರಿಂದ ಗಂಭೀರ ಪರಿಸ್ಥಿತಿ ಎದುರಿಸುತ್ತಿರುವ ನಾಲ್ಕು ರಾಜ್ಯಗಳ 11 ಜಿಲ್ಲೆಗಳಲ್ಲಿ ಪರಿಶೀಲನೆ ನಡೆಸಲು ಕೇಂದ್ರ ಗೃಹ ಸಚಿವಾಲಯ ಆರು ತಂಡಗಳನ್ನು ಕಳುಹಿಸಲಿದೆ.

ಸಚಿವಾಲಯದ ಆರು ತಂಡಗಳ ನೇತೃತ್ವವನ್ನು ಹೆಚ್ಚುವರಿ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ವಹಿಸಿಕೊಂಡಿದ್ದಾರೆ. ವಿಪತ್ತು ನಿರ್ವಹಣೆ ಕಾಯ್ದೆ–2005ರ ಅನ್ವಯ ಗೃಹ ಸಚಿವಾಲಯ ಈ ತಂಡಗಳನ್ನು ರಚಿಸಿದೆ. ತಲಾ ಎರಡು ತಂಡಗಳು ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರಕ್ಕೆ ಹಾಗೂ ತಲಾ ಒಂದು ತಂಡ ಮಧ್ಯಪ್ರದೇಶ ಮತ್ತು ರಾಜಸ್ಥಾನಕ್ಕೆ ಭೇಟಿ ನೀಡಲಿವೆ.

ದೇಶದ ಹಲವು ಜಿಲ್ಲೆಗಳಲ್ಲಿ ಲಾಕ್‌ಡೌನ್ ನಿಯಮಾವಳಿಗಳನ್ನು ಉಲ್ಲಂಘಿಸಿರುವುದು ವರದಿಯಾಗಿದೆ. ಇದರಿಂದ ಕೋವಿಡ್–19 ಮತ್ತಷ್ಟು ಹಬ್ಬುವ ಮೂಲಕ ಸಾರ್ವಜನಿಕರ ಆರೋಗ್ಯ ಅಪಾಯಕ್ಕೆ ಸಿಲುಕುವ ಸಾಧ್ಯತೆ ಇದೆ ಎಂದು ಗೃಹ ಸಚಿವಾಲಯ ನಾಲ್ಕು ರಾಜ್ಯಗಳಿಗೆ ಪತ್ರ ಬರೆದಿತ್ತು.

ಆರೋಗ್ಯ ರಕ್ಷಣೆಯ ಮುಂಚೂಣಿಯಲ್ಲಿರುವ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ. ಬ್ಯಾಂಕ್‌ಗಳು, ನ್ಯಾಯಬೆಲೆ ಅಂಗಡಿಗಳ ಹೊರಗೆ, ಮಾರುಕಟ್ಟೆ ಪ್ರದೇಶ ಸೇರಿದಂತೆ ವಿವಿಧ ಸ್ಥಳಗಳಲ್ಲಿ ಅಂತರ ಕಾಪಾಡುತ್ತಿಲ್ಲ ಹಾಗೂ ನಗರ ಪ್ರದೇಶಗಳಲ್ಲಿ ಖಾಸಗಿ ವಾಹನಗಳಲ್ಲಿ ಪ್ರಯಾಣಿಕರನ್ನು ಕೂರಿಸಿಕೊಂಡು ಸಂಚರಿಸುತ್ತಿರುವುದು ಗಮನಕ್ಕೆ ಬಂದಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:19.04.2020

## 18. ರಸಗೊಬ್ಬರ ಸಬ್ಸಿಡಿ ಹೆಚ್ಚಿಸಿದ ಕೇಂದ್ರ

ಫಾಸ್ಪಟಿಕ್ ಮತ್ತು ಪೊಟ್ಯಾಸಿಕ್ (ಪಿಆ್ಯಂಡ್‌ಕೆ) ರಸಗೊಬ್ಬರಗಳ ಪೋಷಕಾಂಶ ಆಧಾರಿತ ಸಬ್ಸಿಡಿ ದರವನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸಬ್ಸಿಡಿ ಮೊತ್ತವು ಶೇ.5ರಿಂದ ಶೇ.7ರಷ್ಟು ಹೆಚ್ಚಾಗಲಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ರೂ. 22,186 ಕೋಟಿ ಹೊರೆ ಬೀಳಲಿದೆ. ನೈಟ್ರೊಜಿನ್, ಫಾಸ್ಪರಸ್, ಪೊಟ್ಯಾಷ್ ಮತ್ತು ಸಲ್ಫರ್ ಪೋಷಕಾಂಶಗಳ ಹೊಸ ಸಬ್ಸಿಡಿ ದರವು ಹಿಂದಿನ ವರ್ಷಕ್ಕಿಂತ ಕಡಿಮೆ ಇರಲಿದೆ.

ಆಧಾರ:ಪ್ರಜಾವಾಣಿ, ದಿನಾಂಕ:20.04.2020

## 19. ಹಾಟ್‌ಸ್ಪಾಟ್‌ನಲ್ಲಿ ಕಠಿಣ ನಿರ್ಬಂಧ

ಲಾಕ್‌ಡೌನ್ 3.0ಯತ್ತ ದೇಶವು ಸಾಗುವುದು ನಿಚ್ಚಳವಾಗಿದೆ. 40 ದಿನಗಳ ದಿಗ್ಬಂಧನವು ಮೇ 3ಕ್ಕೆ ಕೊನೆಗೊಳ್ಳಲಿದೆ. ಆದರೆ, ಕೋವಿಡ್ ಹಾಟ್‌ಸ್ಪಾಟ್‌ಗಳಲ್ಲಿ ಕಟ್ಟುನಿಟ್ಟಿನ ದಿಗ್ಬಂಧನ ಮತ್ತು ಹಸಿರು ವಲಯದಲ್ಲಿ ಹೆಚ್ಚು ವಿನಾಯಿತಿ ಮೂರನೇ ಲಾಕ್‌ಡೌನ್‌ನ ಆದ್ಯತೆಯಾಗಲಿವೆ.

ಒಂಭತ್ತು ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿದ ವಿಡಿಯೋ ಸಂವಾದದಲ್ಲಿ ಲಾಕ್‌ಡೌನ್ ಸಡಿಲಿಕೆ ಬಗ್ಗೆ ಚರ್ಚೆಯಾಗಿದೆ. ಸಂವಾದದಲ್ಲಿ ಭಾಗಿಯಾದ ನಾಲ್ವರು ಮುಖ್ಯಮಂತ್ರಿಗಳು ದಿಗ್ಬಂಧನ ತೆರವಿಗೆ ಒಲವು ತೋರಿದ್ದಾರೆ. ಲಾಕ್‌ಡೌನ್‌ಗೆ ಸಂಬಂಧಿಸಿದಂತೆ ಮೋದಿಯವರು ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.

ಕೊರೊನಾ ವಿರುದ್ಧದ ಹೋರಾಟದ ಜೊತೆಗೆ ಅರ್ಥಿಕ ವ್ಯವಸ್ಥೆಯೂ ಮುಖ್ಯ ಎಂದು ಪ್ರಧಾನಿ ಹೇಳಿದ್ದಾರೆ. ಕೋವಿಡ್ ಹಾಟ್‌ಸ್ಪಾಟ್ ಅಲ್ಲದ ಪ್ರದೇಶಗಳಲ್ಲಿ ವಿನಾಯಿತಿಗಳು ಇನ್ನಷ್ಟು ಹೆಚ್ಚಲಿವೆ ಎಂಬ ಸುಳಿವನ್ನು ಅವರು ನೀಡಿದ್ದಾರೆ. ದಿಗ್ಬಂಧನದಿಂದಾಗಿ ಅರ್ಥಿಕ ವ್ಯವಸ್ಥೆ ಕುಸಿದಿದೆ. ವಲಸೆ ಕಾರ್ಮಿಕರು ಕಂಗೆಟ್ಟಿದ್ದಾರೆ. ಆರ್ಥಿಕ ಚಟುವಟಿಕೆ ಆರಂಭಕ್ಕೆ ಅವಕಾಶ ನೀಡಬೇಕು ಎಂದು ಹಲವು ರಾಜ್ಯಗಳು ಒತ್ತಾಯಿಸಿದ ಹಿನ್ನೆಲೆಯಲ್ಲಿ ವಿಡಿಯೋ ಸಂವಾದ ನಡೆಸಲಾಗಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ:21.04.2020

## 20. ಅಂತರರಾಜ್ಯ ರಸ್ತೆ ತಡೆ ತೆರವಿಗೆ ಗಡ್ಕರಿ ಸೂಚನೆ

ಟ್ರಕ್ ಹಾಗೂ ಸರಕು ಹೊತ್ತ ವಾಹನಗಳ ಸುಗಮ ಸಂಚಾರಕ್ಕಾಗಿ ಅಂತರರಾಜ್ಯ ರಸ್ತೆಗಳನ್ನು ಬಂದ್ ಮಾಡಿರುವುದನ್ನು ತೆರವುಗೊಳಿಸಬೇಕು ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಎಲ್ಲಾ ರಾಜ್ಯಗಳನ್ನು ಒತ್ತಾಯಿಸಿದ್ದಾರೆ.

ವಿವಿಧ ರಾಜ್ಯಗಳ ಸಾರಿಗೆ ಸಚಿವರೊಂದಿಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದ ಅವರು, 'ಟ್ರಕ್ ಚಾಲಕರು, ಕೂಲಿ ಕಾರ್ಮಿಕರು ಆರೋಗ್ಯ ಮಾರ್ಗಸೂಚಿಗಳನ್ನು ಪಾಲಿಸಬೇಕು. ಸಮರ್ಪಕ ಅಂತರ ಕಾಯ್ದುಕೊಳ್ಳಬೇಕು, ಮಾಸ್ಕ್ ಧರಿಸುವುದು ಹಾಗೂ ಸ್ಯಾನಿಟೈಜರ್ ಬಳಸುತ್ತಾರೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:22.04.2020

## 21. ಐಟಿ ವಲಯಕ್ಕೆ ಕಾರ್ಯತಂತ್ರ ಸಮಿತಿ ರಚನೆ

'ಕೋವಿಡ್‌ನಂತಹ ಪರಿಸ್ಥಿತಿ ಎದುರಾದಾಗ ಐಟಿ ಹಾಗೂ ಸಂಬಂಧಿತ ವಲಯಗಳು ಕಾರ್ಯನಿರ್ವಹಣೆ, ಅನುಸರಿಸಬೇಕಾದ ಮಾರ್ಗಸೂಚಿ, ಪರಿಹಾರ ಕ್ರಮಗಳ ಬಗ್ಗೆ ರೂಪುರೇಷೆ ಸಿದ್ಧಪಡಿಸಲು ರಾಷ್ಟ್ರಮಟ್ಟದ ಕಾರ್ಯತಂತ್ರ ಸಮಿತಿ ರಚಿಸಲಾಗುವುದು' ಎಂದು ಕೇಂದ್ರದ ಮಾಹಿತಿ ತಂತ್ರಜ್ಞಾನ ಮತ್ತು ದೂರಸಂಪರ್ಕ ಸಚಿವ ರವಿಶಂಕರ್ ಪ್ರಸಾದ್ ಹೇಳಿದರು.

ವಿವಿಧ ರಾಜ್ಯಗಳ ಐಟಿ, ಬಿಟಿ ಸಚಿವರ ಜೊತೆಗೆ ವಿಡಿಯೋ ಸಂವಾದ ನಡೆಸಿದ ಅವರು, 'ಐಟಿ ವಲಯ ಮಾತ್ರವಲ್ಲದೆ, ಎಲ್ಲಾ ರಾಜ್ಯಗಳು ಅನ್ವೇಷಣೆ, ಸ್ಟಾರ್ಟ್‌ಅಪ್‌ಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಇ–ಆಡಳಿತ, ಇ–ಪಾಸ್‌ಗಳ ಪರಿಣಾಮಕಾರಿ ಜಾರಿಗೆ ಗಮನ ಹರಿಸಲಾಗುವುದು' 'ಕೋವಿಡ್ ಸಮಸ್ಯೆ ಎದುರಾದಾಗಿನಿಂದ ಬಹುತೇಕ ಎಲ್ಲಾ ವಲಯಗಳ ಕೆಲಸದ ರೀತಿ ನೀತಿ ಬದಲಾಗಿದ್ದು, ಶೇ.80ರಷ್ಟು ಐಟಿ ವೃತ್ತಿಪರರು ಮನೆಯಿಂದಲೇ ಕೆಲಸ ಮಾಡುತ್ತಿದ್ದಾರೆ. ಬಹುತೇಕ ಎಲ್ಲ ಕೆಲಸ ಕಾರ್ಯಗಳು ಆನ್‌ಲೈನ್ ಮೂಲಕವೇ ನಡೆಯುತ್ತಿದೆ. ಇದಕ್ಕೆ ಅನುಕೂಲವಾಗುವಂತೆ ಭಾರತ್ ನೆಟ್ ಯೋಜನೆ ಮೂಲಕ ದೇಶದ ಮೂಲೆಮೂಲೆಗೂ ಇಂಟರ್ನೆಟ್ ಸಂಪರ್ಕ ಜಾಲ ಬಲಪಡಿಸಲಾಗುತ್ತದೆ' ಎಂದು ಹೇಳಿದರು.

'ಮೇಕ್ ಇನ್ ಇಂಡಿಯಾ ಯೋಜನೆಗಳ ಕಾರ್ಯರೂಪಕ್ಕೆ ಇದು ಸಕಾಲ' ಎಂದ ಅವರು, 'ಕೋವಿಡ್ ನಂತರ ಆರೋಗ್ಯ ಸೇವೆಯಲ್ಲೂ ತಂತ್ರಜ್ಞಾನದ ಬಳಕೆ ಹೆಚ್ಚಿದೆ. ಕರ್ನಾಟಕ ಸೇರಿದಂತೆ ಮಹಾರಾಷ್ಟ್ರ, ತಮಿಳುನಾಡು ಮತ್ತು ತೆಲಂಗಾಣಗಳಲ್ಲಿ ಆನ್‌ಲೈನ್ ಆರೋಗ್ಯ ಸೇವೆ ಉತ್ತಮವಾಗಿದ್ದು, ಇತರೆ ರಾಜ್ಯಗಳಲ್ಲೂ ಇದು ವಿಸ್ತರಣೆ ಆಗಬೇಕು' ಎಂದರು.

ಆಧಾರ:ಪ್ರಜಾವಾಣಿ, ದಿನಾಂಕ:23.04.2020

## 22. ಒಗ್ಗಟ್ಟಿನ ಉತ್ತರವೇ ಮುಖ್ಯವಾಗಲಿ

'ಕೋವಿಡ್–19 ಯಾರನ್ನಾದರೂ ಬಾಧಿಸಬಹುದು. ಈ ಮಹಾಮಾರಿಯು ಜಾತಿ, ಧರ್ಮ ಜನಾಂಗ, ವರ್ಣ, ಭಾಷೆ ಅಥವಾ ಗಡಿಯನ್ನು ನೋಡಿ ಅಪ್ಪಳಿಸುವುದಿಲ್ಲ. ಎಲ್ಲ ಭೇದಗಳನ್ನು ಮರೆತು ಒಗ್ಗಟ್ಟಾಗಿ ಎದುರಿಸುವುದೇ ನಾವು ಈ ಪಿಡುಗಿಗೆ ನೀಡುವ ಉತ್ತರವಾಗಬೇಕು' ಎಂದು ಪ್ರಧಾನಿ ಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ.

'ಈ ಹಿಂದೆ, ದೇಶ–ದೇಶಗಳ ನಡುವೆ, ಸಮಾಜಗಳ ನಡುವೆ ಸಂಘರ್ಷ ನಡೆಯುತ್ತಿತ್ತು ಎಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಆದರೆ, ಈಗ ಎಲ್ಲಾ ದೇಶ– ಸಮಾಜಗಳಿಗೆ ಒಂದೇ ಸವಾಲು ಎದುರಾಗಿದೆ. ಭವಿಷ್ಯದಲ್ಲಿ ಮಾನವ ಕುಲವೇ ಒಂದಾಗಿ ನಿಲ್ಲುವ, ಪುಟಿದೇಳುವಂತಹ ದಿನಗಳಿರಲಿವೆ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಪ್ರಸ್ತುತ ಸಂದರ್ಭದಲ್ಲಿ ಜಗತ್ತೇ ಭಾರತದತ್ತ ನೋಡುತ್ತಿದೆ. ಇಲ್ಲಿ ಹೊರಹೊಮ್ಮುವ ಹೊಸ ವಿಚಾರ, ಯೋಜನೆಗಳು ಜಾಗತಿಕವಾಗಿ ಸ್ವೀಕೃತಗೊಳ್ಳುವ ಮತ್ತು ಅನ್ವಯವಾಗುವಂತಿರಬೇಕು. ಈ ವಿಚಾರಗಳು ಭಾರತದಲ್ಲಿ ಮಾತ್ರವಲ್ಲ ಇಡೀ ಮನುಕುಲದಲ್ಲಿಯೇ ಸಕಾರಾತ್ಮಕ ಬದಲಾವಣೆ ತರುವಂಥ ಸಾಮರ್ಥ್ಯ ಹೊಂದಿರಬೇಕು' ಎಂದು ಆಶಯ ವ್ಯಕ್ತಪಡಿಸಿದ್ದಾರೆ. ಈ ಮೊದಲು ರಸ್ತೆ, ಉಗ್ರಾಣಗಳು, ಬಂದರುಗಳು ಸೇರಿದಂತೆ ಭೌತಿಕ ಸೌಕರ್ಯಗಳ ಚೌಕಟ್ಟಿನ ಆಧಾರದಲ್ಲಿಯೇ ಸಾಗಾಣಿಕೆ–ಪೂರೈಕೆ ಕ್ಷೇತ್ರವನ್ನು ವ್ಯಾಖ್ಯಾನಿಸಲಾಗುತ್ತಿತ್ತು. ಕೊರೊನಾ ವೈರಸ್ ಸೋಂಕಿನ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಸಾಗಾಣಿಕೆ ಪೂರೈಕೆ ಕ್ಷೇತ್ರದ ಚಿತ್ರಣವೇ ಬದಲಾಗಲಿದೆ. ಇದು ತಂತ್ರಜ್ಞಾನದ ಸಮರ್ಥ ಬಳಕೆಯಿಂದ ಸಾಧ್ಯವಾಗಲಿದೆ.

'ಸಾಗಾಣಿಕೆ–ಪೂರೈಕೆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಾಗತಿಕ ಕೇಂದ್ರವಾಗಿ ಹೊರಹೊಮ್ಮುವ ಸಾಮರ್ಥ್ಯ ಭಾರತಕ್ಕಿದೆ. ಈಗ ಲಭಿಸಿರುವ ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಲು ನಾವು ಸಿದ್ಧರಾಗಬೇಕು' ಎಂದು ಪ್ರತಿಪಾದಿಸಿದ್ದಾರೆ. ಈಗ 'ಡಿಜಿಟಲ್ ಫಸ್ಟ್' (ತಂತ್ರಜ್ಞಾನವೇ ಮೊದಲು) ಎಂಬಂತಾಗಿದ್ದು, ವೃತ್ತಿಗಳಿಗೆ ಇದ್ದ ಮಿತಿಗಳೇ ಅಳಿಸಿಹೋಗಿವೆ. ಹೊಸ ಸಾಧ್ಯತೆಗಳು ತೆರೆದುಕೊಂಡಿವೆ. ಮನೆಯೇ ಕಚೇರಿ ರೂಪ ಪಡೆದುಕೊಂಡಿದ್ದರೆ, ಇಂಟರ್‌ನೆಟ್ ಎಂಬುದೇ ಸಭೆ ನಡೆಸುವ ಕೊಠಡಿಯಂತಾಗಿದೆ'. 'ತಂತ್ರಜ್ಞಾನದಿಂದ ನಮ್ಮ ಜೀವನದಲ್ಲಿಯೂ ಬದಲಾವಣೆ ಕಾಣಬಹುದು. ಇನ್ನು, ಆಡಳಿತಾತ್ಮಕವಾಗಿ ನೋಡಿದಾಗ ಅಧಿಕಾರಶಾಹಿಯಲ್ಲಿ ಶ್ರೇಣಿಕೃತ ವ್ಯವಸ್ಥೆಯೇ ನಾಶವಾಗಿದೆ. ಮಧ್ಯವರ್ತಿಗಳ ಅವಶ್ಯಕತೆಯೇ ಮಾಯವಾಗಿದ್ದಲ್ಲದೇ ಅಭಿವೃದ್ಧಿಗೆ ವೇಗ ಬಂದಿದೆಯೆಂದು ಮೋದಿ ತಿಳಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:24.04.2020

## 23. ವಲಸಿಗರ ಸಂಚಾರಕ್ಕೆ ಅನುಮತಿ

ದೇಶದ ವಿವಿಧ ಭಾಗಗಳಲ್ಲಿ ಸಿಲುಕಿಕೊಂಡಿರುವ ವಲಸೆ ಕಾರ್ಮಿಕರು, ಪ್ರವಾಸಿಗರು, ವಿದ್ಯಾರ್ಥಿಗಳು ಮತ್ತು ಇತರರು ತಮ್ಮ ಮನೆಗಳಿಗೆ ಮರಳಲು ಕೇಂದ್ರ ಸರ್ಕಾರ ಅವಕಾಶ ನೀಡಿದೆ. ವ್ಯಕ್ತಿ ಅಥವಾ ಕುಟುಂಬಗಳು ಖಾಸಗಿ ವಾಹನದಲ್ಲಿ ಪ್ರಯಾಣಿಸಲು ಅವಕಾಶ ಇಲ್ಲ. ರಾಜ್ಯ ಸರ್ಕಾರಗಳು ಮಾತ್ರ ವಲಸಿಗರ ಪ್ರಯಾಣಕ್ಕೆ ವ್ಯವಸ್ಥೆ ಮಾಡಬೇಕು ಎಂದು ಆದೇಶದಲ್ಲಿ ಹೇಳಲಾಗಿದೆ.

ಲಾಕ್‌ಡೌನ್ ಘೋಷಿಸಿದಾಗಲೇ ಜನ ಸಂಚಾರಕ್ಕೆ ನಿಷೇಧ ಹೇರಲಾಗಿತ್ತು. ಆದರೆ, ಸಾವಿರಾರು ಜನರು ನಡೆದೇ ತಮ್ಮ ಊರುಗಳಿಗೆ ಮರಳಿದ್ದರು. ಮಾರ್ಗ ಮಧ್ಯದಲ್ಲಿ ಹಲವರು ಮೃತಪಟ್ಟಿದ್ದರು. ಇದು ಗಂಭೀರ ಬಿಕ್ಕಟ್ಟಿಗೆ ಕಾರಣವಾಗಿತ್ತು.

**ಸಂಚಾರ ಪ್ರಕ್ರಿಯೆಗಳು:–**

- ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ನೋಡಲ್ ಅಧಿಕಾರಿ/ಸಂಸ್ಥೆಗಳನ್ನು ನೇಮಿಸಬೇಕು. ರಾಜ್ಯದಲ್ಲಿ ಸಿಲುಕಿಕೊಂಡಿರುವ ವ್ಯಕ್ತಿಗಳನ್ನು ಈ ನೋಡಲ್ ಸಂಸ್ಥೆಗಳು ನೋಂದಣಿ ಮಾಡಿಕೊಳ್ಳಬೇಕು.

- ಸಿಲುಕಿಕೊಂಡಿರುವವರನ್ನು ಕಳುಹಿಸಲು ಮತ್ತು ಬರಮಾಡಿಕೊಳ್ಳಲು ರಾಜ್ಯ ಸರ್ಕಾರಗಳು ಮಾನದಂಡಗಳನ್ನು ರೂಪಿಸಬೇಕು.
- ವ್ಯಕ್ತಿಗಳು ಬೇರೊಂದು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಹೋಗಬೇಕಿದ್ದರೆ ಕಳುಹಿಸುವ ಮತ್ತು ಬರಮಾಡಿಕೊಳ್ಳುವ ರಾಜ್ಯಗಳು ಪರಸ್ಪರ ಮಾತುಕತೆ ನಡೆಸಿ, ರಸ್ತೆ ಮೂಲಕ ಜನರನ್ನು ಕಳುಹಿಸುವ ಬಗ್ಗೆ ಒಮ್ಮತಕ್ಕೆ ಬರಬೇಕು.
- ಈ ಜನರ ಪ್ರಯಾಣಕ್ಕೆ ಬಸ್‌ಗಳನ್ನು ಬಳಸಬಹುದು. ಆದರೆ, ಅಂತರ ಕಾಯ್ದುಕೊಳ್ಳುವಿಕೆ ನಿಯಮ ಪಾಲನೆ ಆಗಬೇಕು. ಬಸ್‌ಗಳನ್ನು ಸೋಂಕು ನಿರೋಧಕ ಸಿಂಪಡಿಸಿ, ಸೋಂಕು ಮುಕ್ತಗೊಳಿಸಬೇಕು.
- ಊರಿಗೆ ಮರಳುವ ವ್ಯಕ್ತಿಗಳನ್ನು ತಪಾಸಣೆಗೆ ಒಳಪಡಿಸಬೇಕು. ಸೋಂಕಿನ ಲಕ್ಷಣ ಇಲ್ಲದವರಿಗೆ ಮಾತ್ರ ಪ್ರಯಾಣಿಸಲು ಅನುಮತಿ ಇದೆ.
- ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಪ್ರಯಾಣಿಸುವಾಗ ಬೇರೆ ರಾಜ್ಯಗಳನ್ನು ಹಾದು ಹೋಗಬೇಕಿದ್ದರೆ, ಆ ರಾಜ್ಯಗಳು ಪ್ರಯಾಣಕ್ಕೆ ಅವಕಾಶ ಮಾಡಿಕೊಡಬೇಕು.
- ತವರು ರಾಜ್ಯ ತಲುಪಿದ ಜನರನ್ನು ಸ್ಥಳೀಯ ಆರೋಗ್ಯ ಇಲಾಖೆಯು ತಪಾಸಣೆಗೆ ಒಳಪಡಿಸಬೇಕು. ಸಾಂಸ್ಥಿಕ ಕ್ವಾರಂಟೈನ್ ಅಗತ್ಯ ಇರುವವರನ್ನು ಬಿಟ್ಟು ಇತರರನ್ನು ಮನೆಯಲ್ಲಿಯೇ ಪ್ರತ್ಯೇಕವಾಸದಲ್ಲಿ ಇರಿಸಬೇಕು.

ಆಧಾರ:ಪ್ರಜಾವಾಣಿ, ದಿನಾಂಕ:25.04.2020

## 24. ಅಧಿವೇಶನ ಪರಿಸ್ಥಿತಿ ಆಧರಿಸಿ ನಿರ್ಧಾರ

ಪರಿಸ್ಥಿತಿ ಆಧಾರದ ಮೇಲೆ ಸಂಸತ್ತಿನ ಮುಂದಿನ ಅಧಿವೇಶನದ ಅವಧಿ ನಿರ್ಧಾರವಾಗಲಿದೆ ಎಂದು ರಾಜ್ಯಸಭಾ ಸಭಾಪತಿ ಎಂ. ವೆಂಕಯ್ಯ ನಾಯ್ಡು ಹೇಳಿದ್ದಾರೆ.

ಕೊರೊನಾ ಸೋಂಕು ಹರಡುವುದನ್ನು ತಡೆಯಲು ದೇಶದಾದ್ಯಂತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹಿಡುಗಿನ ಸಂದರ್ಭದಲ್ಲಿಯೂ ರಾಜ್ಯಸಭೆ ಸದಸ್ಯರೊಂದಿಗೆ ಸಂವಹನ ನಡೆಸುವ ಸಲುವಾಗಿ ನಾಯ್ಡು ಅವರು ಮಿಷನ್ ಕನೆಕ್ಟ್ ನಡೆಸುತ್ತಿದ್ದು, ರಾಜ್ಯಸಭೆಯ 245 ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಈ ಹೇಳಿಕೆ ನೀಡಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:30.04.2020

## 25. ಆರೋಗ್ಯ ಸೇತು ಕಡ್ಡಾಯ

ದೇಶದ ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳ ಸಿಬ್ಬಂದಿಗೆ ಆರೋಗ್ಯ ಸೇತು ಆ್ಯಪ್ ಬಳಕೆಯನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ. ದೇಶದಲ್ಲಿರುವ ಪ್ರತಿ ಸಂಸ್ಥೆಗಳು ತಮ್ಮ ಸಿಬ್ಬಂದಿಗೆ ಆರೋಗ್ಯ ಸೇತು ಆ್ಯಪ್ ಬಳಸುವಂತೆ ಸೂಚಿಸಬೇಕು. ಮನೆಯಿಂದಲೇ ಕೆಲಸ ಮಾಡುತ್ತಿರುವವರಿಗೆ ಆ್ಯಪ್ ಕಡ್ಡಾಯವಿಲ್ಲ ಆದರೆ, ಕಂಟೈನ್ಮೆಂಟ್ ಜೋನ್‌ನಲ್ಲಿ ಲಾಕ್‌ಡೌನ್‌ನಲ್ಲಿರುವ ಪ್ರತಿಯೊಬ್ಬರೂ ಈ ಆ್ಯಪ್ ಬಳಸಬೇಕು. ಸಾರ್ವಜನಿಕರು ಆ್ಯಪ್ ಬಳಕೆ ಮಾಡುವ ಜವಾಬ್ದಾರಿಯನ್ನು ಆಯಾ ಪ್ರದೇಶದ ಅಧಿಕಾರಿಗಳು ವಹಿಸಿಕೊಳ್ಳಬೇಕು. ದೇಶದ 30 ಕೋಟಿ ಜನರು ಈ ಆ್ಯಪ್ ಬಳಸುವಂತೆ ಮಾಡುವುದು ಕೇಂದ್ರ ಸರ್ಕಾರದ ಗುರಿ. ಈ ಆ್ಯಪ್‌ನಿಂದ ಯಾವುದೇ ರೀತಿಯ ಮಾಹಿತಿ ಸೋರಿಕೆಯಾಗುವುದಿಲ್ಲ. ಸೋಂಕಿತರ ಸಂಪರ್ಕಕ್ಕೆ ಬಂದವರನ್ನು ಪತ್ತೆ ಹಚ್ಚುವ ವೈಜ್ಞಾನಿಕ ವಿಧಾನ ಇದಾಗಿದೆ ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:03.05.2020

## 26. ವಂದೇ ಭಾರತ್ ಏರ್ ಲಿಫ್ಟ್‌ಗೆ ಚಾಲನೆ

ಜಗತ್ತಿನ ಅತಿದೊಡ್ಡ ಏರ್‌ಲಿಫ್ಟ್ 'ವಂದೇ ಭಾರತ್' ಗೆ ಚಾಲನೆ ದೊರಕಿದ್ದು, ಅಬುಧಾಬಿಯಿಂದ ಹೊರಟ ಮೊದಲ ವಿಮಾನದಲ್ಲಿ 177 ಭಾರತೀಯ ಪ್ರಜೆಗಳು ಕೊಚ್ಚಿಯನ್ನು ತಡರಾತ್ರಿ ತಲುಪಿದ್ದಾರೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್ ಐಎಕ್ಸ್ 452 ಸಂಖ್ಯೆ ವಿಮಾನವು 6.45ಕ್ಕೆ ಅಬುಧಾಬಿಯಿಂದ ಹೊರಟಿದ್ದು, ಕೊಚ್ಚಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು 10.17ಕ್ಕೆ ತಲುಪಿದೆ. 177 ಪ್ರಯಾಣಿಕರಲ್ಲಿ ಬಹುತೇಕರು ಗರ್ಭಿಣಿಯರು, ವೃದ್ಧರು ಇದ್ದು, ಭಾರತ ಸರ್ಕಾರದ ಉಪಕಾರವನ್ನು ಹರ್ಷದಿಂದ ಕೊಂಡಾಡಿದ್ದಾರೆ. ಕಾಸರಗೋಡು ಮತ್ತು ಕಣ್ಣೂರಿನ ತಲಾ 6 ಪ್ರಯಾಣಿಕರು ಈ ವಿಮಾನದಿಂದ ತಾಯ್ನಾಡಿಗೆ ಮರಳಿದ್ದಾರೆ.

ದುಬೈ ವಿಮಾನ ನಿಲ್ದಾಣದಿಂದ  ಹೊರಟಿರುವ ಮತ್ತೊಂದು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನ ಕಲ್ಲಿಕೋಟೆ ವಿಮಾನ ನಿಲ್ದಾಣವನ್ನು ತಲುಪಿದೆ. ವಿಮಾನ ನಿಲ್ದಾಣವನ್ನು ತಲುಪುತ್ತಿದ್ದಂತೆ ಎಲ್ಲರಿಗೂ ಮತ್ತೊಮ್ಮೆ ಆರೋಗ್ಯ ತಪಾಸಣೆ ನಡೆಸಿ ಕ್ವಾರಂಟೈನ್‌ಗೆ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಇದಕ್ಕಾಗಿ 500 ಕೊಠಡಿಗಳು ಸಜ್ಜಾಗಿವೆ ಎಂದು ಎರ್ನಾಕುಲಂ ಜಿಲ್ಲಾಧಿಕಾರಿ ಎಸ್. ಸುಹಾಸ್ ಹೇಳಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:08.05.2020

## 27. ಸಿಎಂಗಳ ಜೊತೆ ಪಿಎಂ ಐದನೇ ಸುತ್ತಿನ ಸಭೆ ಲಾಕ್‌ಡೌನ್ ಕುರಿತಂತೆ ನಿರ್ಧಾರ

ಮೂರನೇ ಹಂತದ ಲಾಕ್‌ಡೌನ್ ಕೊನೆಯ ವಾರಕ್ಕೆ ಕಾಲಿಟ್ಟಿರುತ್ತಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆಗೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಲಿದ್ದಾರೆ. ಮಾರ್ಚ್ 24ರಿಂದ ಶುರುವಾದ ಮೊದಲ ಹಂತದ ಲಾಕ್‌ಡೌನ್‌ನಿಂದ ಇಲ್ಲಿಯವರೆಗೆ ಸಿಎಂಗಳ ಜೊತೆಯಲ್ಲಿ ಪ್ರಧಾನಿ ಸಮಾಲೋಚನೆ ನಡೆಸುತ್ತಿರುವುದು ಇದು ಐದನೇ ಬಾರಿ.

ಮೇ–17ರ ನಂತರ ಲಾಕ್‌ಡೌನ್ ಸಂಪೂರ್ಣವಾಗಿ ತೆರವಾದರೆ, ಕೈಗೊಳ್ಳಬೇಕಾದ ನಿರ್ಧಾರಗಳು ಹಾಗೂ ಅಳವಡಿಸಿಕೊಳ್ಳಬೇಕಾದ ಮಾರ್ಗಸೂಚಿಗಳು ಅಥವಾ ಲಾಕ್‌ಡೌನ್ ಮುಂದುವರಿದರೆ ದೇಶದ ಆರ್ಥಿಕತೆಗೆ ಪೂರಕವಾಗಿ ಸಡಿಲಿಸಬೇಕಿರುವ ನಿರ್ಬಂಧಗಳು, ಕಂಟೈನ್‌ಮೆಂಟ್ ವಲಯಗಳ ಸಮರ್ಥ ನಿರ್ವಹಣೆ ಹಾಗೂ ಕೆಂಪು ವಲಯಗಳಲ್ಲಿ ಕೈಗೊಳ್ಳಬೇಕಾದ ನಿರ್ಧಾರಗಳು, ವಲಸೆ ಕಾರ್ಮಿಕರ ಸುರಕ್ಷಿತ ಪ್ರಯಾಣ, ವಿದೇಶಗಳಿಂದ ಕರೆತರಲಾಗುತ್ತಿರುವ ಭಾರತೀಯರ ವಿಚಾರಗಳು ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿವೆ ಎಂದು ನಿರೀಕ್ಷಿಸಲಾಗಿದೆ.

ಕೇಂದ್ರ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ, ಎಲ್ಲಾ ರಾಜ್ಯ ಸರ್ಕಾರಗಳ ಪ್ರಧಾನ ಕಾರ್ಯದರ್ಶಿಗಳೊಂದಿಗೆ ಒಂದು ಸುತ್ತಿನ ಸಭೆ ನಡೆಸಿ ಆಯಾ ರಾಜ್ಯಗಳಲ್ಲಿನ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿದ್ದಾರೆ. ಇದಲ್ಲದೆ ರಾಜ್ಯ ಸರ್ಕಾರಗಳ ಹಿರಿಯ ಅಧಿಕಾರಿಗಳ ಜೊತೆಗೆ 2 ಬಾರಿ ಸಭೆ ನಡೆಸಲಾಗಿದ್ದು, ಆ ಎಲ್ಲಾ ಸಭೆಗಳಲ್ಲಿ ಎಲ್ಲಾ ರಾಜ್ಯ ಸರ್ಕಾರಗಳು ಆರ್ಥಿಕ ಚಟುವಟಿಕೆಗಳನ್ನು ಪುನರಾರಂಭಿಸುವ ಬಗ್ಗೆ ಒಲವು ತೋರಿದ್ದಾರೆ.

ಇತ್ತೀಚೆಗೆ ಕಿತ್ತಳೆ ಮತ್ತು ಹಸಿರು ವಲಯಗಳಲ್ಲಿ ಕೈಗಾರಿಕೆಗಳು, ವ್ಯಾಪಾರ–ವಹಿವಾಟು ಚಾಲನೆಗೆ ಕೆಲವು ನಿಬಂಧನೆಗಳ ಸಹಿತ ಅನುವು ಮಾಡಿಕೊಡಲಾಗಿತ್ತು. ಗ್ರಾಮೀಣ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಇನ್ನಿತರ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ವಿವಿಧ ರಾಜ್ಯ ಸರ್ಕಾರಗಳು ತಮ್ಮಲ್ಲಿನ ಕೆಂಪು ವಲಯಗಳನ್ನು ಕೇಂದ್ರ ಸರ್ಕಾರವೇ ನಿಖರವಾಗಿ ಗುರುತಿಸಬೇಕು, ಆ ವಲಯಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ಆರ್ಥಿಕ ಚಟುವಟಿಕೆಗಳನ್ನು ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ನಡೆಸುವಂಥ ಮಾರ್ಗಸೂಚಿಗಳನ್ನು ನೀಡಬೇಕು ಎಂಬ ನಿರ್ಧಾರಕ್ಕೆ ಬಂದಿದೆ.

ಆಧಾರ:ಉದಯವಾಣಿ, ದಿನಾಂಕ:11.05.2020

## 28. ಹೈನುಗಾರಿಕೆಗೆ ಪ್ರಧಾನಿ ನೆರವು

## ಕೇಂದ್ರ ಸರ್ಕಾರದಿಂದ ರೂ.15,000 ಕೋಟಿ ಘೋಷಣೆ

ಹೈನೋದ್ಯಮ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ರೂ.15,000 ಕೋಟಿ ಪ್ಯಾಕೇಜ್ ಘೋಷಿಸಿದ್ದು, ಹಾಲು ಉತ್ಪಾದಕರ ಸಹಕಾರ ಸಂಘ, ಹಾಲು ಒಕ್ಕೂಟಗಳ ಡೇರಿಗಳು ಹಾಗೂ ಮಹಾಮಂಡಲಗಳ ಡೇರಿಗಳು, ಘಟಕಗಳು ಹಾಗೂ ವಿವಿಧ ಮೂಲ ಸೌಲಭ್ಯಗಳ ಅಭಿವೃದ್ಧಿಗೆ ಈ ಅನುದಾನ ನೆರವಾಗಲಿದೆ.

ಕೊರೊನಾದಿಂದಾಗಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆ ಕುಸಿದಿದ್ದು, ಹಾಲಿನ ಪುಡಿ, ಬೆಣ್ಣೆ ತುಪ್ಪ ಸೇರಿ ಹಲವು ಉತ್ಪನ್ನಗಳು ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನಾಗಿದ್ದು, ಹಾಲು ಉತ್ಪಾದಕರಿಗೆ ಬಟವಾಡೆ ಸಮಸ್ಯೆಯೂ ಎದುರಾಗಬಹುದು. ಹಾಲು ಸಹಕಾರಿ ಮಹಾಮಂಡಳಿ ಮತ್ತು ಒಕ್ಕೂಟಗಳೊಂದಿಗೆ ಸಮಾಲೋಚಿಸಿ, ಬ್ಯಾಂಕ್‌ಗಳ ಮೂಲಕ ದುಡಿಯುವ ಬಂಡವಾಳವನ್ನು ಸಾಲವನ್ನಾಗಿ ಪಡೆಯಲು ಹಾಗೂ ಪಡೆಯುವ ಸಾಲದ ಮೇಲಿನ ಬಡ್ಡಿಯಲ್ಲಿ ಶೇ.2 ರಿಂದ 4ರಷ್ಟು ಕೇಂದ್ರ ಸರ್ಕಾರದಿಂದ ದುಡಿಯುವ ಬಂಡವಾಳಕ್ಕಾಗಿ ಒಟ್ಟು ರೂ.50,000 ಸಾವಿರ ಕೋಟಿ ಕಾಯ್ದಿರಿಸಿ ಕೇಂದ್ರ ಸರ್ಕಾರ ಯೋಜನೆ ಘೋಷಿಸಿದೆ.

**ಯೋಜನೆಯ ಲಾಭ:–**

- ಹಾಲು ಉತ್ಪಾದಕರಿಗೆ ಸತತ ಮಾರುಕಟ್ಟೆ ಒದಗಿಸಲು ಅನುಕೂಲ.
- ಹಾಲು ಉತ್ಪಾದಕ ಸಹಕಾರಿ ಸಂಸ್ಥೆಗಳು ಹೈನುಗಾರ ರೈತರಿಗೆ ಉತ್ಪಾದಿಸುವ ಹಾಲಿಗೆ ಸಕಾಲದಲ್ಲಿ ಬಟವಾಡೆ ಮಾಡಲು ಉಪಯುಕ್ತ.
- ಸುಗ್ಗಿ ಕಾಲದಲ್ಲೂ ಹಾಲು ಉತ್ಪಾದಕರಿಗೆ ಉತ್ತಮ ಬೆಲೆ ದೊರಕಿಸಿ ಕೊಡುವುದರ ಜೊತೆಗೆ ಡೇರಿ ಉದ್ಯಮದ ಕಾರ್ಯಚಟುವಟಿಕೆ ಅಡಚಣೆಯಿಲ್ಲದೆ ನಿರ್ವಹಣೆ ಮಾಡಲು ಸಹಕಾರಿ.
- ಸಹಕಾರಿ ಸಂಸ್ಥೆಗಳು ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಕೈಗೆಟುಕುವ ಬೆಲೆಯಲ್ಲಿ ಗ್ರಾಹಕರಿಗೆ ಸರಬರಾಜು ಮಾಡಲು ಪ್ರಯೋಜನ.
- ದೇಶದ ಮಾರುಕಟ್ಟೆಯಲ್ಲಿ ಡೇರಿ ಉತ್ಪನ್ನಗಳ ಮಾರಾಟ ಬೆಲೆಯಲ್ಲಿ ಸುಸ್ಥಿರತೆ ಕಾಪಾಡಿಕೊಳ್ಳಲು ಸಹಕಾರಿ.
- ಸುಗ್ಗಿ ಕಾಲದ ಹೆಚ್ಚುವರಿ ಹಾಲನ್ನು ಉಪ ಉತ್ಪನ್ನಗಳಾಗಿ ಪರಿವರ್ತಿಸಲು ಅನುಕೂಲ.

ಆಧಾರ:ವಿಜಯವಾಣಿ, ದಿನಾಂಕ:12.05.2020

## 29. ರೈತರು, ವಲಸಿಗರು, ರಸ್ತೆ ಬದಿ ಕಾರ್ಮಿಕರಿಗೆ ಕೇಂದ್ರದ ಬಂಪರ್ ನೆರವಿನ ಘೋಷಣೆ

ಲಾಕ್‌ಡೌನ್ ಸಂಕಷ್ಟಕ್ಕೆ ಸಿಲುಕಿರುವ ಎಲ್ಲ ವರ್ಗದವರಿಗಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿರುವ ರೂ.20 ಲಕ್ಷ ಕೋಟಿ ಪ್ಯಾಕೇಜ್‌ನ ಎರಡನೇ ಚರಣದಲ್ಲಿ ರೈಲು, ವಲಸೆ ಕಾರ್ಮಿಕರು, ರಸ್ತೆ ಬದಿ ವ್ಯಾಪಾರಿಗಳು, ಮುದ್ರಾ ಫಲಾನುಭವಿಗಳು, ಬುಡಕಟ್ಟು ಜನರ ಕಲ್ಯಾಣ ಸೇರಿ ಒಟ್ಟು 9 ನೆರವಿನ ಘೋಷಣೆ ಹೊರಬಿದ್ದಿವೆ. ಕಾರ್ಮಿಕರ ಸಂಹಿತೆಯ ಮಸೂದೆಯನ್ನು ಒಳಗೊಂಡಿರುವ ಈ ಉಪಕ್ರಮಗಳನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದರು.

ವಲಸೆ ಕಾರ್ಮಿಕರಿಗೆ ನರೇಗಾ ಯೋಜನೆಯ ಉದ್ಯೋಗಾವಕಾಶ, ಪಡಿತರ ವಿತರಣೆ ವಿಸ್ತರಣೆ, ರೈತರ ಕೈಯಲ್ಲಿ ಹಣ ಇರುವಂತೆ ಮಾಡಲು ಬೆಳೆ ಸಾಲದ ಕಂತು ಪಾವತಿಗೆ 3 ತಿಂಗಳ ವಿನಾಯಿತಿ, 25 ಲಕ್ಷ ಹೊಸ ಕಿಸಾನ್ ಕ್ರೆಡಿಟ್ ಕಾರ್ಡ್ ವಿತರಣೆ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ.30 ಸಾವಿರ ಕೋಟಿಯ ಕ್ರೆಡಿಟ್, ಮುದ್ರಾ ಯೋಜನೆ ಫಲಾನುಭವಿಗಳಿಗೆ ಬಡ್ಡಿ ಸಬ್ಸಿಡಿ, ರಸ್ತೆ ಬದಿ ವ್ಯಾಪಾರಿಗಳಿಗೂ ಬ್ಯಾಂಕ್‌ಗಳಿಂದ ಸಾಲ ಹಾಗೂ ಬುಡಕಟ್ಟು ಜನರಿಗೆ ಅವರು ಇರುವಲ್ಲಿಯೇ ಉದ್ಯೋಗಾವಕಾಶ ಕಲ್ಪಿಸುವ ಯೋಜನೆಗಳ ವಿವರವನ್ನು ಸಚಿವೆ ನೀಡಿದರು. 8 ಕೋಟಿ ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ಇಲ್ಲದಿದ್ದರೂ ರೂ.3,500 ಕೋಟಿ ವೆಚ್ಚದಲ್ಲಿ ಉಚಿತವಾಗಿ ಪಡಿತರ ವಿತರಣೆ, ವಲಸೆ ಕಾರ್ಮಿಕರಿಗೆ ಮನೆ ಬಾಡಿಗೆ ದರ ನಿಗದಿ ಮೊದಲಾದ ಕ್ರಮಗಳು

ಅವರಿಗೆ ಹೆಚ್ಚಿನ ಭದ್ರತೆಯನ್ನು ನೀಡಲಿದೆ ಎಂದಿದ್ದಾರೆ. ಮುದ್ರಾ ಶಿಶು ಸಾಲ ಯೋಜನೆಗೆ ಬಡ್ಡಿ ರಿಯಾಯಿತಿ, ಬೀದಿ ಬದಿ ವ್ಯಾಪಾರಿಗಳಿಗೆ ರೂ.10 ಸಾವಿರದವರೆಗೆ ವಿಶೇಷ ಸಾಲ ಸೌಲಭ್ಯ ಒದಗಿಸಲು ರೂ.5 ಸಾವಿರ ಕೋಟಿ ಅನುದಾನ ನಿಗದಿಪಡಿಸಿರುವುದು ಬೀದಿ ಬದಿ ವ್ಯಾಪಾರಿಗಳು ಮತ್ತು ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಧ್ಯಮ, ಕೆಳ ಮಧ್ಯಮ ವರ್ಗದವರಿಗೆ ಗೃಹ ಸಾಲ ಸಬ್ಸಿಡಿ ಯೋಜನೆಗೆ ರೂ.70 ಸಾವಿರ ಕೋಟಿ ನೆರವು ಈ ವರ್ಗದ ಜನರ ಕನಸು ಸಾಕಾರಗೊಳಿಸಲು ನೆರವಾಗಲಿದೆ. ಸಣ್ಣ ಮತ್ತು ಮಧ್ಯಮ ರೈತರಿಗೆ ಬೆಳೆ ಕೊಯ್ಲು ಮತ್ತು ಕೊಯ್ಲೋತ್ತರ ನಿರ್ವಹಣೆಗೆ ರೈತ ನಿಧಿಗೆ ಹೆಚ್ಚುವರಿ ರೂ.30 ಸಾವಿರ ಕೋಟಿ ಸೇರ್ಪಡೆ ಕೂಡ ರೈತರ ಹಿತ ಕಾಪಾಡಲಿದೆ. ಸಣ್ಣ ರೈತರು, ಪಶುಪಾಲಕರು ಮತ್ತು ಮೀನುಗಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್ ಅಡಿ ರೂ. 2 ಲಕ್ಷ ಕೋಟಿ ಸಾಲ ಸೌಲಭ್ಯ ನೀಡುವ ಕ್ರಮಗಳು ಸಂಕಷ್ಟಕ್ಕೊಳಗಾದ ಈ ವಲಯಗಳ ಜನರಿಗೆ ಉಸಿರು ನೀಡಿದೆ ಎಂದು ಪ್ರಶಂಸಿಸಿದ್ದಾರೆ.

**ಕೊಡುಗೆಗಳು:–**

ಸಣ್ಣ ಕೃಷಿಕರು: 1. ನಬಾರ್ಡ್ ಮೂಲಕ ರೂ.30 ಸಾವಿರ ಕೋಟಿ ನೆರವು

2. ಬೆಳೆ ಸಾಲದ ಕಂತು ಪಾವತಿಗೆ 3 ತಿಂಗಳು ವಿನಾಯಿತಿ

ವಲಸೆ ಕಾರ್ಮಿಕರು:– 1. ಎರಡು ತಿಂಗಳು ಉಚಿತ ಪಡಿತರ ವಿತರಣೆ

2. ಕೈಗೆಟುಕುವ ದರದಲ್ಲಿ ಮನೆ ಬಾಡಿಗೆ ಸಮುಚ್ಚಯ ನಿರ್ಮಾಣ

ಆಧಾರ:ವಿಜಯವಾಣಿ, ದಿನಾಂಕ:15.05.2020

## 30. ಕೃಷಿಕರಿಗೆ ಬಂಪರ್

ಕೃಷಿ ಉತ್ಪನ್ನಗಳು ಮತ್ತು ಕೊಯ್ಲೋತ್ತರ ಸಂಗ್ರಹಾಗಾರಗಳ (ಫಾರಂಗೇಟ್) ಮೂಲ ಸೌಕರ್ಯ ವೃದ್ಧಿಗಾಗಿ ನಬಾರ್ಡ್ ಮೂಲಕ ರೂ.1 ಲಕ್ಷ ಕೋಟಿ ನೆರವನ್ನು ಶೀಘ್ರ ಕಲ್ಪಿಸಲಾಗುವುದೆಂದು ವಿತ್ತ ಸಚಿವೆ ತಿಳಿಸಿದರು.

**ಆಹಾರ ಸಂಸ್ಕರಣೆಗೆ ನೆರವು:–** ಕೃಷಿ ಉತ್ಪನ್ನಗಳನ್ನು ಆಧರಿಸಿದ ಕಿರು ಆಹಾರ ಸಂಸ್ಕರಣಾ ಘಟಕಗಳನ್ನು ಕ್ಲಸ್ಟರ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲು ರೂ.10 ಸಾವಿರ ಕೋಟಿಯ ನೆರವು. ಇದು ಪ್ರಧಾನಿಯವರು ಹೇಳಿದ ಲೋಕಲ್ ವೋಕಲ್‌ಗೆ ಪೂರಕವಾದ ಕಾರ್ಯಕ್ರಮ. ಇದರಿಂದ ಸ್ಥಳೀಯವಾಗಿ ತಯಾರಾದ ಉತ್ಪನ್ನವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಅನುಕೂಲವಾಗುತ್ತದೆ.

**ಕೃಷಿ ಉತ್ಪನ್ನ ಸಾಗಣೆ ಸಾಮರ್ಥ್ಯ ವೃದ್ಧಿ:–** ಬಜೆಟ್‌ನಲ್ಲಿ ಈಗಾಗಲೇ ಘೋಷಿಸಿರುವ ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಗೆ ರೂ.20 ಸಾವಿರ ಕೋಟಿ ನೀಡಲಾಗಿದ್ದು, ಸಮಗ್ರ ಸುಸ್ಥಿರ ಸಮುದ್ರ ಮತ್ತು ಒಳನಾಡು ಮೀನುಗಾರಿಕೆಗೆ ರೂ.11 ಸಾವಿರ ಕೋಟಿ ಮತ್ತು ಮೀನುಗಾರಿಕೆಯ ಮೂಲ ಸೌಕರ್ಯ ಮಾರುಕಟ್ಟೆ ಮೂಲ ಸೌಕರ್ಯ ವೃದ್ದಿಗೆ ರೂ.9 ಸಾವಿರ ಕೋಟಿ ವಿನಿಯೋಗ ಆಗಲಿದೆ. ಮತ್ಸ್ಯ ಸಂಪದ ಯೋಜನೆಗೆ ಶೀಘ್ರ ಚಾಲನೆ ದೊರೆಯಲಿದ್ದು, ಇದರಿಂದ ಹೆಚ್ಚುವರಿಯಾಗಿ 17 ಲಕ್ಷ ಟನ್ ಮೀನು ಉತ್ಪಾದನೆ ಹೆಚ್ಚಳವಾಗಲಿದೆ. ಮೀನುಗಾರಿಕೆ ಕ್ಷೇತ್ರದಲ್ಲಿ ಭಾರತದ ರಫ್ತು ಪ್ರಮಾಣ ದ್ವಿಗುಣಗೊಂಡು ರೂ.1 ಕೋಟಿಯಷ್ಟು ಅಧಿಕವಾಗಲಿದೆ. ಅನುದಾನವನ್ನು ಪ್ರಯೋಗಾಲಯ, ಮೀನುಗಾರರ ಬೋಟ್ ಖರೀದಿ, ಮೀನುಗಾರಿಕೆಯ ಬಂದರು ನಿರ್ಮಾಣ, ಬಲೆ ಹೆಣೆಯುವಿಕೆ, ಕಡಲಸಸ್ಯದ ಕೃಷಿ, ಆಲಂಕಾರಿಕ ಮೀನುಗಳ ಸಾಗಣೆ, ಬೋಟ್ ಮತ್ತು ಮೀನುಗಾರರಿಗೆ ವಿಮೆ, ಮೀನುಗಾರಿಕೆ ರಜಾ ಅವಧಿಯ ನೀಡುವ ಸಹಾಯಧನಕ್ಕೆ ಬಳಸಿಕೊಳ್ಳಬಹುದು.

**ಡೇರಿ ಮೂಲ ಸೌಕರ್ಯಕ್ಕೆ ನೆರವು:–**ಡೇರಿ ಉದ್ಯಮದ ಮೂಲ ಸೌಕರ್ಯ ಹೆಚ್ಚಳಕ್ಕೆ ರೂ.15 ಸಾವಿರ ಕೋಟಿಯನ್ನು ತೆಗೆದಿರಿಸಲಾಗಿದೆ. ಘಟಕ ಸ್ಥಾಪನೆ ಬಳಕೆ ಮಾಡಬಹುದು. ಖಾಸಗಿಯವರೂ ಹೂಡಿಕೆ ಮಾಡಿದರೆ ಪ್ರೋತ್ಸಾಹ ನೀಡಲಾಗುವುದು.

**ಔಷಧೀಯ ಸಸ್ಯ ಬೆಳೆಯಲು ಸಹಾಯಕ:–** ದೇಶದಲ್ಲಿ ಔಷಧೀಯ ಸಸ್ಯವನ್ನು 2.25 ಲಕ್ಷ ಹೆಕ್ಟೇರ್‌ನಲ್ಲಿ ಹಾಲಿ ಬೆಳೆಯಲಾಗುತ್ತಿದೆ. ಮುಂದಿನ ಎರಡು ವರ್ಷದಲ್ಲಿ ಇದನ್ನು 10 ಲಕ್ಷ ಹೆಕ್ಟೇರ್‌ಗೆ ವಿಸ್ತರಿಸುವ

ಉದ್ದೇಶ ಇದೆ. ಇದಕ್ಕಾಗಿ ರೂ.4 ಸಾವಿರ ಕೋಟಿ ನೀಡಲಾಗಿದೆ. ಗಂಗಾ ನದಿ ದಡದಲ್ಲಿ 800 ಹೆಕ್ಟೇರ್ ಪ್ರದೇಶವನ್ನು ಔಷಧೀಯ ವನ ಕಾರಿಡಾರ್ ಎಂದು ಗುರುತಿಸಲಾಗಿದೆ.

**ಜೇನು ಸಾಕಣೆಗೆ ಪ್ರೋತ್ಸಾಹ:–** ಜೇನುನೊಣ ಸಾಕಣೆ ಮಾಡುವವರಿಗೆ ರೂ.500 ಕೋಟಿ ನೆರವನ್ನು ಘೋಷಿಸಲಾಗಿದೆ. ಸಮಗ್ರ ಜೇನುನೊಣ ಅಭಿವೃದ್ಧಿ ಕೇಂದ್ರ ಸ್ಥಾಪನೆ. ಜೇನು ಸಂಗ್ರಹ, ಮಾರುಕಟ್ಟೆ, ದಾಸ್ತಾನು ಕೇಂದ್ರ ಮೌಲ್ಯವರ್ಧನೆ, ಜೇನು ತಳಿ ಅಭಿವೃದ್ಧಿ, ಮೇಣ ರಫ್ತಿಗೂ ಅನುಕೂಲ ಆಗಲಿದೆ.

**ಆಪರೇಷನ್ ಗ್ರೀನ್:–**ಅಲ್ಪ ಸಮಯದಲ್ಲೇ ಹಾಳಾಗುವಂತಹ ತರಕಾರಿ ಮತ್ತು ಹಣ್ಣುಗಳ ಸಾಗಣಿಕೆಗೆ ರೂಪಿಸಲಾದ ಆಪರೇಷನ್ ಗ್ರೀನ್ ಯೋಜನೆಗೆ ಟೊಮ್ಯಾಟೊ, ಈರುಳ್ಳಿ, ಆಲೂಗಡ್ಡೆ (ಟಾಪ್ ಆ್ಯಂಡ್ ಟೋಟಲ್) ಸೇರ್ಪಡೆ, ಸರಬರಾಜಿನ ಬಾಬ್ತಿನಲ್ಲಿ ಸಾಗಾಣಿಕೆಗೆ ಶೇ.50ರಷ್ಟು ಸಬ್ಸಿಡಿ ಮತ್ತು ಶೈತ್ಯಾಗಾರದಲ್ಲಿ ದಾಸ್ತಾನಿಗೆ ಶೇ.50 ರಷ್ಟು ರಿಯಾಯಿತಿಯನ್ನು ಘೋಷಿಸಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:16.05.2020

## 31. ಆರ್ಥಿಕ ಪ್ಯಾಕೇಜ್ 5.0

ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಐದನೇ ಹಾಗೂ ಕೊನೇ ಹಂತದ ಆರ್ಥಿಕ ಪ್ಯಾಕೇಜನ್ನು ಘೋಷಣೆ ಮಾಡಿದ್ದಾರೆ. ರಾಜ್ಯಗಳಿಗೆ ಆರ್ಥಿಕ ಹರಿವು ಹೆಚ್ಚಳ, ಕಾರ್ಮಿಕರಿಗೆ ಉದ್ಯೋಗ, ಆರೋಗ್ಯ ಕ್ಷೇತ್ರ ಸಬಲೀಕರಣ, ಶಿಕ್ಷಣ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನ ಬಳಕೆ ಇನ್ನಿತರ ಅಂಶಗಳು ಘೋಷಣೆಯಲ್ಲಿವೆ. ಅವುಗಳ ಕುರಿತ ಸಂಕ್ಷಿಪ್ತ ವಿವರ ಇಲ್ಲಿದೆ.

**ಆರೋಗ್ಯ ಕ್ಷೇತ್ರಕ್ಕೆ ಟಾನಿಕ್:–**ದೇಶದ ಜನರ ಆರೋಗ್ಯ ರಕ್ಷಣೆಯ ನಿಟ್ಟಿನಲ್ಲಿ ಸಾರ್ವಜನಿಕ ವೆಚ್ಚವನ್ನು ಹೆಚ್ಚಿಸಲಾಗುವುದು, ತಳಮಟ್ಟದ ಆರೋಗ್ಯ ಸಂಸ್ಥೆಗಳ ಮೇಲೆ ಹೆಚ್ಚಿನ ಹೂಡಿಕೆ ಮಾಡಲಾಗುತ್ತದೆ. ಭವಿಷ್ಯದಲ್ಲಿ ಯಾವುದೇ ಸಾಂಕ್ರಾಮಿಕ ರೋಗವನ್ನು ಎದುರಿಸಲು ಭಾರತವನ್ನು ಸನ್ನದ್ಧಗೊಳಿಸಲು ಅನುವಾಗುವಂತೆ ಗ್ರಾಮೀಣ ಮತ್ತು ನಗರ ಪ್ರದೇಶಗಳ ಆರೋಗ್ಯ ಕೇಂದ್ರಗಳನ್ನು ಸುಧಾರಿಸುವುದು ಹಾಗೂ ಉನ್ನತ ಪ್ರಯೋಗಾಲಯ ಜಾಲ ಮತ್ತು ನಿಗಾ ವ್ಯವಸ್ಥೆಯನ್ನು ಬಲಪಡಿಸುವುದು ಎಲ್ಲಾ ಜಿಲ್ಲೆಗಳು ಬ್ಲಾಕ್ ಘಟಕಗಳನ್ನು ರೂಪಿಸಿ ಬಲಪಡಿಸುವುದು.

**ಉದ್ಯೋಗ ಖಾತ್ರಿಗೆ ರೂ.40 ಸಾವಿರ ಕೋಟಿ:–** ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ (ಮನರೇಗಾ) ರೂ. 40 ಸಾವಿರ ಕೋಟಿ ಹೆಚ್ಚುವರಿಯಾಗಿ ಒದಗಿಸಲಾಗುತ್ತದೆ. ಇದು ಒಟ್ಟು ರೂ.300 ಕೋಟಿ ಮಾನವ ದಿನಗಳ ಸೃಷ್ಟಿಗೆ ನೆರವಾಗಲಿದೆ. ತವರಿಗೆ ಮರುಳುತ್ತಿರುವ ವಲಸೆ ಕಾರ್ಮಿಕರ ಸಹಿತ ಹೆಚ್ಚು ಜನರಿಗೆ ಮಳೆಗಾಲದಲ್ಲೂ ಉದ್ಯೋಗ ಒದಗಿಸಲು ಇದರಿಂದ ಸಾಧ್ಯವಾಗುತ್ತದೆ. ದೊಡ್ಡ ಪ್ರಮಾಣದಲ್ಲಿ ಬಾಳಿಕೆ ಬರುವ ಹಾಗೂ ಜಲ ಸಂರಕ್ಷಣೆ ಸಹಿತ ಜೀವನೋಪಾಯ ಆಸ್ತಿ ಸೃಜಿಸಲು ಇದು ನೆರವಾಗುತ್ತದೆ.

**ಸಾಲಗಳು ಹಾಗೂ ಸುಧಾರಣೆಗಳು:–** ರಾಜ್ಯಗಳಿಗೆ ಸಾಲ ಕೊಡುವಾಗ ರಾಜ್ಯ ಮಟ್ಟದ ಸುಧಾರಣೆಗಳನ್ನು ತರಬೇಕೆಂಬ ಷರತ್ತನ್ನು ವಿಧಿಸಲಾಗುತ್ತಿದೆ. ಹಣಕಾಸು ಆಯೋಗದ ಶಿಫಾರಸ್ಸು ಸುಧಾರಣೆಗಳು ಇದರಲ್ಲಿವೆ.

- ಭವಿಷ್ಯದಲ್ಲಿ ಹೆಚ್ಚು ಪ್ರಮಾಣದ ಜಿಎಸ್‌ಡಿಪಿ ಬೆಳವಣಿಗೆ, ಕಡಿಮೆ ಕೊರತೆಗಳ ಮೂಲಕ ಹೆಚ್ಚುವರಿ ಸಾಲದ ಸುಸ್ಥಿರತೆ ಖಾತರಿಪಡಿಸಬೇಕು.
- ವಲಸೆ ಕಾರ್ಮಿಕರ ಕಲ್ಯಾಣ ಸಾಧಿಸಬೇಕು, ಆಹಾರ ವಿತರಣೆಯಲ್ಲಿ ಸೋರಿಕೆಯಾಗುವುದನ್ನು ಕಡಿಮೆ ಮಾಡಬೇಕು.
- ಹೂಡಿಕೆಗಳ ಮೂಲಕ ಉದ್ಯೋಗಗಳನ್ನು ಸೃಷ್ಟಿಸಬೇಕು.
- ರೈತರ ಹಿತಗಳನ್ನು ಕಾಪಾಡಬೇಕು.
- ಇಂಧನ ಕ್ಷೇತ್ರಗಳ ಸುಸ್ಥಿರತೆ ಸಾಧಿಸಬೇಕು.
- ನಗರಾಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲ್ಯ ಸಾಧಿಸಬೇಕು.

- ಒಂದು ದೇಶ – ಒಂದು ಪಡಿತರ ಕಾರ್ಡ್, ಸುಗಮ ವ್ಯವಹಾರ, ವಿದ್ಯುತ್ ವಿತರಣೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆದಾಯ.

**ಹೊಸ ಉದ್ದಿಮೆ ನೀತಿ:–** ಜಗತ್ತು ಕಳೆದ ಕೆಲವು ದಶಕಗಳಲ್ಲಿ ಬದಲಾಗಿದ್ದು, ಅದಕ್ಕೆ ತಕ್ಕಂತೆ ಎಲ್ಲಾ ವಲಯಗಳನ್ನು ಖಾಸಗಿಗೆ ತೆರೆಯುವಂಥ ಸಮಗ್ರ ನೀತಿ ಅಗತ್ಯ. ಈ ಹಿನ್ನೆಲೆಯಲ್ಲಿ ಸರ್ಕಾರ ಒಂದು ಹೊಸ ನೀತಿಯನ್ನು ಶೀಘ್ರವೇ ಪ್ರಕಟಿಸಲಿದೆ. ಅದರ ಪ್ರಮುಖ ಅಂಶಗಳು ಯಾವುದೆಂದರೆ.

- ಸಾರ್ವಜನಿಕ ಹಿತಕ್ಕೆ ಅಗತ್ಯವಾದ ಮಹತ್ವದ ಪಿಎಸ್‌ಇಗಳನ್ನು ಪ್ರಟಿಸಲಾಗುತ್ತದೆ.
- ಮಹತ್ವದ ವಲಯಗಳಲ್ಲಿ ಕನಿಷ್ಠ ಒಂದು ಪಿಎಸ್‌ಇಯನ್ನು ಉಳಿಸಿಕೊಳ್ಳಲಾಗುತ್ತದೆ. ಆದರೆ, ಆ ವಲಯದಲ್ಲಿ ಖಾಸಗಿ ವಲಯಕ್ಕೂ ಅವಕಾಶ ನೀಡಲಾಗುತ್ತದೆ.
- ಇತರ ಕ್ಷೇತ್ರಗಳಲ್ಲಿ ಪಿಎಸ್‌ಇಗಳನ್ನು ಖಾಸಗೀಕರಿಸಲಾಗುತ್ತದೆ.
- ವ್ಯರ್ಥ ಆಡಳಿತಾತ್ಮಕ ವೆಚ್ಚಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಮಹತ್ವದ ವಲಯಗಳಲ್ಲಿ ಒಂದರಿಂದ ನಾಲ್ಕು ಉದ್ದಿಮೆಗಳನ್ನಷ್ಟೆ ಉಳಿಸಿಕೊಳ್ಳಲಾಗುತ್ತದೆ.

**ಡಿಜಿಟಲ್ ಮೂಲಕ ಹೈಟೆಕ್ ಶಿಕ್ಷಣ:–** ಪಿಎಂ ಇ–ವಿದ್ಯಾ ಯೋಜನೆ ಜಾರಿಗೆ ಡಿಜಿಟಲ್/ಆನ್‌ಲೈನ್ ಶಿಕ್ಷಣಕ್ಕಾಗಿ ಪಿಎಂ ಇ–ವಿದ್ಯಾ ಕಾರ್ಯಕ್ರಮವನ್ನು ತಕ್ಷಣವೇ ಆರಂಭಿಸಲಾಗುವುದು. ಇದರಲ್ಲಿ ಹಲವು ಅಂಶಗಳು ಒಳಗೊಂಡಿರುತ್ತವೆ. ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಶಾಲಾ ಶಿಕ್ಷಣಕ್ಕಾಗಿ ದೀಕ್ಷಾ ಯೋಜನೆ. ಇದರನ್ವಯ ಎಲ್ಲಾ ತರಗತಿಗಳಿಗೆ ಇ–ಕಂಟೆಂಟ್ ಹಾಗೂ ಕ್ಯೂ ಆರ್ ಕೋಡ್ ಯುಕ್ತ ಚೈತನ್ಯದಾಯಕ ಪಠ್ಯ ಪುಸ್ತಕ ರೂಪಿಸುವುದು. ಇದು ಏಕ ರಾಷ್ಟ್ರ –ಏಕ ಡಿಜಿಟಲ್ ವೇದಿಕೆ ಪರಿಕಲ್ಪನೆಗೆ ಒಂದು ಟಿವಿ ಚಾನಲ್‌ಗಳ ಆರಂಭ (ಒಂದು ತರಗತಿ – ಒಂದು ಚಾನಲ್). ರೇಡಿಯೋ ಸಾಮುದಾಯಿಕ ರೇಡಿಯೋ ಮತ್ತು ಪಾಡ್ ಕಾಸ್ಟ್‌ಗಳ ವ್ಯಾಪಕ ಬಳಕೆ, ಅಂಧ ಹಾಗೂ ಕಿವುಡ ವಿದ್ಯಾರ್ಥಿಗಳಿಗಾಗಿ ವಿಶೇಷ ಇ–ಕಂಟೆಂಟ್ ರೂಪಿಸಲಾಗುವುದು.

- 2020 ಮೇ 30 ರೊಳಗೆ ಆನ್‌ಲೈನ್ ಕೋರ್ಸ್‌ಗಳ ಆರಂಭಕ್ಕೆ 100 ಟಾಪ್ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಲಾಗುವುದು.
- ಶಾಲೆಗಳು, ಶಿಶುಗಳು ಹಾಗೂ ಶಿಕ್ಷಕರಿಗಾಗಿ ಹೊಸ ರಾಷ್ಟ್ರೀಯ ಪಠ್ಯಕ್ರಮ ಹಾಗೂ ಶತಮಾನದ ಕೌಶಲ್ಯ ಅಗತ್ಯಗಳಿಗೆ ಅನುಗುಣವಾಗಿರುತ್ತದೆ.
- ರಾಷ್ಟ್ರೀಯ ಫೌಂಡೇಶನಲ್ ಸಾಕ್ಷರತೆ ಮತ್ತು ಸಂಖ್ಯಾಶಾಸ್ತ್ರ ಮಿಷನ್ ಅನ್ನು 2020ರ ಡಿಸೆಂಬರ್‌ನೊಳಗೆ ಆರಂಭಿಸಲಾಗುವುದು. 2025ರೊಳಗೆ ಐದನೇ ತರಗತಿ (ಗ್ರೇಡ್) ವಿದ್ಯಾರ್ಥಿ ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಪ್ರತಿಯೊಂದು ಮಗುವಿನ ಕಲಿಕಾ ಮಟ್ಟ ಹೆಚ್ಚಿಸುವುದು ಇದರ ಉದ್ದೇಶವಾಗಿದೆ.

**ರಾಜ್ಯಗಳಿಗೆ ಆರ್ಥಿಕ ಬೆಂಬಲ:–** ಕೊರೊನಾ ಸಂಕಷ್ಟದ ಸಮಯದಲ್ಲಿ ಕೇಂದ್ರ ರಾಜ್ಯಗಳಿಗೆ ಉದಾರ ನೆರವು ನೀಡಿದೆ. ಆದಾಯದಲ್ಲಿ ತೀವ್ರ ಪ್ರಮಾಣದ ಕುಸಿತವಾದರೂ ಏಪ್ರಿಲ್ ತಿಂಗಳಲ್ಲಿ ರಾಜ್ಯಗಳ ಪಾಲಿನ ರೂ.46,038 ಕೋಟಿ ತೆರಿಗೆ ಹಣವನ್ನು ರಾಜ್ಯಗಳಿಗೆ ನೀಡಲಾಗಿದೆ. ರಾಜ್ಯಗಳ ಆದಾಯ ಕೊರತೆ ಅನುದಾನವನ್ನು (ರೂ.12,390 ಕೋಟಿ) ಕೂಡ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕ್ಲುಪ್ತ ಸಮಯದಲ್ಲಿ ನೀಡಲಾಗಿದೆ.

- ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಬಾಬ್ತು ರೂ.11,092 ಕೋಟಿಯನ್ನು ಏಪ್ರಿಲ್ ಮೊದಲ ವಾರದಲ್ಲೇ ಮುಂಗಡವಾಗಿ ನೀಡಲಾಗಿದೆ.
- ಕೋವಿಡ್–19 ನಿರ್ವಹಣೆ ಸಂಬಂಧಿತ ಚಟುವಟಿಕೆಗಳಿಗೆಂದು ಆರೋಗ್ಯ ಸಚಿವಾಲಯ ರೂ.4,113 ಕೋಟಿ ಬಿಡುಗಡೆ ಮಾಡಿದೆ. ರಾಜ್ಯಗಳ 2020–21ನೇ ಸಾಲಿನ ಒಟ್ಟು ಸಾಲ ಮಿತಿಯನ್ನು ರೂ.6.41 ಲಕ್ಷಕ್ಕೆ ನಿಗದಿಪಡಿಸಲಾಗಿದೆ.

**ಕಾರ್ಪೋರೇಟ್‌ಗಳಿಗೆ ನೆರವು:–** ಕಾರ್ಪೋರೇಟ್ ಕಂಪನಿಗಳು ತಮ್ಮ ವ್ಯವಹಾರಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು (ಇಒಡಿಬಿ) ಕ್ರಮ ಕೈಗೊಳ್ಳುವುದು. ಉದ್ಯಮವೊಂದರ ಆರಂಭದ ಸಂಬಂಧಿತ ಸರಳೀಕೃತ ನಿಯಮಗಳು ಹಾಗೂ ದಿವಾಳಿತನ ಇತ್ಯರ್ಥಪಡಿಸುವಲ್ಲಿನ ಸುಧಾರಣೆ ಭಾರತದ ಒಟ್ಟಾರೆ ಇಒಡಿಬಿ ರ್‍ಯಾಂಕಿಂಗ್ ಸುಧಾರಣೆಯಾಗಲು ಕಾರಣವಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:18.05.2020

## 32. ನರೇಗಾ ನೆಮ್ಮದಿ : ಹೆಚ್ಚುವರಿಯಾಗಿ ರೂ.40,000 ಕೋಟಿ ಅನುದಾನ

ಪ್ರಧಾನಿ ಮೋದಿ ಅವರ ಪ್ಯಾಕೇಜಿನ ಕಡೇ ಕಂತನ್ನು ಘೋಷಣೆ ಮಾಡಿದ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ)ಗೆ ಹೆಚ್ಚುವರಿಯಾಗಿ ರೂ.40 ಸಾವಿರ ಕೋಟಿಗಳನ್ನು ನೀಡಿದ್ದಾರೆ. ಆರೋಗ್ಯ ವಲಯದ ಸುಧಾರಣೆ ಶೈಕ್ಷಣಿಕ ವಲಯಕ್ಕೆ ಟೆಕ್ನಾಲಜಿ ಟಚ್ ಹಾಗೂ ಸಾರ್ವಜನಿಕರ ಉದ್ದಿಮೆಗಳ ಖಾಸಗೀಕರಣದತ್ತ ಗಮನಹರಿಸಿದ್ದಾರೆ.

ನಗರ ಪ್ರದೇಶಗಳನ್ನು ಬಿಟ್ಟು ಗ್ರಾಮಗಳಿಗೆ ಲಕ್ಷಾಂತರ ಮಂದಿ ವಲಸೆ ಕಾರ್ಮಿಕರು ತೆರಳಿದ್ದು, ಇವರಿಗೆ ಉದ್ಯೋಗ ಕೊಡುವ ನಿಟ್ಟಿನಲ್ಲಿ ನರೇಗಾಗೆ ಹೆಚ್ಚುವರಿಯಾಗಿ ರೂ.40 ಸಾವಿರ ಕೋಟಿ ನೀಡಲು ಸ್ವಾವಲಂಬಿ ಭಾರತ್ ಪ್ಯಾಕೇಜ್‌ನಲ್ಲಿ ನಿರ್ಧರಿಸಲಾಗಿದೆ. ಬಜೆಟ್ ಅನುದಾನ ಮತ್ತು ರೂ.40 ಸಾವಿರ ಕೋಟಿಗಳಿಂದಾಗಿ ಸುಮಾರು ರೂ.300 ಕೋಟಿ ಮಾನವ ದಿನ ಕೆಲಸ ಕೊಡಬಹುದಾಗಿದೆ ಎಂಬುದು ನಿರ್ಮಲಾ ಸೀತಾರಾಮನ್ ಅವರು ತಿಳಿಸಿರುತ್ತಾರೆ.

**ರಾಜ್ಯಗಳ ಸಾಲ ಪ್ರಮಾಣ ಹೆಚ್ಚಳ:–**ಕೊರೊನಾ ಕಾಲದಲ್ಲಿ ರಾಜ್ಯ ಸರ್ಕಾರಗಳ ಸಂಕಷ್ಟ ನಿವಾರಿಸುವ ಸಲುವಾಗಿ ಅವುಗಳ ಸಾಲ ಮಿತಿಯನ್ನು ಶೇ.3 ರಿಂದ ಶೇ.5ಕ್ಕೆ ಏರಿಕೆ ಮಾಡಲಾಗಿದೆ. ಅಂದರೆ, ರಾಜ್ಯ ಜೆಡಿಪಿಯ ಪ್ರಮಾಣದ ಶೇ. 3ರಷ್ಟನ್ನು ಸಾಲವಾಗಿ ಪಡೆಯಲು ಅನುಮತಿ ಇತ್ತು. ಈಗ ಈ ಪ್ರಮಾಣ ಹೆಚ್ಚಿಸಿರುವುದರಿಂದ ರಾಜ್ಯ ಸರ್ಕಾರಗಳಿಗೆ ಹೆಚ್ಚುವರಿಯಾಗಿ ರೂ.4.28 ಲಕ್ಷ ಕೋಟಿ ಸಿಗಲಿದೆ. ಆದರೆ, ಇದು ಈ ಹಣಕಾಸು ವರ್ಷಕ್ಕೆ ಮಾತ್ರ ಜಾರಿಯಲ್ಲಿ ಇರಲಿದೆ.

ಆಧಾರ:ಉದಯವಾಣಿ, ದಿನಾಂಕ:18.05.2020

## 33. ಕೆಲಸದ ಸ್ಥಳಗಳಲ್ಲಿ ಉಗುಳಿದರೆ ದಂಡ

ಕೆಲಸದ ಸ್ಥಳಗಳಲ್ಲಿ ಉಗುಳುವುದು ದಂಡನಾರ್ಹ ಅಪರಾಧ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಕೋವಿಡ್–19 ನಿರ್ವಹಣೆ ಕುರಿತು ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಮಾರ್ಗಸೂಚಿಗಳಲ್ಲಿ ಈ ವಿಷಯ ತಿಳಿಸಿದೆ. ಸರ್ಕಾರಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಸಾಮಾನ್ಯವಾಗಿದ್ದು, ಈ ಆದೇಶವು ಹೊಸ ಬದಲಾವಣೆ ತರುವ ಸಾಧ್ಯತೆ ಇದೆ. ಪಾನ್ ಜಗಿದು ಗೋಡೆಗಳ ಮೂಲೆಯಲ್ಲಿ ಉಗಿದು ಗಲೀಜು ಮಾಡುವುದು ದೊಡ್ಡ ಸಮಸ್ಯೆಯಾಗಿದೆ ಎಂದು ಕೇಂದ್ರ ಸಿಬ್ಬಂದಿ ಖಾತೆ ಸೂಚನೆ ನೀಡಿದೆ.

ಆಧಾರ:ವಿಶ್ವವಾಣಿ, ದಿನಾಂಕ:20.05.2020

## 34. ಕಚೇರಿ ಕೆಲಸಕ್ಕೆ ಮಾರ್ಗಸೂಚಿಗಳು

ಲಾಕ್‌ಡೌನ್ 4.0 ಅವಧಿ ವಿಸ್ತರಣೆ ಜೊತೆಗೆ ಕಚೇರಿಗಳಲ್ಲಿ ಕೆಲಸ ಪುನರಾರಂಭಿಸಲು ಅನುಮತಿ ನೀಡಲಾಗಿರುವ ಹಿನ್ನೆಲೆ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ (ಎಂಎಚ್‌ಎ) ಕರೊನಾ ವೈರಸ್ ಪಸರಿಸುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಹಲವು ಮಾರ್ಗಸೂಚಿಗಳನ್ನು ನೀಡಿದೆ. ವರ್ಕ್ ಫ್ರಮ್ ಹೋಮ್‌ಗೆ ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದ್ದರೂ ಕೂಡ ಕಚೇರಿಗಳು ಶೇಕಡ 100 ಸಾಮರ್ಥ್ಯದೊಂದಿಗೆ ಕೆಲಸ ನಿರ್ವಹಿಸಬಹುದು ಎಂದು ತಿಳಿಸಿದೆ.

**ಮಾರ್ಗಸೂಚಿ**

- ಒಂದು ಮೀಟರ್ ದೈಹಿಕ ಅಂತರ ಕಾಯ್ದುಕೊಳ್ಳುವಿಕೆ ಮತ್ತು ಮಾಸ್ಕ್ ಕಡ್ಡಾಯ.

- ಆಗಾಗ್ಗೆ ಸೋಪಿನಿಂದ ಕೈ ತೊಳೆಯುತ್ತಿರಬೇಕು ಮತ್ತು ಆಲ್ಕೋಹಾಲ್ ಅಂಶವಿರುವ ಸ್ಯಾನಿಟೈಸರ್‌ಗಳಿಂದ ಕನಿಷ್ಠ 20 ಸೆಕೆಂಡ್ ಕೈ ಶುಚಿಗೊಳಿಸಿಕೊಳ್ಳಬೇಕು.
- ಸಾರ್ವಜನಿಕ ಹಾಗೂ ಕಚೇರಿ ಸ್ಥಳದಲ್ಲಿ ಉಗುಳಿದರೆ ದಂಡ.
- ಕೆಮ್ಮುವಾಗ ಮತ್ತು ಸೀನುವಾಗ ಟಿಶ್ಯೂ ಅಥವಾ ಕರವಸ್ತ್ರ ಉಪಯೋಗಿಸುವುದು ಕಡ್ಡಾಯ.
- ಅನಾರೋಗ್ಯದ ಲಕ್ಷಣವಿರುವ ಉದ್ಯೋಗಿ ಕಚೇರಿಗೆ ಬರುವುದನ್ನು ನಿಲ್ಲಿಸಿ, ಸ್ಥಳೀಯ ಆರೋಗ್ಯ ಕೇಂದ್ರಗಳಲ್ಲಿ ತಪಾಸಣೆ ಮಾಡಿಸಿಕೊಳ್ಳಬೇಕು.
- ಕಂಟೈನ್ಮೆಂಟ್ ಪ್ರದೇಶದಲ್ಲಿ ವಾಸಿಸುವ ಉದ್ಯೋಗಿಗಳು ಹೋಮ್ ಕ್ವಾರಂಟೈನ್ ಮನವಿ ಮಾಡಿದರೆ ಅವರಿಗೆ ವರ್ಕ್ ಫ್ರಂ ಹೋಮ್ ಸೌಲಭ್ಯ ನೀಡಬೇಕು.
- ಕಚೇರಿಯಲ್ಲಿ ಒಬ್ಬರು ಅಥವಾ ಇಬ್ಬರಿಗೆ ಸೋಂಕು ತಗುಲಿದರೆ ಕಚೇರಿಯ ಸಂಪೂರ್ಣ ಕೆಲಸ ಸ್ಥಗಿತಗೊಳಿಸಿ, ಕಟ್ಟಡ ಸೀಲ್ ಮಾಡುವ ಅವಶ್ಯಕತೆ ಇಲ್ಲ. ಸೋಂಕಿತರು ಕಳೆದ 48 ತಾಸುಗಳಿಂದ ಓಡಾಡಿದ ಸ್ಥಳವನ್ನು ಸೋಂಕು ನಿವಾರಕ ಸಿಂಪಡಿಸಿ ಶುದ್ಧಗೊಳಿಸಬೇಕು.
- ಹೆಚ್ಚು ಜನರಿಗೆ ಸೋಂಕು ಕಾಣಿಸಿಕೊಂಡರೆ ಸಂಪೂರ್ಣ ಕಟ್ಟಡವನ್ನು ಸೀಲ್ ಮಾಡಿ ಎಲ್ಲಾ ಉದ್ಯೋಗಿಗಳಿಗೆ ವರ್ಕ್ ಫ್ರಂ ಹೋಮ್ ಸೌಲಭ್ಯ ನೀಡಬೇಕು. ಎಲ್ಲರ ಆರೋಗ್ಯ ತಪಾಸಣೆ ಹಾಗೂ ಕಟ್ಟಡದ ಶುಚಿತ್ವವಾದ ಮೇಲೆ ಮಾತ್ರ ಕೆಲಸ ಪುನರಾರಂಭಿಸಬೇಕು.

**ಟೆಲಿಕನ್ಸಲ್ಟೇಷನ್‌ಗೆ ಅನುಮತಿ**

ದಂತ ವೈದ್ಯಕೀಯ ಸೇವೆಗೆ ಕೇಂದ್ರ ಆರೋಗ್ಯ ಸಚಿವಾಲಯ ಹೊಸ ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ಕಂಟೈನ್ಮೆಂಟ್ ವಲಯದಲ್ಲಿ ದಂತ ಚಿಕಿತ್ಸಾಲಯಗಳು ಇನ್ನು ಸ್ವಲ್ಪ ದಿನ ಬಾಗಿಲು ತೆರೆಯುವಂತಿಲ್ಲ ಎಂದಿದೆ. ಆದರೆ, ದಂತ ವೈದ್ಯರು ಟೆಲಿಕನ್ಸಲ್ಟೇಷನ್ (ವಿಡಿಯೋ ಕಾಲ್ ಮೂಲಕ ರೋಗಿಗಳ ತಪಾಸಣೆ) ಮಾಡಲು ಅವಕಾಶ ನೀಡಲಾಗಿದೆ. ಉಳಿದ ಕಡೆಗಳಲ್ಲಿ ದಂತ ಚಿಕಿತ್ಸಾಲಯಗಳ ಕಾರ್ಯನಿರ್ವಹಣೆಗೆ ಅನುಮತಿ ನೀಡಲಾಗಿದೆಯಾದರೂ, ಲಾಲಾರಸ ಸಂಪರ್ಕ, ಒಬ್ಬರಿಗೊಬ್ಬರು ಸಮೀಪದಲ್ಲಿ ಉಸಿರಾಡುವುದರಿಂದ ಸೋಂಕು ಪಸರಿಸುವ ಭೀತಿಯೆಂದು ತಿಳಿಸಿದೆ.

ಆಧಾರ:ವಿಜಯವಾಣಿ, ದಿನಾಂಕ:20.05.2020

## 35. ಆರ್ಥಿಕತೆಗೆ ಶಕ್ತಿ ತುಂಬಲು ಆರ್‌ಬಿಐ ಹರಸಾಹಸ

ಕೋವಿಡ್-19 ಬಿಕ್ಕಟ್ಟು ಮತ್ತು ಲಾಕ್‌ಡೌನ್ ಪರಿಣಾಮ ಸ್ಥಗಿತವಾಗಿರುವ ಆರ್ಥಿಕ ಚಟುವಟಿಕೆಗಳಿಗೆ ಚೈತನ್ಯ ತುಂಬಲು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಅನಿರೀಕ್ಷಿತವಾಗಿ ಅಲ್ಪಾವಧಿಯ ಸಾಲದ ಬಡ್ಡಿ ದರವನ್ನು (ರೆಪೊ) ಶೇ.4.4ರಿಂದ ಶೇ.4ಕ್ಕೆ ಕಡಿತಗೊಳಿಸಿದೆ. ಕಳೆದ ಮಾರ್ಚ್ 27ರಂದು ರೆಪೊ ದರ ಕಡಿತಗೊಳಿಸಲಾಗಿತ್ತು. ಇದರ ಪರಿಣಾಮ ಗೃಹ ಸಾಲ, ವಾಹನ ಸಾಲ, ಕಾರ್ಪೋರೇಟ್ ಸಾಲಗಳ ಇಎಂಐ ಇಳಿಕೆಯಾಗಲಿದೆ. ಆದರೆ, ನಿಶ್ಚಿತ ಠೇವಣಿಗಳ ಬಡ್ಡಿ ದರಗಳೂ ಇಳಿಕೆಯಾಗಲಿದೆ. ಮುಖ್ಯವಾಗಿ ಹಿರಿಯ ನಾಗರಿಕರಿಗೆ ಮತ್ತು ಪಿಂಚಣಿದಾರರಿಗೆ ಬಡ್ಡಿ ಆದಾಯ ಕಡಿಮೆಯಾಗಲಿರುವುದು ಕಳವಳಕ್ಕೆ ಕಾರಣವಾಗಿದೆ.

ಕಳೆದ ಮಾರ್ಚ್ ನಂತರ ಎರಡನೇ ಬಾರಿಗೆ ರೆಪೊ ದರವನ್ನು ಇಳಿಸಲಾಗಿದೆ. ಶೇ.4ರ ರೆಪೊ ದರವು 2000ದಿಂದೀಚೆಗೆ ಅತ್ಯಂತ ಕಡಿಮೆ ಮಟ್ಟದ ಬಡ್ಡಿ ದರವಾಗಿದೆ. ರಿವರ್ಸ್ ರೆಪೊ ದರವನ್ನು ಶೇ.3.75ರಿಂದ 3.35ಕ್ಕೆ ಕಡಿತಗೊಳಿಸಲಾಗಿದೆ. ಅಗತ್ಯವಿದ್ದರೆ ಭವಿಷ್ಯದಲ್ಲಿ ಮತ್ತಷ್ಟು ಬಡ್ಡಿ ದರ ಕಡಿತ ಘೋಷಿಸಲಾಗುವುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಆರ್‌ಬಿಐ ಎಲ್ಲಾ ಅವಧಿ ಸಾಲಗಳ ಇಎಂಐ ಮರುಪಾವತಿಯ ಅವಧಿಯನ್ನು ಜೂನ್ 1ರಿಂದ ಆಗಸ್ಟ್ 31ಕ್ಕೆ ಮುಂದೂಡಿದೆ. ಕೊರೊನಾ ಸಂಕಟದ ಕಾರಣ ಸಾಲದ ಇಎಂಐ ಕಟ್ಟಲು ಕಷ್ಟ ಎಂಬ ಕಾರಣದಿಂದ ಈಗಾಗಲೇ ಏಪ್ರಿಲ್‌ನಿಂದ ಮೇ ತನಕ ಮುಂದೂಡಲಾಗಿತ್ತು.

ಹಿರಿಯ ನಾಗರಿಕರ ಠೇವಣಿ ಮೇಲಿನ ಬಡ್ಡಿ ಕಡಿಮೆ ಆಗದಂತೆ ಕೆಲವು ಬ್ಯಾಂಕ್‌ಗಳು ಪ್ರತ್ಯೇಕ ಯೋಜನೆ ಹೊಂದಿವೆ. ಹಿರಿಯ ನಾಗರಿಕರು, ಎಲ್ಐಸಿ ನಿರ್ವಹಿಸುವ 'ಪ್ರಧಾನ ಮಂತ್ರಿ ವಯವಂದನ' ಯೋಜನೆಯಲ್ಲಿ ಹೂಡಿಕೆ ಮಾಡುವುದು ಸೂಕ್ತ. ಇದರಲ್ಲಿ ಶೇ.7.4 ರಷ್ಟು ಬಡ್ಡಿ ದರ ಸಿಗಲಿದೆಯೆಂದು ತಿಳಿಸಲಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:23.05.2020

## 36. ಭಾರತ – ಚೀನಾ ಟೆನ್ಷನ್

ವಿಶ್ವದಾದ್ಯಾಂತ ಕೊರೊನಾ ಮರಣ ಮೃದಂಗದ ನಡುವೆಯೇ ಭಾರತ–ಚೀನಾ ಗಡಿ ಬಿಕ್ಕಟ್ಟು ಉಲ್ಬಣಗೊಂಡಿದೆ. ಉಭಯ ದೇಶಗಳು ಲಡಾಕ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಸೇನೆ ನಿಯೋಜನೆ ಹೆಚ್ಚಿಸುವುದರೊಂದಿಗೆ ಪರಿಸ್ಥಿತಿ ಉದ್ವಿಗ್ನತೆಗೆ ತಿರುಗಿದೆ. ಪ್ರಧಾನಿ ಮೋದಿ ಮತ್ತು ರಕ್ಷಣಾ ಸಚಿವ ರಾಜ್‌ನಾಥ್‌ಸಿಂಗ್ ಸೇನಾ ಮುಖಂಡರೊಂದಿಗೆ ಪ್ರತ್ಯೇಕ ತುರ್ತು ಸಭೆಗಳನ್ನು ನಡೆಸಿರುವುದು ಪರಿಸ್ಥಿತಿಯ ಗಂಭೀರತೆಗೆ ಸಾಕ್ಷಿಯಾಗಿದೆ.

ಇತ್ತೀಚೆಗೆ ಗಡಿಯಲ್ಲಿ ಭಾರತ–ಚೀನಾ ಯೋಧರ ನಡುವೆ ಎರಡು ಬಾರಿ ಮಾರಾಮಾರಿ ನಡೆದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ. ಇದು 2017ರ ಡೋಕ್ಲಾಮ್ ತಿಕ್ಕಾಟಕ್ಕಿಂತ ದೊಡ್ಡದಾಗುವ ಮತ್ತು ದೀರ್ಘಕಾಲ ಮುಂದುವರಿಯುವ ಮುನ್ಸೂಚನೆಯೂ ಕಂಡು ಬಂದಿದೆ. ಕೊರೊನಾ ವೈರಸ್ ವಿಚಾರವಾಗಿ ಅಮೆರಿಕ ಸೇರಿದಂತೆ ವಿಶ್ವ ಸಮುದಾಯವನ್ನು ಎದುರು ಹಾಕಿಕೊಂಡಿರುವ ಚೀನಾ, ಶೀತಲ ಸಮರದ ಎಚ್ಚರಿಕೆ ನೀಡಿದೆ. ಇದೇ ವಿಚಾರವಾಗಿ ಚೀನಾವನ್ನು ದೂರಿದ ಭಾರತದ ವಿರುದ್ದವೂ ಅಸಮಾಧಾನಗೊಂಡಿರುವ ಡ್ರ್ಯಾಗನ್ ರಾಷ್ಟ್ರ ಲಡಾಖ್ ಅಂತರಾಷ್ಟ್ರೀಯ ಗಡಿ ಭಾಗದಲ್ಲಿ ಅಪ್ರಚೋದಿತವಾಗಿ ಕೆಣಕಿ ತಗಾದೆ ತೆಗೆದಿದೆ. ಲಡಾಖ್ ಕೇಂದ್ರಾಡಳಿತ ಪ್ರದೇಶವಾಗಿ ಘೋಷಣೆಯಾದ ಬಳಿಕ ಈ ಭಾಗದ ಗಡಿಯಲ್ಲಿ ರಸ್ತೆ ನಿರ್ಮಾಣ ಸೇರಿದಂತೆ ಅಭಿವೃದ್ಧಿ ಕಾರ್ಯಗಳಿಗೆ ಭಾರತ ವೇಗ ನೀಡಿರುವುದು ಚೀನಾದ ಅಸಮಾಧಾನಕ್ಕೆ ಮತ್ತೊಂದು ಮುಖ್ಯ ಕಾರಣ. ಚೀನಾದ ನಡೆಗೆ ಭಾರತ ಖಡಕ್ ಪ್ರತ್ಯುತ್ತರ ನೀಡಿದೆ. ಗಡಿಯಲ್ಲಿ ಸಶಸ್ತ್ರ ಪಡೆಗಳಿಗೆ ಸಿದ್ಧತೆಯ ಸಂದೇಶ ರವಾನಿಸಿದೆ. ಯಾವುದೇ ಕಾರಣಕ್ಕೂ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಳಿಸುವ ಪ್ರಶ್ನೆಯೇ ಇಲ್ಲವೆಂದು ಭಾರತ ಸ್ಪಷ್ಟಪಡಿಸಿದೆ. ಗಡಿಯಲ್ಲಿ ನಿಯೋಜನೆಗೊಂಡಿರುವ ಸೇನೆಯನ್ನು ಸದ್ಯಕ್ಕೆ ವಾಪಸ್ ಕರೆಸುವುದಿಲ್ಲ ಎಂದು ತಿಳಿಸಿದೆ.

**ಜಟಾಪಟಿ ಹಾದಿ:–**

- ಮೇ 5 ಹಾಗೂ 6 ರಂದು ಲಡಾಖ್‌ನಲ್ಲಿ ಉಭಯ ಯೋಧರ ಮಾರಾಮಾರಿ.
- ಜಟಾಪಟಿ ವೇಳೆ ಎರಡೂ ಕಡೆಯ 100ಕ್ಕೂ ಹೆಚ್ಚು ಯೋಧರಿಗೆ ಗಾಯ.
- ಸಂಘರ್ಷದ ನಂತರ ಹಲವು ಬಾರಿ ನಡೆದ ಸಂಧಾನ ಯತ್ನ ವಿಫಲ.
- ಮೇ 9ರಂದು ಸಿಕ್ಕಿಂ ವಲಯದಲ್ಲೂ ಉಭಯ ಪಡೆಗಳ ಸಂಘರ್ಷ.

**ಪ್ರಧಾನಿ ತುರ್ತು ಸಭೆ:–** ಬಿಕ್ಕಟ್ಟು ತೀವ್ರಗೊಂಡ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಭೆ ಕರೆದು ಚರ್ಚೆ ನಡೆಸಿದ್ದಾರೆ. ಮೂರೂ ಸೇನಾಪಡೆಗಳ ಮುಖ್ಯಸ್ಥರು, ಎನ್‌ಎಸ್‌ಎ ಅಜಿತ್ ದೋವೆಲ್, ಸಶಸ್ತ್ರ ಪಡೆಗಳ ಜಂಟಿ ಮುಖ್ಯಸ್ಥ ಬಿಪಿನ್ ರಾವತ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ಪ್ರಧಾನಿ ಜೊತೆ ಸಭೆಗೂ ಮುನ್ನ ಮೂರು ಪಡೆಗಳ ಮುಖ್ಯಸ್ಥರು ರಕ್ಷಣಾ ಸಚಿವ ರಾಜ್‌ನಾಥ್ ಸಿಂಗ್ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಈ ಮಧ್ಯೆ ದಿಲ್ಲಿಯಲ್ಲಿ ಆರ್ಮಿ ಕಮಾಂಡರ್‌ಗಳ ದ್ವೈ ವಾರ್ಷಿಕ ಸಮಾವೇಶ ನಡೆಯಲಿದ್ದು, ಅಲ್ಲೂ ಚೀನಾ ಬಿಕ್ಕಟ್ಟು ಚರ್ಚೆಗೆ ಬರಲಿದೆ.

ಚೀನಾದಿಂದ ವಾಯುನೆಲೆ ವಿಸ್ತರಣೆ:– ಲಡಾಖ್ ಬಳಿ ಚೀನಾ ತನ್ನ ವಾಯುನೆಲೆ ವಿಸ್ತರಿಸಿದ್ದು, ಕಳೆದ ಹಲವು ತಿಂಗಳುಗಳಿಂದ ಭಾರಿ ನಿರ್ಮಾಣ ಕಾರ್ಯ ನಡೆದಿದೆ. ಈ ವಾಯುನೆಲೆ, ಯೋಧರ ನಡುವೆ ಮಾರಾಮಾರಿ ನಡೆದ ಪ್ರದೇಶದಿಂದ 200ಕಿ.ಮೀ.ದೂರದಲ್ಲಿದೆ. 4 ಫೈಟರ್ ಜೆಟ್‌ಗಳು, ಯುದ್ಧ ಕಾಪ್ಟರ್‌ಗಳನ್ನು ಚೀನಾ ನಿಯೋಜಿಸಿರುವುದು ಉಪಗ್ರಹ ಆಧಾರಿತ ಚಿತ್ರಗಳಿಂದ ದೃಢಪಟ್ಟಿದೆ.

ಆಧಾರ:ವಿಜಯ ಕರ್ನಾಟಕ ದಿನಾಂಕ:27.05.2020

## 37. ಆಧಾರ್ ನೀಡಿದರೆ 10 ನಿಮಿಷಗಳಲ್ಲೇ ಪ್ಯಾನ್ ಸೌಲಭ್ಯ ಶುರು

ಕೇವಲ 10 ನಿಮಿಷಗಳಲ್ಲೇ ಇ–ಪ್ಯಾನ್ ಕಾರ್ಡ್ ನಂಬರ್ ಒದಗಿಸುವ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ ನೀಡಿದರು. ಮೊಬೈಲ್ ಸಂಖ್ಯೆ ಲಿಂಕ್ ಆಗಿರುವ, ಸೂಕ್ತ ಆಧಾರ್ ಕಾರ್ಡ್ ಹೊಂದಿರುವ ವ್ಯಕ್ತಿಗಳು ಈ ಸೌಲಭ್ಯ ಬಳಸಿಕೊಳ್ಳಬಹುದು. ಇದು ಆಧಾರ್ ಆಧಾರಿತ ಇ–ಕೆವೈಸಿ ರೂಪದಲ್ಲಿ ನಿರ್ವಹಣೆಯಾಗುತ್ತದೆ. ಈ ಸೌಲಭ್ಯ ಸಂಪೂರ್ಣ ಉಚಿತವಾಗಿರುತ್ತದೆ. ಕಳೆದ ಬಜೆಟ್‌ನಲ್ಲೇ ಘೋಷಿಸಿದ್ದ ಈ ಯೋಜನೆ ಈಗಾಗಲೇ ಪ್ರಾಯೋಗಿಕ ರೂಪದಲ್ಲಿ ಜಾರಿಯಲ್ಲಿದೆ. ಇದರ ಮೂಲಕ ಈಗಾಗಲೇ 6.77 ಲಕ್ಷ ಜನರಿಗೆ ಇ–ಪ್ಯಾನ್ ವಿತರಿಸಲಾಗಿದೆ.

ಆಧಾರ: ಕನ್ನಡ ಪ್ರಭ, ದಿನಾಂಕ: 29.05.2020

## 38. ಮಿತಿ ಮೀರಿದ ಮಿಡತೆ ಹಾವಳಿ

ಪಾಕಿಸ್ತಾನದಿಂದ ದಂಡೆತ್ತಿ ಬಂದಿರುವ ಮಿಡತೆಗಳ ಹಿಂಡು ದಿನೇ ದಿನೇ ಒಂದೊಂದೇ ರಾಜ್ಯ ಪ್ರವೇಶಿಸುತ್ತಿದೆ. ಪ್ರಸ್ತುತ ಏಳು ರಾಜ್ಯಗಳಲ್ಲಿ ತನ್ನ ಹಾವಳಿ ಆರಂಭಿಸಿದೆ. 20 ಜಿಲ್ಲೆಗಳ 303 ಪ್ರದೇಶಗಳಲ್ಲಿ ಒಟ್ಟು 47,000 ಹೆಕ್ಟೇರ್ ಕೃಷಿ ಭೂಮಿಯಲ್ಲಿನ ಬೆಳೆಗೆ ಮಿಡತೆಗಳು ಮುತ್ತಿಗೆ ಹಾಕಿದೆ. ಪರಿಸ್ಥಿತಿಯ ಗಂಭೀರತೆ ಅರಿತ ಕೇಂದ್ರ ಸರ್ಕಾರ ಕೀಟಗಳ ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಮಹಾರಾಷ್ಟ್ರ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ ಮತ್ತು ಹರಿಯಾಣ ರಾಜ್ಯಗಳಲ್ಲಿದ್ದ ಮಿಡತೆಗಳು ಬೆಳಗಾಗುವ ವೇಳೆಗೆ ಉತ್ತರಪ್ರದೇಶ ಮತ್ತು ಪಂಜಾಬ್ ಗಡಿಯನ್ನೂ ಪ್ರವೇಶಿಸಿವೆ. ಪಂಜಾಬ್‌ನಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ. ರಾಜಸ್ಥಾನದ 20 ಜಿಲ್ಲೆಗಳು, ಮಧ್ಯಪ್ರದೇಶದ ಒಂಭತ್ತು, ಮಹಾರಾಷ್ಟ್ರ, ಗುಜರಾತ್‌ನಲ್ಲಿ ತಲಾ ಎರಡು ಹಾಗೂ ಉತ್ತರಪ್ರದೇಶ, ಪಂಜಾಬ್‌ನ ತಲಾ ಒಂದು ಜಿಲ್ಲೆಯಲ್ಲಿ ಮಿಡತೆಗಳ ಹಿಂಡು ಕಾಣಿಸಿಕೊಂಡಿದೆ ಎಂದು ಕೃಷಿ ಸಚಿವಾಲಯ ತಿಳಿಸಿದೆ.

ಮಿಡತೆಗಳ ಮೇಲೆ ರಾಸಾಯನಿಕ ಸಿಂಪಡಿಸಲು 60 ಹೆಚ್ಚುವರಿ ಸುಧಾರಿತ ಸ್ಪ್ರೇಯರ್‌ಗಳನ್ನು ಯುನೈಟೆಡ್ ಕಿಂಗ್‌ಡಮ್‌ನಿಂದ ತರಿಸಿಕೊಳ್ಳಲು ಕೇಂದ್ರ ಕೃಷಿ ಸಚಿವಾಲಯ ಸಮ್ಮತಿಸಿದೆ. ಇದರೊಂದಿಗೆ ಮಿಡತೆಗಳ ಪರಿಣಾಮಕಾರಿ ನಿಯಂತ್ರಣಕ್ಕಾಗಿ ಕೀಟನಾಶಕ ಸಿಂಪಡಿಸಲು 89 ಅಗ್ನಿಶಾಮಕ ವಾಹನಗಳು, 120 ಸರ್ವೇ ವಾಹನಗಳು, ರಾಸಾಯನಿಕ ಸಿಂಪಡನೆ ಸಾಧನೆಗಳನ್ನು ಒಳಗೊಂಡ 47 ನಿಯಂತ್ರಕ ವಾಹನಗಳು ಮತ್ತು ಸ್ಪ್ರೇಯರ್‌ಗಳನ್ನು ಅಳವಡಿಸಿರುವ 810 ಟ್ರ್ಯಾಕ್ಟರ್‌ಗಳನ್ನು ವಿವಿಧ ರಾಜ್ಯಗಳಲ್ಲಿ ಈಗಾಗಲೇ ನಿಯೋಜಿಸಲಾಗಿದೆ ಎಂದು ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ತಿಳಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:29.05.2020

## 39. ಜೂನ್ 8ಕ್ಕೆ ಭಾರತ ಅನ್‌ಲಾಕ್

ಕೊರೊನಾ ವೈರಸ್‌ನಿಂದಾಗಿ ಮಾರ್ಚ್ 25ರಿಂದಲೂ ಲಾಕ್‌ಡೌನ್ ಒಳಗಿರುವ ಭಾರತ, ಮುಂದಿನ ದಿನಗಳಲ್ಲಿ ಹೆಚ್ಚು ಕಡಿಮೆ ಪೂರ್ಣವಾಗಿ ಅನ್‌ಲಾಕ್ ಆಗಲಿದೆ. ಒಟ್ಟು ಮೂರು ಹಂತದಲ್ಲಿ ಲಾಕ್‌ಡೌನ್ ತೆರವು ಮಾಡುವ ಪ್ಲಾನ್ ಹಾಕಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಜೂನ್ 8ರಿಂದ ದೇವಸ್ಥಾನ, ಹೋಟೆಲ್, ಮಾಲ್ ತೆರೆಯಲು ಅವಕಾಶ ನೀಡಲಾಗಿದೆ. 2ನೇ ಹಂತದಲ್ಲಿ ಶಾಲೆ–ಕಾಲೇಜುಗಳ ಶುರುವಿಗೆ ಒಪ್ಪಿಗೆ ಸಿಕ್ಕಿದೆ. ಆದರೂ, ಜೂನ್.30ರವರೆಗೆ ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಲಾಕ್‌ಡೌನ್ 5.0 ಮುಂದುವರಿಯಲಿದೆ.

ರಾಜ್ಯಗಳಿಗೆ ಮತ್ತಷ್ಟು ಅಧಿಕಾರ ನೀಡಲಾಗಿದೆ. ಪರಿಸ್ಥಿತಿ ನೋಡಿಕೊಂಡು ಲಾಕ್‌ಡೌನ್ ವಿಸ್ತರಿಸುವ ಅಥವಾ ಸಡಿಲಗೊಳಿಸುವ ನಿರ್ಧಾರವನ್ನು ಆಯಾ ರಾಜ್ಯ ಸರ್ಕಾರಗಳೇ ತೆಗೆದುಕೊಳ್ಳಬಹುದಾಗಿದೆ. ಜೊತೆಗೆ ಕಂಟೈನ್‌ಮೆಂಟ್ ಝೋನ್ ಮತ್ತು ಬಫರ್ ಝೋನ್‌ಗಳನ್ನು ನಿರ್ಧರಿಸುವ ಹೊಣೆಯೂ ರಾಜ್ಯ ಸರ್ಕಾರಗಳದ್ದೇ ಆಗಿದೆ.

**ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ:–** ಲಾಕ್‌ಡೌನ್ ತೆರವಾಗಿದ್ದರೂ, ರಾತ್ರಿ ಕರ್ಫ್ಯೂ ಮಾತ್ರ ಮುಂದುವರಿಯುತ್ತದೆ. ಆದರೆ, ಸಮಯ ಬದಲಾಗುತ್ತದೆ. ರಾತ್ರಿ 9ರಿಂದ ಬೆಳಗ್ಗೆ 5 ಗಂಟೆಯವರೆಗೆ ಮಾತ್ರ ನೈಟ್

ಕರ್ಫ್ಯೂ ಜಾರಿಯಲ್ಲಿ ಇರುತ್ತದೆ. ಈ ಸಂದರ್ಭದಲ್ಲಿ ಯಾವುದೇ ಕಾರಣಕ್ಕೂ ಜನ ಓಡಾಡುವಂತಿಲ್ಲ. ಆದರೆ ಅತ್ಯಗತ್ಯ ಸೇವೆಗಳಿಗೆ ವಿನಾಯಿತಿ ಇದೆ.

ಈ ಬಾರಿಯೂ ವಯಸ್ಸಾದವರು, ಗರ್ಭಿಣಿಯರು, ಮಕ್ಕಳಿಗೆ ನಿರ್ಬಂಧ ವಿಧಿಸಲಾಗಿದೆ. 65 ವರ್ಷ ಮೇಲ್ಪಟ್ಟವರು, 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮತ್ತು ಗರ್ಭಿಣಿಯರು ಮನೆಯಿಂದ ಆಚೆ ಬಾರದಂತೆ ಸೂಚಿಸಲಾಗಿದೆ. ಇನ್ನು ಸೋಂಕನ್ನು ಮೊದಲೇ ಗುರುತಿಸುವ ನಿಟ್ಟಿನಲ್ಲಿ ಎಲ್ಲರೂ ಆರೋಗ್ಯ ಸೇತುವನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು ಎಂದಿದೆ.

ಹಂತ 1:– ಜೂನ್ 8ರಿಂದ ದೇಗುಲ, ಮಾಲ್, ಎಲ್ಲಾ ರೀತಿಯ ಧಾರ್ಮಿಕ, ಪೂಜಾ ಸ್ಥಳಗಳು (ದೇವಸ್ಥಾನಗಳು, ಚರ್ಚ್‌ಗಳು, ಮಸೀದಿಗಳು), ಹೋಟೆಲ್, ರೆಸ್ಟೋರೆಂಟ್, ಇತರೆ ಆತಿಥ್ಯ ಸೇವೆಗಳು, ಶಾಪಿಂಗ್ ಮಾಲ್‌ಗಳು.

ಹಂತ 2:– ಜುಲೈನಿಂದ ಶಾಲಾ, ಕಾಲೇಜುಗಳು, ಶೈಕ್ಷಣಿಕ, ತರಬೇತಿ ಸಂಸ್ಥೆಗಳು ಈ ಹಂತದಲ್ಲಿ ರಾಜ್ಯಗಳಿಗೆ ಪರಮಾಧಿಕಾರ. ಆಯಾ ರಾಜ್ಯಗಳು, ಚರ್ಚೆ ನಡೆಸಿ ಅವಕಾಶ ನೀಡಬಹುದಾಗಿದೆ.

ಹಂತ 3:– ಪರಿಸ್ಥಿತಿ ನೋಡಿಕೊಂಡು ಈ ಕೆಳಗಿನ ಚಟುವಟಿಕೆಗಳಿಗೆ ಅನುಮತಿ ನೀಡಬಹುದಾಗಿದೆ. ಅದರೆ ಇದಕ್ಕೆ ಸಮಯದ ಮಿತಿ ಹಾಕಿಲ್ಲ.

- ಅಂತರರಾಷ್ಟ್ರೀಯ ವಿಮಾನಯಾನ / ಮೆಟ್ರೋ ರೈಲು
- ಸಿನಿಮಾ ಮಂದಿರ, ಜಿಮ್‌ಗಳು, ಸ್ವಿಮಿಂಗ್ ಫೂಲ್, ಮನೋರಂಜನಾ ಪಾರ್ಕ್, ಥಿಯೇಟರ್‌ಗಳು, ಆಡಿಟೋರಿಯಂಗಳು, ಅಸೆಂಬ್ಲಿ ಹಾಲ್
- ಸಾಮಾಜಿಕ, ಆರ್ಥಿಕ, ಕ್ರೀಡಾ, ಮನೋರಂಜನಾ, ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಮತ್ತು ಇತರೆ ಅತಿ ಹೆಚ್ಚು ಜನ ಸೇರುವ ಕಾರ್ಯಕ್ರಮಗಳು

**ಕಂಟೈನ್‌ಮೆಂಟ್ ಝೋನ್ ಲಾಕ್:–** ಕೊರೊನಾ ಸೋಂಕು ಇರುವ ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಮಾತ್ರ ಲಾಕ್‌ಡೌನ್ 5.0 ಜೂನ್.30 ರವರೆಗೆ ಮುಂದುವರೆಯಲಿದೆ. ಈ ಕಂಟೈನ್‌ಮೆಂಟ್ ಝೋನ್‌ಗಳನ್ನು ಆಯಾ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶಗಳು ನಿರ್ಧಾರ ಮಾಡಬೇಕು. ಇದಕ್ಕಾಗಿ ಕೇಂದ್ರ ಆರೋಗ್ಯ ಇಲಾಖೆಯಿಂದ ನಿಯಾಮಾವಳಿಗಳನ್ನು ಪಾಲಿಸಬೇಕು.

**ಅಂತರರಾಜ್ಯ ಓಡಾಟ ಸಲೀಸು:–** ಜೂನ್.1ರಿಂದ ದೇಶದ ಯಾವುದೇ ರಾಜ್ಯಕ್ಕೆ ಬೇಕಾದರೂ, ಯಾವುದೇ ಅನುಮತಿ ಪಾಸ್ ಇಲ್ಲದೆ ಸಂಚರಿಸಬಹುದು. ಹಿಂದೆ ಇದ್ದ ಎಲ್ಲಾ ನಿಬಂಧನೆಗಳನ್ನೂ ಕೇಂದ್ರ ಸರ್ಕಾರ ತೆಗೆದು ಹಾಕಿದೆ. ರಾಜ್ಯದೊಳಗೆ ಯಾವುದೇ ಅಡೆತಡೆ ಇಲ್ಲದೇ ಓಡಾಟ ನಡೆಸಬಹುದು. ಆದರೆ ಇಲ್ಲೂ ರಾಜ್ಯ ಸರ್ಕಾರಗಳಿಗೆ ಕೆಲವು ಅಧಿಕಾರ ನೀಡಲಾಗಿದೆ. ಆರೋಗ್ಯದ ದೃಷ್ಟಿಯಿಂದ ಜನರ ಓಡಾಟಕ್ಕೆ ನಿರ್ಬಂಧ ವಿಧಿಸುವುದೇ ಆದಲ್ಲಿ, ಒಂದಷ್ಟು ಮುಂಚೆಯೇ ಈ ಬಗ್ಗೆ ಪ್ರಚುರ ಪಡಿಸಿ ನಿರ್ಬಂಧ ಹೇರಬಹುದು. ಶ್ರಮಿಕ ರೈಲುಗಳು, ದೇಶೀಯ ವಿಮಾನಯಾನ ಮುಂದುವರಿಯುತ್ತದೆ. ಹಾಗೆಯೇ ಸರಕು ಸಾಗಣಿಕೆಗೆ ಯಾವುದೇ ರಾಜ್ಯಗಳು ಅಡ್ಡಿಮಾಡುವಂತಿಲ್ಲ ಎಂದು ಕೇಂದ್ರ ಸರ್ಕಾರದ ಹೊಸ ಮಾರ್ಗದರ್ಶಿಯಲ್ಲಿ ಸೂಚಿಸಿದೆ. .

**ಇತರೆ ನಿಯಮಗಳು:–**

- ಫೇಸ್ ಮಾಸ್ಕ್ ಕಡ್ಡಾಯ
- ಕನಿಷ್ಠ 6 ಅಡಿ ಸಾಮಾಜಿಕ ಅಂತರ
- ಮದುವೆಗಳಲ್ಲಿ 50 ಮಂದಿ, ಅಂತ್ಯ ಸಂಸ್ಕಾರದಲ್ಲಿ 20 ಮಂದಿಗೆ ಅವಕಾಶ
- ಸಾರ್ವಜನಿಕ ಸ್ಥಳದಲ್ಲಿ ಉಗುಳಿದರೆ ದಂಡ
- ಸಾರ್ವಜನಿಕ ಸ್ಥಳದಲ್ಲಿ ಮದ್ಯಪಾನ, ಪಾನ್ ಗುಟ್ಕಾ ಸೇವನೆ ನಿಷಿದ್ಧ

- ಸಾಧ್ಯವಾದಷ್ಟೂ ಮನೆಯಿಂದಲೇ ಕೆಲಸ ಮಾಡಿ
- ಕೆಲಸದ ಸ್ಥಳ, ಶಾಪಿಂಗ್ ಕಾಂಪ್ಲೆಕ್ಸ್, ವಾಣಿಜ್ಯ ಸಂಕೀರ್ಣಗಳಲ್ಲಿ ಶಿಫ್ಟ್ ರೀತಿಯಲ್ಲಿ ಕೆಲಸ ಮತ್ತು ವ್ಯವಹಾರ ನಡೆಸುವುದು
- ಆರಂಭ ಮತ್ತು ಎಕ್ಸಿಟ್ ಪಾಯಿಂಟ್‌ಗಳಲ್ಲಿ ಥರ್ಮಲ್ ಸ್ಕ್ರೀನಿಂಗ್ ವ್ಯವಸ್ಥೆ ಮತ್ತು ಸ್ಯಾನಿಟೈಸರ್ ಮೂಲಕ ಶುಚಿತ್ವಕ್ಕೆ ಮನ್ನಣೆ ನೀಡಬೇಕು
- ಕೆಲಸದ ಸ್ಥಳಗಳನ್ನು ಆಗಾಗ್ಗೆ ಸ್ಯಾನಿಟೈಸರ್‌ನಿಂದ ಶುದ್ಧಗೊಳಿಸಬೇಕು
- ಕೆಲಸದ ಸ್ಥಳಗಳಲ್ಲಿ ಶಿಫ್ಟ್, ಊಟದ ವೇಳೆಯಲ್ಲಿ ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು

ಕೊರೊನಾ ಹಿನ್ನೆಲೆಯಲ್ಲಿ ಮುಚ್ಚಲಾಗಿದ್ದ ದೇವಸ್ಥಾನಗಳನ್ನು ತೆರೆಯಲು ಈಗಾಗಲೇ ರಾಜ್ಯ ಸರ್ಕಾರ ಅನುಮತಿ ಕೊಟ್ಟಾಗಿದೆ. ಇದರ ಬೆನ್ನಲ್ಲೆ ದೇಗುಲ ತೆರೆಯಲು ಮತ್ತು ದೇಗುಲಕ್ಕೆ ಬರುವ ಭಕ್ತರಿಗೆ ಕೆಲವೊಂದು ನಿರ್ದೇಶನ ನೀಡಲಾಗಿದೆ. ಈ ಬಗ್ಗೆ ದೇವಸ್ಥಾನ ಆಡಳಿತ ಮಂಡಳಿಗಳಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸರ್ಕಾರ ಸೂಚನೆ ನೀಡಿದೆ. ಭಕ್ತರು ಒಳಬರುವ ಹಾಗೂ ಹೊರಹೋಗುವ ಮಾರ್ಗಗಳಿಗೆ ಸೋಂಕುನಾಶಕ ಸಿಂಪಡಿಸುವುದು. ಅಗತ್ಯಬಿದ್ದರೆ 2 ತಿಂಗಳ ಮಟ್ಟಿಗೆ ಹೆಚ್ಚುವರಿ ಭದ್ರತಾ ಸಿಬ್ಬಂದಿ ನೇಮಕ, ವೇತನವನ್ನು ತಾವೇ ಭರಿಸುವುದು. ದೇವಾಲಯದ ನೌಕರರು ಹಾಗೂ ಆಡಳಿತ ಮಂಡಳಿ ಕಡ್ಡಾಯವಾಗಿ ಸ್ಯಾನಿಟೈಸರ್ ಬಳಸಬೇಕು. ಅರ್ಚಕರು, ಪರಿಚಾರಕರು ಹಾಗೂ ಆಗಮಿಕರು ದೇವಾಲಯದ ಒಳಾಂಗಣದಲ್ಲಿ ಹೊರತುಪಡಿಸಿ ಉಳಿದೆಡೆ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ದೇಗುಲ ಪ್ರವೇಶಿಸುವವರಿಗೆ ಕಡ್ಡಾಯವಾಗಿ ಥರ್ಮಲ್ ಸ್ಕ್ಯಾನ್ ಮಾಡಬೇಕು. ಹೆಚ್ಚು ಉಷ್ಣತೆ ಕಂಡುಬಂದಲ್ಲಿ ದೇಗುಲಕ್ಕೆ ಪ್ರವೇಶ ನಿರಾಕರಿಸುವುದು. ಈ ಬಗ್ಗೆ ಗೋಡೆಗಳಲ್ಲಿ ಜಾಗೃತಿ ಫಲಕ ಹಾಕಬೇಕು. ಸರತಿ ಸಾಲುಗಳಲ್ಲೂ 1 ಮೀಟರ್ ಅಂತರ ಕಡ್ಡಾಯ, ಆಡಳಿತ ಮಂಡಳಿಗಳೇ ಮಾರ್ಕ್ ಮಾಡಬೇಕು ಎಂದು ಧಾರ್ಮಿಕ ದತ್ತಿ ಇಲಾಖೆ ಮಾರ್ಗಸೂಚಿ ನೀಡಿರುತ್ತದೆ.

ಆಧಾರ:ಉದಯವಾಣಿ, ದಿನಾಂಕ:31.05.2020

## 40. ಸಮಸ್ತ ಸ್ವಾಭಿಮಾನಿ ಭಾರತೀಯರಿಗೆ ಪ್ರಧಾನಿ ಮೋದಿ ಬಹಿರಂಗ ಪತ್ರ

ನಿತ್ಯ 16–18 ಗಂಟೆ ದೇಶಕ್ಕಾಗಿ ದುಡಿಮೆ, ವಿರಾಮದ ಜಪವಿಲ್ಲ, ಕೊಂಚವೂ ದಣಿಯದೆ ಪ್ರಚಂಡ ಉತ್ಸಾಹದಲ್ಲಿ 6 ವರ್ಷದಿಂದ ಭಾರತವನ್ನು ಮುನ್ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ 2.0 ಸರ್ಕಾರದ ಮೊದಲ ವರ್ಷ ಎಂದಿನಂತೆ ಇರಲಿಲ್ಲ. ಕೊರೊನಾದ ಸಂಕಷ್ಟಕ್ಕೆ ಸಿಲುಕಿರುವ ದೇಶವಾಸಿಗಳಿಗೆ ಚೈತನ್ಯ ತುಂಬಲು ಪ್ರಧಾನಿ ಮೋದಿ ದೇಶ ಬಾಂಧವರಿಗೆ ಅತ್ಯಾಪ್ತ ಪತ್ರ ಬರೆದಿದ್ದಾರೆ.

**ಕಳೆದ ವರ್ಷ ಈ ದಿನ (ಮೇ 30,2019)** : ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಸುವರ್ಣ ಅಧ್ಯಾಯ ಆರಂಭವಾಯಿತು. ಸಾಮಾನ್ಯ ದಿನಗಳಲ್ಲಿ ನಾನು ನಿಮ್ಮ ನಡುವೆ ಇದ್ದು, ಸರ್ಕಾರದ ಈ ವಾರ್ಷಿಕೋತ್ಸವವನ್ನು ಸಂಭ್ರಮಿಸುತ್ತಿದ್ದೆ. ಆದರೆ, ಕೊರೊನಾದ ಸಂದಿಗ್ಧತೆ ಅದಕ್ಕೀಗ ಅನುಮತಿಸುತ್ತಿಲ್ಲ. ಅದಕ್ಕಾಗಿ ಈ ಪತ್ರದ ಮೂಲಕ ನಿಮ್ಮ ಆಶೀರ್ವಾದ ಪಡೆಯುತ್ತಿದ್ದೇನೆ ಎಂದು ಆರಂಭದಲ್ಲೇ ಮೋದಿ, ತಾವು ಪತ್ರ ಬರೆಯಲು ಹಿಂದಿರುವ ಸಕಾರಣ ತಿಳಿಸಿದ್ದಾರೆ.

ಕೊರೊನಾ ವೈರಾಣು ದೇಶಕ್ಕೆ ದಾಳಿಗೈದಾಗ ಭಾರತ ನಲುಗಿ ಹೋಗುತ್ತೇ ಅಂತಲೇ ಹಲವರು ಊಹಿಸಿದ್ದರು. ಆದರೆ ವಿಶ್ವದ ಪ್ರಬಲ ಮತ್ತು ಸಮೃದ್ಧ ದೇಶಗಳಿಗೂ ಸಾಟಿ ಇಲ್ಲದಂತೆ, ಲಾಕ್‌ಡೌನ್ ನಿಯಮ ಪಾಲನೆಯಲ್ಲಿ 'ಏಕ ಭಾರತ ಶ್ರೇಷ್ಠ ಭಾರತ' ಪರಿಕಲ್ಪನೆಯನ್ನು ಎತ್ತಿಹಿಡಿದಿದ್ದೀರಿ. ಚಪ್ಪಾಳೆ ತಟ್ಟಿ, ದೀಪ ಬೆಳಗಿ ಕೊರೊನಾ ಯೋಧರನ್ನು ಗೌರವಿಸಿದ್ದೀರಿ' ಎಂದು ಶ್ಲಾಘಿಸಿದ್ದಾರೆ.

**ಮಿಡಿತ–ತುಡಿತ:–** ಇಷ್ಟು ದೊಡ್ಡ ಪ್ರಮಾಣದ ಬಿಕ್ಕಟ್ಟು ಎದುರಿಸುತ್ತಿರುವಾಗ ಅನಾನುಕೂಲತೆ ಸಂಭವಿಸಿಲ್ಲ ಎಂದು ಖಡಾಖಂಡಿತವಾಗಿ ಹೇಳಲಾರೆ. ನಮ್ಮ ಕಾರ್ಮಿಕರು, ವಲಸೆ ಕಾರ್ಮಿಕರು, ಸಣ್ಣ ಪ್ರಮಾಣದ ಕೈಗಾರಿಕೆಗಳ ಕುಶಲಜೀವಿಗಳು, ವ್ಯಾಪಾರಿಗಳು, ಅಲ್ಲದೆ ಇತರೆ ದೇಶವಾಸಿಗಳು ಭಾರೀ ದು:ಖಕ್ಕೆ ಗುರಿಯಾಗಿದ್ದಕ್ಕೆ ಖೇದವಿದೆ. ನಾವೆಲ್ಲರೂ ದುಡಿದು ಅವರ ಕಣ್ಣೀರು ಒರೆಸೋಣ. ಅದರ ಜೊತೆಯಲ್ಲೆ, ಕೊರೊನಾ ವಿಚಾರದಲ್ಲಿ

ಅಚ್ಚರಿಯ ಗೆಲುವು ಸಾಧಿಸಿದ ಮಾದರಿಯಲ್ಲೇ, ಆರ್ಥಿಕ ಪುನರುಜ್ಜೀವನದಲ್ಲೂ ವಿಶ್ವದ ಮುಂದೆ ಸೂಕ್ತ ಉದಾಹರಣೆಯಾಗಿ ಭಾರತವನ್ನು ನಿಲ್ಲಿಸೋಣ.

ಈ ಸಂದಿಗ್ಧ ಕಾಲಾವಧಿಯಲ್ಲಿ ನಾವು ಸ್ವಾವಲಂಬಿಗಳಾಗಲು, ಆತ್ಮನಿರ್ಭರ ಭಾರತ ಕಟ್ಟಲು ರೂ.20ಲಕ್ಷ ಕೋಟಿ ಪ್ಯಾಕೇಜ್ ಅನ್ನು ಮೀಸಲಿಡಲಾಗಿದೆ. ಇದು ಪ್ರತಿ ಭಾರತೀಯನ ಮುಂದೆ ಅವಕಾಶಗಳನ್ನು ತೆರೆದಿಟ್ಟು ಹೊಸಯುಗಕ್ಕೆ ನಾಂದಿ ಹಾಡಲಿದೆ. ರೈತರು, ಕಾರ್ಮಿಕರು, ಸಣ್ಣ ಉದ್ಯಮಿಗಳು ಅಥವಾ ಸ್ಟಾರ್ಟ್‌ಅಪ್‌ನ ಯುವಕರಿಗೂ ಇದರ ಪ್ರಯೋಜನ ದಕ್ಕಲಿದೆ. ಇದು ಆಮದು ತಗ್ಗಿಸಿ ಸ್ವಾವಲಂಬಿ ಭಾರತವನ್ನು ಸೃಷ್ಟಿಸುತ್ತದೆ.

ದೇಶದ ಸವಾಲುಗಳನ್ನು ಗೆಲ್ಲಲು ಹಗಲು–ರಾತ್ರಿ ದುಡಿಯುತ್ತಿದ್ದೇವೆ. ಒಂದು ಪಕ್ಷ ನನ್ನಲ್ಲಿ ನ್ಯೂನತೆಗಳು ಇರಬಹುದು; ಆದರೆ ದೇಶದಲ್ಲಿ ಯಾವುದೇ ಕೊರತೆಗಳೂ ಇಲ್ಲ. ನನ್ನ ಸಂಕಲ್ಪಕ್ಕೆ ಶಕ್ತಿಯ ಮೂಲವೆಂದರೆ ನೀವು, ನಿಮ್ಮ ಬೆಂಬಲ, ಆರ್ಶೀವಾದ ಮತ್ತು ನಿಮ್ಮ ಪ್ರೀತಿ. **'ಕೃತಂ ಮೆ ದಕ್ಷಿಣೆ ಹಸ್ತೆ, ಜಯೋ ಮೆ ಸತ್ಯ ಆಹಿತಃ'** ಎಂಬ ಮಾತುಂಟು. ಇದರರ್ಥ – 'ನಾವು ಒಂದು ಕಡೆ ಕ್ರಿಯೆ, ಕರ್ತವ್ಯದಲ್ಲಿ ಮುಳುಗಿದರೆ, ಮತ್ತೊಂದೆಡೆ ಯಶಸ್ಸು ಖಚಿತವಾಗುತ್ತದೆ.' ಎಂದು ನನ್ನ ದೇಶಕ್ಕಾಗಿ ಯಶಸ್ಸನ್ನು ಪ್ರಾರ್ಥಿಸುತ್ತಾ, ಮತ್ತೊಮ್ಮೆ ನಿಮಗೆ ನಮಸ್ಕರಿಸುತ್ತೇನೆ. 'ನಿಮಗೆ ನಿಮ್ಮ ಕುಟುಂಬಕ್ಕೆ ನನ್ನ ಹೃತ್ಪೂರ್ವಕ ಶುಭಾಷಯಗಳು' **ನಿಮ್ಮ ಪ್ರಧಾನ ಸೇವಕ–ನರೇಂದ್ರ ಮೋದಿ.**

**ಚಾರಿತ್ರಿಕ ಸಾಧನೆ ಉಲ್ಲೇಖ:–**

1. ಕಾಶ್ಮೀರದ 370ನೇ ವಿಧಿ ರಾಷ್ಟ್ರೀಯ ಏಕತೆ ಮತ್ತು ಏಕೀಕರಣದ ಮನೋಭಾವವನ್ನು ಹೆಚ್ಚಿಸಿದೆ.
2. ಸುಪ್ರೀಂಕೋರ್ಟ್‌ನ ಗೌರವಾನ್ವಿತ ತೀರ್ಪು, ಶತಮಾನಗಳ ರಾಮಮಂದಿರ ಸಮಸ್ಯೆಗೆ ಸೌಹಾರ್ದ ಅಂತ್ಯ ಕಲ್ಪಿಸಿದೆ.
3. ತ್ರಿವಳಿ ತಲಾಖ್ ಇತಿಹಾಸದ ನಿಷೇಧ.
4. ಪೌರತ್ವ ಕಾಯ್ದೆ ತಿದ್ದುಪಡಿ, ಭಾರತದ ಕಾರುಣ್ಯ ಮತ್ತು ಅಂತರ್ಗತ ಮನೋಭಾವದಭಿವ್ಯಕ್ತಿಯಾಗಿದೆ.
5. ರಕ್ಷಣಾ ಪಡೆಗಳ ಮುಖ್ಯಸ್ಥರ ಹುದ್ದೆ ರಚನೆ ಮೂರು ದಳಗಳೊಂದಿಗೆ ಸಮನ್ವಯತೆ ಸಾಧಿಸಿದೆ.
6. ಇಷ್ಟೆಲ್ಲಾ ಸವಾಲುಗಳ ನಡುವೆಯೂ ಭಾರತ 2022ರ 'ಮಿಷನ್ ಗಗನಯಾನ'ಕ್ಕೆ ಸಜ್ಜುಗೊಂಡಿದೆ.
7. ಪಿಎಂ ಕಿಸಾನ್ ಸಮ್ಮಾನ್ ನಿಧಿಯಡಿ ಒಂದು ವರ್ಷದಲ್ಲಿ ರೂ.72 ಕೋಟಿಗಳಿಗೂ ಅಧಿಕ ಹಣ ರೂ.9.50 ಕೋಟಿ ರೈತರ ಖಾತೆಗಳಿಗೆ ಜಮೆ.
8. ಜಲಜೀವನ್ ಮಿಷನ್ ಯೋಜನೆಯಡಿ ರೂ.15 ಕೋಟಿಗೂ ಅಧಿಕ ಗ್ರಾಮೀಣ ಕುಟುಂಬಗಳಿಗೆ ಪೈಪ್ ಮೂಲಕ ಶುದ್ಧ ಜಲ ವಿತರಣೆ ಗುರಿ.
9. ರೂ.50 ಕೋಟಿ ಜಾನುವಾರುಗಳ ಉತ್ತಮ ಆರೋಗ್ಯಕ್ಕಾಗಿ ಉಚಿತ ವ್ಯಾಕ್ಸಿನೇಷನ್ ನಡೆಸುವ ಬೃಹತ್ ಅಭಿಯಾನ ಚಾಲ್ತಿ.
10. ರೈತರು, ಕೃಷಿ ಕಾರ್ಮಿಕರು ಸೇರಿದಂತೆ ಅಸಂಘಟಿತ ವಲಯದ 60 ವರ್ಷ ದಾಟಿದ ಹಿರಿಯರಿಗೆ ಮಾಸಿಕ ರೂ.3 ಸಾವಿರಗಳ ಅನಿಯಮಿತ ಪಿಂಚಣಿಯ ಭರವಸೆ.
11. ಮೀನುಗಾರರಿಗೆ ಬ್ಯಾಂಕ್ ಸಾಲ ಸೌಲಭ್ಯ ಪಡೆಯುವ ಜೊತೆಗೆ, ಪ್ರತ್ಯೇಕ ಇಲಾಖೆ ರಚನೆ.
12. ವ್ಯಾಪಾರಿಗಳ ಸಮಸ್ಯೆಗಳನ್ನು ಪರಿಹರಿಸಲು 'ವ್ಯಾಪಾರಿ ಕಲ್ಯಾಣ್ ಮಂಡಳಿ' ಯನ್ನು ಸ್ಥಾಪಿಸಲು ನಿರ್ಧಾರ.
13. ಸ್ವಸಹಾಯ ಗುಂಪುಗಳ ರೂ.7 ಕೋಟಿಗೂ ಅಧಿಕ ಮಹಿಳೆಯರಿಗೆ ಹೆಚ್ಚಿನ ಆರ್ಥಿಕ ನೆರವು. ಸ್ವಸಹಾಯ ಸಂಘಗಳಿಗೆ ರೂ.10 ಲಕ್ಷ ಸಾಲದ ಮೊತ್ತ, ಈಗ ಗ್ಯಾರಂಟಿ ಇಲ್ಲದೆ ರೂ. 20 ಲಕ್ಷ ಏರಿಕೆ.
14. ಬುಡಕಟ್ಟು ಮಕ್ಕಳ ಶಿಕ್ಷಣವನ್ನು ಗಮನದಲ್ಲಿಟ್ಟುಕೊಂಡು, 400ಕ್ಕೂ ಅಧಿಕ ಹೊಸ ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ಮಾಣ ಆರಂಭ.

ಆಧಾರ:ಉದಯವಾಣಿ, ದಿನಾಂಕ: 31.05.2020

## 41. ಕೊರೋನಾ: ಭಾರತ ಈಗ ನಂ.7

ದೇಶದಲ್ಲಿ ಕೊರೋನಾ ಹಾವಳಿ ಮುಂದುವರಿದಿದ್ದು, 7870 ಮಂದಿಯಲ್ಲಿ ಸೋಂಕು ಕಂಡುಬಂದಿದೆ. ಇದರೊಂದಿಗೆ ಭಾರತದ ಒಟ್ಟಾರೆ ಸೋಂಕಿತರ ಸಂಖ್ಯೆ 1,84,662ಕ್ಕೆ ಏರಿಕೆಯಾಗಿದೆ. ವಿಶ್ವದ ಟಾಪ್ 10 ಕೊರೋನಾ ಪೀಡಿತ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು 2 ಸ್ಥಾನ ಜಿಗಿದು 7ನೇ ಸ್ಥಾನಕ್ಕೇರಿಕೆಯಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಕೊರೋನಾ ವರ್ಲ್ಡೋಮೀಟರ್ಸ್ ವೆಬ್‌ಸೈಟ್ ತಿಳಿಸಿವೆ. ಈ ನಡುವೆ, 223 ಮಂದಿ ಕೊರೋನಾದಿಂದ ಬಲಿಯಾಗಿದ್ದು, ಮೃತರ ಸಂಖ್ಯೆ 5323ಕ್ಕೇರಿದೆ. ದಾಖಲೆಯ 8400 ಮಂದಿಗೆ ಸೋಂಕು ಕಂಡುಬಂದಿತ್ತು. ದಾಖಲೆಯ 316 ಜನ ಸಾವಿಗೀಡಾಗಿದ್ದರು. ಅದಕ್ಕೆ ಹೋಲಿಸಿದರೆ ಹಿಂದಿನ ಸಂಖ್ಯೆ ಕಡಿಮೆ ಇದೆ. ಲಾಕ್‌ಡೌನ್ ಜಾರಿಯಲ್ಲಿದ್ದಾಗ ಕಡಿಮೆ ಇದ್ದ ಸೋಂಕಿನ ಪ್ರಮಾಣ ಈಗ ಅಧಿಕವಾಗಿದೆ.

| ಭಾರತ ರ್‍ಯಾಂಕ್ ಏರುಗತಿ | | | |
|---|---|---|---|
| **ದಿನಾಂಕ** | **ಸ್ಥಾನ** | **ಪ್ರಕರಣ** | **ಸಾವು** |
| **ಜ.30** | 19 | 01 | 1 |
| **ಮಾ.20** | 50 | 194 | 4 |
| **ಮಾ.31** | 40 | 1251 | 27 |
| **ಏ.5** | 30 | 3082 | 86 |
| **ಏ.8** | 25 | 5360 | 164 |
| **ಏ.15** | 20 | 11555 | 396 |
| **ಮೇ.4** | 15 | 42670 | 1395 |
| **ಮೇ.25** | 10 | 141794 | 4078 |
| **ಮೇ.29** | 9 | 160666 | 4633 |
| **ಮೇ.31** | 7 | 184662 | 5323 |

| ಟಾಪ್ 10 ದೇಶಗಳು (ವರ್ಲ್ಡೋಮೀಟರ್ಸ್ ಪ್ರಕಾರ) | | | |
|---|---|---|---|
| **ರ್‍ಯಾಂಕ್** | **ದೇಶ** | **ಸೋಂಕು** | **ಸಾವು** |
| 1 | ಅಮೆರಿಕ | 18,26,160 | 1,05,873 |
| 2 | ಬ್ರೆಜಿಲ್ | 5,01,985, | 28,872 |
| 3 | ರಷ್ಯಾ | 4,05,843 | 4,693 |
| 4 | ಸ್ಪೇನ್ | 2,86,308 | 27,125 |
| 5 | ಬ್ರಿಟನ್ | 2,74,762 | 38,489 |
| 6 | ಇಟಲಿ | 2,33,765 | 33,415 |
| 7 | ಭಾರತ | 1,90,536 | 5406 |
| 8 | ಫ್ರಾನ್ಸ್ | 1,88,625 | 28,771 |
| 9 | ಜರ್ಮನಿ | 1,83,426 | 8,602 |
| 10 | ಟರ್ಕಿ | 1,63,103 | 4540 |

ಆಧಾರ:ಕನ್ನಡಪ್ರಭ, ದಿನಾಂಕ: 01.06.2020

### 42. ಆನೆ ಹತ್ಯೆ: ಕೇಂದ್ರದಿಂದಲೇ ತನಿಖೆ

ಕೇರಳದಲ್ಲಿ ಪಟಾಕಿ ತುಂಬಿದ ಅನಾನಸ್ಸು ಹಣ್ಣನ್ನು ತಿನ್ನಲು ಕೊಟ್ಟು ಗರ್ಭಿಣಿ ಆನೆಯನ್ನು ಕೊಂದ ಘಟನೆಗೆ ರಾಷ್ಟ್ರವ್ಯಾಪಿ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ಈ ಪ್ರಕರಣವನ್ನು ಕೇಂದ್ರ ಸರ್ಕಾರವೇ ತನಿಖೆ ನಡೆಸಲಿದೆ ಎಂದು ಅರಣ್ಯ ಸಚಿವ ಪ್ರಕಾಶ್ ಜಾವಡೇಕರ್ ಘೋಷಿಸಿದ್ದಾರೆ. ಆನೆಯ ಹತ್ಯೆ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಈ ಕುರಿತು ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರನ್ನು ಬಂಧಿಸುತ್ತೇವೆ. ಪಟಾಕಿಯನ್ನು ತಿನ್ನಿಸಿ ಕೊಲ್ಲುವುದು ಭಾರತದ ಸಂಸ್ಕೃತಿಯಲ್ಲ ಎಂದು ಸಚಿವರು ಖಾರವಾಗಿ ಟ್ವೀಟ್ ಮಾಡಿದ್ದಾರೆ.

ಇದೇ ವೇಳೆ ಪ್ರಕರಣ ಸಂಬಂಧ ಒಬ್ಬ ವ್ಯಕ್ತಿಯನ್ನು ಕೇರಳ ಅರಣ್ಯ ಇಲಾಖೆ ವಶಕ್ಕೆ ಪಡೆದು ವಿಚಾರಣೆ ಆರಂಭಿಸಿದೆ. ಎಲ್ಲರೂ ಅಂದುಕೊಂಡಂತೆ ಗರ್ಭಿಣಿ ಆನೆಯು ಪಟಾಕಿ ತುಂಬಿದ ಅನಾನಸ್ಸು ತಿಂದು ಸತ್ತಿಲ್ಲ. ಸ್ಥಳೀಯ ರೈತರು ಕಾಡುಹಂದಿ ಓಡಿಸಲೆಂದು ಇಟ್ಟಿದ್ದ ಬೆಲ್ಲ ಮಿಶ್ರಿತ ಪಟಾಕಿ ತಿಂದು ಮೃತಪಟ್ಟಿರಬಹುದು ಎಂದು ಅರಣ್ಯ ಅಧಿಕಾರಿಗಳು ಅಂದಾಜಿಸಿದ್ದಾರೆ. ಅನಾನಸ್ಸು ತಿಂದು ಸತ್ತಿರಬಹುದು ಎಂಬ ವಾದವನ್ನು ಪುಷ್ಟೀಕರಿಸುವಂಥ ಯಾವ ಪುರಾವೆಯೂ ಲಭ್ಯವಾಗಿಲ್ಲ, ಆ ವಾದವನ್ನು ತಿರಸ್ಕರಿಸಲೂ ಆಗದು ಎಂದು ಅರಣ್ಯ ಸಂರಕ್ಷಣಾಧಿಕಾರಿ ಸುರೇಂದ್ರ ಕುಮಾರ್ ಹೇಳಿದ್ದಾರೆ. ಇದೇ ವೇಳೆ, ಕೇರಳ ಸಿಎಂ ಪಿಣರಾಯಿ ವಿಜಯನ್ ಅವರು, ಆನೆಯ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಘೋಷಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ: 05.06.2020

### 43. 11788 ಸೋಂಕು, 389 ಸಾವು

ದೇಶದಾದ್ಯಂತ ದಾಖಲೆ ಪ್ರಮಾಣದಲ್ಲಿ ಹೊಸ ಕೊರೊನಾ ಸೋಂಕು ಮತ್ತು ಸಾವು ದಾಖಲಾಗಿದೆ. ಜೂನ್ 10 ರಂದು 11788 ಹೊಸ ಪ್ರಕರಣ ದಾಖಲಾಗುವುದರ ಮೂಲಕ ಒಟ್ಟು ಸೋಂಕಿತರ ಸಂಖ್ಯೆ 277286ಕ್ಕೆ ತಲುಪಿದೆ. ಮತ್ತೊಂದೆಡೆ 389 ಜನ ಸಾವನ್ನಪ್ಪುವುದರೊಂದಿಗೆ ಒಟ್ಟು ಸಾವಿನ ಪ್ರಮಾಣ 8099ಕ್ಕೆ ತಲುಪಿದೆ. ಇನ್ನು 6938 ಜನರು ಗುಣಮುಖರಾಗಿದ್ದು, ಒಟ್ಟು ಚೇತರಿಕೆಯಾದವರ ಸಂಖ್ಯೆ 140205ಕ್ಕೆ ತಲುಪಿದೆ.

ಈ ನಡುವೆ ಮಹಾಮಾರಿ ಕೊರೋನಾದಿಂದ ಅಕ್ಷರಶ: ಕಂಗಾಲಾಗಿರುವ ಮಹಾರಾಷ್ಟ್ರದಲ್ಲಿ ಮತ್ತೆ 3254 ಹೊಸದಾಗಿ ಸೋಂಕಿಗೆ ತುತ್ತಾಗಿದ್ದಾರೆ. ಇದರೊಂದಿಗೆ ಮಹಾರಾಷ್ಟ್ರದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 94,041ಕ್ಕೆ ಏರಿಕೆಯಾಗಿದೆ. ಒಂದೇ ದಿನ 149 ಮಂದಿ ಸಾವನ್ನಪ್ಪಿದ್ದು, ಈ ವ್ಯಾಧಿಗೆ ಮಹಾರಾಷ್ಟ್ರದಲ್ಲಿ ಈವರೆಗೆ 3438 ಮಂದಿ ಬಲಿಯಾದಂತಾಗಿದೆ.

**10 ದಿನದಲ್ಲಿ 90000 ಕೇಸು:–** ಜೂನ್ ತಿಂಗಳ ಮೊದಲ 10 ದಿನದಲ್ಲಿ ದೇಶದಲ್ಲಿ ಭರ್ಜರಿ 90000 ಹೊಸ ಕೊರೋನಾ ಪ್ರಕರಣ ದಾಖಲಾಗಿದೆ. ದೇಶದಲ್ಲಿ ಜನವರಿ 30ರಂದು ಮೊದಲ ಪ್ರಕರಣ ಪತ್ತೆಯಾಗಿತ್ತು. ಅದಾದ 100ಕ್ಕೂ ಹೆಚ್ಚು ಅವಧಿ ಅಂದರೆ ಮೇ 18ಕ್ಕೆ ಒಟ್ಟು ಸೋಂಕಿತರ ಸಂಖ್ಯೆ 1 ಲಕ್ಷ ತಲುಪಿತ್ತು. ಬಳಿಕದ 1 ಲಕ್ಷದ ಗಡಿ ದಾಟಲು ಕೇವಲ 15 ದಿನ ತೆಗೆದುಕೊಂಡಿತ್ತು. ಕೇವಲ 10 ದಿನದಲ್ಲೇ 90000 ಕೇಸು ಪತ್ತೆಯಾಗಿದ್ದು, 13 ದಿನದಲ್ಲಿ ಒಟ್ಟು ಸೋಂಕಿತರ ಸಂಖ್ಯೆ 3 ಲಕ್ಷದ ಗಡಿದಾಟುವ ಸಾಧ್ಯತೆ ಇದೆಯೆಂದು ತಿಳಿಸಲಾಗಿದೆ.

| ರಾಜ್ಯವಾರು ಕೊರೋನಾ ಪ್ರಕರಣ ಸಾವು | | |
|---|---|---|
| **ರಾಜ್ಯ** | **ಸೋಂಕು** | **ಸಾವು** |
| ಮಹಾರಾಷ್ಟ್ರ | 94041 | 3438 |
| ತಮಿಳುನಾಡು | 36841 | 326 |
| ದೆಹಲಿ | 32810 | 984 |
| ಗುಜರಾತ್ | 21554 | 1347 |
| ಉತ್ತರ ಪ್ರದೇಶ | 11610 | 321 |
| ರಾಜಸ್ಥಾನ | 11600 | 259 |

| ರಾಜ್ಯವಾರು ಕೊರೋನಾ ಪ್ರಕರಣ ಸಾವು | | |
|---|---|---|
| **ರಾಜ್ಯ** | **ಸೋಂಕು** | **ಸಾವು** |
| ಮಧ್ಯಪ್ರದೇಶ | 10049 | 427 |
| ಪಶ್ಚಿಮ ಬಂಗಾಳ | 9328 | 432 |
| ಕರ್ನಾಟಕ | 6041 | 71 |
| ಬಿಹಾರ | 5698 | 34 |
| ಹರಿಯಾಣ | 5579 | 52 |
| ಆಂಧ್ರ ಪ್ರದೇಶ | 5247 | 78 |
| ಜಮ್ಮು-ಕಾಶ್ಮೀರ | 4507 | 51 |
| ತೆಲಂಗಾಣ | 3920 | 148 |
| ಒಡಿಶಾ | 3250 | 09 |
| ಅಸ್ಸಾಂ | 3092 | 05 |
| ಪಂಜಾಬ್ | 2805 | 55 |
| ಕೇರಳ | 2160 | 17 |
| ಉತ್ತರಾಖಂಡ್ | 1560 | 15 |
| ಜಾರ್ಖಂಡ್ | 1416 | 08 |
| ಛತ್ತೀಸ್‌ಗಢ | 1211 | 05 |
| ತ್ರಿಪುರ | 867 | 01 |
| ಹಿಮಾಚಲ ಪ್ರದೇಶ | 451 | 07 |
| ಗೋವಾ | 387 | 00 |
| ಚಂಡೀಗಢ | 328 | 05 |
| ಮಣಿಪುರ | 311 | 00 |
| ಪುದುಚೇರಿ | 145 | 02 |
| ನಾಗಾಲ್ಯಾಂಡ್ | 128 | 00 |
| ಲಡಾಖ್ | 108 | 01 |
| ಮಿಜೋರಾಂ | 93 | 00 |
| ಅರುಣಾಚಲ | 57 | 00 |
| ಮೇಘಾಲಯ | 44 | 01 |
| ಅಂಡಮಾನ್ | 35 | 00 |
| ನಗರ್ ಹವೇಲಿ | 22 | 00 |
| ಸಿಕ್ಕಿಂ | 7 | 00 |
| **ಒಟ್ಟು ಗುಣಮುಖ-140205** | | |

ಆಧಾರ:ಕನ್ನಡ ಪ್ರಭ, ದಿನಾಂಕ:11.06.2020

### 44. ಕೇಂದ್ರ ಗೃಹ ಸಚಿವಾಲಯದಿಂದ ರಾಜ್ಯ ಸರ್ಕಾರಗಳಿಗೆ ಕಟ್ಟುನಿಟ್ಟಿನ ನಿರ್ದೇಶನ

ಲಾಕ್‌ಡೌನ್ ತೆರವು ಮಾರ್ಗಸೂಚಿ ಅನ್ವಯ ಸೂಚಿಸಲಾಗಿರುವ ರಾತ್ರಿ 9ರಿಂದ ಮುಂಜಾನೆ 5ರವರೆಗಿನ ಅವಧಿಯಲ್ಲಿ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಜನ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಸೂಚನೆ ನೀಡಿದೆ.

"ರಾತ್ರಿ 9ರಿಂದ ಮುಂಜಾನೆ 5ರವರೆಗಿನ ಜನರ ಸಂಚಾರಕ್ಕೆ ನಿರ್ಬಂಧ ವಿಧಿಸಿರುವ ಉದ್ದೇಶ ಸಾಮಾಜಿಕ ಅಂತರ ಕಾಯ್ದುಕೊಳ್ಳುವಿಕೆ ಮತ್ತು ಜನಸಂದಣಿ ತಡೆಯುವುದಾಗಿದೆ. ಇದನ್ನು ಸರ್ಕಾರಗಳು ಅರ್ಥ ಮಾಡಿಕೊಳ್ಳಬೇಕು" ಎಂದು ಕೇಂದ್ರ ಗೃಹ ಸಚಿವಾಲಯ ಕಾರ್ಯದರ್ಶಿ ಅಜಯ್ ಭಲ್ಲಾ ಅವರು ರಾಜ್ಯಗಳಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಸಂಚಾರ ನಿರ್ಬಂಧ ಜಾರಿ ನೆಪದಲ್ಲಿ ಅಗತ್ಯ ಸೇವೆಗಳಿಗೆ ಅಡ್ಡಿಪಡಿಸಬಾರದು. ಸರಕುಗಳ ಲೋಡಿಂಗ್ ಮತ್ತು ಅನ್ ಲೋಡಿಂಗ್, ರಾಜ್ಯ–ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಸ್, ಟ್ರಕ್‌ಗಳ ಸಂಚಾರ ಮತ್ತು ರೈಲು, ವಿಮಾನಗಳಿಂದ ಇಳಿದು ಮನೆ ತಲುಪುವವರೆಗೆ ನಿರ್ಬಂಧ ಅನ್ವಯಿಸುವುದಿಲ್ಲ. ಆದರೆ ಅನಗತ್ಯವಾಗಿ ಸಂಚರಿಸುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ. ಮೇ 30ರಂದು ಹೊರಡಿಸಲಾಗಿರುವ ಮಾರ್ಗಸೂಚಿಗಳನ್ನು ಸರಿಯಾಗಿ ಅರಿತುಕೊಳ್ಳುವಂತೆಯೂ ಭಲ್ಲಾ ಸೂಚಿಸಿದ್ದಾರೆ.

**10,956 ಹೊಸ ಸೋಂಕಿತರು:** ದೇಶದಲ್ಲಿ ಹೊಸ ಸೋಂಕಿತರ ಸಂಖ್ಯೆ ಹತ್ತು ಸಾವಿರದ ಗಡಿ ದಾಟಿ ದಾಖಲೆ ಬರೆದಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಮಾಹಿತಿಯಂತೆ 24 ಗಂಟೆಗಳ ಅವಧಿಯಲ್ಲಿ 10,956 ಹೊಸ ಪ್ರಕರಣಗಳು ಪತ್ತೆಯಾಗಿದೆ. ಇದೇ ಅವಧಿಯಲ್ಲಿ 396 ಮಂದಿ ಸೋಂಕಿಗೆ ಬಲಿಯಾಗಿದ್ದಾರೆ. ವರದಿಯಂತೆ ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ 3 ಲಕ್ಷ ದಾಟಿದೆ. ಆ ಪೈಕಿ 1.49 ಲಕ್ಷ ಮಂದಿ ಗುಣಮುಖರಾಗಿದ್ದು, 1.43 ಲಕ್ಷ ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ಸೋಂಕಿತರ ಸಂಖ್ಯೆ ಒಂದು ಲಕ್ಷ ದಾಟಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ: 13.06.2020

### 45. ಲೇಟ್ ರಿಟರ್ನ್ಸ್ ಫೀನಿಂದ ವಿನಾಯ್ತಿ

ಕಳೆದ 3 ವರ್ಷಗಳಿಂದಲೂ ಜಿಎಸ್‌ಟಿ ಪಾವತಿಸದ ಉದ್ಯಮಗಳಿಗೆ ಕೇಂದ್ರ ಸರ್ಕಾರ ರಿಲೀಫ್ ನೀಡಿದೆ. ಅಂದರೆ, 2017ರ ಜುಲೈನಿಂದ 2020 ಜನವರಿ ಅವಧಿಯಲ್ಲಿ ಯಾರು ರಿಟರ್ನ್ಸ್ ಸಲ್ಲಿಕೆ ಮಾಡಿಲ್ಲವೋ ಅವರು, ಇದೇ ಜುಲೈ 1ರಿಂದ ಆರಂಭಗೊಂಡು ಆಗಸ್ಟ್ 30ರ ಅವಧಿಯಲ್ಲಿ ರಿಟರ್ನ್ಸ್ ಸಲ್ಲಿಸಬಹುದಾಗಿದೆ. ಇವರಿಗೆ ಲೇಟ್ ರಿಟರ್ನ್ಸ್ ಫೀನಿಂದ ವಿನಾಯ್ತಿ ನೀಡಲಾಗುತ್ತದೆ ಬಾಕಿ ತೆರಿಗೆ ಮೇಲಿನ ಬಡ್ಡಿಯನ್ನೂ ಮನ್ನಾ ಮಾಡಲಾಗುತ್ತದೆ ಎಂದು  ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಕೇಂದ್ರ ವಿತ್ತ ಸಚಿವೆ ಅವರ ನೇತೃತ್ವದಲ್ಲಿ ನಡೆದ ಜಿಎಸ್‌ಟಿ 40ನೇ ಸಭೆಯಲ್ಲಿ ಈ ಕುರಿತಂತೆ ನಿರ್ಧಾರ ಕೈಗೊಳ್ಳಲಾಗಿದೆ. ಕೆಲವು ವಸ್ತುಗಳ ಮೇಲಿನ ಜಿಎಸ್‌ಟಿ ಏರಿಕೆ ಮಾಡುವ ಪ್ರಸ್ತಾಪವನ್ನು ಮುಂದೂಡಿಕೆ ಮಾಡಲಾಗಿದೆ. 'ಜಿಎಸ್‌ಟಿಆರ್–3ಬಿ' ಅರ್ಜಿಯ ಮೂಲಕ ರಿಟರ್ನ್ಸ್ ಸಲ್ಲಿಸದವರಿಗೆ ವಿಧಿಸುವ ದಂಡವನ್ನು ರೂ.500ಗಳಿಗೆ ಮಿತಿಗೊಳಿಸಲಾಗಿದೆ.

**ದಂಡ ಪ್ರಮಾಣ ಇಳಿಕೆ:** ಇನ್ನು ತೆರಿಗೆ ಸಲ್ಲಿಸದಿರುವ ವಾರ್ಷಿಕ ರೂ.5 ಕೋಟಿ ವಹಿವಾಟು ನಡೆಸುವ ಕಂಪೆನಿಗಳಿಗೂ ಹೊಸ ಅವಕಾಶ ಕಲ್ಪಿಸಲಾಗಿದೆ. ಫೆಬ್ರವರಿ, ಮಾರ್ಚ್, ಏಪ್ರಿಲ್‌ನಲ್ಲಿ ತೆರಿಗೆ ರಿಟರ್ನ್ಸ್ ಸಲ್ಲಿಸದೇ ಇರುವ ಈ ಕಂಪೆನಿಗಳು ಸೆಪ್ಟೆಂಬರ್ 30ರೊಳಗೆ ರಿಟರ್ನ್ಸ್ ಸಲ್ಲಿಸಿದರೆ ಅವುಗಳ ಮೇಲೆ ಯಾವಾಗಲೂ ದಂಡ ವಿಧಿಸಲಾಗುತ್ತಿದ್ದ 'ಲೇಟ್ ರಿಟರ್ನ್ಸ್' ದಂಡವನ್ನು ಶೇ.18ರಿಂದ ಶೇ.9ಕ್ಕೆ ಇಳಿಸಲಾಗಿದೆ. ಮತ್ತೊಂದೆಡೆ ಜುಲೈ 31ರವರೆಗೆ ರದ್ದಾಗಿದ್ದ ಜಿಎಸ್‌ಟಿ ನೋಂದಣಿಗಳ ರಿಜಿಸ್ಟ್ರೇಷನ್ ಮರುಚಾಲನೆ ನೀಡಲಾಗಿದ್ದು, ಆ ಕುರಿತಾಗಿ ಅರ್ಜಿ ಸಲ್ಲಿಸುವವರಿಗೆ ಸೆಪ್ಟೆಂಬರ್ 30ರವರೆಗೆ ಕಾಲಾವಕಾಶ ನೀಡಲಾಗಿದೆ.

**ಜಿಎಸ್‌ಟಿ ಪರಿಹಾರ ಧನ:** ಈ ನಡುವೆ ಲಾಕ್‌ಡೌನ್‌ನಿಂದಾಗಿ ಜಿಎಸ್‌ಟಿ ಆದಾಯ ಗಣನೀಯವಾಗಿ ಇಳಿಕೆಯಾಗಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಗಳಿಗೆ ಮರು ವಿತರಣೆಯಾಗಬೇಕಿರುವ ಜಿಎಸ್‌ಟಿ

ಪರಿಹಾರ ಧನದ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಜುಲೈನಲ್ಲಿ ಪ್ರತ್ಯೇಕವಾಗಿ ಜಿಎಸ್‌ಟಿ ಮಂಡಳಿ ಸಭೆ ನಡೆಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವೆ ತಿಳಿಸಿರುತ್ತಾರೆ.

ಆಧಾರ:ಉದಯವಾಣಿ, ದಿನಾಂಕ: 13.06.2020

## 46. ಮಾಸ್ಕ್, ಸಾಮಾಜಿಕ ಅಂತರ ಕಡ್ಡಾಯಕ್ಕೆ ಪ್ರಧಾನಿ ಸಲಹೆ

ಮನೆಯಿಂದ ಯಾರೂ ಮಾಸ್ಕ್ ಧರಿಸದೇ ಹೊರಹೋಗದಂತೆ ಎಚ್ಚರಿಕೆ ವಹಿಸಿ, ಎಲ್ಲಾ ರಾಜ್ಯಗಳಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಯಮ ಕಟ್ಟುನಿಟ್ಟಾಗಿ ಜಾರಿಯಲ್ಲಿರಲಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿಗಳಿಗೆ ಸಲಹೆ ನೀಡಿದರು.

ವಿಡಿಯೋ ಕಾನ್ಫರೆನ್ಸ್ ಮೂಲಕ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಮುಖ್ಯಸ್ಥರ ಜೊತೆ ಸಮಾಲೋಚನೆ ನಡೆಸಿದ ಪ್ರಧಾನಿ, ಕೊರೊನಾ ನಿಯಂತ್ರಣದ ಮುನ್ನೆಚ್ಚರಿಕೆಗಳನ್ನು ಚಾಚೂತಪ್ಪದೆ ಪಾಲಿಸಲು ಸೂಚಿಸಿದರು. ಪಂಜಾಬ್, ಕೇರಳ, ಗೋವಾ, ಉತ್ತರಾಖಂಡ, ಜಾರ್ಖಂಡ್ ಮತ್ತು ಈಶಾನ್ಯ ರಾಜ್ಯಗಳು ಸೇರಿದಂತೆ 21 ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು. ಕೊರೊನಾ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಪ್ರಧಾನಿಯವರು ಮುಖ್ಯಮಂತ್ರಿಗಳ ಜೊತೆ ಸಮಾಲೋಚನೆ ನಡೆಸಿರುವುದು ಇದು ಆರನೇ ಬಾರಿ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸಿದ ಮುನ್ನೆಚ್ಚರಿಕೆ ಕ್ರಮಗಳಿಂದಾಗಿ ದೇಶದ ರೆಡ್‌ಸ್ಪಾಟ್‌ಗಳು ಹಲವೆಡೆ ಹಸಿರಾಗಿ ಪರಿವರ್ತನೆಗೊಳ್ಳುತ್ತಿವೆ. ದೇಶದಲ್ಲಿ ಸೋಂಕಿತರು ಗುಣ ಹೊಂದುವ ಪ್ರಮಾಣ ಶೇ.50 ದಾಟಿದೆ. ಬಹುತೇಕ ರಾಜ್ಯಗಳಲ್ಲಿ ಎಲ್ಲಾ ರೀತಿಯ ಸಾರಿಗೆಗಳು ಕಾರ್ಯನಿರ್ವಹಿಸುತ್ತಿದ್ದು, ವಲಸೆ ಕಾರ್ಮಿಕರು ತಮ್ಮ ಗ್ರಾಮಗಳಿಗೆ ಮರಳಿದ್ದಾರೆ. ಕೊರೊನಾದಿಂದ ಅತಿಕಡಿಮೆ ಜನರು ಮೃತಪಟ್ಟಿರುವ ದೇಶಗಳ ಪೈಕಿ ಭಾರತ ಕೂಡ ಒಂದಾಗಿರುವುದು ಸಮಾಧಾನಕರ ಸಂಗತಿ ಆಗಿದೆ ಎಂದು ಮೋದಿ ಅಭಿಪ್ರಾಯಪಟ್ಟರು.

"ಅನ್‌ಲಾಕ್ 1.0 ಜಾರಿಯಾಗಿ ಎರಡು ವಾರಗಳು ಕಳೆದಿದೆ. ಇನ್ನು ಮುಂದಿನ ಕಾರ್ಯತಂತ್ರಗಳ ಬಗ್ಗೆ ನೀವು ನೀಡುವ ಸಲಹೆಗಳನ್ನು ನಾನು ದೇಶದಲ್ಲಿನ ವಾಸ್ತವ ಪರಿಸ್ಥಿತಿ ಎಂದು ತಿಳಿಯುವೆ. ದೇಶದ ಆರ್ಥಿಕತೆಯಲ್ಲಿ ಚೇತರಿಕೆ ಲಕ್ಷಣಗಳು ಈಗಾಗಲೇ ಗೋಚರಿಸುತ್ತಿವೆ" ಎಂದು ಪ್ರಧಾನಿ ಹೇಳಿದರು.

ಆಧಾರ:ವಿಜಯಕರ್ನಾಟಕ, ದಿನಾಂಕ: 17.06.2020

## 47. ಚೀನಾ ಗಡಿಯಲ್ಲಿ ಯುದ್ಧ ಭೀತಿ

ಪೂರ್ವ ಲಡಾಖ್‌ನ ಗಲ್ವಾನ್ ಕಣಿವೆಯಲ್ಲಿ ಸಂಘರ್ಷ ಸಂಭವಿಸಿ 20 ಭಾರತೀಯ ಯೋಧರು ಹುತಾತ್ಮರಾದ ಬೆನ್ನಲ್ಲೇ ಭಾರತ–ಚೀನಾ ಗಡಿಯಲ್ಲಿ ಯುದ್ಧ ರೀತಿಯ ರೋಷಾವೇಶ ಕಂಡುಬರುತ್ತಿದೆ. ಉಭಯ ದೇಶಗಳು ಸಹಸ್ರಾರು ಯೋಧರನ್ನು ಗಡಿಯಲ್ಲಿ ನಿಯೋಜನೆ ಮಾಡಿರುವುದು ಆತಂಕಕ್ಕೆ ಕಾರಣವಾಗಿದೆ. ಘಟನೆ ಹಿನ್ನೆಲೆಯಲ್ಲಿ ಇಡೀ ಲಡಾಖ್ ಕಣಿವೆಯಲ್ಲಿ ಭಾರತೀಯ ಸೇನೆ ಭಾರೀ ಕಟ್ಟೆಚ್ಚರ ವಹಿಸಿದೆ. ಲೇಹ್‌ನ ಕೋರ್‌ಕಮಾಂಡರ್ ಪ್ರತಿ ಗಂಟೆಗೊಮ್ಮೆ ಪರಿಸ್ಥಿತಿಯ ಕುರಿತು ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸುತ್ತಿದ್ದಾರೆ. ಲಡಾಖ್‌ನಿಂದ ಅರುಣಾಚಲ ಪ್ರದೇಶದವರೆಗಿನ 3488 ಕಿ.ಮೀ. ಉದ್ದದ ಗಡಿಗುಂಟ ಯುದ್ಧ ಅಲರ್ಟ್ ಅನ್ನು ಭಾರತ ಘೋಷಿಸಿದೆ.

ಗಲ್ವಾನ್ ಕಣಿವೆ, ದೌಲತ್ ಬೇಗ್ ಓಲ್ಡಿ, ದೆಪ್ಸಾಂಗ್, ಚೂಸೂಲ್‌ನಂತಹ ಲಡಾಖ್ ಭೂಭಾಗಗಳು ಸೇರಿದಂತೆ ಗಡಿಯುದ್ದಕ್ಕೂ ಚೀನಾ ಸಹಸ್ರಾರು ಯೋಧರನ್ನು ಹಾಗೂ ದೈತ್ಯ ಯಂತ್ರೋಪಕರಣಗಳನ್ನು ಮರು ನಿಯೋಜನೆ ಮಾಡಿದೆ. ಇದಕ್ಕೆ ತಿರುಗೇಟು ನೀಡಿರುವ ಭಾರತ, ಲಡಾಖ್‌ನ ಗಡಿಯ ಮುಂಚೂಣಿ ಪ್ರದೇಶವೊಂದರಲ್ಲೇ 15 ಸಾವಿರ ಯೋಧರನ್ನು ರವಾನಿಸಿದೆ. ಗಡಿಯಲ್ಲಿ ಪಹರೆ ಕಾಯುವ ಈ ಯೋಧರ ಹಿಂದೆ ಭಾರಿ ಪ್ರಮಾಣದಲ್ಲಿ ಸೇನೆಯನ್ನು ಯುದ್ಧಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆ. ಏನೇ ಅಹಿತಕರ ಘಟನೆಗಳು ನಡೆದರೂ ಸೇನಾಪಡೆ ತೀಕ್ಷ್ಣ ತಿರುಗೇಟು ನೀಡಲು ಎಲ್ಲಾ ಸಿದ್ಧತೆ ಮಾಡಿಕೊಂಡಿದೆ. ಇದಲ್ಲದೇ ಅರುಣಾಚಲ ಪ್ರದೇಶದವರೆಗೂ ಯೋಧರನ್ನು ಜಮಾವಣೆ ಮಾಡಿದೆ.

ಗಡಿಯಲ್ಲಿ ಶಾಂತಿ ಕಾಪಾಡಲು ಪೂರ್ವ ಲಡಾಖ್‌ನ ನೈಜ ಗಡಿ ನಿಯಂತ್ರಣ ರೇಖೆ (ಎಲ್‌ಎಸಿ)ಯಿಂದ ಎರಡೂ ದೇಶಗಳ ಸೈನಿಕರು ಹಿಂದೆ ಸರಿಯಬೇಕು ಎಂದು ಉಭಯ ದೇಶಗಳ ನಡುವೆ ಮಾತುಕತೆ

ನಡೆಯುತ್ತಿತ್ತು. ಈ ವೇಳೆಯಲ್ಲೇ ಚೀನಾ ದಾಳಿ ನಡೆಸಿರುವುದರಿಂದ ಗಡಿಯಿಂದ ಹಿಂದೆ ಸರಿಯದಿರಲೂ ಭಾರತ ನಿರ್ಧರಿಸಿದೆ ಎನ್ನಲಾಗಿದೆ. 3488 ಕಿ.ಮೀ. ಉದ್ದದ ಎಲ್‌ಎಸಿಯಲ್ಲಿ ಸೈನಿಕರು ಶಸ್ತ್ರಾಸ್ತ್ರಗಳನ್ನು ಹಿಡಿದು ಗಡಿ ಕಾಯುವಂತಿಲ್ಲ ಎಂದು ಉಭಯ ದೇಶಗಳ ನಡುವೆ ಹಳೆಯ ಒಪ್ಪಂದವಿದೆ. ಚೀನಾ ಈ ಒಪ್ಪಂದ ಉಲ್ಲಂಘಿಸಿ ಗನ್ ಹಾಗೂ ಚಾಕು ಹಿಡಿದು ಭಾರತೀಯ ಸೈನಿಕರ ಮೇಲೆ ದಾಳಿ ನಡೆಸಿದೆ. ಶಸ್ತ್ರಾಸ್ತ್ರ ಬಳಸುವಂತಿಲ್ಲ ಎಂಬ ನೀತಿಯನ್ನೂ ಮರುಪರಿಶೀಲನೆ ನಡೆಸಲೂ ಭಾರತ ಚಿಂತನೆ ನಡೆಸಿದೆ.

**12 ಸುಖೋಯ್, 21 ಮಿಗ್ ವಿಮಾನ ಖರೀದಿಗೆ ನಿರ್ಧಾರ:** ಚೀನಾ ಗಡಿಯಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿರುವಾಗಲೇ, 12 ಸುಖೊಯ್ ಹಾಗೂ 21 ಮಿಗ್ 29 ಯುದ್ಧ ವಿಮಾನಗಳನ್ನು ಖರೀದಿಸಲು ಭಾರತೀಯ ವಾಯುಪಡೆ ನಿರ್ಧರಿಸಿದೆ. ಈ ಯುದ್ಧ ವಿಮಾನಗಳನ್ನು ತ್ವರಿತವಾಗಿ ಖರೀದಿಸುವ ಸಂಬಂಧ ವಾಯುಪಡೆಯು ಸರ್ಕಾರಕ್ಕೆ ತನ್ನ ಪ್ರಸ್ತಾಪನೆ ಸಲ್ಲಿಸಿದೆ. 5 ಸಾವಿರ ಕೋಟಿ ರೂ. ವೆಚ್ಚದ ಈ ಖರೀದಿ ಪ್ರಕ್ರಿಯೆ ಕುರಿತು ರಕ್ಷಣಾ ಸಚಿವಾಲಯವು ಮುಂದಿನ ವಾರ ಅಂತಿಮ ನಿರ್ಣಯ ಕೈಗೊಳ್ಳಲಿದೆ. ರಷ್ಯಾದಿಂದ ಮಿಗ್–29 ಯುದ್ಧ ವಿಮಾನಗಳನ್ನು ಖರೀದಿಸಲು ನಿರ್ಧರಿಸಲಾಗಿದ್ದು, ಇವು ಈಗಿರುವ ಮಿಗ್–29 ಯುದ್ಧ ವಿಮಾನಕ್ಕಿಂತ ಸುಧಾರಿತ ದರ್ಜೆಯದ್ದಾಗಿದೆ. ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದದ ನಂತರ ಅತಿ ದೊಡ್ಡ ಯುದ್ಧವಿಮಾನ ಖರೀದಿ ವ್ಯವಹಾರವಾಗಲಿದೆ ಎಂದು ಮೂಲಗಳು ಹೇಳಿವೆ.

ಆಧಾರ:ಕನ್ನಡಪ್ರಭ, ದಿನಾಂಕ:19.06.2020

## 48. ಕೋವಿಡ್ ನಿರ್ವಹಣೆಯಲ್ಲಿ ರಾಜ್ಯದ ಕಾರ್ಯವೈಖರಿಗೆ ಕೇಂದ್ರ ಆರೋಗ್ಯ ಸಚಿವಾಲಯ ಮೆಚ್ಚುಗೆ

ದೇಶದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ದಿನೇದಿನೇ ಏರಿಕೆಯಾಗಿರುವ ಬೆನ್ನಲ್ಲೇ ಸೋಂಕು ವ್ಯಾಪಿಸುವುದನ್ನು ತಡೆಯಲು ಕರ್ನಾಟಕ ಮಾದರಿಯನ್ನು ಅನುಸರಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ದೇಶದಲ್ಲಿ 13,587 ಕೋವಿಡ್–19 ಪ್ರಕರಣಗಳು ದೃಢಪಟ್ಟಿದ್ದು, ಒಟ್ಟು ಸೋಂಕಿತರ ಸಂಖ್ಯೆ 3,80,532ಕ್ಕೆ ಏರಿಕೆಯಾಗಿದೆ. ಸೋಂಕಿಗೆ 336 ಜನರು ಮೃತಪಟ್ಟಿದ್ದು, ಒಟ್ಟು ಮೃತರ ಸಂಖ್ಯೆ 12,573ಕ್ಕೆ ತಲುಪಿದೆ. ಇದೇ ವೇಳೆ ಸೋಂಕು ವ್ಯಾಪಿಸುವುದನ್ನು ತಡೆಗಟ್ಟುವಲ್ಲಿ ಕರ್ನಾಟಕದ ಕಾರ್ಯವೈಖರಿಯನ್ನು ಕೇಂದ್ರ ಸರ್ಕಾರ ಶ್ಲಾಘಿಸಿದೆ.

'ಕರ್ನಾಟಕದಲ್ಲಿ ಸೋಂಕಿತರ ಸಂಪರ್ಕಿತರನ್ನು ಶೀಘ್ರ ಪತ್ತೆ ಮಾಡಲಾಗುತ್ತಿದೆ. ಜೊತೆಗೆ 1.5 ಕೋಟಿಗೂ ಅಧಿಕ ಮನೆಗಳಿಗೆ ಭೇಟಿ ನೀಡಿ ಆರೋಗ್ಯ ಸಮೀಕ್ಷೆ ಕೈಗೊಳ್ಳಲಾಗಿದೆ. ಈ ಉತ್ತಮ ಕ್ರಮಗಳನ್ನು ಸ್ಥಳೀಯ ಆದ್ಯತೆಗಳಿಗೆ ಅನುಗುಣವಾಗಿ ಅಳವಡಿಸಿಕೊಳ್ಳುವಂತೆ ಇತರ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ' ಎಂದು ಆರೋಗ್ಯ ಸಚಿವಾಲಯದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಸೋಂಕಿತರ ಸಂಪರ್ಕದಲ್ಲಿದ್ದವರನ್ನು ಪತ್ತೆ ಮಾಡುವ ಮೂಲಕ ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯಗಳ ಕೊರತೆಯಾಗದಂತೆ ನೋಡಿಕೊಳ್ಳಬಹುದು. ಕೋವಿಡ್ ನಿರ್ವಹಣೆಯಲ್ಲಿ ಮೊಬೈಲ್ ಆ್ಯಪ್ ತಂತ್ರಜ್ಞಾನವನ್ನು ಕರ್ನಾಟಕ ಪರಿಣಾಮಕಾರಿಯಾಗಿ ಬಳಸುತ್ತಿದೆ' ಎಂದು ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:20.06.2020.

## 49. ಗರೀಬ್ ಕಲ್ಯಾಣ ಯೋಜನೆಗೆ ಪ್ರಧಾನಿ ಚಾಲನೆ

ಕೊರೊನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿ ನಗರಗಳಿಂದ ಸ್ವಗ್ರಾಮಗಳಿಗೆ ಹಿಂದಿರುಗಿರುವ ಲಕ್ಷಾಂತರ ವಲಸಿಗ ಕಾರ್ಮಿಕರಿಗೆ ಉದ್ಯೋಗ ನೀಡುವ ನಿಟ್ಟಿನಲ್ಲಿ ರೂಪಿಸಿರುವ ಬೃಹತ್ ಯೋಜನೆ 'ಗರೀಬ್ ಕಲ್ಯಾಣ್ ರೋಜ್‌ಗಾರ್ ಅಭಿಯಾನ'ಕ್ಕೆ ಪ್ರಧಾನಿ ನರೇಂದ್ರ ಮೋದಿ ವಿಡಿಯೋ ಕಾನ್ಫರೆನ್ಸ್ ಮೂಲಕ ಚಾಲನೆ ನೀಡಿದ್ದಾರೆ. ರೂ.50 ಸಾವಿರ ಕೋಟಿ ಮೊತ್ತದ ಯೋಜನೆ ಇದಾಗಿದೆ.

ಬಿಹಾರದ ಖಗೇರಿಯಾ ಜಿಲ್ಲೆಯ ತೆಲಿಹಾರ್ ಗ್ರಾಮದಿಂದ ಯೋಜನೆಗೆ ಚಾಲನೆ ನೀಡಲಾಗಿದೆ. ಲಾಕ್‌ಡೌನ್ ಬಳಿಕ ನಗರಗಳಿಂದ ಗ್ರಾಮಗಳಿಗೆ ಹೆಚ್ಚು ಕಾರ್ಮಿಕರು ಹಿಂದಿರುಗಿರುವ ಒಟ್ಟು 6 ರಾಜ್ಯಗಳ (ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಜಾರ್ಖಂಡ್, ಒಡಿಶಾ ಮತ್ತು ರಾಜಸ್ಥಾನ) 116 ಜಿಲ್ಲೆಗಳಲ್ಲಿ ಈ

ಯೋಜನೆ ಕೈಗೊಳ್ಳಲಾಗುತ್ತದೆ. 125 ದಿನಗಳ ಕಾಲ ಕಾರ್ಮಿಕರಿಗೆ ವಿವಿಧ ಕ್ಷೇತ್ರಗಳಲ್ಲಿ ಅವರವರ ಗ್ರಾಮ, ಮನೆಗಳ ಸಮೀಪವೇ ಉದ್ಯೋಗ ಕಲ್ಪಿಸಲಾಗುತ್ತದೆ. ಯಾವ ಜಿಲ್ಲೆಗಳಿಗೆ ನಗರಗಳಿಂದ ಹೆಚ್ಚು ವಲಸಿಗರು ವಾಪಾಸ್ ಆಗಿದ್ದಾರೆ ಎಂಬ ಅಂಕಿ ಅಂಶಗಳನ್ನು ಪರಿಗಣಿಸಿ ಯೋಜನೆಗೆ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಆಯ್ಕೆಯಾಗಿರುವ 116 ಜಿಲ್ಲೆಗಳಲ್ಲಿ ಅತೀ ಹೆಚ್ಚು ಅಂದರೆ 32 ಬಿಹಾರದಲ್ಲಿವೆ. ಉತ್ತರ ಪ್ರದೇಶದ 31, ಮಧ್ಯಪ್ರದೇಶದ 24, ರಾಜಾಸ್ಥಾನದ 22, ಒಡಿಶಾದ 4 ಹಾಗೂ ಜಾರ್ಖಂಡ್‌ನ 3 ಜಿಲ್ಲೆಗಳು ಪಟ್ಟಿಯಲ್ಲಿವೆ. ಈ ಜಿಲ್ಲೆಗಳಿಗೆ ದೇಶದ ಪ್ರಮುಖ ನಗರಗಳು ಹಾಗೂ ಹೊರ ರಾಜ್ಯಗಳಿಂದ ಸುಮಾರು 88 ಲಕ್ಷಕ್ಕೂ ಅಧಿಕ ಕಾರ್ಮಿಕರು ಲಾಕ್‌ಡೌನ್‌ನಿಂದ ಉದ್ಯೋಗ ಕಳೆದುಕೊಂಡು ಮರಳಿದ್ದಾರೆ.

ಗರೀಬ್ ಕಲ್ಯಾಣ ಅಡಿಯಲ್ಲಿ ಕೇಂದ್ರ ಸರ್ಕಾರದ ಮಹತ್ವದ ಯೋಜನೆಗಳು ಸೇರಿ ಸುಮಾರು 25 ಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡಲಾಗುತ್ತದೆ. ಗ್ರಾಮೀಣ ವಸತಿ, ತೋಟಗಾರಿಕೆ, ನೀರಿನ ಸಂರಕ್ಷಣೆ, ಅಂಗನವಾಡಿ ಕಟ್ಟಡಗಳ ನಿರ್ಮಾಣ, ಜಲ–ಜೀವನ್ ಮಿಷನ್ ಕಾಮಗಾರಿ, ರಸ್ತೆಗಳ ನಿರ್ಮಾಣ ಮಾಡಲಾಗುತ್ತದೆ. ಮಾರ್ಚ್‌ನಲ್ಲಿ ಘೋಷಿಸಿದ್ದ ರೂ.1.70 ಲಕ್ಷ ಕೋಟಿ ಪ್ಯಾಕೇಜ್‌ನ ಅಡಿಯಲ್ಲಿ ಈವರೆಗೆ 42 ಕೋಟಿ ಬಡವರು ರೂ.65,454 ಕೋಟಿ ಪರಿಹಾರ ಪಡೆದಿದ್ದಾರೆ.

ವಲಸಿಗ ಕಾರ್ಮಿಕರಿಗಾಗಿ ಜಾರಿಗೊಳಿಸಲಾಗಿರುವ ಈ ಯೋಜನೆಗೆ ಕಾರ್ಮಿಕರೇ ಸ್ಫೂರ್ತಿ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಭಾರತದ ಹಳ್ಳಿಗಳು ಕೊರೋನಾವನ್ನು ಎದುರಿಸಿದ ರೀತಿ ನಗರಗಳಿಗೆ ಮಾದರಿಯಾಗಿದೆ. ಸೋಂಕು ಪಸರಿಸುವಿಕೆಯನ್ನು ಹಳ್ಳಿಗಳ ಜನರು ಅತ್ಯಂತ ಪರಿಣಾಮಕಾರಿಯಾಗಿ ತಡೆಗಟ್ಟಿದ್ದಾರೆ. ದೇಶದ ಸುಮಾರು 80ರಿಂದ 85 ಕೋಟಿ ಜನಸಂಖ್ಯೆ ಹಳ್ಳಿಗಳಲ್ಲಿ ವಾಸಿಸುತ್ತದೆ. ಇದು ಇಡೀ ಯುರೋಪ್, ಅಮೆರಿಕಾ, ರಷ್ಯಾ ಮತ್ತು ಆಸ್ಟ್ರೇಲಿಯಾದ ಜನಸಂಖ್ಯೆಗಿಂತ ಹೆಚ್ಚು. ಇಷ್ಟು ಪ್ರಮಾಣದ ಜನಸಂಖ್ಯೆ ಕೊರೋನಾ ವಿರುದ್ಧ ಹೋರಾಡುವುದು ನಿಜಕ್ಕೂ ದೊಡ್ಡ ಸವಾಲು ಎಂದು ಮೋದಿ ತಿಳಿಸಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ: 21.06.2020

## 50. ಪ್ಯಾನ್ – ಆಧಾರ್ ಲಿಂಕ್ ಗಡುವು ವಿಸ್ತರಣೆ

ನಾನಾ ನೇರ ತೆರಿಗೆಗಳ ಪಾವತಿದಾರರಿಗೆ ಅನುಕೂಲವಾಗುವಂತೆ ಹಲವು ನಿರ್ಧಾರಗಳನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಮುಖ್ಯವಾಗಿ ಪ್ಯಾನ್–ಆಧಾರ್ ಲಿಂಕ್, 2019–2020ರ ತೆರಿಗೆ ಉಳಿತಾಯ ಸಂಬಂಧ ಹೂಡಿಕೆ ವಿಳಂಬ ಐಟಿಆರ್, ಉದ್ಯೋಗಿಗಳಿಗೆ ಫಾರ್ಮ್ 16 ಸಲ್ಲಿಕೆ, ಇತ್ಯಾದಿಗಳ ಗಡುವನ್ನು ಮತ್ತೊಮ್ಮೆ ಮುಂದೂಡಲಾಗಿದೆ.

ವಿಳಂಬಿತ ಐಟಿಆರ್ 2018–19ರ ಪರಿಷ್ಕೃತ ಐಟಿಆರ್ ಅಥವಾ ವಿಳಂಬಿತ ಐಟಿಆರ್ ಸಲ್ಲಿಕೆಗೆ ಜುಲೈ–31ರ ತನಕ ಕಾಯಿದೆಯ ಸೆಕ್ಷನ್ 80ಸಿ, 80ಡಿ, ಇತ್ಯಾದಿಗಳ ಅಡಿಯಲ್ಲಿ ತೆರಿಗೆ ಉಳಿತಾಯ ಸಾಧನಗಳಲ್ಲಿನ ಹೂಡಿಕೆಯ ಕ್ಲೇಮ್‌ಗಳನ್ನು ಸಲ್ಲಿಸಲು ಕೂಡ ಜುಲೈ–31ರ ತನಕ ಗಡುವು ವಿಸ್ತರಿಸಲಾಗಿದೆ. ಕಂಪನಿಗಳು ಉದ್ಯೋಗಿಗಳಿಗೆ ಫಾರ್ಮ್ 16, ಫಾರ್ಮ್ 16ಎ ಇತ್ಯಾದಿಗಳನ್ನು ವಿತರಿಸಲು ಆಗಸ್ಟ್ 15ರ ತನಕ ಕಾಲಾವಕಾಶ ನೀಡಲಾಗಿದೆ.

ಪ್ಯಾನ್–ಆಧಾರ್ ಲಿಂಕ್ ಮಾಡಲು ಕೊನೆಯ ದಿನಾಂಕವನ್ನು 2021ರ ಮಾರ್ಚ್ 31ರ ತನಕ ವಿಸ್ತರಿಸಲಾಗಿದೆ. ಸೆಲ್ಫ್ ಅಸೆಸ್‌ಮೆಂಟ್ ತೆರಿಗೆ ಪಾವತಿಸಲು ಗಡುವನ್ನು 2020ರ ನವೆಂಬರ್ 30ರ ತನಕ ವಿಸ್ತರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:25.06.2020

## 51. ರಾಜ್ಯಕ್ಕೆ ರೂ. 4314 ಕೋಟಿ ಜಿ.ಎಸ್.ಟಿ ಪರಿಹಾರ ಬಿಡುಗಡೆ

ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ಕಾಯ್ದೆಯನ್ವಯ ಆದಾಯ ನಷ್ಟ ಪರಿಹಾರವಾಗಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಮೂರು ತಿಂಗಳ ಬಾಕಿ ಮೊತ್ತ ರೂ.4314 ಕೋಟಿ ಅನುದಾನ ಬಿಡುಗಡೆ ಮಾಡಿದೆ. 2019 ನಿಂದ 2020ರ ಫೆಬ್ರವರಿ ತಿಂಗಳವರೆಗಿನ ಆದಾಯ ನಷ್ಟದ ಪರಿಹಾರವನ್ನು ನೀಡಿದೆ. 3 ತಿಂಗಳ ಅವಧಿಯಲ್ಲಿ ರಾಜ್ಯ ಎದುರಿಸಿದ ಆದಾಯ ನಷ್ಟದ ಪರಿಹಾರ ಒದಗಿಸಲಾಗಿದೆ ಎಂದು ಕೇಂದ್ರ

ಹಣಕಾಸು ಇಲಾಖೆ ತಿಳಿಸಿದೆ. 2017ರ ಜೂನ್ 1 ರಂದು ಜಾರಿಯಾದ ಜಿಎಸ್‌ಟಿ ಕಾಯ್ದೆಯಂತೆ 5 ವರ್ಷಗಳ ಕಾಲ ಕೇಂದ್ರವು ರಾಜ್ಯಗಳಿಗೆ ಆದಾಯ ನಷ್ಟದ ಪರಿಹಾರವನ್ನು ನೀಡಲಿದೆ. ಲಾಕ್‌ಡೌನ್‌ನಿಂದಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಿರುವ ರಾಜ್ಯಕ್ಕೆ ಇದು ನೆರವಾಗಲಿದೆ. ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಒಟ್ಟು ಪರಿಹಾರಕ್ಕಿಂತ ಕಡಿಮೆ ಇದ್ದರೆ ನಂತರ ಹಂತದಲ್ಲಿ ರಾಜ್ಯದ ಆದಾಯದ ಕಾರ್ಯಕ್ಷಮತೆಯ ಸುಧಾರಣೆಗೆ ಇದೇ ರೀತಿಯ ವಿಧಾನ ಅನುಸರಿಸಲಾಗುತ್ತದೆ ಎಂದು ಕೇಂದ್ರ ಹೇಳಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ರಾಜ್ಯದ ಗೃಹ ಸಚಿವರು ಆಗಿರುವ ಜಿಎಸ್‌ಟಿ ಸಮಿತಿ ಸದಸ್ಯ ಬಸವರಾಜ ಬೊಮ್ಮಾಯಿ, ಕಳೆದ ಫೆಬ್ರವರಿವರೆಗಿನ ಮೂರು ತಿಂಗಳ ಅವಧಿಯ ಜಿ.ಎಸ್.ಟಿ ಬಾಕಿ ಬಿಡುಗಡೆಯಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಬಳಿ ಮನವಿ ಮಾಡಿದ್ದರು. ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಜಿಎಸ್‌ಟಿ ಮೊತ್ತ ರೂ.1800 ಕೋಟಿ ಬರಬೇಕಾಗಿದೆ. ಅದು ಮುಂದಿನ ಜುಲೈ ತಿಂಗಳಲ್ಲಿ ಬರಬಹುದು ಎಂದು ತಿಳಿಸಿದ್ದಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:25.06.2020

## 52. ಸಹಕಾರ ಬ್ಯಾಂಕ್‌ಗಳು ಆರ್‌ಬಿಐ ಉಸ್ತುವಾರಿಗೆ

ಠೇವಣಿದಾರರ ಹಿತ ರಕ್ಷಣೆಯ ನಿಟ್ಟಿನಲ್ಲಿ ದೇಶದಲ್ಲಿರುವ ನಗರ ಸಹಕಾರ ಬ್ಯಾಂಕ್‌ಗಳು ಹಾಗೂ ಅಂತರರಾಜ್ಯ ಸಹಕಾರ ಬ್ಯಾಂಕ್‌ಗಳನ್ನು ಸುಗ್ರೀವಾಜ್ಞೆಯ ಮೂಲಕ ಆರ್.ಬಿ.ಐನ ಮೇಲುಸ್ತುವಾರಿ ವ್ಯಾಪ್ತಿಗೆ ತರಲು ಕೇಂದ್ರ ಸಚಿವ ಸಂಪುಟ ಅನುಮೋದಿಸಿದೆ.

ಕರ್ನಾಟಕದಲ್ಲಿ ಒಟ್ಟು 261 ನಾನ್ ಶೆಡ್ಯೂಲ್ಡ್ ನಗರ ಸಹಕಾರ ಬ್ಯಾಂಕ್‌ಗಳ ಸಂಪೂರ್ಣ ಮೇಲುಸ್ತುವಾರಿ ಆರ್.ಬಿ.ಐ ವ್ಯಾಪ್ತಿಗೆ ಬರಲಿದೆ. ಹಲವು ರಾಜ್ಯಗಳಲ್ಲಿ ವಹಿವಾಟು ನಡೆಸುತ್ತಿರುವ ಪಂಜಾಬ್ ಆ್ಯಂಡ್ ಮಹಾರಾಷ್ಟ್ರ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ (ಪಿಎಂಸಿ) ಹಗರಣ ನಡೆದ ನಂತರ ಸರ್ಕಾರ ಪ್ರಮುಖ ನಿರ್ಧಾರ ಕೈಗೊಂಡಿದೆ. ಬೆಂಗಳೂರಿನ ಗುರು ರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್‌ನಲ್ಲೂ ಇತ್ತೀಚೆಗೆ ಹಗರಣ ನಡೆದಿದ್ದು, ಆರ್.ಬಿ.ಐ ಈ ಬ್ಯಾಂಕ್‌ನ ವ್ಯವಹಾರದ ಮೇಲೆ ನಿರ್ಬಂಧಗಳನ್ನು ವಿಧಿಸಿ ತನಿಖೆ ನಡೆಸಿದೆ.

ರಿಸರ್ವ್ ಬ್ಯಾಂಕ್ ಈಗ ಶೆಡ್ಯೂಲ್ಡ್ ಬ್ಯಾಂಕ್‌ಗಳ (ವರ್ಗೀಕೃತ) ಮೇಲೆ ಹೊಂದಿರುವ ಉಸ್ತುವಾರಿ ಅಧಿಕಾರ ಸಹಕಾರ ಬ್ಯಾಂಕ್‌ಗಳಿಗೂ ವಿಸ್ತರಣೆಯಾಗಲಿದೆ.

1,482 ನಗರ ಸಹಕಾರ ಬ್ಯಾಂಕ್‌ಗಳು ಮತ್ತು 58 ಅಂತರರಾಜ್ಯ ಸಹಕಾರ ಬ್ಯಾಂಕ್‌ಗಳು ಆರ್.ಬಿ.ಐ ವ್ಯಾಪ್ತಿಗೆ ಬರಲಿವೆ. ಒಟ್ಟು 1,540 ಸಹಕಾರ ಬ್ಯಾಂಕ್‌ಗಳು ಆರ್.ಬಿ.ಐ ಉಸ್ತುವಾರಿಗೆ ಒಳಪಡಲಿವೆ. ಈ ಬ್ಯಾಂಕ್‌ಗಳು ಆರ್.ಬಿ.ಐ ಉಸ್ತುವಾರಿಗೆ ಒಳಪಡಲಿವೆ, ಈ ಬ್ಯಾಂಕ್‌ಗಳಲ್ಲಿ 8.6 ಕೋಟಿ ಠೇವಣಿದಾರರು ಇದ್ದು, ಅವರ ರೂ.4.84 ಲಕ್ಷ ಕೋಟಿ ಹಣ ಸುರಕ್ಷಿತವಾಗಿರಲಿದೆ ಎಂದು ಕೇಂದ್ರ ಸಚಿವ ಪ್ರಕಾಶ ಜಾವಡೇಕರ್ ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:25.06.2020

## 53. ದೆಹಲಿಯಲ್ಲಿ ದೇಶದ ಅತಿ ದೊಡ್ಡ ಕೋವಿಡ್ ಕೇರ್ ಸೆಂಟರ್

ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲು ದೆಹಲಿಯಲ್ಲಿ ದೇಶದಲ್ಲೇ ದೊಡ್ಡದಾದ ತಾತ್ಕಾಲಿಕ ಚಿಕಿತ್ಸಾ ಕೇಂದ್ರವನ್ನು ತೆರೆಯಲಾಗಿದೆ. ದೆಹಲಿ ಹೊರವಲಯದಲ್ಲಿರುವ ವಿಶಾಲವಾದ ರಾಧಾ ಸೋಮಿ ಸತ್ಸಂಗ ಬಿಯಾಸ್ ಕ್ಯಾಂಪಸ್‌ನಲ್ಲಿ ತಾತ್ಕಾಲಿಕ 10,208 ಬೆಡ್‌ಗಳನ್ನು ಅಳವಡಿಸಲಾಗುತ್ತಿದೆ. ಈ ಕ್ಯಾಂಪಸ್ ಸುಮಾರು 22 ಫುಟ್ಬಾಲ್ ಕ್ರೀಡಾಂಗಣದಷ್ಟು ವಿಸ್ತೀರ್ಣವನ್ನು ಹೊಂದಿದೆ. ಇದಕ್ಕೆ ಸರ್ದಾರ್ ಪಟೇಲ್ ಕೋವಿಡ್ ಕೇರ್ ಸೆಂಟರ್ ಹಾಗೂ ಹಾಸ್ಪಿಟಲ್ ಎಂದು ಹೆಸರಿಡಲಾಗಿದೆ.

**ಆಸ್ಪತ್ರೆಯಾಗಿ ಮಾರ್ಪಟ್ಟ ಕ್ಯಾಂಪಸ್:** ಈ ಕ್ಯಾಂಪಸ್ 1,700 ಅಡಿ ಉದ್ದ, 700 ಅಡಿ ಅಗಲ ಹಾಗೂ 200 ಆವರಣಗಳನ್ನು ಒಳಗೊಂಡಿದೆ. ಇಲ್ಲಿನ ನೆಲ ಮಣ್ಣಿನಿಂದ ಕೂಡಿದ್ದು, ಕಾರ್ಪೆಟ್ಸ್‌ನಿಂದ ಮುಚ್ಚಲಾಗಿದೆ. ಇದರ ಮೇಲೆ ವಿನೈಲ್ ಶೀಟ್ ಹಾಕಲಾಗಿದ್ದು, ಸ್ವಚ್ಛತೆ ಸುಲಭವಾಗುವಂತೆ ಮಾಡಲಾಗಿದೆ. ಕ್ಯಾಂಪಸ್‌ನ್ನು 116 ವಿಭಾಗ ಮಾಡಲಾಗಿದ್ದು, ಪ್ರತಿ ವಿಭಾಗಕ್ಕೆ 88 ಬೆಡ್‌ನಂತೆ, 10,208 ಬೆಡ್‌ಗಳನ್ನು ಅಳವಡಿಸಲಾಗುತ್ತಿದೆ.

ಈಗಾಗಲೇ 2 ಸಾವಿರ ಬೆಡ್‌ಗಳನ್ನು ಸಿದ್ಧಪಡಿಸಲಾಗಿದ್ದು, ಜುಲೈ ಮೊದಲ ವಾರದಲ್ಲಿ 10,208 ಹಾಸಿಗೆಗಳು ಸಿದ್ಧವಾಗಲಿವೆ. ಈ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ನಿರ್ಮಾಣಕ್ಕಾಗಿ ಇಂಡೋ ಟಿಬೇಟಿಯನ್ ಗಡಿ ಪಡೆಯನ್ನು ಬಳಸಿಕೊಳ್ಳಲಾಗಿದೆ.

ಈ ಚಿಕಿತ್ಸಾ ಕೇಂದ್ರಕ್ಕೆ ರೋಗಿಗಳ ಸಂಬಂಧಿಕರು ಪ್ರವೇಶಿಸಲು ಅವಕಾಶವಿಲ್ಲ, ಆ್ಯಂಬುಲೆನ್ಸ್ ಮೂಲಕ ಸೋಂಕಿತರನ್ನು ಇಲ್ಲಿಗೆ ಕರೆದುಕೊಂಡು ಬರಲಾಗುವುದು. ಸಿಬ್ಬಂದಿಗಳ ಮೂಲಕ ರೋಗಿಗಳಿಗೆ ವಸ್ತುಗಳನ್ನು ತಲುಪಿಸಬಹುದಾಗಿದೆ. ಇ–ಹಾಸ್ಪಿಟಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, 400 ಕಂಪ್ಯೂಟರ್, ಇಂಟರ್‌ನೆಟ್, ಮೊಬೈಲ್ ಸಂಪರ್ಕ ಕಲ್ಪಿಸಲಾಗಿದೆ. ಈ ಕೇಂದ್ರವು ಚೀನಾದಲ್ಲಿ ತೆರೆದಿದ್ದ ತಾತ್ಕಾಲಿಕ ಚಿಕಿತ್ಸಾ ಕೇಂದ್ರಕ್ಕಿಂತ 10 ಪಟ್ಟು ದೊಡ್ಡದ್ದಾಗಿದೆ.

ಆಧಾರ:ಉದಯವಾಣಿ, ದಿನಾಂಕ:26.06.2020

## 54. ಸಿಬಿಎಸ್‌ಇ, ಐಸಿಎಸ್‌ಇ 10,12ನೇ ತರಗತಿ ಬಾಕಿ ಪರೀಕ್ಷೆ ರದ್ದು

ದೇಶದಾದ್ಯಂತ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜುಲೈ–1 ರಿಂದ 15ರವರೆಗೆ ನಡೆಯಬೇಕಾಗಿದ್ದ ಸಿಬಿಎಸ್‌ಸಿ ಪಠ್ಯಕ್ರಮದ 10 ಮತ್ತು 12ನೇ ತರಗತಿ ಬಾಕಿ ಇರುವ ವಿಷಯಗಳ ಪರೀಕ್ಷೆಯನ್ನು ರದ್ದುಪಡಿಸುವ ನಿರ್ಧಾರ ಕೈಗೊಳ್ಳಲಾಗಿದೆ. ಸಿಬಿಎಸ್‌ಇ ಸುಪ್ರಿಂಕೋರ್ಟ್‌ಗೆ ಈ ಮಾಹಿತಿ ನೀಡಿದೆ. ಐಸಿಎಸ್‌ಇ ಕೂಡ ಜುಲೈ 1 ರಿಂದ 14ರವರೆಗೆ ನಡೆಯಬೇಕಿದ್ದ 10 ಮತ್ತು 12ನೇ ತರಗತಿ ಬಾಕಿ ಇರುವ ವಿಷಯಗಳ ಪರೀಕ್ಷೆಗಳನ್ನು ರದ್ದು ಪಡಿಸುವುದಾಗಿ ಹೇಳಿದೆ, ಸಿಎಎ ವಿರೋಧಿ ಗಲಭೆ ಹಿನ್ನೆಲೆಯಲ್ಲಿ ಈಶಾನ್ಯ ದಿಲ್ಲಿಯಲ್ಲಿ ಮಾತ್ರ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆ ಬಾಕಿ ಉಳಿದಿತ್ತು. ಉಳಿದ ಕಡೆ 12ನೇ ತರಗತಿ ಪರೀಕ್ಷೆಗಳು ಬಾಕಿ ಉಳಿದಿದ್ದವು. 12ನೇ ತರಗತಿ ವಿದ್ಯಾರ್ಥಿಗಳಿಗೆ ಕಳೆದ ಮೂರು ಶಾಲಾ ಪರೀಕ್ಷೆಗಳ ಫಲಿತಾಂಶದ ಆಧಾರದ ಮೇಲೆ ಅಂತಿಮ ಫಲಿತಾಂಶ ನೀಡಲಾಗುವುದು. ವಿದ್ಯಾರ್ಥಿಗಳು ತಮ್ಮ ರಿಸಲ್ಟ್ ಸುಧಾರಣೆ ಮಾಡಿಕೊಳ್ಳಲು ಮುಂದೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುವುದಾದರೂ ಇದು ಆಯ್ಕೆಯಾಗಿರಲಿದೆ ಎಂದು ಸಿಬಿಎಸ್‌ಇ ಕೋರ್ಟ್‌ಗೆ ಹೇಳಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:26.06.2020

## 55. ರಾಷ್ಟ್ರ ರಾಜಧಾನಿ ಬಾಗಿಲಲ್ಲಿ ಮಿಡತೆಗಳ ಸೈನ್ಯ

ಉತ್ತರ ಪ್ರದೇಶ, ಪಂಜಾಬ್ ಹಾಗೂ ಮಧ್ಯಪ್ರದೇಶಕ್ಕೆ ಲಗ್ಗೆಯಿಟ್ಟು ಬೆಳೆದು ನಿಂತ ಫಸಲು ತಿಂದು ತೇಗಿದ್ದ ಬೃಹತ್ ಮಿಡತೆಗಳ ದಂಡು ಈಗ ದಿಲ್ಲಿಯ ಪ್ರವೇಶದ್ವಾರ ಎನ್ನಲಾಗುವ ಗುರುಗ್ರಾಮ ತಲುಪಿದೆ. ಬೆಳಿಗ್ಗೆ 11.30ಕ್ಕೆ ಏಕಾಏಕಿ ಗುರುಗ್ರಾಮದಲ್ಲಿ ಕತ್ತಲು ಕವಿದಂತೆ ಆದಾಗ ಎರಡು ಕಿ.ಮೀ. ನಷ್ಟು ಉದ್ದನೆಯ ಮಿಡತೆಗಳ ಸೈನ್ಯ ಆಕಾಶದಲ್ಲಿ ಕಾಣಿಸಿದೆ.

ಸಾವಿರಾರು ಸಂಖ್ಯೆಯ ಮಿಡತೆಗಳು ದಿಲ್ಲಿಯ ಅಂತರರಾಷ್ಟ್ರೀಯ ವಿಮಾನನಿಲ್ದಾಣ, ದಿಲ್ಲಿ ಗಡಿಯಲ್ಲಿರುವ ಹರಿಯಾಣದ ಫರೀದಾಬಾದ್ ಮತ್ತು ಪಲ್ವಾಲ್‌ನಲ್ಲಿನ ಕೃಷಿ ಭೂಮಿಗಳನ್ನು ಆವರಿಸತೊಡಗಿವೆ. ಶೀಘ್ರದಲ್ಲೇ ದಿಲ್ಲಿ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಕೃಷಿ ಸಚಿವಾಲಯ ಮಿಡತೆಗಳ ಎಚ್ಚರಿಕೆ ವಿಭಾಗದ ಅಧಿಕಾರಿ ಕೆ. ಎಲ್. ಗುರ್ಜರ್ ಹೇಳಿದ್ದಾರೆ.

ಮನೆಗಳ ಮೇಲೆ, ಮರಗಳು, ಗಿಡಗಳ ಮೇಲೆ ಕೂತು ಅವುಗಳನ್ನು ತಿನ್ನುತ್ತಿರುವ ಮಿಡತೆಗಳ ವಿಡಿಯೋಗಳನ್ನು ಗುರುಗ್ರಾಮದ ಗ್ರಾಮಸ್ಥರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ಅವರು ತಮ್ಮ ಮನೆ ಸಮೀಪ ಕಾಣಿಸಿಕೊಂಡ ಮಿಡತೆ ದಂಡಿನ ವಿಡಿಯೋ ಮಾಡಿರುವುದು ವೈರಲ್ ಆಗಿದೆ.

**ದಕ್ಷಿಣ, ಪಶ್ಚಿಮ ದಿಲ್ಲಿಯಲ್ಲಿ ಹೈ ಅಲರ್ಟ್:** ಮಿಡತೆಗಳು ಕೃಷಿಭೂಮಿಯಲ್ಲಿನ ಬೆಳೆಗಳನ್ನು ತಿಂದು ಮುಗಿಸುವ ಆತಂಕದಲ್ಲಿ ಕೃಷಿಕರು ಸರ್ಕಾರಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಡ ಹೇರುತ್ತಿದ್ದಾರೆ. ಇದಕ್ಕೆ ಸ್ಪಂದಿಸಿರುವ ದಿಲ್ಲಿ ಪರಿಸರ ಸಚಿವ ಗೋಪಾಲ್ ರಾಯ್ ಅವರು ರಾಷ್ಟ್ರ ರಾಜಧಾನಿಯ ದಕ್ಷಿಣ ಮತ್ತು ಪಶ್ಚಿಮ ಜಿಲ್ಲೆಗಳ ಆಡಳಿತಕ್ಕೆ ಕಟ್ಟೆಚ್ಚರ ವಹಿಸುವಂತೆ ಸೂಚಿಸಿದ್ದಾರೆ. ಮಿಡತೆಗಳು ಕಂಡುಬಂದ ಕೂಡಲೇ ಅರಣ್ಯ

ಇಲಾಖೆವತಿಯಿಂದ ಭಾರಿ ಗಾತ್ರದ ಡ್ರಮ್‌ಗಳು ಮತ್ತು ಡೊಳ್ಳುಗಳ ವ್ಯವಸ್ಥೆ ಮಾಡಿ ಬಾರಿಸಿ ಆ ಮೂಲಕ ಮಿಡತೆಗಳನ್ನು ಓಡಿಸಲು ಸೂಚಿಸಲಾಗಿದೆ. ಸಾಧ್ಯವಾದರೆ ಡಿಜೆ (ಮ್ಯೂಸಿಕ್ ಸಿಸ್ಟಂ ವ್ಯವಸ್ಥೆ) ಗಳಲ್ಲಿ ದೊಡ್ಡ ಧ್ವನಿಯಲ್ಲಿ ಸಂಗೀತ ಹಾಕಿಸಿ ಆದರಿಂದ ಉತ್ಪನ್ನವಾಗುವ ಶಬ್ದ ತರಂಗಗಳಿಂದ ಮಿಡತೆಗಳನ್ನು ಬೆದರಿಸಲು ಕೂಡ ಸಚಿವರು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದಾರೆ. ಮಿಡತೆಗಳು ಕಾಣಿಸಿಕೊಂಡರೆ ಕಿಟಕಿ ಬಾಗಿಲುಗಳನ್ನು ತೆರೆಯದಂತೆ ನಿವಾಸಿಗಳಿಗೆ ಸೂಚನೆ ನೀಡಲಾಗಿದೆ.

ಹವಾಮಾನ ವೈಪರೀತ್ಯವೇ ಮಿಡತೆ ದಾಳಿಗೆ ಪ್ರಮುಖ ಕಾರಣ ಎಂದು ತಜ್ಞರು ತಿಳಿಸಿದ್ದಾರೆ. ಮಣ್ಣಿನ ತೇವಾಂಶದಲ್ಲಿ ಏರುಪೇರು, ಆಹಾರ ಸಿಗದಿರುವುದು ಅವುಗಳನ್ನು ವಲಸೆ ಹೋಗುವಂತೆ ಮಾಡಿದೆ ಎಂದು ತಿಳಿಸಿರುತ್ತಾರೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:28.06.2020

## 56. ಕೇಂದ್ರ ಮಾರ್ಗದರ್ಶಿ ಸೂತ್ರ ಬದಲಾವಣೆ

ಕೇಂದ್ರ ಸರ್ಕಾರ ಎರಡನೇ ಹಂತದ ಲಾಕ್‌ಡೌನ್ ಸಡಿಲಿಕೆಯ ಮಾರ್ಗಸೂಚಿಯನ್ನು ಪ್ರಕಟಿಸಿದೆ. ಅದರಂತೆ ರಾತ್ರಿ ಕರ್ಫ್ಯೂ ಸಮಯವನ್ನು ಮತ್ತಷ್ಟು ಸಡಿಲಿಕೆ ಮಾಡಲಾಗಿದೆ. ಅಂಗಡಿ ವ್ಯಾಪಾರ ಕಾಲಾವಧಿ ಹೆಚ್ಚಿಸಲಾಗಿದೆ. ಶಾಲಾ ಕಾಲೇಜುಗಳು ಜುಲೈ 31ರವರೆಗೆ ತೆರೆಯುವಂತಿಲ್ಲ.

ಪರಿಷ್ಕೃತ ಮಾರ್ಗಸೂಚಿ ಪ್ರಕಾರ ಮೆಟ್ರೋ ರೈಲು ಸಂಚಾರ, ಸಿನಿಮಾ ಮಂದಿರಗಳು, ಈಜುಗೊಳ, ಬಾರ್ ಹಾಗೂ ಸಭಾ ಭವನಗಳನ್ನು ದೇಶದಾದ್ಯಂತ ಕಂಟೈನ್ಮೆಂಟ್ ವಲಯಗಳ ಹೊರಗೂ ಸಹ ಮುಚ್ಚುವಂತೆ ಆದೇಶಿಸಲಾಗಿದೆ. ಸಾಮಾಜಿಕ, ರಾಜಕೀಯ, ಕ್ರೀಡೆ, ಮನರಂಜನೆ, ಶೈಕ್ಷಣಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೇಲಿನ ನಿಷೇಧವನ್ನು ಮುಂದುವರಿಸಲಾಗಿದೆ.

ರಾತ್ರಿ ಕರ್ಫ್ಯೂ ಅವಧಿಯನ್ನು ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಅಂಗಡಿಗಳಲ್ಲಿ 5ಕ್ಕಿಂತ ಹೆಚ್ಚು ನೌಕರರನ್ನು ನಿಯೋಜಿಸಲು ಅವಕಾಶವಿದೆ. ಕೈಗಾರಿಕೆಗಳಲ್ಲಿ ರಾತ್ರಿ ಪಾಳಿ ಸೇರಿದಂತೆ ಇಡೀ ದಿನ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿದೆ.

ಈ ಎಲ್ಲಾ ಚಟುವಟಿಕೆಗಳ ಪುನರಾರಂಭ ಕುರಿತಂತೆ ಮುಂಬರುವ ದಿನಗಳಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಸೂಕ್ತ ನಿರ್ಧಾರಗಳನ್ನು ಪ್ರಕಟಿಸಲಾಗುವುದೆಂದು ಕೇಂದ್ರ ಗೃಹ ಸಚಿವಾಲಯದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತರಬೇತಿ ಕೇಂದ್ರಗಳನ್ನು ಜುಲೈ–15 ರಿಂದ ಆರಂಭಿಸಲು ಅನುಮತಿ ನೀಡಲಾಗಿದ್ದು, ಅದಕ್ಕೆ ಸಂಬಂಧಿಸಿದಂತೆ ಪ್ರಮಾಣೀಕೃತ ವಿಧಾನವನ್ನು ರೂಪಿಸಲಾಗುವುದು. ಜೂನ್ 30ರಂದು ಇದುವರೆಗಿನ ಲಾಕ್‌ಡೌನ್ ಮಾರ್ಗಸೂಚಿ ಅಂತ್ಯಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಈ ಹೊಸ ಮಾರ್ಗಸೂಚಿಯನ್ನು ಬಿಡುಗಡೆ ಮಾಡಲಾಗಿದೆ. ಕೊರೊನಾ ಹಾವಳಿ ನಿಯಂತ್ರಣಕ್ಕಾಗಿ ಮಾರ್ಚ್–25ರಿಂದ ದೇಶದಲ್ಲಿ 4 ಹಂತಗಳ ಲಾಕ್‌ಡೌನ್ ಜಾರಿಗೆ ತರಲಾಗಿತ್ತು. ತದನಂತರ 5ನೇ ಹಂತದಿಂದ ಸಡಿಲಿಕೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:30.06.2020

## ಭಾಗ–3

## ರಾಜ್ಯ ಸರ್ಕಾರದ ಸುದ್ದಿಗಳು

### 1. ಇನ್ಫೋಸಿಸ್ ಫೌಂಡೇಷನ್‌ನಿಂದ ರೂ.100 ಕೋಟಿ ದೇಣಿಗೆ.

ಕೋವಿಡ್–19 ಪರಿಹಾರ ಕಾರ್ಯಗಳಿಗೆ ಇನ್ಫೋಸಿಸ್ ಫೌಂಡೇಷನ್ ರೂ.100 ಕೋಟಿ ದೇಣಿಗೆ ನೀಡಿದೆ. ಇನ್ಫೋಸಿಸ್ ಕಂಪನಿಯ ಸಾಮಾಜಿಕ ಹೊಣೆಗಾರಿಕೆ ನಿಧಿ ಘಟಕವಾದ ಪ್ರತಿಷ್ಠಾನವು, ಈ ಪೈಕಿ ರೂ.50 ಕೋಟಿಯನ್ನು ಪಿ.ಎಂ–ಕೇರ್ಸ್ ಪರಿಹಾರ ನಿಧಿಗೆ ನೀಡಿದೆ. ದೇಶದಲ್ಲಿರುವ ಕೋವಿಡ್–19 ರೋಗಿಗಳಿಗೆ, ವಿಶೇಷವಾಗಿ ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾದವರ ಚಿಕಿತ್ಸೆಗೆ, ಆಸ್ಪತ್ರೆಗಳ ಸಾಮರ್ಥ್ಯ ವಿಸ್ತರಣೆಗೆ ಈ ಹಣ ಬಳಸಿಕೊಳ್ಳಬೇಕು ಎಂದು ಪ್ರತಿಷ್ಠಾನ ಹೇಳಿದೆ.

ವೆಂಟಿಲೇಟರ್‌ಗಳು, ಪರೀಕ್ಷಾ ಕಿಟ್ ಹಾಗೂ ಮುಖಗವಸು ಸೇರಿದಂತೆ ಇನ್ನಿತರ ಅಗತ್ಯ ಪರಿಕರಗಳನ್ನು ಆರೋಗ್ಯ ರಕ್ಷಣೆ ಸಿಬ್ಬಂದಿಗೆ ಒದಗಿಸಲು, ಸಮಾಜದ ದುರ್ಬಲ ವರ್ಗದವರಿಗೆ ಆಹಾರ ಒದಗಿಸಲು ಈ ಹಣವನ್ನು ಬಳಸಿಕೊಳ್ಳಬೇಕು, ಕಠಿಣ ಪರಿಸ್ಥಿತಿಗಳಲ್ಲಿ ಅಗತ್ಯ ಸೇವೆ ಪೂರೈಸುವ ನಿಟ್ಟಿನಲ್ಲಿ ಇನ್ಫೋಸಿಸ್ ಫೌಂಡೇಷನ್ ಯಾವಾಗಲೂ ಬೆಂಬಲ ನೀಡುತ್ತಿದೆ. ಕೊರೊನಾ ಸೋಂಕಿನ ವಿರುದ್ಧ ಹೋರಾಡಲು ಸರ್ಕಾರದ ಜೊತೆ ಕೈಜೋಡಿಸಬೇಕಾಗಿದೆ. ಅಗತ್ಯವಿರುವ ಎಲ್ಲರಿಗೂ ಪರಿಹಾರ ಸಾಮಗ್ರಿ ತಲುಪುವಂತೆ ಮಾಡುವ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಸುಧಾಮೂರ್ತಿಯವರು ತಿಳಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:01.04.2020

### 2. ನಂದಿನಿ ಮಳಿಗೆಗಳಲ್ಲಿ ಹಣ್ಣು, ತರಕಾರಿ

'ನಂದಿನಿ ಪಾರ್ಲರ್‌ಗಳಲ್ಲಿ ಹಣ್ಣು ಮತ್ತು ತರಕಾರಿ ಮಾರಾಟಕ್ಕೆ ಅವಕಾಶ ಕಲ್ಪಿಸುವುದರ ಜೊತೆಗೆ ಅಪಾರ್ಟ್‌ಮೆಂಟ್‌ಗಳಿಗೆ ಅವುಗಳನ್ನು ನೇರವಾಗಿ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ'. ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು. ಬ್ಯಾಟರಾಯನಪುರ, ದಾಸನಪುರ ಕೃಷಿ ಮಾರುಕಟ್ಟೆಗಳಿಗೆ ಕೃಷಿ ಸಚಿವ ಬಿ.ಸಿ.ಪಾಟೀಲ, ಆಹಾರ ಸಚಿವ ಕೆ.ಗೋಪಾಲಯ್ಯ ಮತ್ತು ತೋಟಗಾರಿಕಾ ಸಚಿವ ನಾರಾಯಣಗೌಡ ಜೊತೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ಮೇಯರ್ ಕಛೇರಿಯಲ್ಲಿ ಸಭೆ ನಡೆಸಿದರು.

'ರಾಜ್ಯದಲ್ಲಿರುವ 450 ಹಾಪ್‌ಕಾಮ್ಸ್ ಮೂಲಕ ಪ್ರತಿದಿನ 400ರಿಂದ 450 ಟನ್‌ಗಳಷ್ಟು ಹಣ್ಣು ಮತ್ತು ತರಕಾರಿ ಸರಬರಾಜಾಗುತ್ತಿದೆ.' 'ಬೆಂಗಳೂರಿನಲ್ಲಿ 220 ಮಳಿಗೆಗಳು ಮತ್ತು 40 ಮೊಬೈಲ್ ಘಟಕಗಳ ಮೂಲಕ ಪ್ರತಿದಿನ 120 ಟನ್ ಹಣ್ಣು, ತರಕಾರಿ ಮಾರಾಟ ಮಾಡಲಾಗುತ್ತಿದೆ'. ಎಂದು ಸಹಕಾರ ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:04.04.2020

### 3. ಕರಗ ಆಚರಣೆಗೆ ಷರತ್ತುಬದ್ಧ ಅನುಮತಿ

ಐತಿಹಾಸಿಕ ಬೆಂಗಳೂರು ಕರಗ ಸಂಪ್ರದಾಯ ಮುರಿಯಬಾರದು ಎಂಬ ಕಾರಣಕ್ಕೆ ಸಾಂಕೇತಿಕವಾಗಿ ಆಚರಿಸಲು ರಾಜ್ಯ ಸರ್ಕಾರ ಷರತ್ತುಬದ್ಧ ಅನುಮತಿ ನೀಡಿದೆ. ಈ ಬಗ್ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾಹಿತಿ ನೀಡಿದ್ದು, 'ರಾಜ್ಯದಲ್ಲಿ ಕೊರೋನಾ ಸೋಂಕಿನ ಭೀತಿಯಿದೆ. ಹೆಚ್ಚು ಜನರು ಸೇರದಂತೆ ಆಚರಿಸುವುದಾದರೆ ಸರ್ಕಾರದಿಂದ ಯಾವ ಅಡ್ಡಿಯೂ ಇಲ್ಲ' ಎಂದು ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:05.04.2020

### 4. ಕೋವಿಡ್: ಸಚಿವ ಸುರೇಶ್ ಕುಮಾರ್ ಸರ್ಕಾರದ ವಕ್ತಾರ

ಕೋವಿಡ್–19 ನಿರ್ವಹಣೆಗೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಬಿ. ಶ್ರೀರಾಮುಲು ಮತ್ತು ವೈದ್ಯಕೀಯ ಸಚಿವ ಡಾ: ಕೆ. ಸುಧಾಕರ್ ಅವರು ಪ್ರತ್ಯೇಕವಾಗಿ ಮಾಧ್ಯಮಗಳಿಗೆ ನೀಡುತ್ತಿದ್ದ ಮಾಹಿತಿಗಳ ಅಂಕಿ ಅಂಶಗಳಲ್ಲಿ ವ್ಯತ್ಯಾಸವಿದ್ದು, ಇದರಿಂದ ಗೊಂದಲ ಸೃಷ್ಟಿಯಾಗಿ ಸರ್ಕಾರಕ್ಕೆ ಮುಜುಗರವಾದ ಹಿನ್ನೆಲೆಯಲ್ಲಿ

ಮುಖ್ಯಮಂತ್ರಿಯವರು ಹೊಸ ಜವಾಬ್ದಾರಿಯನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಅವರಿಗೆ ವಹಿಸಿದ ಸಂಬಂಧ ಮಾಧ್ಯಮಗೋಷ್ಠಿ ನಡೆಸಿ ಕೋವಿಡ್–19ಗೆ ಸಂಬಂಧಿಸಿದ ಮಾಹಿತಿಗಳನ್ನು ಸಚಿವರು ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:04.04.2020

## 5. ಕನ್ನಡದಲ್ಲೂ 'ಆರೋಗ್ಯ ಸೇತು' ಮೊಬೈಲ್ ಆ್ಯಪ್

ಕೊರೊನಾ ಸೋಂಕಿತರು, ಸೋಂಕು ಶಂಕಿತರ ಚಲನವಲನವನ್ನು ಜಿಪಿಎಸ್ ತಂತ್ರಜ್ಞಾನದ ಸಹಾಯದಿಂದ ಸೆರೆಹಿಡಿಯುವ ಕೇಂದ್ರ ಸರ್ಕಾರದ 'ಆರೋಗ್ಯ ಸೇತು' ಮೊಬೈಲ್ ಆ್ಯಪ್‌ನಲ್ಲಿ ಕನ್ನಡದ ಆಯ್ಕೆಯನ್ನೂ ನೀಡಲಾಗಿದೆ. ಹಿಂದಿ, ಇಂಗ್ಲೀಷ್, ತಮಿಳು ಸೇರಿದಂತೆ ಒಟ್ಟು 11 ಭಾಷೆಗಳ ಆಯ್ಕೆಯನ್ನು ನೀಡಲಾಗಿದ್ದು, ಕೊರೊನಾ ಸೋಂಕು ಹರಡುವ ಬಗ್ಗೆ, ಅನುಸರಿಸಬೇಕಾದ ಮುಂಜಾಗ್ರತಾ ಕ್ರಮಗಳು, ಚಿಕಿತ್ಸಾ ವಿಧಾನ, ಸಹಾಯವಾಣಿ ಸೇರಿದಂತೆ ಹಲವು ಮಾಹಿತಿ ಲಭ್ಯವಿದೆ. ಸ್ವಯಂ ಮೌಲ್ಯ ಮಾಪನ ಪರೀಕ್ಷೆಗೂ ಅವಕಾಶ ನೀಡಲಾಗಿದೆ. ಆರೋಗ್ಯಕ್ಕೆ ಸಂಬಂಧಿಸಿದ ಕೆಲ ಪ್ರಶ್ನೆಗಳು ಮೊಬೈಲ್ ಪರದೆಯ ಮೇಲೆ ಮೂಡಲಿದೆ. ಅದಕ್ಕೆ ಉತ್ತರಿಸಿದ ಬಳಿಕ ಫಲಿತಾಂಶವನ್ನು ನೀಡಲಾಗುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:06.04.2020

## 6. ಕೋವಿಡ್ 19–ಡ್ಯಾಶ್ ಬೋರ್ಡ್ ಉದ್ಘಾಟಿಸಿದ ವೈದ್ಯಕೀಯ ಶಿಕ್ಷಣ ಸಚಿವರು

ರಾಜ್ಯದಾದ್ಯಂತ ಕೋವಿಡ್ 19 ಸೋಂಕಿತರು, ಶಂಕಿತರು ಹಾಗೂ ಚಿಕಿತ್ಸೆ ಕುರಿತ ಸಂಪೂರ್ಣ ವಿವರಗಳನ್ನು ನೀಡುವ ಡ್ಯಾಶ್ ಬೋರ್ಡ್‌ನ್ನು ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ.ಸುಧಾಕರ್ ಅವರು ಬಿಬಿಎಂಪಿಯ ವಾರ್‌ರೂಮ್‌ನಲ್ಲಿ ಉದ್ಘಾಟಿಸಿದರು.

'ಕೊರೊನಾ ಸೋಂಕಿನ ಶಂಕೆಯಿಂದ ಪ್ರತ್ಯೇಕ ವಾಸಕ್ಕೆ (ಕ್ವಾರೆಂಟೈನ್) ಶಿಫಾರಸ್ಸು ಮಾಡಿದವರು 100ಮೀ. ನಷ್ಟು ಆಚೀಚೆ ಹೋದರೂ ಡ್ಯಾಶ್‌ಬೋರ್ಡ್ ಮೂಲಕ ತಿಳಿದುಕೊಳ್ಳಬಹುದು. ಜೈವಿಕ ಬೇಲಿ ವ್ಯವಸ್ಥೆಯನ್ನು (ಜಿಯೋ ಫೆನ್ಸಿಂಗ್) ಅಳವಡಿಸಿಕೊಳ್ಳಲಾಗಿದೆ' 'ಸೋಂಕಿತರ ಸಂಖ್ಯೆ ಎಷ್ಟು, ಯಾವ ಪ್ರದೇಶದಲ್ಲಿ ಎಷ್ಟು ಮಂದಿಗೆ ಪ್ರತ್ಯೇಕ ವಾಸಕ್ಕೆ ಶಿಫಾರಸ್ಸು ಮಾಡಲಾಗಿದೆ. ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಯಾವೆಲ್ಲ ಆಸ್ಪತ್ರೆಗಳು ಚಿಕಿತ್ಸೆಗೆ ಸಜ್ಜಾಗಿದೆ, ಎಷ್ಟು ವೈದ್ಯರು ಲಭ್ಯ ಇದ್ದಾರೆ ಎಂಬ ಅಂಶಗಳ ಕ್ಷಣ ಕ್ಷಣದ ವಿವರಗಳನ್ನೂ ಮೊಬೈಲ್, ಡೆಸ್ಕ್ ಟಾಪ್ ಮೂಲಕ ಪಡೆಯಬಹುದು. ಈ ಮಾಹಿತಿ ಗ್ರಾಮೀಣ ಪ್ರದೇಶಗಳ ಜನರಿಗೂ ಸಿಗುವಂತೆ ಮಾಡಲು ಶೀಘ್ರವೇ ವ್ಯವಸ್ಥೆ ಕಲ್ಪಿಸಲಾಗುವುದು.

ಕೋವಿಡ್–19 ಹರಡದಂತೆ ತಡೆಯುವ ವಿಚಾರದಲ್ಲಿ ರಾಜ್ಯ ಸರ್ಕಾರ ಪಾರದರ್ಶಕವಾಗಿ ನಡೆದುಕೊಂಡಿದೆ. ಇದುವರೆಗೆ ರಾಜ್ಯದ ಜನರು ಲಾಕ್‌ಡೌನ್ ವೇಳೆ ಉತ್ತಮ ರೀತಿಯಲ್ಲಿ ಸಹಕರಿಸಿದ್ದಾರೆ. ಏಪ್ರಿಲ್ 14ರವರೆಗೂ ಇದೇ ರೀತಿ ಸಹಕಾರ ನೀಡಬೇಕು' ಎಂದು ಸಚಿವರು ಕೋರಿದರು.

ಕೊರೊನಾ ಸೋಂಕಿತರ ಆರೈಕೆಗಾಗಿ ರಾಜ್ಯದಲ್ಲಿರುವ 4.5ಲಕ್ಷ ಅರ್ಹ ನರ್ಸಿಂಗ್ ಸಿಬ್ಬಂದಿಗೆ ಆನ್‌ಲೈನ್‌ನಲ್ಲಿ ತರಬೇತಿ ನೀಡುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ (ಆರ್‌ಜಿಯುಎಚ್‌ಎಸ್) ಪ್ರಯತ್ನಕ್ಕೆ ಮೊದಲ ದಿನವೇ ಭಾರಿ ಯಶಸ್ಸು ಸಿಕ್ಕಿದ್ದು, 1,800 ಮಂದಿ ತರಬೇತಿ ಪಡೆದರು. ಈ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ 'ಸದ್ಯದ ಸ್ಥಿತಿಯಲ್ಲಿ ದಾದಿಯರಿಗೆ ತರಬೇತಿ ನೀಡುವ ಅಗತ್ಯ ಬಹಳವಿದ್ದು, ವಿಶ್ವವಿದ್ಯಾಲಯ ಇದನ್ನು ಮಾಡಿರುವುದು ಅತ್ಯುತ್ತಮ ಕೆಲಸ' ಎಂದು ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:08.04.2020

## 7. ಸಚಿವರು, ಶಾಸಕರ ಶೇ.30ರಷ್ಟು ವೇತನ, ಭತ್ಯೆ ಕಡಿತ

ಕೋವಿಡ್ ಪರಿಹಾರ ನಿಧಿಗಾಗಿ ಸಚಿವರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರ ವೇತನ ಮತ್ತು ಭತ್ಯೆಯಲ್ಲಿ ಶೇ.30ರಷ್ಟು ಕಡಿತ ಮಾಡಲು ರಾಜ್ಯ ಸರ್ಕಾರ ನಿರ್ಣಯ ಕೈಗೊಂಡಿದೆ. ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ವಿಧಾನ ಸಭಾಧ್ಯಕ್ಷರು, ಉಪ

ಸಭಾಧ್ಯಕ್ಷರು, ಸಭಾಪತಿ ಮತ್ತು ಉಪ ಸಭಾಪತಿಯವರ ವೇತನ ಕಡಿತ ಮಾಡಲಾಗುವುದು. ಏಪ್ರಿಲ್‌ನಿಂದ ಮುಂದಿನ ವರ್ಷದ ಮಾರ್ಚ್‌ವರೆಗೆ ವೇತನ ಮತ್ತು ಭತ್ಯೆಯಲ್ಲಿ ಕಡಿತ ಮಾಡಲಾಗುವುದು. ಇದಕ್ಕಾಗಿ ಕರ್ನಾಟಕ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಸಚಿವರ ಸಂಬಳಗಳ ಅಧಿನಿಯಮ 1956ಕ್ಕೆ ತಿದ್ದುಪಡಿ ತಂದು ಸುಗ್ರೀವಾಜ್ಞೆ ಹೊರಡಿಸಲಾಗುತ್ತದೆಂದು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:10.04.2020

## 8. ರಾಜ್ಯದಲ್ಲೇ ಮೊದಲ ಪ್ರಯೋಗ : ಜನ ಹೊರಬಂದರೆ ಕೇಸ್, ವಾಹನ ಓಡಾಟ ಬಂದ್, ಸೀಲ್‌ಡೌನ್

ಕರ್ನಾಟಕದಲ್ಲಿ ಕೊರೊನಾ ಸೋಂಕು ಸಮುದಾಯಕ್ಕೆ ಹರಡಿ ಅಪಾಯಕ್ಕೆ ತುತ್ತಾಗುವುದನ್ನು ತಪ್ಪಿಸಲು ಮುಂದಾಗಿರುವ ರಾಜ್ಯ ಸರ್ಕಾರ 'ಸೀಲ್‌ಡೌನ್' ರೂಪದ ಕಠಿಣ ಕ್ರಮಕ್ಕೆ ಮುಂದಾಗಿದೆ. ಮೊದಲ ಹಂತದಲ್ಲಿ ಬೆಂಗಳೂರಿನ ಎರಡು ವಾರ್ಡ್‌ಗಳಲ್ಲಿ ಪ್ರಯೋಗಾತ್ಮಕವಾಗಿ ಜಾರಿಗೊಳಿಸಲಾಗಿದೆ.

ಕೋವಿಡ್–19 ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದೆ. ರಾಜ್ಯಕ್ಕೆ ಕಾಲಿಟ್ಟು ತಿಂಗಳು ಕಳೆಯುವಷ್ಟರಲ್ಲೇ 207ಕ್ಕೆ ಮುಟ್ಟಿದೆ. ಕಠಿಣ ನಿರ್ಬಂಧ ಹೇರದೆ ಇದ್ದರೇ ಪರಿಸ್ಥಿತಿ ಕೈ ಮೀರಿ ಹೋಗಬಹುದೆಂಬ ಆತಂಕವೂ ಸರ್ಕಾರವನ್ನೂ ಕಾಡಿದೆ. ಹೀಗಾಗಿ ಅಂತಹ ಪರಿಸ್ಥಿತಿ ಸೃಷ್ಟಿಯಾದರೆ ಹಾಟ್‌ಸ್ಪಾಟ್ ಎಂದು ಗುರುತಿಸಲಾಗಿರುವ 10 ಜಿಲ್ಲೆಗಳಲ್ಲಿ ರೆಡ್ ಝೋನ್‌ಗಳನ್ನು (ರೋಗಿಗಳ ಸಂಖ್ಯೆ ಹೆಚ್ಚಿರುವ) ಸೀಲ್‌ಡೌನ್‌ಗೆ ಗುರಿಪಡಿಸುವುದು ಸರ್ಕಾರದ ಉದ್ದೇಶ ಎನ್ನಲಾಗಿದೆ. ಅದಕ್ಕೆ ಪೂರ್ವಭಾವಿ ಸಿದ್ಧತೆ ನಡೆಸುವುದು ಹಾಗೂ ಸೀಲ್‌ಡೌನ್‌ಗೆ ಹೇರಿದರೆ ಅದರ ಪರಿಣಾಮ ಏನಾಗಲಿದೆ ಎಂದು ಪರಿಶೀಲಿಸಲು ಜನನಿಬಿಡ ಪ್ರಮುಖ ಪ್ರದೇಶಗಳ ಪಟ್ಟಿಯಲ್ಲಿರುವ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ಪಾದರಾಯನಪುರ ಮತ್ತು ವಿಜಯನಗರ ವಿಧಾನ ಸಭಾ ಕ್ಷೇತ್ರದ ಬಾಪೂಜಿನಗರ ಈ ಎರಡು ವಾರ್ಡ್‌ಗಳಲ್ಲಿ ಪ್ರಯೋಗ ಜಾರಿಯಾಗಿದೆ. ಒಂದೇ ಪ್ರದೇಶದಲ್ಲಿ ಹೊಸದಾಗಿ ಐದು ಪ್ರಕರಣಗಳು ದೃಢಪಟ್ಟ ಕಾರಣ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ ಎಂದು ಬಿಬಿಎಂಪಿ ಸ್ಪಷ್ಟಪಡಿಸಿದೆ.

ನಿವಾಸಿಗಳು ಮನೆ ಬಿಟ್ಟು ಹೊರಗೆ ಬರುವಂತಿಲ್ಲ. ಎಲ್ಲಾ ಅಗತ್ಯ ವಸ್ತುಗಳನ್ನು ಮನೆಮನೆಗೆ ಪೂರೈಸಲಾಗುವುದು. ಸೀಲ್‌ಡೌನ್ ಜಾರಿಯಲ್ಲಿರುವ ಪ್ರದೇಶದ ಎಲ್ಲಾ ರಸ್ತೆಗಳು ಬಂದ್ ಮಾಡಲಾಗುತ್ತದೆ. ಒಂದು ಅಥವಾ ಎರಡು ಪ್ರವೇಶ ದ್ವಾರಗಳು ಇರುತ್ತವೆ. ಅಲ್ಲಿ ಪೊಲೀಸರು ಸದಾ ಕಣ್ಗಾವಲಿನಲ್ಲಿ ಇರುತ್ತಾರೆ. ಆ್ಯಂಬುಲೆನ್ಸ್, ವೈದ್ಯಕೀಯ ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ. ಅನುಮತಿ ಇಲ್ಲದೆ ಮನೆಯಿಂದ ಹೊರಗೆ ಬಂದರೆ ಪ್ರಕೃತಿ ವಿಕೋಪ ನಿರ್ವಹಣಾ ಕಾಯ್ದೆಯಡಿ ಮೊಕದ್ದಮೆ ದಾಖಲಾಗುತ್ತದೆ. ಈಗಾಗಲೇ ವಿತರಿಸಿರುವ ಪಾಸುಗಳು ಅನೂರ್ಜಿತಗೊಳ್ಳುತ್ತದೆ. ಅಗತ್ಯವಿರುವವರಿಗೆ ಹೊಸದಾಗಿ ಪಾಸ್ ವಿತರಿಸಲಾಗುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:11.04.2020

## 9. ಮನೆ ಹೊರಗೆ ಮಾಸ್ಕ್ ಕಡ್ಡಾಯ

ಅಪರಿಚಿತರೊಂದಿಗೆ ವ್ಯವಹರಿಸುವಾಗ ಹಾಗೂ ಸಾರ್ವಜನಿಕ ಸ್ಥಳಗಳಿಗೆ ತೆರಳುವಾಗ ಮುಖಗವುಸು ಧರಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ. ಸೋಂಕಿನಿಂದ ಅಂತರ ಕಾಯ್ದುಕೊಳ್ಳಲು ಮುಖಗವುಸನ್ನು ಹಾಕಿಕೊಳ್ಳುವಂತೆ ತಿಳಿಸಿದೆ. ಅಗತ್ಯ ವಸ್ತುಗಳ ಖರೀದಿಗೆ ತೆರಳುವ ವೇಳೆ ಕಛೇರಿ ಕೆಲಸಗಳಲ್ಲಿ ನಿರತವಾಗಿರುವಾಗ ಮುಖಗವುಸನ್ನು ಧರಿಸಬೇಕು. ಕೊರೋನಾ ಸೋಂಕಿತರೊಂದಿಗೆ ಗೊತ್ತಿಲ್ಲದೆಯೇ ಸಂಪರ್ಕ ಸಾಧಿಸುವ ಸಾಧ್ಯತೆಯಿರುವ ಕಾರಣ ಮಾಸ್ಕ್ ಧರಿಸುವುದು ಸೂಕ್ತ ಹಾಗೂ ವಯಸ್ಕರು ಧರಿಸುವ ಮಾಸ್ಕ್ 7x9 ಇಂಚು ಮತ್ತು ಮಕ್ಕಳು ಧರಿಸುವ ಮಾಸ್ಕ್ 5x7 ಇಂಚು ಇರಬೇಕು. ಬಳಸದೇ ಇರುವ ಬನಿಯನ್, ಟೀ ಶರ್ಟ್ ಅಥವಾ ಕರವಸ್ತ್ರದಂತಹ ಹತ್ತಿ ಬಟ್ಟೆಯಿಂದ ಮನೆಯಲ್ಲಿಯೇ ಸಿದ್ಧಪಡಿಸುವ ಮಾಸ್ಕ್‌ಗಳನ್ನು ಶುಚಿಗೊಳಿಸಿ ಮರುಬಳಕೆ ಮಾಡಬಹುದಾಗಿದೆ.

ನಗರ ಪ್ರದೇಶಗಳಲ್ಲಿ ಕೋವಿಡ್–19 ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸೋಂಕು ಪತ್ತೆಗೆ ಶೇ.50ರಷ್ಟು ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಫೀವರ್ ಕ್ಲಿನಿಕ್ ಆಗಿ ಬದಲಿಸಲು, ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ನಗರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳನ್ನು ಏಪ್ರಿಲ್ 11ರೊಳಗೆ

ಫೀವರ್ ಕ್ಲಿನಿಕ್ ಆಗಿ ಮಾರ್ಪಡಿಸಲು ಜಿಲ್ಲೆಯ ವಿಪತ್ತು ನಿರ್ವಹಣಾ ಅನುದಾನ ಬಳಸಿಕೊಂಡು ಥರ್ಮಲ್ ಸ್ಕ್ಯಾನರ್, ಎನ್–95 ಮಾಸ್ಕ್, ಸ್ಯಾನಿಟೈಸರ್, ಸುರಕ್ಷಾ ಕವಚಗಳನ್ನು ಕ್ಲಿನಿಕ್‌ಗಳಿಗೆ ಒದಗಿಸಲು ಹಾಗೂ ಪ್ರತಿದಿನ ವೈದ್ಯಕೀಯ ತ್ಯಾಜ್ಯವನ್ನು ನಿಯಮದಂತೆ ವಿಲೇವಾರಿ ಮಾಡಲು ಹಾಗೂ ಆಪ್ತ ಸಮಾಲೋಚನೆ ಸೇವೆಯನ್ನು ನೀಡಲು ಮತ್ತು ಖಾಸಗಿ ಕ್ಲಿನಿಕ್, ಆಸ್ಪತ್ರೆಗಳು ಕೂಡ ಫೀವರ್ ಕ್ಲಿನಿಕ್‌ಗಳನ್ನು ಆರಂಭಿಸಬಹುದು. ಕ್ಲಿನಿಕ್ ಆರಂಭಿಸಲು ಖಾಸಗಿಯವರು ಮುಂದೆ ಬಂದರೆ ಅವರಿಗೆ ಅನುಮತಿ, ತರಬೇತಿ ಹಾಗೂ ಉಪಕರಣ, ಸುರಕ್ಷಾ ಕವಚವನ್ನು ಅಧಿಕಾರಿಗಳು ಒದಗಿಸಬೇಕೆಂದು ಆರೋಗ್ಯ ಇಲಾಖೆ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:10.04.2020

## 10. ಏಪ್ರಿಲ್–30ರವರೆಗೆ ಲಾಕ್‌ಡೌನ್ ನಿಶ್ಚಿತ

‘ರಾಜ್ಯದಲ್ಲಿ ಏ.30ರವರೆಗೆ ಲಾಕ್‌ಡೌನ್ ನಿಶ್ಚಿತ. ಆದರೆ ಅದು ವಿಭಿನ್ನವಾಗಿರಲಿದೆ. ಈ ಬಗ್ಗೆ 2–3 ದಿನಗಳಲ್ಲಿ ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಲಿದೆ’ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಜೊತೆ ವಿಡಿಯೋ ಸಂವಾದದಲ್ಲಿ ಭಾಗವಹಿಸಿದ ಬಳಿಕ ಮಾತಾನಾಡಿದ ಅವರು, ‘ಮುಂದಿನ 3–4 ವಾರ ಅತ್ಯಂತ ನಿರ್ಣಾಯಕವಾಗಿದೆ. ಪರಿಸ್ಥಿತಿ ಬಿಗಡಾಯಿಸಿದರೆ ಎದುರಿಸಲು ಸನ್ನದ್ಧರಾಗಿರುವಂತೆ ಪ್ರಧಾನಿ ಹೇಳಿದ್ದಾರೆ. ಲಾಕ್‌ಡೌನ್ ವಿಷಯದಲ್ಲಿ ರಾಜಿ ಇಲ್ಲ’ ಎಂದು ಸ್ಪಷ್ಟಪಡಿಸಿದರು.

ದೇಶದಲ್ಲಿ ಕೋವಿಡ್ 19 ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಮತ್ತು ಸಮುದಾಯದಲ್ಲಿ ಹರಡುವ ಸಾಧ್ಯತೆ ಕುರಿತು ಪ್ರಧಾನಿ ಕಳವಳ ವ್ಯಕ್ತಪಡಿಸಿದರು’ ‘ನಗರಗಳಲ್ಲಿ ಸಿಲುಕಿಕೊಂಡಿರುವ ಕಾರ್ಮಿಕರನ್ನು ಹಳ್ಳಿಯ ಜನರು ಸ್ವೀಕರಿಸದ ಕಾರಣ ಹಳ್ಳಿಗಳಿಗೆ ಕಳುಹಿಸಬೇಡಿ. ಅಗತ್ಯ ವಸ್ತುಗಳು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟವಾಗುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಆರೋಗ್ಯ ಸೇತು ಮೊಬೈಲ್ ಆ್ಯಪ್ ಜನಪ್ರಿಯಗೊಳಿಸುವಂತೆ ಸಲಹೆ ನೀಡಿದರು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

‘ಪರೀಕ್ಷಾ ಸೌಲಭ್ಯ ಹೆಚ್ಚಿಸುವ ನಿಟ್ಟಿನಲ್ಲಿ ಐಸಿಎಂಆರ್‌ಗೆ ಅರ್ಜಿ ಸಲ್ಲಿಸುವಂತೆ ಖಾಸಗಿ ಪ್ರಯೋಗಾಲಯಗಳು ಮತ್ತು ವೈದ್ಯಕೀಯ ಕಾಲೇಜುಗಳಿಗೆ ಸಲಹೆ ನೀಡುವಂತೆ ಪ್ರಧಾನಿ ಸೂಚಿಸಿದ್ದಾರೆ. ಮುಖ್ಯಮಂತ್ರಿಗಳ ಜೊತೆ ನಡೆಸಿದ ಸಂವಾದದ ವೇಳೆ ‘ಜನರ ಜೀವ ಮತ್ತು ಜೀವನವನ್ನು ಕಾಪಾಡುವುದು ಮುಖ್ಯ. ಅದೇ ಹೊತ್ತಿನಲ್ಲಿ ದೇಶದ ಆರ್ಥಿಕತೆ ಗಮನದಲ್ಲಿಟ್ಟುಕೊಳ್ಳಬೇಕಿದೆ’ ಎಂದು ಸಂವಾದದ ವೇಳೆ ಪ್ರಧಾನಿ ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 12.04.2020

## 11. ದಿಢೀರ್ ನಗರ ಸುತ್ತಾಟ: ಅಹವಾಲು ಆಲಿಸಿ ಭರವಸೆ ತುಂಬಿದ ಮುಖ್ಯಮಂತ್ರಿ

ಲಾಕ್‌ಡೌನ್‌ನಿಂದ ಜನಸಾಮಾನ್ಯರು, ದಿನಸಿ ಅಂಗಡಿದಾರರು, ಹೂ ಹಣ್ಣು ತರಕಾರಿ ಮಾರಾಟಗಾರರಿಗೆ ಆಗಿರುವ ಸಮಸ್ಯೆ ಅರಿಯಲು ದಿಢೀರ್ ಆಗಿ ಕಾವೇರಿ ನಿವಾಸದಿಂದ ಹೊರಟ ಯಡಿಯೂರಪ್ಪರವರು ಸುಮಾರು ಎರಡು ಗಂಟೆಗಳ ಕಾಲ ನಗರದ ಹಲವೆಡೆ ಸಂಚರಿಸಿ, ಸಾರ್ವಜನಿಕರ ಸಂಕಷ್ಟ ಅರಿಯುವ ಪ್ರಯತ್ನ ಮಾಡಿದರು.

ವಿಜಯನಗರ, ಯಶವಂತಪುರ, ಗೊರಗುಂಟೆಪಾಳ್ಯ, ಸುಮನಹಳ್ಳಿ ಸಿಗ್ನಲ್, ಜಯದೇವ ಜಂಕ್ಷನ್, ದೇವೇಗೌಡ ಪೆಟ್ರೋಲ್ ಬಂಕ್ ಜಂಕ್ಷನ್ ಹಾಗೂ ಬಸವನಗುಡಿ ಮತ್ತಿತರ ಕಡೆ ತೆರಳಿ ಅಹವಾಲು ಆಲಿಸಿದರು. ನಾಯಂಡನಹಳ್ಳಿ ಜಂಕ್ಷನ್‌ನಿಂದ ಪೊಲೀಸ್ ಕಮೀಷನರ್ ಭಾಸ್ಕರ್ ರಾವ್ ಕೂಡ ಮುಖ್ಯಮಂತ್ರಿಯೊಂದಿಗೆ ಜೊತೆಗೂಡಿದರು. ಕಾರಿನಲ್ಲಿ ಕುಳಿತು ಯಶವಂತಪುರ ಎಪಿಎಂಸಿಯನ್ನು ಪರಿಶೀಲಿಸಿದರು. ಅನಗತ್ಯವಾಗಿ ಓಡಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು. ಉತ್ತರ ವಲಯ ಡಿಸಿಪಿ ಶಶಿಕುಮಾರ್ ಅವರಿಂದಲೂ ಮಾಹಿತಿ ಪಡೆದ ಮುಖ್ಯಮಂತ್ರಿಯವರು ಬನಶಂಕರಿ 3ನೇ ಹಂತ, ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶಗಳಿಗೂ ಭೇಟಿ ನೀಡಿದರು.

ಆಧಾರ:ಪ್ರಜಾವಾಣಿ ದಿನಾಂಕ: 13.04.2020

### 12. ಪ್ರತಿ ಜಿಲ್ಲೆಯಲ್ಲೂ ಕೇಂದ್ರ ತೆರೆಯಲು ಸಚಿವರ ಸಭೆಯಲ್ಲಿ ನಿರ್ಧಾರ ಎರಡು ಪರೀಕ್ಷಾ ಕೇಂದ್ರ ಸ್ಥಾಪನೆ

ಕೋವಿಡ್–19 ಪರೀಕ್ಷೆಯನ್ನು ಇನ್ನಷ್ಟು ತ್ವರಿತಗೊಳಿಸುವ ಸಲುವಾಗಿ ಪ್ರತಿ ಜಿಲ್ಲೆಯಲ್ಲಿ ಎರಡು ಪ್ರಯೋಗಾಲಯ ಸ್ಥಾಪಿಸಲು ಮತ್ತು ಜಿಲ್ಲಾವಾರು ವೈಜ್ಞಾನಿಕ ಕಾರ್ಯಪಡೆ ರಚಿಸಲು ತೀರ್ಮಾನಿಸಲಾಗಿದೆ. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದಲ್ಲಿ ವಿವಿಧ ವೈದ್ಯಕೀಯ ಸಂಘ ಸಂಸ್ಥೆಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಬಳಿಕ ಈ ನಿರ್ಧಾರಕ್ಕೆ ಬರಲಾಯಿತು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ.ಸುಧಾಕರ್ ಅವರು ಹೇಳಿದ್ದಾರೆ.

ಕೊರೊನಾ ಸೋಂಕು ವೈದ್ಯರಿಗೆ ಹರಡುವ ಭೀತಿ ಇರುವುದರಿಂದ ದಂತ ವೈದ್ಯಕೀಯ ಕ್ಲಿನಿಕ್‌ಗಳನ್ನು ತೆರೆಯಲು ಸದ್ಯ ಅವಕಾಶ ನೀಡುವುದಿಲ್ಲ. ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು. ಪ್ರತಿದಿನ ಕೋವಿಡ್ ಮಾಹಿತಿಗಳನ್ನು ವಿಶ್ಲೇಷಣೆ ನಡೆಸಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಲಹೆ ನೀಡಲು ಡಾ: ಎಂ.ಕೆ.ಸುದರ್ಶನ್ ಅಧ್ಯಕ್ಷತೆಯ ಸಮಿತಿಯೊಂದನ್ನು ರಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಕೊರೊನಾ ಸಹಾಯ ವೇದಿಕೆ:– ಕೊರೊನಾ ಕುರಿತು ಜನರಿಗೆ ಸರಿಯಾದ ಮಾಹಿತಿ ಲಭಿಸುವಂತಾಗಬೇಕು ಎಂಬ ಕಾರಣಕ್ಕೆ ಸರ್ಕಾರವು ವ್ಯಾಟ್ಸ್‌ಆ್ಯಪ್ ಸಹಯೋಗದೊಂದಿಗೆ ಸಹಾಯ ವೇದಿಕೆ ಆರಂಭಿಸಿದೆ. 8750971717 ಇಲ್ಲಿಗೆ **'ಹಾಯ್'** ಎಂದು ಸಂದೇಶ ಕಳುಹಿಸಿದರೆ ರಾಜ್ಯದಲ್ಲಿ ಕೊರೋನಾ ಕುರಿತ ಇತ್ತೀಚಿನ ಮಾಹಿತಿ ಲಭಿಸಲಿದೆ.

ತ್ವರಿತ ಪರೀಕ್ಷೆ ನಡೆಸುವ ಕಿಟ್ ನಗರಕ್ಕೆ ಬರಬೇಕಿದ್ದು, ಚೀನಾ ರಫ್ತು ನಿಯಮಗಳಲ್ಲಿ ಕೆಲವೊಂದು ಬದಲಾವಣೆ ಮಾಡಿರುವುದರಿಂದ ಕಿಟ್‌ಗಳು ಬರುವುದು ಒಂದು ವಾರದಷ್ಟು ವಿಳಂಬವಾಗಲಿದೆ ಎಂದು ಸಚಿವ ಎಸ್ ಸುರೇಶ್ ಕುಮಾರ್ ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 14.04.2020

### 13. 12 ಸಾವಿರ ಮೂಲೆ ನಿವೇಶನ ಹರಾಜು

ಕೋವಿಡ್–19 ಲಾಕ್‌ಡೌನ್‌ನಿಂದಾಗಿ ರಾಜ್ಯದಲ್ಲಿ ಆರ್ಥಿಕ ಸಂಕಷ್ಟ ಬಿಗಡಾಯಿಸಿದ್ದು, ಸಂಪನ್ಮೂಲ ಸಂಗ್ರಹಕ್ಕಾಗಿ ಬಿಡಿಎ ಬಡಾವಣೆಗಳಲ್ಲಿರುವ 12 ಸಾವಿರ ಮೂಲೆ ನಿವೇಶನಗಳನ್ನು ಹರಾಜು ಹಾಕಲು ಸರ್ಕಾರ ಮುಂದಾಗಿದೆ.

ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಚಿವರು ಮತ್ತು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಸಂಪನ್ಮೂಲ ಸಂಗ್ರಹಕ್ಕೆ ಇನ್ನೂ ಹಲವು ಕ್ರಮಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಯಿತು. ಬಿಡಿಎ ಮೂಲೆ ನಿವೇಶನಗಳನ್ನು ಮಾರಾಟ ಮಾಡುವುದರಿಂದ ಸುಮಾರು ರೂ.15 ಸಾವಿರ ಕೋಟಿ ಆದಾಯ ಒದಗುವ ಸಾಧ್ಯತೆ ಇದೆ. ರಾಜ್ಯದ ಇತರ ನಗರಗಳಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ನಿವೇಶನಗಳು ಮತ್ತು ಖಾಲಿ ನಿವೇಶನಗಳನ್ನೂ ಹರಾಜು ಹಾಕಲು ತೀರ್ಮಾನಿಸಲಾಗಿದೆ ಎಂದರು.

ಅನಧಿಕೃತ ಕಟ್ಟಡಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ತ್ವರಿತ ವಿಲೇವಾರಿಗೆ ಪ್ರಯತ್ನಿಸಲಾಗುವುದು. ಇಂತಹ ಪ್ರಕರಣಗಳು ಇತ್ಯರ್ಥವಾದರೆ, ನಾಗರಿಕರಿಗೂ ಅನುಕೂಲವಾಗುತ್ತದೆ ಮತ್ತು ಬೊಕ್ಕಸಕ್ಕೂ ಹೆಚ್ಚಿನ ಆದಾಯ ಸಿಗುತ್ತದೆ. ಖಾಸಗಿ ಮತ್ತು ಸಹಕಾರಿ ಬಡಾವಣೆ ನಿರ್ಮಾಣ ಹಾಗೂ ನಿವೇಶನಕ್ಕೆ ಸಂಬಂಧಿಸಿದಂತೆ ಕಾನೂನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ. ಇದರಿಂದ ಅನುಮತಿಗೆ ಕಾಯುತ್ತಿರುವ ನೂರಾರು ವಸತಿ ನಿರ್ಮಾಣ ಸೊಸೈಟಿಗಳಿಗೆ ಅನುಮತಿ ನೀಡಲು ಸಾಧ್ಯವಾಗುತ್ತದೆ.. ರಾಜ್ಯದಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಸ್ಥಿತಿಗೆ ತರಲು ಎಲ್ಲ ರೀತಿಯ ಪ್ರಯತ್ನಗಳನ್ನು ನಡೆಸಲಾಗಿದೆ. ಇದಕ್ಕಾಗಿ ಅಧಿಕಾರಿಗಳ ಜೊತೆ ಚರ್ಚೆ ನಡೆಸಲಾಗಿದೆ. ಇಂದಿನ ಸಭೆಯಲ್ಲಿ ಹಲವು ಸಲಹೆ ಸೂಚನೆಗಳು ಬಂದವು ಅವುಗಳನ್ನು ಜಾರಿಗೊಳಿಸಲಾಗುತ್ತದೆ.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವ ರೂ.21 ಸಾವಿರ ಕೋಟಿಗಳನ್ನು ವೈದ್ಯಕೀಯ ಕಾಲೇಜುಗಳ ಮೂಲಸೌಲಭ್ಯ ಅಭಿವೃದ್ಧಿಗೆ ಬಳಸಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿ

ಉಚಿತ ಹಾಲು ವಿತರಣೆ ಇನ್ನೂ ಒಂದು ವಾರ ವಿಸ್ತರಣೆ ಮಾಡಲಾಗುವುದು. ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪಾವತಿಸಬೇಕಾಗಿರುವ ರೂ.2,834 ಕೋಟಿಯನ್ನು ಕೂಡಲೇ ಪಾವತಿಸಲು ಸೂಚಿಸಲಾಗಿದೆ. ಒಂದು ವೇಳೆ ಕಾರ್ಖಾನೆಗಳ ಮಾಲೀಕರು ಸರ್ಕಾರದ ಆದೇಶವನ್ನು ಪಾಲಿಸದೇ ಇದ್ದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಉತ್ತರ ಕರ್ನಾಟಕದ ಭಾಗದ ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಆಲಿಕಲ್ಲು ಮಳೆಯಿಂದ ಭತ್ತದ ಬೆಳೆ ನಾಶವಾಗಿರುವುದರಿಂದ ರೈತರಿಗೆ ಪರಿಹಾರ ನೀಡಲು ರೂ.45 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 14.04.2020

## 14. ಕೋವಿಡ್–19 ಸೋಂಕು ನಿಯಂತ್ರಣಕ್ಕೆ ಕ್ರಮ

ಕೋವಿಡ್–19 ಸೋಂಕು ನಿಯಂತ್ರಣ ಜಾರಿಗೊಳಿಸಿರುವ ಲಾಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿರುವವರು ಹಾಗೂ ನಿರ್ಗತಿಕರಿಗೆ ನೆರವಾಗಲು ಬಿಬಿಎಂಪಿ 'ಸಹಾಯ ಸೇತುವೆ' ಅಪ್ಲಿಕೇಷನ್ ಅಭಿವೃದ್ಧಿಪಡಿಸಿದೆ. ಕೋವಿಡ್ –19 ಸೋಂಕಿನ ವಿರುದ್ದದ ಹೋರಾಟದಲ್ಲಿ ಭಾಗಿಯಾಗುವವರು ಹಾಗೂ ದೇಣಿಗೆ ನೀಡಲು ಇಚ್ಛಿಸುವ ವ್ಯಕ್ತಿಗಳು ಅಥವಾ ಸಂಘ ಸಂಸ್ಥೆಗಳು ಸ್ವಯಂ ಪ್ರೇರಿತ ಸೇವೆ ಸಲ್ಲಿಸಲು ಇಚ್ಛಿಸುವ ವೈದ್ಯರು ಬಿಬಿಎಂಪಿ ಜೊತೆ ಸಂಪರ್ಕ ಸಾಧಿಸಲು ಈ ಆ್ಯಪ್ ವೇದಿಕೆ ಕಲ್ಪಿಸಲಿದೆ.

**ಆ್ಯಪ್‌ನ ಪ್ರಯೋಜನಗಳು:–**

- ನಾಗರಿಕರು ಹಾಗೂ ಸ್ವಯಂಸೇವಾ ಸಂಸ್ಥೆಗಳು ಈ ಆ್ಯಪ್‌ನಲ್ಲಿ ನೋಂದಣಿ ಮಾಡಿಕೊಂಡು ದೇಣಿಗೆ ನೀಡಬಹುದು.
- ನಿರ್ಗತಿಕರಿಗೆ ನೆರವಾಗಲು ಈ ಆ್ಯಪ್‌ನಲ್ಲಿ ಪಟ್ಟಿ ಮಾಡಲಾದ ಆಹಾರ ಸಾಮಗ್ರಿ ಅಥವಾ ಸರಕುಗಳನ್ನು ದಾನ ಮಾಡಬಹುದು. ಪಟ್ಟಿ ಮಾಡಿರದ ಸಾಮಗ್ರಿ ಅಥವಾ ಸರಕುಗಳನ್ನು ದೇಣಿಗೆ ನೀಡಲು ಕೋರಿಕೆ ಸಲ್ಲಿಸಬಹುದು.
- ಸಂಗ್ರಹ ಕೇಂದ್ರಗಳಿಗೆ ಸರಕು/ಸಾಮಗ್ರಿ ತಲುಪಿಸಲು ಪಾಸ್‌ಗಳನ್ನು ಈ ಆ್ಯಪ್ ಮೂಲಕವೇ ನೀಡಲಾಗುತ್ತದೆ. ದೇಣಿಗೆಗಾಗಿ ಸ್ವೀಕೃತಿ ನೀಡಲಾಗುತ್ತದೆ.
- ಸ್ವಯಂಸೇವಕರು ಮತ್ತು ವೈದ್ಯರು ತಾವು ನೀಡಬಯಸುವ ಸೇವೆಗಳನ್ನು ನೋಂದಾಯಿಸಬಹುದು.
- ಸ್ವಯಂಸೇವಕರಾಗಲು ಬಯಸುವವರು ನೋಂದಾಯಿಸಿ ಕೊಳ್ಳಬಹುದು.
- ವೈದ್ಯರು ತಮ್ಮ ವೈದ್ಯಕೀಯ ಪದವಿ ಪ್ರಮಾಣಪತ್ರ, ಪರವಾನಗಿ ಪತ್ರ, ವಿಳಾಸ, ಜಿಪಿಎಸ್ ಲೋಕೇಷನ್ ಮತ್ತು ಸೇವೆಗೆ ಲಭ್ಯವಿರುವ ಸಮಯವನ್ನು ನಮೂದಿಸಬೇಕು.
- ಜನರು ವಾಸಸ್ಥಳದ ಹತ್ತಿರವಿರುವ ವೈದ್ಯರ ಬಗ್ಗೆ ಆ್ಯಪ್ ಮೂಲಕ ತಿಳಿದುಕೊಂಡು, ಸೇವೆ ಪಡೆಯಬಹುದು.
- ಆಹಾರ ಸರಬರಾಜು, ಸ್ವಚ್ಛತಾ ಕಾರ್ಯ, ದೇಣಿಗೆ ಸಂಗ್ರಹ ಮತ್ತು ಕೈಗೊಂಡಿರುವ ಇತರೆ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆಯನ್ನೂ ಈ ಆ್ಯಪ್ ಮೂಲಕ ನಿರ್ವಹಿಸಬಹುದು.
- ಇಂದಿರಾ ಕ್ಯಾಂಟೀನ್, ಫೀವರ್ ಕ್ಲಿನಿಕ್‌ಗಳ ಮಾಹಿತಿಯೂ ಲಭ್ಯ.

**ಹೋಮ್ ಡೆಲಿವರಿ ಸಹಾಯವಾಣಿ:** ಲಾಕ್‌ಡೌನ್ ಸಂದರ್ಭದಲ್ಲಿ ಜನರ ಮನೆಗೆ ಅಗತ್ಯ ಸಾಮಗ್ರಿ ಹಾಗೂ ಔಷಧ ತಲುಪಿಸಲು ನೆರವಾಗಲು ಬೆಂಗಳೂರು ದಕ್ಷಿಣ ಪೊಲೀಸ್ ವಿಭಾಗ ವ್ಯಾಪ್ತಿಯಲ್ಲಿ ಇತ್ತೀಚೆಗೆ ಆರಂಭಿಸಿರುವ 'ಹೋಮ್ ಡೆಲಿವರಿ ಸಹಾಯವಾಣಿ' ಸೇವೆಯನ್ನು ನಗರದಾದ್ಯಂತ ವಿಸ್ತರಿಸಲು ಬಿಬಿಎಂಪಿ ಚಿಂತನೆ ನಡೆಸಿದೆ.

ಈ ಸಂಬಂಧ ಮಾನ್ಯ ಕಂದಾಯ ಸಚಿವ ಆರ್. ಆಶೋಕ ಹಾಗೂ ಮೇಯರ್ ಎಂ. ಗೌತಮ್ ಕುಮಾರ್ ನೇತೃತ್ವದಲ್ಲಿ ಸಭೆ ನಡೆಸಿ, ಈ ಸೇವೆಯನ್ನು ನಗರದಾದ್ಯಂತ ವಿಸ್ತರಿಸಲು ಬಿಬಿಎಂಪಿಯ ಪ್ರತಿ

ವಲಯದ ಜಂಟಿ ಆಯುಕ್ತರು ಹಾಗೂ ಡಿಸಿಪಿಗಳ ನೇತೃತ್ವದಲ್ಲಿ ದಿನಸಿ, ತರಕಾರಿ ಔಷಧಿಗಳ ಮಳಿಗೆಗಳ ಸಮೀಕ್ಷೆ ನಡೆಸಿ ಜಿಯೋ ಟ್ಯಾಗಿಂಗ್ ಮಾಡಿ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 14.04.2020

## 15. ಕೋವಿಡ್ ಸಮಗ್ರ ಮಾಹಿತಿಗೆ ಡ್ಯಾಶ್ ಬೋರ್ಡ್

ಆರೋಗ್ಯ ಇಲಾಖೆ, ವಾರ್ತಾ ಇಲಾಖೆ, ಬಿಬಿಎಂಪಿ ಪ್ರತ್ಯೇಕವಾಗಿ ವೆಬ್‌ಸೈಟ್‌ಗಳಲ್ಲಿ ಕೋವಿಡ್‌ಗೆ ಸಂಬಂಧಿಸಿದಂತೆ ಮಾಹಿತಿ ನೀಡುತ್ತಿವೆ. ಇದರಿಂದ ಸಾರ್ವಜನಿಕರಲ್ಲಿ ಗೊಂದಲ ಉಂಟಾಗುತ್ತಿದ್ದು, ಈ ಗೊಂದಲ ನಿವಾರಿಸಲು ಸಮಗ್ರ ಮಾಹಿತಿ ಒಂದೇ ಕಡೆ ಸಿಗುವಂತಾಗಲೂ ಪೋರ್ಟಲ್ ಆರಂಭಿಸಲು ಮುಖ್ಯಮಂತ್ರಿಯವರು ಸೂಚನೆ ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:14.04.2020

## 16. ಕೋವಿಡ್: ಆಯುರ್ವೇದ ಚಿಕಿತ್ಸೆಗೆ ರಾಜ್ಯ ಸರ್ಕಾರ ಸಮ್ಮತಿ

ಕೋವಿಡ್–19 ರೋಗಿಗಳಿಗೆ ಪ್ರಾಯೋಗಿಕವಾಗಿ ಆಯುರ್ವೇದ ಚಿಕಿತ್ಸೆ ಆರಂಭಿಸುವುದಕ್ಕೆ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿದೆ. ಹಿರಿಯ ಆಯುರ್ವೇದ ವೈದ್ಯ ಡಾ: ಗಿರಿಧರ ಕಜೆ ಅವರೊಂದಿಗೆ ಮುಖ್ಯಮಂತ್ರಿಯವರು ಚರ್ಚಿಸಿದ ಬಳಿಕ ಈ ನಿರ್ಧಾರ ಪ್ರಕಟಿಸಿದರು.

‘ಆರಂಭದಲ್ಲಿ ಹತ್ತು ಮಂದಿ ರೋಗಿಗಳಿಗೆ ಕೋವಿಡ್ ಆಸ್ಪತ್ರೆಯಲ್ಲೇ ಆಯುರ್ವೇದ ಗುಳಿಗೆ ನೀಡಲಾಗುವುದು. ಅದರ ಫಲಿತಾಂಶ ನೋಡಿಕೊಂಡು ಸರ್ಕಾರ ಮುಂದಿನ ನಿರ್ಧಾರ ಕೈಗೊಳ್ಳಲಿದೆ’ ಎಂದು ಗಿರಿಧರ ಕಜೆ ಸುದ್ದಿಗಾರರಿಗೆ ತಿಳಿಸಿದರು.

ಸರ್ಕಾರದಿಂದ ಅಧಿಕೃತ ಆದೇಶ ಬಂದ ತಕ್ಷಣ ಈ ಔಷಧ ಪ್ರಯೋಗ ಆರಂಭವಾಗಲಿದೆ. ‘ನಾನು ಪ್ರಚಾರಕ್ಕಾಗಿ ಈ ಕೆಲಸ ಮಾಡಿಲ್ಲ. ರಾಜ್ಯ ಸರ್ಕಾರದ ಮೂಲಕ ಐಸಿಎಂಆರ್‌ಗೆ ಪ್ರಸ್ತಾವನೆ ಕಳುಹಿಸಲಾಗಿತ್ತು. ಎಲ್ಲವನ್ನೂ ಪರಿಶೀಲಿಸಿಯೇ ಈ ಒಪ್ಪಿಗೆ ಕೊಟ್ಟಿದ್ದಾರೆ. ಕೋವಿಡ್ ಗುಣಪಡಿಸುವ ಔಷಧ ಆಯುರ್ವೇದದಲ್ಲಿ ಇದೆ. ಆಯುರ್ವೇದ ಔಷಧದಿಂದ ರೋಗಿಗಳು ಗುಣಮುಖರಾಗುವುದು ಸಾಬೀತಾದರೆ ಮುಂದೆ ಉಚಿತವಾಗಿ ಔಷಧ ನೀಡಲು ಸಿದ್ಧ’ ಎಂದರು.

ನಿರ್ದೇಶನ ನೀಡಲು ಸುಪ್ರೀಂ ನಕಾರ:– ಕೋವಿಡ್–19 ಚಿಕಿತ್ಸೆಗೆ ಪರ್ಯಾಯವಾಗಿ ಹೋಮಿಯೋಪತಿ ಮತ್ತು ಯುನಾನಿ ಔಷಧ ಬಳಸುವ ಸಾಧ್ಯತೆ ಕುರಿತಂತೆ ಸಂಬಂಧಿಸಿದವರಿಗೆ ಸೂಚಿಸಬೇಕು ಎಂದು ಕೋರಿದ್ದ ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಲು ಸುಪ್ರೀಂ ನಿರಾಕರಿಸಿದೆ.

ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠದ ಎದುರು ಅರ್ಜಿದಾರರ ಪರ ವಾದಿಸಿದ ವಕೀಲರು, ‘ಸದ್ಯ ಕೋವಿಡ್ ಚಿಕಿತ್ಸೆಗೆ ನಿರ್ದಿಷ್ಟ ಔಷಧ ಇಲ್ಲದ ಕಾರಣ ಯುನಾನಿ ಮತ್ತು ಹೋಮಿಯೋಪತಿ ಔಷಧ ಬಳಕೆಯ ಸಾಧ್ಯತೆಗಳನ್ನು ಪರಿಶೀಲಿಸಬಹುದು ‘ ಎಂದಿದ್ದರು.

ಆದರೆ ಪೀಠವು ‘ಕೊರೊನಾ ಎಂಬುದು ನೂತನ ವೈರಾಣು. ಈ ಕುರಿತು ನಾವು ಪ್ರಯೋಗ ಮಾಡಲಾಗದು. ಪರಿಣಿತರು ಔಷಧವನ್ನು ಕಂಡುಹಿಡಿಯಲಿ ಅದಕ್ಕಾಗಿ, ಕಾಯೋಣ ಎಂದು ಪ್ರತಿಕ್ರಿಯಿಸಿತು. ಡಾ. ಸಿ ಆರ್. ಶಿವರಾಂ ಎಂಬವರು ಸಲ್ಲಿಸಿದ್ದ ಅರ್ಜಿ ವಜಾಮಾಡಲಾಯಿತು.

ಆಧಾರ:ಪ್ರಜಾವಾಣಿ, ದಿನಾಂಕ:16.04.2020

## 17. ಎಂಟು ಹಾಟ್‌ಸ್ಪಾಟ್ ಜಿಲ್ಲೆಗಳಲ್ಲಿ ಹೆಚ್ಚು ನಿಗಾ

ಸೋಂಕಿತರ ಸಂಖ್ಯೆ ಹೆಚ್ಚಿರುವ ಹಾಗೂ ಸೋಂಕು ಹರಡಬಹುದಾದ ರಾಜ್ಯದ ಎಂಟು ಜಿಲ್ಲೆಗಳನ್ನು ಕೇಂದ್ರ ಸರ್ಕಾರ ಹಾಟ್‌ಸ್ಪಾಟ್ ಎಂದು ಗುರುತಿಸಿದ್ದು, ಇಲ್ಲಿ ಹೆಚ್ಚು ನಿಗಾ ವಹಿಸುವಂತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಆದೇಶಿಸಿದ್ದಾರೆ.

ದೇಶದ 170 ಜಿಲ್ಲೆಗಳನ್ನು ಹಾಟ್‌ಸ್ಪಾಟ್ ಎಂದು ಗುರುತಿಸಿದೆ. ಈ ಪೈಕಿ ಕರ್ನಾಟಕದ ಬೆಂಗಳೂರು ನಗರ, ಮೈಸೂರು, ಬೆಳಗಾವಿ, ದಕ್ಷಿಣ ಕನ್ನಡ, ಬೀದರ್, ಕಲಬುರ್ಗಿ, ಬಾಗಲಕೋಟೆ ಹಾಗೂ ಧಾರವಾಡ

ಜಿಲ್ಲೆಗಳು ಸೇರಿವೆ. ಈ ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಜೊತೆ ವಿಡಿಯೋ ಸಂವಾದ ನಡೆಸಿದ ಬೊಮ್ಮಾಯಿ, ಅಲ್ಲಿನ ಪರಿಸ್ಥಿತಿಗಳ ವಿವರ ಪಡೆದರು.

ಹಾಟ್‌ಸ್ಪಾಟ್ ಪ್ರದೇಶಗಳಲ್ಲಿ ಕಠಿಣ ನಿರ್ಬಂಧ ವಿಧಿಸುವುದು ಜಿಲ್ಲಾಡಳಿತದ ಹೊಣೆ, ಜನರ ಓಡಾಟ ನಿರ್ಬಂಧಿಸದೇ ಇದ್ದರೇ ಸೋಂಕು ಹರಡುವುದನ್ನು ತಡೆಯುವುದು ಅಸಾಧ್ಯ. ಹೆಚ್ಚಿನ ಸಂಖ್ಯೆಯ ಪೊಲೀಸ್ ಬಲ ಒದಗಿಸಲು ಸಿದ್ಧ. ಕೇಂದ್ರ ಸರ್ಕಾರದ ಸೂಚನೆಯಂತೆ ಈ ತಿಂಗಳ 20ರವರೆಗೆ ಬೆಂಗಳೂರು ಸೇರಿದಂತೆ ಹಾಟ್ ಸ್ಪಾಟ್ ಎಂದು ಘೋಷಿಸಿದ ಪ್ರದೇಶಗಳಲ್ಲಿ ಸರ್ಪಗಾವಲು ಹಾಕಿ, ನಿರ್ಬಂಧ ಹೇರಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:16.04.2020

## 18. ಕೃಷಿ ಉತ್ಪನ್ನ ಸಾಗಾಣೆಗೆ ಅಡ್ಡಿಯಿಲ್ಲ: ಸಚಿವರು

'ಸಮರ್ಪಕ ದಾಖಲೆಗಳೊಂದಿಗೆ ಕೃಷಿ ಉತ್ಪನ್ನಗಳನ್ನು ಸಾಗಿಸುವ ವಾಹನಗಳಿಗೆ ಅಡ್ಡಿಪಡಿಸುವಂತಿಲ್ಲ ಎಂದು ಕೇಂದ್ರ ಗೃಹ ಸಚಿವಾಲಯವೇ ಆದೇಶ ಹೊರಡಿಸಿದೆ' ಎಂದು ಸಹಕಾರ ಹಾಗೂ ಕೃಷಿ ಮಾರುಕಟ್ಟೆ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಕೇರಳಕ್ಕೆ ಸಂಪರ್ಕ ಕಲ್ಪಿಸುವ ಬಾವಲಿ ಚೆಕ್ ಪೋಸ್ಟ್ ಭಾಗದ ಜನರು, ಜನಪ್ರತಿನಿಧಿಗಳು ಸೋಂಕು ಭೀತಿಯಿಂದ ಸರಕು ಸಾಗಣೆ ವಾಹನಗಳ ಸಂಚಾರ ನಿಷೇಧಿಸಲು ಒತ್ತಾಯಿಸುತ್ತಿದ್ದಾರೆ. ಆದರೆ, ಸಂಚಾರ ನಿಷೇಧಿಸುವುದಿಲ್ಲ.

ರೈತರಿಂದ ಖರೀದಿಸಿ ಹಾಪ್‌ಕಾಮ್ಸ್ ಮೂಲಕವೇ ಹೆಚ್ಚಿನ ಪ್ರಮಾಣದಲ್ಲಿ ತರಕಾರಿ–ಹಣ್ಣು ಮಾರಾಟಕ್ಕೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜೊತೆಗೆ ರೈತರಿಗೆ ನೇರವಾಗಿ ಮಾರಾಟ ಮಾಡಲು ಅವಕಾಶ ಕೊಡಲಾಗಿದೆ ಎಂದು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ: 16.04.2020

## 19. 2 ಲಕ್ಷ ತ್ವರಿತ ಪರೀಕ್ಷಾ ಕಿಟ್ ಖರೀದಿ

ಕೋವಿಡ್–19 ಪತ್ತೆಗಾಗಿ ಹೆಚ್ಚುವರಿಯಾಗಿ ಎರಡು ಲಕ್ಷ ತ್ವರಿತ ಪರೀಕ್ಷಾ (ರ್‍ಯಾಪಿಡ್ ಟೆಸ್ಟ್) ಕಿಟ್‌ಗಳನ್ನು ಖರೀದಿಸಲು ಕೋವಿಡ್ ಕುರಿತ ಕಾರ್ಯಪಡೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಉಪ ಮುಖ್ಯಮಂತ್ರಿ ಡಾ: ಸಿ.ಎನ್.ಅಶ್ವತ್ಥನಾರಾಯಣ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಪಡೆ ಸಭೆಯಲ್ಲಿ ಗೃಹ ಸಚಿವ ಬಸವರಾಜ ಬೊಮ್ಮಾಯಿ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಕೋವಿಡ್ ರೋಗ ಲಕ್ಷಣಗಳು ಇರುವ ವ್ಯಕ್ತಿಯ ಕಫ ಮಾದರಿಗಳನ್ನು ಸಂಗ್ರಹಿಸಲು ರಾಜ್ಯದಲ್ಲಿ 250 ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗುವುದು. ತಾಲ್ಲೂಕಿಗೊಂದು ಕಿಯೋಸ್ಕ್ ಆರಂಭಿಸಲಾಗುವುದು. ಈ ಮೂಲಕ ಮಾದರಿ ಸಂಗ್ರಹ ಪ್ರಕ್ರಿಯೆಯನ್ನು ಮತ್ತಷ್ಟು ಹೆಚ್ಚಿಸಿ, ರೋಗ ಹರಡುವುದನ್ನು ತಡೆಯಲಾಗುವುದು.

'ವೈದ್ಯರ ರಕ್ಷಣಾ ಕವಚಗಳು (ಪಿಪಿಇ) ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇವೆ. ಅಗತ್ಯ ಇರುವ 25 ಸಾವಿರ ಆರ್‌ಟಿಪಿಸಿಆರ್ ಕಿಟ್‌ಗಳ ಖರೀದಿಗೂ ಒಪ್ಪಿಗೆ ನೀಡಲಾಯಿತು' ಎಂದು ಮಾಹಿತಿ ನೀಡಿದರು.

ಕೋವಿಡ್ ರೋಗಿಗಳಿಗೆ ಸರ್ಕಾರ ನಿಗದಿಪಡಿಸಿರುವ ಆಸ್ಪತ್ರೆಗಳಲ್ಲೇ ಚಿಕಿತ್ಸೆ ನೀಡಬೇಕು. ಕೆ.ಸಿ.ಜನರಲ್ ಸೇರಿದಂತೆ ಬೇರೆ ಮಾಮೂಲಿ ರೋಗಿಗಳು ಹೋಗುವ ಕಡೆಗೆ ಚಿಕಿತ್ಸೆ ನೀಡಬಾರದು ಎನ್ನುವ ತೀರ್ಮಾನವನ್ನು ಕೈಗೊಳ್ಳಲಾಯಿತು.

ಆಧಾರ:ಪ್ರಜಾವಾಣಿ, ದಿನಾಂಕ: 17.04.2020

## 20. ರಾಜ್ಯದಲ್ಲಿ ಸೋಂಕಿತರ ಸಂಖ್ಯೆ 315ಕ್ಕೆ ಏರಿಕೆ, ಹೊಸದಾಗಿ 152 ಮಂದಿ ಆಸ್ಪತ್ರೆಗೆ

### 2,780 ಶಂಕಿತರ ಮಾದರಿ ಪರೀಕ್ಷೆಗೆ ರವಾನೆ

ರಾಜ್ಯದಲ್ಲಿ ಕೋವಿಡ್ ಪ್ರಕರಣ ಪತ್ತೆಯಾದ ಬಳಿಕ ನಿಧಾನಗತಿಯಲ್ಲಿ ಏರಿಕೆ ಕಾಣುತ್ತಿದ್ದ ಸೋಂಕಿತರ ಸಂಖ್ಯೆ ನಾಲ್ಕು ದಿನಗಳಿಂದೀಚೆಗೆ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಒಂದೇ ದಿನ 36 ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿದ್ದು ಆತಂಕಕ್ಕೂ ಕಾರಣವಾಗಿದೆ.

ಮೊದಲ ಪ್ರಕರಣ ಪತ್ತೆಯಾಗಿ ಒಂದೂವರೆ ತಿಂಗಳು ಕಳೆಯುವಷ್ಟರಲ್ಲೇ ಸೋಂಕಿತರ ಸಂಖ್ಯೆ 315ಕ್ಕೆ ತಲುಪಿದೆ. ಎರಡು ದಿನಗಳ ಹಿಂದೆ ಮೈಸೂರಿನಲ್ಲಿ ಸೋಂಕಿತರ ಸಂಖ್ಯೆ ಏರುಗತಿಯಲ್ಲಿತ್ತು. ಹೊಸದಾಗಿ ಬೆಳಗಾವಿಯಲ್ಲಿ 17, ವಿಜಯಪುರದಲ್ಲಿ 7, ಬೆಂಗಳೂರಿನಲ್ಲಿ 5, ಮೈಸೂರಿನಲ್ಲಿ 3, ಕಲಬುರ್ಗಿಯಲ್ಲಿ 3 ಹಾಗೂ ಗದಗದಲ್ಲಿ 1 ಪ್ರಕರಣ ವರದಿಯಾಗಿದೆ.

**ಪರೀಕ್ಷೆ ಹೆಚ್ಚಳ:** 'ರಾಜ್ಯದಲ್ಲಿ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಳ ಮಾಡಲಾಗಿದೆ. ಏಪ್ರಿಲ್ 13 ರಂದು 766, ಏಪ್ರಿಲ್ 14ಕ್ಕೆ 1,090, ಏಪ್ರಿಲ್ 15ಕ್ಕೆ 1,376 ಹಾಗೂ ಏಪ್ರಿಲ್ 16ಕ್ಕೆ 1,240 ಮಂದಿಗಳ ರಕ್ತ ಹಾಗೂ ಗಂಟಲಿನ ದ್ರವವನ್ನು ಪರೀಕ್ಷೆ ಮಾಡಲಾಗಿದೆ. ಇದರಿಂದಾಗಿ ಸೋಂಕಿತರ ಸಂಖ್ಯೆಯಲ್ಲಿಯೂ ಹೆಚ್ಚಳವಾಗಿದೆ. ವರದಿಯಾದ ಪ್ರಕರಣಗಳಲ್ಲಿ 9 ಮಂದಿ ಕೇರಳ ಹಾಗೂ 5 ಮಂದಿ ಆಂಧ್ರಪ್ರದೇಶದವರು' ಎಂದು ಸಚಿವರು ಮಾಹಿತಿ ನೀಡಿದರು.

ದೆಹಲಿಯ ನಿಜಾಮುದ್ದೀನ್ ಪ್ರದೇಶಕ್ಕೆ ಭೇಟಿ ನೀಡಿದವರಲ್ಲಿ ಈಗಾಗಲೇ 46 ಮಂದಿಗೆ ಸೋಂಕು ದೃಢಪಟ್ಟಿದೆ. ಇವರೊಂದಿಗೆ ನೇರ ಸಂಪರ್ಕ ಹೊಂದಿದ್ದ 48 ಮಂದಿಗೂ ಸೋಂಕು ಹರಡಿದೆ. ಅದೇ ರೀತಿ, ಮೈಸೂರಿನಲ್ಲಿ ವರದಿಯಾದ 61 ಪ್ರಕರಣದಲ್ಲಿ 49 ಮಂದಿ ನಂಜನಗೂಡಿನ ಫಾರ್ಮಾ ಕಂಪೆನಿಯ ಸಿಬ್ಬಂದಿ ಹಾಗೂ ಅವರೊಂದಿಗೆ ನೇರ ಸಂಪರ್ಕ ಹೊಂದಿರುವವರಾಗಿದ್ದಾರೆ.

| **ರಾಜ್ಯದಲ್ಲಿ ವರದಿಯಾದ ಪ್ರಕರಣಗಳು** | |
|---|---|
| **ದಿನಾಂಕ** | **ಪ್ರಕರಣಗಳು** |
| ಮಾ.8 | 01 |
| ಮಾ.15 | 06 |
| ಮಾ.20 | 15 |
| ಮಾ.25 | 51 |
| ಮಾ.31 | 101 |
| ಏ.5 | 151 |
| ಏ.10 | 167 |
| ಏ.16 | 315 |

ಆಧಾರ:ಪ್ರಜಾವಾಣಿ, ದಿನಾಂಕ:17.04.2020

## 21. ಕೋವಿಡ್ ಸೋಂಕು ಮಾದರಿ ಸಂಗ್ರಹಕ್ಕೆ 'ಮೊಬೈಲ್ ಟೆಸ್ಟಿಂಗ್ ಕಿಯೋಸ್ಕ್'

ಕೋವಿಡ್–19 ಸೋಂಕು ಪರೀಕ್ಷಿಸಲು ಮತ್ತು ಮಾದರಿಗಳನ್ನು ಸಂಗ್ರಹಿಸಲು ಅನುಕೂಲವಾಗುವಂತೆ ಪ್ರತಿ ವಾರ್ಡ್‌ಗಳಲ್ಲಿ ಸಂಚಾರಿ ಕೋವಿಡ್ ಟೆಸ್ಟಿಂಗ್ ಕಿಯೋಸ್ಕ್ ಸ್ಥಾಪಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಮಂತ್ರ–ಇ ವೆಂಚರ್ಸ್ ಸಂಸ್ಥೆ ಅಭಿವೃದ್ಧಿಪಡಿಸಿರುವ ಈ ಕಿಯೋಸ್ಕ್ 'ಟೆಲಿಫೋನ್ ಬೂತ್' ಮಾದರಿಯಲ್ಲಿದೆ. ಅಲ್ಯೂಮಿನಿಯಂ ಮತ್ತು ಅಕ್ರಿಲಿಕ್‌ಗ್ಲಾಸ್‌ನಿಂದ ಇದನ್ನು ತಯಾರಿಸಲಾಗಿದೆ. ಹೊರ ಮೈ ಕೊರೊನಾ ಸೋಂಕು ನಿರೋಧಕವಾಗಿದೆ. ಇದು ಆರೋಗ್ಯ ಕಾರ್ಯಕರ್ತರಿಗೆ ಅಗತ್ಯವಾದ ಕೈಗವಸು ಮತ್ತು ಸೋಂಕಿತರ ಮಾದರಿಗಳನ್ನು ಸಂಗ್ರಹಿಸಲು ಮೆಡಿಕಲ್ ಕಿಟ್ ಹೊಂದಿದೆ. ಆರೋಗ್ಯ ಸಹಾಯಕರು ಪಿಪಿಇ (ಪರ್ಸನಲ್ ಪ್ರೊಟೆಕ್ಟಿವ್ ಇಕ್ವಿಪ್ಮೆಂಟ್) ಬಳಸಿಕೊಳ್ಳಲು ಸಹಕಾರಿಯಾಗಲಿದೆ.

ಈ ಬೂತ್ ಬಳಿ ತೆರಳಿ ಹೊರಮೈ ಮುಂದೆ ನಿಂತುಕೊಳ್ಳಬೇಕು ಆಗ ಆರೋಗ್ಯ ಸಹಾಯಕರು ಕೋವಿಡ್ ತಪಾಸಣೆಗೆ ಸಂಬಂಧಿಸಿದ ಮಾದರಿಗಳನ್ನು (ಸ್ಯಾಂಪಲ್) ಸಂಗ್ರಹಿಸುತ್ತಾರೆ. ಮಾದರಿಯನ್ನು ಸಂಗ್ರಹಿಸುವ ಮೊದಲು ಕೆಲವೊಂದು ಸ್ಯಾನಿಟೈಜೇಶನ್ ಪ್ರಕ್ರಿಯೆ ಕೈಗೊಳ್ಳುತ್ತಾರೆ. ಬೂತ್ ಬಳಿ ಹೋಗಿ ಪ್ರಕ್ರಿಯೆ ಮುಗಿಸಿಕೊಂಡು ಬರಲು ಕೇವಲ 5 ನಿಮಿಷದ ಅವಧಿ. ಸೋಂಕಿನ ಮಾದರಿಗಳನ್ನು ಸಂಗ್ರಹಿಸಿ ಸಮೀಪದ ಪ್ರಯೋಗಾಲಯಕ್ಕೆ ಮುಂದಿನ ಹಂತದ ಪರೀಕ್ಷೆಗೆ ಕಳುಹಿಸಲಾಗುವುದು.

ಕೋವಿಡ್ ಸೋಂಕಿನ ಕುರಿತು ಯಾರಿಗಾದರೂ ಶಂಕೆ ಇದ್ದರೆ ಫೀವರ್ ಕ್ಲಿನಿಕ್ ಅಥವಾ ಆಸ್ಪತ್ರೆಗೆ ಭೇಟಿ ನೀಡುವ ಬದಲು ಈ ಸಂಚಾರಿ ಕಿಯೋಸ್ಕ್‌ಗೆ ಭೇಟಿ ನೀಡಬಹುದು. ಆ ಮೂಲಕ ಅನಗತ್ಯವಾಗಿ ಸೋಂಕು ಹರಡುವುದನ್ನು ತಡೆಗಟ್ಟಲು ಸಾಧ್ಯವಿದೆ.

ಆಧಾರ:ಪ್ರಜಾವಾಣಿ, ದಿನಾಂಕ:17.04.2020.

## 22. 35 ಲಕ್ಷ ಕಟ್ಟಡಗಳ ಸಕ್ರಮಕ್ಕೆ ಒಪ್ಪಿಗೆ

ರಾಜ್ಯದಲ್ಲಿ ನಿಯಮ ಉಲ್ಲಂಘಿಸಿ ನಿರ್ಮಿಸಿರುವ ಸುಮಾರು 35 ಲಕ್ಷಕ್ಕೂ ಹೆಚ್ಚಿನ ಕಟ್ಟಡಗಳನ್ನು ಅಕ್ರಮ–ಸಕ್ರಮ ಯೋಜನೆಯಡಿ ಸಕ್ರಮಗೊಳಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

**ಬೆಂಗಳೂರಿನಲ್ಲಿ 3 ಲಕ್ಷ ಕಟ್ಟಡ:–** ಬೆಂಗಳೂರು ನಗರವೊಂದರಲ್ಲೇ ಸುಮಾರು 2.93 ಲಕ್ಷ ಅನಧಿಕೃತ ಕಟ್ಟಡ. ಹಳೆಯ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ 35 ಲಕ್ಷಕ್ಕೂ ಹೆಚ್ಚು ಅನಧಿಕೃತ ಕಟ್ಟಡಗಳಿದ್ದು, ಈಗ ಆ ಸಂಖ್ಯೆ ಎರಡು ಪಟ್ಟು ಹೆಚ್ಚಾಗಿರುತ್ತದೆ. ಇತರೆ ನಗರಗಳಲ್ಲಿ ಅನಧಿಕೃತ ಕಟ್ಟಡಗಳಿಗೆ ದ್ವಿಗುಣ ತೆರಿಗೆ ವಿಧಿಸಲಾಗುತ್ತಿದೆ. ಕಾನೂನಿನ ಪ್ರಕಾರ ಶೇ.50 ರವರೆಗಿನ ನಿರ್ಮಾಣ ಉಲ್ಲಂಘನೆಗೆ ಶೇ.6ರವರೆಗೆ ದಂಡ, ಶೇ.50 ಕ್ಕಿಂತ ಹೆಚ್ಚಿನ ಉಲ್ಲಂಘನೆಗೆ ಮಾರುಕಟ್ಟೆ ಮೌಲ್ಯದ ಶೇ.25ರವರೆಗೆ ದಂಡ ವಿಧಿಸಲಾಗುವುದು.

ಕೋವಿಡ್–19 ನಿಂದ ಆರ್ಥಿಕವಾಗಿ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯ ಸರ್ಕಾರ ಈ ಮೂಲಕ ಆದಾಯ ಸಂಗ್ರಹಿಸಲು ಮುಂದಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸುಪ್ರಿಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿ, ನ್ಯಾಯಾಲಯಕ್ಕೆ ಮನವರಿಕೆ ಮಾಡಿ ಪ್ರಕರಣ ಹಿಂದಕ್ಕೆ ಪಡೆಯಲು ಸರ್ಕಾರ ತೀರ್ಮಾನಿಸಿದೆ. ಅಕ್ರಮ–ಸಕ್ರಮ ಯೋಜನೆಯಿಂದ ಲಕ್ಷಾಂತರ ಕುಟುಂಬಗಳಿಗೆ ಪ್ರಯೋಜನವಾಗುತ್ತದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸಿದ್ಧರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ಅಕ್ರಮ ಸಕ್ರಮ ಯೋಜನೆಯನ್ನು ಪ್ರಶ್ನಿಸಿ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ಅಧ್ಯಕ್ಷತೆಯ ನಮ್ಮ ಬೆಂಗಳೂರು ಪ್ರತಿಷ್ಠಾನ ಸುಪ್ರಿಂಕೋರ್ಟ್‌ನಲ್ಲಿ ದಾವೆ ಹೂಡಿತ್ತು. ಸಭೆಯಲ್ಲಿ ರಾಜೀವ್ ಚಂದ್ರಶೇಖರ್ ಅವರು ಹಾಜರಿದ್ದರು. ಮೊಕದ್ದಮೆಯನ್ನು ಹಿಂದಕ್ಕೆ ಪಡೆಯಲು ಅವರನ್ನು ಕೋರಲಾಯಿತು.

ನಿಯಮ ಉಲ್ಲಂಘಿಸಿ ಕಟ್ಟಿದ ಕಟ್ಟಡಗಳ ಸಕ್ರಮಗೊಳಿಸಲು ಒಂದು ವಾರದೊಳಗೆ ಹೊಸ ಮಾರ್ಗಸೂಚಿ ರಚಿಸಲು ತೀರ್ಮಾನಿಸಲಾಗಿದೆ, ಇತರ ರಾಜ್ಯಗಳಲ್ಲಿ ಕೈಗೊಂಡಿರುವ ಕ್ರಮಗಳ ಅಧ್ಯಯನ ನಡೆಸಲು ಸಹ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:18.04.2020.

## 23. ಸೋಂಕಿತರ ಪರೀಕ್ಷೆ ಪ್ರಮಾಣ ಹೆಚ್ಚಿಸಿ

ಕೇರಳ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರಕ್ಕೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಸೋಂಕಿತರ ಪರೀಕ್ಷೆ ಕಾರ್ಯ ಮಂದಗತಿಯಲ್ಲಿ ಸಾಗಿದೆ. ಪರೀಕ್ಷೆ ಪ್ರಮಾಣವನ್ನು ಹೆಚ್ಚಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದೇನೆ ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸೋಂಕು ಕಂಡುಬಂದ ಸಂದರ್ಭದಲ್ಲೇ ಸರ್ಕಾರ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿತ್ತು. ನಾವು ಆಗಲೇ ಸರ್ಕಾರಕ್ಕೆ ಸಲಹೆ ನೀಡಿದ್ದೆವು. ವಿಧಾನಮಂಡಲ ಅಧಿವೇಶನ ಮುಂದೂಡಿ ಕೊರೊನಾ ಸೋಂಕಿನತ್ತ ಗಮನ ಹರಿಸಿ ಎಂದು ಹೇಳಿದ್ದೆವು. ಸರ್ಕಾರ ವಿಳಂಬ ಮಾಡಿದ್ದರಿಂದಲೇ ಪರಿಸ್ಥಿತಿ ಈ ಹಂತ ತಲುಪಿದೆ. ಸೋಂಕಿತರ ಪರೀಕ್ಷೆಗೆ ಕೇರಳ ಮಾದರಿ ಅನುಸರಿಸುವುದು ಸೂಕ್ತ. ವಿದೇಶದಿಂದ ಬಂದವರ ಸಂಖ್ಯೆ ಅಲ್ಲಿ ಹೆಚ್ಚಾಗಿತ್ತು. ಆದರೂ ಅಲ್ಲಿ ಸೋಂಕು ನಿಯಂತ್ರಣಕ್ಕೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಸೋಂಕಿತರ ಸಂಖ್ಯೆ ಕಡಿಮೆ ಆಗುತ್ತಿದೆ. ನಮ್ಮಲ್ಲಿ ಹೆಚ್ಚಾಗುತ್ತಿದೆ. ಈ ಬಗ್ಗೆ ಅಧ್ಯಯನ ನಡೆಸಬೇಕು ಎಂದರು.

ನಂಜನಗೂಡಿನ ಜ್ಯುಬಿಲಿಯೆಂಟ್ ಕಾರ್ಖಾನೆಯಲ್ಲಿ ಚೀನಾದ ಕಂಟೈನರ್‌ನಿಂದ ಸೋಂಕು ಬಂದಿದೆ ಎಂದು ಹೇಳಲಾಗಿತ್ತು. ಆದರೆ, ಪರೀಕ್ಷಾ ವರದಿಯಲ್ಲಿ ನೆಗಟಿವ್ ಬಂದಿದೆ. ಆರಂಭದಲ್ಲೇ ಅಲ್ಲಿ ಸರಿಯಾದ ರೀತಿಯಲ್ಲಿ ಕ್ವಾರಂಟೈನ್ ಮಾಡಿದ್ದರೆ ಸೋಂಕು ವೇಗವಾಗಿ ಹರಡುತ್ತಿರಲಿಲ್ಲ. ಹಣ್ಣು ತರಕಾರಿ ಬೆಳೆಯುತ್ತಿರುವ ರೈತರಿಗೆ ದೊಡ್ಡ ಅನ್ಯಾಯವಾಗುತ್ತಿದೆ ಬೆಳೆದಿದ್ದನ್ನು ಖರೀದಿ ಮಾಡುವವರಿಲ್ಲ. ಸರ್ಕಾರವೇ ಖರೀದಿ ಮಾಡಲಿ ಎಂದು ಒತ್ತಾಯಿಸಿದರೂ ಪ್ರಯೋಜನವಾಗಿಲ್ಲ. ಪರೀಕ್ಷೆಗೆ ಕಿಟ್‌ಗಳೂ ಸರಬರಾಜು ಆಗುತ್ತಿಲ್ಲ. ಆ ಬಗ್ಗೆ ಸರ್ಕಾರ ತುರ್ತಾಗಿ ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:18.04.2020.

## 24. ಐಟಿ–ಬಿಟಿ ಶೇ.50 ರಷ್ಟು ಸಿಬ್ಬಂದಿ ಕಚೇರಿಗೆ

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರದ (ಐಟಿ,ಬಿಟಿ) ಶೇ.50ರಷ್ಟು ಸಿಬ್ಬಂದಿ ಕಚೇರಿಗೆ ಹೋಗಿ ಕಾರ್ಯನಿರ್ವಹಿಸಲು ಅವಕಾಶ ಇರುತ್ತದೆ ಎಂದು ಐಟಿ–ಬಿಟಿ ಸಚಿವ ಡಾ:ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಐಟಿ–ಬಿಟಿ ಸಿಬ್ಬಂದಿಗೆ ಪಾಸ್, ಸಂಪರ್ಕ ಸಾರಿಗೆ ವ್ಯವಸ್ಥೆ, ಸ್ಕ್ರೀನಿಂಗ್, ಇಂಟರ್ನೆಟ್ ವ್ಯವಸ್ಥೆ ಸೇರಿದಂತೆ ಹಲವು ಪ್ರಮುಖ ವಿಚಾರಗಳ ಕುರಿತು ಈ ಸಂಸ್ಥೆಗಳ ಮುಖ್ಯಸ್ಥರೊಂದಿಗೆ ವಿಡಿಯೋ ಸಂವಾದ ನಡೆಸಿದ ಬಳಿಕ ಯಾವುದೇ ಹೊಸ ಕೆಲಸದ ಆದೇಶ ಸಿಗುತ್ತಿಲ್ಲ ಎಂಬ ಕಾರಣಕ್ಕೆ ಕಂಪನಿ ಬಾಗಿಲು ಹಾಕುವುದು ಅಥವಾ ಉದ್ಯೋಗಿಗಳನ್ನು ಕೆಲಸದಿಂದ ತೆಗೆಯುವುದು ಸರಿ ಅಲ್ಲ. ಏಕೆಂದರೆ ಈಗ ಹೊಸ ಕೆಲಸ ಹುಡುಕಿಕೊಳ್ಳುವುದು ಕಷ್ಟವಾಗುತ್ತದೆ. ಕಂಪನಿ ಮುಚ್ಚುವ ಬದಲು ಸಂಬಳ ಕಡಿತ ಮುಂತಾದ ಮಾರ್ಗೋಪಾಯಗಳನ್ನು ಕಂಡುಕೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಎಲ್ಲ ಕಂಪನಿಗಳು ಇದೇ ನಿಯಮ ಪಾಲಿಸಬೇಕು ಎಂದರು. ಸಿಬ್ಬಂದಿಯಲ್ಲಿ ಸೋಂಕು ಕಂಡು ಬಂದರೆ ಪರಿಸ್ಥಿತಿ ಹೇಗೆ ನಿಭಾಯಿಸಬೇಕೆಂದು ಇಲಾಖಾ ಮುಖ್ಯಸ್ಥರು ಕೋರಿದಾಗ, ಸಚಿವರು ಆರೋಗ್ಯ ಇಲಾಖೆ ಜೊತೆ ಮಾತುಕತೆ ನಡೆಸಿ ಸೂಕ್ತ ಮಾರ್ಗದರ್ಶನ ನೀಡುವ ಭರವಸೆಯನ್ನು ಸಚಿವರು ಕೊಟ್ಟರು.

ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಶಾ, ವಿಜಿಐಟಿಯ ಕ್ರಿಸ್ ಗೋಪಾಲಕೃಷ್ಣನ್, ಆಕ್ಸಲ್ ಪಾರ್ಟರ್‌ನ ಪ್ರಶಾಂತ್ ಪ್ರಕಾಶ್, ಏಬಲ್ ಇಂಡಿಯಾದ ಶ್ರೀಕುಮಾರ್ ಸೂರ್ಯನಾರಾಯಣ್ ಬಿಜಿಎಸ್‌ಎಲ್‌ನ ಪ್ರಕಾಶ್ ಗೋಪಾಲನಿ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:18.04.2020.

## 25. 10 ಪ್ರಯೋಗಾಲಯಗಳು ಶೀಘ್ರ ಆರಂಭ

ಪ್ರತಿ ಜಿಲ್ಲೆಯಲ್ಲಿಯೂ ಕನಿಷ್ಠ ಎರಡು ಹಾಗೂ ವೈದ್ಯಕೀಯ ಕಾಲೇಜಿನಲ್ಲಿ ಒಂದು ಪ್ರಯೋಗಾಲಯ ಇರಬೇಕೆಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಸೂಚಿಸಿದೆ. ಈ ತಿಂಗಳ ಅಂತ್ಯಕ್ಕೆ ಹೊಸದಾಗಿ 10 ಪರೀಕ್ಷಾ ಪ್ರಯೋಗಾಲಯ ಆರಂಭಿಸಲಾಗುವುದು ಎಂದು ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

ಸದ್ಯ 11 ಸರ್ಕಾರಿ, 5 ಖಾಸಗಿ ಪ್ರಯೋಗಾಲಯಗಳು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ಸೋಂಕು ಹರಡುವಿಕೆ ತಡೆಯುವ ಉದ್ದೇಶದಿಂದ ಕೊರೊನಾ ಮುಕ್ತ ಜಿಲ್ಲೆಗಳಲ್ಲಿ ಕೂಡ ಕೋವಿಡ್–19 ಪರೀಕ್ಷೆಗಳನ್ನು ಮಾಡಲು ನಿರ್ಧರಿಸಲಾಗಿದೆ. ಜ್ವರ ಸೇರಿದಂತೆ ಸೋಂಕು ಲಕ್ಷಣ ಇರುವವರನ್ನು ಗುರುತಿಸಿ, ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಈ ಸಂಬಂಧ ಅಗತ್ಯ ಪರೀಕ್ಷಾ ಕಿಟ್‌ಗಳನ್ನು ದಾಸ್ತಾನು ಮಾಡಿಕೊಳ್ಳಲಾಗುವುದು. ನಂಜನಗೂಡಿನ ಫಾರ್ಮಾ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 1,705 ಮಂದಿಯನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಅದರಲ್ಲಿ 1,225 ಮಂದಿಗೆ ಪರೀಕ್ಷೆ ಮಾಡಲಾಗಿದ್ದು, 61 ಮಂದಿಗೆ ಈವರೆಗೆ ಸೋಂಕು ದೃಢಪಟ್ಟಿದೆ. 480 ಮಂದಿಯ ವರದಿ ಬರಬೇಕಿದೆ ಎಂದು ಮಾಹಿತಿ ನೀಡಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ತಜ್ಞ ವೈದ್ಯರ ಜೊತೆಗೆ ಸಭೆ ನಡೆಸಿ ಸಲಹೆಗಳನ್ನು ಪಡೆದಿದ್ದಾರೆ. ಡಾ:ಸುದರ್ಶನ್ ಬಲ್ಲಾಳ್, ಡಾ:ಗಂಗಾಧರ್, ಡಾ:ರವಿ, ಡಾ: ಪ್ರದೀಪ್, ಡಾ: ಸುದರ್ಶನ್ ಸಭೆಯಲ್ಲಿ

ಪಾಲ್ಗೊಂಡಿದ್ದು ಪ್ರಾರಂಭಿಕ ಹಂತದಲ್ಲಿ ರೋಗ ಪತ್ತೆ ಮಾಡಿದಲ್ಲಿ ವ್ಯಕ್ತಿಗೆ ಅಗತ್ಯ ಚಿಕಿತ್ಸೆಯನ್ನು ನೀಡಿ ಜೀವ ಉಳಿಸಿಕೊಳ್ಳಬಹುದು ಎಂಬ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ.

ಎಲ್ಲ ರೋಗಿಗಳು ಲಕ್ಷಣ ಕಾಣಿಸಿಕೊಂಡ ನಾಲ್ಕು ದಿನಗಳ ಬಳಿಕ ಆಸ್ಪತ್ರೆಗಳಿಗೆ ಬರುತ್ತಿದ್ದಾರೆ. ಲಕ್ಷಣಗಳು ಕಾಣಿಸಿಕೊಂಡ ಕೂಡಲೇ ಫೀವರ್ ಕ್ಲಿನಿಕ್‌ಗಳಿಗೆ ಹೋಗಿ ವೈದ್ಯರನ್ನು ಸಂಪರ್ಕಿಸುವಂತೆ ನೋಡಿಕೊಳ್ಳಬೇಕು, ತೀವ್ರನಿಗಾ ಘಟಕದಲ್ಲಿ ಇರುವವರ ಚಿಕಿತ್ಸೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ ವಿಶೇಷ ಪರೀಕ್ಷೆ ನಡೆಸಬೇಕೆಂಬ ಸಲಹೆಯನ್ನು ವೈದ್ಯರು ನೀಡಿದ್ದಾರೆ ಎಂದು ಸಚಿವ ಎಸ್. ಸುರೇಶ್ ಕುಮಾರ್ ಮಾಹಿತಿ ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:18.04.2020

## 26. ಎಪಿಎಲ್, ಬಿಪಿಎಲ್ ಕುಟುಂಬಗಳಿಗೆ ಸರ್ಕಾರದ ಕೊಡುಗೆ

ಕೊರೊನಾದಿಂದ ಕಂಗೆಟ್ಟಿರುವ ಜನರಿಗೆ ಪರಿಹಾರ ನೀಡುವ ಸಲುವಾಗಿ ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದವರಿಗೂ ಅಕ್ಕಿ ವಿತರಿಸಲು ಸರ್ಕಾರ ಮುಂದಾಗಿದೆ.

ಅರ್ಜಿ ಸಲ್ಲಿಸಿದ್ದಕ್ಕೆ ಪುರಾವೆ ತೋರಿಸಿದರೆ, ಒಟಿಪಿ ಆಧಾರದಲ್ಲಿ ಪಡಿತರ ಕೊಡಲಾಗುತ್ತದೆ. 1.89 ಲಕ್ಷ ಬಿಪಿಎಲ್ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ 10 ಕೆ.ಜಿ.ಯಂತೆ ಮೂರು ತಿಂಗಳು ಉಚಿತವಾಗಿ ನೀಡಲಾಗುವುದು. 1,09 ಲಕ್ಷ ಎಪಿಎಲ್ ಅರ್ಜಿದಾರರ ಪೈಕಿ ಅಕ್ಕಿ ಬೇಕು ಎಂದು ಕೇಳಿದ 61 ಸಾವಿರ ಮಂದಿಗೆ ಕೆ.ಜಿ.ಗೆ ರೂ.15ರ ದರದಲ್ಲಿ ಪ್ರತಿ ತಿಂಗಳು ಗರಿಷ್ಠ 10ಕೆ.ಜಿ. ಅಕ್ಕಿಯನ್ನು ಮುಂದಿನ ಮೂರು ತಿಂಗಳು ನೀಡಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ. ಗೋಪಾಲಯ್ಯ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಿಎಂಜಿಕೆವೈ ಯೋಜನೆಯಡಿಯಲ್ಲಿ 3 ತಿಂಗಳು 5 ಕೆ.ಜಿ. ಅಕ್ಕಿ, 1 ಕೆ.ಜಿ ಬೇಳೆ ಕೊಡುತ್ತಿದ್ದು, ಮೇ 1 ರಿಂದ ರಾಜ್ಯದ 19,800 ನ್ಯಾಯಬೆಲೆ ಅಂಗಡಿಗಳಲ್ಲಿ ಇದನ್ನು ವಿತರಿಸಲಾಗುವುದು. ರಾಜ್ಯದಲ್ಲಿರುವ 1.19 ಕೋಟಿ ಪಡಿತರ ಚೀಟಿದಾರರಿಗೆ ಕೇಂದ್ರದಿಂದ ಉಚಿತ ಆಹಾರ ಧಾನ್ಯ ಪೂರೈಕೆಯಾದರೆ 8 ಲಕ್ಷ ಪಡಿತರ ಚೀಟಿದಾರರಿಗೆ ರಾಜ್ಯದಿಂದ ಪೂರೈಕೆಯಾಗುತ್ತದೆ. ಸರ್ಕಾರ ಇದಕ್ಕಾಗಿ 3 ತಿಂಗಳ ಅವಧಿಗೆ ರೂ.148 ಕೋಟಿ ಅನುದಾನಕ್ಕೆ ಅಂಗೀಕಾರ ನೀಡಿದೆ ಎಂದು ಅವರು ವಿವರಿಸಿದರು. ರಾಯಚೂರು, ವಿಜಯಪುರಗಳಲ್ಲಿ 1 ಲಕ್ಷ ಟನ್ ಹಿಂಗಾರು ಜೋಳ ದಾಸ್ತಾನು ಮಾಡಲು ಕೇಂದ್ರ ಅನುಮತಿ ನೀಡಿದೆ. ಏಪ್ರಿಲ್ 15 ರಿಂದ ಒಂದು ತಿಂಗಳ ಅವಧಿಗೆ ಭತ್ತದ ದಾಸ್ತಾನಿಗೂ ಕೇಂದ್ರದ ಅನುಮತಿ ದೊರತಿದೆ.

29.23 ಲಕ್ಷ ಕುಟುಂಬಗಳ ಖಾತೆಗಳಿಗೆ ಉಜ್ವಲ ಯೋಜನೆಯ ಹಣ ಸಂದಾಯವಾಗಿದೆ. ರೂ.8 ಲಕ್ಷದ ಪೈಕಿ 6.58ಲಕ್ಷ ಸಿಲಿಂಡರ್ ಪೂರೈಸಲಾಗಿದೆ. ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆಯಡಿಯಲ್ಲಿ 1 ಲಕ್ಷ ಅನಿಲ ಸಂಪರ್ಕ ನೀಡಿದ್ದು 3 ಸಿಲಿಂಡರ್‌ಗಳನ್ನು ನೀಡಲು ಸರ್ಕಾರ ಒಪ್ಪಿದೆ. ಇದಕ್ಕಾಗಿ ರೂ.25 ಕೋಟಿ ಅನುದಾನ ಮಂಜೂರಾಗಿದೆ ಎಂದು ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:18.04.2020.

## 27. ಹೆಜ್ಜೆ ಹಿಂದಿಟ್ಟ ಸರ್ಕಾರ

ಕೋವಿಡ್ 19 ಪ್ರಕರಣಗಳು ಪತ್ತೆಯಾದ ಪ್ರದೇಶಗಳನ್ನು ಹೊರತುಪಡಿಸಿ ಉಳಿದ ಕಡೆಗಳಲ್ಲಿ ಲಾಕ್‌ಡೌನ್ ನಿರ್ಬಂಧ ಸಡಿಲಿಸುವುದಾಗಿ ಪ್ರಕಟಿಸಿದ್ದ ರಾಜ್ಯ ಸರ್ಕಾರ ಕೆಲವೇ ಗಂಟೆಗಳಲ್ಲಿ ಇಟ್ಟ ಹೆಜ್ಜೆಯಿಂದ ಹಿಂದೆ ಸರಿದಿದೆ. ಏಪ್ರಿಲ್ 20 ರಿಂದ ದ್ವಿಚಕ್ರವಾಹನ ಓಡಾಟಕ್ಕೆ ಹಾಗೂ ಐಟಿ–ಬಿಟಿ ಕಂಪನಿಗಳ ಸಿಬ್ಬಂದಿ ಶೇ:33ರಷ್ಟು ಮಂದಿ ಕಛೇರಿಗೆ ತೆರಳಲು ಅವಕಾಶ ಕಲ್ಪಿಸಲಾಗುವುದು ಎಂದು ಮುಖ್ಯಮಂತ್ರಿಯವರು ಪ್ರಕಟಿಸಿದ್ದರು. ಲಾಕ್‌ಡೌನ್ ಸಡಿಲಗೊಳಿಸುವ ತೀರ್ಮಾನದ ಬಗ್ಗೆ ಸಾರ್ವಜನಿಕ ವಲಯದಲ್ಲಿ ವಿರೋಧ ವ್ಯಕ್ತವಾದ ಬಳಿಕ ಈ ಎರಡು ನಿರ್ಧಾರಗಳನ್ನು ಕೈ ಬಿಡಲಾಯಿತು.

ನಿಯಂತ್ರಣ ವಲಯಗಳ ಮೇಲ್ವಿಚಾರಣೆಗೆ ಇನ್ಸಿಡೆಂಟ್ ಕಮಾಂಡರ್ ನೇಮಿಸಿ, ಮ್ಯಾಜಿಸ್ಟೀರಿಯಲ್ ಅಧಿಕಾರ ನೀಡಲಾಗುವುದು. ನಿಯಂತ್ರಣ ವಲಯದಲ್ಲಿ ಯಾರೂ ಮನೆಯಿಂದ ಹೊರಬರುವಂತಿಲ್ಲ ಅಗತ್ಯ

ವಸ್ತುಗಳನ್ನು ಮನೆ ಬಾಗಿಲಿಗೆ ತಲುಪಿಸಲಾಗುವುದು. ಬಫರ್ ವಲಯಗಳಲ್ಲಿ ಹೆಚ್ಚಿನ ಮುನ್ನೆಚ್ಚರಿಕೆ ವಹಿಸಲಾಗುವುದು.

ನಗರಗಳಲ್ಲಿ ಕಾರ್ಮಿಕರ ವಾಸ್ತವ್ಯಕ್ಕೆ ವ್ಯವಸ್ಥೆ ಇರುವ ಕಡೆಗಳಲ್ಲಿ ಕಟ್ಟಡ ನಿರ್ಮಾಣ ಚಟುವಟಿಕೆ ಆರಂಭಿಸಲು ಅನುಮತಿ ನೀಡಲಾಗುವುದು. ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನಾ ವಲಯದ ಕೈಗಾರಿಕೆಗಳು ಹಾಗೂ ನಗರಗಳಲ್ಲಿ ವಿಶೇಷ ಆರ್ಥಿಕ ವಲಯಗಳ (ಎಸ್‌ಇಝಡ್), ಕೈಗಾರಿಕಾ ವಸಾಹತುಗಳ ಮತ್ತು ಕೈಗಾರಿಕಾ ಟೌನ್‌ಷಿಪ್‌ಗಳ ಕಾರ್ಯನಿರ್ವಹಣೆಗೂ ಅವಕಾಶ ನೀಡಲಾಗುವುದು.

ಅಂತರ ಜಿಲ್ಲೆ ಪ್ರಯಾಣಕ್ಕೆ ಅವಕಾಶವಿಲ್ಲ ಬೆಂಗಳೂರು ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಕೈಗಾರಿಕೆಗಳ ಉದ್ಯೋಗಿಗಳ ಓಡಾಟದ ದೃಷ್ಟಿಯಿಂದ ಒಂದು ಜಿಲ್ಲೆಯಾಗಿ ಪರಿಗಣಿಸಲಾಗುವುದು. ಹಿರಿಯ ನಾಗರಿಕರು ಮನೆಯಿಂದ ಹೊರಬರಬಾರದು, ಮಾಸ್ಕ್ ಧರಿಸುವುದು ಕಡ್ಡಾಯ. ಎಲ್ಲ ಕಡೆಗಳಲ್ಲಿ ಅಂತರ ಪಾಲನೆ ಕಡ್ಡಾಯ. ಉಗುಳುವುದನ್ನು ನಿಷೇಧಿಸಲಾಗಿದೆ. ಲಾಕ್‌ಡೌನ್ ಘೋಷಿಸಿರುವ (ಮೇ3) ಅವಧಿವರೆಗೂ ನಿಷೇಧಾಜ್ಞೆ (ಸೆಕ್ಷನ್144) ಮುಂದುವರಿಯಲಿದೆ.

ಆಧಾರ:ಪ್ರಜಾವಾಣಿ, ದಿನಾಂಕ:19.04.2020.

## 28. 3 ಲಕ್ಷ ಪಿಪಿಇ ಕಿಟ್ ಖರೀದಿಗೆ ಆದೇಶ

ಕೊರೊನಾ ಯೋಧರಿಗೆ ಸುರಕ್ಷತೆ ಒದಗಿಸಲು ರಾಜ್ಯ ಸರ್ಕಾರ 3 ಲಕ್ಷ ವೈಯಕ್ತಿಕ ಸುರಕ್ಷಾ ಸಾಧನಗಳ (ಪಿಪಿಇ ಕಿಟ್) ಖರೀದಿಗೆ ಆದೇಶ ಮಾಡಿದೆ.

ಡಿಎಚ್‌ಬಿ ಗ್ಲೋಬಲ್ ರೂ.2 ಲಕ್ಷ ಹಾಗೂ ಬಿಗ್ ಫಾರ್ಮಾಸ್ಯುಟಿಕಲ್ಸ್ ಕಂಪನಿ ರೂ.1 ಲಕ್ಷ ಪಿಪಿಇ ಕಿಟ್‌ಗಳನ್ನು ಒದಗಿಸಲಿದೆ. ಈ ಕಿಟ್ 10 ಬಿಡಿ ಭಾಗಗಳನ್ನು ಹೊಂದಿರಲಿದೆ. ಫೇಸ್ ಮಾಸ್ಕ್ ಕನ್ನಡಕ ಎನ್–95, ಮುಖಗವಸು, ಶಸ್ತ್ರಚಿಕಿತ್ಸೆಯ ಮುಖವಾಡಗಳು, ಕೈಗವಸುಗಳು, ಎರಡು ಪದರದ ನಿಲುವಂಗಿ, ಪಾದರಕ್ಷೆಗಳ ಕವರ್, ತ್ಯಾಜ್ಯ ಬಿಸಾಡುವ ಚೀಲ, ಪ್ಲಾಸ್ಟಿಕ್ ಏಪ್ರಾನ್ ಇರಲಿದೆ. ಈ ಕಿಟ್‌ಗಳನ್ನು ಐಸೋಲೇಷನ್ ವಾರ್ಡ್‌ನಲ್ಲಿನ ವೈದ್ಯರು, ಶುಶ್ರೂಷಕರು, ಆರೋಗ್ಯ ಸಿಬ್ಬಂದಿಗೆ ಹಾಗೂ ಸೋಂಕು ಶಂಕಿತರನ್ನು ಪತ್ತೆ ಹಚ್ಚಲು ಕಾರ್ಯನಿರ್ವಹಿಸುತ್ತಿರುವವರಿಗೆ ಒದಗಿಸಲಾಗುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:19.04.2020.

## 29. ಜಿಲ್ಲೆಗಳಲ್ಲಿ ಪ್ರಯೋಗಾಲಯ ಸ್ಥಾಪಿಸಿ

ಕೊರೊನಾ ಸೋಂಕಿತರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಟೆಸ್ಟಿಂಗ್ ಲ್ಯಾಬ್ ಸ್ಥಾಪಿಸಿ, ಸೋಂಕು ಪರೀಕ್ಷೆಗಳ ಸಂಖ್ಯೆ ಹೆಚ್ಚಿಸುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ರಾಜ್ಯ ಕಾಂಗ್ರೆಸ್ ನಿಯೋಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮುಂದಿಟ್ಟಿದೆ.

ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಗೃಹ ಕಛೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿಯಾದ  ನಿಯೋಗ ಪಕ್ಷದ ಕಾರ್ಯಪಡೆ ಸಿದ್ಧಪಡಿಸಿದ ವರದಿ ಸಲ್ಲಿಸಿತು.

ಕೋವಿಡ್ 19 ರೋಗವನ್ನು 'ರಾಷ್ಟ್ರೀಯ ವಿಪತ್ತು' ಎಂದು ಘೋಷಿಸುವಂತೆ ಮತ್ತು ಲಾಕ್‌ಡೌನ್ ಅವಧಿಯಲ್ಲಿ ಸಂಕಷ್ಟಕ್ಕೀಡಾದವರಿಗೆ ಆರ್ಥಿಕ ನೆರವು ನೀಡುವಂತೆ ಕೇಂದ್ರವನ್ನು ರಾಜ್ಯ ಸರ್ಕಾರ ಒತ್ತಾಯಿಸಬೇಕು ಹಾಗೂ ಕೊರೊನಾ ನಿಯಂತ್ರಣಕ್ಕೆ ಕೇರಳ ಮಾದರಿ ಅನುಸರಿಸಬೇಕು  ಈ ಕುರಿತು ಅಧ್ಯಯನ ನಡೆಸಲು ಒತ್ತಾಯಿಸಿದರು.

ನಿಯೋಗದಲ್ಲಿ ಶಾಸಕರಾದ ಆರ್.ವಿ.ದೇಶಪಾಂಡೆ, ಜಿ.ಪರಮೇಶ್ವರ, ಕೆ.ಆರ್.ರಮೇಶ್ ಕುಮಾರ್, ಸಂಸದ ಡಿ.ಕೆ. ಸುರೇಶ್ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಆಹಮದ್‌ರಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:20.04.2020

## 30. 3 ತಿಂಗಳು ಉಚಿತ ಸಿಲಿಂಡರ್ ಸಂಪುಟ ಸಭೆ ತೀರ್ಮಾನ

ಮುಖ್ಯಮಂತ್ರಿ ಅನಿಲಭಾಗ್ಯ ಯೋಜನೆಯಡಿ ಮೂರು ತಿಂಗಳು ಉಚಿತವಾಗಿ ಅಡುಗೆ ಅನಿಲ ಸಿಲಿಂಡರ್ ವಿತರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ಕೋವಿಡ್–19 ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ಅಡುಗೆ ಅನಿಲದ ಉಚಿತ ವಿತರಣೆಗೆ ಕ್ರಮ ತೆಗೆದುಕೊಂಡಿದೆ. ಅದೇ ರೀತಿಯಲ್ಲಿ ರಾಜ್ಯ ಸರ್ಕಾರವೂ ಮುಖ್ಯಮಂತ್ರಿ ಅನಿಲ ಭಾಗ್ಯ ಯೋಜನೆಯಡಿ ಮುಂದಿನ ಮೂರು ತಿಂಗಳ ಅವಧಿಗೆ ಅಡುಗೆ ಅನಿಲ ಸಿಲಿಂಡರ್ ಉಚಿತವಾಗಿ ವಿತರಿಸಲಿದೆ.

ಇದಕ್ಕಾಗಿ ಸರ್ಕಾರ ರೂ.27.52 ಕೋಟಿ ಭರಿಸಲಿದ್ದು, ಸುಮಾರು 1 ಲಕ್ಷ ಫಲಾನುಭವಿಗಳಿಗೆ ಇದರ ಪ್ರಯೋಜನ ಸಿಗಲಿದೆ ಎಂದು ಸಚಿವರು ತಿಳಿಸಿದರು.

**ಏಳನೇ ವೇತನ ಆಯೋಗದ ಶಿಫಾರಸ್ಸು ಜಾರಿ:** ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗೆ ಏಳನೇ ವೇತನ ಆಯೋಗದ ಶಿಫಾರಸ್ಸು ಜಾರಿ ಮಾಡಲು ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಬೊಕ್ಕಸಕ್ಕೆ ರೂ.137 ಕೋಟಿ ಹೊರೆಯಾಗಲಿದೆ. ಸುಮಾರು 2,800 ಬೋಧಕರು ಮತ್ತು ಬೋಧಕೇತರ ಸಿಬ್ಬಂದಿಗೆ ಇದರ ಪ್ರಯೋಜನ ಸಿಗಲಿದೆ ಎಂದರು.

**ಸಂಪುಟ ಸಭೆಯ ಮುಖ್ಯಾಂಶಗಳು:**

- ಮೈಸೂರು ಮಿನರಲ್ಸ್ ಲಿಮಿಟೆಡ್‌ಗೆ ಸೇರಿದ ಜಾಗವು ಕಂದಾಯ ಇಲಾಖೆಗೆ ಸೇರಿದ್ದೋ ಅಥವಾ ಅರಣ್ಯ ಇಲಾಖೆಗೆ ಸೇರಿದ್ದೋ ಎಂಬ ದಾವೆ ಸುಪ್ರೀಂಕೋರ್ಟ್‌ನಲ್ಲಿ ಇತ್ಯರ್ಥವಾಗಿದೆ. ಈ ಜಾಗ ಕಂದಾಯ ಇಲಾಖೆಗೆ ಸೇರಿದ್ದು ಎಂಬ ತೀರ್ಪನ್ನು ಸಂಪುಟ ಸಭೆ ಅಂಗೀಕರಿಸಿದೆ.
- ಜೀವಾವಧಿ ಶಿಕ್ಷೆಗೊಳಗಾಗಿ 14 ವರ್ಷ ಶಿಕ್ಷೆ ಪೂರ್ಣಗೊಳಿಸಿದ ಅಥವಾ 10 ವರ್ಷ ಶಿಕ್ಷೆ ಅನುಭವಿಸಿದ ಕೈದಿಗಳಿಗೆ ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ನಿಯಮಕ್ಕೆ ಸಚಿವ ಸಂಪುಟ ಅನುಮೋದಿಸಿದೆ.
- ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ದರೋಜಿ ಗ್ರಾಮಕ್ಕೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ರೂ.23.40 ಕೋಟಿ ಮಂಜೂರು.
- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮೂರನೇ ಹಂತದಲ್ಲಿ ಕೇರಳ–ಕರ್ನಾಟಕ ಗಡಿ ರಸ್ತೆ ಅಭಿವೃದ್ಧಿ, ಇದಕ್ಕಾಗಿ ಕೇಂದ್ರದ ಪಾಲು ರೂ.1,274 ಕೋಟಿ ಒಳಗೊಂಡಂತೆ ರೂ.2,729.66 ಕೋಟಿ ವೆಚ್ಚಕ್ಕೆ ಒಪ್ಪಿಗೆ.
- ಕರ್ನಾಟಕ ರೈತ ಸುರಕ್ಷಾ ಫಸಲ್ ಭೀಮಾ ಯೋಜನೆಯಡಿ ಬ್ಯಾಂಕುಗಳಲ್ಲಿ ರೈತರ ಫಸಲುಗಳಿಗೆ ಮಾಡಿದ ವಿಮೆಗೆ ರಾಜ್ಯ ಸರ್ಕಾರದ ಪಾಲಿನ 2016ರ ಸಾಲಿನ ವಿಮಾ ಮೊತ್ತ ರೂ.18,59 ಕೋಟಿ ಭರಿಸಲು ಒಪ್ಪಿಗೆ.

ಆಧಾರ:ಪ್ರಜಾವಾಣಿ, ದಿನಾಂಕ:21.04.2020.

## 31. ಬಜೆಟ್: ಕೋವಿಡ್ ಕಡೆಗಣನೆ

ಕೋವಿಡ್–19 ನಿಯಂತ್ರಣದ ಸಲುವಾಗಿ ಹೇರಿರುವ ಲಾಕ್‌ಡೌನ್ ನಡುವೆಯೂ ಮಂಡನೆಯಾಗಿರುವ ಬಿಬಿಎಂಪಿಯ 2020–21ನೇ ಸಾಲಿನ ಬಜೆಟ್‌ನಲ್ಲಿ ಈ ರೋಗ ನಿಯಂತ್ರಣಕ್ಕಾಗಲೀ ಅಥವಾ ಲಾಕ್‌ಡೌನ್ ಸಂತ್ರಸ್ತರಿಗಾಗಲೀ ಯಾವುದೇ ಪ್ಯಾಕೇಜ್ ಘೋಷಿಸಿಲ್ಲ.

2020ರ ಸೆಪ್ಟೆಂಬರ್‌ನಲ್ಲಿ ನಡೆಯಬೇಕಾಗಿರುವ ಪಾಲಿಕೆ ಚುನಾವಣೆ ಮೇಲೆ ಕಣ್ಣಿಟ್ಟೇ ಬಜೆಟ್ ಮಂಡಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್. ಶ್ರೀನಿವಾಸ್, ನಗರದ 2.5 ಲಕ್ಷ ಮನೆಗಳಿಗೆ

ತಿಂಗಳಿಗೆ 10 ಸಾವಿರ ಲೀಟರ್ ಉಚಿತ ನೀರು ಪೂರೈಕೆ, ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ 8 ಕಡೆ ಸ್ವಾಗತ ಕಮಾನುಗಳ ನಿರ್ಮಾಣ, ಬಿಬಿಎಂಪಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್, ಉಚಿತ ಲ್ಯಾಪ್‌ಟಾಪ್ ವಿತರಣೆಯಂತಹ ಜನಪ್ರಿಯ ಯೋಜನೆಗಳನ್ನು ಘೋಷಿಸಿದೆ.

ಬಜೆಟ್‌ನಲ್ಲಿ ಒಂದು ಕಡೆ ಮಾತ್ರ ಕೊರೋನಾ ತಡೆಗಟ್ಟುವ ಕುರಿತು ಪ್ರಸ್ತಾಪಿಸಲಾಗಿದೆ. ರೋಗ ನಿಯಂತ್ರಣಕ್ಕೆ ಹೆಚ್ಚುವರಿ ಅನುದಾನ ನೀಡುವ ಬದಲು ವಾರ್ಡ್‌ಗಳ ಅಭಿವೃದ್ಧಿಗಾಗಿ ನೀಡುವ ರೂ.2 ಕೋಟಿ ಅನುದಾನದಲ್ಲಿ ತಲಾ ರೂ.25 ಲಕ್ಷವನ್ನು ಮುಖ್ಯಮಂತ್ರಿ ಪರಿಹಾರ ನಿಧಿಗೆ ನೀಡುವುದಾಗಿ ಬಜೆಟ್‌ನಲ್ಲಿ ಹೇಳಲಾಗಿದೆ. ಇದಕ್ಕಾಗಿ ರೂ.49.50 ಕೋಟಿ ಅನುದಾನ ಮೀಸಲಿಡಲಾಗಿದೆ.

ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಬಜೆಟ್ ಗಾತ್ರದಲ್ಲಿ ಕೇವಲ ಶೇ:1 ರಷ್ಟು ಅನುದಾನ ಹಂಚಿಕೆ ಮಾಡಲಾಗಿದೆ. ಇದಕ್ಕೆ ಪ್ರತಿಕ್ರಿಯಿಸಿದ ಶ್ರೀನಿವಾಸ್ ಆಸ್ಪತ್ರೆಗಳಿಗೆ ಈ ಹಿಂದೆಯೂ ವಿವಿಧ ಯೋಜನೆಗಳಡಿ ಅನುದಾನ ನೀಡಲಾಗಿದೆ. ಸರ್ಕಾರದ ಅನುದಾನವೂ ಇವುಗಳಿಗೆ ಲಭಿಸುತ್ತದೆ ಎಂದರು.

ದೆಹಲಿ ಸರ್ಕಾರದ ಮಾದರಿಯಲ್ಲಿ ಪ್ರತಿ ಮನೆ ಬಳಕೆಯ ಸಂಪರ್ಕಕ್ಕೆ ತಿಂಗಳಿಗೆ ತಲಾ 10 ಸಾವಿರ ಲೀಟರ್ ನೀರನ್ನು ಉಚಿತವಾಗಿ ನೀಡುವ ಮಹತ್ವಾಕಾಂಕ್ಷೆ ಯೋಜನೆಯನ್ನು ಬಿಬಿಎಂಪಿ ಪ್ರಕಟಿಸಿದೆ. ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಬಡ ಕುಟುಂಬಗಳಿಗೂ ಇದರಿಂದ ನೆರವಾಗಲಿದೆ ಎಂದು ಮೇಯರ್ ವಿವರಿಸಿದರು.

ಬಿಬಿಎಂಪಿ ಅಧೀನದ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಉಚಿತ ಪ್ರಯಾಣಕ್ಕೆ ಬಿಎಂಟಿಸಿ ಬಸ್ ಪಾಸ್ ನೀಡಲು ರೂ.75 ಲಕ್ಷ ಬಡ ವಿದ್ಯಾರ್ಥಿಗಳಿಗೆ ದಿವಂಗತ ಅನಂತ ಕುಮಾರ್ ಹೆಸರಿನಲ್ಲಿ ಉಚಿತ ಲ್ಯಾಪ್‌ಟಾಪ್ ವಿತರಣೆಗೆ ರೂ.15 ಕೋಟಿ ಕಾಯ್ದಿರಿಸಲಾಗಿದೆ. ಪ್ರತಿ ವಾರ್ಡ್‌ಗೆ 15 ಲ್ಯಾಪ್‌ಟಾಪ್‌ಗಳನ್ನು ಹಂಚಿಕೆ ಮಾಡಲಾಗಿದೆ. ಮಹಿಳೆಯರ ಸಲುವಾಗಿ ಕಾರ್ಯಕ್ರಮ ಹಮ್ಮಿಕೊಳ್ಳಲು ಪ್ರತಿ ವಾರ್ಡ್‌ಗೆ ತಲಾ ರೂ.5 ಲಕ್ಷ ವಿಶೇಷ ಅನುದಾನ ಹಂಚಿಕೆ ಮಾಡಲಾಗಿದ್ದು, ಇದಕ್ಕಾಗಿ ರೂ.9.90 ಕೋಟಿ ಕಾಯ್ದಿರಿಸಲಾಗಿದೆ.

ಕೊರೊನಾ ಸಂಕಷ್ಟದ ನಡುವೆಯೂ ಶೇ:49ರಷ್ಟು ಅನುದಾನ ಮೂಲ ಸೌಕರ್ಯ ಅಭಿವೃದ್ಧಿಗೆ ಕಾಯ್ದಿರಿಸಲಾಗಿದೆ. ಈಗಿನ ಆಡಳಿತವು ಈ ವರ್ಷದ ಸೆಪ್ಟೆಂಬರ್‌ವರೆಗೆ ಮಾತ್ರ. ಸೋಂಕು ನಿಯಂತ್ರಣಕ್ಕೆ ಹೇರಿರುವ ಲಾಕ್‌ಡೌನ್ ಅನ್ನು ಹಿಂಪಡೆದ ಬಳಿಕವೂ ಅದರಿಂದ ಜನರು ಎದುರಿಸುವ ಸಂಕಷ್ಟಗಳು ಮುಂದುವರಿಯಲಿವೆ. ಈ ತುರ್ತು ಸಂದರ್ಭದಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಕೊರೊನಾ ನಿಯಂತ್ರಣಕ್ಕೆ ಆದ್ಯತೆ ಸಿಗಬೇಕಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ:21.04.2020.

## 32. ರಾಜ್ಯದಲ್ಲಿ ಪ್ಲಾಸ್ಮಾ ಚಿಕಿತ್ಸೆಗೆ ಕೇಂದ್ರ ಸರ್ಕಾರದ ಒಪ್ಪಿಗೆ

ಕೋವಿಡ್ ರೋಗಿಗಳಿಗೆ ಪ್ಲಾಸ್ಮಾ ಚಿಕಿತ್ಸೆ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಕೋವಿಡ್‌ಗೆ ಪ್ಲಾಸ್ಮಾ ಥೆರಪಿ ಪರಿಣಾಮಕಾರಿ ಎಂಬ ಕಾರಣಕ್ಕೆ ಈ ಚಿಕಿತ್ಸೆಗೆ ಅವಕಾಶ ನೀಡುವಂತೆ ರಾಜ್ಯ ಸರ್ಕಾರ ಕೇಂದ್ರವನ್ನು ಕೋರಿತ್ತು. ಕೊರೊನಾ ಸೋಂಕಿತರಿಗೆ ಬೆಂಗಳೂರಿನ ಎಚ್‌ಸಿಜಿ ಆಸ್ಪತ್ರೆಯ ಡಾ:ವಿಶಾಲ್ ರಾವ್ ಅವರಿಗೆ ಪ್ಲಾಸ್ಮಾ ಚಿಕಿತ್ಸೆ ನೀಡಲು ಅನುಮತಿ ನೀಡಿದೆ. ಇದು ರಾಜ್ಯದ ಪಾಲಿಗೆ ಉತ್ತಮ ಅಸ್ತ್ರವಾಗಲಿದೆ, ಕೇರಳದಲ್ಲಿ ಪ್ಲಾಸ್ಮಾ ಚಿಕಿತ್ಸೆಗೆ ಉತ್ತಮ ಯಶಸ್ಸು ದೊರಕಿದ್ದು, ರಾಜ್ಯದಲ್ಲೂ ಇದು ಪರಿಣಾಮಕಾರಿಯಾಗಲಿದೆ. ನ್ಯೂಡ್ರಗ್ಸ್ ಅಂಡ್ ಕ್ಲಿನಿಕಲ್ ಟ್ರಯಲ್ ರೂಲ್ಸ್ 2019ರ ಅನ್ವಯ ಅನುಮತಿ ಸಿಕ್ಕಿದೆ ಎಂದು ಸಚಿವ ಡಾ:ಸುಧಾಕರ್ ಹೇಳಿದ್ದಾರೆ.

ಪ್ಲಾಸ್ಮಾ ಥೆರಪಿ ಎಂದರೆ – ಕೋವಿಡ್–19 ನಿಂದ ಗುಣಮುಖ ಹೊಂದಿದ ವ್ಯಕ್ತಿಯ ರಕ್ತದಲ್ಲಿರುವ ಪ್ರತಿರೋಧಕ ಕಣಗಳನ್ನು ತೆಗೆದು ಬೇರೊಬ್ಬ ರೋಗಿಯ ದೇಹಕ್ಕೆ ಸೇರಿಸಲಾಗುತ್ತದೆ. ಗುಣಮುಖ ಹೊಂದಿದ ರೋಗಿಯ ರಕ್ತದಲ್ಲಿ ಪ್ರತಿರೋಧಕ ಕಣಗಳು ಸಮರ್ಥವಾಗಿ ವೈರಾಣುವನ್ನು ಹಿಮ್ಮೆಟ್ಟಿಸಿರುತ್ತವೆ. ಇಂತಹ ಶಕ್ತಿಶಾಲಿ ಪ್ರತಿರೋಧಕ ಕಣಗಳನ್ನು ಇತರೆ ರೋಗಿಗಳಲ್ಲಿ ಚಿಕಿತ್ಸೆಯ ಅಸ್ತ್ರವಾಗಿ ಬಳಸಲಾಗುತ್ತದೆ. ಇದಕ್ಕೆ ಪ್ಲಾಸ್ಮಾ ಚಿಕಿತ್ಸೆ ಎಂದು ಹೇಳಲಾಗುತ್ತದೆ.

ಆಧಾರ:ಪ್ರಜಾವಾಣಿ, ದಿನಾಂಕ:22.04.2020.

## 33. ಬಡವರಿಗೆ ಉಚಿತ ಹಾಲು: ಬಿ.ಎಸ್.ವೈ

ನಿರಾಶ್ರಿತರು, ಕೊಳೆಗೇರಿ ವಾಸಿಗಳು ಮತ್ತು ಕೂಲಿ ಕಾರ್ಮಿಕರ ಕುಟುಂಬಗಳಿಗೆ ಪ್ರತಿ ದಿನ ಒಂದು ಲೀಟರ್ ಹಾಲು ವಿತರಣೆಯನ್ನು ಏಪ್ರಿಲ್ 30ರವರೆಗೆ ಮುಂದುವರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಮೇ 3 ರವರೆಗೆ ಲಾಕ್‌ಡೌನ್ ಕಟ್ಟುನಿಟ್ಟಾಗಿ ಜಾರಿಯಲ್ಲಿರುತ್ತದೆ. ವಿವಿಧ ಹಾಲು ಒಕ್ಕೂಟಗಳಲ್ಲಿ ಹೆಚ್ಚುವರಿಯಾಗಿ ಸಂಗ್ರಹವಾಗುತ್ತಿರುವ ಹಾಲನ್ನು ವಿಲೇವಾರಿ ಮಾಡುವುದು ಕಷ್ಟವಾಗಿದೆ. ಹೀಗಾಗೀ ಉಚಿತ ಹಾಲಿನ ವಿಸ್ತರಣೆ ಮುಂದುವರಿಸಲಾಗುತ್ತಿದೆ.

ರಾಜ್ಯದಲ್ಲಿ 14 ಹಾಲು ಒಕ್ಕೂಟಗಳಿದ್ದು, 7.75 ಲಕ್ಷ ಲೀಟರ್‌ಗಳಷ್ಟು ಹಾಲು ಅಧಿಕವಾಗಿ ಸಂಗ್ರಹವಾಗುತ್ತಿದೆ. ಈ ಹಾಲನ್ನು ಕೊಳೆಗೇರಿಗಳು, ಕಟ್ಟಡ ಕಾರ್ಮಿಕರ ವಸತಿ ತಾಣಗಳು, ವಲಸೆ ಕಾರ್ಮಿಕರ ವಸತಿ ತಾಣಗಳಲ್ಲಿ ಅರ್ಧ ಲೀಟರ್ ಪ್ಯಾಕೆಟ್‌ಗಳಲ್ಲಿ ವಿತರಿಸಲು ಒಪ್ಪಿಗೆ ಹಾಗೂ ರಾಜ್ಯ ಸರ್ಕಾರವೇ ಪ್ರತಿ ದಿನ ಪ್ರತಿ ಲೀಟರ್‌ಗೆ ರೂ.37 ರಂತೆ ಖರೀದಿಸಿ ವಿತರಿಸಲಿದೆ. ಇದಕ್ಕಾಗಿ ರೂ.25.81 ಕೋಟಿ ಅನುದಾನ ನೀಡಲು ಮುಖ್ಯಮಂತ್ರಿ ಸಮ್ಮತಿ ನೀಡಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:22.04.2020

## 34. ಜಿಟಿಟಿಸಿಯಲ್ಲಿ ವೆಂಟಿಲೇಟರ್ ಬಿಡಿಭಾಗ ಅಭಿವೃದ್ಧಿ

ಬಿಇಎಲ್ ಸಂಸ್ಥೆಗೆ 30 ಸಾವಿರ ವೆಂಟಿಲೇಟರ್ ಪೂರೈಸಲು ಕೇಂದ್ರ ಸರ್ಕಾರ ಸೂಚನೆ ನೀಡಿದ್ದು, ಇದಕ್ಕೆ ಅಗತ್ಯವಾದ ಬಿಡಿಭಾಗವೊಂದನ್ನು ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ (ಜಿಟಿಟಿಸಿ) ಅಭಿವೃದ್ಧಿಪಡಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಾ:ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಜರ್ಮನಿ ಅಥವಾ ಜಪಾನ್‌ನಿಂದ ಆಮದು ಮಾಡಿಕೊಳ್ಳಬೇಕಾಗಿದ್ದ ಹೈ ಫ್ಲೋ ಮತ್ತು ಲೋ ಫ್ಲೋ ಪ್ರೋಪೋಷನಲ್ ವಾಲ್ವ್‌ಗಳಿಗೆ ಕ್ರಮವಾಗಿ ರೂ.20 ಸಾವಿರ ಮತ್ತು ರೂ.15 ಸಾವಿರ ಬೆಲೆ ಇತ್ತು. ಇನ್ನು ಮುಂದೆ ಇದನ್ನು ಜಿಟಿಟಿಸಿಯಲ್ಲೇ ತಯಾರಿಸಲಾಗುತ್ತದೆ. ಇದರ ಗುಣಮಟ್ಟವನ್ನು ದೃಢೀಕರಿಸಲಾಗಿದೆ. ವೆಂಟಿಲೇಟರ್‌ಗೆ ಸುಮಾರು 300 ರಷ್ಟು ಬಿಡಿಭಾಗಗಳು ಬೇಕಾಗುತ್ತದೆ. ದೇಶಿಯವಾಗಿಯೇ ಇವುಗಳ ಉತ್ಪಾದನೆಯಾಗುತ್ತಿದ್ದು, ಎಲ್ಲವನ್ನೂ ಸೇರಿಸಿಕೊಂಡು ಬಿಇಎಲ್ ಸಂಸ್ಥೆ 3 ರಿಂದ 6 ತಿಂಗಳೊಳಗೆ ಇಷ್ಟೂ ವೆಂಟಿಲೇಟರ್‌ಗಳನ್ನು ಪೂರೈಸಲಿದೆ ಎಂದರು.

ಗ್ರಾಮೀಣ ಜೀವನೋಪಾಯ ಸಂವರ್ಧನಾ ಇಲಾಖೆಯು ಕಳೆದ ಫೆಬ್ರವರಿಯಲ್ಲೇ ಸ್ವಸಹಾಯ ಸಂಘಗಳಿಂದ ಮುಖಗವಸು ಸಿದ್ಧಪಡಿಸುವ ಯೋಜನೆ ರೂಪಿಸಿ, ಲಕ್ಷಾಂತರ ಮುಖಗವಸು ತಯಾರಿಯಲ್ಲೇ ಸ್ತ್ರೀ ಶಕ್ತಿ ಸಂಘಗಳು ತೊಡಗಿದ್ದು, ರಾಜ್ಯದ ಪ್ರತಿಯೊಬ್ಬರಿಗೂ ಪುನರ್ ಬಳಕೆ ಮಾಡಬಹುದಾದ ಮುಖಗವಸು ರೂ.10 ರಿಂದ ರೂ.20ರ ದರದಲ್ಲಿ ದೊರಕಿದೆ. ವಿವಿಧ ಜಿಲ್ಲಾ ಪಂಚಾಯತಿಗಳ ಸಿಇಓಗಳು ಮತ್ತು ಸ್ವಸಹಾಯ ಗುಂಪುಗಳ ಸದಸ್ಯರೊಂದಿಗೆ ವಿಡಿಯೋ ಸಂವಾದ ನಡೆಸಿ ಮುಖಗವಸು ತಯಾರಿಸುವ ಕಾರ್ಯಕ್ಕೆ ಉಪ ಮುಖ್ಯಮಂತ್ರಿ ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:23.04.2020

## 35. ವೈದ್ಯರ ಮೇಲಿನ ಹಲ್ಲೆಗೆ ಏಳು ವರ್ಷಗಳ ಸಜೆ

ಆರೋಗ್ಯ ರಕ್ಷಣೆ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸುವುದನ್ನು ಜಾಮೀನುರಹಿತ ಅಪರಾಧ ಎಂದು ಪರಿಗಣಿಸಿರುವ ಕೇಂದ್ರ ಸರ್ಕಾರ ಈ ಸಂಬಂಧ ಕಾಯ್ದೆ ತಿದ್ದುಪಡಿಗಾಗಿ ಸುಗ್ರೀವಾಜ್ಞೆ ಹೊರಡಿಸಲು ನಿರ್ಧರಿಸಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಸಭೆಯು ಈ ನಿರ್ಧಾರ ಕೈಗೊಂಡಿದ್ದು, ಅಪರಾಧಿಗಳಿಗೆ ಏಳು ವರ್ಷದವರೆಗೆ ಸಜೆ ವಿಧಿಸುವ ಅಂಶವೂ ಸೇರಿದೆ.

ಕೋವಿಡ್–19ರ ವಿರುದ್ಧದ ಹೋರಾಟದಲ್ಲಿ ಮುಂಚೂಣಿಯಲ್ಲಿರುವ ವೈದ್ಯರು ಮತ್ತು ಆರೋಗ್ಯ ಕಾರ್ಯಕರ್ತರನ್ನು ತಾರತಮ್ಯದಿಂದ ನೋಡುವುದು, ಅವರ ಮೇಲೆ ಹಲ್ಲೆ ನಡೆಸುವುದು ಮುಂತಾದ ಪ್ರಕರಣಗಳು

ದೇಶದ ಹಲವೆಡೆ ಇತ್ತೀಚೆಗೆ ವರದಿಯಾಗಿದೆ. ಇದನ್ನು ಖಂಡಿಸಿ ಕರಾಳ ದಿನ ಆಚರಿಸಲು ಆರೋಗ್ಯ ಕಾರ್ಯಕರ್ತರು ಮುಂದಾಗಿದ್ದ ಸಂದರ್ಭದಲ್ಲಿಯೇ ಸುಗ್ರೀವಾಜ್ಞೆಯ ನಿರ್ಧಾರ ಹೊರಬಿದ್ದಿದೆ.

123 ವರ್ಷ ಹಳೆಯದಾದ ಸಾಂಕ್ರಾಮಿಕ ರೋಗಗಳ ಕಾಯ್ದೆಗೆ ಈ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ತರಲು ತೀರ್ಮಾನಿಸಿ, ಆರೋಗ್ಯ ಕಾರ್ಯಕರ್ತರ ವಾಹನ ಅಥವಾ ಕ್ಲಿನಿಕ್‌ಗೆ ಹಾನಿ ಆಗಿದ್ದರೆ, ಅದರ ಮಾರುಕಟ್ಟೆ ಮೌಲ್ಯದ ಎರಡು ಪಟ್ಟು ಮೊತ್ತವನ್ನು ವಸೂಲಿ ಮಾಡಲು ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:23.04.2020.

## 36. ಕೊರೊನಾ ನಿರ್ವಹಣೆಗೆ "ಆಪ್ತಮಿತ್ರ"

ಕೊರೊನಾ ಸಂಬಂಧ ವೈದ್ಯಕೀಯ ಮಾರ್ಗದರ್ಶನ ನೀಡುವ ಆಪ್ತಮಿತ್ರ ಸಹಾಯವಾಣಿ ಮತ್ತು ಮೊಬೈಲ್ ಆ್ಯಪ್‌ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಚಾಲನೆ ನೀಡಿದರು.

ಜ್ವರ, ನೆಗಡಿ, ಕೆಮ್ಮು, ಉಸಿರಾಟದ ತೊಂದರೆ ಕಂಡು ಬಂದಲ್ಲಿ 14410 ಸಂಖ್ಯೆಯ ಸಹಾಯವಾಣಿಗೆ ಕರೆ ಮಾಡಿದರೆ ಮಾರ್ಗದರ್ಶನ ನೀಡಲಾಗುತ್ತದೆ. ಆಪ್ತಮಿತ್ರ ಆ್ಯಪ್ ಮೂಲಕ ಟೆಲಿಮೆಡಿಸಿನ್ ಸೇವೆ ಲಭ್ಯವಿದೆ. ರಾಜ್ಯದ ಯಾವುದೇ ಮೂಲೆಯಲ್ಲಿದ್ದರೂ ಜನರು ಈ ಆ್ಯಪ್ ಮತ್ತು ಸಹಾಯವಾಣಿಯನ್ನು ಬಳಸಿಕೊಳ್ಳಬಹುದು. ಈ ಆ್ಯಪ್ ಮತ್ತು ಸಹಾಯವಾಣಿ ನಿರ್ವಹಿಸಲು 2 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಪ್ರತಿದಿನ ಮೂರು ಪಾಳಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ಫೋಸಿಸ್ ಫೌಂಡೇಷನ್ ಮತ್ತು ಹಿಂದುಜಾ ಗ್ಲೋಬಲ್ ಸಲ್ಯೂಷನ್ ಸಹಯೋಗದಲ್ಲಿ ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ದಿನಕ್ಕೆ 50 ಸಾವಿರ ಕರೆಗಳನ್ನು ನಿರ್ವಹಿಸುವ ಸಾಮರ್ಥ್ಯ ಈ ಸಹಾಯವಾಣಿಗೆ ಇದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ. ಸುಧಾಕರ್ ಮಾಹಿತಿ ನೀಡಿದರು.

ಆಧಾರ:ಪ್ರಜಾವಾಣಿ, ದಿನಾಂಕ:23.04.2020.

## 37. ಭೂಕುಸಿತ: ಅಧ್ಯಯನ ಸಮಿತಿ ರಚನೆ

ರಾಜ್ಯದಲ್ಲಿ ಕಳೆದ ಎರಡು ಮಳೆಗಾಲಗಳಲ್ಲಿ ಭಾರಿ ಮಳೆ ಸುರಿದಾಗ ಹಲವೆಡೆ ಭೂಕುಸಿತಗಳಾಗಿದೆ. ಇದರ ವೈಜ್ಞಾನಿಕ ಅಧ್ಯಯನ ನಡೆಸಿ, ನಿಯಂತ್ರಣ ಕ್ರಮಗಳ ಶಿಫಾರಸ್ಸು ಮಾಡಲು ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತಹೆಗಡೆ ಅಶೀಸರ ನೇತೃತ್ವದ ಸಮಿತಿ ರಚಿಸಲಾಗಿದೆ.

ಸಮಿತಿಯಲ್ಲಿ ಮೂವರು ಅಧಿಕಾರಿ, ಸದಸ್ಯರು, ಇಸ್ರೊ, ಐಐಎಸ್‌ಸಿ ಜಿಯಾಲಾಜಿಕಲ್ ಸರ್ವೇ ಆಫ್ ಇಂಡಿಯಾದ ತಲಾ ಒಬ್ಬರು ಹಿರಿಯ ತಜ್ಞರು, ಐಐಎಸ್‌ಸಿಯ ಪರಿಸರ ವಿಜ್ಞಾನಿ ಡಾ:ಟಿ.ವಿ. ರಾಮಚಂದ್ರ, ಅಧಿಕಾರೇತರ ಸದಸ್ಯರಾಗಿ ಸಂರಕ್ಷಣಾ ಜೀವಶಾಸ್ತ್ರಜ್ಞ ಡಾ: ಕೇಶವ ಎಚ್.ಕೊರ್ಸೆ ರವರುಗಳಿಗೆ ವರದಿ ಸಲ್ಲಿಸಲು ಮೂರು ತಿಂಗಳ ಸಮಯ ನೀಡಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:23.04.2020.

## 38. ರೈತರ ನೆರವಿಗೆ ಸರ್ಕಾರ

ಹಾಟ್‌ಸ್ಪಾಟ್ ಅಲ್ಲದ ಪ್ರದೇಶಗಳಲ್ಲಿ ಲಾಕ್‌ಡೌನ್ ಅನ್ನು ಸ್ವಲ್ಪಮಟ್ಟಿಗೆ ಸಡಿಲಗೊಳಿಸಿರುವ ಸರ್ಕಾರ ರೈತರ ನೆರವಿಗೆ ನಿಲ್ಲುವ ಮತ್ತಷ್ಟು ಕ್ರಮಗಳನ್ನು ಕೈಗೊಂಡಿದೆ. ಅಧಿಕಾರಿಗಳ ಜೊತೆ ನಾಲ್ಕು ಗಂಟೆ ಸಭೆ ನಡೆಸಿದ ಮುಖ್ಯಮಂತ್ರಿಯವರು ಕೆಲವು ಪ್ರಮುಖ ನಿರ್ಧಾರ ಕೈಗೊಂಡಿದ್ದಾರೆ.

ರೈತರು ಬೆಳೆದ ತರಕಾರಿಯನ್ನು ಸರ್ಕಾರದಿಂದಲೇ ಖರೀದಿಸಿ, ಶೈತ್ಯಾಗಾರದಲ್ಲಿಟ್ಟು ಬಳಿಕ ಮಾರಾಟಕ್ಕೆ ಅವಕಾಶ ನೀಡಬೇಕು, ಬೇಗನೆ ಹಾಳಾಗುವ ಹಣ್ಣು ತರಕಾರಿಗಳನ್ನು ಇತರ ರಾಜ್ಯಗಳು ಮತ್ತು ವಿದೇಶಗಳಿಗೆ ಕಳುಹಿಸಲು ವ್ಯವಸ್ಥೆ ಮಾಡುವುದು.

ಎಲ್ಲ ಜಲಾಶಯಗಳಲ್ಲಿರುವ ನೀರನ್ನು ಕುಡಿಯುವ ಉದ್ದೇಶಕ್ಕೆ ಮತ್ತು ಬೆಳೆಗಳಿಗೆ ಬಿಡುವ ಬಗ್ಗೆ ಕ್ರಮವಹಿಸಬೇಕು. ಮಳೆಗಾಲದ ಆರಂಭದಿಂದಲೇ ಅಣೆಕಟ್ಟಿನಲ್ಲಿ ನೀರಿನ ಒಳಹರಿವು ಮತ್ತು ಸಂಗ್ರಹದ ಮೇಲೆ ನಿಗಾ. ಲಾಕ್‌ಡೌನ್‌ನಿಂದಾಗಿ ಸಾರಿಗೆ ಸಂಸ್ಥೆ ಬಸ್ಸುಗಳ ಓಡಾಟ ನಿಂತು ಕೋಟಿಗಟ್ಟಲೆ ನಷ್ಟವಾಗಿದೆ. ಬಸ್ಸುಗಳನ್ನು ಸರಕು ಸಾಗಣೆಗೆ ಬಳಸಿ, ಆದಾಯ ಸಂಗ್ರಹಕ್ಕೆ ಕ್ರಮ.

ಆಧಾರ:ಪ್ರಜಾವಾಣಿ, ದಿನಾಂಕ:24.04.2020.

### 39. ಎಸ್.ಎಸ್.ಎಲ್.ಸಿ ಪರೀಕ್ಷೆ ರದ್ದಾಗುವುದಿಲ್ಲ : ಸಚಿವರ ಸ್ಪಷ್ಟನೆ

ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆದೇ ನಡೆಯುತ್ತದೆ. ಲಾಕ್‌ಡೌನ್ ಅವಧಿ ಮುಗಿಯಲಿರುವ ಮೇ 3ರ ನಂತರ ಈ ಬಗ್ಗೆ ತೀರ್ಮಾನಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ತಾಲ್ಲೂಕಿನ ಸಂತೇಮರಹಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ವರ್ಷ ಪರೀಕ್ಷೆ ನಡೆಯುವುದೇ ಅನುಮಾನ ಎಂದು ಕೆಲವರು ಗೊಂದಲ ಮೂಡಿಸುತ್ತಿದ್ದಾರೆ. ಮಕ್ಕಳ ಮನಸ್ಸಿನಲ್ಲಿ ಪರೀಕ್ಷೆ ಕುರಿತಂತೆ ಯಾವುದೇ ಗೊಂದಲ ಇಲ್ಲ. ಆದರೆ, ಕೆಲವು ಪೋಷಕರಿಗೆ ಆತಂಕವಿದೆ ಎಂದು ಹೇಳಿದರು.

ಆಧಾರ:ಪ್ರಜಾವಾಣಿ, ದಿನಾಂಕ:24.04.2020.

### 40. ಆರೋಗ್ಯ ಕೇಂದ್ರಕ್ಕೆ ರೂ.50 ಸಾವಿರ

ಬಿಬಿಎಂಪಿ ವ್ಯಾಪ್ತಿಯಲ್ಲಿ 133 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದು, ಈ ಪೈಕಿ 48 ಕೇಂದ್ರ ವಲಯದಲ್ಲಿವೆ. ಕೋವಿಡ್–19 ಪರಿಹಾರ ಕಾರ್ಯಗಳನ್ನು ಈ ಕೇಂದ್ರಗಳಿಗೆ ಪಾಲಿಕೆ ವತಿಯಿಂದ ತಲಾ ರೂ.50 ಸಾವಿರ ಬಿಡುಗಡೆ ಮಾಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಾ: ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಕೋವಿಡ್–19ನಂಥ ಯಾವುದೇ ಸಾಂಕ್ರಾಮಿಕ ರೋಗಗಳನ್ನು ನಿರ್ವಹಿಸಲು ಬಿಬಿಎಂಪಿ ವ್ಯಾಪ್ತಿಯ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಇರುವ ಉಪಕರಣ ಸಂಗ್ರಹ, ನಿರ್ವಹಣೆ ಸೇರಿದಂತೆ ಚಿಕಿತ್ಸೆ, ಸೌಲಭ್ಯ ಹೆಚ್ಚಳಕ್ಕೆ ಕೈಗೊಳ್ಳಲಾದ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿದರು. ಆರೋಗ್ಯ ಕೇಂದ್ರಗಳಲ್ಲಿ ಆಮ್ಲಜನಕ ಸೌಲಭ್ಯ ಸೇರಿದಂತೆ ಇತರ ಮೂಲಸೌಕರ್ಯ ಕಲ್ಪಿಸುವುದರ ಜೊತೆಗೆ ಎಂಥ ಸಂದಿಗ್ಧ ಪರಿಸ್ಥಿತಿಯನ್ನೂ ಎದುರಿಸಲು ಸಜ್ಜಾಗಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೋವಿಡ್‌ನಂಥ ಸಾಂಕ್ರಾಮಿಕ ರೋಗ ಹರಡುವ ಪರಿಸ್ಥಿತಿ ಯಾವುದೇ ಸಂದರ್ಭದಲ್ಲಿ ಎದುರಾದರೂ ಲಭ್ಯ ಇರುವ ಔಷಧ ದಾಸ್ತಾನು, ವೈದ್ಯಕೀಯ ಉಪಕರಣಗಳು ಒದಗಿಸಿರುವ ಚಿಕಿತ್ಸೆ, ಆರೋಗ್ಯ ಸೇವೆಗಳ ಬಗ್ಗೆ ಡ್ಯಾಶ್ ಬೋರ್ಡ್ ನಿರ್ವಹಣೆ ಮಾಡಲು ತಂತ್ರಜ್ಞಾನದ ನೆರವು ಪಡೆಯಬೇಕು ಎಂದು ಅವರು ತಿಳಿಸಿದರು. ಪಾದಚಾರಿ ರಸ್ತೆಗಳ ಸ್ವಚ್ಛತೆ ಬಗ್ಗೆ ಆದ್ಯತೆ ನೀಡಿ, ಆರೋಗ್ಯ ರಕ್ಷಣೆಗೆ ಮುಂದಾಗಬೇಕು. ಬೀದಿ ಬದಿ ವ್ಯಾಪಾರಿಗಳು ತ್ಯಾಜ್ಯವನ್ನು ರಸ್ತೆಗೆ ಎಸೆಯದಂತೆ ನೋಡಿಕೊಂಡು ಸ್ವಚ್ಛವಾಗಿಟ್ಟುಕೊಳ್ಳಬೇಕು. ಈ ಬಗ್ಗೆ ಸೂಕ್ತ ಯೋಜನೆ ರೂಪಿಸಲು ಉಪ ಮುಖ್ಯಮಂತ್ರಿ ನಿರ್ದೇಶಿಸಿದರು.

ಮೇಯರ್ ಗೌತಮ್ ಕುಮಾರ್, ಬಿಬಿಎಂಪಿ ಆಯುಕ್ತ ಬಿ.ಎಚ್ ಅನಿಲ್ ಕುಮಾರ್ ಹಾಗೂ ಬಿಬಿಎಂ.ಪಿ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಮಂಜುನಾಥ್ ರಾಜು ಸಭೆಯಲ್ಲಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:24.04.2020

### 41. ಪ್ರಾಯೋಗಿಕ ಪ್ಲಾಸ್ಮಾ ಚಿಕಿತ್ಸೆಗೆ ಚಾಲನೆ

ರಾಜ್ಯದಲ್ಲಿ ಪ್ರಾಯೋಗಿಕವಾಗಿ ನೀಡಲಾಗುತ್ತಿರುವ ಪ್ಲಾಸ್ಮಾ ಚಿಕಿತ್ಸೆಗೆ ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಾಲನೆ ದೊರೆಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ. ಸುಧಾಕರ್ ಹಾಗೂ ಆರೋಗ್ಯ ಸಚಿವ ಬಿ. ಶ್ರೀರಾಮುಲು ಈ ಕ್ಷಣಕ್ಕೆ ಸಾಕ್ಷಿಯಾದರು. ರಾಜ್ಯದಲ್ಲಿ ಈವರೆಗೆ ಕೋವಿಡ್‌ನಿಂದ 18 ಮಂದಿ ಮೃತಪಟ್ಟಿದ್ದಾರೆ. ಏಳು ಕೋವಿಡ್ ರೋಗಿಗಳು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಕೆಲ ದಿನಗಳ ಹಿಂದಷ್ಟೇ ರಾಜ್ಯ ಸರ್ಕಾರ ಪ್ಲಾಸ್ಮಾ ಚಿಕಿತ್ಸೆಗೆ ಅನುಮತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು.

ಈಗ ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ (ಡಿಸಿಜಿಐ) ಅನುಮತಿ ಪಡೆದು, ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ (ಬಿಎಂಸಿಆರ್‌ಐ) ಮತ್ತು ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆ ಸಹಯೋಗದಲ್ಲಿ ರಾಜ್ಯದಲ್ಲಿ ಚಿಕಿತ್ಸೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ರೋಗಿಯೊಬ್ಬರಿಗೆ ಪ್ಲಾಸ್ಮಾ ಚಿಕಿತ್ಸೆಯನ್ನು ಕ್ಯಾನ್ಸರ್ ತಜ್ಞ ಡಾ:ಯು.ಎಸ್. ವಿಶಾಲಾ ರಾವ್ ನೇತೃತ್ವದ ವೈದ್ಯರ ತಂಡ ಪ್ರಾರಂಭಿಸಲಿದೆ. ಸಾವಿನ ಪ್ರಮಾಣವನ್ನು ತಡೆಯುವ ನಿಟ್ಟಿನಲ್ಲಿ ಪ್ಲಾಸ್ಮಾ ಚಿಕಿತ್ಸೆಯನ್ನು ಪ್ರಾಯೋಗಿಕವಾಗಿ ನಡೆಸಲಾಗುತ್ತಿದ್ದು, ಫಲಿತಾಂಶ ಸಕಾರಾತ್ಮಕವಾಗಿ ಬಂದಲ್ಲಿ ಮಾತ್ರ ಚಿಕಿತ್ಸೆ ಮುಂದುವರಿಸಲು ಅನುಮತಿ ದೊರೆಯುತ್ತದೆ. ಕೊರೊನಾ ಸೋಂಕಿತರಲ್ಲಿ ಈವರೆಗೆ 158 ಮಂದಿ ಚೇತರಿಸಿಕೊಂಡು ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆ. ಅವರಿಂದ ಪ್ಲಾಸ್ಮಾ ಪಡೆದು ತೀವ್ರನಿಗಾ ಘಟಕದಲ್ಲಿರುವ ರೋಗಿಗಳಿಗೆ ನೀಡಲು ವೈದ್ಯರು ನಿರ್ಧರಿಸಿದ್ದಾರೆ.

ರಾಜ್ಯದಲ್ಲಿ ಪ್ಲಾಸ್ಮಾ ಚಿಕಿತ್ಸೆಯನ್ನು ಪ್ರಾರಂಭಿಸಿರುವುದು ಐತಿಹಾಸಿಕ ಕ್ಷಣವಾಗಿದೆ. ವೆಂಟಿಲೇಟರ್‌ನಲ್ಲಿರುವ ಕೋವಿಡ್ ಪೀಡಿತರಿಗೆ ಈ ಚಿಕಿತ್ಸೆ ನೀಡಲಾಗುತ್ತದೆ. ಸೋಂಕಿನಿಂದ ಗುಣಮುಖರಾಗಿರುವ ಇಬ್ಬರು ಚಿಕಿತ್ಸೆಗೆ ಸಹಕರಿಸಲು ಮುಂದೆ ಬಂದಿದ್ದಾರೆ. ಇದೇ ರೀತಿ ಗುಣಮುಖರಾದ ಇತರರು ಸಹಕಾರ ನೀಡಬೇಕು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ. ಸುಧಾಕರ್ ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:26.04.2020.

## 42. ಕಿದ್ವಾಯಿಯಲ್ಲಿ ಸೋಂಕು ಪತ್ತೆ ಪರೀಕ್ಷೆಗೆ ಚಾಲನೆ

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಕ್ಯಾನ್ಸರ್ ರೋಗಿಗಳಿಗೆ ಕೋವಿಡ್ ಪರೀಕ್ಷೆ ನಡೆಸಿ ಅಗತ್ಯ ಚಿಕಿತ್ಸೆಗಳನ್ನು ಒದಗಿಸಲಾಗುತ್ತದೆ. ವೈದ್ಯಕೀಯ ಶಿಕ್ಷಣ ಸಚಿವ ಡಾ: ಕೆ. ಸುದಾಕರ್ ಹಾಗೂ ಸಂಸದ ತೇಜಸ್ವಿ ಸೂರ್ಯ ಕೋವಿಡ್ ಪರೀಕ್ಷೆಗೆ ಚಾಲನೆ ನೀಡಿದರು. ಕೊರೊನಾ ಸೋಂಕು ಭೀತಿ ಹಾಗೂ ಲಾಕ್‌ಡೌನ್‌ನಿಂದ ತುರ್ತಾಗಿ ಅಗತ್ಯವಲ್ಲದ ಚಿಕಿತ್ಸೆಯನ್ನು ಸಂಸ್ಥೆಯಲ್ಲಿ ಸ್ಥಗಿತ ಮಾಡಲಾಗಿತ್ತು. ಇದರಿಂದ ರೋಗಿಗಳ ಸಂಖ್ಯೆಯಲ್ಲಿ ಶೇ:85 ರಷ್ಟು ಇಳಿಕೆಯಾಗಿತ್ತು. ಈಗಾಗಲೇ ಫಾಲೋಅಪ್‌ಗೆ ಸೂಚಿಸಿದ ರೋಗಿಗಳ ಸಂಖ್ಯೆ 200ರ ಗಡಿ ದಾಟಿದ ಪರಿಣಾಮ ಚಿಕಿತ್ಸೆಗಳನ್ನು ಪುನ: ಆರಂಭಿಸಲಾಗುತ್ತಿದೆ.

ಕೋವಿಡ್ ಪರೀಕ್ಷೆಗೆ ಅತ್ಯಾಧುನಿಕ ಮಾಲಿಕ್ಯೂಲರ್ ಪ್ರಯೋಗಾಲಯವನ್ನು ಬಳಸಿಕೊಳ್ಳಲಾಗುತ್ತಿದೆ. ಸೋಂಕು ಪತ್ತೆಯಾಗದ ರೋಗಿಗಳಿಗೆ ರೇಡಿಯೋ ಥೆರಪಿ, ಕಿಮೋಥೆರಪಿ ಸೇರಿದಂತೆ ಅಗತ್ಯ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ. ಕೋವಿಡ್ ಪರೀಕ್ಷೆಯ ವರದಿಯನ್ನು ಮೂರು ಗಂಟೆಯಲ್ಲಿ ನೀಡಲಾಗುತ್ತದೆ. ಅಲ್ಲಿಯವರೆಗೆ ಕುಳಿತುಕೊಳ್ಳಲು ರೋಗಿಗಳಿಗೆ ಸಂಸ್ಥೆಯ ಅವರಣದಲ್ಲಿ ವ್ಯವಸ್ಥೆ ಮಾಡಲಾಗಿದೆ.

ಇದೇ ವೇಳೆ ರೆಡ್ ಕ್ರಾಸ್‌ನಿಂದ ಆಶಾ ಕಾರ್ಯಕರ್ತರಿಗೆ ಮುಖಗವಸುಗಳು ಹಾಗೂ ರೋಟರಿ ಸಂಸ್ಥೆಯಿಂದ ಸಂಸ್ಥೆಗೆ ವೈಯಕ್ತಿಕ ಸುರಕ್ಷಾ ಸಾಧನಗಳನ್ನು (ಪಿಪಿಇ ಕಿಟ್) ವಿತರಿಸಲಾಯಿತು.

ಆಧಾರ:ಪ್ರಜಾವಾಣಿ, ದಿನಾಂಕ:27.04.2020.

## 43. ಸರಳವಾಗಿ ಬಸವ ಜಯಂತಿ ಆಚರಣೆ : ಸಾಮಾಜಿಕ ಮಾಧ್ಯಮಗಳಲ್ಲಿ ಗೌರವ ಸಂದೇಶ

ಮಹಾಮಾನವತಾವಾದಿ ವಿಶ್ವಗುರು ಬಸವೇಶ್ವರರ ಜಯಂತಿಯನ್ನು ನಗರದಾದ್ಯಂತ ಸರಳವಾಗಿ ಆಚರಿಸಲಾಯಿತು. ಲಾಕ್‌ಡೌನ್ ಹಿನ್ನೆಲೆಯಲ್ಲಿ ಯಾವುದೇ ವೇದಿಕೆ ಕಾರ್ಯಕ್ರಮ ಅಥವಾ ಮೆರವಣಿಗೆ ನಡೆಯಲಿಲ್ಲ. ಬಸವಣ್ಣನ ಅನುಯಾಯಿಗಳು ಬಸವೇಶ್ವರರ ಭಾವಚಿತ್ರಕ್ಕೆ ಹೂವಿನ ಹಾರ ಹಾಕಿ ದೀಪ ಹಚ್ಚಿ ಮನೆಗಳಲ್ಲಿಯೇ ನಮಿಸಿದರು.

ವಚನ ಜ್ಯೋತಿ ಬಳಗ, ಬಸವ ಸಮಿತಿ, ಕೆಪಿಸಿಸಿ, ಜಯ ಕರ್ನಾಟಕ ಸಂಘಟನೆ ಶ್ರೀ ಜಗಜ್ಯೋತಿ ಬಸವೇಶ್ವರ ಸಮಿತಿ ಹೀಗೆ ನಾನಾ ಸಂಸ್ಥೆಗಳು ಬಸವ ಜಯಂತಿಯನ್ನು ತಮ್ಮ ಕಛೇರಿಗಳಲ್ಲಿ ಅತ್ಯಂತ ಸರಳವಾಗಿ ಆಚರಿಸಿದವು.

ಬಸವ ಸಮಿತಿ ವತಿಯಿಂದ ನಗರದ ಬಸವ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವೇಶ್ವರರ ಪುತ್ಥಳಿಗೆ ಮುಖ್ಯಮಂತ್ರಿಯವರು ಮತ್ತು ಮೇಯರ್ ಗೌತಮ್ ಕುಮಾರ್ ಪುಷ್ಪನಮನ ಸಲ್ಲಿಸಿದರು. ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.

ಶಿವಕುಮಾರ್, ಉಪ ಮೇಯರ್ ರಾಮಮೋಹನ ರಾಜು, ಚಿತ್ರದುರ್ಗದ ಮುರುಘಾಮಠದ ಡಾ: ಶಿವಮೂರ್ತಿ ಮುರುಘಾ ಶರಣರು, ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಹಾಗೂ ಇತರರು ಉಪಸ್ಥಿತರಿದ್ದರು.

ಕೋವಿಡ್–19 ಪರಿಹಾರ ನಿಧಿಗೆ ಬಸವ ಸಮಿತಿ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರೂ.2.51 ಲಕ್ಷ ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿಯವರಿಗೆ ನೀಡಲಾಯಿತು.

ಆಧಾರ:ಪ್ರಜಾವಾಣಿ, ದಿನಾಂಕ:27.04.2020.

## 44. ತರಕಾರಿ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ನೀಡಿ: ದೇವೇಗೌಡ

ಕೊರೊನಾ ಲಾಕ್‌ಡೌನ್‌ನಿಂದಾಗಿ ರಾಜ್ಯದಲ್ಲಿ ಹೂ, ಹಣ್ಣು, ತರಕಾರಿ ಬೆಳೆಗಾರರಿಗೆ ಭಾರಿ ನಷ್ಟವಾಗಿದ್ದು, ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಜೆ.ಡಿ.ಎಸ್ ವರಿಷ್ಠ ಎಚ್. ಡಿ. ದೇವೇಗೌಡ ಸರ್ಕಾರವನ್ನು ಆಗ್ರಹಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು ಬಜೆಟ್‌ನಲ್ಲಿ ಘೋಷಿಸಿದ ಹಲವು ಯೋಜನೆಗಳನ್ನು ಕೈಬಿಟ್ಟರೂ ಸರಿಯೇ, ಅನ್ನದಾತನ ಕೈಬಿಡಬೇಡಿ, ರೈತರ ಪರ ಕಾಳಜಿ ಹೊಂದಿರುವ ನಿಮ್ಮಿಂದ ಆ ವರ್ಗ ಅಪಾರ ನಿರೀಕ್ಷೆ ಇಟ್ಟುಕೊಂಡಿದೆ ಎಂದು ಹೇಳಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:28.04.2020

## 45. ಲಾಕ್‌ಡೌನ್ ಸದ್ಯಕ್ಕೆ ಮುಗಿಯದು

ರಾಜ್ಯದಲ್ಲಿ ಕೋವಿಡ್–19ರ ಲಾಕ್‌ಡೌನ್ ಕೆಂಪು ವಲಯದಲ್ಲಿ ಮೇ 3ರ ಬಳಿಕವೂ ಮುಂದುವರೆಯುವ ಸಾಧ್ಯತೆ ಇದೆ. ಈ ವಲಯದ ಜನರು ಮೂರನೇ ಹಂತದ ಕಠಿಣ ಲಾಕ್‌ಡೌನ್‌ಗೆ ಸಿದ್ಧರಾಗಬೇಕಾಗಿದೆ. ವಿವಿಧ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಿಡಿಯೋ ಸಂವಾದ ನಡೆಸಿ ಎಲ್ಲ ಜಿಲ್ಲಾಧಿಕಾರಿಗಳು ಲಾಕ್‌ಡೌನ್ ಅನ್ನು ಯಥಾಸ್ಥಿತಿ ಮುಂದುವರಿಸಲೇಬೇಕು. ಶಾಸಕರೂ ಕೂಡ ಲಾಕ್‌ಡೌನ್ ಮುಂದುವರಿಸಲು ಒತ್ತಡ ಹೇರುತ್ತಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಯಾವುದೇ ಕಾರಣಕ್ಕೂ ಅಂತರರಾಜ್ಯ ಗಡಿಗಳನ್ನು ತೆರೆಯಬಾರದು. ನೆರೆಯ ರಾಜ್ಯಗಳ ಪರಿಸ್ಥಿತಿ ತುಂಬಾ ಗಂಭೀರವಾಗಿದೆ ಎಂದು ಗಡಿ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಕಳವಳ ವ್ಯಕ್ತಪಡಿಸಿದರು. ಕೆಂಪು ವಲಯದ ಜಿಲ್ಲೆಗಳಿಂದ ಅನ್ಯ ಜಿಲ್ಲೆಗಳಿಗೆ ಸಂಚರಿಸಲು ಜನರಿಗೆ ಅವಕಾಶ ನೀಡುವುದು ಬೇಡ. ಕೆಂಪು ವಲಯ ಹೊರತುಪಡಿಸಿ ಕಿತ್ತಳೆ ಮತ್ತು ಹಸಿರು ವಲಯದಲ್ಲಿ ನಿಯಂತ್ರಿತ ಚಟುವಟಿಕೆಗಳಿಗೆ ಅವಕಾಶ ನೀಡಬಹುದು ಎಂದು ಸಭೆಯಲ್ಲಿ ಸಲಹೆ ನೀಡಲಾಗಿತ್ತು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜೊತೆ ನಡೆಸಿದ ವಿಡಿಯೋ ಸಂವಾದದಲ್ಲಿ ರಾಜ್ಯದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬುದರ ಸ್ಪಷ್ಟೀಕರಣ ಕೇಳಿದರು. ಈ ಸಂಬಂಧ ರಾಜ್ಯ ಸರ್ಕಾರ ವರದಿಯೊಂದನ್ನು ಕೇಂದ್ರಕ್ಕೆ ಕಳುಹಿಸಲಿದೆ. ಕೊರೊನಾ ಸಮಸ್ಯೆ ಸದ್ಯಕ್ಕೆ ಮುಗಿಯುವುದಿಲ್ಲ. ಅದರ ಜೊತೆ ಬದುಕುವ ಕಲೆಯನ್ನು ಕಲಿಯಬೇಕಾಗುತ್ತದೆ.

ಮಾಸ್ಕ್ ಧರಿಸುವುದು, ಅಂತರವನ್ನು ಕಾಯ್ದುಕೊಳ್ಳುವುದು, ಇನ್ನು ಮುಂದೆ ದೈನಂದಿನ ಬದುಕಿನ ಭಾಗವಾಗಬೇಕು ಇದಕ್ಕೆ ಪೂರಕವಾಗಿ ಸಾರ್ವಜನಿಕ ಮನಸ್ಥಿತಿಯನ್ನು ಸಿದ್ಧಪಡಿಸಬೇಕು ಎಂದು ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸೂಕ್ಷವಾಗಿ ಹೇಳಿದ್ದಾರೆಂದು ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದರು.

**ಹಸಿರು ವಲಯದಲ್ಲಿ ಇನ್ನಷ್ಟು ವಿನಾಯಿತಿ:–** ಕೋವಿಡ್ –19 ಬಾಧಿತವಲ್ಲದ ಒಂಭತ್ತು ಜಿಲ್ಲೆಗಳಲ್ಲಿ ಮೇ–3ರ ನಂತರ ಇನ್ನಷ್ಟು ಹೆಚ್ಚಿನ ಚಟುವಟಿಕೆಗಳಿಗೆ ಅವಕಾಶ ನೀಡುವ ಸಾಧ್ಯತೆ ಇದೆ. ಇದಕ್ಕೆ ಪೂರಕವಾಗಿ ಹಸಿರು ವಲಯದಲ್ಲಿರುವ 9 ಜಿಲ್ಲೆಗಳಲ್ಲಿ ಎಲ್ಲ ಬಗೆಯ ಕೈಗಾರಿಕಾ ಚಟುವಟಿಕೆಗಳನ್ನು ಆರಂಭಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ ಹಾಗೂ ಉದ್ಯಮಗಳಲ್ಲಿ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಹೇಳಿದೆ. ಮೇ –3ರ ನಂತರ ಕೆಲವು ಕ್ಷೇತ್ರಗಳಲ್ಲಿ ನಿಯಂತ್ರಿತ ಅನುಮತಿ ನೀಡುವ ಸಾಧ್ಯತೆ ಇದೆ. ವಾಣಿಜ್ಯ ಚಟುವಟಿಕೆಗಳು, ಸಾರಿಗೆ ಸೇವೆ, ಸರ್ಕಾರಿ ಕಛೇರಿಗಳು, ಕಾಮಗಾರಿಗಳು ಮುಂತಾದವುಗಳಿಗೆ ಅವಕಾಶ ಸಿಗುತ್ತದೆ. ಅಂತರ್ ಜಿಲ್ಲೆಗಳ ಮಧ್ಯೆ ವಾಹನಗಳ ಓಡಾಟಕ್ಕೆ ಅವಕಾಶ ಇರುವುದಿಲ್ಲ.

ಆಧಾರ:ಪ್ರಜಾವಾಣಿ, ದಿನಾಂಕ:28.04.2020.

## 46. ಬಿಸಿಯೂಟ ನೌಕರರ ಸಂಭಾವನೆ ಹೆಚ್ಚಿಸಿ ಕೇಂದ್ರ ಸರ್ಕಾರಕ್ಕೆ ಸಚಿವರ ಮನವಿ

ಮಧ್ಯಾಹ್ನ ಬಿಸಿಯೂಟ ಯೋಜನೆಯಲ್ಲಿ ಕೆಲಸ ಮಾಡುವ ಅಡುಗೆ ಸಹಾಯಕರ ಗೌರವಧನವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕೇಂದ್ರದ ಪಾಲನ್ನು ಹೆಚ್ಚಿಸಬೇಕು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಅವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ರಮೇಶ್ ಪೋಕ್ರಿಯಾಲ್ ನಿಶಾಂಕ್ ಅವರು ನಡೆಸಿದ ವಿಡಿಯೊ ಸಂವಾದದಲ್ಲಿ ಪಾಲ್ಗೊಂಡ ಅವರು, ಬಿಸಿಯೂಟ ಯೋಜನೆ ಆರಂಭವಾದರೆ ಕೇಂದ್ರ ಸರ್ಕಾರ ನೀಡುತ್ತಿದ್ದ ಪಾಲಿನ ಮೊತ್ತವೇ (ರೂ.600) ಈಗಲೂ ಮುಂದುವರೆದಿದೆ. ರಾಜ್ಯ ಸರ್ಕಾರ ಮಾತ್ರವೇ ತನ್ನ ಪಾಲನ್ನು ಸಾಕಷ್ಟು ಬಾರಿ ಹೆಚ್ಚಿಸಿದೆ ಎಂದರು.

ಕೋವಿಡ್ ಸೃಷ್ಟಿಸಿರುವ ಹೊಸ ಜೀವನ ಶೈಲಿಯನ್ನು ಸಮರ್ಥವಾಗಿ ಎದುರಿಸಲು ಶೈಕ್ಷಣಿಕ ವ್ಯವಸ್ಥೆಯಲ್ಲಿ ತಂತ್ರಜ್ಞಾನ ಆಧಾರಿತವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಇದಕ್ಕಾಗಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಹೆಚ್ಚಿನ ಆರ್ಥಿಕ ಸಹಕಾರ ಒದಗಿಸಬೇಕು ಎಂದು ಸಚಿವರು ಮನವಿ ಮಾಡಿಕೊಂಡಿದ್ದಾರೆ.

ಲಾಕ್‌ಡೌನ್ ಮುಂದುವರಿಕೆಯಿಂದ ಮುಂದಿನ ಶೈಕ್ಷಣಿಕ ಸಾಲಿನ ಪಠ್ಯಕ್ರಮವನ್ನು ಪರಿಷ್ಕರಿಸಲು ಶಿಕ್ಷಣ ಇಲಾಖೆ ನಿರ್ಣಯಿಸಿದ್ದು, ಶಿಕ್ಷಕರ ಸಮಿತಿಗಳ ಮೂಲಕ ಇಂತಹ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ ಪಠ್ಯಕ್ರಮದ ಶಾಲೆಗಳಿಗೂ ಮುಂಬರುವ ಸಾಲಿನ ಪಠ್ಯಕ್ರಮವನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ಕ್ರಮವಹಿಸಿ, ದೇಶದಾದ್ಯಂತ ಸಮಾನ ಶೈಕ್ಷಣಿಕ ವ್ಯವಸ್ಥೆಯನ್ನು ಜಾರಿಯಲ್ಲಿಡಬೇಕಾದ ಅಗತ್ಯವಿದೆ ಎಂದು ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:29.04.2020

## 47. ಶ್ರಮಿಕರಿಗೆ ವಿಶೇಷ ಪ್ಯಾಕೇಜ್ ನೀಡಿ

ಲಾಕ್‌ಡೌನ್‌ನಿಂದ ತೀವ್ರ ಸಂಕಷ್ಟಕ್ಕೆ ಗುರಿಯಾಗಿರುವ ಸಾಂಪ್ರದಾಯಿಕ ವೃತ್ತಿ ಮಾಡುವವರೂ ಸೇರಿದಂತೆ ಶ್ರಮಿಕ ವರ್ಗದವರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಸಾಂಪ್ರದಾಯಿಕ ವೃತ್ತಿ ಮಾಡುವ ವಿವಿಧ ಸಮುದಾಯಗಳು ಹಾಗೂ ಆಟೋ ಸಂಘಟನೆಗಳ ಮುಖಂಡರ ಜೊತೆಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು ಆರ್ಥಿಕವಾಗಿ ನೆಲಕಚ್ಚಿರುವ ಶ್ರಮಿಕ ವರ್ಗದವರಿಗಾಗಿ ವಿಶೇಷ ಯೋಜನೆ ರೂಪಿಸದೇ ಇದ್ದರೆ ಲಾಕ್‌ಡೌನ್ ಮುಗಿದ ಕೂಡಲೇ ಬೀದಿಗಿಳಿದು ಹೋರಾಟ ನಡೆಸಲಾಗುವುದು ಎಂದರು.

ರಾಜ್ಯದಲ್ಲಿ ಲಾಕ್‌ಡೌನ್ ಜಾರಿ ಬಂದು ಒಂದು ತಿಂಗಳು ಮುಗಿದುಹೋಗಿದೆ. ಜೀವನೋಪಾಯಕ್ಕೆ ಸಾಂಪ್ರದಾಯಿಕ ವೃತ್ತಿಯನ್ನೇ ಅವಲಂಬಿಸಿರುವ ಸಮುದಾಯಗಳ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಈ ಸಮುದಾಯದ ಕುಟುಂಬಗಳು ಒಂದು ಹೊತ್ತಿನ ಊಟಕ್ಕೂ ಪರದಾಡುವ ಸನ್ನಿವೇಶ ನಿರ್ಮಾಣವಾಗಿದೆ. ಶ್ರಮಿಕ ವರ್ಗದವರಿಗೆ ಉಚಿತವಾಗಿ ಊಟ, ತಿಂಡಿ ಕೊಡಿ ಎಂದು ಮುಖ್ಯಮಂತ್ರಿಗಳನ್ನು ಹಲವು ಬಾರಿ ಒತ್ತಾಯ ಮಾಡಿದ್ದೇನೆ. ಇದಕ್ಕಾಗಿ ರೂ.18 ಕೋಟಿಯಿಂದ ರೂ.20 ಕೋಟಿ ವೆಚ್ಚವಾಗಬಹುದು. ಸರ್ಕಾರ ಈಗ ವಿತರಣೆ ಮಾಡುತ್ತಿರುವ ದವಸ–ಧಾನ್ಯದ ಕಿಟ್‌ಗಳು ಎಲ್ಲರನ್ನು ತಲುಪುತ್ತಿಲ್ಲ ಅದಕ್ಕಾಗಿಯೇ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು ಎಂದರು.

ಕೆಲಸ ಇಲ್ಲದೆ ಸವಿತಾ ಸಮಾಜ, ಆಟೋ ಟ್ಯಾಕ್ಸಿ ಚಾಲಕರು ಸಂಕಷ್ಟದಲ್ಲಿದ್ದಾರೆ. 20 ಲಕ್ಷ ಅಸಂಘಟಿತರ ಪೈಕಿ 12 ಲಕ್ಷ ಮಂದಿಗಷ್ಟೆ ರೂ.2 ಸಾವಿರ ಕಾರ್ಮಿಕ ಕಲ್ಯಾಣ ನಿಧಿ, ಇತ್ಯಾದಿ ಕುರಿತು ವಿರೋಧ ಪಕ್ಷಗಳ ಸಭೆಯಲ್ಲಿ ಸಂಘಟನೆಯ ಮುಖಂಡರು ಚರ್ಚಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:29.04.2020

## 48. 14 ಜಿಲ್ಲೆಗಳಲ್ಲಿ ತೆರೆದ ಬಾಗಿಲು

ಕೊರೊನಾ ವೈರಸ್ ಸೋಂಕಿಗೆ ಒಳಗಾಗದೇ ಇರುವ ಹಸಿರು ವಲಯದ 14 ಜಿಲ್ಲೆಗಳಲ್ಲಿ ಮತ್ತಷ್ಟು ಆರ್ಥಿಕ ಚಟುವಟಿಕೆಗಳಿಗೆ ಅನುಕೂಲವಾಗಲು ವಿಶೇಷ ಆರ್ಥಿಕ ಮತ್ತು ಕೈಗಾರಿಕಾ ವಲಯ, ರಫ್ತು ಆಧಾರಿತ ಕೈಗಾರಿಕಾ ಘಟಕಗಳಿಗೆ ಚಾಲನೆ ನೀಡಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಕೆಂಪು ವಲಯದಲ್ಲಿರುವ ಬೆಂಗಳೂರು ನಗರ, ಬೆಳಗಾವಿ, ಮೈಸೂರು, ವಿಜಯಪುರ, ಬಾಗಲಕೋಟೆ, ಕಲುಬುರ್ಗಿ, ಬೀದರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಲಾಕ್‌ಡೌನ್‌ನ ಕಠಿಣ ನಿರ್ಬಂಧಗಳು ಮುಂದುವರಿಯುತ್ತವೆ ಎಂದು ರಾಜ್ಯ ಸರ್ಕಾರ ಹೊರಡಿಸಿರುವ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಕೊರೊನಾ ಅಲ್ಪ ಮಟ್ಟಿಗೆ ಬಾಧಿಸಿರುವ ಜಿಲ್ಲೆಗಳಾದ ಬಳ್ಳಾರಿ, ಮಂಡ್ಯ, ಬೆಂಗಳೂರು ಗ್ರಾಮಾಂತರ, ಗದಗ, ತುಮಕೂರು, ಚಿಕ್ಕಬಳ್ಳಾಪುರ, ಉತ್ತರ ಕರ್ನಾಟಕ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕೋವಿಡ್ ಸೋಂಕು ಹರಡದೇ ಇರುವ ತಾಲ್ಲೂಕುಗಳಲ್ಲಿ ಕೈಗಾರಿಕೆಗಳು ಮತ್ತು ಅಂಗಡಿಗಳನ್ನು ತೆರೆಯುವ ಸಂಬಂಧ ಆಯಾ ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರೇ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಆದೇಶ ತಿಳಿಸಿದೆ.

**ಆದೇಶದ ಅನ್ವಯ ಚಟುವಟಿಕೆಗಳಿಗೆ ಅವಕಾಶ:**

- ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳು ಕಾರ್ಯನಿರ್ವಹಿಸಬಹುದು, ಪುರಸಭೆ ಮತ್ತು ನಗರಸಭೆ ವ್ಯಾಪ್ತಿಯಿಂದ ಹೊರಗೆ (ರಾಮನಗರ ಹೊರತುಪಡಿಸಿ).
- ವಿಶೇಷ ಆರ್ಥಿಕ ವಲಯಗಳು ರಫ್ತು ಆಧಾರಿತ ಘಟಕಗಳು, ಕೈಗಾರಿಕಾ ಎಸ್ಟೇಟ್‌ಗಳು ಮತ್ತು ಕೈಗಾರಿಕಾ ವಸಾಹತುಗಳಲ್ಲಿ ಇರುವ ಉತ್ಪಾದಕ ಮತ್ತು ಕೈಗಾರಿಕಾ ಘಟಕಗಳು.
- ಎಲ್ಲ ರೀತಿಯ ಅಂಗಡಿಗಳು (ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್ ಒಳಪಡುವ), ವಸತಿ ಮತ್ತು ಮಾರುಕಟ್ಟೆ ಸಂಕೀರ್ಣದಲ್ಲಿರುವ ಅಂಗಡಿಗಳನ್ನು ತೆರೆಯಬಹುದು. ಆದರೆ, ಮಲ್ಟಿ ಬ್ರಾಂಡ್ ಮತ್ತು ಸಿಂಗಲ್ ಬ್ರಾಂಡ್ ಮಾಲ್‌ಗಳಿಗೆ ಅವಕಾಶವಿಲ್ಲ. ಇವೆಲ್ಲವೂ ಪುರಸಭೆ ಮತ್ತು ನಗರಪಾಲಿಕೆ ವ್ಯಾಪ್ತಿಯ ಹೊರಗಿರಬೇಕು.
- ಪುರಸಭೆ ಮತ್ತು ನಗರಪಾಲಿಕೆ ವ್ಯಾಪ್ತಿಯಲ್ಲಿ ಅಕ್ಕಪಕ್ಕದಲ್ಲಿರುವ ಅಂಗಡಿಗಳು, ವಸತಿ ಸಂಕೀರ್ಣದಲ್ಲಿರುವ ಅಂಗಡಿಗಳು ಒಂದೇ ಅಂಗಡಿಗಳು.
- ಹೋಟೆಲ್‌ನಲ್ಲಿ ಪಾರ್ಸೆಲ್ ಕೊಂಡೊಯ್ಯಲು ಮಾತ್ರ ಅವಕಾಶ ಇದ್ದು, ಅದು ಮುಂದುವರಿಯಲಿದೆ.

ಆಧಾರ:ಪ್ರಜಾವಾಣಿ, ದಿನಾಂಕ:29.04.2020

## 49. ರಸಗೊಬ್ಬರ ದರಪಟ್ಟಿ ಪ್ರದರ್ಶನ ಕಡ್ಡಾಯ

ಬೀಜ, ಗೊಬ್ಬರದ ವಿಚಾರದಲ್ಲಿ ರೈತರಿಗೆ ಮೋಸ ಮಾಡಿದರೆ ಸರ್ಕಾರ ಸುಮ್ಮನಿರುವುದಿಲ್ಲ. ಅಂಗಡಿಗಳಲ್ಲಿ ಗೊಬ್ಬರದ ಬೆಲೆ ಪ್ರದರ್ಶಿಸುವ ಫಲಕವನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ತಿಳಿಸಿರುತ್ತಾರೆ.

ನಿಗದಿತ ದರಕ್ಕಿಂತ ಅಧಿಕ ದರದಲ್ಲಿ ಗೊಬ್ಬರ ಮಾರಾಟ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಆಲಿಕಲ್ಲು ಮಳೆ ಬಿರುಗಾಳಿಯಂತಹ ನೈಸರ್ಗಿಕ ವಿಕೋಪ ಸಂಭವಿಸಿ ಬೆಳೆ ಹಾನಿಯಾದರೆ ತಕ್ಷಣ ಸಮೀಕ್ಷೆ ನಡೆಸಿ ಬೆಳೆ ಪರಿಹಾರ ನೀಡಲಾಗುವುದು. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸಂಭವಿಸಿದ ಹಾನಿಗೆ ಸರ್ಕಾರ ಈಗಾಗಲೇ ರೂ.45 ಕೋಟಿ ಬಿಡುಗಡೆ ಮಾಡಿದೆ ಎಂದು ಸಚಿವರು ತಿಳಿಸಿದರು.

ಆಧಾರ:ಪ್ರಜಾವಾಣಿ, ದಿನಾಂಕ:30.04.2020

## 50. ಕನ್ನಡಿಗರನ್ನು ಕರೆತರಲು ಸಿದ್ಧತೆ

ಕೊರೊನಾ ವೈರಸ್‌ನಿಂದಾಗಿ ಹೊರ ದೇಶಗಳಲ್ಲಿ ಸಂಕಷ್ಟದಲ್ಲಿರುವ 10,823 ಕನ್ನಡಿಗರನ್ನು ರಾಜ್ಯಕ್ಕೆ ಕರೆತರುವ ಪ್ರಕ್ರಿಯೆ ಪ್ರಾರಂಭವಾಗಿದ್ದು, ಅವರನ್ನು ಪ್ರತ್ಯೇಕವಾಗಿಡುವುದಕ್ಕೆ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದು ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು.

ಕೇಂದ್ರ ಸರ್ಕಾರ ಸಮನ್ವಯ ಕಾರ್ಯದ ನಿರ್ದೇಶನ ನೀಡಿದೆ. ಕರೆತರುವವರ ಪೈಕಿ 4,408 ಪ್ರವಾಸಿಗರು, 3,074 ವಿದ್ಯಾರ್ಥಿಗಳು, 2,284 ವೃತ್ತಿಪರ ಕೆಲಸ ಮಾಡುವವರು ಸೇರಿದ್ದಾರೆ. ಅವರೆಲ್ಲರನ್ನೂ ವಿಮಾನ ನಿಲ್ದಾಣದಲ್ಲೇ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ತಿಳಿಸಿದರು.

ನಗರದಲ್ಲಿ ಕೋವಿಡ್ ಸೇವೆಯಲ್ಲಿ ಅವಿರತವಾಗಿ ತೊಡಗಿಸಿಕೊಂಡಿರುವ ಸರ್ಕಾರಿ ನೌಕರರ ಆರೋಗ್ಯ ತಪಾಸಣೆ ಮಾಡಲು ಆರೋಗ್ಯ ಇಲಾಖೆ ಮುಂದಾಗಿದ್ದು, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ತಪಾಸಣಾ ಅಭಿಯಾನವು ಪ್ರಾರಂಭವಾಗಿದೆ. ಗುಣಮುಖರಾಗಿ ಹಿಂತಿರುಗಿರುವ ವ್ಯಕ್ತಿಗಳಿಗೆ ನಂತರದ ದಿನಗಳಲ್ಲಿ ಕ್ವಾರಂಟೈನ್ ಅನ್ನು ಯಾವ ರೀತಿಯಲ್ಲಿ ಅನುಸರಿಸಬೇಕೆಂಬ ಬಗ್ಗೆ ಸಹ ಮಾರ್ಗದರ್ಶಿ ಸೂತ್ರಗಳನ್ನು ರಾಜ್ಯದ ಆರೋಗ್ಯ ಇಲಾಖೆ ಹೊರಡಿಸಿದೆ ಎಂದರು.

ಆಧಾರ:ಪ್ರಜಾವಾಣಿ, ದಿನಾಂಕ:30.04.2020

## 51. ಇಲಾಖೆಗಳ ವೆಚ್ಚಕ್ಕೆ ಮೂಗುದಾರ

ರಾಜ್ಯ ಸರ್ಕಾರಿ ನೌಕರರ ಸಂಬಳ ಮತ್ತು ಪಿಂಚಣಿ ಬಿಟ್ಟು ಉಳಿದ ಎಲ್ಲ ಖರ್ಚು ವೆಚ್ಚಗಳಿಗೆ ಆರ್ಥಿಕ ಇಲಾಖೆ ಕಟ್ಟುನಿಟ್ಟಿನ ಕಡಿವಾಣ ಹಾಕಿದೆ. ಇಲಾಖೆಯಲ್ಲಿ ಸರ್ಕಾರಿ ಕಛೇರಿ ನಡೆಸಲು ಅಗತ್ಯವಿರುವ ಅಡಳಿತಾತ್ಮಕ ವೆಚ್ಚ, ಕಟ್ಟಡದ ಖರ್ಚು, ಬಾಡಿಗೆ, ಸಾರಿಗೆ ವೆಚ್ಚವನ್ನು ಭರಿಸಲು ಮಾತ್ರ ಹಣವನ್ನು ತೆಗೆಯಲು ಅವಕಾಶ ನೀಡಲಾಗಿದೆ. ಹೊಸ ವಾಹನಗಳ ಖರೀದಿ, ಪೀಠೋಪಕರಣಗಳ ಖರೀದಿ, ಕಟ್ಟಡ ರಿಪೇರಿ ಮತ್ತು ಹೊಸ ಕಟ್ಟಡ ರಿಪೇರಿ ಮತ್ತು ಹೊಸ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕೈ ಹಾಕಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಪಂಚಾಯತ್‌ರಾಜ್ ಇಲಾಖೆಯ ಇಂಜಿನಿಯರಿಂಗ್ ವಿಭಾಗದಲ್ಲಿ ದಿನಗೂಲಿ ನೌಕರರು ಮತ್ತು ಸಿಬ್ಬಂದಿಗೆ ಏಪ್ರಿಲ್ ತಿಂಗಳ ವೇತನ ನೀಡಲು ಹಣಕಾಸು ಇಲಾಖೆ ರೂ.2.14 ಕೋಟಿ ಬಿಡುಗಡೆ ಮಾಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ:30.04.2020

## 52. ಉತ್ಪನ್ನ ಮಾರಾಟಕ್ಕೆ ವಾರ್ ರೂಂ ಸಂಪರ್ಕಿಸಿ

ಮಾರುಕಟ್ಟೆ ಇಲ್ಲ, ಕೊಳ್ಳುವವರಿಲ್ಲ ಎಂದು ಬೆಳೆ ನಾಶ, ಆತ್ಮಹತ್ಯೆಯಂತಹ ಕೃತ್ಯಕ್ಕೆ ಇಳಿಯಬೇಡಿ. ಮಾರಾಟ ಮಾಡಲು ಅವಕಾಶ ಇಲ್ಲವಾದರೆ ಕೃಷಿ ವಾರ್ ರೂಂ ಸಂಪರ್ಕಿಸಿ, ಸರ್ಕಾರ ನಿಮ್ಮ ನೆರವಿಗೆ ಬರಲಿದೆ ಎಂದು ಕೃಷಿ ಸಚಿವರು ಹೇಳಿರುತ್ತಾರೆ.

ಬೆಳೆದು ನಿಂತಿರುವ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಸಿಗುತ್ತಿಲ್ಲ. ಬೇರೆ ಕಡೆಗೆ ಸಾಗಿಸಲು ಸಾಧ್ಯವಾಗುತ್ತಿಲ್ಲ ಎಂಬ ರೈತರ ಅಳಲಿಗೆ ಸ್ಪಂದಿಸಿದ ಅವರು, ಹೊರ ಜಿಲ್ಲೆ ರಾಜ್ಯಗಳಿಗೆ ಸಾಗಣೆ ಮಾಡಲು ಅವಕಾಶ ಇದೆ. ತೊಂದರೆಯಾದರೆ ಜಿಲ್ಲಾಧಿಕಾರಿಗಳು, ಜಿಲ್ಲಾ ಕೃಷಿ ಜಂಟಿ ನಿರ್ದೇಶಕರು, ಸಹಾಯಕ ನಿರ್ದೇಶಕರುಗಳನ್ನು ನಿಮ್ಮ ಸಹಾಯಕ್ಕಾಗಿ ಸಂಪರ್ಕಿಸಿ, ನಿಮಗೆ ಸೂಕ್ತ ಸಲಹೆ, ಸೂಚನೆ, ನೆರವು ನೀಡುತ್ತಾರೆ ಎಂದು ಕೃಷಿ ಸಚಿವರು ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:30.04.2020

## 53. ನೂತನ ಮರಳು ನೀತಿಗೆ ಸಂಪುಟ ಒಪ್ಪಿಗೆ

ಪಟ್ಟಾ ಭೂಮಿ ಕೆರೆ, ಗ್ರಾಮೀಣ ಭಾಗದ ಹಳ್ಳ ಪ್ರದೇಶಗಳಲ್ಲಿ ಮರಳು ತೆಗೆಯಲು ಅವಕಾಶ ಕೊಡುವ 'ಕರ್ನಾಟಕ ನೂತನ ಮರಳು ನೀತಿ'ಗೆ ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಆಯಾ ತಾಲ್ಲೂಕಿನಲ್ಲಿ ದಂಡಾಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಮರಳು ತೆಗೆಯುವ ಪ್ರದೇಶ ಗುರುತಿಸಿ ಗ್ರಾಮ ಪಂಚಾಯಿತಿ ಒಪ್ಪಿಗೆಯೊಂದಿಗೆ ಅನುಮತಿ ನೀಡಲಿದ್ದಾರೆ.

ಸ್ಥಳೀಯವಾಗಿ ಜನತಾ ಮನೆ, ಸಣ್ಣ ಪುಟ್ಟ ಕಾಮಗಾರಿಗೆ ಮರಳು ಬಳಸಬಹುದು. ಪ್ರತಿ ಮೆಟ್ರಿಕ್ ಟನ್‌ಗೆ ರೂ. 700 ವರೆಗೆ ದರ ನಿಗದಿ ಮಾಡಲಾಗುವುದು. ದಂಡಾಧಿಕಾರಿಗಳಿಗೆ ದರ ನಿಗದಿ ಅಧಿಕಾರ ಇರಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿರುತ್ತಾರೆ.

ಸಚಿವ ಸಂಪುಟ ಸಭೆ ನಂತರ ಮಾತನಾಡಿ, ಇಷ್ಟು ದಿನ ನದಿ ಪಾತ್ರಗಳಲ್ಲಿ ಕೆಲವು ಮರಳು ಬ್ಲಾಕ್ ಗುರುತಿಸಿ ಹರಾಜು ಹಾಕಲು ಅವಕಾಶವಿತ್ತು. ಇದೀಗ ಪಟ್ಟಾ ಭೂಮಿ, ಕೆರೆ, ಗ್ರಾಮೀಣ ಭಾಗದ ಹಳ್ಳ, ತಗ್ಗು ಪ್ರದೇಶಗಳಲ್ಲೂ ಮರಳು ತೆಗೆಯಲು ಅವಕಾಶ ಕೊಡಲಾಗಿದೆ. ಇದರಿಂದ ಅಕ್ರಮ ಮರಳು ದಂಧೆಗೂ ಕಡಿವಾಣ ಬೀಳಲಿದೆ. ಜೊತೆಗೆ ಸರ್ಕಾರಕ್ಕೂ ಆ ಬಾಬ್ತಿನಿಂದ ಈಗ ಬರುತ್ತಿರುವ ರೂ.130 ಕೋಟಿ ಆದಾಯಕ್ಕಿಂತ ಇನ್ನೂ ರೂ.60–70 ಕೋಟಿ ಹೆಚ್ಚಾಗಲಿದೆ ಎಂದು ಹೇಳಿದರು.

**ಬರಪೀಡಿತ ತಾಲ್ಲೂಕುಗಳ ಅವಧಿ ವಿಸ್ತರಣೆ:** ಬರಪೀಡಿತ ಎಂದು ಘೋಷಿಸಿದ್ದ ರಾಜ್ಯದ 18 ಜಿಲ್ಲೆಗಳ 49 ತಾಲ್ಲೂಕುಗಳಲ್ಲಿ ಕುಡಿಯುವ ನೀರು ಪೂರೈಕೆ ಸೇರಿ ಬರ ನಿರ್ವಹಣೆ ಕಾರ್ಯದ ಅವಧಿ ಒಂದು ತಿಂಗಳು ವಿಸ್ತರಿಸಲು ತೀರ್ಮಾನ ಕೈಗೊಳ್ಳಲು ಸಚಿವ ಸಂಪುಟ ಸಭೆ ನಿರ್ಧರಿಸಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದಾರೆ.

ಸಂಪುಟ ಸಭೆ ನಂತರ ಸುದ್ದಿಗಾರರ ಜೊತೆ ಮಾತನಾಡಿ, ಕೆಲವು ಜಿಲ್ಲೆಗಳಲ್ಲಿ ಮಳೆ ಪ್ರಾರಂಭವಾಗಿದ್ದರೂ ಈಗಿನ ಸ್ಥಿತಿ ಪರಿಗಣಿಸಿ 49 ತಾಲ್ಲೂಕುಗಳು ಬರಪೀಡಿತ ಎಂಬ ಪರಿಗಣನೆ ಅವಧಿ ಒಂದು ತಿಂಗಳು ವಿಸ್ತರಿಸಲಾಗಿದೆ. ಬೆಂಗಳೂರಿನಲ್ಲಿ ಮಳೆ ಪ್ರಾರಂಭವಾಗಿರುವುದರಿಂದ ಕಾರ್ಯಪಡೆ ರಚನೆ, ಅನಾಹುತ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮೇಯರ್ ಹಾಗೂ ಅಧಿಕಾರಿಗಳ ಜೊತೆ ಸಭೆ ನಡೆಸಿ ಸೂಚನೆ ನೀಡಲಾಗುವುದು ಎಂದು ತಿಳಿಸಿದರು.

**ಬಿಪಿಎಲ್ ಕುಟುಂಬಗಳಿಗೆ ಅಕ್ಕಿ, ಬೇಳೆ ವಿತರಣೆ:** ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿ ರಾಜ್ಯದ ಬಿಪಿಎಲ್ ಪಡಿತರದಾರರಿಗೆ ಉಚಿತ ಅಕ್ಕಿ ಹಾಗೂ ತೊಗರಿ ಬೇಳೆ ವಿತರಣೆಯಾಗಲಿದೆ.

ಏಪ್ರಿಲ್ ಹಾಗೂ ಮೇ ತಿಂಗಳ ಪಡಿತರ ವಿತರಣೆಯಾಗಲಿದ್ದು, ಬಿಪಿಎಲ್ ಕುಟುಂಬದ ಪ್ರತಿ ಸದಸ್ಯರಿಗೆ ತಿಂಗಳಿಗೆ ಐದು ಕೆ.ಜಿ.ಯಂತೆ ಹತ್ತು ಕೆ.ಜಿ. ಅಕ್ಕಿ, ಪ್ರತಿ ಕುಟುಂಬಕ್ಕೆ ತಿಂಗಳಿಗೆ ಒಂದು ಕೆ.ಜಿ. ತೊಗರಿ ಬೇಳೆಯಂತೆ ಎರಡು ಕೆ.ಜಿ. ಬೇಳೆ ವಿತರಿಸಲಾಗುವುದು. 19 ಜಿಲ್ಲೆಗಳಲ್ಲಿ ಮೇ 1 ಹಾಗೂ ಉಳಿದ ಜಿಲ್ಲೆಗಳಲ್ಲಿ ಮೇ 3 ರಿಂದ ವಿತರಣೆಯಾಗಲಿದೆ ಎಂದು ಆಹಾರ ಸಚಿವ ಗೋಪಾಲಯ್ಯ ತಿಳಿಸಿದ್ದಾರೆ.

ಕೇಂದ್ರದಿಂದ ಇದಕ್ಕಾಗಿ 4,31,664 ಮೆಟ್ರಿಕ್ ಟನ್ ಅಕ್ಕಿ, 12,273 ಮೆಟ್ರಿಕ್ ಟನ್ ತೊಗರಿ ಬೇಳೆ ಹಂಚಿಕೆಯಾಗಿದ್ದು, ಬಹುತೇಕ ದಾಸ್ತಾನು ಬಂದಿದೆ. ಉಳಿದದ್ದು ಒಂದೆರಡು ದಿನಗಳಲ್ಲಿ ಬರಲಿದೆ. ಈಗಾಗಲೇ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿ ಏಪ್ರಿಲ್ ಹಾಗೂ ಮೇ ತಿಂಗಳ ಪಡಿತರವನ್ನು ವಿತರಿಸಲಾಗಿದೆ. ಕೇಂದ್ರದಿಂದಲೂ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳುಗಳ ಉಚಿತ ಪಡಿತರ ಬರಲಿದೆ ಎಂದರು.

ಕೇಂದ್ರದ ಯೋಜನೆಯಡಿ ಏಪ್ರಿಲ್ ಮತ್ತು ಮೇ ತಿಂಗಳ ಪಡಿತರ ತಲಾ ಹತ್ತು ಕೆ.ಜಿ. ಅಕ್ಕಿ, ಕುಟುಂಬಕ್ಕೆ 1 ಕೆ.ಜಿ. ಬೇಳೆ ನೀಡಲಾಗುವುದು. ಜೂನ್ ತಿಂಗಳಲ್ಲಿ ರಾಜ್ಯದ ವತಿಯಿಂದ ಪ್ರತಿ ಸದಸ್ಯರಿಗೆ ಐದು ಕೆ.ಜಿ. ಅಕ್ಕಿ, ಕುಟುಂಬಕ್ಕೆ ಎರಡು ಕೆ.ಜಿ. ಗೋಧಿ, ಕೇಂದ್ರದ ಬಾಬ್ತು ತಲಾ ಐದು ಕೆ.ಜಿ. ಅಕ್ಕಿ ಕುಟುಂಬಕ್ಕೆ ಎರಡು ಕೆ.ಜಿ. ತೊಗರಿ ಬೇಳೆ ವಿತರಿಸಲಾಗುವುದು ಎಂದು ವಿವರಿಸಿದರು.

ಆಧಾರ:ಉದಯವಾಣಿ, ದಿನಾಂಕ:01.05.2020

## 54. ಮಾಸ್ಕ್ ಧರಿಸದಿದ್ದರೆ ದಂಡ ಪ್ರಯೋಗ

ಮುಖಗವಸು ಕಡ್ಡಾಯಗೊಳಿಸಿದರೂ ಸರಿಯಾಗಿ ಪಾಲಿಸದ ಹಿನ್ನೆಲೆಯಲ್ಲಿ ಬಿಬಿಎಂಪಿ ಭಾರಿ 'ದಂಡ ಪ್ರಯೋಗ'ಕ್ಕೆ ನಿರ್ಧರಿಸಿದ್ದು, ಕನಿಷ್ಠ ಸಾವಿರದಿಂದ ಗರಿಷ್ಠ ರೂ. 2 ಸಾವಿರವರೆಗೆ ದಂಡ ಬೀಳಲಿದೆ.

ಹೆಚ್ಚುತ್ತಿರುವ ಸೋಂಕು ತಡೆಗೆ ಪಾಲಿಕೆ ಈ ಕ್ರಮಕ್ಕೆ ಮುಂದಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಮುಖಗವಸು (ಮಾಸ್ಕ್) ಧರಿಸದೆ ಓಡಾಡುವವರ ವಿರುದ್ಧ ರೂ. 1 ಸಾವಿರ ದಂಡ ವಿಧಿಸಲಾಗುವುದು. ಅದೇ ವ್ಯಕ್ತಿಯಿಂದ ಸತತ ಎರಡನೇ ಬಾರಿಯೂ ಈ ತಪ್ಪು ಪುನರಾವರ್ತನೆಯಾದರೆ, ರೂ.2 ಸಾವಿರ ವಿಧಿಸಲಾಗುವುದು. ಮೂರನೇ ಬಾರಿಗೆ ಶಿಕ್ಷೆ ವಿಧಿಸುವ ಬಗ್ಗೆಯೂ ಉದ್ದೇಶಿಸಲಾಗಿದೆ.

ಈ ನಿಯಮ ಜಾರಿಗೆ ಬರಲಿದ್ದು, ಈ ಸಂಬಂಧ ಅಧಿಕೃತ ಆದೇಶ ಹೊರಬೀಳುವ ಸಾಧ್ಯತೆ ಇದೆ. ನಿಯಮ ಪಾಲನೆ ಹಾಗೂ ತಪ್ಪಿತಸ್ಥರ ಮೇಲೆ ದಂಡ ಪ್ರಯೋಗಕ್ಕೆ ಈಗಾಗಲೇ ಪಾಲಿಕೆ ವ್ಯಾಪ್ತಿಯಲ್ಲಿರುವ ಮಾರ್ಷಲ್‌ಗಳನ್ನು ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

**ವಾಹನಗಳ ಬಿಡುಗಡೆಗೆ ಕೋರ್ಟ್ ಸೂಚನೆ:** ಲಾಕ್‌ಡೌನ್ ಆದೇಶ ಉಲ್ಲಂಘಿಸಿ ರಸ್ತೆಗಿಳಿದಿದ್ದ ಹಿನ್ನೆಲೆಯಲ್ಲಿ ಜಪ್ತಿ ಮಾಡಲಾಗಿದ್ದ ವಾಹನಗಳನ್ನು ದಂಡ ವಿಧಿಸಿ ಬಿಡುಗಡೆ ಮಾಡಲು ಬೆಂಗಳೂರು ಪೊಲೀಸರಿಗೆ ಹೈಕೋರ್ಟ್ ಅನುಮತಿ ನೀಡಿದೆ. ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾ. ಎ.ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಅನುಮತಿ ನೀಡಿ ಆದೇಶಿಸಿದೆ. ಲಾಕ್‌ಡೌನ್ ಅವಧಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ವಶಕ್ಕೆ ಪಡೆಯಲಾಗಿರುವ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ರೂ.500 ಹಾಗೂ ನಾಲ್ಕು ಚಕ್ರದ ವಾಹನಗಳಿಗೆ ರೂ.ಸಾವಿರ ದಂಡ ವಿಧಿಸಿ ಬಿಡುಗಡೆ ಮಾಡಬೇಕು. ಲಾಕ್‌ಡೌನ್ ಆದೇಶ ಉಲ್ಲಂಘಿಸದಂತೆ ಮಾಲೀಕರಿಗೆ ಷರತ್ತು ವಿಧಿಸಿ ಮುಚ್ಚಳಿಕೆ ಬರೆಸಿಕೊಳ್ಳಬೇಕೆಂದು ನ್ಯಾಯಪೀಠ ಪೊಲೀಸರಿಗೆ ನಿರ್ದೇಶನ ನೀಡಿದೆ.

**ಎಸ್‌ಎಆರ್‌ಐ, ಐಎಲ್‌ಐ ಸಮೀಕ್ಷೆ:** ತೀವ್ರ ಉಸಿರಾಟ ತೊಂದರೆ ಹಾಗೂ ಶೀತಜ್ವರ ಮಾದರಿ ಅನಾರೋಗ್ಯ ಸಮಸ್ಯೆಗಳನ್ನು ಹೊಂದಿರುವವರಲ್ಲಿ ಕೊರೋನಾ ಸೋಂಕು ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಮೇ 4 ಅಥವಾ ಮೇ 5 ರಿಂದ ಮನೆ ಮನೆಗೆ ತೆರಳಿ ಭೇಟಿ ನೀಡಿ, ಈ ಮಾದರಿಯ ಸಮಸ್ಯೆ ಹೊಂದಿರುವವರ ಬಗ್ಗೆ ಸಮೀಕ್ಷೆ ನಡೆಸಲಾಗುವುದು ಎಂದು ಬಿಬಿಎಂಪಿಯ ವಿಶೇಷ ಆಯುಕ್ತ ಬಸವರಾಜ್ ತಿಳಿಸಿದ್ದಾರೆ.

ಮೇ 2 ರಿಂದ ಬಿಬಿಎಂಪಿಯ 63 ಉಪ ವಿಭಾಗದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಶಾಲೆ ಹಾಗೂ ಬಿಬಿಎಂಪಿ ಶಿಕ್ಷಕರು ಸೇರಿದಂತೆ ಒಟ್ಟು 17,684 ಮಂದಿಗೆ ತರಬೇತಿ ನೀಡಲಾಗುವುದು. ಬಳಿಕ ತಂಡ ರಚಿಸಿ 4 ಹಂತದಲ್ಲಿ ತರಬೇತಿ ನೀಡಲು ಉದ್ದೇಶಿಸಲಾಗಿದೆ ಎಂದು ಆಯುಕ್ತರು ತಿಳಿಸಿರುತ್ತಾರೆ.

ಆಧಾರ:ಉದಯವಾಣಿ, ದಿನಾಂಕ:01.05.2020

## 55. ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಿದ್ಧತೆ

ಕೊರೊನಾ ಲಾಕ್‌ಡೌನ್‌ನಿಂದ ಮುಂದೂಡಿಕೆಯಾಗಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳನ್ನು ನಡೆಸಲು ಸಿದ್ಧತೆ ಶುರು ಮಾಡುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಸಚಿವ ಎಸ್.ಸುರೇಶ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ರಾಜ್ಯದ ಎಲ್ಲಾ ಜಿಲ್ಲೆಗಳ ಶೈಕ್ಷಣಿಕ ಉಪನಿರ್ದೇಶಕರೊಂದಿಗೆ ವಿಡಿಯೋ ಸಂವಾದವನ್ನು ಸಚಿವರು ನಡೆಸಿ ಈ ಸೂಚನೆ ನೀಡಿದ್ದಾರೆ. ಎಲ್ಲ ಜಿಲ್ಲೆಗಳಿಂದ ಬಂದ ಒಟ್ಟಾಭಿಪ್ರಾಯದಂತೆ ಮಕ್ಕಳು ತಮ್ಮ ಪರೀಕ್ಷಾ ದಿನಾಂಕ ತಿಳಿಯಲು ಉತ್ಸುಕರಾಗಿದ್ದಾರೆ. ಜೊತೆಗೆ ತಮ್ಮ ಪರಿಶ್ರಮದ ಆಧಾರದಲ್ಲಿ ಪರೀಕ್ಷಾ ಫಲಿತಾಂಶವನ್ನು ಪಡೆಯಬೇಕೆಂದು ಬಯಸುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಕೊರೊನಾ ನಂತರದ ಸಾಮಾಜಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಅವಶ್ಯಕವಿರುವ ಎಲ್ಲ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಪರೀಕ್ಷೆಗಳನ್ನು ನಿರ್ವಹಿಸುವ ಬಗ್ಗೆ ಕೂಡಲೇ ಗಮನ ಹರಿಸಬೇಕೆಂದು ಸಚಿವರು ಸೂಚಿಸಿರುತ್ತಾರೆ.

ರಾಜ್ಯದ ಜಿಲ್ಲೆಗಳನ್ನು ಕೆಂಪು, ಕಿತ್ತಳೆ, ಹಸಿರು ಮತ್ತು ಕಂಟೈನ್‌ಮೆಂಟ್ ಪ್ರದೇಶ ಎಂದು ಗುರುತಿಸಲಾಗಿದ್ದು, ಆಯಾ ಜಿಲ್ಲೆಗಳಲ್ಲಿ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಕೈಗೊಳ್ಳಬೇಕಿರುವ ಪರೀಕ್ಷಾ ಸಿದ್ಧತೆ ಕುರಿತು ಅಭಿಪ್ರಾಯ ಪಡೆದರು, ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕಿರುವುದರಿಂದ ವಿದ್ಯಾರ್ಥಿಗಳು ತರಗತಿಯಲ್ಲಿ ಕುಳಿತುಕೊಳ್ಳುವಲ್ಲಿ ಅಂತರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಹಾಗೂ ಪ್ರತಿ ಪರೀಕ್ಷಾ ಕೊಠಡಿಯಲ್ಲಿ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ವ್ಯವಸ್ಥೆಯನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಆದೇಶಿಸಿದರು.

ಯಾವುದೇ ವಿದ್ಯಾರ್ಥಿಯೂ ನೆಲದ ಮೇಲಾಗಲೀ, ಬಯಲಿನಲ್ಲಾಗಲೀ ಪರೀಕ್ಷೆ ಬರೆಯಬಾರದು. ಅಗತ್ಯವಾದ ಡೆಸ್ಕ್, ಬೆಂಚ್‌ಗಳನ್ನು ಆಸುಪಾಸಿನ ಶಾಲೆಗಳಿಂದ ಸಂಗ್ರಹಿಸಿಟ್ಟುಕೊಳ್ಳಬೇಕು. ಕಂಟೈನ್ಮೆಂಟ್

ವಲಯಗಳಲ್ಲಿರುವ ಪರೀಕ್ಷಾ ಕೇಂದ್ರಗಳನ್ನು ಸುರಕ್ಷಿತ ವಲಯಗಳಿಗೆ ಸ್ಥಳಾಂತರಿಸುವುದು. ಇದಕ್ಕಾಗಿ ಪರೀಕ್ಷಾ ಉಪಕೇಂದ್ರಗಳನ್ನು ಸ್ಥಾಪಿಸುವುದು. ಕೊಠಡಿಯಲ್ಲಿ 24 ಮಕ್ಕಳ ಬದಲಿಗೆ ಕಡಿಮೆ ಮಕ್ಕಳನ್ನು ಕೂಡಿಸುವುದು. ಪ್ರತಿ ಕೇಂದ್ರದಲ್ಲಿ ಕಡ್ಡಾಯವಾಗಿ ಸಿಸಿಟಿವಿ, ವೈದ್ಯಕೀಯ ಸೌಲಭ್ಯದ ವ್ಯವಸ್ಥೆ ಮಾಡುವುದು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಕ್ಕೆ ಬಂದ ಸಂದರ್ಭದಲ್ಲಿ ಮಾಸ್ಕ್ ಸ್ಯಾನಿಟೈಜರ್‌ಗಳನ್ನು ಒದಗಿಸಬೇಕು. ಅವರನ್ನು ಥರ್ಮಲ್ ತಪಾಸಣೆಗೆ ಒಳಪಡಿಸಿ ಪರೀಕ್ಷೆಗೆ ಹಾಜರುಪಡಿಸಲು ಕ್ರಮ ಕೈಗೊಳ್ಳಬೇಕು. ಜ್ವರದ ಲಕ್ಷಣಗಳಿರುವ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿಯನ್ನು ವ್ಯವಸ್ಥೆ ಮಾಡುವಂತೆ ಸೂಚನೆ ನೀಡಿರುತ್ತಾರೆ. ಪರೀಕ್ಷಾ ಕೇಂದ್ರಗಳನ್ನು ಹಾಗೂ ಕೊಠಡಿಗಳನ್ನು ಹೆಚ್ಚಿಸಲು ಸ್ಥಳ ಪರಿಶೀಲನೆ ನಡೆಸಿ ಇಲಾಖಾ ಮುಖ್ಯಸ್ಥರಿಗೆ ಕೂಡಲೇ ವರದಿ ಸಲ್ಲಿಸಬೇಕೆಂದು ಸಚಿವ ಸುರೇಶ್ ಕುಮಾರ್ ಅಧಿಕಾರಿಗಳಿಗೆ ಸೂಚಿಸಿದರು.

ಆಧಾರ:ಉದಯವಾಣಿ, ದಿನಾಂಕ:05.05.2020

## 56. ಪದವಿ ಕಾಲೇಜುಗಳಿಗೆ ಕಾರ್ಯಸೂಚಿ ಬಿಡುಗಡೆ

ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಆನ್‌ಲೈನ್ ಬೋಧನೆ ಮೂಲಕ ಪಠ್ಯಕ್ರಮವನ್ನು ಪೂರ್ಣಗೊಳಿಸಿ, ಪುನರಾವರ್ತನೆ ತರಗತಿ ನಡೆಸಬೇಕು ಎಂದು ರಾಜ್ಯ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಿಸಿದೆ.

ಪದವಿ ಮತ್ತು ಸ್ನಾತಕೋತ್ತರ ತರಗತಿಗಳಿಗೆ ಬಾಕಿ ಉಳಿದಿರುವ ಪಠ್ಯಕ್ರಮಗಳನ್ನು ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ವೇದಿಕೆ ಮೂಲಕ ಬೋಧಿಸಲು ಸೂಚಿಸಲಾಗಿತ್ತು. ಅದರಂತೆ ಆನ್‌ಲೈನ್ ಬೋಧನೆಯ ಪ್ರಗತಿ ಹಾಗೂ ಬಾಕಿ ಇರುವ ಪಠ್ಯಕ್ರಮವನ್ನು ಪ್ರಾಂಶುಪಾಲರು ಪರಿಶೀಲಿಸಿ, ಕಾಲೇಜಿನ ಕಂಪ್ಯೂಟರ್ ಲ್ಯಾಬ್‌ನ್ನು ಬಳಸಿಕೊಂಡು ಆನ್‌ಲೈನ್ ಪ್ಲಾಟ್‌ಫಾರ್ಮ್ ಮೂಲಕ ಬೋಧನೆ ಮಾಡಿಸಿ ಪಠ್ಯಕ್ರಮವನ್ನು ಪೂರ್ಣಗೊಳಿಸಬೇಕು. ಜೊತೆಗೆ ಪಠ್ಯಕ್ರಮಗಳ ಪುನರಾವರ್ತನೆ ತರಗತಿ ಕೈಗೊಳ್ಳಲು ಕ್ರಮ ವಹಿಸುವಂತೆ ಸುತ್ತೋಲೆಯಲ್ಲಿ ತಿಳಿಸಿದೆ.

**ಪ್ರಾಯೋಗಿಕ ತರಗತಿ:** ಪ್ರಾಯೋಗಿಕ ವಿಷಯಗಳಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸಿರುವ ಪ್ರಯೋಗಗಳನ್ನು ಉಪನ್ಯಾಸಕರು ಪ್ರಾಯೋಗಿಕವಾಗಿ ನಡೆಸಿ, ಅದನ್ನು ವಿಡಿಯೋ ರೆಕಾರ್ಡ್ ಮಾಡಿ ಇಲಾಖೆಯ ಯೂಟ್ಯೂಬ್ ಚಾನೆಲ್ ಜ್ಞಾನನಿಧಿಗೆ ಕಳುಹಿಸಿ, ಕಾಲೇಜಿನ ವೆಬ್‌ಸೈಟ್‌ಗೆ ಅಪ್‌ಲೋಡ್ ಮೂಲಕ ವಿದ್ಯಾರ್ಥಿಗಳಿಗೆ ಕಳುಹಿಸಬೇಕು.

ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ನಡೆಸಲು ಸಿದ್ಧತೆ ಮಾಡಿಕೊಂಡು, ಆಂತರಿಕ ಮೌಲ್ಯಮಾಪನ ಅಂಕಗಳನ್ನು ಸಿದ್ಧಪಡಿಸಬೇಕು. 2020–21ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಯನ್ನು ಕೈಗೊಳ್ಳಲು ಅಗತ್ಯವಾದ ಪೂರ್ವ ಸಿದ್ಧತಾ ಕ್ರಮಗಳನ್ನು ಕೈಗೊಳ್ಳಲು ನಿರ್ದೇಶಿಸಿದೆ.

ನ್ಯಾಕ್ ಸಂಸ್ಥೆಯು 2019–20ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಸಂಬಂಧಪಟ್ಟಂತೆ 2019 ಏಪ್ರಿಲ್‌ನಿಂದ ಈ ಸಾಲಿನ ಮೇ ವರೆಗೆ ನಡೆದಿರುವ ಚಟುವಟಿಕೆ ಪರಿಗಣಿಸುವುದರಿಂದ ಕಾಲೇಜಿನಲ್ಲಿ ಬಾಕಿ ಇರುವ ನ್ಯಾಕ್ ಸಂಬಂಧಿತ ಕೆಲಸಗಳನ್ನು ಮೇ ಒಳಗೆ ಪೂರ್ಣಗೊಳಿಸಬೇಕು. ನ್ಯಾಕ್ ಕೈಪಿಡಿ ಪರಾಮರ್ಶಿಸಿ ಮಾನದಂಡವಾರು ಪ್ರಶ್ನೆಗಳಿಗೆ ಉತ್ತರಿಸಲು ಅಗತ್ಯವಿರುವ ದಾಖಲೆ ಸಿದ್ಧಪಡಿಸಿಕೊಳ್ಳಬೇಕು ಎಂದು ಸೂಚಿಸಿದೆ. ಐಕ್ಯೂಎಗೆ ಅಗತ್ಯವಿರುವ ಮಾಹಿತಿ, ವಿದ್ಯಾರ್ಥಿಗಳ ಶೈಕ್ಷಣಿಕ ಮಾಹಿತಿ (ಪ್ರವೇಶಾತಿ, ಪರೀಕ್ಷೆ ಫಲಿತಾಂಶ ಪ್ರಗತಿ ವರದಿ) ಸಂಗ್ರಹಿಸಬೇಕು ಎಂದು ತಿಳಿಸಿದೆ.

**ಕಾಲೇಜು ವೆಬ್‌ಸೈಟ್:** ಕಾಲೇಜಿನ ಐ.ಟಿ ಕೋ–ಆರ್ಡಿನೇಟರ್‌ಗಳು ಎಲ್ಲ ವಿಭಾಗದ ಮುಖ್ಯಸ್ಥರಿಂದ ಬಾಕಿ ಇರುವ ಪಠ್ಯಕ್ರಮಕ್ಕೆ ಸಂಬಂಧಿಸಿದ ಅಧ್ಯಯನ ಸಾಮಗ್ರಿ ಸಂಗ್ರಹಿಸಿ ಕಾಲೇಜಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕರು ವಿದ್ಯಾರ್ಥಿಗಳಿಗೆ ಫಿಸಿಕಲ್ ಫಿಟ್ನೆಸ್, ಯೋಗ ಮತ್ತು ದೈಹಿಕ ಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ ವಿಡಿಯೋ ಅಥವಾ ಆನ್‌ಲೈನ್ ಮೂಲಕ ತರಬೇತಿ ನೀಡಬೇಕು. ಇಲಾಖೆಯ ಇಎಂಐಎಸ್‌ನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ, ಪರೀಕ್ಷಾ ಫಲಿತಾಂಶ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಮಾಹಿತಿ, ಕಾರ್ಯಭಾರ ಮಾಹಿತಿ ಮತ್ತು ಇನ್ನಿತರೆ ಎಲ್ಲ ಮಾಹಿತಿ ಅಪ್‌ಡೇಟ್ ಮಾಡಬೇಕು ಎಂದು ತಿಳಿಸಿದೆ.

ಆಧಾರ: ಉದಯವಾಣಿ, ದಿನಾಂಕ:05.05.2020

## 57. ಶ್ರಮಿಕರಿಗೆ ಬಿಎಸ್‌ವೈ ಟಾನಿಕ್

ಕೊರೊನಾ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿರುವ ವಿವಿಧ ಶ್ರಮಿಕ ವರ್ಗಕ್ಕೆ ರೂ.1610 ಕೋಟಿ ಮೊತ್ತದ ವಿಶೇಷ ಪ್ಯಾಕೇಜ್ ಘೋಷಿಸಿರುವ ಸರ್ಕಾರ ವಾರದೊಳಗೆ ಆರ್ಥಿಕ ನೆರವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ಮಹತ್ವದ ತೀರ್ಮಾನ ಕೈಗೊಂಡಿದೆ. ಜೊತೆಗೆ ಪ್ರತಿ ಕುಟುಂಬಕ್ಕೂ ಅನ್ವಯವಾಗುವಂತೆ ವಿದ್ಯುತ್ ಬಿಲ್ ಪಾವತಿಯಲ್ಲೂ ವಿನಾಯಿತಿ ಪ್ರಕಟಿಸಿದೆ. ಚಾಲಕರು, ರೈತರು, ಮಡಿವಾಳ ಮತ್ತು ಸವಿತಾ ಸಮಾಜ, ಕಟ್ಟಡ ಕಾರ್ಮಿಕ, ನೇಕಾರರಿಗೆ ಆಪತ್ಕಾಲದಲ್ಲಿ ನೆರವಾಗಲು ಈ ತೀರ್ಮಾನ ಕೈಗೊಂಡಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೈಗಾರಿಕೆಗಳಿಗೂ ಸ್ವಲ್ಪ ರಿಯಾಯಿತಿ ನೀಡಿದ್ದಾರೆ.

ಕಾರ್ಮಿಕ ಇಲಾಖೆಯಲ್ಲಿ ಈಗಾಗಲೇ ಚಾಲಕರಿಗೆ ಸಂಬಂಧಿಸಿದಂತೆ ನೋಂದಾಯಿಸಿಕೊಂಡಿರುವವರ ಅಂಕಿಅಂಶಗಳಿವೆ. ಆದರೆ ಸವಿತಾ ಸಮಾಜ ಮತ್ತು ಮಡಿವಾಳ ಸಮಾಜಕ್ಕೆ ಸಂಬಂಧಿಸಿದಂತೆ ನಿಖರವಾದ ಅಂಕಿಅಂಶಗಳೇ ಇಲ್ಲ. ಇನ್ನಷ್ಟು ಮಾಹಿತಿಯನ್ನು ಸಂಗ್ರಹಿಸಬೇಕಿದೆ. ಸರ್ಕಾರ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಯೋಜನೆ ಜಾರಿಗೆ ತರಲು ಉದ್ದೇಶಿಸಿದ್ದು ಮಾರ್ಗಸೂಚಿ ಪ್ರಕಟವಾಗಲಿದೆ.

ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗೆ ಜವಾಬ್ದಾರಿ ನೀಡಲಾಗುತ್ತದೆ. ಅವರು ತಾಲ್ಲೂಕು ಹಿಂದುಳಿದ ವರ್ಗಗಳ ಅಧಿಕಾರಿ, ತಹಶೀಲ್ದಾರ್ ಮೂಲಕ ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರ ಸಂಗ್ರಹಿಸಬೇಕಾಗುತ್ತದೆ. ಗ್ರಾಮೀಣ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗೆ, ನಗರ ಮಟ್ಟದಲ್ಲಿ ಸ್ಥಳೀಯ ಸಂಸ್ಥೆಗಳ ಆರೋಗ್ಯಾಧಿಕಾರಿಗೆ ಈ ಜವಾಬ್ದಾರಿ ನೀಡಲಾಗುತ್ತದೆ.

ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ವಿವಿಧ ವೃತ್ತಿ ಆಧಾರಿತ ಸಮುದಾಯಗಳ ಸಭೆ ನಡೆಸಿ, ಯಾವ ವರ್ಗಕ್ಕೆ ಏನೇನು ಸೌಲಭ್ಯ ನೀಡಬೇಕೆಂಬ ಬಗ್ಗೆ ವಿವರವಾದ ವರದಿಯನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿದ್ದರು.

ಲಾಕ್‌ಡೌನ್‌ನಿಂದಾಗಿ ಎಲ್ಲ ದೇವಾಲಯಗಳು ಮುಚ್ಚಿವೆ. ಹಬ್ಬ, ಮದುವೆ, ಸಭೆ ಸಮಾರಂಭ ನಡೆಯದಿರುವುದರಿಂದ ಬೇಡಿಕೆ ಇಲ್ಲದೆ ಬೆಳೆದಿರುವ ಹೂವುಗಳನ್ನು ರೈತರು ಹೊಲದಲ್ಲೇ ನಾಶ ಪಡಿಸಬೇಕಾದ ಪರಿಸ್ಥಿತಿ ಉದ್ಭವಿಸಿದೆ. ಒಟ್ಟಾರೆ 11,687 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆದಿರುವ ಹೂವುಗಳು ಮಾರಾಟವಾಗದೇ ರೈತರಿಗೆ ನಷ್ಟವಾಗಿದೆ. ಇದರಿಂದಾಗಿ ಎಲ್ಲ ರೀತಿಯ ಹೂವು ಬೆಳೆದಿರುವ ರೈತರಿಗೆ ನೆರವಾಗಲು ಹೆಕ್ಟೇರಿಗೆ ಗರಿಷ್ಠ ರೂ.25 ಸಾವಿರದಂತೆ ಪರಿಹಾರ ನೀಡಲಾಗುತ್ತದೆ.

ಈ ವರ್ಷ ರಾಜ್ಯದಲ್ಲಿ ತರಕಾರಿ, ಹಣ್ಣುಗಳ ಇಳುವರಿ ಉತ್ತಮವಾಗಿದೆ. ಆದರೆ ಲಾಕ್‌ಡೌನ್‌ನಿಂದಾಗಿ ರೈತರು ತಮ್ಮ ಬೆಳೆಗಳಿಗೆ ಸೂಕ್ತ ದರ ಪಡೆಯಲು ಸಾಧ್ಯವಾಗಿಲ್ಲ. ನಷ್ಟಕ್ಕೆ ಒಳಗಾಗಿರುವ ತರಕಾರಿ ಹಾಗೂ ಹಣ್ಣು ಬೆಳೆಗಾರರಿಗೆ ಸೂಕ್ತ ಪರಿಹಾರ ನೀಡುವ ಬಗ್ಗೆ ಪ್ಯಾಕೇಜ್ ಘೋಷಣೆ ಮಾಡಲಾಗುವುದು. ಈ ಬಗ್ಗೆ ಅಧ್ಯಯನ ನಡೆಸಿ ಸರ್ಕಾರ ಶೀಘ್ರವೇ ನಿರ್ಧಾರ ಪ್ರಕಟಿಸಲಿದೆ.

ಪಟ್ಟಣ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಮಡಿವಾಳ ಹಾಗೂ ಕ್ಷೌರಿಕ ವೃತ್ತಿಯಲ್ಲಿ ತೊಡಗಿರುವವರು ಒಂದೂವರೆ ತಿಂಗಳಿಂದ ಕಸುಬನ್ನು ನಡೆಸಲಾಗದೇ ದೈನಂದಿನ ಆದಾಯ ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ ಅಂದಾಜು 60,000 ಜನ ಮಡಿವಾಳರ ವೃತ್ತಿಯಲ್ಲಿ ಮತ್ತು 2,30,000 ಜನ ಕ್ಷೌರಿಕ ವೃತ್ತಿಯಲ್ಲಿದ್ದಾರೆ. ಇವರಿಗೆ ನೆರವಾಗಲು ಒಂದೇ ಬಾರಿಗೆ ತಲಾ ರೂ.5 ಸಾವಿರ ನೀಡಲಾಗುತ್ತದೆ.

ಎಲ್ಲ ಪ್ರವರ್ಗದ ಗ್ರಾಹಕರಿಗೆ ವಿದ್ಯುಚ್ಛಕ್ತಿ ಮೊತ್ತ ಪಾವತಿಸುವಾಗ ಪರಿಹಾರ ಮಾರ್ಗವೊಂದನ್ನು ಸರ್ಕಾರ ನೀಡಿದೆ. ನಿಗದಿತ ಸಮಯದೊಳಗೆ ವಿದ್ಯುತ್ ಬಿಲ್ಲಿನ ಮೊತ್ತ ಪಾವತಿಸುವ ಗ್ರಾಹಕರಿಗೆ ಶೇ.1 ರಿಯಾಯಿತಿ, ಮುಂಗಡ ಪಾವತಿಗೆ ಶೇ.6 ಪ್ರೋತ್ಸಾಹ ನೀಡಲಾಗುತ್ತದೆ. ವಿಳಂಬ ಪಾವತಿಗಾಗಿ ವಿಧಿಸುವ ಬಡ್ಡಿ ಕಡಿತಗೊಳಿಸಲಾಗುವುದು. ಕಂದಾಯ ಬಾಕಿ ಮೊತ್ತವನ್ನು ಪಾವತಿಸದಿರುವ ಗ್ರಾಹಕರಿಗೆ 2020ರ ಜೂನ್ 30 ರವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲ್ಲ.

ಈಗಾಗಲೇ ಸಂಕಷ್ಟ ಎದುರಿಸುತ್ತಿರುವ ನೇಕಾರರಿಗೆ ಈ ಲಾಕ್‌ಡೌನ್ ಮತ್ತಷ್ಟು ನಷ್ಟ ತಂದಿದೆ. ಸರ್ಕಾರ ಈಗಾಗಲೇ ನೇಕಾರರಿಗೆ ನೆರವಾಗಲು 109 ಕೋಟಿ ರೂ. ಸಾಲ ಮನ್ನಾ ಯೋಜನೆ ಘೋಷಿಸಿದೆ. ಮುಂದೆ ಹೊಸ ಸಾಲ ದೊರಕಿಸಿಕೊಡಲಾಗುತ್ತದೆ. ಜೊತೆಗೆ 2019ರ ಜನವರಿ 1ರಿಂದ ಮಾರ್ಚ್ 31ರ ಅವಧಿಯೊಳಗೆ ರೂ.1 ಲಕ್ಷ ಒಳಗಿನ ಸಾಲ ಮರುಪಾವತಿಸಿರುವ ನೇಕಾರರಿಗೆ ಅವರು ಪಾವತಿಸಿರುವ ಮೊತ್ತವನ್ನು ಮರುಪಾವತಿಸಲಾಗುತ್ತದೆ. ಹೊಸದಾಗಿ ನೇಕಾರರ ಸಮ್ಮಾನ್ ಯೋಜನೆ ಘೋಷಿಸಿದ್ದು, ಇದರ ಪ್ರಕಾರ ಅಂದಾಜು 54,000 ಕೈಮಗ್ಗ ನೇಕಾರರಿಗೆ ರೂ.2000ನಂತೆ ಬ್ಯಾಂಕ್ ಖಾತೆಗೆ ನೇರ ಜಮೆ ಮಾಡಲಾಗುತ್ತದೆ.

ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳು ನಷ್ಟ ಅನುಭವಿಸಿವೆ. ವಹಿವಾಟು ಚೇತರಿಕೆಯಾಗುವುದಕ್ಕೆ ಕೆಲವು ಸಮಯ ಬೇಕಾಗಿರುವುದರಿಂದ ನೆರವು ನೀಡುವುದು ಅನಿವಾರ್ಯ. ಹೀಗಾಗಿ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಉದ್ದಿಮೆಗಳ ವಿದ್ಯುತ್ ಬಿಲ್ಲಿನ ಫಿಕ್ಸೆಡ್ ಶುಲ್ಕವನ್ನು ಎರಡು ತಿಂಗಳ ಅವಧಿಗೆ ಪೂರ್ತಿ ಮನ್ನಾ ಮಾಡಲಾಗುತ್ತದೆ. ಬೃಹತ್ ಕೈಗಾರಿಕೆಗೆ ನಿಶ್ಚಿತ ಶುಲ್ಕ ಪಾವತಿಯನ್ನು 2 ತಿಂಗಳ ಅವಧಿಗೆ ಯಾವುದೇ ಬಡ್ಡಿ, ದಂಡ ಇಲ್ಲದೆ ಮುಂದೂಡಲಾಗುತ್ತದೆ.

ರಾಜ್ಯದಲ್ಲಿರುವ 15.80 ಲಕ್ಷ ನೋಂದಾಯಿತ ಕಟ್ಟಡ ಕಾರ್ಮಿಕರ ಪೈಕಿ ಈಗಾಗಲೇ 11.80 ಲಕ್ಷ ಕಟ್ಟಡ ಕಾರ್ಮಿಕರಿಗೆ ಸರ್ಕಾರದಿಂದ ತಲಾ ರೂ.2000ಗಳನ್ನು ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿದೆ. ಇನ್ನುಳಿದ 4 ಲಕ್ಷ ಕಟ್ಟಡ ಕಾರ್ಮಿಕರಿಗೆ ಅವರವರ ಬ್ಯಾಂಕ್ ಖಾತೆ ವಿವರಗಳು ದೊರೆತ ನಂತರ ರೂ.5,000 ವರ್ಗಾಯಿಸಲಾಗುತ್ತದೆ. ಈಗಾಗಲೇ ನೀಡಿರುವ ರೂ.2,000 ಜೊತೆಗೆ ಹೆಚ್ಚುವರಿಯಾಗಿ ರೂ.3 ಸಾವಿರ ನೀಡಲು ನಿರ್ಧರಿಸಲಾಗಿದೆ.

ಆಟೋ ರಿಕ್ಷಾ ಹಾಗೂ ಟ್ಯಾಕ್ಸಿ ಚಾಲಕರು ಲಾಕ್‌ಡೌನ್‌ನಿಂದಾಗಿ ದೈನಂದಿನ ಉದ್ಯೋಗ ನಡೆಸಲಾಗದೆ ಆದಾಯ ಕಳೆದುಕೊಂಡಿದ್ದಾರೆ. ರಾಜ್ಯದಲ್ಲಿ ಅಂದಾಜು 7.75 ಲಕ್ಷ ಚಾಲಕರಿಗೆ ಒಂದೇ ಬಾರಿ ಪರಿಹಾರವಾಗಿ ತಲಾ ರೂ. 5,000 ನೀಡಲಾಗುತ್ತದೆ. ಸರ್ಕಾರದಲ್ಲಿ ನೋಂದಾಯಿಸಿಕೊಂಡವರಿಗೆ ಮಾತ್ರ ಈ ಸೌಲಭ್ಯ ಸಿಗಲಿದೆ.

ಆಧಾರ:ವಿಜಯವಾಣಿ, ದಿನಾಂಕ: 07.05.2020

## 58. ತರಕಾರಿ ಹಣ್ಣು ಬೆಳೆಗಾರರಿಗೆ ಪ್ಯಾಕೇಜ್

ಸದ್ಯದಲ್ಲಿಯೇ ತರಕಾರಿ ಮತ್ತು ಹಣ್ಣು ಬೆಳೆಗಾರರಿಗೂ ಪ್ಯಾಕೇಜ್ ಪ್ರಕಟವಾಗಲಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದ್ದಾರೆ. ಒಂದು ತಿಂಗಳಿನಿಂದ ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೆ ಭೇಟಿ ಕೊಟ್ಟು ರೈತರ ಸಮಸ್ಯೆ ಆಲಿಸಿ ರೈತರ ನೆರವಿಗೆ ಬರುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದು, ಮುಖ್ಯಮಂತ್ರಿಗಳು ಕೊರೊನಾ ಲಾಕ್‌ಡೌನ್ ವಿಶೇಷ ಪ್ಯಾಕೇಜ್‌ನಲ್ಲಿ ಹೂ ಬೆಳೆಗಾರರಿಗೆ ಪ್ಯಾಕೇಜ್ ನೀಡಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ. ಕಳಪೆ ಬಿತ್ತನೆ ಬೀಜದ ಮಾಫಿಯಾವನ್ನು ಬಯಲು ಮಾಡಲಾಗಿದ್ದು, ಆಂಧ್ರದ ಮೂಲವನ್ನು ಪತ್ತೆ ಮಾಡಲಾಗಿದೆ. ಅಲ್ಲಿ ತಿರಸ್ಕೃತಗೊಂಡಿದ್ದ ಬೀಜಗಳನ್ನು ರಾಜ್ಯದಲ್ಲಿ ಮಾರಾಟ ಮಾಡಲಾಗುತ್ತಿತ್ತು. ಮುಸುಕಿನ ಜೋಳ, ಸೂರ್ಯಕಾಂತಿ, ಹತ್ತಿ ಸೇರಿದಂತೆ ಅಂದಾಜು ಹತ್ತು ಸಾವಿರಕ್ಕೂ ಹೆಚ್ಚು ಕ್ವಿಂಟಾಲ್ ಕಳಪೆ ಬೀಜ ವಶಕ್ಕೆ ಪಡೆದು ಎಂಟು ಕ್ರಿಮಿನಲ್ ಕೇಸ್ ದಾಖಲಾಗಿದೆ ಎಂದರು.

ರಾಜ್ಯದ ವಿವಿಧ ಭಾಗದ ಕೃಷಿ ವಿಶ್ವವಿದ್ಯಾಲಯದಿಂದ ಮುಖ್ಯಮಂತ್ರಿ ಪರಿಹಾರ ನಿಧಿಗೆ ಒಟ್ಟು ರೂ.1,25,69,215 ದೇಣಿಗೆಯಾಗಿ ನೀಡಲಾಯಿತು. ಕೃಷಿ ಸಚಿವ ಬಿ.ಸಿ.ಪಾಟೀಲ್ ಅವರು ಎಲ್ಲ ವಿಶ್ವವಿದ್ಯಾಲಯಗಳ ದೇಣಿಗೆಯ ಚೆಕ್ ಅನ್ನು ಮುಖ್ಯಮಂತ್ರಿಯವರಿಗೆ ಹಸ್ತಾಂತರಿಸಿದರು. ಕೋವಿಡ್–19 ಪರಿಹಾರಕ್ಕಾಗಿ ಮುಖ್ಯಮಂತ್ರಿ ಪರಿಹಾರ ನಿಧಿಗೆ ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರೂ.58,89,355, ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರೂ.33,02,738, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ರೂ.22,90,651 ಮತ್ತು ಶಿವಮೊಗ್ಗ ಕೃಷಿ ಹಾಗೂ ತೋಟಗಾರಿಕೆ ವಿವಿಯಿಂದ ರೂ.10,86,491 ಗಳ ದೇಣಿಗೆಯನ್ನು ನೀಡಿದೆ.

ಆಧಾರ:ಉದಯವಾಣಿ, ದಿನಾಂಕ:08.05.2020

## 59. ಪ್ಯಾಕೇಜ್ ಪಡೆಯಲು ಶೀಘ್ರ ಮಾರ್ಗಸೂಚಿ, ಸೇವಾ ಸಿಂಧು ಮೂಲಕ ಅರ್ಜಿಗೆ ಅವಕಾಶ: ನೋಡಲ್ ಅಧಿಕಾರಿ ನೇಮಿಸಲು ನಿರ್ಧಾರ

ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಸಮುದಾಯಗಳಿಗೆ ರಾಜ್ಯ ಸರ್ಕಾರ ಘೋಷಣೆ ಮಾಡಿರುವ ರೂ.1610 ಕೋಟಿ ಪ್ಯಾಕೇಜ್‌ನ್ನು ವಿತರಿಸಲು ಶೀಘ್ರವೇ ಮಾರ್ಗಸೂಚಿ ರೂಪಿಸಲು ನಿರ್ಧರಿಸಿದೆ.

ಸರ್ಕಾರ ಎಲ್ಲರಿಗೂ ಏಕರೂಪದ ಮಾರ್ಗಸೂಚಿ ರಚಿಸಿ ಸಂಬಂಧಪಟ್ಟ ಇಲಾಖೆಗಳ ಮೂಲಕ ಪರಿಹಾರ ನೀಡಲು, ಇದಕ್ಕೆ ಈ ಸಂಬಂಧ ಮೇಲುಸ್ತುವಾರಿಗೆ ನೋಡಲ್ ಅಧಿಕಾರಿ ನೇಮಿಸಲು ತೀರ್ಮಾನಿಸಿದೆ ಎಂದು ತಿಳಿದು ಬಂದಿದೆ.

ಸರ್ಕಾರ ಪರಿಹಾರ ಘೋಷಿಸಿರುವ ಸಮುದಾಯಗಳು ಹಿಂದುಳಿದ ವರ್ಗದ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಕೃಷಿ ಹಾಗೂ ತೋಟಗಾರಿಕೆ, ಸಾರಿಗೆ, ಸಣ್ಣ ಕೈಗಾರಿಕೆ ಜವಳಿ ಹಾಗೂ ಕಾರ್ಮಿಕ ಇಲಾಖೆ ವ್ಯಾಪ್ತಿಗೆ ಒಳಪಡುತ್ತಾರೆ.

**ಸೇವಾ ಸಿಂಧು ಆ್ಯಪ್‌ನಲ್ಲಿ ಅರ್ಜಿ:** ಪರಿಹಾರ ಪಡೆಯುವ ಫಲಾನುಭವಿಗಳು ಸರ್ಕಾರದ ಸೇವಾ ಸಿಂಧು ಆ್ಯಪ್‌ನಲ್ಲಿ ಸರ್ಕಾರ ಸೂಚಿಸುವ ದಾಖಲೆಗಳನ್ನು ಸಲ್ಲಿಸಿ ಅರ್ಜಿ ಭರ್ತಿ ಮಾಡಬೇಕು. ಫಲಾನುಭವಿ ಹೆಸರು, ಆಧಾರ್ ಕಾರ್ಡ್, ಬ್ಯಾಂಕ್ ಅಕೌಂಟ್ ನಂಬರ್ ಎಲ್ಲರೂ ಕಡ್ಡಾಯವಾಗಿ ನೀಡಬೇಕಾಗುತ್ತದೆ. ಇದರ ಜೊತೆಗೆ ಕಟ್ಟಡ ಕಾರ್ಮಿಕರು ತಮ್ಮ ಕಾರ್ಮಿಕ ನೋಂದಣಿ ಕಾರ್ಡ್ ನಂಬರ್ ನೀಡಬೇಕು. ನೇಕಾರರು ತಮ್ಮ ಹೆಸರಿನಲ್ಲಿ ಕೈ ಮಗ್ಗ ಇರುವ ದಾಖಲೆ ಸಲ್ಲಿಸಬೇಕು. ಆಟೋ ಹಾಗೂ ಟ್ಯಾಕ್ಸಿ ಚಾಲಕರು, ತಮ್ಮ ಗಾಡಿ ನಂಬರ್, ಡ್ರೈವಿಂಗ್ ಪರವಾನಗಿ ಕಾರ್ಡ್‌ಬ್ಯಾಡ್ಜ್ ನಂಬರ್, ಮಾರ್ಚ್ ಒಂದರವರೆಗೆ ಚಾಲನೆಯಲ್ಲಿರುವ ಚಾಲನಾ ಪ್ರಮಾಣ ಪತ್ರವನ್ನು ಸೇವಾ ಸಿಂಧು ಆ್ಯಪ್ ಮೂಲಕ ಭರ್ತಿ ಮಾಡಬೇಕು. ಹೂ ಬೆಳೆಗಾರರು ತಮ್ಮ ಹೊಲದ ಪಹಣಿ ಪತ್ರ ಒಂದು ಹೆಕ್ಟೇರ್ ಬೆಳೆಗೆ ಮಾತ್ರ ಪರಿಹಾರ ನೀಡಲು ಸರ್ಕಾರ ನಿರ್ಧಾರ. ಹೂ ಬೆಳೆಗಾರರ ಬಗ್ಗೆ ಗ್ರಾಮ ಪಂಚಾಯಿತಿ ಮೂಲಕ ಮಾಹಿತಿ ಸಂಗ್ರಹಿಸಲು ಸರ್ಕಾರ ನಿರ್ಧರಿಸಿದೆ. ಕ್ಷೌರಿಕರು, ಮಡಿವಾಳ ಸಮುದಾಯದವರಿಗೆ ದೇವರಾಜ್ ಅರಸು ನಿಗಮದಿಂದ ಪರಿಹಾರ ನೀಡಲು ತೀರ್ಮಾನಿಸಲಾಗಿದೆ.

**ಚರ್ಮ ಕರ್ಮಿಗಳಿಗೆ ನೆರವು:** ಶ್ರಮಿಕ ವರ್ಗಕ್ಕೆ ಪ್ಯಾಕೇಜ್ ಪ್ರಕಟಿಸಿದ ನಂತರ ಇತರೆ ಸಮುದಾಯದಿಂದ ಬಂದ ಒತ್ತಡ ಹಿನ್ನೆಲೆಯಲ್ಲಿ ಚರ್ಮ ಕುಶಲ ಕರ್ಮಿಗಳಿಗೂ ಸಮಾಜ ಕಲ್ಯಾಣ ಇಲಾಖೆ ಪ್ಯಾಕೇಜ್ ಘೋಷಿಸಿದೆ. ಸಮಾಜ ಕಲ್ಯಾಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರು 11,722 ಚರ್ಮ ಕುಶಲ ಕರ್ಮಿಗಳ ಕುಟುಂಬಗಳಿಗೆ ರೂ.ಐದು ಸಾವಿರ ಪರಿಹಾರ ನೀಡುವುದಾಗಿ ಹೇಳಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:09.05.2020

## 60. ವಿಶೇಷ ರೈಲಿನಲ್ಲಿ ಕಾರ್ಮಿಕರು ಊರಿಗೆ

ಎರಡು ದಿನಗಳ ಮಟ್ಟಿಗೆ ಸ್ಥಗಿತಗೊಂಡಿದ್ದ ನಗರದಲ್ಲಿರುವ ಹೊರ ರಾಜ್ಯಗಳ ಕಾರ್ಮಿಕರ ವಲಸೆ ಮತ್ತೆ ಶುರುವಾಗಿದ್ದು, ಒಂದೇ ದಿನದಲ್ಲಿ ಬಿಹಾರಕ್ಕೆ 1,200 ಹಾಗೂ ಉತ್ತರ ಪ್ರದೇಶ 2,398 ಕಾರ್ಮಿಕರು ವಿಶೇಷ ರೈಲಿನ ಮೂಲಕ ಪ್ರಯಾಣ ಬೆಳೆಸಿದರು.

ಬೆಂಗಳೂರಿನಿಂದ ಉತ್ತರ ಪ್ರದೇಶ ಮತ್ತು ಬಿಹಾರಕ್ಕೆ ಕಾರ್ಮಿಕರನ್ನು ಕರೆದೊಯ್ಯಲು ವಿಶೇಷ ರೈಲು ಮಧ್ಯಾಹ್ನದ ವೇಳೆಗೆ ಮಾಲೂರು ಮತ್ತು ಚಿಕ್ಕ ಬಾಣಾವರ ತಲುಪಿತು. ಸಂಜೆ 4 ಗಂಟೆಗೆ ಚಿಕ್ಕ ಬಾಣಾವರದಿಂದ ಮೊದಲ ರೈಲು ಉತ್ತರ ಪ್ರದೇಶದ ಲಖನೌಗೆ 1,200 ಪ್ರಯಾಣಿಕರೊಂದಿಗೆ ಹೊರಟಿತು. ನಂತರ ಸಂಜೆ 4.25ಕ್ಕೆ ಮಾಲೂರಿನಿಂದ 1,200 ಕಾರ್ಮಿಕರನ್ನು ಹೊಂದಿರುವ ವಿಶೇಷ ರೈಲು ಬಿಹಾರದ ಧನಪುಕ್ಕೆ ತೆರಳಿತು.

ಲಾಕ್‌ಡೌನ್‌ನಿಂದಾಗಿ ಬೆಂಗಳೂರಿನಲ್ಲಿ ಸಿಲುಕಿದ್ದ ಹೊರರಾಜ್ಯಗಳ ವಲಸೆ ಕಾರ್ಮಿಕರನ್ನು ಅವರ ರಾಜ್ಯಗಳಿಗೆ ಕಳುಹಿಸಲು ವಿಶೇಷ ರೈಲು ಸೇವೆ ಕಲ್ಪಿಸಿದ್ದು, ಈವರೆಗೆ ಬೆಂಗಳೂರಿನಿಂದ 12 ಶ್ರಮಿಕ್ ವಿಶೇಷ ರೈಲುಗಳಲ್ಲಿ ಹೊರರಾಜ್ಯಗಳ 14,181 ವಲಸೆ ಕಾರ್ಮಿಕರನ್ನು ಅವರ ರಾಜ್ಯಗಳಿಗೆ ಕಳುಹಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

**ವಿಶೇಷ ತಪಾಸಣೆ:** ಮಾಲೂರು ಮತ್ತು ಚಿಕ್ಕ ಬಾಣಾವರದ ರೈಲು ನಿಲ್ದಾಣದಲ್ಲಿ ಪ್ರತಿಯೊಬ್ಬ ಕಾರ್ಮಿಕರ ಆರೋಗ್ಯ ಪರಿಶೀಲಿಸಿ ನಂತರ ರೈಲಿಗೆ ಹತ್ತಿಸಲಾಗಿದೆ. ಈ ರೈಲು ನಿಗದಿತ ಸ್ಥಳ ಹೊರತುಪಡಿಸಿ ಬೇರೆಲ್ಲೂ ನಿಲ್ಲುವುದಿಲ್ಲ. ಊಟ ಮತ್ತು ಉಪಹಾರಕ್ಕೆ ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಹೊರ ರಾಜ್ಯದ ಕಾರ್ಮಿಕರನ್ನು ಕರೆದೊಯ್ಯುವ ವಿಶೇಷ ರೈಲಿನ ಪ್ರತಿ ಬೋಗಿಗೂ ಸ್ಯಾನಿಟೈಜರ್ ಸಿಂಪಡಣೆ ಮಾಡಲಾಗಿದೆ. ಜೊತೆಗೆ ಸಾಮಾಜಿಕ ಅಂತರ ಪಾಲನೆ ಬಗ್ಗೆ ಎಚ್ಚರ ವಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಕಾರ್ಮಿಕರಿಗೆ ಕೆ.ಆರ್.ಮಾರುಕಟ್ಟೆಯಿಂದ ಚಿಕ್ಕ ಬಾಣಾವರ ಹಾಗೂ ಮಾಲೂರಿಗೆ ಬಿಎಂಟಿಸಿ ಬಸ್ ವ್ಯವಸ್ಥೆ ಮಾಡಲಾಗಿತ್ತು.

ಆಧಾರ:ಉದಯವಾಣಿ, ದಿನಾಂಕ:09.05.2020

## 61. ಚೀನಾದಿಂದ ಕಂಪನಿಗಳು ಹೊರಕ್ಕೆ: ಸಚಿವ ಶೆಟ್ಟರ್

ಕೊರೊನಾ ವಿಶ್ವವ್ಯಾಪಿಯಾಗಿ ಹರಡುತ್ತಿರುವ ಮಧ್ಯೆ ಅನೇಕ ಬಹುರಾಷ್ಟ್ರೀಯ ಕಂಪನಿಗಳು ಚೀನಾ ದೇಶದಿಂದ ಹೊರಬರಲು ಮುಂದಾಗಿವೆ. ಮುಂಬರುವ ಒಂದು ವರ್ಷದಲ್ಲಿ ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ಬೃಹತ್ ಕೈಗಾರಿಕೆಗಳ ಸ್ಥಾಪನೆಗೆ ಅಂತರರಾಷ್ಟ್ರೀಯ ಬಂಡವಾಳ ಹೂಡಿಕೆದಾರರು ಉತ್ಸುಕರಾಗಿದ್ದಾರೆ. ಅವರನ್ನು ಸೆಳೆಯಲು ರಾಜ್ಯ ಸರ್ಕಾರದಿಂದ ಪ್ರತ್ಯೇಕ ಕಾರ್ಯಪಡೆ ರಚಿಸಲು ಮುಖ್ಯಮಂತ್ರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಬೃಹತ್, ಮಧ್ಯಮ ಕೈಗಾರಿಕೆ ಸಚಿವ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಆಟೋಮೊಬೈಲ್ ಸೇರಿ ಹಲವು ಉದ್ಯಮಗಳಲ್ಲಿ ಕರ್ನಾಟಕವು ದೇಶದ ಮುಂಚೂಣಿ ರಾಜ್ಯಗಳಲ್ಲಿ ಒಂದಾಗಿದೆ. ಕೊರೊನಾ ಹರಡುವಿಕೆ ನಂತರ ಜಪಾನ್, ಅಮೆರಿಕಾ ಸೇರಿ ಅನೇಕ ರಾಷ್ಟ್ರಗಳು ಚೀನಾ ಬಗ್ಗೆ ಅಸಮಾಧಾನ ಹೊಂದಿವೆ. ಚೀನಾದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳನ್ನು ಅಲ್ಲಿಂದ ಬೇರೆ ದೇಶಗಳಿಗೆ ಸ್ಥಳಾಂತರಿಸಲು ಚಿಂತನೆ ನಡೆಸಿವೆ. ಜಪಾನ್ ದೇಶವು ಚೀನಾದಿಂದ ಹೊರಬರುವ ಕಂಪನಿಗಳಿಗೆ ಆರ್ಥಿಕ ನೆರವನ್ನು ಘೋಷಣೆ ಮಾಡಿದೆ ಎಂದರು.

ನೂರಾರು ಅಂತರರಾಷ್ಟ್ರೀಯ ಹೂಡಿಕೆದಾರರು ಭಾರತದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಬಂಡವಾಳ ಹೂಡಲು ತಾತ್ವಿಕವಾಗಿ ಉತ್ಸುಕರಾಗಿದ್ದಾರೆ. ಅವರನ್ನು ಸೆಳೆಯಲು ರಾಜ್ಯದ ಪ್ರಮುಖ ಉದ್ಯಮಿಗಳಾದ ನಂದನ್ ನಿಲೇಕಣಿ, ಕಿರಣ್ ಮುಜುಂದಾರ್ ಷಾ ಸೇರಿದಂತೆ ಹಾಗೂ ವಿವಿಧ ಕೈಗಾರಿಕೋದ್ಯಮಿಗಳ ಸಂಘಟನೆಗಳ ಪದಾಧಿಕಾರಿಗಳನ್ನೊಳಗೊಂಡ ವಿಶೇಷ ಕಾರ್ಯಪಡೆ ರಚಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಸ್ತಾವನೆ ತಯಾರಿಸಿ ಮುಖ್ಯಮಂತ್ರಿಗಳಿಗೆ ಸಲ್ಲಿಸಲಿದ್ದಾರೆ. ಶೀಘ್ರದಲ್ಲಿಯೇ ಈ ಕಾರ್ಯಪಡೆ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವ ಕಾರ್ಯಗಳು ಪ್ರಾರಂಭವಾಗಲಿದೆ ಎಂದರು.

ಆಧಾರ:ಉದಯವಾಣಿ, ದಿನಾಂಕ:10.05.2020

## 62. ರಾಜ್ಯದ ಕಾರ್ಮಿಕ ರಕ್ಷಣೆಗೆ ಸಿದ್ದು ಆಗ್ರಹ

ಬೇರೆ ರಾಜ್ಯಗಳಲ್ಲಿ ಸಿಲುಕಿಕೊಂಡಿರುವ ರಾಜ್ಯದ ಕಾರ್ಮಿಕರು ಸ್ವಂತ ಊರುಗಳನ್ನು ತಲುಪಲು ಸರ್ಕಾರ ಎಲ್ಲ ಕಾರ್ಮಿಕರಿಗೆ ಕೂಡಲೇ ವ್ಯವಸ್ಥೆ ಮಾಡಬೇಕೆಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಅವರು, ಬೆಂಗಳೂರು ಸೇರಿ ರಾಜ್ಯದ ವಿವಿಧ ಕಡೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಲಾಕ್‌ಡೌನ್ ಜಾರಿಯಾದ ಬಳಿಕ ತಮ್ಮ ಊರುಗಳಿಗೆ ಹೋಗಲಾಗದೆ ಸಂಕಷ್ಟಕ್ಕೆ ಒಳಗಾಗಿದ್ದು, ಸರ್ಕಾರ ಅವರನ್ನು ಮಾನವೀಯವಾಗಿ ನಡೆಸಿಕೊಳ್ಳುತ್ತಿಲ್ಲ, ಊರುಗಳಿಗೆ ಹೋಗಲು ಆಗದೆ, ಆಹಾರವಿಲ್ಲದೇ ಅವರು ಹೆಣಗಾಡುತ್ತಿದ್ದಾರೆ.

ಕಾರ್ಮಿಕರ ಪ್ರಯಾಣ ವೆಚ್ಚದಲ್ಲಿ ಶೇ.85ರಷ್ಟನ್ನು ಭರಿಸುವುದಾಗಿ ಕೇಂದ್ರ ಸರ್ಕಾರ ಹೇಳಿದೆ. ಉಳಿದ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುವ ಮೂಲಕ ಕಾರ್ಮಿಕರ ಪ್ರಯಾಣಕ್ಕೆ ಅನುಕೂಲ ಮಾಡಿಕೊಡಬೇಕು. ಬೆಂಗಳೂರಿನಿಂದ ಹೋಗುವ ಕಾರ್ಮಿಕರಿಗೆ ಅಕ್ಕಪಕ್ಕದ ಜಿಲ್ಲೆಗಳ ರೈಲ್ವೆ ನಿಲ್ದಾಣಕ್ಕೆ ಯಾವುದೇ ಸೌಕರ್ಯ ಇಲ್ಲದ

ಕಾರಣ ಅವರಿಗೆ ಬಸ್ ವ್ಯವಸ್ಥೆ ಮಾಡಬೇಕು. ಕಾರ್ಮಿಕರು ಸುರಕ್ಷಿತವಾಗಿ ಊರು ತಲುಪುವವರೆಗೆ ಊಟದ ಸೌಲಭ್ಯವನ್ನು ಒದಗಿಸಬೇಕೆಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:11.05.2020

## 63. ಝೋನ್‌ಗಳ ವಿಂಗಡಣೆ ಮಾಡುವುದು ಬೇಡ ಕಂಟೈನ್‌ಮೆಂಟ್ ಮಾತ್ರ ಬಿಗಿ

## ಸಿಎಂ ಪ್ರಸ್ತಾವನೆಗೆ ಮೋದಿ ಸಮ್ಮತಿ

ಪ್ರಧಾನಿ ನರೇಂದ್ರ ಮೋದಿ ಅವರ ಜೊತೆಗೆ ನಡೆದ ವಿಡಿಯೋ ಸಂವಾದದಲ್ಲಿ ರಾಜ್ಯ ಸರ್ಕಾರ ಜಿಲ್ಲಾವಾರು ಮಟ್ಟದಲ್ಲಿನ ಕೆಂಪು, ಹಸಿರು ಮತ್ತು ಕಿತ್ತಳೆ ವರ್ಗೀಕರಣ ಮಾಡುವುದು ಬೇಡ ಎಂಬ ಪ್ರಸ್ತಾವನೆ ಇರಿಸಿದೆ. ಹೆಚ್ಚು ಪ್ರಕರಣ ಪತ್ತೆಯಾಗುವ ಪ್ರವೇಶವನ್ನು ಕಂಟೈನ್‌ಮೆಂಟ್ ವಲಯವೆಂದು ಗುರುತಿಸಿ, ಸೀಮಿತ ಪ್ರದೇಶಕ್ಕೆ ಲಾಕ್‌ಡೌನ್ ಜಾರಿ ಮಾಡುವ ಬಗ್ಗೆ ಮುಖ್ಯಮಂತ್ರಿಯವರು ಸಲ್ಲಿಸಿದ್ದ ಪ್ರಸ್ತಾವನೆಗೆ ಮೋದಿಯವರು ಸಮ್ಮತಿ ಸೂಚಿಸಿದ್ದು, ಸೀಮಿತ ಪ್ರದೇಶದಲ್ಲಿ ಲಾಕ್‌ಡೌನ್ ಅನ್ನು ಕಟ್ಟುನಿಟ್ಟಿನಲ್ಲಿ ಪಾಲನೆ ಮಾಡಿ ಎಂದು ಸೂಚಿಸಿದ್ದಾರೆ ಎಂದು ಹೇಳಲಾಗಿದೆ.

ರಾಜ್ಯದಲ್ಲಿ ಪರಿಸ್ಥಿತಿ ನೋಡಿಕೊಂಡು ಹಾಗೂ ಖಾಸಗಿ ಸಾರಿಗೆ ಸೇರಿ ಪೂರ್ಣ ಪ್ರಮಾಣದ ವಾಣಿಜ್ಯ ಚಟುವಟಿಕೆ ಆರಂಭಿಸಲು ಸಮ್ಮತಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ಹೊಸ ಜೀವನ ಶೈಲಿ ಅಳವಡಿಸಿಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸಿ ಮನವೊಲಿಸುವಂತೆ ಮುಖ್ಯಮಂತ್ರಿಯವರಿಗೆ ಸಲಹೆ ನೀಡಿದ್ದಾರೆ. ಕೊರೋನಾ ಕುರಿತ ಜನರಲ್ಲಿನ ಪೂರ್ವಾಗ್ರಹ ಪೀಡಿತ ಅಂಶ ನಿವಾರಿಸಿ ಇದು ಇತರೆ ಕಾಯಿಲೆಯಂತೆ ವೈರಸ್ ಸೋಂಕು, ದೀರ್ಘಕಾಲದ ಕಾಯಿಲೆಯಿಂದ ಬಳಲುತ್ತಿರುವವರಿಗೆ ಅಪಾಯ ಹೆಚ್ಚು ಎಂಬುದನ್ನು ಮನದಟ್ಟು ಮಾಡಿಕೊಡಬೇಕು ಎಂದು ಮುಖ್ಯಮಂತ್ರಿಗೆ ಮೋದಿ ತಿಳಿಸಿದರು. ಸಿಎಂ, ರಾಜ್ಯದಲ್ಲಿ ಕೊರೋನಾ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸಿದರು. ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ಸೋಂಕು, ಗ್ರಾಮೀಣ ಭಾರತದಲ್ಲಿ ಹರಡದಂತೆ ತಡೆಗಟ್ಟುವುದೇ ಈಗ ನಮ್ಮ ಮುಂದಿರುವ ಅತಿ ದೊಡ್ಡ ಸವಾಲು ಎಂದು ಹೇಳಿದ ಪ್ರಧಾನಿ ಮೋದಿ ಸರ್ಕಾರವು ಲಾಕ್‌ಡೌನ್ ನಿರ್ಬಂಧಗಳನ್ನು ಸಡಿಲಿಸಿದ ಬಳಿಕ ಕೊರೊನಾ ವೈರಸ್ ದೇಶದಾದ್ಯಂತ ಇರುವ ಗ್ರಾಮಗಳಿಗೆ ಮುತ್ತಿಗೆ ಹಾಕದಂತೆ ತಡೆಯಲು ಬೇಕಿರುವ ಎಲ್ಲ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುವಂತೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ತಿಳಿಸಿದರು.

ಒಂದೇ ಬಾರಿಗೆ ಲಾಕ್‌ಡೌನ್ ತೆಗೆದುಹಾಕುವುದು ಸಾಧ್ಯವಿಲ್ಲದ ಮಾತು. ಆದರೆ ಆರ್ಥಿಕ ಚಟುವಟಿಕೆಗಳನ್ನು ಸ್ಥಗಿತ ಮಾಡಲು ಸಾಧ್ಯವಿಲ್ಲ. ಮೇ 17ರ ನಂತರ ಆರ್ಥಿಕ ಚಟುವಟಿಕೆಗಳ ಆರಂಭಿಸುವ ಬಗ್ಗೆ ಸಲಹೆ ನೀಡುವಂತೆ ಮೋದಿ ರಾಜ್ಯಗಳಿಗೆ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿಗಳ ಜೊತೆ ನಡೆದ ವಿಡಿಯೋ ಸಂವಾದದ ನಂತರ ಮಾತನಾಡಿದ ಪ್ರಧಾನಿ ಮೋದಿ, ಕೊರೊನಾ ನಿಯಂತ್ರಣದಲ್ಲಿ ರಾಜ್ಯಗಳ ಪರಿಶ್ರಮದ ಬಗ್ಗೆ ಶ್ಲಾಘಿಸಿದ್ದಾರೆ. ಕೊರೊನಾ ಬರುವ ಮುನ್ನ ಮತ್ತು ನಂತರದಲ್ಲಿ ದೇಶದ ಜನರ ಜೀವನ ವಿಧಾನವೇ ಬದಲಾಗಿದೆ. ಈಗ ನಾವು ಹೊಸ ಮಾದರಿಯ ತಂತ್ರಜ್ಞಾನವನ್ನು ಮೈಗೂಡಿಸಿಕೊಳ್ಳಬೇಕಾಗಿದೆ ಎಂದಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:12.05.2020

## 64. ವೃದ್ಧರು, ಬಡವರಿಗೆ ಉಚಿತ ಔಷಧ

ಬಿಬಿಎಂಪಿ ಹೆಲ್ತ್‌ಕೇರ್ ಯೋಜನೆಯಡಿ 24 ಗಂಟೆಗಳ ಆರೋಗ್ಯ ಸೇವೆ ಹಾಗೂ 60 ವರ್ಷ ದಾಟಿದ ವೃದ್ಧರಿಗೆ ಮತ್ತು ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ ಔಷಧ ಒದಗಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಾ: ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಆರೋಗ್ಯ ಅಧಿಕಾರಿಗಳ ಜೊತೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಪಾಲಿಕೆಯ ಎಲ್ಲ ಆರೋಗ್ಯ ಕೇಂದ್ರಗಳನ್ನು ಸದೃಢಗೊಳಿಸಲು 'ಬಿಬಿಎಂಪಿ ಹೆಲ್ತ್‌ಕೇರ್' ಯೋಜನೆ ಜಾರಿಗೊಳಿಸಲಾಗುತ್ತಿದೆ. ಇದರಡಿ ಪಾಲಿಕೆಯ 198 ವಾರ್ಡ್‌ಗಳು ಹಾಗೂ 133

ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಜನೌಷಧ ಕೇಂದ್ರಗಳನ್ನು ತೆರೆಯಬೇಕು. ಈ ಮೂಲಕ ಹಿರಿಯ ನಾಗರಿಕರು ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಔಷಧ ಹಾಗೂ ಚಿಕಿತ್ಸಾ ಸೌಲಭ್ಯ ಒದಗಿಸುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ನಗರದಲ್ಲಿ ಅಗತ್ಯವಿರುವ ಎಲ್ಲರಿಗೂ ಆರೋಗ್ಯ ವ್ಯವಸ್ಥೆ ಕಲ್ಪಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳು 24X7 ತೆರೆದು ಚಿಕಿತ್ಸೆ ನೀಡಬೇಕು. ರೋಗ ತಡೆಗೆ ಮುನ್ನೆಚರಿಕಾ ಕ್ರಮಗಳ ಪಾಲನೆ, ಪ್ರಾಥಮಿಕ ಚಿಕಿತ್ಸೆ ಹಾಗೂ ಎಲ್ಲ ಕಾಯಿಲೆಗಳಿಗೂ ಔಷಧ, ರೋಗ ಪತ್ತೆ, ಪರೀಕ್ಷೆ ನಡೆಸಲು ಪ್ರಯೋಗಾಲಯಗಳು ಸಿದ್ಧವಾಗಿರಬೇಕು. ಟೆಲಿ ಮೆಡಿಸಿನ್, ಟೆಲಿ ಕನ್ಸಲ್ಟೇಷನ್ ಸೌಲಭ್ಯದಡಿ ದಾದಿಯರು ಕಾರ್ಯನಿರ್ವಹಿಸಬೇಕು. ಜೊತೆಗೆ ಎಲ್ಲ ಕೇಂದ್ರಗಳಲ್ಲಿ ತಜ್ಞ ವೈದ್ಯರು ಲಭ್ಯವಿರುವಂತೆ ಸೂಚಿಸಲಾಗಿದೆ ಎಂದರು.

**ಮಾಹಿತಿ ದಾಖಲೆ ವ್ಯವಸ್ಥೆ:** ನಗರದ 133 ಪಿಹೆಚ್‌ಸಿಗಳ ಆರೋಗ್ಯ ವರದಿ ಸಂಗ್ರಹಿಸಿ ಇಡಲಾಗುತ್ತಿದೆ. ಅದರ ಜೊತೆಗೆ ಆರೋಗ್ಯ ಕಾರ್ಯಕರ್ತರು ಮನೆಮನೆಗೆ ತೆರಳಿ ಸಂಗ್ರಹಿಸುವ ಪ್ರತಿ ವ್ಯಕ್ತಿಯ ಆರೋಗ್ಯ ವಿವರಗಳ ದಾಖಲೆ ಸಿದ್ಧವಾಗಬೇಕು. ಜೊತೆಗೆ ಎಲ್ಲ ಖಾಸಗಿ ಡಯಾಗ್ನಾಸ್ಟಿಕ್ ಸೆಂಟರ್ ಮತ್ತು ಲ್ಯಾಬ್‌ಗಳಲ್ಲಿ ನಡೆಯುವ ಪರೀಕ್ಷೆಗಳು, ಆರೋಗ್ಯ ತಪಾಸಣೆ ವಿವರ ಬಿಬಿಎಂಪಿಗೆ ಪ್ರತಿನಿತ್ಯ ನೀಡಬೇಕು. ಆರೋಗ್ಯ ವಿಚಾರದ ಯಾವುದೇ ಬೆಳವಣಿಗೆ ಬಗ್ಗೆ ಬಿಬಿಎಂಪಿಗೆ ಸಂಪೂರ್ಣ ಮಾಹಿತಿ ಸಂಗ್ರಹವಾಗುವಂತೆ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಪಾಲಿಕೆ, ಆರೋಗ್ಯ ಕೇಂದ್ರಗಳಿಗೆ ಮಾಸ್ಕ್, ಸ್ಯಾನಿಟೈಸರ್, ಪಿಪಿಇ ಕಿಟ್, ಥರ್ಮಲ್ ಸ್ಕ್ಯಾನರ್‌ಗಳನ್ನು ಸರಬರಾಜು ಮಾಡಲಾಗಿದೆ. ಪ್ರಾಥಮಿಕ ಹೆರಿಗೆ ಆಸ್ಪತ್ರೆ ಹಾಗೂ ರೆಫರಲ್ ಆಸ್ಪತ್ರೆಗಳಲ್ಲಿ ಆಮ್ಲಜನಕ ಸಿಲಿಂಡರ್ ಲಭ್ಯವಿರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಾ: ಅಶ್ವತ್ಥನಾರಾಯಣ ತಿಳಿಸಿರುತ್ತಾರೆ.

ಆಧಾರ:ವಿಜಯವಾಣಿ, ದಿನಾಂಕ:14.05.2020

## 65. ರಾಜ್ಯ ವಿಪತ್ತು ನಿಧಿಯಿಂದ ತ್ರಿಸೂತ್ರ

ರಾಜ್ಯ ವಿಪತ್ತು ನಿಧಿಯಿಂದ ಸರ್ಕಾರ ಮೂರು ರೀತಿಯಲ್ಲಿ ಹಣ ಬಳಸಿಕೊಳ್ಳುತ್ತಿದ್ದು, ಈವರೆಗೆ ಬರೋಬ್ಬರಿ ರೂ.190 ಕೋಟಿ ವೆಚ್ಚ ಮಾಡಿದೆ. ಒಟ್ಟು ರೂ.255 ಕೋಟಿ ವೆಚ್ಚಕ್ಕೆ ಅನುಮೋದನೆಯನ್ನು ನೀಡಿದೆ.

ಪುನರ್ವಸತಿ ಕೇಂದ್ರ ನಿರ್ವಹಣೆ, ಕ್ವಾರೆಂಟೈನ್–ಕಂಟೈನ್ಮೆಂಟ್ ಝೋನ್ ವ್ಯವಸ್ಥೆಗೆ ಹಾಗೂ ಕೋವಿಡ್ ಆಸ್ಪತ್ರೆಗಳ ಸೌಲಭ್ಯಗಳ ಉನ್ನತೀಕರಣಕ್ಕೆ ರಾಜ್ಯ ವಿಪತ್ತು ನಿಧಿ ಹಣವನ್ನು ಆದ್ಯತೆ ಮೇಲೆ ಬಳಸಿಕೊಳ್ಳಲಾಗುತ್ತಿದೆ.

ಕೊರೋನಾ ಸೋಂಕು ಹಿನ್ನೆಲೆಯಲ್ಲಿ ಈ 3 ಸಂಗತಿಗಳು ಬಹಳ ಪ್ರಾಮುಖ್ಯತೆ ಪಡೆದುಕೊಳ್ಳುತ್ತವೆ. ಸಂಕಷ್ಟದಲ್ಲಿ ಇರುವವರು ಉಪವಾಸ ಬೀಳದಂತೆ ಊಟ–ದಿನಸಿ ವಿತರಿಸುವುದು, ಕ್ವಾರೆಂಟೈನ್ ಮಾಡಬೇಕಾದವರಿಗೆ ಅಗತ್ಯ ಸೌಲಭ್ಯ ಕಲ್ಪಿಸುವುದು, ಕಂಟೈನ್‌ಮೆಂಟ್ ವ್ಯವಸ್ಥೆ ಹಾಗೂ ಆಸ್ಪತ್ರೆಗಳಲ್ಲಿ ಅಗತ್ಯ ಪರಿಕರ ಖರೀದಿಸುವುದು ಮುಖ್ಯ. ಈ ನಿಟ್ಟಿನಲ್ಲಿ ಹಣ ಬಳಸಿಕೊಳ್ಳಲಾಗಿದೆ ಎಂಬುದು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಮಾಹಿತಿ ನೀಡಿದೆ.

ಕೊರೋನಾ ಆರಂಭದಿಂದ ಈವರೆಗೆ ರಾಜ್ಯದಾದ್ಯಂತ 4303 ಪರಿಹಾರ ಕೇಂದ್ರಗಳನ್ನು ಗುರುತಿಸಲಾಗಿತ್ತು. ಪ್ರಸ್ತುತ 3900 ಪರಿಹಾರ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಸರ್ಕಾರದ ಕಡೆಯಿಂದಲೇ ಪರಿಹಾರ ಕೇಂದ್ರ ಆರಂಭಿಸಲು ಉದ್ದೇಶಿಸಲಾಗಿದ್ದರೂ, ವಲಸೆ ಕಾರ್ಮಿಕರು ತಾವಿದ್ದ ಸ್ಥಳ ಬಿಟ್ಟು ಬರಲಿಲ್ಲ. ಬಹುತೇಕ ಕಡೆ ಅವರಿದ್ದ ಕಡೆಗಳಲ್ಲಿ ಸಿದ್ಧ ಆಹಾರ ಅಥವಾ ದಿನಸಿ ಒದಗಿಸಲಾಗಿದೆ.

ಎರಡನೇ ಭಾಗವಾಗಿ ಕ್ವಾರಂಟೈನ್ ಕೇಂದ್ರಗಳಿಗೆ ಮತ್ತು ಕಂಟೈನ್ಮೆಂಟ್ ಪ್ರದೇಶಗಳ ನಿರ್ವಹಣೆಗೆ ವೆಚ್ಚ ಮಾಡಲು ಬಿಬಿಎಂಪಿ ಸೇರಿ ಜಿಲ್ಲಾಧಿಕಾರಿಗಳಿಗೆ ಅವಕಾಶ ನೀಡಲಾಗಿದೆ. ಬಿಬಿಎಂಪಿಯೊಂದಕ್ಕೆ ರೂ.25 ಕೋಟಿ ನೀಡಲಾಗಿದೆ. ಜೊತೆಗೆ ಪೊಲೀಸ್ ಇಲಾಖೆಗೆ ರೂ.5 ಕೋಟಿ, ಬಂಧೀಖಾನೆ ನಿರ್ವಹಣೆಗಾಗಿ ರೂ. 2 ಕೋಟಿ ನೀಡಲಾಗಿದೆ. ಒಟ್ಟಾರೆ ಜಿಲ್ಲಾಧಿಕಾರಿಗಳಿಗೆ ರೂ.255 ಕೋಟಿ ನೀಡಿದ್ದು ರೂ.155 ಕೋಟಿ ವೆಚ್ಚ ಮಾಡಿದ್ದಾರೆ.

**ರೂ.1054 ಕೋಟಿ ಮೀಸಲು:** ಪ್ರಮುಖವಾಗಿ ಕೊರೋನಾ ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಗಳ ಸೌಲಭ್ಯ ಹೆಚ್ಚಿಸುವ ಉದ್ದೇಶದಿಂದ ಪರಿಕರ ಖರೀದಿ, ಥರ್ಮಲ್ ಸ್ಕ್ಯಾನಿಂಗ್, ಪಿಪಿಇ ಕಿಟ್ ಖರೀದಿಗಾಗಿ ರೂ.80 ಕೋಟಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಬಳಸಿಕೊಳ್ಳಲಾಗುತ್ತಿದೆ. ಒಟ್ಟಾರೆ. ಈ ಆರ್ಥಿಕ ವರ್ಷದಲ್ಲಿ ರಾಜ್ಯ ವಿಪತ್ತು ನಿಧಿಗೆ ರೂ.1054 ಕೋಟಿ ಮೀಸಲಿಡಲಾಗಿದೆ. ಇದರಲ್ಲಿ ಕೇಂದ್ರದ ಶೇ.75 ಅನುದಾನವಾದರೆ ರಾಜ್ಯದ ಪಾಲು ಶೇ.20 ಆಗುತ್ತದೆ. ಕೇಂದ್ರದಿಂದ ಮೊದಲ ಕಂತಾಗಿ ರೂ.395 ಕೋಟಿ ಬಿಡುಗಡೆಯಾಗಿದೆ. ಕಳೆದ ಸಾಲಿನ ಬಾಕಿ ಉಳಿದಿದ್ದ ರೂ.66 ಕೋಟಿ ಜೊತೆಗೆ ರೂ.90 ಕೋಟಿ ಕೊರೋನಾ ನಿರ್ವಹಣೆಗೆ ಈವರೆಗೆ ವೆಚ್ಚ ಮಾಡಲಾಗಿದೆ.

ಸಾಮಾನ್ಯವಾಗಿ ರಾಜ್ಯ ವಿಪತ್ತಿಗೆ ನಿಧಿಯನ್ನು ನೈಸರ್ಗಿಕ ವಿಪತ್ತು ಬಳಸಿಕೊಳ್ಳಲಾಗುತ್ತದೆ. ಕೊರೊನಾವನ್ನು ವಿಪತ್ತು ಎಂದು ಘೋಷಿಸಿರುವುದರಿಂದ ಅದರ ಹಣ ಬಳಸಿಕೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು. ಹಣ ಬಳಕೆಗೆ ಪರಿಷ್ಕೃತ ಮಾರ್ಗಸೂಚಿ ಕಳುಹಿಸಿದ್ದು, ಯಾವ ಕೆಲಸಕ್ಕೆ ಎಷ್ಟು ಬಳಸಬಹುದೆಂಬ ಮಿತಿಯನ್ನು ಹಾಕಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ: 14.05.2020

## 66. ಕೇಂದ್ರದ ಆತ್ಮನಿರ್ಭರ ಭಾರತ ಪ್ಯಾಕೇಜ್: 'ಸರ್ವರಿಗೂ ಪಾಲು'

ಕೇಂದ್ರ ಸರ್ಕಾರದ ಆತ್ಮನಿರ್ಭರ ಭಾರತ ಪ್ಯಾಕೇಜ್‌ನ ಎರಡನೇ ಘೋಷಣೆಯಲ್ಲಿ ವಲಸೆ ಕಾರ್ಮಿಕರು, ಕೂಲಿ ಕಾರ್ಮಿಕರು ಹಾಗೂ ಮೂಲ ಸೌಕರ್ಯ ಕಾರ್ಯಕ್ರಮಕ್ಕೆ ಅವಕಾಶ ಸಿಕ್ಕಿದೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ರಾಜ್ಯ ಮತ್ತು ಕೇಂದ್ರದ ನಡುವೆ ಇರುವ ಕನಿಷ್ಟ ವೇತನ ತಾರತಮ್ಯ ನಿವಾರಣೆಯಾಗಿದೆ. ಇದರಿಂದ ಊರುಗಳಿಗೆ ವಾಪಸ್ಸು ಆಗಿರುವ ವಲಸೆ ಕಾರ್ಮಿಕರಿಗೆ ವರದಾನವಾಗಲಿದೆ. 8 ಕೋಟಿ ಪಡಿತರ ಇಲ್ಲದಿರುವ ಕಾರ್ಮಿಕರಿಗೆ ರೂ.3,500 ಕೋಟಿ ವೆಚ್ಚದಲ್ಲಿ ಎರಡು ತಿಂಗಳ ಉಚಿತ ಪಡಿತರ ನೀಡುವುದಾಗಿ ಘೋಷಣೆ ಮಾಡಲಾಗಿದೆ. ರಾಜ್ಯ ಸರ್ಕಾರದಿಂದ ಎರಡು ತಿಂಗಳು ಪಡಿತರ ನೀಡಿದ್ದೇವೆ. ಕೇಂದ್ರ ಕೂಡ ಎರಡು ತಿಂಗಳು ವಿಸ್ತರಿಸಿದೆ. ಇದರಿಂದ ಕನಿಷ್ಠ 6 ತಿಂಗಳ ಪಡಿತರ ನೀಡಿದಂತಾಗಿದ್ದು, ಕೆಳ ವರ್ಗದ ಜನರು ನೆಮ್ಮದಿಯಿಂದ ಜೀವನ ನಡೆಸಲು ಅನುಕೂಲವಾದಂತಾಗಿದೆ ಎಂದರು.

ಬೀದಿ ಬದಿ ವ್ಯಾಪಾರಿಗಳಿಗೆ 10 ಸಾವಿರ ಪ್ರೋತ್ಸಾಹಧನ ನೀಡಲು ರೂ.5 ಸಾವಿರ ಕೋಟಿ ಘೋಷಣೆ ಮಾಡಿರುವುದರಿಂದ ಆ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಜನರಿಗೆ ಗೃಹ ಸಾಲ ಸಬ್ಸಿಡಿ ನೀಡಲು ರೂ.70 ಸಾವಿರ ಕೋಟಿ ಘೋಷಣೆ ಮಾಡಿರುವುದು ಈ ವರ್ಗದ ಜನರ ಕನಸು ನನಸು ಮಾಡಿದಂತಾಗಿದೆ. ರೈತ ನಿಧಿಗೆ ರೂ.30 ಸಾವಿರ ಕೋಟಿ ಹಣ ನೀಡಲಾಗಿದೆ.

ರಾಜ್ಯ ಸರ್ಕಾರ, ತರಕಾರಿ, ಹಣ್ಣು ಬೆಳೆದವರಿಗೆ ಪರಿಹಾರಕ್ಕಾಗಿ ರೂ.137 ಕೋಟಿ ಪ್ಯಾಕೇಜ್ ಘೋಷಿಸಿದ್ದೇವೆ. ಪವರ್ ಲೂಮ್ಸ್‌ನಲ್ಲಿ ಕೆಲಸ ಮಾಡುವವರಿಗೆ ರೂ.2 ಸಾವಿರ ಸೇರಿ ಒಟ್ಟು ರೂ.165 ಕೋಟಿ ಘೋಷಣೆ ಮಾಡಿದ್ದೇವೆ ಎಂದು ಹೇಳಿದರು.

ಆಧಾರ:ಉದಯವಾಣಿ, ದಿನಾಂಕ:15.05.2020

## 67. ಆಟೋ–ಟ್ಯಾಕ್ಸಿ ಚಾಲಕರಿಗೆ ಪರಿಹಾರ

ಲಾಕ್‌ಡೌನ್‌ನಿಂದಾಗಿ ದುಡಿಯಲಾಗದೆ ಆದಾಯ ಕಳೆದುಕೊಂಡು ಸಂಕಷ್ಟಕ್ಕೀಡಾಗಿರುವ ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಒಂದು ಬಾರಿ ರೂ.5 ಸಾವಿರ ಪರಿಹಾರ ಧನವನ್ನು ಷರತ್ತಿಗೊಳಪಟ್ಟು ನೀಡಲು ಮಂಜೂರಾತಿ ನೀಡಿ ಸರ್ಕಾರ ಆದೇಶಿಸಿದೆ.

**ಷರತ್ತುಗಳು :–**

- ಎಲ್ಲ ಅರ್ಜಿ ಸೇವಾ ಸಿಂಧು ಪೋರ್ಟಲ್ ಮೂಲಕವೇ ಸ್ವೀಕೃತವಾಗಬೇಕು.

- ➢ ಮಾರ್ಚ್ 24ರವರೆಗೆ ಚಾಲನೆ ಪರವಾನಗಿ (ಡ್ರೈವಿಂಗ್ ಲೈಸನ್ಸ್) ಮತ್ತು ಸುಸ್ಥಿತಿ ಪ್ರಮಾಣ ಪತ್ರ (ಫಿಟ್ನೆಸ್ ಸರ್ಟಿಫಿಕೇಟ್)ಹೊಂದಿದ ವಾಹನಗಳಿಗೆ ಮಾತ್ರ ಅನ್ವಯಿಸಲಿದೆ. ಮಾರ್ಚ್ 24ರಂದು ಚಾಲ್ತಿಯಲ್ಲಿದ್ದ ಡಿ.ಎಲ್.ಸಂಖ್ಯೆಗಿಂತ ಹೆಚ್ಚು ಫಲಾನುಭವಿಗಳು ಇಲ್ಲದಂತೆ ಖಚಿತಪಡಿಸಿಕೊಳ್ಳಬೇಕು.
- ➢ ಆಧಾರ್ ಕಾರ್ಡ್, ಚಾಲನಾ ಪರವಾನಗಿ, ವಾಹನ ನೋಂದಣಿ ಸಂಖ್ಯೆ ಈ ಮೂರು ಅಂಶಗಳು ಎಲ್ಲ ಫಲಾನುಭವಿಗಳಿಗೆ ಅನ್ವಯವಾಗಿರುವುದು ಕಡ್ಡಾಯ.
- ➢ ಇದು ಮ್ಯಾಕ್ಸಿ ಕ್ಯಾಬ್ ಚಾಲಕರಿಗೆ ಅನ್ವಯಿಸುವುದಿಲ್ಲ.
- ➢ ಪರಿಹಾರ ಧನ ಅನುಜ್ಞಾ ಪತ್ರ ಹೊಂದಿರುವ ಹಾಗೂ ಅಗತ್ಯವಿರುವ ಚಾಲಕರ ಬ್ಯಾಂಕ್ ಖಾತೆಗೆ ಡಿಬಿಟಿ ಮುಖಾಂತರವೇ ಸಂದಾಯವಾಗಬೇಕು.
- ➢ ಒಂದು ವೇಳೆ ಆಟೋ–ಟ್ಯಾಕ್ಸಿ ಮಾಲೀಕರಿಗೆ ಸಂದಾಯವಾದಲ್ಲಿ ಕೆಲ ಮಾಲೀಕರು ಹೆಚ್ಚಿನ ಸಂಖ್ಯೆಯ ಆಟೋ–ಟ್ಯಾಕ್ಸಿ ಹೊಂದಿದ್ದು, ಅವರಿಗೆ ಪರಿಹಾರ ಧನ ಸಂದಾಯವಾದರೆ ಜೀವನ ನಿರ್ವಹಣೆ ಎದುರಿಸುತ್ತಿರುವ ಚಾಲಕರಿಗೆ ಸಿಗದಂತಾಗುತ್ತದೆ. ಈ ಬಗ್ಗೆ ಅಧಿಕಾರಿಗಳು ಗಮನ ಹರಿಸಬೇಕು. ನಕಲಿ (ಡೂಪ್ಲಿಕೇಷನ್)ಅಥವಾ 2 ಬಾರಿ ಪರಿಹಾರ ಧನ (ಡಬ್ಬಲ್ ಪೇಮೆಂಟ್) ಸಂದಾಯವಾಗದಂತೆ ಆಧಾರ್ ಅಥವಾ ಪ್ಯಾನ್‌ಕಾರ್ಡ್ ಬ್ಯಾಂಕ್ ಖಾತೆಗೆ ಅನ್ವಯವಾಗಿ ಲಿಂಕ್ ಆಗಿರುವ ಬಗ್ಗೆ ಗಮನಹರಿಸಿ ವರ್ಗಾಯಿಸತಕ್ಕದ್ದು.
- ➢ ಈ ಹಂತದಲ್ಲಿ ಸರ್ಕಾರ ಮತ್ತು ಫಲಾನುಭವಿಗಳ ನೇರ ಸಂಪರ್ಕ ಇರತಕ್ಕದ್ದು, ಯಾವುದೇ ಮಧ್ಯಂತರ ಸಂಪರ್ಕ ಇರಬಾರದು.

ಸೇವಾ ಸಿಂಧು ಪೋರ್ಟಲ್ ಮೂಲಕ ಅನುಷ್ಠಾನ: ಸೂಚಿತ ಷರತ್ತು–ನಿಬಂಧನೆಗಳನ್ನು ಪರಿಗಣಿಸಿ ಸೇವಾ ಸಿಂಧು ಪೋರ್ಟಲ್ ಮುಖಾಂತರ ಯೋಜನೆ ಅನುಷ್ಠಾನಗೊಳಿಸಲು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿದೆ. ಕೆಲವೊಮ್ಮೆ ಫಲಾನುಭವಿಗಳ ಆರ್ಥಿಕ ಸ್ಥಿತಿ ಉತ್ತಮವಾಗಿದ್ದು, ಅವರಿಗೆ ಪರಿಹಾರ ನೀಡುವ ಅಗತ್ಯದ ಬಗ್ಗೆ ಅಧಿಕಾರಿಗಳು ಗಮನಹರಿಸಿ ಅರ್ಹ ಫಲಾನುಭವಿಗಳಿಂದ ಲಾಕ್‌ಡೌನ್ ಅವಧಿಯಲ್ಲಿ ಆರ್ಥಿಕ ಸದೃಢವಾಗಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪಡೆದು ಪರಿಹಾರ ನೀಡಲು ಅಗತ್ಯ ಕ್ರಮವಹಿಸಬೇಕು. ಈ ವೆಚ್ಚವನ್ನು 2020–21ನೇ ಆಯವ್ಯಯ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ರೂ.20 ಕೋಟಿ ಅಡಿ ಭರಿಸಲು ಬಿಡುಗಡೆಗೊಳಿಸಿದೆ. ನಂತರ ಅವಶ್ಯಕ್ಕೆ ತಕ್ಕಂತೆ ಹೆಚ್ಚುವರಿ ಅನುದಾನ ಒದಗಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 17.05.2020

## 68. ಆರ್ಥಿಕ ಸಂಚಾರ ಮುಕ್ತ

ಲಾಕ್‌ಡೌನ್ 4.0 ಮೇ 31 ರವರೆಗೆ ವಿಸ್ತರಣೆಯಾಗಿದ್ದು, ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಆರಂಭಿಸುವ ವಿವೇಚನೆಯನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗಿದೆ. ಕೇಂದ್ರ ಗೃಹ ಇಲಾಖೆ ಲಾಕ್‌ಡೌನ್ 4.0ನ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದೆ. ಅಂತರ್ ಜಿಲ್ಲೆ ಮತ್ತು ಅಂತರರಾಜ್ಯ ಸಾರಿಗೆ ಸಂಚಾರಕ್ಕೆ ಅನುಮತಿ ನೀಡಲಾಗಿದ್ದು, ಇದಕ್ಕೆ ಆಯಾ ರಾಜ್ಯ ಸರ್ಕಾರಗಳು ಒಪ್ಪಿಗೆ ನೀಡಬೇಕಾಗಿದೆ.

ದೇಶೀಯ ವಿಮಾನಯಾನ ಆರಂಭವಾಗಬಹುದು ಎಂಬ ನಿರೀಕ್ಷೆ ಸುಳ್ಳಾಗಿದೆ. ಹಾಗೆಯೇ ಮೆಟ್ರೋ ಸಂಚಾರಕ್ಕೂ ಅನುಮತಿ ನೀಡಲಾಗಿಲ್ಲ. ಶಾಲಾ ಮತ್ತು ಕಾಲೇಜುಗಳೂ ಮೇ ರವರೆಗೆ ಬಂದ್ ಆಗಿರುತ್ತವೆ.

**ರಾಜ್ಯಗಳಿಗೆ ವಲಯ ಅಧಿಕಾರ:** ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿಗಳ ಜೊತೆಗೆ ನಡೆಸಿದ ವಿಡಿಯೋ ಸಂವಾದದಲ್ಲಿ ಬಹುತೇಕ ಸಿಎಂಗಳು, ವಲಯಗಳ ಗುರುತಿಸುವಿಕೆ ನಿರ್ಧಾರವನ್ನು ತಮಗೆ ಕೊಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಇದಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ. ಇನ್ನು ರಾಜ್ಯ ಸರ್ಕಾರಗಳೇ ಕೆಂಪು, ಕಿತ್ತಳೆ, ಹಸಿರು ಮತ್ತು ಕಂಟೈನ್ಮೆಂಟ್ ವಲಯಗಳನ್ನು ಗುರುತಿಸಬಹುದಾಗಿದೆ. ಆದರೆ, ಇದಕ್ಕಾಗಿ ಕೇಂದ್ರ ಕುಟುಂಬ ಮತ್ತು ಆರೋಗ್ಯ ಸಚಿವಾಲಯದ ಮಾರ್ಗಸೂಚನೆಗಳನ್ನು ಅನುಸರಿಸಬೇಕಾಗುತ್ತದೆ.

ಕೆಂಪು ಮತ್ತು ಕಿತ್ತಳೆ ವಲಯದಲ್ಲಿನ ಕಂಟೈನ್‌ಮೆಂಟ್ ಝೋನ್ ಮತ್ತು ಬಫರ್ ಝೋನ್‌ಗಳನ್ನು ಆಯಾ ಜಿಲ್ಲಾಡಳಿತಗಳೇ ಗುರುತಿಸಬಹುದು. ಕಂಟೈನ್‌ಮೆಂಟ್ ಝೋನ್‌ಗಳಲ್ಲಿ ಕೇವಲ ಅಗತ್ಯ ಸೇವೆಗಳಷ್ಟೇ ಲಭ್ಯವಿರಲಿವೆ. ಈ ವಲಯಗಳಲ್ಲಿ ಸಂಪರ್ಕಿತರ ಶೋಧ, ಮನೆಯಿಂದ ಮನೆಗೆ ಸರ್ವೇಕ್ಷಣೆ, ಮತ್ತಿತರ ವೈದ್ಯಕೀಯ ಸೇವೆಗಳನ್ನು ಕೈಗೊಳ್ಳಬೇಕು. ರಾತ್ರಿ 7 ರಿಂದ ಬೆಳಗ್ಗೆ 7ರವರೆಗೆ ನಿಷೇಧಾಜ್ಞೆ ಜಾರಿ ಮುಂದುವರಿಯುತ್ತದೆ.

**ಆರ್ಥಿಕತೆಗೆ ಒಪ್ಪಿಗೆ:** ಕಂಟೈನ್‌ಮೆಂಟ್ ಝೋನ್ ಹೊರತುಪಡಿಸಿ, ಕೆಂಪು ವಲಯ ಸೇರಿದಂತೆ ಎಲ್ಲ ಕಡೆಗಳಲ್ಲಿ ಆರ್ಥಿಕ ಚಟುವಟಿಕೆಗಳ ಆರಂಭಕ್ಕೆ ಹೊಸ ಮಾರ್ಗಸೂಚಿಯಲ್ಲಿ ಒಪ್ಪಿಗೆ ನೀಡಲಾಗಿದೆ. ಮಾರ್ಗಸೂಚಿಯಲ್ಲಿ ನಿರ್ಬಂಧ ವಿಧಿಸಲಾಗಿರುವ ಅಂಶಗಳನ್ನು ಬಿಟ್ಟು ಉಳಿದೆಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳನ್ನು ಆರಂಭಿಸಬಹುದಾಗಿದೆ.

ಆಧಾರ:ಉದಯವಾಣಿ, ದಿನಾಂಕ:18.05.2020

## 69. ಎಸ್‌ಎಸ್‌ಎಲ್‌ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟ

ಬೆಂಗಳೂರು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ 2020ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿದೆ. ಪರೀಕ್ಷೆಗಳು ಜೂನ್ 25 ರಿಂದ ಜುಲೈ 4ರವರೆಗೆ ನಡೆಯಲಿವೆ. ಪ್ರಥಮ ಭಾಷೆ ಮತ್ತು ಐಚ್ಚಿಕ ವಿಷಯಗಳಿಗೆ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.45ರವರೆಗೆ ಪರೀಕ್ಷೆಗಳು ನಡೆಯಲಿವೆ. ದ್ವಿತೀಯ ಮತ್ತು ತೃತೀಯ ಭಾಷೆಗಳಿಗೆ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1.30ರವರೆಗೆ ನಡೆಯಲಿದೆ.

ಕರ್ನಾಟಕ ಸಂಗೀತ ಪರೀಕ್ಷೆಗಳನ್ನು ಮಧ್ಯಾಹ್ನ 2 ರಿಂದ 3.45ರವರೆಗೆ ಮತ್ತು ಪ್ರಾಯೋಗಿಕ ಪರೀಕ್ಷೆಗಳನ್ನು ಮಧ್ಯಾಹ್ನ 3.45 ರಂದ ಸಂಜೆ 5.15ರವರೆಗೆ ನಡೆಸಲಾಗುತ್ತದೆ. ಅಂಗವಿಕಲ ಮತ್ತು ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ಪರೀಕ್ಷೆ ಬರೆಯಲು ನಿಗದಿಪಡಿಸಿರುವ ಸಮಯದ ಜೊತೆ 1 ಗಂಟೆ ಅವಧಿ ಹೆಚ್ಚುವರಿ ನೀಡಲಾಗುತ್ತಿದೆ. ಕೊರೋನಾ ಇರುವುದರಿಂದ ಥರ್ಮಲ್ ಸ್ಕ್ಯಾನಿಂಗ್, ಮಾಸ್ಕ್ ಧರಿಸುವುದು ಕಡ್ಡಾಯ. ವಿದ್ಯಾರ್ಥಿಗಳು ಸ್ಯಾನಿಟೈಸರ್ ಬಳಸಿ ಪರೀಕ್ಷೆಗೆ ಹಾಜರಾಗಬೇಕಿದೆ. ಈ ಎಲ್ಲಾ ಸುರಕ್ಷತಾ ಕ್ರಮ ಅನುಸರಿಸಬೇಕಾದ್ದರಿಂದ ವಿದ್ಯಾರ್ಥಿಗಳು 9.30ಕ್ಕೆ ಕೇಂದ್ರದ ಮುಂದೆ ಹಾಜರಿರಬೇಕು ಎಂದು ಸೂಚಿಸಲಾಗಿದೆ.

ಈ ವರ್ಷ ಕಳೆದ ವರ್ಷಕ್ಕಿಂತ ಎಸ್ಸೆಸ್ಸೆಲ್ಸಿ ಪರೀಕ್ಷೆ ವಿಭಿನ್ನವಾಗಿರಲಿದೆ. ಕೊರೋನಾ ಕಾರಣ ವಿದ್ಯಾರ್ಥಿಗಳಲ್ಲಿ ಸುರಕ್ಷತೆ ಕುರಿತು ಅರಿವು ಮೂಡಿಸಬೇಕು. ವಿದ್ಯಾರ್ಥಿಗಳಿಗೆ ಮಾಸ್ಕ್–ಸ್ಯಾನಿಟೈಸರ್ ಲಭ್ಯವಿರುವ ಬಗ್ಗೆ ಗಮನವಹಿಸಬೇಕು ಎಂದು ರಾಜ್ಯದ ಎಲ್ಲ ಉಪ ನಿರ್ದೇಶಕರಿಗೂ ಶಿಕ್ಷಣ ಸಚಿವ ಸುರೇಶ್ ಕುಮಾರ್ ಪತ್ರ ಬರೆದು ಸೂಚನೆ ನೀಡಿದ್ದಾರೆ.

ಆಧಾರ:ವಿಜಯವಾಣಿ, ದಿನಾಂಕ:20.05.2020

## 70. ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನದ ಚೆಕ್

ಸರ್ಕಾರದ ಘೋಷಣೆಯಂತೆ ಆಶಾ ಕಾರ್ಯಕರ್ತೆಯರಿಗೆ ಒಂದು ಬಾರಿಗೆ ಅನ್ವಯವಾಗುವಂತೆ ತಲಾ ರೂ.3 ಸಾವಿರ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಯವರು ಚಾಲನೆ ನೀಡಿದ್ದಾರೆ.

ಸಹಕಾರ ಇಲಾಖೆ ಮೂಲಕ ಈ ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಪ್ರಕಟಿಸಿದ್ದರು. ಅದರಂತೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು 10 ಆಶಾ ಕಾರ್ಯಕರ್ತೆಯರಿಗೆ ಈ ಪ್ರೋತ್ಸಾಹ ಧನದ ಚೆಕ್ ಅನ್ನು ಸಾಂಕೇತಿಕವಾಗಿ ಸಿಎಂ ಗೃಹ ಕಛೇರಿಯಲ್ಲಿ ವಿತರಿಸಿದರು.

ಮುಖ್ಯಮಂತ್ರಿಯವರ ಸೂಚನೆಯಂತೆ ರಾಜ್ಯದಲ್ಲಿ ಒಟ್ಟಾರೆ 41,171 ಆಶಾ ಕಾರ್ಯಕರ್ತೆಯರಿಗೆ ಇಲಾಖೆಯಿಂದ ಪ್ರೋತ್ಸಾಹಧನ ಕೊಡಲಾಗುತ್ತಿದೆ. ರಾಜ್ಯದಲ್ಲಿ ಈಗಾಗಲೇ 3,110 ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹ ಧನ ಜಮಾ ಮಾಡಲಾಗಿದ್ದು, ಇದಕ್ಕೆ ಒಟ್ಟು ರೂ.92.36 ಲಕ್ಷ ವೆಚ್ಚವಾಗಿದೆ. ಬಾಕಿ ಉಳಿದವರಿಗೆ ವಾರದೊಳಗೆ ಸಹಾಯ ಧನ ತಲುಪಿಸಲಾಗುವುದು ಎಂದು ಸಹಕಾರ ಸಚಿವರು ತಿಳಿಸಿದರು.

ಆಧಾರ:ವಿಜಯಕರ್ನಾಟಕ, ದಿನಾಂಕ:21.05.2020

## 71. ಮರಳು ಗಣಿಗಾರಿಕೆಗೆ ಗ್ರಾಮ ಪಂಚಾಯತ್ ಪವರ್‌ಫುಲ್

ಮರಳು ಗಣಿಗಾರಿಕೆಯ ಗೊಂದಲಕ್ಕೆ ತೆರೆ ಎಳೆಯಲು ಸ್ಪಷ್ಟ ಮಾರ್ಗಸೂಚಿಯೊಂದಿಗೆ ನೂತನ 'ಮರಳು ನೀತಿ–2020' ಜಾರಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮರಳು ಗಣಿಗಾರಿಕೆ ಮೇಲೆ ಪೂರ್ಣ ಅಧಿಕಾರವನ್ನು ಲೋಕೋಪಯೋಗಿ ಇಲಾಖೆಗೆ ಒಪ್ಪಿಸಿದ್ದ 2011ರ ನೀತಿಯಲ್ಲಿನ ಹಲವು ಗೊಂದಲಗಳಿಗೆ ಹೊಸ ನೀತಿಯಲ್ಲಿ ತೆರೆ ಎಳೆಯಲಾಗಿದೆ. ರಾಜ್ಯ, ಜಿಲ್ಲೆ, ಉಪ ವಿಭಾಗ ಹಾಗೂ ತಾಲ್ಲೂಕು ಮಟ್ಟದ ನಿಗಾ ಸಮಿತಿಗಳ ಉಸ್ತುವಾರಿಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಮರಳು ಸಾಗಣೆ ಪರವಾನಿಗಿ ನೀಡುವ ವಿಕೇಂದ್ರಿಕರಣ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾಮಟ್ಟದ ಸಮಿತಿಗಳು ಮರಳು ನಿಕ್ಷೇಪ ಗುರುತಿಸಿದ ಬಳಿಕ ಪರವಾನಿಗಿ ಅವಧಿ ನಿಗದಿಪಡಿಸಿ ಮರಳು ತೆಗೆಯಲು ಸಂಬಂಧಿತ ಗ್ರಾಪಂಗಳಿಗೆ ಅವಕಾಶ ನೀಡಬೇಕು. ನಿಗದಿಪಡಿಸಿದ ದರದಲ್ಲಿ ಗ್ರಾಮ ಪಂಚಾಯತ್‌ಗಳ ಮೂಲಕ ಮರಳು ವಿಲೇವಾರಿ ಮಾಡಲು ನೂತನ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಹಳ್ಳ,ತೊರೆ ಮತ್ತು ಕೆರೆಗಳಲ್ಲಿ ಗರಿಷ್ಠ ಒಂದು ವರ್ಷ ಅವಧಿಗೆ ಹಾಗೂ ಹೊಳೆ, ನದಿ ಅಣೆಕಟ್ಟುಗಳಲ್ಲಿ ಗರಿಷ್ಠ 3 ವರ್ಷ ಅವಧಿಗೆ ಮರಳು ತೆಗೆಯಲು ಮತ್ತು ಸಾಗಣೆ ಮಾಡಬಹುದು. ಸರ್ಕಾರಿ ಕಾಮಗಾರಿಗಳಿಗೆ ಮರಳು ಬ್ಲಾಕ್‌ಗಳನ್ನು ಮೀಸಲಿಡಲು ಜಿಲ್ಲಾ ಸಮಿತಿಗಳಿಗೆ ಅಧಿಕಾರ ನೀಡಲಾಗಿದ್ದು, ಆನ್‌ಲೈನ್ ಬುಕಿಂಗ್ ಮೂಲಕ ಮರಳನ್ನು ಬಳಕೆದಾರರಿಗೆ ತಲುಪಿಸಲು ವ್ಯವಸ್ಥೆ ಮಾಡಲಾಗುವುದು. ಅನಧಿಕೃತ ಮರಳು ಗಣಿಗಾರಿಕೆ ಹಾಗೂ ಅಕ್ರಮ ಸಾಗಣೆಗೆ ಪ್ರತಿ ವಾಹನಕ್ಕೆ ರೂ.10 ಸಾವಿರ ದಂಡ ವಿಧಿಸಲು ನೂತನ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಮರಳು ಗಣಿಗಾರಿಕೆ ಸಂಬಂಧ ನೂತನ ನೀತಿ ಜಾರಿ ಮಾಡಲು 2018ರಲ್ಲಿ ಸಚಿವ ಸಂಪುಟ ಉಪ ಸಮಿತಿ ರಚಿಸಿತ್ತು. ಬಳಿಕ 2020 ಫೆಬ್ರವರಿಯಲ್ಲಿ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯ ಸಮಿತಿ ಕರಡು ನೀತಿ ಅಂತಿಮಗೊಳಿಸಿತ್ತು. ನೀತಿಯನ್ನು ಕಳೆದ ಏಪ್ರಿಲ್ 30ರಂದು ಸಚಿವ ಸಂಪುಟ ಅನುಮೋದಿಸಿರುತ್ತದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:24.05.2020

## 72. ಯುವ ಸಬಲೀಕರಣ ಕೇಂದ್ರಗಳ ಸ್ಥಾಪನೆ

ರಾಜ್ಯದಾದ್ಯಂತ ಯುವ ಸಬಲೀಕರಣ ಕೇಂದ್ರಗಳನ್ನು ರಚಿಸಿ ವಿದ್ಯಾರ್ಥಿಗಳಿಗೆ ಆನ್‌ಲೈನ್ ಪೋರ್ಟಲ್ ಮೂಲಕ ಒಂದೇ ಸೂರಿನಡಿ ಸಮಗ್ರ ಮಾಹಿತಿ ಒದಗಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ:ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸಿಎಂ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಯುವ ಸಬಲೀಕರಣ ಕೇಂದ್ರಗಳಲ್ಲಿ ಪ್ರೌಢಶಾಲಾ ಮಟ್ಟದಿಂದಲೇ ವಿದ್ಯಾರ್ಥಿಗಳ ನೋಂದಣಿ ಪ್ರಾರಂಭಿಸಲಾಗುವುದು. ಇದರಿಂದ ಶಾಲೆ–ಕಾಲೇಜಿನಿಂದ ಹೊರಗುಳಿಯುವ ವಿದ್ಯಾರ್ಥಿಗಳನ್ನು ಪತ್ತೆ ಹಚ್ಚಲು ಸಾಧ್ಯ. ಕೈಗಾರಿಕೆಗಳನ್ನು ಇದರ ಜೊತೆ ಸಂಪರ್ಕಿಸಿ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್, ಉದ್ಯೋಗ ದೊರಕಿಸುವ ಅವಕಾಶ ಕಲ್ಪಿಸಲಾಗಿದೆ ಎಂದರು. ಕೊರೊನಾ ಕಾರಣ ಆನ್‌ಲೈನ್ ಬೋಧನೆ ಅನುಷ್ಠಾನಕ್ಕೆ ಬರಲಿದ್ದು, ವಿದ್ಯಾರ್ಥಿ–ಶಿಕ್ಷಕರಿಗೆ ಮೈತ್ರಿ ಸಹಾಯವಾಣಿ ಪೋರ್ಟಲ್ ನೆರವಾಗಿದೆ ಎಂದು ಸಿಎಂಗೆ ಉನ್ನತ ಶಿಕ್ಷಣ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ವೆಬ್ ಎಕ್ಸ್, ಸ್ಕೈಪ್ ಹಾಗೂ ಇತರ ವೇದಿಕೆ ಮೂಲಕ 30,000 ಆನ್‌ಲೈನ್ ತರಗತಿ ನಡೆಸಲಾಗಿದೆ. ವಾಟ್ಸ್‌ಆಪ್, ಟೆಲಿಗ್ರಾಂ ಮೂಲಕ ಶೇ.85 ವಿದ್ಯಾರ್ಥಿಗಳಿಗೆ ಇ–ನೋಟ್ಸ್, ಪಿಪಿಟಿ ಹಾಗೂ ಹಳೆಯ ಪ್ರಶ್ನೆ ಪತ್ರಿಕೆ ವಿತರಿಸಲಾಗಿದೆ. ಜ್ಞಾನ ನಿಧಿ ಯು–ಟ್ಯೂಬ್ ಚಾನೆಲ್ ಮೂಲಕ 65 ವಿಷಯಗಳ 7,074 ಬೋಧನಾ ವಿಡಿಯೋ ಅಪ್‌ಲೋಡ್ ಮಾಡಿದ್ದು, 5 ಲಕ್ಷ ವಿದ್ಯಾರ್ಥಿಗಳು ವೀಕ್ಷಿಸಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಉನ್ನತ ಶಿಕ್ಷಣದಲ್ಲಿ ಸಮತೋಲನಕ್ಕಾಗಿ ರಾಜ್ಯದ 13 ವಿಧಾನ ಸಭಾ ಕ್ಷೇತ್ರಗಳಲ್ಲಿ ಸರ್ಕಾರಿ ಕಾಲೇಜು ಇಲ್ಲದ್ದನ್ನು ಗುರುತಿಸಲಾಗಿದೆ. ಹೆಚ್ಚುವರಿ ಕಾಲೇಜಿರುವ ಕ್ಷೇತ್ರಗಳಿಂದ 6 ಪ್ರಥಮ ದರ್ಜೆ ಕಾಲೇಜುಗಳನ್ನು ಈ ಭಾಗಗಳಿಗೆ ಸ್ಥಳಾಂತರಿಸಲಾಗುವುದೆಂದು ಡಿಸಿಎಂ ಹೇಳಿದರು.

**ಶೀಘ್ರದಲ್ಲೇ ಸಮಗ್ರ ನಿರ್ವಹಣಾ ವ್ಯವಸ್ಥೆ:** ಇ–ಆಡಳಿತ ಇಲಾಖೆ ಮೂಲಕ ಅನುಷ್ಠಾನಕ್ಕೆ ತರಲು ಉದ್ದೇಶಿತ 11 ಕೋಟಿ ರೂ. ವೆಚ್ಚದ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳ ಸಮಗ್ರ ನಿರ್ವಹಣಾ ವ್ಯವಸ್ಥೆ ಜಾರಿಗೆ ಸಿಎಂ ಅಸ್ತು ಎಂದಿದ್ದು, ಬೆಳಗಾವಿ ಕಿತ್ತೂರು ವಿ.ವಿ.ಸ್ವಾಧೀನದ ಜಮೀನಿನ ಬಗ್ಗೆ ಅರಣ್ಯ ಇಲಾಖೆ ತಗಾದೆಯನ್ನು ಡಿಸಿಎಂ ಪ್ರಸ್ತಾಪಿಸಿದಾಗ ಕೇಂದ್ರ ಅರಣ್ಯ ಸಚಿವ ಪ್ರಕಾಶ್ ಜಾವಡೇಕರ್ ಜೊತೆ ಚರ್ಚಿಸಿ ಬಗೆಹರಿಸಿ ಕೊಡುವೆ ಎಂದು ಮುಖ್ಯಮಂತ್ರಿಯವರು ಭರವಸೆ ನೀಡಿದರು.

ಆಧಾರ:ವಿಜಯವಾಣಿ, ದಿನಾಂಕ:27.05.2020

## 73. ಪದವಿ ಪರೀಕ್ಷೆಗೆ ಸಿಎಂ ಸಮ್ಮತಿ

ಇಂಜಿನಿಯರಿಂಗ್ ಸೇರಿದಂತೆ ಎಲ್ಲ ಪದವಿ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಿಎಂ ಬಿಎಸ್.ಯಡಿಯೂರಪ್ಪ ಒಪ್ಪಿಗೆ ನೀಡಿದ್ದಾರೆ. ಗೃಹ ಕಚೇರಿ 'ಕೃಷ್ಣಾ'ದಲ್ಲಿ ಉನ್ನತ ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಆನ್‌ಲೈನ್ ತರಗತಿಗಳ ಮೂಲಕ ಪಠ್ಯಕ್ರಮವನ್ನು ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಎದುರಿಸಲು ಯಾವುದೇ ಸಮಸ್ಯೆಯಾಗದಂತೆ ಎಚ್ಚರವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಲಾಕ್‌ಡೌನ್ ಪೂರ್ವದಲ್ಲಿ ಶೇ.79 ಪಠ್ಯಕ್ರಮ ಪೂರ್ಣಗೊಂಡಿದ್ದು, ಮೇ 31 ರೊಳಗೆ ಆನ್‌ಲೈನ್ ಮೂಲಕ ಉಳಿದ ಶೇ.21 ಪಠ್ಯಕ್ರಮ ಬೋಧನೆ ಪೂರ್ಣಗೊಳಿಸಲಾಗುವುದು. ನಂತರವೂ ನೇರ ಬೋಧನೆಗೆ ಕಾಲಾವಕಾಶ ಒದಗಿಸಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಲಾಗುವುದು. ಮುಂಚಿತವಾಗಿಯೇ ಪರೀಕ್ಷಾ ವೇಳಾಪಟ್ಟಿ ಪ್ರಕಟಿಸಿ ಅನುಕೂಲ ಮಾಡಿಕೊಡಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಯುಜಿಸಿ ಮಾರ್ಗಸೂಚಿ ಪಾಲಿಸಲಾಗುತ್ತಿದ್ದು, ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಪ್ರಸಕ್ತ ಶೈಕ್ಷಣಿಕ ವರ್ಷದ ಕಾರ್ಯಕ್ರಮಗಳನ್ನು ಜೂನ್ 15 ರೊಳಗೆ ಪೂರ್ಣಗೊಳಿಸಲು ಸೂಚಿಸಿದ್ದು, ಈ ಬಾರಿ ಬೇಸಿಗೆ ರಜೆ ಮೊಟಕುಗೊಳಿಸಲಾಗುವುದು ಎಂದರು.

ಆಧಾರ:ವಿಜಯವಾಣಿ, ದಿನಾಂಕ:27.05.2020

## 74. ಆಯುಷ್ ವೈದ್ಯರ ವೇತನ ಹೆಚ್ಚಳಕ್ಕೆ ಸರ್ಕಾರ ಸಮ್ಮತಿ

ಆಯುಷ್ ಇಲಾಖೆ ವೈದ್ಯರು ಹಾಗೂ ಸಿಬ್ಬಂದಿ ಬೇಡಿಕೆಗಳಿಗೆ ಸ್ಪಂದಿಸಿರುವ ಸರ್ಕಾರ, ಅಲೋಪತಿ ಗುತ್ತಿಗೆ ವೈದ್ಯರಿಗೆ ವೇತನ ಹೆಚ್ಚಿಸಿರುವಂತೆ ಅದೇ ಮಾನದಂಡದ ಆಧಾರದ ಮೇಲೆ ಆಯುಷ್ ವೈದ್ಯರಿಗೂ ವೇತನ ಹೆಚ್ಚಿಸಲು ನಿರ್ಧರಿಸಿದೆ.

ನಾನಾ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮುಷ್ಕರ ನಡೆಸುತ್ತಿದ್ದ ಆಯುಷ್ ಇಲಾಖೆ ವೈದ್ಯರು ಮತ್ತು ಸಿಬ್ಬಂದಿ ವರ್ಗದ ಪ್ರತಿನಿಧಿಗಳೊಂದಿಗೆ ಆರೋಗ್ಯ ಸಚಿವ ಬಿ.ಶ್ರೀರಾಮುಲು ವಿಧಾನ ಸೌಧದಲ್ಲಿ ಸಭೆ ನಡೆಸಿದರು. ಸಭೆಯ ಮಾತುಕತೆಗಳು ಯಶಸ್ವಿಯಾಗಿದ್ದು, ಪ್ರತಿಭಟನೆ ಹಿಂದಕ್ಕೆ ಪಡೆಯಲು ಒಪ್ಪಿದ್ದಾರೆ. ಆಯುಷ್ ವೈದ್ಯರಿಗೂ ವೇತನ ಹೆಚ್ಚಿಸಲು ನಿರ್ಧಾರ ಕೈಗೊಳ್ಳಲಾಗಿದೆ. ಎಂಬಿಬಿಎಸ್ ವೈದ್ಯರನ್ನು ನೇಮಕ ಮಾಡಿಕೊಳ್ಳುವ ಮಾದರಿಯಲ್ಲಿ ವಿಶೇಷ ನೇಮಕಾತಿ ಘಟಕದ ಮೂಲಕ ಆಯುಷ್ ವೈದ್ಯರನ್ನು ನೇರ ನೇಮಕ ಮತ್ತು ಆಯುಷ್ ಕೋರ್ಸ್‌ನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಸಚಿವ ಶ್ರೀರಾಮುಲು ತಿಳಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:27.05.2020

## 75. ಜೂನ್ 1 ರಿಂದ ದೇಗುಲ ದರ್ಶನ

ಲಾಕ್‌ಡೌನ್‌ನಿಂದಾಗಿ ಬಾಗಿಲು ಮುಚ್ಚಿದ್ದ ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ಎಲ್ಲ ದೇವಸ್ಥಾನಗಳೂ ಜೂನ್ 1 ರಿಂದ ಸಾರ್ವಜನಿಕರ ದರ್ಶನಕ್ಕೆ ಮುಕ್ತವಾಗಲಿವೆ. ಸಿಎಂ ಜೊತೆ ಸಭೆ ನಡೆಸಿದ ಮುಜರಾಯಿ ಸಚಿವ

ಕೋಟ ಶ್ರೀನಿವಾಸ ಪೂಜಾರಿ, ದೈಹಿಕ ಅಂತರ ಕಾಯ್ದುಕೊಂಡು ಪೂಜೆಗೆ ಅವಕಾಶ ಮಾಡಿಕೊಡುವ ನಿರ್ಧಾರಕ್ಕೆ ಬರಲಾಗಿದೆ ಎಂದು ತಿಳಿಸಿದರು.

ದೇವಸ್ಥಾನವನ್ನು ಸಾರ್ವಜನಿಕರಿಗೆ ಮುಕ್ತಗೊಳಿಸುವ ಬಗ್ಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸೂಚನೆ ನೀಡಲಾಗಿದೆ. ದೇವಸ್ಥಾನದಲ್ಲಿ ಹಲವು ಸೇವೆಗಳಿಗೆ ಅವಕಾಶ ಕಲ್ಪಿಸಲಾಗುವುದು. ಈಗಾಗಲೇ ಆಯ್ದ 52 ದೇವಸ್ಥಾನಗಳಲ್ಲಿ ಆನ್‌ಲೈನ್ ಸೇವೆ ಮಾಡಲು ಅವಕಾಶ ನೀಡಲಾಗಿದೆ. ಆದರೆ ಜಾತ್ರಾ ಮಹೋತ್ಸವಕ್ಕೆ ಅವಕಾಶ ಇರುವುದಿಲ್ಲ. ಮಸೀದಿ, ಚರ್ಚ್‌ಗಳನ್ನು ತೆರೆಯುವ ಬಗ್ಗೆ ಸದ್ಯಕ್ಕೆ ನಿರ್ಧಾರ ತೆಗೆದುಕೊಂಡಿಲ್ಲ. ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದ ದೇವಾಲಯಗಳ ಬಗ್ಗೆಯಷ್ಟೇ ಚರ್ಚೆ ನಡೆದಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

ಆಂಧ್ರ ಪ್ರದೇಶದ ತಿರುಮಲ ಕರ್ನಾಟಕ ಛತ್ರಕ್ಕೆ ಸೇರಿದ ಸ್ಥಳಗಳಲ್ಲಿ ನೂತನ ವಸತಿ ಗೃಹಗಳ ನಿರ್ಮಾಣಕ್ಕೆ ರೂ.200 ಕೋಟಿಗಳ ಅನುದಾನ ಮಂಜೂರು ಮಾಡುವ ಬಗ್ಗೆ ಚರ್ಚಿಸಿ, ಕೂಡಲೇ ಕಾಮಗಾರಿ ಪ್ರಾರಂಭಕ್ಕೆ ಕ್ರಮವಹಿಸಲು ಸಿಎಂ ಯಡಿಯೂರಪ್ಪ ಸೂಚನೆ ನೀಡಿದ್ದಾರೆ. ಕಂದಾಯ ಹಾಗೂ ಮುಜರಾಯಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಕಾಮಗಾರಿಯ ಅಂದಾಜು ವೆಚ್ಚ, ಕೊಠಡಿಗಳ ಅಳತೆಯನ್ನು ಮತ್ತೊಮ್ಮೆ ಪರಿಶೀಲಿಸಲು ಸಿಎಂ ಸೂಚಿಸಿದ್ದಾರೆ. ಅನುಭವ ಮಂಟಪ ಸ್ಥಾಪನೆಗೆ ರೂ.100 ಕೋಟಿಗಳನ್ನು ಒದಗಿಸಲು ಸಭೆಯಲ್ಲಿ ನಿರ್ಧರಿಲಾಯಿತು.

ಆಧಾರ:ವಿಜಯವಾಣಿ, ದಿನಾಂಕ:27.05.2020

## 76. ಲಾಕ್‌ಡೌನ್ 4.0 : 7 ಜಿಲ್ಲೆಗಳಲ್ಲಿ ಸೋಂಕಿನ ಶತಕ

ಲಾಕ್‌ಡೌನ್ 4.0 ಜಾರಿ ಬಳಿಕ ಅಂದರೆ ಕಳೆದ ಹತ್ತು ದಿನಗಳಲ್ಲಿ ಕೊರೊನಾ ಸೋಂಕು ಪ್ರಕರಣಗಳೂ ಶತಕದ ಗಡಿ ದಾಟಿದ್ದು, ಒಟ್ಟು 1,271 ಮಂದಿ ಸೋಂಕಿತರಾಗಿದ್ದಾರೆ, ಈ ಏಳು ಜಿಲ್ಲೆಗಳು ಆರಂಭದಲ್ಲಿ ಬೆರಳೆಣಿಕೆ ಸೋಂಕಿಗೆ ಸಾಕ್ಷಿಯಾಗಿದ್ದರೂ, ಈಗ ಒಂದೇ ಸಮನೆ ಸೋಂಕಿತರ ಸಂಖ್ಯೆ ಏರುಗತಿಯಲ್ಲಿ ಸಾಗಿದೆ.

ಲಾಕ್‌ಡೌನ್ 3.0 ಮೇ 17 ಕ್ಕೆ ಮುಕ್ತಾಯಗೊಂಡಾಗ ರಾಜ್ಯದಲ್ಲಿ ಮಾತ್ರ ಸೋಂಕು ನೂರರ ಗಡಿದಾಟಿತ್ತು. ಲಾಕ್‌ಡೌನ್ 4.0 (ಮೇ–18 ರಿಂದ 27 ವರೆಗೆ) ಜಾರಿ ಬಳಿಕ ಯಾದಗಿರಿ, ಮಂಡ್ಯ, ದಾವಣಗೆರೆ, ಹಾಸನ, ಚಿಕ್ಕಬಳ್ಳಾಪುರ, ಬೀದರ್, ಉಡುಪಿ ಸೇರಿ ಏಳು ಜಿಲ್ಲೆಗಳು ಶತಕದ ಗಡಿ ದಾಟಿವೆ. ಹತ್ತು ದಿನಗಳ ಸೋಂಕಿತರಲ್ಲಿ ಶೇ. 80ರಷ್ಟು ಮಂದಿ ಹೊರ ರಾಜ್ಯದ, ಶೇ.3ರಷ್ಟು ಮಂದಿ ಹೊರ ದೇಶ ಪ್ರಯಾಣ ಹಿನ್ನೆಲೆ ಹೊಂದಿದ್ದಾರೆ. ರಾಜ್ಯದ 29 ಜಿಲ್ಲೆಗಳಲ್ಲಿ ಶೇ.80 ರಷ್ಟು ಮಂದಿ ಹೊರ ರಾಜ್ಯದ, ಶೇ.3ರಷ್ಟು ಮಂದಿ ಹೊರದೇಶ ಪ್ರಯಾಣ ಹಿನ್ನೆಲೆ ಹೊಂದಿದ್ದಾರೆ. ರಾಜ್ಯದ 29 ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 2,418 ಸೋಂಕು ಪ್ರಕರಣಗಳು ದೃಢಪಟ್ಟಿದ್ದು, 1,588 ಸಕ್ರಿಯ ಪ್ರಕರಣಗಳಿವೆ.

ಒಟ್ಟಾರೆಯಾಗಿ ರಾಜ್ಯದ ಕೊರೊನಾ ವೈರಸ್ ಸೋಂಕಿತರ ಸಾವಿನ ಸರಣಿ ಮುಂದುವರಿದಿದ್ದು ಯಾದಗಿರಿ, ಬೀದರ್ ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಈ ಮೂಲಕ ಸೋಂಕು ಚಿಕಿತ್ಸೆ ಫಲಕಾರಿಯಾಗದೇ ಸಾವಿಗೀಡಾದವರ ಸಂಖ್ಯೆ 47ಕ್ಕೆ ಹೆಚ್ಚಳವಾಗಿದೆ.

ಸೋಂಕಿತರ ಪೈಕಿ ಶಿವಮೊಗ್ಗದಲ್ಲಿ 4, ಬೀದರ್‌ನಲ್ಲಿ 3, ಬೆಂಗಳೂರು ನಗರ ಇಬ್ಬರು, ಕಲಬುರ್ಗಿ ಇಬ್ಬರು, ಚಿಕ್ಕಮಗಳೂರು, ಹಾವೇರಿ, ಬಳ್ಳಾರಿ, ದಾವಣಗೆರೆ, ಧಾರವಾಡದಲ್ಲಿ ಒಬ್ಬರು ಸೇರಿ 17 ಮಂದಿ ಗುಣಮುಖರಾಗಿದ್ದಾರೆ. ಇಲ್ಲಿಯವರೆಗೂ ಒಟ್ಟಾರೆ 781 ಮಂದಿ ಗುಣಮುಖರಾಗಿದ್ದು, 1,588 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ

ಆಧಾರ:ಉದಯವಾಣಿ, ದಿನಾಂಕ:28.05.2020

## 77. ರೈತರ ಖಾತೆಗೆ ಶೀಘ್ರ 5 ಸಾವಿರ

ಮೆಕ್ಕೆಜೋಳ ಬೆಳೆದು ಸಂಕಷ್ಟದಲ್ಲಿರುವ ರೈತರ ಖಾತೆಗೆ ಸರ್ಕಾರ ರೂ.5 ಸಾವಿರ ಪರಿಹಾರ ಜಮೆ ಮಾಡಲಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ ಹೇಳಿದರು. ಮುಖ್ಯಮಂತ್ರಿ ರಾಜ್ಯದ 10 ಲಕ್ಷ ರೈತರಿಗೆ ರೂ.500 ಕೋಟಿಗಳಲ್ಲಿ ಮೆಕ್ಕೆಜೋಳಕ್ಕೆ ಪರಿಹಾರ ನೀಡುವ ಐತಿಹಾಸಿಕ ಘೋಷಣೆ ಮಾಡಿದ್ದಾರೆ. ರಾಜ್ಯದಲ್ಲಿ ರೈತರು ಕಳೆದ ಬಾರಿ ಮುಂಗಾರಿನಲ್ಲಿ 45,25,185 ಕ್ವಿಂಟಲ್, ಹಿಂಗಾರಿನಲ್ಲಿ 6,97,597 ಕ್ವಿಂಟಲ್ ಮೆಕ್ಕೆಜೋಳ

ಬೆಳೆದಿದ್ದಾರೆ. ಈ ರೈತರಿಗೆ ತಲಾ ಐದು ಸಾವಿರ ರೂ. ಪರಿಹಾರ ಬರಲಿದೆ. ಇದಕ್ಕೆ ಮಾರ್ಗಸೂಚಿ ಸಿದ್ಧವಾಗಿದೆ. ರೈತರ ಪಂಪ್‌ಸೆಟ್‌ಗೆ ಮೀಟರ್ ಅಳವಡಿಸುವ ಕುರಿತಂತೆ ವಿದ್ಯುತ್ ಬಿಲ್ ಕಾಯ್ದೆ ತಿದ್ದುಪಡಿಗೆ ಕೇಂದ್ರ ಸರ್ಕಾರ ಕೊಟ್ಟ ಎಲ್ಲ ಸಲಹೆಗಳನ್ನು ಒಪ್ಪಲು ಸಾಧ್ಯವಾಗಲ್ಲ. ಅದಕ್ಕೆ ಪ್ರತ್ಯೇಕತೆಗೆ ನಮ್ಮತನ ಉಳಿಸಿಕೊಳ್ಳುತ್ತೇವೆ. ಮುಖ್ಯಮಂತ್ರಿಯವರು ಸಮಿತಿ ರಚಿಸಿದ್ದಾರೆ. ಸಮಿತಿ ವರದಿಯನ್ನು ಕೇಂದ್ರಕ್ಕೆ ಕಳುಹಿಸಲಿದ್ದಾರೆ ಹಾಗೂ ಗ್ರಾಮ ಪಂಚಾಯತ್ ಸದಸ್ಯರ ನಾಮನಿರ್ದೇಶನ ವಿಚಾರ ಕ್ಯಾಬಿನೆಟ್ ಮುಂದೆ ಬರಲಿದೆ ಎಂದರು.

ಆಧಾರ:ಉದಯವಾಣಿ, ದಿನಾಂಕ:28.05.2020

## 78. ಹೆಲ್ತ್ ರಿಜಿಸ್ಟರ್ ಯೋಜನೆಗೆ ಚಾಲನೆ

'ಆರೋಗ್ಯ ಕರ್ನಾಟಕ'ಕ್ಕೆ ವೇದಿಕೆ ಕಲ್ಪಿಸಲಿರುವ 'ಹೆಲ್ತ್ ರಿಜಿಸ್ಟರ್' ಯೋಜನೆ ಅನುಷ್ಠಾನಕ್ಕೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ. ಸುಧಾಕರ್ ಚಾಲನೆ ನೀಡಿ, ರಾಜ್ಯ ಸರ್ಕಾರ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಹೆಲ್ತ್ ರಿಜಿಸ್ಟರ್ ಯೋಜನೆ ಸಂಬಂಧ ಆರೋಗ್ಯ ವಲಯದ ತಜ್ಞರ ಜೊತೆ ಮೊದಲ ಸಭೆ ನಡೆಸಿ ಮಾಹಿತಿ ವಿನಿಮಯ ಮಾಡಿಕೊಂಡರು.

ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದು ಗಣತಿ ಮಾದರಿ ಮನೆ ಮನೆಗೂ ತೆರಳಿ ಮಾಹಿತಿ ಪಡೆಯಬೇಕಿರುವ ಕಾರ್ಯಕ್ರಮ. ಪ್ರಾಯೋಗಿಕವಾಗಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಯೋಜನೆ ಜಾರಿಗೊಳಿಸಲಾಗುವುದು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ರಾಜೀವ್ ಗಾಂಧಿ ಆರೋಗ್ಯ ವಿವಿಯ ಡಾ.ಸಚ್ಚಿದಾನಂದ, ವೈದ್ಯಕೀಯ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ.ಗಿರೀಶ್, ಆರೋಗ್ಯ ಇಲಾಖೆ ಜಂಟಿ ನಿರ್ದೇಶಕ ಡಾ.ಪ್ರಕಾಶ್, ಬೆಂಗಳೂರು ವಿವಿ ಮಾಜಿ ಕುಲಪತಿ ಡಾ. ಪ್ರಭುದೇವ್, ಸಾರ್ವಜನಿಕ ಆರೋಗ್ಯ ವಿಭಾಗದ ತಜ್ಞರಾದ ಡಾ:ಎಂ.ಕೆ ಸುದರ್ಶನ್, ತಜ್ಞವೈದ್ಯರು ಹಾಜರಿದ್ದರು.

ಆಧಾರ:ಉದಯವಾಣಿ, ದಿನಾಂಕ:28.05.2020

## 79. ತ್ಯಾಜ್ಯ : 10 ಗ್ರಾಮ ಪಂಚಾಯತ್‌ಗಳಿಗೆ ಜಾಗ ಮಂಜೂರು

ನಗರ ಜಿಲ್ಲಾ ಪಂಚಾಯತ್‌ನ ಹಲವು ಪ್ರದೇಶಗಳು ಬಿಬಿಎಂಪಿಗೆ ಹೊಂದಿಕೊಂಡಿದ್ದು, ಸಾಕಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿರುವ ತ್ಯಾಜ್ಯ ಸಮರ್ಪಕ ನಿರ್ವಹಣೆಗೆ ಬೆಂಗಳೂರಿನ ಉತ್ತರ ತಾಲ್ಲೂಕಿನ 10 ಗ್ರಾಮ ಪಂಚಾಯತ್‌ಗಳಿಗೆ ಜಾಗ ಮಂಜೂರು ಮಾಡಲಾಗಿದೆ.

ಘನ ತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪನೆಗಾಗಿ ಹಣ ಬಿಡುಗಡೆ ಮಾಡಲು ಮುಂದಾಗಿದೆ. ಬೆಂಗಳೂರು ಉತ್ತರ ತಾಲ್ಲೂಕಿನ ವ್ಯಾಪ್ತಿಯ ಆಲೂರು, ದಾಸನ ಪುರ, ಹುಸ್ಕೂರು, ಕಿತ್ತನಹಳ್ಳಿ, ಸೊಣ್ಣಪ್ಪನಹಳ್ಳಿ, ಸಾತನೂರು, ಕಣ್ಣೂರು ದೊಡ್ಡ ಗುಬ್ಬಿ ಲಕ್ಷ್ಮೀಪುರದಲ್ಲಿ ಸಮರ್ಪಕ ಘನತ್ಯಾಜ್ಯ ನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳು ಭೂಮಿಯನ್ನು ಮಂಜೂರು ಮಾಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಸುಮಾರು 96 ಗ್ರಾಮ ಪಂಚಾಯತ್‌ಗಳಿವೆ. ಈ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಕಸದ ಸಮರ್ಪಕ ನಿರ್ವಹಣೆಗೆ ಜಿಲ್ಲಾಡಳಿತ ಪಣತೊಟ್ಟಿದೆ. ರಾಜಾನುಕುಂಟೆ ಸೇರಿದಂತೆ 5 ಗ್ರಾಮ ಪಂಚಾಯತ್‌ಗಳಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳ ಸ್ಥಾಪನೆ ಮಾಡಿದೆ. ಈಗ ಮತ್ತೆ ಹತ್ತು ಗ್ರಾಮ ಪಂಚಾಯತ್‌ಗಳಲ್ಲಿ ಘಟಕ ಸ್ಥಾಪನೆಗೆ ಹೆಜ್ಜೆಯಿರಿಸಿದೆ.

ಈ ಹಿಂದೆ ಹಲವು ಕಡೆಗಳಲ್ಲಿ ಜಾಗದ ಸಮಸ್ಯೆ ಉಂಟಾಗಿತ್ತು. ಕೆಲವು ಕಡೆಗಳಲ್ಲಿ ಜಾಗ ಇದ್ದರೂ ಆ ಬಗ್ಗೆ ತಕರಾರು ಶುರುವಾಗಿತ್ತು. ಇದನ್ನು ಮನಗೊಂಡು ನಗರ ಜಿಲ್ಲಾಧಿಕಾರಿಗಳು ಘನತ್ಯಾಜ್ಯ ವಿಲೇವಾರಿ ಸಂಬಂಧ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದ್ದರು. ಈ ಸಮಿತಿ ವರದಿ ನೀಡಿದ ನಂತರ ಹತ್ತು ಗ್ರಾಮ ಪಂಚಾಯತ್‌ಗಳಲ್ಲಿ ಘನ ತ್ಯಾಜ್ಯ ನಿರ್ವಹಣೆಗೆ ಜಾಗ ಮಂಜೂರಾತಿ ದೊರೆತಿದೆ.

ಜಾಗ ಮಂಜೂರಾತಿಯಾಗಿರುವ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪನೆ ಕಾರ್ಯ ಶೀಘ್ರವಾಗಿ ನಡೆಯಲಿದೆ. ಮುಂದಿನ ದಿನಗಳಲ್ಲಿ ಹಂತ–ಹಂತವಾಗಿ ಭೂಮಿ ಗುರುತಿಸುವ ಕೆಲಸ ನಡೆಯಲಿದೆ ಎಂದು ನಗರ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಮಾಹಿತಿ ನೀಡಿದರು.

ಜಾಗ ಮಂಜೂರಾಗಿರುವ ಗ್ರಾಮ ಪಂಚಾಯತ್‌ಗಳಿಗೆ ಘನತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪನೆಗಾಗಿ ತಲಾ ರೂ.20 ಲಕ್ಷ ಅನುದಾನವನ್ನು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಬಿಡುಗಡೆ ಮಾಡಲಾಗುವುದು. ಆರಂಭಿಕ ಹಂತದಲ್ಲಿ ರೂ.10 ಲಕ್ಷ ಸಂಪೂರ್ಣ ಕಾರ್ಯ ಮುಗಿದ ನಂತರ ರೂ.10 ಲಕ್ಷ ಬಿಡುಗಡೆ ಮಾಡಲಾಗುವುದು ಎಂದು ಜಿಲ್ಲಾ ಪಂಚಾಯತ್‌ನ ಸ್ವಚ್ಛ ಭಾರತ್ ಮಿಷನ್ ವಿಭಾಗದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಆಧಾರ:ಉದಯವಾಣಿ, ದಿನಾಂಕ:28.05.2020

## 80. ಬೆಂಗಳೂರು ಕೇಂದ್ರ ವಿವಿ ಅಭಿವೃದ್ಧಿಗೆ 150 ಕೋಟಿ

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್ ಅಶ್ವತ್ಥನಾರಾಯಣರವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಅಭಿವೃದ್ಧಿ ಕುರಿತ ಪರಿಶೀಲನಾ ಸಭೆ ನಡೆಸಿದ ನಂತರ ಮಾತನಾಡಿ ವಿವಿಯನ್ನು ವಿಶ್ವದರ್ಜೆಗೆ ಏರಿಸಲು ರೂಪಿಸಿರುವ ಪ್ರಸ್ತಾವನೆಗೆ ಆದಷ್ಟು ಬೇಗ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು. ವಿಶ್ವವಿದ್ಯಾಲಯದಲ್ಲಿ 11 ಎಕರೆ ಜಾಗವಿದ್ದು, ಅಲ್ಲಿ ಶೈಕಣಿಕ ಹಾಗೂ ಕ್ರೀಡಾ ಸಮುಚ್ಚಯಗಳ ನಿರ್ಮಾಣ ಮಾಡಲಾಗುವುದು.

ಮೊದಲ ಹಂತದಲ್ಲಿ ರೂ.100 ಕೋಟಿ ಹಾಗೂ ಕ್ರೀಡಾ ಸೌಲಭ್ಯಕ್ಕೆ ರೂ.50 ಕೋಟಿ ಮೀಸಲಿಡಲಾಗುವುದು. 18 ತಿಂಗಳಲ್ಲಿ ಯೋಜನೆ ಪೂರ್ಣಗೊಳಿಸಲಿದ್ದೇವೆ ಎಂದರು. ವಿವಿಯಲ್ಲಿ ಪ್ರತ್ಯೇಕ ಕ್ರೀಡಾ ಘಟಕ ನಿರ್ಮಿಸಿ, ಮಲ್ಟಿಗೇಮ್ ಕ್ರೀಡಾಂಗಣದ ಸೌಕರ್ಯ ಒದಗಿಸಲಾಗುವುದು. ಮಳೆ ನೀರು ಸಂಗ್ರಹಕ್ಕೆ 4–5 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಿಸಿ ಪುನರ್ ಬಳಕೆಗೆ ಆದ್ಯತೆ ನೀಡಲಾಗುವುದು. ಸೌರ ಶಕ್ತಿ ಉತ್ಪಾದನಾ ಘಟಕವನ್ನು ನಿರ್ಮಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವರು ತಿಳಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:28.05.2020

## 81. ಸಂಚಾರಿ ಸ್ವ್ಯಾಬ್ ಬೂತ್‌ಗೆ ಚಾಲನೆ

ಬೆಂಗಳೂರು ನಗರದಲ್ಲಿ ಕೊರೋನಾ ಸೋಂಕಿತರು ಮತ್ತು ಶಂಕಿತರ ಮಾದರಿಗಳ ಪರೀಕ್ಷೆಯನ್ನು ತ್ವರಿತವಾಗಿ ನಡೆಸಲು ಅನುವಾಗುವಂತೆ ವಿಶಿಷ್ಟ ವಿನ್ಯಾಸದ ಸಂಚಾರಿ ಸ್ವ್ಯಾಬ್ ಸಂಗ್ರಹ ಬೂತ್‌ಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ:ಕೆ.ಸುಧಾಕರ್ ಅವರು ಚಾಲನೆ ನೀಡಿದರು.

ಲ್ಯಾಮ್ ರಿಸರ್ಚ್ ಪ್ರೈವೇಟ್ ಲಿಮಿಟೆಡ್‌ನ ಇಂಜಿನಿಯರ್‌ಗಳು ಮತ್ತು ವಿವಿಧ ತಜ್ಞರ ಸಹಯೋಗದಲ್ಲಿ ಸಿದ್ಧಪಡಿಸಿರುವ ವಿಶಿಷ್ಟ ವಿನ್ಯಾಸದ ಗ್ಲಾಸ್ ಬಾಕ್ಸ್ ಟೆಸ್ಟಿಂಗ್ ಬೂತ್‌ಗಳನ್ನು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಉದ್ಘಾಟಿಸಿದರು.

ಕಂಟೈನ್‌ಮೆಂಟ್ ಪ್ರದೇಶಕ್ಕೂ ತೆರಳಿ ಪರೀಕ್ಷಿಸುವ ಹಾಗೂ ಪರೀಕ್ಷೆಗೆ ಒಳಗಾಗುವವರಿಗೆ ಸೋಂಕು ತಗುಲುವ ಅಪಾಯವಿಲ್ಲದೆ ಸುರಕ್ಷಿತವಾಗಿ ಸ್ವಾಬ್ ಸಂಗ್ರಹಿಸಲು ಅನುವಾಗುವಂತೆ ಬೂತ್‌ನ್ನು ಸಿದ್ಧಪಡಿಸಿದ್ದಾರೆ. ಗ್ಲಾಸ್ ಬಾಕ್ಸ್ ಒಳಗಿನಿಂದ ಮಾದರಿಗಳನ್ನು ಸ್ವೀಕರಿಸುವ ವಿನ್ಯಾಸ ಹೊಂದಿರುವ ಈ ಬೂತ್‌ಗಳಲ್ಲಿ ಸೋಂಕಿತ ಅಥವಾ ಶಂಕಿತ ವ್ಯಕ್ತಿಗಳು ಹೊರಗಿನಿಂದಲೇ ಗಂಟಲು ದ್ರವ ಮಾದರಿ ನೀಡಬಹುದಾಗಿದೆ. ಅಲ್ಲದೆ, ನೇರ ಸಂಪರ್ಕವಿಲ್ಲದೆ ಶಂಕಿತರ ರಕ್ತ ಮಾದರಿಗಳನ್ನು ಪಡೆಯಬಹುದಾಗಿದೆ.

ಬೂತ್‌ನಿಂದಾಗಿ ಪಿಪಿಇ ಕಿಟ್ ಬಳಕೆಯ ಅಗತ್ಯತೆ ಇಲ್ಲದೆ ಕಡಿಮೆ ಸಿಬ್ಬಂದಿಯಿಂದಲೇ ಕಾರ್ಯನಿರ್ವಹಿಸಬಹುದು. ಇದರಿಂದ ಪರೀಕ್ಷಾ ವೆಚ್ಚವನ್ನು ಗಣನೀಯವಾಗಿ ಕಡಿಮೆ ಮಾಡಲಿವೆ. ಇದು ಕೊರೊನಾ ವಿರುದ್ಧದ ಸಮರದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಕೊರೊನಾ ವಿರುದ್ಧದ ಹೋರಾಟದಲ್ಲಿ ಆರಂಭದಿಂದಲೂ ಪರೀಕ್ಷೆಗೆ ಹೆಚ್ಚಿನ ಒತ್ತು ನೀಡುತ್ತಿರುವುದರಿಂದಲೇ ನಮ್ಮ ರಾಜ್ಯದಲ್ಲಿ ಮರಣ ಪ್ರಮಾಣ ಕಡಿಮೆಯಾಗಿದೆ ಎಂದರು.

ಬೂತ್‌ಗಳನ್ನು ಗಡಿಭಾಗದ ಚೆಕ್ ಪೋಸ್ಟ್‌ಗಳಲ್ಲಿ ಮತ್ತು ಸೋಂಕು ಹೆಚ್ಚಿರುವ ಹಾಟ್ ಸ್ಪಾಟ್‌ಗಳಲ್ಲಿ ಪರಿಣಾಮಕಾರಿಯಾಗಿ ಬಳಸಬಹುದು ಎಂದು ಸಲಹೆ ನೀಡಿದರು. ವಿಕ್ಟೋರಿಯಾ ಆವರಣದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಗ್ಯಾಸ್ಟ್ರೋಎಂಟೆರ್ನಾಲಜಿಯ ಕಟ್ಟಡದ ಪರಿವೀಕ್ಷಣೆ ಮತ್ತು ಕೊರೊನಾ ವಾರ್ಡ್ ಆಗಿ ಪರಿವರ್ತಿತವಾಗಿರುವ ಮಿಂಟೋ ಆಸ್ಪತ್ರೆಯನ್ನು ವೀಕ್ಷಿಸಿದರು.

ಆಧಾರ:ಕನ್ನಡಪ್ರಭ, ದಿನಾಂಕ:29.05.2020

## 82. ಮಿಡತೆ ನಿಯಂತ್ರಣಕ್ಕೆ ರಾಜ್ಯ ಸಿದ್ಧ

ಕರ್ನಾಟಕಕ್ಕೆ ಆ ಮಾರಕ ಮಿಡತೆ ಹಾವಳಿ ಸಾಧ್ಯತೆ ತೀರ ಕಡಿಮೆಯಿದ್ದು, ರೈತರು ಗಾಬರಿಗೊಳ್ಳುವ ಅವಶ್ಯಕತೆಯಿಲ್ಲ, ಒಂದು ವೇಳೆ ಗಾಳಿಯ ದಿಕ್ಕು ಬದಲಾಗದೆ ಮಿಡತೆಗಳೇನಾದರೂ ರಾಜ್ಯಕ್ಕೆ ದಾಳಿ ಇಟ್ಟರೂ ಅವುಗಳನ್ನು ನಿಯಂತ್ರಿಸಲು ಅಗತ್ಯ ಕಾರ್ಯಾಚರಣೆ ವಿಧಾನಗಳ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕೃಷಿ ಸಚಿವ ಬಿ.ಸಿ ಪಾಟೀಲ್ ತಿಳಿಸಿದರು. ವಿವಿಧ ರಾಜ್ಯಗಳಲ್ಲಿ ದಾಳಿ ಮಾಡುತ್ತಿರುವ ಮಿಡತೆ ಹಾವಳಿ ರಾಜ್ಯಕ್ಕೆ ಬಾಧಿಸದಂತೆ ತೆಗೆದುಕೊಳ್ಳಬಹುದಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಸಚಿವರು ವಿಧಾನ ಸೌಧದಲ್ಲಿ ಕೃಷಿ ಅಧಿಕಾರಿಗಳು, ಸಂಶೋಧಕರು, ಕೀಟಶಾಸ್ತ್ರಜ್ಞರೊಂದಿಗೆ ಸಭೆ ನಡೆಸಿದರು. ಮಿಡತೆಗಳ ಪಸರಿಸುವಿಕೆ ಗಾಳಿ ಹಾಯುವ ದಿಕ್ಕನ್ನು ಅವಲಂಬಿಸಿರುತ್ತದೆ. ಕೃಷಿತಜ್ಞರ ಪ್ರಕಾರ ಕರ್ನಾಟಕಕ್ಕೆ ಮಿಡತೆ ಹಾವಳಿ ಸಾಧ್ಯತೆ ಕಡಿಮೆಯಿದೆ. ಮೇ 26 ರಿಂದ ಎರಡು ದಿನಗಳು ಮಾತ್ರ ದಕ್ಷಿಣಾಭಿಮುಖವಾಗಿ ಗಾಳಿ ಬೀಸುತ್ತಿದ್ದು, ಮೇ 30ರ ವೇಳೆಗೆ ಅದರ ದಿಕ್ಕು ಬದಲಾಗುವ ಸಾಧ್ಯತೆಯಿದೆ. ಹಾಗೂ ಬೀದರ್ ಗಡಿಯಿಂದ ಮಿಡತೆಗಳು ಸುಮಾರು 450 ಕಿ.ಮೀ. ದೂರದಲ್ಲಿರುವುದರಿಂದ ರಾಜ್ಯ ಮುಟ್ಟುವ ಸಾಧ್ಯತೆ ಬಹಳ ಕಡಿಮೆ ಇದೆ ಎಂದರು.

ಮುಂಜಾಗ್ರತಾ ಕ್ರಮವಾಗಿ ಮಹಾರಾಷ್ಟ್ರದ ಕೃಷಿ ಆಯುಕ್ತರೊಂದಿಗೆ ರಾಜ್ಯದ ಕೃಷಿ ಆಯುಕ್ತರು ಗಂಟೆಗೊಮ್ಮೆ ಮಿಡತೆಗಳ ಚಲನವಲನಗಳ ಬಗ್ಗೆ ಮಾಹಿತಿ ಪಡೆಯುತ್ತಿದ್ದಾರೆ. ಒಂದು ವೇಳೆ ಗಾಳಿ ದಿಕ್ಕು ಬದಲಾಗದೇ ಮಿಡತೆಗಳು ರಾಜ್ಯ ಪ್ರವೇಶಿಸಿದರೆ ಅವುಗಳ ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳ ಬಗ್ಗೆ ಅಭಿವೃದ್ಧಿ ಆಯುಕ್ತರ ನೇತೃತ್ವದ ಸಭೆ ನಡೆಸಿ ಎಸ್‌ಓಪಿ (ಸ್ಟ್ಯಾಂಟರ್ಡ್ ಆಪರೇಟ್ ಪ್ರೋಸೀಜರ್) ಸಿದ್ಧಪಡಿಸಲಾಗಿದೆ. ಅಗತ್ಯ ಬಿದ್ದರೆ ತಕ್ಷಣ ಕಾರ್ಯಾಚರಣೆ ಆರಂಭಿಸಲು ಸೂಚಿಸಲಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:29.05.2020

## 83. ಸ್ಫೋಟಗೊಂಡ ಕಿಟ್ ಅವ್ಯವಹಾರ ಆರೋಪ

ನಗರದಲ್ಲಿನ ವಲಸೆ ಕಾರ್ಮಿಕರಿಗೆ ಆಹಾರದ ಕಿಟ್ ಹಂಚಿಕೆಯಲ್ಲಿನ ಅವ್ಯವಹಾರ ಆರೋಪ ಬಿಬಿಎಂಪಿ ಮಾಸಿಕ ಸಭೆಯಲ್ಲಿ ಕೋಲಾಹಲ ಸೃಷ್ಟಿಸಿತು. ಸುಮಾರು ಮೂರು ತಿಂಗಳ ನಂತರ ನಡೆದ ಮಾಸಿಕ ಸಭೆ ಆರಂಭವಾಗುತ್ತಿದ್ದಂತೆ ಪ್ರತಿಪಕ್ಷದ ನಾಯಕರು ಕೊರೊನಾ ತುರ್ತು ಅನುದಾನದಲ್ಲಿ ದುರ್ಬಳಕೆ ಆಗಿರುವ ಬಗ್ಗೆ ವಿಷಯ ಹೊತ್ತಿಸಿತು. ಪರಿಣಾಮ ಆರೋಪ–ಪ್ರತ್ಯಾರೋಪಗಳಲ್ಲೇ ಸಭೆ ಅಂತ್ಯಗೊಂಡಿತು.

2020–21ನೇ ಸಾಲಿನ ಪಾಲಿಕೆ ಆಯವ್ಯಯದಲ್ಲಿ ಸೋಂಕು ನಿರ್ವಹಣೆಗೆ ಮೀಸಲಿಟ್ಟ ಅನುದಾನ ಇನ್ನು ಬಿಡುಗಡೆಯಾಗಿಲ್ಲ, ಕೇಂದ್ರ ಸರ್ಕಾರದ 20 ಲಕ್ಷ ಕೋಟಿ ರೂ. ಪ್ಯಾಕೇಜ್ ಕೇವಲ ಹೆಸರಿಗಷ್ಟೇ. ಇದೊಂದು ಹಗರಣ' ಎಂದು ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜಿದ್ ಗಂಭೀರ ಆರೋಪ ಮಾಡಿದರು. ಆಕ್ಷೇಪ ವ್ಯಕ್ತಪಡಿಸಿದ ಆಡಳಿತ ಪಕ್ಷದ ನಾಯಕರು, 'ಹಗರಣವಾಗುವುದಕ್ಕೆ ಇದೇನೂ 2ಜಿ ಅಲ್ಲ' ಎಂದು ತಿರುಗೇಟು ನೀಡಿದರು.

ಬಿಬಿಎಂಪಿ ಆಯುಕ್ತ ಬಿ.ಎಚ್.ಅನಿಲ್‌ಕುಮಾರ್ ಮಾತನಾಡಿ, 'ನಗರದಲ್ಲಿನ ವಲಸೆ ಕಾರ್ಮಿಕರಿಗೆ ಆಹಾರದ ಕಿಟ್ ನೀಡಲು ನಿರ್ಧರಿಸಲಾಯಿತು. ಇದರಲ್ಲಿ ಯಾವುದೇ ಲೋಪವಾಗಿಲ್ಲ' ಪಾರದರ್ಶಕವಾಗಿ ಆಹಾರದ ಕಿಟ್ ಹಂಚಲಾಗಿದೆ ಎಂದು ಸ್ಪಷ್ಟನೆ ನೀಡಿದರು.

ಅಕ್ಷಯ ಪಾತ್ರೆ ಪ್ರತಿಷ್ಠಾನದ ಮೂಲಕ ಒಂದು ಲಕ್ಷ ವಲಸೆ ಕಾರ್ಮಿಕರಿಗೆ ಆಹಾರದ ಕಿಟ್ ನೀಡಲು ನಿರ್ಧರಿಸಲಾಯಿತು. ಇದರಲ್ಲಿ 5 ಕೆ.ಜಿ. ಅಕ್ಕಿ, ಎರಡು ಕೆ.ಜಿ.ಬೇಳೆ, ಅರ್ಧ ಲೀ. ಅಡುಗೆ ಎಣ್ಣೆ, ಚನ್ನದಾಲ್ ಅರ್ಧ ಕೆ.ಜಿ, ಖಾರದ ಪುಡಿ ಮತ್ತು ಉಪ್ಪು, ಸಕ್ಕರೆ ಅರ್ಧ ಕೆ.ಜಿ. ಹಾಗೂ ರಸಂ ಪೌಡರ್ ಒಳಗೊಂಡ

ಆಹಾರದ ಕಿಟ್ ನೀಡಲಾಗಿದೆ. 5 ಕೆ.ಜಿ. ಅಕ್ಕಿಯನ್ನು ಕರ್ನಾಟಕ ಆಹಾರ ಸರಬರಾಜು ವೆಚ್ಚ ತೆಗೆದುಕೊಂಡರೆ ಕಡಿಮೆ ಬೆಲೆ ಬೀಳಲಿದೆ ಎನ್ನುವ ಉದ್ದೇಶದಿಂದ ಖರೀದಿಸಲಾಯಿತು. ಅಕ್ಷಯ ಪಾತ್ರೆಯಿಂದ ಹಂಚಿಕೆ ಮಾಡಲಾದ ಒಂದು ಲಕ್ಷ ಕಿಟ್‌ನಲ್ಲಿ 80 ಸಾವಿರ ಕಿಟ್‌ಗಳಿಗೆ ಕಾರ್ಮಿಕ ಇಲಾಖೆಯಿಂದ ಹಣ ನೀಡಲಾಗಿದೆ. ಉಳಿದ 20 ಸಾವಿರ ಆಹಾರದ ಕಿಟ್‌ಗಳನ್ನು ಮಾತ್ರ ಅಕ್ಷಯ ಪಾತ್ರೆ ಉಚಿತವಾಗಿ ನೀಡಿದೆ ಎಂದು ಮಾಹಿತಿ ನೀಡಿದರು.

ಕಾರ್ಮಿಕ ಇಲಾಖೆಯಲ್ಲಿ 68 ಸಾವಿರ ಜನ ಮಾತ್ರ ಹೆಸರು ನೋಂದಾಯಿಸಿ ಕೊಂಡಿದ್ದಾರೆ. ಇದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಕಾರ್ಮಿಕರು ಇರುವ ಹಿನ್ನೆಲೆಯಲ್ಲಿ ಬಿಬಿಎಂಪಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಆಹಾರದ ಕಿಟ್ ನೀಡಿದ್ದಾರೆ. ಮೊದಲ ಹಂತದಲ್ಲಿ 1,44,321 ಜನರ ಪಟ್ಟಿ ಮಾಡಿಕೊಳ್ಳಲಾಗಿತ್ತು. ಇಷ್ಟು ಜನರಿಗೆ ಆಹಾರ ಕಿಟ್ ಅನ್ನು ಕೇವಲ ಅಕ್ಷಯ ಪಾತ್ರೆಯಿಂದ ನೀಡುವುದು ತಡವಾಗುವ ಸಾಧ್ಯತೆ ಇದ್ದ ಹಿನ್ನೆಲೆಯಲ್ಲಿ ಮೆಟ್ರೋ ಕ್ಯಾಶ್ ಅಂಡ್ ಕ್ಯಾರಿ ಹಾಗೂ ಶ್ರೀಶಕ್ತಿ ಟ್ರೇಡರ್ಸ್‌ಗಳಿಗೆ ಆಹಾರದ ಕಿಟ್ ನೀಡುವ ಜವಾಬ್ದಾರಿ ನೀಡಲಾಯಿತು ಎಂದರು.

ಕಾರ್ಡ್ ಇಲ್ಲದವರೂ ಇದ್ದ ಹಿನ್ನೆಲೆಯಲ್ಲಿ ಎರಡನೇ ಹಂತದಲ್ಲಿ 1,8,111 ಜನರನ್ನು ಗುರುತಿಸಲಾಯಿತು. ಒಬ್ಬ ವಲಸೆ ಕಾರ್ಮಿಕರಿಗೆ 2 ದಿನಗಳಿಗಾಗುವಷ್ಟು ಆಹಾರದ ಕಿಟ್ ನೀಡಲಾಗುತ್ತಿದೆ. ಎರಡನೇ ಹಂತದಲ್ಲಿ 41,954 ಎಂದು ಗುರುತಿಸಲಾಗಿದೆ. ಇದಲ್ಲದೆ, ಕಂಟೈನ್ಮೆಂಟ್ ವಲಯಗಳಲ್ಲಿ ಪಡಿತರ ಚೀಟಿ ಇಲ್ಲದ 99 ಸಾವಿರ ಆಹಾರದ ಕಿಟ್ ಬೇಕಾಗುತ್ತದೆ ಎನ್ನುವುದು ಗುರುತಿಸಲಾಯಿತು. ಒಟ್ಟಾರೆ 3,93,415 ಕಿಟ್ ಬೇಕಾಗುತ್ತದೆ. ಇದರಲ್ಲಿ ಬಿಬಿಎಂಪಿಯಿಂದ 3.7 ಲಕ್ಷ ಆಹಾರದ ಕಿಟ್ ಹಾಗೂ ಕಾರ್ಮಿಕ ಇಲಾಖೆಯಿಂದ 68 ಸಾವಿರ ಕಿಟ್ ನೀಡಿದ್ದಾರೆ. ಒಟ್ಟಾರೆ 3,74 ಲಕ್ಷ ಆಹಾರದ ಕಿಟ್ ಹಂಚಿಕೆ ಮಾಡಲಾಗಿದೆ. ಈ ಕುರಿತು ವಿವರ ನೀಡಲಾಗುತ್ತದೆ ಎಂದರು.

ನಗರದಲ್ಲಿ ವಲಸೆ ಕಾರ್ಮಿಕರಿಗೆ ಆಹಾರದ ಕಿಟ್ ನೀಡುವ ವಿಚಾರದಲ್ಲಿ ಪಾಲಿಕೆಯಿಂದ ದೊಡ್ಡಮಟ್ಟದಲ್ಲಿ ಅವ್ಯವಹಾರವಾಗಿದೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು ಎಂದು ಪಾಲಿಕೆಯ ವಿರೋಧ ಪಕ್ಷದ ನಾಯಕರು ಆಗ್ರಹಿಸಿ ಪ್ರತಿಭಟಿಸಿದರು. ಪ್ರತಿಭಟನೆ ವೇಳೆ ಸಾಮಾಜಿಕ ಅಂತರ ಕಾಯ್ದುಕೊಂಡಿಲ್ಲ ಹಾಗೂ ಮಾಸ್ಕ್ ಧರಿಸಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ಪೊಲೀಸರು ಬಿಬಿಎಂಪಿ ವಿರೋಧ ಪಕ್ಷದ ನಾಯಕ ಅಬ್ದುಲ್ ವಾಜಿದ್ ಸೇರಿ ಆರು ಜನ ಕಾಂಗ್ರೆಸ್ ಸದಸ್ಯರಿಗೆ ನೋಟಿಸ್ ಜಾರಿಯಾಗಿದೆ.

ಆಧಾರ:ಉದಯವಾಣಿ, ದಿನಾಂಕ:29.05.2020

## 84. ಸಚಿವರ ಆಫೀಸ್‌ಗೆ ಇ– ಕಚೇರಿ

ರಾಜ್ಯದ ಎಲ್ಲ ಸಚಿವರ ಕಚೇರಿಗಳಲ್ಲಿ ಇ–ಕಚೇರಿ ತಂತ್ರಾಂಶ ಜಾರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶಿಸಿದೆ. ಎಲ್ಲ ಕಡತಗಳನ್ನು ಭೌತಿಕವಾಗಿ ಸಲ್ಲಿಸುವುದನ್ನು ತಡೆಹಿಡಿದು ಇ–ಕಚೇರಿ ಮೂಲಕ ಸಲ್ಲಿಸಲು ಎಲ್ಲಾ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಪಾರದರ್ಶಕತೆ, ಕಾಗದರಹಿತ ಕಛೇರಿ ವ್ಯವಸ್ಥೆಗಾಗಿ ಇ–ಕಛೇರಿ ಮಾಡಲಾಗಿದೆ.

ಸಚಿವರ ಕಚೇರಿಗಳಲ್ಲಿ ಆಪ್ತ ಕಾರ್ಯದರ್ಶಿಗಳು ಸಚಿವರ ಲಾಗಿನ್ ಐಡಿ ಬಳಸಿ ಪತ್ರ ವ್ಯವಹಾರ ಹಾಗೂ ಟಿಪ್ಪಣಿ ಡೌನ್‌ಲೋಡ್ ಮಾಡಿಕೊಂಡು, ಸಚಿವರ ಆದೇಶ, ಟಿಪ್ಪಣಿ ಪಡೆದುಕೊಳ್ಳಬೇಕು. ಅದನ್ನು ಸ್ಕ್ಯಾನ್ ಮಾಡಿ ಇ–ಕಚೇರಿ ಮೂಲಕ ಅಪ್ ಲೋಡ್ ಮಾಡಬೇಕು ಎಂದು ಸೂಚಿಸಲಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:30.05.2020

## 85. ಅಕ್ರಮ ಕಲ್ಲು ಗಣಿಗಾರಿಕೆ ತಡೆಗೆ ಸರ್ಕಾರ ಕ್ರಮ

ರಾಜ್ಯದಲ್ಲಿ ಖನಿಜ ಪರವಾನಗಿ ಇಲ್ಲದೆ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ನಿಯಂತ್ರಣಕ್ಕೆ ಡ್ರೋನ್ ಸಮೀಕ್ಷೆ ನಡೆಸುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಗತಿ ಪರಿಶೀಲನೆ ಸಭೆ ನಡೆಸಿದ್ದ ಸಿಎಂ ರಾಜ್ಯದಲ್ಲಿ ಅಕ್ರಮ ಕಲ್ಲುಗಣಿಗಾರಿಕೆ ತಡೆಯಬೇಕಿದ್ದು, ಇದಕ್ಕೆ ಅಗತ್ಯವಿರುವ ಡ್ರೋನ್ ಸಮೀಕ್ಷೆ ಕೈಗೊಳ್ಳಲು ಹೆಚ್ಚಿನ ಅನುದಾನ ಬಿಡುಗಡೆ ಮಾಡುವುದಾಗಿ ಭರವಸೆ ನೀಡಿದರು.

'ಸಿ' ವರ್ಗದ ಗಣಿ ಗುತ್ತಿಗೆಗಳನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಈ ಮೊದಲೇ ಗಣಿಗಾರಿಕೆಗೆ ಮಾಡಿರುವ ಅಂದಾಜು 800 ಮಿಲಿಯನ್ ಟನ್ ಅದಿರಿರುವ ಸ್ಟಾಕ್ ಯಾರ್ಡ್, ಬಳ್ಳಾರಿ, ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಮಾರಾಟವಾಗದೇ ಉಳಿದಿದೆ. ಈ ಅದಿರು ಮಾರಾಟಕ್ಕೆ ಇರುವ ತಾಂತ್ರಿಕ ತೊಂದರೆಗಳ ನಿವಾರಣೆಗೆ ಅಡ್ವೋಕೇಟ್ ಜನರಲ್ ಅವರೊಂದಿಗೆ ಚರ್ಚಿಸಬೇಕು. ಅರಣ್ಯ ಇಲಾಖೆಯಿಂದ ಶೀಘ್ರ ಅನುಮತಿ ಪಡೆದು ಕಬ್ಬಿಣದ ಅದಿರಿನ ಅನ್ವೇಷಣೆ ಕಾರ್ಯ ಕೈಗೊಳ್ಳುವಂತೆ ಅವರು ತಿಳಿಸಿದರು.

ಗಣಿಗಾರಿಕೆಯಿಂದ ತೊಂದರೆಗೊಳಗಾದ ಪ್ರದೇಶಗಳ ಅಭಿವೃದ್ಧಿ ಮತ್ತು ಜನರ ಜೀವನ ಮಟ್ಟ ಸುಧಾರಣೆಗೆ ಗುತ್ತಿಗೆದಾರರಿಂದ ರಾಜಧನ ಶೇ.10 ರಷ್ಟು ಮತ್ತು 30 ರಷ್ಟು ಅನ್ವಯವಾಗುವಂತೆ ಜಿಲ್ಲಾ ನಿಧಿಗೆ ಇದುವರೆಗೆ ರೂ.1928 ಕೋಟಿ ವಂತಿಗೆ ಸಂಗ್ರಹವಾಗಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಕೊರೊನಾ ಸೋಂಕು ತಡೆಗಟ್ಟಲು ಈ ಹಣ ಬಳಸಲಾಗುತ್ತಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವ ಸಿ.ಸಿ. ಪಾಟೀಲ್ ತಿಳಿಸಿದರು.

ರಾಜ್ಯದಲ್ಲಿ ಅಂದಾಜು 45 ದಶಲಕ್ಷ ಮೆಟ್ರಿಕ್ ಟನ್ ಮರಳಿನ ಬೇಡಿಕೆ ಇದ್ದು, 38 ದಶಲಕ್ಷ ಮೆಟ್ರಿಕ್ ಟನ್ ಪೂರೈಕೆಯಾಗುತ್ತಿದೆ. ಹೊಸ ಮರಳು ನೀತಿಯ ಅನುಷ್ಠಾನದಿಂದ ಸರ್ಕಾರಕ್ಕೆ ಹೆಚ್ಚಿನ ರಾಜಧನ ಸಂಗ್ರಹವಾಗಲಿದೆ ಎಂದು ಸಚಿವರು ತಿಳಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:30.05.2020

## 86. ಸಾರ್ವಜನಿಕ ಸ್ಥಳಗಳಲ್ಲಿ ತಂಬಾಕು ಉಗುಳುವಂತಿಲ್ಲ

ಸಾರ್ವಜನಿಕ ಸ್ಥಳಗಳಲ್ಲಿ ಜಗಿಯುವ ತಂಬಾಕು ಹಾಗೂ ಪಾನ್ ಮಸಾಲ ಉತ್ಪನ್ನ ಸೇವಿಸಿ ಉಗುಳುವುದನ್ನು ನಿಷೇಧಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ನಿಯಮ ಉಲ್ಲಂಘಿಸಿದರೆ ಕಾನೂನು ಕ್ರಮಕೈಗೊಳ್ಳುವ ಎಚ್ಚರಿಕೆ ನೀಡಿದೆ. ವಿಶ್ವ ತಂಬಾಕು ರಹಿತ ದಿನ ಅಂಗವಾಗಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಇತ್ತೀಚಿನ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ತಂಬಾಕು ಮತ್ತು ನಿಕೋಟಿನ್ ಉತ್ಪನ್ನಗಳನ್ನು ಬಳಕೆ ಮಾಡುವವರ ಪ್ರಮಾಣ ಶೇ.28ರಿಂದ 22ಕ್ಕೆ ಇಳಿದಿದೆ. ತಂಬಾಕು ಚಟದಿಂದ ಯುವ ಪೀಳಿಗೆಯನ್ನು ರಕ್ಷಿಸುವುದು, ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಸರ್ಕಾರ ಇಂತಹ ಕ್ರಮವನ್ನು ವಿಶ್ವ ತಂಬಾಕು ರಹಿತ ದಿನಾಚರಣೆಯ ಮುನ್ನಾ ದಿನವೇ ಕೈಗೊಂಡು ಈ ಕುರಿತು ಆದೇಶ ಹೊರಡಿಸಿದೆ.

ಜಗಿಯುವ ತಂಬಾಕು ಉತ್ಪನ್ನಗಳು, ನಿಕೋಟಿನ್ ಪದಾರ್ಥಗಳು ಹಾಗೂ ಪಾನ್ ಮಸಾಲ್ ಜಗಿದು ಉಗುಳುವುದನ್ನು ನಿಷೇಧ ಮಾತ್ರವಲ್ಲ ಪರಿಣಾಮಕಾರಿ ಅನುಷ್ಠಾನ ಹಾಗೂ ಉಲ್ಲಂಘಿಸಿದವರ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕಾನೂನು ರೀತ್ಯಾ ಅಗತ್ಯ ಕ್ರಮ ವಹಿಸುವುದಕ್ಕೂ ಸರ್ಕಾರ ಆದೇಶಿಸಲಾಗಿದೆ ಎಂದು ಆರೋಗ್ಯ ಸಚಿವರಾದ ಶ್ರೀರಾಮುಲು ತಿಳಿಸಿದರು.

ಆಧಾರ:ಉದಯವಾಣಿ, ದಿನಾಂಕ:31.05.2020

## 87. ತಳವಾರ, ಪರಿವಾರ ಎಸ್ಟಿಗೆ: ಗೆಜೆಟ್ ಅಧಿಸೂಚನೆಗೆ ಆದೇಶ

ರಾಜ್ಯದ ಕಾರವಾರ, ಬೆಳಗಾವಿ ಮತ್ತು ಧಾರವಾಡ ಜಿಲ್ಲೆಯಲ್ಲಿರುವ ಸಿದ್ದಿ ಸಮುದಾಯ ಸಹಿತ ತಳವಾರ, ಪರಿವಾರ ಜಾತಿಯನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆಗೊಳಿಸಲು ಕೇಂದ್ರ ಸರ್ಕಾರದ ಗೆಜೆಟ್ ಅಧಿಸೂಚನೆಯ ಅನುಸಾರ ರಾಜ್ಯದಲ್ಲೂ ಗೆಜೆಟ್ ಅಧಿಸೂಚನೆ ಹೊರಡಿಸಲು ಆದೇಶಿಸಲಾಗಿದೆ ಎಂದು ಕುಲಶಾಸ್ತ್ರೀಯ ಅಧ್ಯಯನದಂತೆ ಪರಿವಾರ ಮತ್ತು ತಳವಾರ ಜಾತಿಗಳು ನಾಯಕ ಮತ್ತು ನಾಯಕಡದ ಪರ್ಯಾಯವಾಗಿವೆ. ಈ ಪ್ರಸ್ತಾವನೆಯು ಕಳೆದ ಹಲವಾರು ದಶಕಗಳಿಂದ ಬೇಡಿಕೆಯಲ್ಲಿತ್ತು. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಎಲ್ಲ ಪೂರಕ ಮಾಹಿತಿಯನ್ನು ಸಲ್ಲಿಸಲಾಯಿತು. ಕೇಂದ್ರ ಸರ್ಕಾರವು ಈ ಪ್ರಸ್ತಾವನೆಯನ್ನು ಸಂಸತ್‌ನಲ್ಲಿ ಅಂಗೀಕರಿಸಿ, ಗೆಜೆಟ್ ಪ್ರಕಟಣೆಯನ್ನು ಹೊರಡಿಸುವಂತೆ ಆದೇಶಿಸಲಾಗಿದೆ. ಈ ಅಧಿಸೂಚನೆಯಂತೆ ಈ ಸಮುದಾಯದವರಿಗೆ ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರ ನೀಡಲು ಅವಕಾಶವಿರುತ್ತದೆ ಎಂದು ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ ತಿಳಿಸಿದರು.

ಆಧಾರ:ಉದಯವಾಣಿ, ದಿನಾಂಕ:31.05.2020

## 88. ಎರಡು ವರ್ಷಗಳಲ್ಲಿ ಹತ್ತು ಲಕ್ಷ ಮನೆ ನಿರ್ಮಾಣ

ರಾಜ್ಯದಲ್ಲಿ ಮುಂದಿನ ಎರಡು ವರ್ಷಗಳಲ್ಲಿ ನಗರ ಹಾಗೂ ಗ್ರಾಮೀಣ ಭಾಗ ಸೇರಿ ಹತ್ತು ಲಕ್ಷ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡುವ ಗುರಿ ಹೊಂದಲಾಗಿದೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ವಸತಿರಹಿತರಿಗೆ ಸೂರು ಒದಗಿಸಬೇಕು ಎಂಬುದು ಪ್ರಧಾನಿ ಮೋದಿ ಆಶಯ ಹಾಗೂ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಸಂಕಲ್ಪ ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಇಲಾಖೆ ಕಾರ್ಯಯೋಜನೆ ರೂಪಿಸಿದೆ. ವಸತಿ ಯೋಜನೆಗಳ ಸವಲತ್ತು ಅರ್ಹರಿಗೆ ತಲುಪಿಸಬೇಕು ಹಾಗೂ ದುರ್ಬಳಕೆಗೆ ಕಡಿವಾಣ ಹಾಕಬೇಕು ಎಂದು ಮುಖ್ಯಮಂತ್ರಿ ಸೂಚಿಸಿದ್ದರು. ಅದರಂತೆ ಐದು ಲಕ್ಷ ಮನೆಗಳು ರದ್ದಾಗಿದ್ದು, ಸರ್ಕಾರಕ್ಕೆ ರೂ.80,000 ಕೋಟಿ ಉಳಿತಾಯವಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಹತ್ತು ಲಕ್ಷ ಮನೆಗಳ ನಿರ್ಮಾಣಕ್ಕೆ ರೂ.10,000 ಕೋಟಿ ಬೇಕಾಗಲಿದೆ.

**ಪ್ರಧಾನ ಮಂತ್ರಿ ಟೌನ್‌ಶಿಪ್:** ಬೆಂಗಳೂರು ನಗರ ಜಿಲ್ಲೆ ಜಿಗಣಿ ಹೋಬಳಿಯ ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಬಳಿ 1,938 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಮೂಲ ಸವಲತ್ತು ಉಳ್ಳ 30,000 ನಿವೇಶನಗಳ ಪ್ರಧಾನಮಂತ್ರಿ ಟೌನ್‌ಶಿಪ್ ನಿರ್ಮಿಸಲಾಗುತ್ತಿದ್ದು, ಈಗಾಗಲೇ 37,000 ಅರ್ಜಿಗಳು ಸಲ್ಲಿಕೆಯಾಗಿವೆ.

ಟೌನ್‌ಶಿಪ್‌ನಲ್ಲಿ 100 ಎಕರೆ ವಿಸ್ತಾರದ ಪ್ರವಾಸಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಿದ್ದು, ಮುತ್ಯಾಲಮಡು ಬಳಸಿಕೊಂಡು ಸುಂದರ ಸರೋವರ ಹಾಗೂ ಅದರ ಮಧ್ಯದಲ್ಲಿ ಸ್ವಾಮಿ ವಿವೇಕಾನಂದರ 120 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದರು.

**ಕೊಳೆಗೇರಿ ಮುಕ್ತ ಕರ್ನಾಟಕದ ಗುರಿ:** ರಾಜ್ಯದ 2,700 ಕೊಳಚೆ ಪ್ರದೇಶಗಳಲ್ಲಿ ಹಂತ ಹಂತವಾಗಿ ಸುಸಜ್ಜಿತ ವಸತಿ ಬಡಾವಣೆ ನಿರ್ಮಿಸಿ ಕೊಳೆಗೇರಿ ಮುಕ್ತ ಕರ್ನಾಟಕವನ್ನಾಗಿ ಮಾಡುವ ಗುರಿಯಿದೆ. ಈ ನಿಟ್ಟಿನಲ್ಲಿ ಮೊದಲ ಭಾಗವಾಗಿ 757 ಕೊಳೆಗೇರಿಗಳಲ್ಲಿ 1.80 ಲಕ್ಷ ಮನೆಗಳನ್ನು ನಿರ್ಮಿಸಲು 2,700 ಎಕರೆ ಜಮೀನು ವಶಪಡಿಸಿಕೊಂಡಿದ್ದು, 48,000 ಮನೆಗಳ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದ್ದರೆ 39,000ಮನೆಗಳ ನಿರ್ಮಾಣಕ್ಕೆ ಟೆಂಡರ್ ಕರೆಯಲಾಗಿದೆ ಎಂದು ಹೇಳಿದರು.

**ರೇರಾಗೆ ಬಲ:** ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ (ರೇರಾ)ಗೆ ಇನ್ನಷ್ಟು ಶಕ್ತಿ ತುಂಬುವುದಕ್ಕಾಗಿ ಕೆಲವು ನಿಯಮಗಳ ಪರಿಷ್ಕರಣೆ ಅಗತ್ಯವಿದೆ. ಮುಖ್ಯವಾಗಿ ಖರೀದಿದಾರರ ಹಿತರಕ್ಷಣೆ ಹಾಗೂ ವಂಚಿಸಿದವರ ವಿರುದ್ಧ ಕಠಿಣ ಕ್ರಮವಹಿಸುವ ಚಿಂತನೆಯಿದೆ ಎಂದರು. ನಿಯಮಗಳ ಪರಿಷ್ಕರಣೆ ಪರಿಶೀಲಿಸಿ ವರದಿ ಸಲ್ಲಿಸಲಿದೆ. ನಂತರ ಸಚಿವ ಸಂಪುಟದ ಸಭೆ ಒಪ್ಪಿಗೆ ಪಡೆದು ಅಧಿವೇಶನದಲ್ಲಿ ಮಂಡಿಸಲು ಯೋಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಆಧಾರ:ಉದಯವಾಣಿ, ದಿನಾಂಕ:31.05.2020

## 89. ಖಾಸಗಿ ಸಹಭಾಗಿತ್ವಕ್ಕೆ ಇನ್ನು ಆದ್ಯತೆ

ಕೋವಿಡ್–19 ವೈರಸ್ ನಿಯಂತ್ರಣ ಹಿನ್ನೆಲೆಯಲ್ಲಿ ಅಯ್ದ 14 ಪ್ರಮುಖ ವಲಯಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಹೆಚ್ಚು ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕೆಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಸೌಕರ್ಯ ಅಭಿವೃದ್ಧಿ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕೋವಿಡ್–19 ವೈರಸ್ ನಿಯಂತ್ರಣ ಕಾಯ್ದೆ ಹಿನ್ನೆಲೆಯಲ್ಲಿ ಕೃಷಿ, ಶಿಕ್ಷಣ, ಇಂಧನ, ಆರೋಗ್ಯ, ನೀರಾವರಿ, ಪ್ರವಾಸೋದ್ಯಮ, ಕ್ರೀಡೆ ಮತ್ತು ಯುವಜನ, ಕೈಗಾರಿಕೆ, ಸಾರಿಗೆ ಮತ್ತು ಸಾಗಣೆ, ವಸತಿ, ಗ್ರಾಮೀಣಾಭಿವೃದ್ಧಿ ದೂರ ಸಂಪರ್ಕ ಸೇರಿ 14 ವಲಯಗಳಲ್ಲಿ ಪಿಪಿಪಿ ಮಾದರಿಯಡಿ ಮೂಲ ಸೌಕರ್ಯ ಯೋಜನೆಗಳನ್ನು ಕೈಗೊಳ್ಳಲು ಕೇಂದ್ರ ಸರ್ಕಾರ ಆದ್ಯತೆ ನೀಡಿದೆ. ರಾಜ್ಯದಲ್ಲೂ ಪಿಪಿಪಿ ಮಾದರಿಯಲ್ಲಿ ಈಗಾಗಲೇ ರೂ.500 ಕೋಟಿ ಮೌಲ್ಯದ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಹೇಳಿದರು.

ಹಾಸನ–ಮಂಗಳೂರು ರೈಲು ಅಭಿವೃದ್ಧಿ ಕಂಪನಿ, ಕುಡಚಿ–ಬಾಗಲಕೋಟೆ ರೈಲ್ವೆ ಯೋಜನೆಯ ಅನುಷ್ಠಾನದಲ್ಲಿನ ಅಡ್ಡಿಗಳನ್ನು ತ್ವರಿತವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ವಿಮಾನ ನಿಲ್ದಾಣಗಳ ಅಭಿವೃದ್ಧಿ, ಬೆಂಗಳೂರು ಸಿಗ್ನೇಚರ್ ಬಿಸ್ನೆಸ್ ಪಾರ್ಕ್ ಯೋಜನೆ ಜಾರಿಯಲ್ಲೂ ಉತ್ತಮ ಪ್ರಗತಿ ಸಾಧಿಸಲು ಗಮನ ಹರಿಸಬೇಕು. ಬೆಂಗಳೂರು ಸಬ್‌ಅರ್ಬನ್ ರೈಲು ಯೋಜನೆಗೆ ಕೇಂದ್ರ ಸರ್ಕಾರದಿಂದ ಅಂತಿಮ ಮಂಜೂರಾತಿಯನ್ನು ಶೀಘ್ರವಾಗಿ ಪಡೆಯಬೇಕಿದೆ. ಈ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಯವರು ಸೂಚನೆ ನೀಡಿದರು.

ಆಧಾರ:ಉದಯವಾಣಿ, ದಿನಾಂಕ:31.05.2020

## 90. ಮಳೆ ಅನಾಹುತ, ಜನರ ಸಮಸ್ಯೆಗಳಿಗೆ ಸ್ಪಂದಿಸದಿದ್ದರೆ ಕಠಿಣ ಕ್ರಮ : ಎಚ್ಚರಿಕೆ

ಮಳೆ ಅನಾಹುತಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ನಿಯಂತ್ರಣ ಕೊಠಡಿ, ಸಹಾಯವಾಣಿಗೆ ಬರುವ ದೂರುಗಳಿಗೆ ತಕ್ಷಣ ಸ್ಪಂದಿಸಬೇಕು. ಸಮಸ್ಯೆ ನಿವಾರಣೆಗೆ ನಿರ್ಲಕ್ಷ್ಯ ವಹಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಯವರು ಎಚ್ಚರಿಕೆ ನೀಡಿದರು.

ನಗರದಲ್ಲಿ ಮುಂಗಾರು ಮಳೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಅಧಿಕಾರಿಗಳೊಂದಿಗೆ ಅವರು ಸಭೆ ನಡೆಸಿ, ಮಳೆ ಹಾನಿ ತಡೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ತಾಕೀತು ಮಾಡಿದರು.

ಮಳೆಯಿಂದ ಇಬ್ಬರು ಮೃತಪಟ್ಟಿದ್ದು, ಪಾಲಿಕೆಯಿಂದ ಅವರ ಕುಟುಂಬಕ್ಕೆ ತಲಾ ರೂ.5 ಲಕ್ಷ ಪರಿಹಾರ ನೀಡಲಾಗಿದೆ. ಅಪಾಯಕಾರಿ ರೆಂಬೆ–ಕೊಂಬೆಗಳನ್ನು ಗುರುತಿಸಿ ತೆರವುಗೊಳಿಸುವ ಕೆಲಸ ನಿರಂತರವಾಗಿ ನಡೆಯಬೇಕು. ಮಳೆ ಗಾಳಿಯಿಂದ ಬಿದ್ದಿರುವ ಮರಗಳನ್ನು ಎರಡು ದಿನಗಳೊಳಗೆ ತೆರವು ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು,

ಬಿಬಿಎಂಪಿ, ಪೊಲೀಸ್, ಅರಣ್ಯ, ಸಾರಿಗೆ ಮತ್ತು ಅಗ್ನಿಶಾಮಕ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮರಗಳಡಿ ವಾಹನಗಳನ್ನು ನಿಲುಗಡೆ ಮಾಡದಂತೆ ಸಾರ್ವಜನಿಕರಿಗೆ ತಿಳಿ ಹೇಳಬೇಕು. ಪಾಲಿಕೆಯ ಎಂಟು ವಲಯಗಳಲ್ಲೂ ಮ್ಯಾನ್‌ಹೋಲ್‌ಗಳನ್ನು ಮುಚ್ಚಬೇಕು. ಜೆಟ್ಟಿಂಗ್ ಯಂತ್ರಗಳನ್ನು ಸಜ್ಜಾಗಿಟ್ಟು ಕೊಂಡಿರಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:31.05.2020

## 91. ದೇವಾಲಯ ತೆರೆಯಲು ಸಿದ್ಧತೆಗೆ ಧಾರ್ಮಿಕ ದತ್ತಿ ಇಲಾಖೆ ಸೂಚನೆ

ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ದೇವಾಲಯಗಳಲ್ಲಿ ಮುಂದಿನ ದಿನಗಳಲ್ಲಿ ಸಾರ್ವಜನಿಕರು, ಭಕ್ತಾಧಿಗಳಿಗೆ ದೇವರ ದರ್ಶನಕ್ಕೆ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಪೂರ್ವ ತಯಾರಿ ಮಾಡಿಕೊಳ್ಳುವಂತೆ ಇಲಾಖೆ ಸೂಚಿಸಿದೆ. ಕೊರೊನಾ ಸೋಂಕು ಹರಡುವುದನ್ನು ತಡೆಗಟ್ಟಲು ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಅಧಿಸೂಚಿತ ದೇವಾಲಯಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಸೂಚಿಸಿ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ದೇವಾಲಯಗಳಲ್ಲಿ ಸ್ವಚ್ಛತೆ ಕಾಪಾಡಲು ನಿತ್ಯ ಒಳ, ಹೊರ ಆವರಣಗಳಲ್ಲಿ ಸೋಂಕು ನಿವಾರಕಗಳನ್ನು ಸಿಂಪಡಿಸುವುದು. ಅಧಿಕಾರಿ/ನೌಕರರು ಕಡ್ಡಾಯವಾಗಿ ಮಾಸ್ಕ್ ಧರಿಸುವುದು, ಅರ್ಚಕರು, ಆಗಮಿಕರು, ಪರಿಚಾರಕರು, ಒಳಾಂಗಣ ಸಿಬ್ಬಂದಿ, ಒಳಾಂಗಣ ಹೊರತುಪಡಿಸಿ ಕಡ್ಡಾಯವಾಗಿ ಮಾಸ್ಕ್ ಧರಿಸುವುದು. ಪ್ರವೇಶ ದ್ವಾರಗಳಲ್ಲಿ ಉಷ್ಣತೆ ಪರೀಕ್ಷೆ ಕಡ್ಡಾಯ, ಸ್ಯಾನಿಟೈಸರ್‌ಗೆ ತಗಲುವ ವೆಚ್ಚವನ್ನು ದೇವಾಲಯ ನಿಧಿಯಿಂದ ಭರಿಸುವುದು. ಮಾಸ್ಕ್ ಇಲ್ಲವೇ ಬಾಯಿ ಮೂಗು ಮುಚ್ಚುವಂತೆ ಕರವಸ್ತ್ರಗಳನ್ನು ಕಡ್ಡಾಯವಾಗಿ ಧರಿಸಿದವರಿಗೆ ಮಾತ್ರ ಪ್ರವೇಶ. ಶೌಚಾಲಯಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸುವುದು.

ಆಧಾರ:ವಿಜಯ ಕರ್ನಾಟಕ, ದಿನಾಂಕ:31.05.2020

## 92. ಕೊರೊನಾ ಸಮಗ್ರ ಮಾಹಿತಿಗೆ ನ್ಯಾಸ್ಕಾಮ್ ಟೂಲ್

ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕೋವಿಡ್ ಪರಿಸ್ಥಿತಿ ನಿರ್ವಹಿಸಲು ಮುಂದಾಗಿರುವ ರಾಜ್ಯ ಸರ್ಕಾರ ನ್ಯಾಸ್ಕಾಮ್ ಸಹಯೋಗದಲ್ಲಿ ಅಭಿವೃದ್ಧಿಪಡಿಸಿದ ದತ್ತಾಂಶ ವಿಶ್ಲೇಷಣೆ ಸಾಧನವನ್ನು ಉಪ ಮುಖ್ಯಮಂತ್ರಿ ಡಾ:ಸಿ.ಎನ್. ಅಶ್ವತ್ಥನಾರಾಯಣರವರು ಬಿಡುಗಡೆ ಮಾಡಿದರು.

ಐಟಿ–ಬಿಟಿ ವಲಯದ ಪ್ರಮುಖರ ಜೊತೆ ನಡೆಸಿದ ವಿಡಿಯೊ ಕಾನ್ಫರೆನ್ಸ್‌ನಲ್ಲಿ ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್‌ವೇರ್ ಆ್ಯಂಡ್ ಸರ್ವೀಸಸ್ ಕಂಪನೀಸ್ (ನ್ಯಾಸ್ಕಾಮ್) ಅಭಿವೃದ್ಧಿಪಡಿಸಿದ ದತ್ತಾಂಶ ವಿಶ್ಲೇಷಣೆ ಸಾಧನವನ್ನು ಬಿಡುಗಡೆ ಮಾಡಿ, ಕೊರೊನಾ ಸೋಂಕು ಹರಡುವ ಸಾಧ್ಯತೆ ವಿವರ, ಸೋಂಕಿನ ಮೂಲ, ಅದರ ವರ್ಗೀಕರಣ, ಸೋಂಕಿನ ಪ್ರಮಾಣ, ಅಂಕಿ ಅಂಶದ ಮಾಹಿತಿ, ಸೋಂಕು ಪತ್ತೆ ಪರೀಕ್ಷೆ ವಿವರ, ಚಿಕಿತ್ಸೆ ಹಾಗೂ ಲಭ್ಯವಿರುವ ಮೂಲ ಸೌಕರ್ಯ, ಮಾನವ ಸಂಪನ್ಮೂಲದ ರಿಯಲ್ ಟೈಮ್ ಮಾಹಿತಿ ಒದಗಿಸುವ ಈ ಸಾಧನ ಕೋವಿಡ್ ನಿಯಂತ್ರಣದಲ್ಲಿ ದೊಡ್ಡ ಮಟ್ಟದ ಸುಧಾರಣೆಗೆ ನೆರವಾಗಬಲ್ಲದು ಎಂದರು.

ಬಿಬಿಎಂಪಿ ಹೆಲ್ತ್ ಕೇರ್ ಆಪ್ತಮಿತ್ರ ಸಹಾಯವಾಣಿಯ ಕೆಲಸದ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಕೋವಿಡ್ ನಿಯಂತ್ರಣದಲ್ಲಿ ಬೆಂಗಳೂರನ್ನು ಮಾದರಿ ನಗರ ಎಂದು ಕೇಂದ್ರ ಸರ್ಕಾರ ಗುರುತಿಸಿದೆ. ಇದರಲ್ಲಿ ಐಟಿ–ಬಿಟಿ ವಲಯದ ಕೊಡುಗೆ ಅಪಾರವಿದೆ. ಕೋವಿಡ್ ಸೋಂಕು ಬಹು ದಿನಗಳವರೆಗೆ ನಮ್ಮ ನಡುವೆ ಇರುವುದರಿಂದ ಆರೋಗ್ಯ ಕ್ಷೇತ್ರದ ಮೂಲ ಸೌಕರ್ಯ ಹೆಚ್ಚಿಸಿಕೊಳ್ಳಬೇಕು. ಆರೋಗ್ಯ ಸೇವೆಯನ್ನು ಡಿಜಿಟಲೈಸ್ ಮಾಡುವುದು ಬಹಳ ಮುಖ್ಯವಾಗಿದ್ದು, ಇದಕ್ಕೆ ಐಟಿ–ಬಿಟಿ ವಲಯದವರ ನೆರವು ಅಗತ್ಯ ಎಂದರು.

ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಅಧ್ಯಕ್ಷೆ ಡಾ:ಕಿರಣ್ ಮಜುಂದಾರ್, ಮಾಹಿತಿ ತಂತ್ರಜ್ಞಾನದ ವಿಷನ್ ಗ್ರೂಪ್ ಆಧ್ಯಕ್ಷ ಕ್ರಿಸ್ ಗೋಪಾಲಕೃಷ್ಣ, ನ್ಯಾಸ್ಕಾಮ್ ಅಧ್ಯಕ್ಷೆ ದೇಬ್ಜಾನಿ ಘೋಷ್ ಹಾಗೂ ಉಪಾಧ್ಯಕ್ಷ ವಿಶ್ವನಾಥನ್, ಇನ್‌ಫೋಸಿಸ್ ಸಿಇಓಗಳು ಪ್ರವೀಣ್ ರಾವ್ ಫ್ರಾಕ್ಟಲ್ ಮತ್ತು ಶ್ರೀಕಾಂತ್ ಮತ್ತು ಮೈಕ್ರೋಸಾಫ್ಟ್‌ನ ರೋಹೀಣಿ ಶ್ರೀವತ್ಸ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಭಾಗವಹಿಸಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:31.05.2020

## 93. ರೂ.500 ಕೋಟಿ ಮೌಲ್ಯದ ಪಿಪಿಪಿ ಯೋಜನೆಗಳಿಗೆ ಅಸ್ತು

ಕೇಂದ್ರ ಸರ್ಕಾರದ ನಿರ್ದೇಶನದ ಹಿನ್ನೆಲೆಯಲ್ಲಿ ಕೃಷಿ, ಶಿಕ್ಷಣ, ಆರೋಗ್ಯ ಒಳಗೊಂಡು ಒಟ್ಟು 14 ವಲಯಗಳಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಮುಖ್ಯಮಂತ್ರಿಯವರು ಸೂಚನೆ ನೀಡಿದ್ದಾರೆ.

ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೃಷಿ, ಶಿಕ್ಷಣ ಇಂಧನ, ಆರೋಗ್ಯ, ನೀರಾವರಿ, ಪ್ರವಾಸೋದ್ಯಮ ಕ್ರೀಡೆ ಮತ್ತು ಯುವಜನ ಕೈಗಾರಿಕೆ, ಸಾರಿಗೆ ಮತ್ತು ಸಾಗಣೆ, ವಸತಿ, ಗ್ರಾಮೀಣಾಭಿವೃದ್ಧಿ, ದೂರಸಂಪರ್ಕ ಸೇರಿ ಒಟ್ಟು 14 ವಲಯಗಳಲ್ಲಿ ರೂ.500 ಕೋಟಿ ಮೌಲ್ಯದ ಪಿಪಿಪಿ ಯೋಜನೆಗಳಿಗೆ ಈಗಾಗಲೇ ಅನುಮೋದನೆ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯ ಮುಖ್ಯ ಕಾರ್ಯದರ್ಶಿ ಟಿ ಎಂ. ವಿಜಯಭಾಸ್ಕರ್, ಮೂಲ ಸೌಕರ್ಯ ಅಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಕಪಿಲ್ ಮೋಹನ್ ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:31.05.2020

## 94. ಗ್ರಾಮಗಳಲ್ಲೂ ಕ್ವಾರಂಟೈನ್ ವ್ಯವಸ್ಥೆ

ಮುಂದಿನ ದಿನಗಳಲ್ಲಿ ಗ್ರಾಮೀಣ ಭಾಗದಲ್ಲೂ ಕ್ವಾರಂಟೈನ್ ವ್ಯವಸ್ಥೆ ಮಾಡಲಾಗುತ್ತದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ. ರಾಜ್ಯದ ಗಡಿ ಭಾಗದಲ್ಲಿ ಹೊರಗಡೆಯಿಂದ ಜನರು ಬರುತ್ತಿರುವುದರಿಂದ ಕೊರೊನಾ ಹೆಚ್ಚಾಗುತ್ತಿದೆ. ಆದರೆ, ಸೋಂಕು ಹರಡುವಿಕೆ ಸಾಮುದಾಯಿಕವಾಗಿಲ್ಲ. ಮುಂದಿನ ದಿನಗಳಲ್ಲಿ ಪರಿಸ್ಥಿತಿಗೆ ತಕ್ಕಂತೆ ಕ್ವಾರಂಟೈನ್ ವ್ಯವಸ್ಥೆ ಬದಲಾಯಿಸಿ ಗ್ರಾಮೀಣ ಭಾಗಕ್ಕೂ ವಿಸ್ತರಿಸಲಾಗುವುದು. ಲಾಕ್‌ಡೌನ್‌ನಿಂದಾಗಿ ರೋಗಾಣು ಸಾಯುವುದಿಲ್ಲ. ರೋಗ ತಡೆಯಲು ಬೇಕಾದ ಸಿದ್ಧತೆ

ಮಾಡಿಕೊಳ್ಳಲು ಲಾಕ್‌ಡೌನ್ ಮಾಡಿದ್ದೇವೆ. ಹಿರಿಯರು ಹೆಚ್ಚು ಜಾಗೃತರಾಗಿರಬೇಕು. ಮಧ್ಯವಯಸ್ಕರು, ಯುವಕರು ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ಕೊರೊನಾ ನಿಯಂತ್ರಿಸುವಲ್ಲಿ ಬಹಳ ಮುಂದಿದೆ ಎಂದರು.

ಆಧಾರ:ಉದಯವಾಣಿ, ದಿನಾಂಕ:31.05.2020

## 95. ರೂ. 666 ಕೋಟಿ ಪರಿಹಾರ ರೈತರ ಖಾತೆಗೆ

ಲಾಕ್‌ಡೌನ್ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಮೆಕ್ಕೆಜೋಳ ಹಾಗೂ ಹೂ ಬೆಳೆಗಾರರಿಗೆ ಪರಿಹಾರ ಘೋಷಿಸಿದ್ದ ಮುಖ್ಯಮಂತ್ರಿ ಯಡಿಯೂರಪ್ಪ ಅವರು ರೂ.666 ಕೋಟಿ ಪರಿಹಾರ ಮೊತ್ತವನ್ನು ರೈತರ ಖಾತೆಗೆ ಆನ್‌ಲೈನ್ ಮೂಲಕ ವರ್ಗಾವಣೆಗೆ ಚಾಲನೆ ನೀಡಿ, ಆಯ್ದ ರೈತರಿಗೆ ಕರೆ ಮಾಡಿ ಹಣ ವರ್ಗಾವಣೆಯಾಗಿರುವುದನ್ನು ಖಾತರಿಪಡಿಸಿಕೊಂಡರು.

ಗೃಹ ಕಚೇರಿ 'ಕೃಷ್ಣಾ'ದಲ್ಲಿ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳ ಪ್ರಗತಿ ಪರಿಶೀಲಿಸಿ, ಎರಡೂ ಇಲಾಖೆಗಳ 10 ದಿನಗಳ ಪ್ರಗತಿ ವರದಿ ಬಿಡುಗಡೆ ಮಾಡಿ, ಸಭೆಯಲ್ಲಿ ಮಾತನಾಡಿದ ಅವರು ಕೋವಿಡ್–19 ಸಂದರ್ಭದಲ್ಲಿ 3 ತಿಂಗಳಿನಿಂದ ಹಾಪ್‌ಕಾಮ್ಸ್‌ನ 150 ನೌಕರರು ಕೆಲಸಕ್ಕೆ ಹಾಜರಾಗದಿರುವುದನ್ನು ಗಂಭೀರವಾಗಿ ಪರಿಗಣಿಸಬೇಕು. ರಾಜ್ಯದ 550 ಹಾಪ್‌ಕಾಮ್ಸ್ ಮಳಿಗೆಗಳ ಪೈಕಿ ಕೇವಲ 250 ಮಳಿಗೆಗಳು ಕಾರ್ಯನಿರ್ವಹಿಸುತ್ತಿದ್ದು, ಮಳಿಗೆ ತೆರೆಯದೇ ಇರುವವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ಕೆಲ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹುತೇಕ ನಿವಾರಣೆಯಾದಂತಾಗಿದೆ. ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಅನುಮತಿ ನೀಡಬಾರದು. ಒಂದು ತಿಂಗಳ ಬಳಿಕ ಪರಿಸ್ಥಿತಿ ಅವಲೋಕಿಸಿ ತೀರ್ಮಾನಿಸುವುದು ಸೂಕ್ತ ಎಂದು ತಿಳಿಸಿದರು.

ಕೃಷಿ ಹಾಗೂ ತೋಟಗಾರಿಕೆ ಇಲಾಖೆಯಿಂದ ಇತರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ, ಸಿಬ್ಬಂದಿಯನ್ನು ಮಾತೃ ಇಲಾಖೆಗೆ ವಾಪಸ್ಸು ಕರೆಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದರು. ರೇಷ್ಮೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿ, ಹಿಪ್ಪುನೇರಳೆ ಬೆಳೆಯುವ ಪ್ರದೇಶ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಡ್ರೋಣ್ ಮೂಲಕ ಸಮೀಕ್ಷೆ ನಡೆಸಲಾಗುತ್ತಿದ್ದು, ಒತ್ತುವರಿಯಾಗಿರುವ ಸರ್ಕಾರಿ ಜಮೀನನ್ನು ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳಬೇಕು ಎಂದು ಸೂಚನೆ ನೀಡಿದರು. ಸಚಿವ ಕೆ.ಸಿ. ನಾರಾಯಣಗೌಡ, ಮುಖ್ಯ ಕಾರ್ಯದರ್ಶಿ, ಟಿ.ಎಂ. ವಿಜಯಭಾಸ್ಕರ್, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಐ.ಎಸ್.ಎನ್. ಪ್ರಸಾದ್, ಅಭಿವೃದ್ಧಿ ಆಯುಕ್ತರಾದ ವಂದಿತಾ ಶರ್ಮಾ, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ ಉಪಸ್ಥಿತರಿದ್ದರು.

ಆಧಾರ:ಉದಯವಾಣಿ, ದಿನಾಂಕ: 03.06.2020

## 96. ಪರಿಹಾರ ಧನ ವಿಳಂಬ ಬೇಡ

ಆಟೋ ಮತ್ತು ಟ್ಯಾಕ್ಸಿ ವಾಹನ ಚಾಲಕರಿಗೆ ರೂ.5,000ಗಳ ಪರಿಹಾರ ಧನ ಒದಗಿಸಲು ಅಗತ್ಯವಿರುವ ಎಲ್ಲಾ ಕ್ರಮ ವಹಿಸಬೇಕು ಹಾಗೂ ಪರಿಹಾರ ಧನ ವಿತರಣೆಯಲ್ಲಿ ಯಾವುದೇ ವಿಳಂಬವಾಗಬಾರದು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಸೂಚಿಸಿದ್ದಾರೆ.

ಸಾರಿಗೆ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು ರಿಕ್ಷಾ ಹಾಗೂ ಟ್ಯಾಕ್ಸಿ ಚಾಲಕರಿಂದ ಪರಿಹಾರ ಧನಕ್ಕೆ ಈಗಾಗಲೇ ಒಟ್ಟು 1,98,929 ಅರ್ಜಿಗಳು ಸ್ವೀಕೃತವಾಗಿದ್ದು, ವಾಹನ ಚಾಲಕರ ಬ್ಯಾಂಕ್ ಖಾತೆಗೆ ಪರಿಹಾರ ಮೊತ್ತ ಜಮಾ ಪ್ರಕ್ರಿಯೆ ಚಾಲ್ತಿಯಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದರು.

ಕೊರೋನಾ ಹಿನ್ನೆಲೆಯಲ್ಲಿ ಪ್ರಯಾಣಿಕರು ಸಾರಿಗೆ ಸಂಸ್ಥೆ ಬಸ್ಸುಗಳನ್ನು ಬಳಸಲು ಹಿಂಜರಿಯುತ್ತಿದ್ದು, ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಕರ ಸಂಖ್ಯೆಯನ್ನು ಹೆಚ್ಚಿಸಲು ಸಾರ್ವಜನಿಕರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ಸಾರಿಗೆ ಇಲಾಖೆಯ ವಾಹನಗಳನ್ನು ಸೂಕ್ತ ರೀತಿಯಲ್ಲಿ ಸ್ವಚ್ಛಗೊಳಿಸುವ ಕೆಲಸವೂ ಆಗಬೇಕು

ಎಂದು ಮುಖ್ಯಮಂತ್ರಿಗಳು ಸೂಚಿಸಿದರು ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಕೊರೋನಾದಿಂದಾಗಿ ರಾಜಸ್ವ ಸಂಗ್ರಹ ಕುಂಠಿತವಾಗಿದೆ. ಉಂಟಾಗಿರುವ ನಷ್ಟವನ್ನು ಮುಂದಿನ ದಿನಗಳಲ್ಲಿ ಸರಿದೂಗಿಸುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಮುಖ್ಯಮಂತ್ರಿಗಳು ಕೋವಿಡ್–19 ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆ ಕೈಗೊಂಡ ಕ್ರಮಗಳ ಕುರಿತ ವಿಡಿಯೋ ವೀಕ್ಷಿಸಿದ ನಂತರ ಸಾರಿಗೆ ಸಂಪದ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಉಪ ಮುಖ್ಯಮಂತ್ರಿ ಸಚಿವ ಲಕ್ಷ್ಮಣ ಸವದಿ, ಈಶಾನ್ಯ ಸಾರಿಗೆ ಸಂಸ್ಥೆ ಅಧ್ಯಕ್ಷ ವಿ.ಎಸ್. ಪಾಟೀಲ್, ಬಿಎಂಟಿಸಿ ಅಧ್ಯಕ್ಷ ನಂದೀಶ್ ರೆಡ್ಡಿ, ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್, ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ಅಜುಂ ಪರ್ವೇಜ್, ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕಿ ಸಿ.ಶಿಖಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐಎಸ್ಎನ್ ಪ್ರಸಾದ್ ಉಪಸ್ಥಿತರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 04.06.2020

## 97. ಬೆಂಗಳೂರಲ್ಲೂ ಪ್ಲಾಸ್ಮಾ ಥೆರಪಿ ಯಶಸ್ವಿ

ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ಲಾಸ್ಮಾ ಥೆರಪಿಗೆ ಒಳಪಟ್ಟ 38 ವರ್ಷದ ಕೊರೊನಾ ಸೋಂಕಿತೆಯ ಆರೋಗ್ಯದಲ್ಲಿ ಗಮನಾರ್ಹ ಚೇತರಿಕೆ ಕಂಡು ಬಂದಿದ್ದು, ಐಸಿಯುನಿಂದ ವಾರ್ಡ್‌ಗೆ ಸ್ಥಳಾಂತರಿಸಲಾಗಿದೆ.

ರಾಜ್ಯದಲ್ಲಿ ಮೊದಲ ಬಾರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಡೆದಿದ್ದ ಪ್ಲಾಸ್ಮಾ ಥೆರಪಿ ವಿಫಲವಾಗಿ ಸೋಂಕಿತ ವೃದ್ಧ ಮೃತಪಟ್ಟಿದ್ದರು. ಬಳಿಕ ಜೂನ್ 2ರಂದು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯಲ್ಲಿ ಮೊದಲ ಪ್ಲಾಸ್ಮಾ ಥೆರಪಿ ಚಿಕಿತ್ಸೆಗೆ ಒಳಪಟ್ಟ ವ್ಯಕ್ತಿಯ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತೀವ್ರ ಸೋಂಕು, ಉಸಿರಾಟ ಸಮಸ್ಯೆ, ಮಧುಮೇಹದಿಂದ ಐಸಿಯುನಲ್ಲಿದ್ದ 38 ವರ್ಷದ ಮಹಿಳೆಯ ಪ್ಲಾಸ್ಮಾ ಥೆರಪಿ ಯಶಸ್ವಿಯಾದಂತಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಆಧಾರ:ಕನ್ನಡಪ್ರಭ, ದಿನಾಂಕ:06.06.2020

## 98. ಬೆಸ್ತರೂ, ಪಶುಪಾಲಕರಿಗೂ ಕಿಸಾನ್ ಕ್ರೆಡಿಟ್ ಕಾರ್ಡ್

ಬೆಂಗಳೂರು ಕೇಂದ್ರ ಸರ್ಕಾರ ಕಿಸಾನ್ ಕ್ರೆಡಿಟ್ ಕಾರ್ಡ್ ಸೌಲಭ್ಯವನ್ನು ಮೀನುಗಾರರು ಮತ್ತು ಪಶುಪಾಲಕರಿಗೆ ವಿಸ್ತರಿಸಲು ಅನುಮತಿ ನೀಡಿದ್ದು ಅರ್ಹರಿಗೆ ಈ ಸವಲತ್ತುಗಳನ್ನು ತಲುಪಿಸಲು ಕ್ರಮ ವಹಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು. ಕಿಸಾನ್ ಕ್ರೆಡಿಟ್ ಕಾರ್ಡ್ ರೈತರಿಗೆ ಬ್ಯಾಂಕಿನ ವ್ಯವಸ್ಥೆಯಡಿ ಬೆಳೆಗಾಗಿ ಸಕಾಲದಲ್ಲಿ ಸಾಕಷ್ಟು ಧನ ಸಹಾಯ ಒದಗಿಸುವ ಗುರಿ ಹೊಂದಿದೆ. ಈ ಯೋಜನೆಯನ್ನು ಮೀನುಗಾರರು ಮತ್ತು ಪಶುಪಾಲಕರಿಗೂ ವಿಸ್ತರಿಸಲಾಗಿದೆ. ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಪಶುಪಾಲನಾ ಚಟುವಟಿಕೆಗೆ ಒಂದರಿಂದ ಮೂರು ಲಕ್ಷ ರೂ.ಗಳವರೆಗೆ ಬಡ್ಡಿ ರಹಿತ ಮುಂಗಡ ಸಾಲ ಪಡೆಯಬಹುದಾಗಿದೆ. ಆದ್ದರಿಂದ ರೈತರು ಇದರ ಸದುಪಯೋಗ ಪಡೆದುಕೊಳ್ಳುವ ನಿಟ್ಟಿನಲ್ಲಿ ಕ್ರಮ ವಹಿಸುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರು ತಿಳಿಸಿದರು.

ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಮಂಗನಕಾಯಿಲೆ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಲಸಿಕೆ ಉತ್ಪಾದನೆ ಹೆಚ್ಚಿಸಲು ಕ್ರಮಕೈಗೊಳ್ಳಬೇಕು. ಪಶು ಆಹಾರ ಸಂಪರ್ಕ ಪೂರೈಕೆ ಮತ್ತು ಪಶು ಆಹಾರ ಉತ್ಪಾದನೆಗೂ ಅಗತ್ಯ ಕ್ರಮ ಜರುಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಧಾರ:ಕನ್ನಡಪ್ರಭ, ದಿನಾಂಕ:06.06.2020

## 99. ಎಸ್‌ಸಿ, ಎಸ್‌ಟಿ ಅಭಿವೃದ್ಧಿಗೆ ರೂ.27 ಸಾವಿರ ಕೋಟಿ

ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದವರ ಅಭಿವೃದ್ಧಿಗಾಗಿ ರೂ.27.699 ಕೋಟಿ ಮೀಸಲಿಟ್ಟಿದ್ದು, ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ. ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯೇ ಸರ್ಕಾರದ ಗುರಿ ಎಂದು ಉಪ ಮುಖ್ಯಮಂತ್ರಿ ಗೋವಿಂದ ಎಂ.ಕಾರಜೋಳ ತಿಳಿಸಿದರು. ತಾಲ್ಲೂಕಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ

ಮತ್ತು ಸರ್ಕಾರಿ ಮೆಟ್ರಿಕ್ ನಂತರದ ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳು ಮತ್ತು ವಸತಿ ಶಾಲೆಗಳ ನೂತನ ಕಟ್ಟಡಗಳ ಉದ್ಘಾಟನೆ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಜಿಲ್ಲಾಮಟ್ಟದ ವನಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಪಾವಗಡದಲ್ಲಿ ಸುಮಾರು ರೂ.88 ಕೋಟಿ ವೆಚ್ಚದಲ್ಲಿ ವಿದ್ಯಾರ್ಥಿನಿಲಯಗಳು, ಪಿಯು ಕಾಲೇಜು ಹಾಗೂ ಸೆಕೆಂಡರಿ ಸ್ಕೂಲ್ ಕಟ್ಟಡಗಳ ಉದ್ಘಾಟನೆಯಾಗಿದೆ. ಇದರಿಂದ ಎಸ್‌ಸಿ, ಎಸ್‌ಟಿ ಜನಾಂಗದ ಸುಮಾರು 1,600 ಮಕ್ಕಳಿಗೆ ಓದಲು ವ್ಯವಸ್ಥೆಯಾಗುತ್ತದೆ. ನಮ್ಮ ಸರ್ಕಾರದ ಗುರಿ ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡುವುದು ಯಾವುದೇ ವರ್ಗದ ಬಡ ಮಕ್ಕಳಿಗೆ ಓದಲು ಸರ್ಕಾರ ಹೆಚ್ಚಿನ ಅನುದಾನವನ್ನು ಬಜೆಟ್‌ನಲ್ಲಿ ನೀಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ ರೂ. 27,559 ಕೋಟಿ ಅನುದಾನವನ್ನು ಎಸ್‌ಸಿ, ಎಸ್‌ಟಿ ಜನಾಂಗಕ್ಕೆ ವಿಶೇಷ ಹಂಚಿಕೆ ಮಾಡಲಾಗಿತ್ತು. 25,559 ಕೋಟಿಗಳಷ್ಟು ಖರ್ಚು ಮಾಡಿ ಶೇ. 92ರಷ್ಟು ಪ್ರಗತಿ ಸಾಧಿಸಿದ್ದೇವೆ ಎಂದರು. ಸಂಸದ ಎ.ನಾರಾಯಣಸ್ವಾಮಿ, ಶಾಸಕ ವೆಂಕಟರಮಣಪ್ಪ, ಮಾಜಿ ಶಾಸಕ ಸೋಮನಾಯಕ್, ಜಿ.ಪಂ.ಉಪಾಧ್ಯಕ್ಷರಾದ ಶಾರದಾ ನರಸಿಂಹಮೂರ್ತಿ, ಜಿಲ್ಲಾ ಪಂಚಾಯತ್ ಸದಸ್ಯರಾದ ಹೆಚ್.ವಿ.ವೆಂಕಟೇಶ್, ಜಿಲ್ಲಾಧಿಕಾರಿ ಡಾ. ಕೆ. ರಾಕೇಶ್‌ಕುಮಾರ್, ಜಿಲ್ಲಾ ಪಂಚಾಯತ್. ಸಿಇಒ ಶುಭಾಕಲ್ಯಾಣ್, ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ.ವಂಶಿಕೃಷ್ಣ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಹೆಚ್.ಎಸ್.ಪ್ರೇಮನಾಥ್ ಇತರರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:06.06.2020

## 100. ಪಡಿತರ ಅಕ್ರಮ ದಾಸ್ತಾನು ಮಾಡಿದ್ರೆ ಕ್ರಿಮಿನಲ್ ಕೇಸ್

ಕಲಬುರಗಿ, ಕೊಪ್ಪಳ ಜಿಲ್ಲೆಯಲ್ಲಿ ಪಡಿತರವನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದ ಅಂಗಡಿಗಳ ಮೇಲೆ ದಾಳಿ ಮಾಡಿ. ಸುಮಾರು 4,000 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಂಡು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವ ಕೆ.ಗೋಪಾಲಯ್ಯ ತಿಳಿಸಿದರು.

ಚಿತ್ರದುರ್ಗಕ್ಕೆ ತೆರಳುವ ಮಾರ್ಗ ಮಧ್ಯೆ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರದಿಂದ ಹಂಚಿಕೆಯಾಗಿರುವ ಪಡಿತರ ಅಕ್ಕಿಯನ್ನು ಪಾಲಿಷ್ ಮಾಡಿಸಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳಿವೆ ಎಂದು ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು ಕಳೆದ 20 ದಿನಗಳಲ್ಲಿ ಪೊಲೀಸ್, ಕಂದಾಯ, ಆಹಾರ ಇಲಾಖೆಗಳು ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ 4,000 ಕ್ವಿಂಟಾಲ್ ಅಕ್ಕಿಯನ್ನು ವಶಪಡಿಸಿಕೊಂಡಿದ್ದು, ಅಕ್ಕಿಯನ್ನು ಸಾಗಿಸಿದ ಲಾರಿಗಳನ್ನೂ ಸಹ ಸೀಜ್ ಮಾಡಲಾಗಿದೆ. ಯಾವುದೇ ಅಂಗಡಿಗಳಲ್ಲಿ ಸೂಕ್ತ ದಾಖಲೆ, ರಸೀದಿ ಇಲ್ಲದೆ ಅಕ್ಕಿ, ಮತ್ತಿತರ ಪಡಿತರ ಧಾನ್ಯಗಳನ್ನು ಶೇಖರಿಸಿಟ್ಟಿರುವುದು ಕಂಡು ಬಂದಲ್ಲಿ ತಕ್ಷಣವೇ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆಂದರು.

**180 ನ್ಯಾಯಬೆಲೆ ಅಂಗಡಿಗಳು ಅಮಾನತ್ತು:** ತಾವು ಆಹಾರ ಸಚಿವನಾಗಿ ಅಧಿಕಾರ ವಹಿಸಿಕೊಂಡ ನಂತರ ಪಡಿತರ ವಿತರಣೆಯಲ್ಲಿರುವ ಹಲವಾರು ಲೋಪದೋಷಗಳನ್ನು ಸರಿಪಡಿಸಿದ್ದೇನೆ. ರಾಜ್ಯದಲ್ಲಿ ಈವರೆಗೆ ತೂಕದ ವ್ಯತ್ಯಾಸ ಪಡಿತರ ದುರ್ಬಳಕೆ, ಗ್ರಾಹಕರಿಗೆ ಮೋಸ, ಅಕ್ರಮ ದಾಸ್ತಾನು, ಹಣ ದುರುಪಯೋಗ ಮಾಡುತ್ತಿದ್ದ 180 ನ್ಯಾಯಬೆಲೆ ಅಂಗಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಅಮಾನತ್ತಿನಲ್ಲಿಡಲಾಗಿದೆ.

**ಪಡಿತರ ವಿತರಣೆಯಲ್ಲಿ ವ್ಯತ್ಯಾಸವಾದರೆ ನಿರ್ದಾಕ್ಷಿಣ್ಯ ಕ್ರಮ:** ನ್ಯಾಯಬೆಲೆ ಅಂಗಡಿಗಳ ಪಡಿತರ ವಿತರಣೆಯಲ್ಲಿ ವ್ಯತ್ಯಾಸವಿರುವುದು ಕಂಡು ಬಂದರೆ ಗ್ರಾಹಕರು ಯಾವುದೇ ಕಾರಣಕ್ಕೂ ಮಣಿಯದೆ ಪ್ರತಿಭಟಿಸಬೇಕು. ಇಲ್ಲವೇ ಇಲಾಖೆಯ ಸಹಾಯವಾಣಿ ಸಂಖ್ಯೆ 1967ಕ್ಕೆ ದೂರು ನೀಡಿದಲ್ಲಿ ಅಂಥವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಪ್ರತಿದಿನ ಸಹಾಯವಾಣಿಗೆ ಸುಮಾರು 250 ದೂರು ಕರೆಗಳು ಬರುತ್ತಿದ್ದು, ಸ್ವೀಕರಿಸಿದ ದೂರುಗಳಿಗೆ ತಕ್ಷಣವೇ ಸ್ಪಂದಿಸುವ ಕೆಲಸ ಮಾಡಲಾಗುತ್ತಿದೆ ಎಂದರು.

**ನಕಲಿ ಕಾರ್ಡ್‌ಗಳನ್ನು ಹಿಂದಿರುಗಿಸಿ:** ತೆರಿಗೆ ಪಾವತಿದಾರರು, ಸ್ವಂತ ಕಾರು, ಮೋಟಾರು, ವಾಹನ ಹೊಂದಿದವರು, ನಿವೃತ್ತ ಸರ್ಕಾರಿ ನೌಕರರು ಈ ಉಚಿತ ಪಡಿತರ ಪಡೆಯಲು ಅರ್ಹರಲ್ಲ. ಬಡತನ ರೇಖೆಗಿಂತ ಮೇಲಿರುವವರು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿದ್ದಲ್ಲಿ ಕೂಡಲೇ ಸ್ವಯಂ ಪ್ರೇರಿತರಾಗಿ ಜೂನ್ ಮಾಹೆಯ ಅಂತ್ಯದೊಳಗೆ ಇಲಾಖೆಗೆ ಒಪ್ಪಿಸಬೇಕು. ಇಲ್ಲದಿದ್ದಲ್ಲಿ ಕಠಿಣ ಕ್ರಮ ಜರುಗಿಸಲಾಗುವುದೆಂದರು.

**ಜಿಲ್ಲೆಯ ಅಭಿವೃದ್ಧಿಗೆ ಆದ್ಯತೆ:** ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅಧಿಕಾರ ವಹಿಸಿಕೊಂಡ ಮೇಲೆ ಹಾಸನ ಜಿಲ್ಲೆಯ ಅಭಿವೃದ್ಧಿಗಾಗಿ ಯಾವ ಹೊಸ ಯೋಜನೆಗಳನ್ನು ರೂಪಿಸಿದ್ದೀರಿ ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಅವರು ಜಿಲ್ಲೆಯ ಅಭಿವೃದ್ಧಿಯ ಕಡೆ ಮೊದಲ ಆದ್ಯತೆ ನೀಡುತ್ತೇನೆ. ಜಿಲ್ಲೆಯ ಜನಪ್ರತಿನಿಧಿಗಳು, ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸುವ ಇಂಗಿತ ವ್ಯಕ್ತಪಡಿಸಿದರು. ಜಿಲ್ಲೆಯ ಉಸ್ತುವಾರಿಯನ್ನು ವಹಿಸಿಕೊಂಡ ನಂತರ ಹಾಸನ ಜಿಲ್ಲೆಗೆ ಜೂನ್ 8ರಂದು ಮೊದಲ ಭೇಟಿ ನೀಡುವ ಕಾರ್ಯಕ್ರಮವಿದ್ದು, ಜಿಲ್ಲೆಯ ಸಮಸ್ಯೆಗಳನ್ನು ಅರಿಯುವ ಕೆಲಸ ಮಾಡುತ್ತೇನೆ ಎಂದರು. ಮಾಜಿ ಸಚಿವ ಸೊಗಡು ಶಿವಣ್ಣ, ಇಲಾಖೆಯ ಅಧಿಕಾರಿ, ಸಿಬ್ಬಂದಿ ಇದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:07.06.2020

## 101. ಕಸ ನಿರ್ವಹಣೆ ಉಪ ನಿಯಮಕ್ಕೆ ಸರ್ಕಾರ ಅಸ್ತು

ನಗರದಲ್ಲಿ ವೈಜ್ಞಾನಿಕ ಕಸ ನಿರ್ವಹಣೆ ಹಾಗೂ ಕಸ ನಿರ್ವಹಣೆ ಲೋಪವೆಸಗುವವರ ಮೇಲೆ ದಂಡ ವಿಧಿಸುವ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿ ರಾಜ್ಯಪತ್ರ ಹೊರಡಿಸಿದೆ.

ನಗರದಲ್ಲಿ ವೈಜ್ಞಾನಿಕ ಕಸ ವಿಲೇವಾರಿ, ಮೂಲ ಹಂತದಲ್ಲೇ ಕಸ ವಿಂಗಡಣೆ ಹಾಗೂ ಕಸ ನಿರ್ವಹಣೆ ನಿಯಮ ಉಲ್ಲಂಘನೆ ಮಾಡುವವರಿಗೆ ದಂಡ ವಿಧಿಸುವ ಸಂಬಂಧ ಬಿಬಿಎಂಪಿ 2019ರ ಆಗಸ್ಟ್‌ನಲ್ಲಿ 'ಬಿಬಿಎಂಪಿ ಕಸ ನಿರ್ವಹಣೆ ಉಪನಿಯಮ' ರೂಪಿಸಿತ್ತು. ಇದನ್ನು ಕೌನ್ಸಿಲ್ ಸಭೆಯಲ್ಲಿ ಮಂಡಿಸಿ, ಸರ್ಕಾರಕ್ಕೆ ಕಳುಹಿಸಲಾಗಿತ್ತು. ಸದ್ಯ ಇದಕ್ಕೆ ಸರ್ಕಾರ ಅಸ್ತು ಎಂದಿದ್ದು, ಅಧಿಕೃತ ಜಾರಿಯಷ್ಟೇ ಬಾಕಿ ಇದೆ.

**ರಾಜ್ಯಪತ್ರದಲ್ಲಿರುವ ಅಂಶಗಳು:** ಕಸ ನಿರ್ವಹಣೆ ಉಪ ನಿಯಮದಲ್ಲಿ ಹಲವು ಸುಧಾರಿತ ಅಂಶಗಳನ್ನು ಸೇರಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಸಾರ್ವಜನಿಕರು ತಮ್ಮ ಕಸವನ್ನು ತಾವೇ ಗೊಬ್ಬರ ಮಾಡಿಕೊಂಡರೇ ಘನತ್ಯಾಜ್ಯದ ಕರದಲ್ಲಿ ಶೇ.50ರಷ್ಟು ರಿಯಾಯಿತಿ ಸಿಗಲಿದೆ. ಆದರೆ, ಈ ಅವಕಾಶವನ್ನು ತ್ಯಾಜ್ಯ ಸಂಗ್ರಹಕಾರರಿಗೆ ನೀಡಿಲ್ಲ. ನಗರದಲ್ಲಿ ಕಸ ವಿಲೇವಾರಿಗೆ ಸಾಕಷ್ಟು ತೊಡಕಾಗಿರುವ ನಿಷೇಧಿತ ಪ್ಲಾಸ್ಟಿಕ್‌ಗೆ ಕಡಿವಾಣ ಹಾಕುವ ಅಂಶವನ್ನು ಸೇರಿಸಲಾಗಿದೆ. ನಿಷೇಧಿತ ಪ್ಲಾಸ್ಟಿಕ್ ಉತ್ಪನ್ನಕಾರರಿಗೆ ವಿಧಿಸುತ್ತಿದ್ದ ದಂಡವನ್ನು ಪ್ಲಾಸ್ಟಿಕ್ ಬಳಸುವವರ ಮೇಲೂ ಪ್ರಯೋಗಿಸಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ.

ಗೃಹ ಬಳಕೆದಾರರಿಗೆ ರೂ. 500ರಿಂದ 1 ಸಾವಿರದವರೆಗೆ ವಾಣಿಜ್ಯ ಬಳಕೆದಾರರಿಗೆ ರೂ.25 ಸಾವಿರ ದಿಂದ ರೂ.50ಸಾವಿರವರೆಗೆ ದಂಡ ವಿಧಿಸುವ ಅವಕಾಶವಿದೆ. ಉಳಿದಂತೆ ಪ್ರಮುಖವಾಗಿ ಪ್ರತಿ ವರ್ಷ ಕಸದ ಮೇಲೆ ಶೇ.5ರಷ್ಟು ಕರ ವಿಧಿಸುವುದಕ್ಕೂ ಅವಕಾಶ ನೀಡಲಾಗಿದೆ. ಇದರಂತೆ ಪ್ರತಿ ವರ್ಷ ಆಸ್ತಿ ತೆರಿಗೆದಾರರಿಗೆ ಆಸ್ತಿ ತೆರಿಗೆಯ ಶೇ.5ರಷ್ಟನ್ನು ಹೆಚ್ಚುವರಿಯಾಗಿ ಘನತ್ಯಾಜ್ಯ ನಿರ್ವಹಣಾ ಉಪ ಕರ ಸಂಗ್ರಹಿಸಲು ನಿರ್ಧರಿಸಲಾಗಿದೆ. ಈ ಮೊತ್ತವನ್ನು ಆಸ್ತಿ ತೆರಿಗೆಯೊಂದಿಗೆ ಸಂಗ್ರಹಿಸಲಾಗುತ್ತದೆ. ಶೇ.5ರಷ್ಟು ಉಪ ಕರ ಹೆಚ್ಚಿಸುವುದಕ್ಕೂ ಅವಕಾಶ ನೀಡಲಾಗಿದೆ. ಇನ್ನು ಮೂರು ತಿಂಗಳು ಘನತ್ಯಾಜ್ಯ ಶುಲ್ಕ ಪಾವತಿ ಮಾಡದಿದ್ದರೆ ಮೇಲ್ತೆರಿಗೆ ರೂಪದಲ್ಲಿ ಪ್ರತಿ ತಿಂಗಳು ಶೇ.2ರಷ್ಟು ಶುಲ್ಕ ವಿಧಿಸುವ ಕಠಿಣ ಕಾನೂನು ರೂಪಿಸಲಾಗಿದೆ.

**ಕಟ್ಟಡವಾರು ಉಪ ಕರ ವಿವರ:** ನಗರದಲ್ಲಿರುವ 1000 ಚದರಡಿವರೆಗಿನ ವಿಸ್ತೀರ್ಣ ವಾಸದ ಕಟ್ಟಡಕ್ಕೆ ಪ್ರತಿ ತಿಂಗಳು ರೂ. 30 ಹಾಗೂ 1000 ಚ. ಅಡಿಯಿಂದ ಗರಿಷ್ಠ 5000 ಚದರಡಿವರೆಗಿನ ನಿವಾಸಿ ಕಟ್ಟಡಗಳಿಗೆ ಆಯಾ ಕಟ್ಟಡ ವಿಸ್ತೀರ್ಣಕ್ಕೆ ಅನುಗುಣವಾಗಿ ರೂ.200 ವರೆಗೆ ಮಾಸಿಕ ಘನತ್ಯಾಜ್ಯ ಉಪ ಕರ ನಿಗದಿ ಮಾಡಲಾಗಿದೆ. ಇದೇ ಮಾದರಿಯಲ್ಲಿ ಕೈಗಾರಿಕಾ ಕಟ್ಟಡಗಳಿಗೆ 1000 ಚದರ ಅಡಿಯವರೆಗೆ ರೂ.100 ಹಾಗೂ ಅದಕ್ಕೆ ಮೇಲ್ಪಟ್ಟು 5000 ಚದರಅಡಿ ವರೆಗೆ ಗರಿಷ್ಠ ರೂ.300 ವರೆಗೆ ಮಾಸಿಕ ತ್ಯಾಜ್ಯ ಉಪ ಕರ ವಿಧಿಸಿದೆ. ಜೊತೆಗೆ ಹೋಟೆಲ್, ಮಾಲ್, ಕಲ್ಯಾಣ ಮಂಟಪ ಸೇರಿದಂತೆ ಬೃಹತ್ ತ್ಯಾಜ್ಯ ಉತ್ಪಾದಕ ಸಂಸ್ಥೆಗಳಿಗೆ ಆರಂಭಿಕ 10 ಸಾವಿರ ಚದರಅಡಿ ವರೆಗಿನ ರೂ.300 ನಿಂದ ಗರಿಷ್ಠ 50 ಸಾವಿರ ಚದರ ಅಡಿ ವರೆಗಿನ ಕಟ್ಟಡಗಳಿಗೆ ರೂ.500 50 ಸಾವಿರ ಚದರಅಡಿಗಿಂತ ಹೆಚ್ಚಿರುವ ಕಟ್ಟಡಗಳಿಗೆ ರೂ 600. ಉಪ ಕರ ನಿಗದಿ ಮಾಡಲಾಗಿದೆ.

**ಸಮಾರಂಭದ ಕಸಕ್ಕೂ ಹಣ:** ನಗರದಲ್ಲಿ ಇನ್ನು ಮುಂದೆ ಯಾವುದೇ ಸಭೆ, ಸಮಾರಂಭ ನಡೆಸಿ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದನೆಯಾದರೆ, ಅದರ ವಿಲೇವಾರಿಗೆ ಪಾಲಿಕೆಗೆ ಪ್ರತಿ ಕೆ.ಜಿಗೆ ಬಿಬಿಎಂಪಿ ಕಸಕ್ಕೆ ರೂ.6 ನೀಡಬೇಕು.

ನಗರದ ಯಾವುದೇ ಸಮುದಾಯ ಭವನ, ಹೋಟೆಲ್ ಅಥವಾ ಯಾವುದೇ ನಿರ್ದಿಷ್ಟ ಪ್ರದೇಶದಲ್ಲಿ ಒಂದು ವಾರ ನಡೆಯುವ ಎಲ್ಲ ಕಾರ್ಯಕ್ರಮ ಮತ್ತು ವಸ್ತು ಪ್ರದರ್ಶನಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ವಿಲೇವಾರಿ ಅವಧಿವಾರು ಪ್ರತ್ಯೇಕ ಕರ ನಿಗದಿ ಮಾಡಲಾಗಿದೆ. ಇದರಂತೆ ಒಂದು ವಾರದವರೆಗೆ ರೂ.1500 ಒಂದು ವಾರ ಮೇಲ್ಪಟ್ಟು ಒಂದು ತಿಂಗಳವರೆಗೆ ರೂ.3000 ಹಾಗೂ ಒಂದು ತಿಂಗಳ ಮೇಲ್ಪಟ್ಟ ಕಾರ್ಯಕ್ರಮಗಳಿಗೆ ರೂ.6000 ಕರ ನಿಗದಿಪಡಿಸಿದೆ.

ಆಧಾರ:ಕನ್ನಡಪ್ರಭ, ದಿನಾಂಕ:09.06.2020

## 102. ಪೌರ ಕಾರ್ಮಿಕರ ಸುವಿಧಾ ಕ್ಯಾಬಿನ್

ನಗರದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳುವ ಪೌರ ಕಾರ್ಮಿಕರಿಗಾಗಿ ಸುವಿಧಾ ಕ್ಯಾಬಿನ್ ಆರಂಭಿಸಲಾಗಿದೆ. ಪ್ರಾಯೋಗಿಕವಾಗಿ ಮಲ್ಲೇಶ್ವರ ವಾರ್ಡ್‌ನ ಯಶವಂತಪುರ ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಓ) ಆವರಣದಲ್ಲಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ವಿನೂತನವಾಗಿ ನಿರ್ಮಾಣ ಮಾಡಲಾಗಿರುವ ಸುವಿಧಾ ಕ್ಯಾಬಿನ್ ಅನ್ನು ಉದ್ಘಾಟಿಸಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳುವ ಪೌರ ಕಾರ್ಮಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ಸ್ಥಾಪನೆ ಮಾಡಲಾಗಿದೆ ಎಂದರು.

ಮೇಯರ್ ಗೌತಮ್ ಕುಮಾರ್ ಮಾತನಾಡಿ, ನಗರವನ್ನು ಸ್ವಚ್ಛವಾಗಿಡುವ ಸ್ವಚ್ಛತಾ ಯೋಧರ ಸುರಕ್ಷತೆ, ಯೋಗಕ್ಷೇಮ ಮತ್ತು ಆರೋಗ್ಯದ ಹಿತದೃಷ್ಟಿಯಿಂದ ಬಿಬಿಎಂಪಿಯು ವಿನೂತನವಾಗಿ ಸುವಿಧಾ ಕ್ಯಾಬಿನ್ ಯೋಜನೆ ಜಾರಿಗೊಳಿಸಿದೆ. ಪ್ರಾಯೋಗಿಕವಾಗಿ ಆರಂಭವಾಗಿರುವ ಈ ಕ್ಯಾಬಿನ್ ಅನ್ನು ಜಕ್ಕೂರು ವಾರ್ಡ್‌ನಲ್ಲೂ ಇನ್ನು ಕೆಲವೇ ದಿನಗಳಲ್ಲಿ ಆರಂಭಿಸಲಾಗುತ್ತದೆ. ನಂತರ ಹಂತ ಹಂತವಾಗಿ ಎಲ್ಲಾ 198 ವಾರ್ಡ್‌ಗಳಲ್ಲಿ ಇಂತಹ ಕ್ಯಾಬಿನ್ ಅನ್ನು ಸ್ಥಾಪನೆ ಮಾಡಲಾಗುವುದು ಎಂದರು.

ಆಡಳಿತ ಪಕ್ಷದ ನಾಯಕ ಮುನೀಂದ್ರ ಕುಮಾರ್, ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಮಂಜುನಾಥರಾಜು, ಪಾಲಿಕೆ ಸದಸ್ಯ ಜಯಪಾಲ, ಆಯುಕ್ತ ಬಿ.ಎಚ್.ಅನಿಲ್‌ಕುಮಾರ್, ವಿಶೇಷ ಆಯುಕ್ತ ರಂದೀಪ್ ಮತ್ತಿತರು ಉಪಸ್ಥಿತರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:10.06.2020

## 103. ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಹೊಸ ಆಯಾಮ: ಸಿಎಂ

ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮ ನೀಡುವುದು ನಮ್ಮ ಸರ್ಕಾರದ ಗುರಿ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಉದ್ಘಾಟನೆಯನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ನೆರವೇರಿಸಿ ಮಾತನಾಡಿ, 2020 ಫೆಬ್ರವರಿಯಲ್ಲಿ ಹೈದ್ರಾಬಾದ್-ಕರ್ನಾಟಕ ಭಾಗವನ್ನು ಕಲ್ಯಾಣ ಕರ್ನಾಟಕ ಎಂದು ನಮ್ಮ ಸರ್ಕಾರ ಘೋಷಿಸಿತು. ಕೇವಲ ಹೆಸರಿನಿಂದ ಕಲ್ಯಾಣ ಕರ್ನಾಟಕ ಎಂದು ಕರೆದರೆ ಸಾಲದು, ಈ ಪ್ರದೇಶದ 6 ಜಿಲ್ಲೆಗಳ ನಿಜವಾದ ಅಭಿವೃದ್ಧಿ ಸಾಧಿಸುವ ಮೂಲಕ ಕಲ್ಯಾಣದ ಪರಿಕಲ್ಪನೆ ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳಬೇಕು ಎಂಬುದು ಸರ್ಕಾರದ ಆಶಯ ಎಂದರು.

ಕೃಷಿ, ಆರೋಗ್ಯ, ಶಿಕ್ಷಣ, ಸ್ವಯಂ ಉದ್ಯೋಗ, ಗ್ರಾಮ ಸಬಲೀಕರಣ ಮತ್ತು ನೈತಿಕ ತತ್ವಗಳನ್ನು ಸಾಧಿಸಿ, ಕಲ್ಯಾಣ ಕರ್ನಾಟಕ ಜನರ ಬದುಕಿನಲ್ಲಿ ಹೊಸ ಶಕೆಯೊಂದು ಪ್ರಾರಂಭವಾಗಲಿದೆ. ಕಲ್ಯಾಣ ಕರ್ನಾಟಕ ಭಾಗದ ನಾಯಕರಾದ ಮಾಜಿ ಸಂಸದ ಡಾ.ಬಸವರಾಜ ಪಾಟೀಲ ಸೇಡಂ ಕ್ರಾಂತಿಕಾರಕ ಬದಲಾವಣೆಗೆ ಮುನ್ನುಡಿ ಬರೆಯಲು ಸಮರ್ಥರಿದ್ದಾರೆ. ಯಾವುದೇ ಅಭಿವೃದ್ಧಿ ಜನಕೇಂದ್ರಿತವಾಗಿರಬೇಕು ಮತ್ತು ಸ್ಥಳೀಯ ಸಂಪನ್ಮೂಲ ಮತ್ತು ಸ್ಥಳೀಯ ಕೌಶಲವನ್ನು ಆಧರಿಸಿ ಉತ್ಪಾದನೆ ಮತ್ತು ಸೇವೆಯನ್ನು ಒದಗಿಸಿಕೊಳ್ಳಬೇಕು ಎಂದು ಹೇಳಿದರು. ಡಾ.ಬಸವರಾಜ ಪಾಟೀಲ ಸೇಡಂ ಅವರ ಅಧ್ಯಕ್ಷತೆಯಲ್ಲಿ 15 ಜನರ ಆಡಳಿತ ಮಂಡಳಿ ಸದಸ್ಯರ ಸಮಿತಿ ಕಲ್ಯಾಣ ಕರ್ನಾಟಕ ವಿಭಾಗದ ಎಲ್ಲ ಜಿಲ್ಲೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಿದೆ ಎಂದು ತಿಳಿಸಿದರು.

ಆಧಾರ:ಉದಯವಾಣಿ, ದಿನಾಂಕ:10.06.2020

## 104. ಶಿಕ್ಷಕರಿಗೆ ಗುಡ್‌ನ್ಯೂಸ್: ಕಡ್ಡಾಯ ವರ್ಗಾವಣೆ ಇಲ್ಲ

ಬೆಂಗಳೂರು ಶಿಕ್ಷಕರು ತೀವ್ರವಾಗಿ ವಿರೋಧಿಸಿದ್ದ ಕಡ್ಡಾಯ ವರ್ಗಾವಣೆಯನ್ನು ಕೈ ಬಿಡುವ ಜೊತೆಗೆ ವರ್ಗಾವಣೆಯಲ್ಲಿ 50 ವರ್ಷ ಮೀರಿದ ಶಿಕ್ಷಕಿಯರು ಹಾಗೂ 55 ವರ್ಷ ಮೀರಿದ ಶಿಕ್ಷಕರಿಗೆ ವಿನಾಯಿತಿ ನೀಡುವುದು ಸೇರಿದಂತೆ ಹಲವು ಅಂಶಗಳು ಇರುವ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮ–2020 ಕರಡನ್ನು ಸರ್ಕಾರ ಪ್ರಕಟಿಸಿದೆ. ಕರಡು ಸಂಬಂಧ ಜೂನ್ 25ರ ವರೆಗೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹೊಸ ವರ್ಗಾವಣೆ ಕರಡು ನೀತಿಯಲ್ಲಿ ಪ್ರಮುಖವಾಗಿ ಕಡ್ಡಾಯ ವರ್ಗಾವಣೆ ತೆಗೆದುಹಾಕಲಾಗಿದ್ದು, ಸಮಗ್ರ ಹೊಸ ಕಾಯ್ದೆ ಎಂದು ನಾಮಕರಣ ಮಾಡಲಾಗಿದೆ. ಶೇ.20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆಗಳಿರುವ ತಾಲ್ಲೂಕುಗಳಿಗೆ ಮಾತ್ರ ವರ್ಗಾವಣೆ ಮಾಡಬೇಕು ಎನ್ನುವ ಮಾನದಂಡವನ್ನು ಕೈಬಿಡಲಾಗಿದೆ. ವರ್ಗಾವಣೆಯಲ್ಲಿ 50 ವರ್ಷ ಮೀರಿದ ಶಿಕ್ಷಕಿಯರು ಹಾಗೂ 55 ವರ್ಷ ಮೀರಿದ ಶಿಕ್ಷಕರಿಗೆ ವಿನಾಯಿತಿ ನೀಡಲಾಗಿದೆ. ವಿಶೇಷ ಪ್ರಕರಣಗಳನ್ನು ಶೇ.15ರ ವರ್ಗಾವಣೆ ಮಿತಿಯಿಂದ ಹೊರಗಿಡಲಾಗಿದೆ.

ವರ್ಗಾವಣೆ ಗೊಂದಲ ನಿವಾರಣೆಗಾಗಿ 'ಕುಂದು ಕೊರತೆಯ ನಿವಾರಣಾ' ಅಧಿಕಾರಿ ನೇಮಕಕ್ಕೆ ಪ್ರಸ್ತಾಪಿಸಲಾಗಿದೆ. ಪತಿ–ಪತ್ನಿ ಪ್ರಕರಣದಲ್ಲಿ ಸರ್ಕಾರದ ಸಾಮಾನ್ಯ ವರ್ಗಾವಣೆ ನೀತಿಯಲ್ಲಿರುವಂತೆ ಕೇವಲ ಸರ್ಕಾರಿ, ಖಾಸಗಿ ಹಾಗೂ ಅನುದಾನಿತ ಶಾಲೆಗಳಿಗೆ ಸೀಮಿತಗೊಳಿಸಿ ಉಳಿದ ಪ್ರಕರಣಗಳನ್ನು ಕೈಬಿಡಲಾಗಿದೆ.

ಜನರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಕ್ರೂಢೀಕರಿಸಿ ಬದಲಾವಣೆ ಅವಶ್ಯವಿದ್ದಲ್ಲಿ ಅದನ್ನು ಸೇರಿಸಿ ಅಂತಿಮವಾಗಿ ನಿಯಮ ರೂಪಿಸಲಾಗುತ್ತದೆ. ನಂತರ ಸಚಿವ ಸಂಪುಟದಲ್ಲಿ ಅನುಮತಿ ಪಡೆದು, ಅಧಿಸೂಚನೆ ಪ್ರಕಟಿಸಲಾಗುತ್ತದೆ.

ಆಧಾರ:ಕನ್ನಡಪ್ರಭ, ದಿನಾಂಕ:11.06.2020

## 105. ರಾಜ್ಯ ಸರ್ಕಾರ ಮಹತ್ವದ ನಿರ್ಧಾರ 5ನೇ ತರಗತಿವರೆಗೆ ಆನ್‌ಲೈನ್ ಕ್ಲಾಸಿಲ್ಲ

ಬೆಂಗಳೂರು ಎಲ್.ಕೆ.ಜಿ. ಯಿಂದ ಐದನೇ ತರಗತಿವರೆಗೆ ಆನ್‌ಲೈನ್ ತರಗತಿ ರದ್ದು. 6 ರಿಂದ 10ನೇ ತರಗತಿವರೆಗೆ ಆನ್‌ಲೈನ್ ತರಗತಿ ಹೇಗೆ ನಡೆಸಬೇಕು ಎಂಬ ಬಗ್ಗೆ ತಜ್ಞರ ವರದಿ ಪಡೆದು ಸರ್ಕಾರ ಈ ಬಗ್ಗೆ ತೀರ್ಮಾನ ಕೈಗೊಳ್ಳುವವರೆಗೆ ಈ ತರಗತಿಗಳಿಗೂ ಆನ್‌ಲೈನ್ ಕ್ಲಾಸ್ ನಡೆಸುವಂತಿಲ್ಲ ಮತ್ತು ಆನ್‌ಲೈನ್ ಕ್ಲಾಸ್ ನೆಪದಲ್ಲಿ ಶುಲ್ಕ ಸಂಗ್ರಹಿಸುವಂತಿಲ್ಲ.

ಆನ್‌ಲೈನ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಡಿನ ಹಿರಿಯ ಶಿಕ್ಷಣ ತಜ್ಞರು, ಮಾನಸಿಕ ಆರೋಗ್ಯ ವಿಭಾಗದ ಪರಿಣಿತರು, ಖಾಸಗಿ ವಿದ್ಯಾಸಂಸ್ಥೆಗಳ ಸಂಘಟನೆಗಳ ಪ್ರತಿನಿಧಿಗಳು ಸೇರಿದಂತೆ ಶೈಕ್ಷಣಿಕ ಸುಧಾರಣೆ ವಿಷಯದ ಸಂಸ್ಥೆಗಳ ಪ್ರತಿನಿಧಿಗಳೊಂದಿಗೆ ನಡೆಸಿದ ಸುದೀರ್ಘ ಸಮಾಲೋಚನೆ ನಂತರ ರಾಜ್ಯ ಸರ್ಕಾರ ಈ ನಿರ್ದೇಶನಗಳನ್ನು ಶಾಲೆಗಳಿಗೆ ನೀಡಿದೆ. ಒಂದು ವೇಳೆ ಆನ್‌ಲೈನ್ ತರಗತಿಗಳನ್ನು ನಡೆಸುತ್ತಿದ್ದರೆ ಕೂಡಲೇ ಸ್ಥಗಿತಗೊಳಿಸಬೇಕು. ಸ್ಥಗಿತಗೊಳಿಸದ ಶಾಲೆಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಾಗುವುದು ಎಂದು ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಎಚ್ಚರಿಕೆ ನೀಡಿದರು.

ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್, ಎಲ್‌ಕೆಜಿ, ಯುಕೆಜಿ. ಮತ್ತು 1 ರಿಂದ 5ನೇ ತರಗತಿವರೆಗೆ ಮಕ್ಕಳಿಗೆ ಕಲಿಕೆ ಮಾರಕವಾಗಿದೆ. ಸಿಬಿಎಸ್‌ಇ, ಐಸಿಎಸ್‌ಇ ಮತ್ತು ರಾಜ್ಯ ಪಠ್ಯಕ್ರಮ ಸೇರಿದಂತೆ ಎಲ್ಲಾ ರೀತಿಯ ಖಾಸಗಿ ಶಿಕ್ಷಣ ಸಂಸ್ಥೆಗಳು ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳಿಗೆ ಆನ್‌ಲೈನ್ ತರಗತಿಗಳನ್ನು ನಡೆಸಬಾರದು ಮತ್ತು ಆನ್‌ಲೈನ್ ತರಗತಿ ಹೆಸರಿನಲ್ಲಿ ಶುಲ್ಕವನ್ನು ಕೂಡ ಸಂಗ್ರಹಿಸಬಾರದು.

6 ರಿಂದ 10ನೇ ತರಗತಿಗಳಲ್ಲಿ ಆನ್‌ಲೈನ್ ತರಗತಿ ಸಾಧಕ–ಬಾಧಕ ಪರಾಮರ್ಶಿಸಲು ಹಾಗೂ ಒಂದು ವೇಳೆ ಆನ್‌ಲೈನ್ ತರಗತಿ ನಡೆಸಲೇಬೇಕಾದರೆ ಅದು ಹೇಗಿರಬೇಕು ಎಂಬ ಮಾರ್ಗಸೂಚಿ ನೀಡಲು ಹಿರಿಯ ಶಿಕ್ಷಣ ತಜ್ಞರ ಸಮಿತಿ ರಚಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರೊ.ಎಂ.ಕೆ. ಶ್ರೀಧರ್ ನೇತೃತ್ವದ ತಂಡದಲ್ಲಿ ಹಿರಿಯ ಶಿಕ್ಷಣ ತಜ್ಞರಾದ ಪ್ರೊ. ಗುರುರಾಜ ಕರ್ಜಗಿ, ಡಾ.ವಿ.ಪಿ. ನಿರಂಜನಾರಾಧ್ಯ,

ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಪ್ರತಿನಿಧಿಗಳಾದ ಹೃಷಿಕೇಶ್, ನಿಮ್ಹಾನ್ಸ್ ಸಂಸ್ಥೆಯ ಮಕ್ಕಳ ಮಾನಸಿಕ ತಜ್ಞರು, ಅರ್ಲಿಚೈಲ್ಡ್‌ಹುಡ್ ಸಂಘಟನೆಯ ಪ್ರತಿನಿಧಿಗಳು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಮಿತಿಯಲ್ಲಿ ಇದ್ದಾರೆ. ಸಮಿತಿಯು ಹತ್ತು ದಿನಗಳಲ್ಲಿ ವರದಿ ನೀಡಲಿದೆ. ಶಿಕ್ಷಣದಲ್ಲಿ ತಂತ್ರಜ್ಞಾನವನ್ನು ಯಾವ ರೀತಿ ಬಳಸಿಕೊಳ್ಳಬೇಕು, ರಜಾ ಅವಧಿಯಲ್ಲಿ ಮಕ್ಕಳ ಜ್ಞಾನಾರ್ಜನೆಗೆ ಪೂರಕವಾಗಿ ಹೇಗೆ ತಂತ್ರಜ್ಞಾನ ಬಳಸಿಕೊಳ್ಳಬೇಕು ನಗರ ಹಾಗೂ ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿ/ಪೋಷಕರ ಸಾಮಾಜಿಕ ಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ತಂತ್ರಜ್ಞಾನ ಹೇಗೆ ಬಳಸಿಕೊಳ್ಳಬೇಕು ಎಂಬುದು ಸೇರಿದಂತೆ ಆನ್‌ಲೈನ್ ತರಗತಿಗಳು ಹೇಗಿರಬೇಕು ಎಂಬ ಮಾರ್ಗಸೂಚಿ ರೂಪಿಸುವಂತೆ ಈ ಸಮಿತಿಗೆ ಸರ್ಕಾರ ನಿರ್ದೇಶಿಸಿದೆ.

ಆಧಾರ:ಕನ್ನಡಪ್ರಭ, ದಿನಾಂಕ:11.06.2020

## 106. ಎಸ್ಸಿ, ಎಸ್ಟಿ ಯೋಜನೆಗಳ ಸಮರ್ಪಕ ಜಾರಿಗೆ ಡಿಸಿಎಂ ಸೂಚನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಕಲ್ಯಾಣಕ್ಕಾಗಿ ರೂಪಿಸಿರುವ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಉಪ ಮುಖ್ಯಮಂತ್ರಿ ಗೋವಿಂದ.ಎಂ ಕಾರಜೋಳ ಅಧಿಕಾರಿಗಳಿಗೆ ಸೂಚನೆ ನೀಡಿರುತ್ತಾರೆ.

ವಿಧಾನ ಸೌಧದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣ ಸಮಿತಿ ಸಭೆಯಲ್ಲಿ ಮಾತನಾಡಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸಿ ಅನುದಾನವನ್ನು ಒದಗಿಸಿದೆ. ಎಲ್ಲಾ ಇಲಾಖೆಗಳ ಅಧಿಕಾರಿಗಳು ಸ್ವಯಂ ಪ್ರೇರಿತವಾಗಿ ಈ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಸಮುದಾಯದವರು ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ಅಭಿವೃದ್ಧಿಯಾಗಬೇಕು ಎಂದು ತಿಳಿಸಿದರು.

ಆಧಾರ:ಕನ್ನಡಪ್ರಭ, ದಿನಾಂಕ:11.06.2020

## 107. ಆಟೋ, ಟ್ಯಾಕ್ಸಿ ಚಾಲಕರಿಗೆ 40 ಕೋಟಿ ಬಿಡುಗಡೆ

ಲಾಕ್‌ಡೌನ್ ಸಮಯದಲ್ಲಿ ದೈನಂದಿನ ಆದಾಯವಿಲ್ಲದೆ ಸಂಕಷ್ಟ ಅನುಭವಿಸಿದ್ದ ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಘೋಷಣೆ ಮಾಡಿದ್ದ ಹಣವನ್ನು ಸರ್ಕಾರ ಬಿಡುಗಡೆ ಮಾಡಿದ್ದು, ಒಟ್ಟು ರೂ.40 ಕೋಟಿ ಬಿಡುಗಡೆ ಮಾಡಿದೆ.

ರೈತರು, ಉದ್ಯಮಿಗಳಿಗೆ ಆರ್ಥಿಕ ನೆರವು ನೀಡಿದಂತೆ ಆಟೋ ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರಿಗೆ ಒಂದು ಬಾರಿ ಪರಿಹಾರವಾಗಿ ಮುಖ್ಯಮಂತ್ರಿ ಬಿ.ಎಸ್.ಯಡಿಯರಪ್ಪ ರೂ.5 ಸಾವಿರ ಪರಿಹಾರ ನೀಡುವ ಘೋಷಣೆಯನ್ನು ಮಾಡಿದ್ದರು.

ಕಾರ್ಮಿಕ ಇಲಾಖೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅನುದಾನದಲ್ಲಿ ಹಣ ಬಿಡುಗಡೆ ಮಾಡಲಾಗಿದೆ. ಹೆಚ್ಚುವರಿ ಅನುದಾನದ ಅಗತ್ಯ ಇದ್ದರೆ ಸೂಕ್ತ ಕ್ರಮ ಕೈಗೊಂಡು ಬಿಡುಗಡೆ ಮಾಡಲಾಗುವುದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:11.06.2020

## 108. ರಾಜ್ಯದಲ್ಲಿ ಶಿಕ್ಷಣ ಸುಧಾರಣೆಗೆ ದೊರೆಸ್ವಾಮಿ ನೇತೃತ್ವದ ಸಮಿತಿ

ರಾಜ್ಯದಲ್ಲಿರುವ ಶಿಕ್ಷಣ ಸಂಸ್ಥೆಗಳಿಗೆ ಮಾರ್ಗಸೂಚಿ ರಚನೆ ಮತ್ತು ಅನುಷ್ಠಾನಕ್ಕಾಗಿ ಶಿಕ್ಷಣ ಸುಧಾರಣೆಗಳ ಸಲಹೆಗಾರ ಪ್ರೊ.ಎಂ.ಆರ್. ದೊರೆಸ್ವಾಮಿ ನೇತೃತ್ವದಲ್ಲಿ ಎಂಟು ಸದಸ್ಯರ ಸಮಿತಿ ರಚಿಸಲಾಗಿದೆ.

ಪ್ರಾಥಮಿಕ ಶಾಲಾ ಹಂತದಿಂದ ವಿಶ್ವವಿದ್ಯಾಲಯದ ಹಂತದವರೆಗೆ ಶಿಕ್ಷಣದ ಮಾರ್ಗಸೂಚಿ ಅನುಷ್ಠಾನ ಹಾಗೂ ಇತರೆ ರೂಪರೇಷೆಗಳನ್ನು ಸಿದ್ಧಪಡಿಸುವ ಮೂಲಕ ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಸುಧಾರಣೆ ತರಬೇಕಿದೆ. ಈ ಸುಧಾರಣೆ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವುದಕ್ಕಾಗಿ ಶಿಕ್ಷಣ ತಜ್ಞರ ಸಮಿತಿ ರಚಿಸಲಾಗಿದ್ದು, ಪ್ರೊ.ಎಂ.ಆರ್.ದೊರೆಸ್ವಾಮಿ ಅವರು ಸಮಿತಿ ಅಧ್ಯಕ್ಷರು, ರೇವಾ ವಿವಿ ಕುಲಪತಿ ಡಾ.ಪಿ.ಶ್ಯಾಮರಾಜು, ವಿಶ್ರಾಂತ ಕುಲಪತಿಗಳಾದ ಪ್ರೊ.ಹೆಚ್.ಪಿ.ಖಿಂಚ, ಪ್ರೊ.ಕೆ.ಸಿದ್ದಪ್ಪ, ಪ್ರೊ.ಬಿಸಲಯ್ಯ, ಬೆಂ.ವಿವಿ ಕುಲಪತಿ ಪ್ರೊ.ಎಸ್.ಜಾಫಟ್,

ಮೈಸೂರು ವಿವಿ ಕುಲಪತಿ ಡಾ.ಹೇಮಂತ್‌ಕುಮಾರ್, ಪಿಇಎಸ್ ವಿವಿ ಕುಲಪತಿ ಡಾ.ಸೂರ್ಯಪ್ರಸಾದ್, ಇಂಡಿಯನ್ ಅಕಾಡೆಮಿ ಅಧ್ಯಕ್ಷ ಡಾ.ಸೋಮಶೇಖರ್ ಹಾಗೂ ನಿವೃತ್ತ ಪ್ರಾಧ್ಯಾಪಕ ಡಾ.ಆರ್.ನಾಗರಾಜಯ್ಯ ಸಮಿತಿ ಸದಸ್ಯರಾಗಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:11.06.2020

## 109. ಕೃಷಿ ಭೂಮಿ ಖರೀದಿ ನಿರ್ಬಂಧ ರದ್ದು

ರಾಜ್ಯದ ರೈತರ ಹಿತ ಕಾಯುವ ನೆಪದಲ್ಲಿ ರಾಜ್ಯ ಸರ್ಕಾರ, ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತರಲು ಮುಂದಾಗಿದೆ. ಇದರಲ್ಲಿ ಕೃಷಿಯೇತರ ಚಟುವಟಿಕೆಯಲ್ಲಿರುವವರೂ ಕೃಷಿ ಭೂಮಿ ಪಡೆಯಲು ಅವಕಾಶ ಕಲ್ಪಿಸಲು ಮುಂದಾಗಿರುವುದು ಕೃಷಿಕರಲ್ಲಿ ಆತಂಕಕ್ಕೆ ಕಾರಣವಾಗಿದೆ.

ಇಷ್ಟು ದಿನ ಕೃಷಿ ಜಮೀನು ಪಡೆಯುವುದಕ್ಕೆ ಹಲವು ಕಟ್ಟಲೆಗಳಿದ್ದವು. ಇದರೊಂದಿಗೆ ವ್ಯಾಪಾರಿಗಳು ಕೃಷಿ ಜಮೀನು ಖರೀದಿಸಲು ಅವಕಾಶ ನೀಡಿರಲಿಲ್ಲ. ಆದರೀಗ ಕೃಷಿ ಜಮೀನು ಖರೀದಿಸಲು ವಿಧಿಸಲಾಗಿದ್ದ ನಿರ್ಬಂಧಗಳನ್ನು ತೆಗೆದು ಹಾಕಿ, ಯಾರು ಬೇಕಾದರೂ ಕೃಷಿ ಜಮೀನನ್ನು ಖರೀದಿಸಿ ಕೃಷಿ ಮಾಡಲು ಅವಕಾಶ ನೀಡುವ ಹೊಸ ಕಾನೂನನ್ನು ಜಾರಿ ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಭೂ ಸುಧಾರಣಾ ಕಾಯಿದೆಯಲ್ಲಿ ತಿದ್ದುಪಡಿ ತರಲು ರಾಜ್ಯ ಸರ್ಕಾರ ನಿರ್ಧರಿಸಿದ್ದು, ಇದನ್ನು ಮುಂದಿನ ಅಧಿವೇಶನದಲ್ಲಿ ಮಂಡಿಸಿ, ಒಪ್ಪಿಗೆ ಪಡೆಯಲು ನಿರ್ಧರಿಸಲಾಗಿದೆ. ಆದರೆ ಈ ರೀತಿಯ ತಿದ್ದುಪಡಿಯಿಂದ ಭವಿಷ್ಯದಲ್ಲಿ ಕೃಷಿ ಚಟುವಟಿಕೆಗೆ ಹೊಡೆತ ಬೀಳುವ ಆತಂಕವನ್ನು ಕೆಲವರು ಹೊರಹಾಕಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮತ್ತು ಕಂದಾಯ ಸಚಿವ ಆರ್.ಅಶೋಕರವರು ಮಾತನಾಡಿ 'ಭೂ ಸುಧಾರಣಾ ಕಾಯಿದೆಯಲ್ಲಿ ಜಾರಿಯಲ್ಲಿದ್ದ 63ಎ, 79ಎ, ಬಿ,ಸಿ ಕಾನೂನುಗಳನ್ನು ರದ್ದು ಮಾಡಿ ಹೊಸ ಕಾನೂನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಅನೇಕ ಬಾರಿ ಭೂ ಸುಧಾರಣಾ ಕಾಯಿದೆಗಳು ಬದಲಾಗಿವೆ. ಜೊತೆಗೆ ಇವುಗಳಿಂದ ರೈತರಿಗೆ ಅನುಕೂಲಕ್ಕಿಂತ ಕಿರುಕುಳಗಳೇ ಹೆಚ್ಚಾಗಿವೆ. ನ್ಯಾಯಾಲಯಗಳಲ್ಲೂ ವ್ಯಾಜ್ಯಗಳು ಸಾಕಷ್ಟಿವೆ. ಇದಕ್ಕೆಲ್ಲ ಪರಿಹಾರವಾಗಿ ಈಗಿನ ಭೂ ಕಾಯಿದೆ ರದ್ದು ಮಾಡಿ ಹೊಸ ಕಾಯಿದೆ ರೂಪಿಸಲು ಸಚಿವ ಸಂಪುಟ ಒಪ್ಪಿಗೆ ನೀಡಲಾಗಿದೆ ಎಂದರು.

'ಮುಂದಿನ ವಿಧಾನಸಭೆಯ ಅಧಿವೇಶನದಲ್ಲಿ ಈ ಹೊಸ ಭೂ ಸುಧಾರಣಾ ಕಾಯಿದೆಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ಈ ಕಾಯಿದೆ ಜಾರಿಗೆ ಸುಗ್ರೀವಾಜ್ಞೆ ಹೊರಡಿಸುವ ಆತುರದ ತೀರ್ಮಾನ ಕೈಗೊಳ್ಳಲಾಗದು. ನೂತನ ಕಾಯಿದೆಯಿಂದ ಇತರ ರಾಜ್ಯಗಳಲ್ಲಿರುವಂತೆ, ಕರ್ನಾಟಕದಲ್ಲೂ ಕೃಷಿಕರಲ್ಲದವರು ಕೃಷಿ ಜಮೀನನ್ನು ಖರೀದಿಸಿ ಕೃಷಿ ಮತ್ತಿತರ ಚಟುವಟಿಕೆಗಳನ್ನು ನಡೆಸಬಹುದಾಗಿದೆ' ಎಂದರು.

ಈ ಮೊದಲು 2 ಲಕ್ಷಕ್ಕಿಂತ ಹೆಚ್ಚು ಕೃಷಿಯೇತರ ಆದಾಯ ಇರುವವರು ಕೃಷಿ ಜಮೀನನ್ನು ಖರೀದಿಸುವಂತಿರಲಿಲ್ಲ. ನಂತರ ಆದಾಯದ ಮಿತಿಯನ್ನು 25 ಲಕ್ಷಕ್ಕೆ ಏರಿಸಲಾಗಿತ್ತು. ಈಗ ಇದನ್ನೆಲ್ಲ ರದ್ದು ಮಾಡಿ ಕೃಷಿ ಜಮೀನು ಖರೀದಿಸಲು ಅವಕಾಶ ಮಾಡಿಕೊಡುವ ಕಾನೂನು ಜಾರಿ ಮಾಡಲಾಗುವುದು. ಇದರಿಂದ ರೈತರು ಸಹ ತಮ್ಮ ಜಮೀನಿಗೆ ಒಳ್ಳೆಯ ಬೆಲೆ ಪಡೆಯಲಿದ್ದಾರೆ. ಈ ಸಂಬಂಧ ಸುಳ್ಳು ದಾಖಲೆಗಳು, ಪ್ರಮಾಣ ಪತ್ರ ನೀಡಿ ಕೃಷಿ ಜಮೀನು ಖರೀದಿಸುವ ವ್ಯವಹಾರಗಳು ನಿಲ್ಲಲಿವೆ' ಎಂದರು

**ಸಚಿವ ಸಂಪುಟದ ಪ್ರಮುಖ ಅಂಶಗಳು:–**

- ರೈತ ಚಳುವಳಿ, ಕನ್ನಡ ಚಳುವಳಿ ಹಾಗೂ ಗಣಪತಿ ವಿಸರ್ಜನೆಯಂತಹ ಗಲಾಟೆಯಂತಹ 53 ಪ್ರಕರಣಗಳು ವಾಪಸ್ಸು.
- 47 ತಾಲ್ಲೂಕುಗಳ 1,307 ಆರೋಗ್ಯ ಉಪ ಕೇಂದ್ರಗಳನ್ನು, ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲು ನಿರ್ಧಾರ.
- ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯಕ್ಕೆ, ಬೆಂಗಳೂರು ನಗರ ವಿಶ್ವ ವಿದ್ಯಾನಿಲಯ ಎಂದು ಹೆಸರಿಡಲು ಒಪ್ಪಿಗೆ.

- ಬೆಂಗಳೂರಿನ ಸರ್ಕಾರಿ ವಿಜ್ಞಾನ ಕಾಲೇಜಿಗೆ, ಕ್ಲಸ್ಟರ್ ವಿವಿ ಸ್ಥಾನಮಾನ ನೀಡಿ ಮೇಲ್ದರ್ಜೆಗೇರಿಸಲು ಸಂಪುಟ ಒಪ್ಪಿಗೆ.
- ಹಾಸನ ಹಾಗೂ ಸಿಂಧಗಿಯಲ್ಲಿ ತೋಟಗಾರಿಕಾ ಕಾಲೇಜಿನ ಸ್ಥಾಪನೆ ಸದ್ಯಕ್ಕೆ ಬೇಡವೆಂದು ನಿರ್ಧಾರ.
- ಸಹಕಾರಿ ಸಕ್ಕರೆ ಕಾರ್ಖಾನೆಗಳ ಚುನಾವಣೆಗಳನ್ನು ಹೊರತುಪಡಿಸಿ, ಉಳಿದ ಸಹಕಾರಿ ಸಂಘಗಳ ಚುನಾವಣೆ ನಡೆಸಲು ಒಪ್ಪಿಗೆ.
- ಕರ್ನಾಟಕದ ಉಪ ಖನಿಜ ನಿಯಮಾವಳಿ ಬದಲಿಸಲಾಗಿದೆ.
- ಇಂದಿರಾ ಕ್ಯಾಂಟೀನ್ ದರ ಹೆಚ್ಚಿಸುವ ಬಗ್ಗೆ ಮುಂದಿನ ಸಂಪುಟ ಸಭೆಯಲ್ಲಿ ತೀರ್ಮಾನ.

ಆಧಾರ:ವಿಜಯವಾಣಿ, ದಿನಾಂಕ:12.06.2020

## 110. 2–3 ತಿಂಗಳಲ್ಲಿ ಗ್ರಾಪಂ ಚುನಾವಣೆ – ಸಂಪುಟ ತೀರ್ಮಾನ

ರಾಜ್ಯದಲ್ಲಿ ಜೂನ್ ಹಾಗೂ ಆಗಸ್ಟ್ ತಿಂಗಳಲ್ಲಿ ಅವಧಿ ಮುಕ್ತಾಯಗೊಳ್ಳುವ ಸುಮಾರು 5,800 ಗ್ರಾಮ ಪಂಚಾಯಿತಿಗಳಿಗೆ 2–3 ತಿಂಗಳಲ್ಲಿ ಚುನಾವಣೆ ನಡೆಸಲು ಸರ್ಕಾರ ನಿರ್ಧರಿಸಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ 6,025 ಗ್ರಾಮ ಪಂಚಾಯಿತಿಗಳಿದ್ದು, ಸುಮಾರು 5,800 ಗ್ರಾಪಂಗಳ ಅವಧಿ ಜೂನ್–ಆಗಸ್ಟ್‌ನಲ್ಲಿ ಮುಕ್ತಾಯವಾಗಲಿದೆ. ಈ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ನೇಮಕ ಅಥವಾ ಆಡಳಿತ ಸಮಿತಿ ನೇಮಕ ಮಾಡುವ ಚರ್ಚೆ ನಡೆದಿತ್ತು. ಈಗ ಅದಕ್ಕೆ ತೆರೆ ಬಿದ್ದಿದೆ. ರಾಜ್ಯ ಚುನಾವಣಾ ಆಯೋಗ ಕೂಡ ಕೊರೊನಾ ಕಾರಣಕ್ಕೆ ಅಸಾಧಾರಣ ಪರಿಸ್ಥಿತಿ ಎಂದು ಪರಿಗಣಿಸಿ ಗ್ರಾಪಂಗಳ ಸಾರ್ವತ್ರಿಕ ಚುನಾವಣೆಯನ್ನು ಮುಂದೂಡಿತ್ತು. ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಸಚಿವ ಮಾಧುಸ್ವಾಮಿ, ಗ್ರಾಪಂಗಳಿಗೆ ಚುನಾವಣೆ ನಡೆಸಲು ಸಂಪುಟ ತೀರ್ಮಾನ ತೆಗೆದುಕೊಂಡಿದೆ. ಚುನಾವಣೆ ನಡೆಯುವವರೆಗೆ ಆಡಳಿತಾಧಿಕಾರಿಗಳ ನೇಮಕ ಮಾಡಲು ನಿರ್ಧಾರ ಮಾಡಲಾಗಿದೆ. ಕೊರೊನಾ ಕಾರಣ ಮುಂದೂಡಲ್ಪಟ್ಟಿದ್ದ ಸಹಕಾರ ಸಂಘದ ಚುನಾವಣೆ ನಡೆಸಲು ಸಹ ಸಚಿವ ಸಂಪುಟ ಸಭೆ ಒಪ್ಪಿಗೆ ಸೂಚಿಸಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳನ್ನು ಹೊರತುಪಡಿಸಿ, ಉಳಿದ ಸಹಕಾರ ಸಂಘಗಳ ಚುನಾವಣೆ ನಡೆಸಲಾಗುವುದು ಎಂದು ಸಚಿವ ಮಾಧುಸ್ವಾಮಿ ತಿಳಿಸಿದರು. ಸಕ್ಕರೆ ಕಾರ್ಖಾನೆಗಳ ಸದಸ್ಯರ ಸಂಖ್ಯೆ 2–3 ಸಾವಿರದಷ್ಟಿರುವುದರಿಂದ ಕೊರೊನಾ ಸಂದರ್ಭದಲ್ಲಿ ಈ ಸಂಘಗಳ ಚುನಾವಣೆ ಸಾಧುವಲ್ಲ ಎಂದು ಸರ್ಕಾರ ತೀರ್ಮಾನಿಸಿದೆ.

**ಪ್ರಮುಖ ನಿರ್ಣಯಗಳು:–**

- ಸಾರ್ವಜನಿಕರ ಪರ ಹೋರಾಟದಲ್ಲಿ ಭಾಗಿಯಾಗಿ ಮೊಕದ್ದಮೆ ಎದುರಿಸುತ್ತಿದ್ದ 53 ಪ್ರಕರಣಗಳು ವಾಪಸ್ಸು, ಗಣಪತಿ ವಿಸರ್ಜನೆ, ರೈತರ ಹೋರಾಟ ಮತ್ತಿತರ ಪ್ರಕರಣಗಳು ಇದರಲ್ಲಿ ಸೇರಿವೆ. ಯಾವುದೇ ವೈಯಕ್ತಿಕ ಕೇಸ್‌ಗಳಿಲ್ಲ.
- 8 ಜಿಲ್ಲೆಗಳ 47 ತಾಲ್ಲೂಕಿನ 1,697 ಪ್ರಾಥಮಿಕ ಆರೋಗ್ಯ ಕೇಂದ್ರ 1,307 ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಕೇಂದ್ರಗಳಾಗಿ, 1,307 ಆರೋಗ್ಯ ಉಪಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು ತೀರ್ಮಾನ. ಇದಕ್ಕೆ ಕೇಂದ್ರ ಪುರಸ್ಕೃತ ಪ್ಯಾಕೇಜ್ ಯಡಿಯಲ್ಲಿ ರೂ.11.62 ಕೋಟಿ ಖರ್ಚು ಮಾಡಲು ನಿರ್ಧಾರ.
- ಹಾಸನ ಹಾಗೂ ಸಿಂಧಗಿ ತಾಲ್ಲೂಕಿನ ಅಲಮೇಲದಲ್ಲಿ ಪ್ರಾರಂಭಿಸಲು ಉದ್ದೇಶಿಸಿದ್ದ ತೋಟಗಾರಿಕೆ ಕಾಲೇಜು ಆರಂಭಕ್ಕೆ ತಡೆ.
- ಬೆಂಗಳೂರಿನಿಂದ ಚಿಕ್ಕಬೇಗೂರು ಮತ್ತು ಹುಳಿಮಾವಿನಿಂದ ಒಟ್ಟು 25 ಎಂಎಲ್‌ಡಿ ಸಂಸ್ಕರಿತ ನೀರನ್ನು ಕೆ.ಸಿ ವ್ಯಾಲಿಗೆ ಹರಿಸಲು ರೂ. 40.50 ಕೋಟಿ ಅನುದಾನ ಬಿಡುಗಡೆಗೆ ನಿರ್ಧಾರ.
- ಬೈಂದೂರನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲು ಒಪ್ಪಿಗೆ.

- ನಗರೋತ್ಥಾನ ಕಾಯ್ದೆ ತಿದ್ದುಪಡಿಗೆ ಸಂಪುಟ ಸಮ್ಮತಿ. ಯಾವುದೇ ಯೋಜನೆ ರೂಪಿಸಬೇಕಾದರೆ ಯೋಜನಾ ಪ್ರಾಧಿಕಾರಿಗಳು ಸ್ಥಳೀಯ ಸಂಸ್ಥೆಗಳಿಂದ ಮಾಹಿತಿ ಪಡೆಯುವುದನ್ನು ಕಡ್ಡಾಯಗೊಳಿಸುವ ಸಂಬಂಧ ತಿದ್ದುಪಡಿಗೆ ತೀರ್ಮಾನ.
- 1998ರಲ್ಲಿ ಪ್ರೊಬೆಷನರಿ ಹುದ್ದೆಗೆ ನೇಮಕಗೊಂಡವರಿಗೆ ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗೆ ನಿಗದಿಯಾದ ವೇತನ ಶ್ರೇಣಿ ನೀಡಿಕೆ. ಹಿಂದಿನ ಬಾಕಿ ಕೊಡುವ ಹಾಗಿಲ್ಲ. ಈ ವೃಂದದ ಅಧಿಕಾರಿಗಳಿಗೆ ಪ್ರೊಬೆಷನರಿ ಸೇವಾವಧಿ ರದ್ದುಪಡಿಸಲು ನಿರ್ಧಾರ.
- ಇನ್ನು ಮುಂದೆ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯವೊಂದೇ ದೂರ ಶಿಕ್ಷಣ ನೀಡಬೇಕು. ಅಲ್ಲದೆ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯಕ್ಕೆ ಆದಾಯ ತೆರಿಗೆಯಿಂದ ವಿನಾಯಿತಿ.
- ಚಿಕ್ಕಮಗಳೂರಿನ ತೇಗೂರು ಬಳಿ ಮೆಡಿಕಲ್ ಕಾಲೇಜು ಪ್ರಾರಂಭಿಸಲು ತೀರ್ಮಾನ. ಕಾಲೇಜಿಗೆ ಈ ಹಿಂದೆ ಜಮೀನು ಸಾಕಾಗುತ್ತಿರಲಿಲ್ಲ.
- ರೇರಾ ಕಾಯ್ದೆ ನಿಯಮಗಳಲ್ಲಿ ಬದಲಾವಣೆ. ಸೇಲ್ ಅಗ್ರಿಮೆಂಟ್ ಮಾಡಿಕೊಳ್ಳಲು ಈಗಿರುವ ಕಾಯ್ದೆಯಲ್ಲಿ ಅವಕಾಶವಿರಲಿಲ್ಲ. ಈಗ ಸೇಲ್ ಅಗ್ರಿಮೆಂಟ್ ದಾಖಲೆಯಾಗಲಿದೆ.
- ಸಿಎಆರ್, ಡಿಎಆರ್, ಕೆಎಸ್‌ಆರ್‌ಪಿ, ಕೆಎಸ್‌ಐಎಸ್‌ಎಫ್ ಪೇದೆಗಳು ಸಿವಿಲ್ ಪೊಲೀಸ್ ಅಧಿಕಾರಿ ನೇಮಕಕ್ಕೆ ಅರ್ಜಿ ಸಲ್ಲಿಸಿದರೆ ಶೇ. 10 ಕೃಪಾಂಕ ಕೊಡಲು ತೀರ್ಮಾನ.
- ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗೆ ನೇಮಕಾತಿ ಸಂದರ್ಭದಲ್ಲಿ ಶೇ. 7 ಕೃಪಾಂಕ ನೀಡಲು ನಿರ್ಧಾರ.
- ಅಧಿಕಾರಿಗಳಿಗೆ ಪೂರ್ವಾನ್ವಯ ಮುಂಬಡ್ತಿ, ಶಿಕ್ಷೆ ಮತ್ತು ದಂಡ–ಪ್ರಕರಣಗಳಲ್ಲಿ ಕೆಪಿಎಸ್‌ಸಿ ಸಮಾಲೋಚನೆ ಇಲ್ಲದೆ ಇಲಾಖೆಗಳೇ ನಿರ್ಧಾರ ಕೈಗೊಳ್ಳಲು ಅವಕಾಶ ಕಲ್ಪಿಸಲು ನಿಯಮಗಳಿಗೆ ತಿದ್ದುಪಡಿ.

ಆಧಾರ:ವಿಜಯವಾಣಿ, ದಿನಾಂಕ:12.06.2020

## 111. ಉದ್ಯಮಸ್ನೇಹಿ ಕರ್ನಾಟಕ

ಕೊರೊನಾ ಸಂಕಷ್ಟ ಕಾಲವನ್ನು ಕೈಗಾರಿಕಾಭಿವೃದ್ಧಿಯ ಸದಾವಕಾಶವಾಗಿ ಬಳಸಿಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಶೀಘ್ರವೇ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸುವ ಮೂಲಕ ರಾಜ್ಯವನ್ನು ದೇಶದ ನಂಬರ್ ಒನ್ ಉದ್ಯಮಸ್ನೇಹಿ ರಾಜ್ಯವಾಗಿ ರೂಪಿಸಲು ಮುಂದಾಗಿದೆ. ಇದು ರಾಜ್ಯದಲ್ಲಿ ಉದ್ಯಮ ವಲಯ ಬೆಳವಣಿಗೆಗೆ, ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ ಎಂದು ದೃಢವಾಗಿ ಹೇಳಿದರು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್.

ರಾಜ್ಯದ ಆರ್ಥಿಕತೆ, ವ್ಯವಹಾರ ಮತ್ತು ಜನಜೀವನದ ಪುನರುತ್ಥಾನಕ್ಕೆ ಕೈಗೊಳ್ಳಬೇಕಾಗಿರುವ ಕ್ರಮಗಳನ್ನು ಸಮಾಲೋಚನೆ ಮೂಲಕ ರೂಪಿಸುವ 'ವಿಜಯ ಕರ್ನಾಟಕ'ದ 'ಕರುನಾಡ ಕಟ್ಟೋಣ' ಅಭಿಯಾನದ ಎರಡನೆ ಕಾರ್ಯಕ್ರಮವಾಗಿ ಬೆಂಗಳೂರು ಕಚೇರಿಯಲ್ಲಿ ಆಯೋಜಿಸಲಾಗಿದ್ದ 'ಕೈಗಾರಿಕಾ ಕ್ಷೇತ್ರದ ಪುನಃಶ್ಚೇತನ ಚಿಂತನ ಮಂಥನ' ಕಾರ್ಯಕ್ರಮದಲ್ಲಿ ಅವರು ತಮ್ಮ ಅಭಿಪ್ರಾಯ ಹಂಚಿಕೊಂಡರು.

2019–2024ರ ಅವಧಿಯ ಕೈಗಾರಿಕಾ ನೀತಿಯಡಿ ಮೊದಲು ಉದ್ಯಮ ಸ್ಥಾಪಿಸಿ ಬಳಿಕ ಅನುಮತಿ ಪಡೆಯುವ ಅವಕಾಶವೂ ಇದೆ. ಕೃಷಿಕರಲ್ಲದವರೂ ಕೃಷಿ ಭೂಮಿ ಖರೀದಿಸಲು ಅವಕಾಶ ನೀಡುವ ಭೂಸುಧಾರಣೆ ಕಾಯಿದೆ ತಿದ್ದುಪಡಿ ಕೂಡಾ ರಾಜ್ಯದಲ್ಲಿ ಹೊಸ ಕೈಗಾರಿಕೆಗಳ ಸ್ಥಾಪನೆ ಮತ್ತು ಇರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ನಾಂದಿ ಹಾಡಲಿದೆ ಎಂದು ಸಚಿವರು ತಿಳಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:13.06.2020

## 112. ಭೂಮಿ ಖರೀದಿ ನಿಯಮ ಸಡಿಲಿಕೆ

ಕಳೆದ ವಿಧಾನ ಮಂಡಲ ಅಧಿವೇಶನ ಸಂದರ್ಭದಲ್ಲಿ ಜಾರಿಗೆ ತಂದ ಭೂ ಸುಧಾರಣಾ ಕಾಯಿದೆ ಸೆಕ್ಷನ್ 109 ತಿದ್ದುಪಡಿ ಅನ್ವಯ ರೈತರಿಂದ ಉದ್ಯಮಿಗಳು ಭೂಮಿ ಖರೀದಿಸುವುದಕ್ಕೆ ಇರುವ ನಿಯಮಗಳನ್ನು ಸಡಿಲಗೊಳಿಸಿ ರಾಜ್ಯ ಸರ್ಕಾರ ಹೊಸ ಮಾರ್ಗಸೂಚಿ ಹೊರಡಿಸಿದೆ.

ರಾಜ್ಯಮಟ್ಟದ ಏಕಗವಾಕ್ಷಿ, ಉನ್ನತಮಟ್ಟದ ಒಪ್ಪಿಗೆ ಸಮಿತಿಯಿಂದ ಒಪ್ಪಿಗೆ ಪಡೆದ ಕೈಗಾರಿಕೋದ್ಯಮಿಗಳಿಗೆ ಸೆಕ್ಷನ್ 109ರ ಅನ್ವಯ ರೈತರಿಂದ ಭೂಮಿಯನ್ನು ನೇರವಾಗಿ ಖರೀದಿ ಮಾಡುವುದಕ್ಕೆ ಇದ್ದ ಅಡಚಣೆಗಳನ್ನು ಸರಳೀಕರಿಸುವುದಕ್ಕೆ ಈ ಮಾರ್ಗಸೂಚಿ ನೆರವು ನೀಡಲಿದೆ. ಜೊತೆಗೆ ಹೊಸದಾಗಿ ತಿದ್ದುಪಡಿ ಮಾಡಲು ಉದ್ದೇಶಿಸಿರುವ ಭೂ ಸುಧಾರಣಾ ಕಾಯಿದೆ ಸೆಕ್ಷನ್ 79 ಎ, ಬಿ ಹಾಗೂ ಸೆಕ್ಷನ್ 80ರ ಅನ್ವಯ ಕೃಷಿಕರಲ್ಲದವರು ಕೃಷಿ ಭೂಮಿ ಖರೀದಿ ಮಾಡುವುದಕ್ಕೂ ಈ ಮಾರ್ಗಸೂಚಿಯಿಂದ ಅನುಕೂಲವಾಗುತ್ತದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:17.06.2020

## 113. ಭೂ ಸುಧಾರಣಾ ಕಾಯ್ದೆಯ ಸರ್ಕಾರಿ ಮಾರ್ಗಸೂಚಿ ಪ್ರಕಟ

ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಕಲಂ 109(1)(ಐ)ಗೆ ತಿದ್ದುಪಡಿ ತಂದಿರುವ ಸರ್ಕಾರ, ಭೂಮಿ ನೀಡಿಕೆ ಬಗ್ಗೆ ಮಾರ್ಗಸೂಚಿ ಹೊರಡಿಸಿದೆ. ಕೈಗಾರಿಕೋದ್ಯಮಿಗಳು ರೈತರಿಂದ ನೇರವಾಗಿ ಭೂಮಿ ಹಕ್ಕು ಪಡೆದುಕೊಳ್ಳಲು ಬರುವುದಿಲ್ಲ.

ಕರ್ನಾಟಕ ಉದ್ಯೋಗ ಮಿತ್ರ ವೆಬ್ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು ಕಡ್ಡಾಯ. ಎಸ್.ಎಲ್.ಎಸ್. ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಅನುಮೋದನೆಗೊಂಡ ಪ್ರಸ್ತಾವನೆಗಳಿಗೆ ಪರಿಭಾವಿತ ಭೂ ಪರಿವರ್ತನೆಗೆ ಅನುಸರಿಸಬೇಕಾದ ಮಾರ್ಗಸೂಚಿ ಪ್ರಕಟಿಸಲಾಗಿದ್ದು, ಕೃಷಿ ಜಮೀನನ್ನು ಕೃಷಿಯೇತರ, ಕೈಗಾರಿಕಾ ಉದ್ದೇಶಕ್ಕಾಗಿ ಖರೀದಿಸಲು ಏನೇನು ಕ್ರಮ ಅನುಸರಿಸಬೇಕು ಎನ್ನುವ ಬಗ್ಗೆ ತಿಳಿಸಲಾಗಿದೆ.

ರಾಜ್ಯಮಟ್ಟದ ಏಕಗವಾಕ್ಷಿ ಒಪ್ಪಿಗೆ ಸಮಿತಿ/ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿಗಳು ಅನುಮೋದಿಸಿದ ನಂತರವಷ್ಟೇ ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 63, 79ಎ, 79ಬಿ ಹಾಗೂ 80 ರಿಂದ ವಿನಾಯಿತಿ ಸಿಗಲಿದ್ದು, ಪ್ರಮುಖ ಮಾರ್ಗಸೂಚಿಗಳು ಇಂತಿವೆ.

- ಕೈಗಾರಿಕೋದ್ಯಮಿಗಳು ಇನ್ವೆಸ್ಟ್ ಮೆಮೊರಂಡಮ್‌ನಲ್ಲಿ ಭೂಮಿಗಾಗಿ ಕೋರಿಕೆ ಸಲ್ಲಿಸಲಾಗಿರುವ ಜಮೀನಿನ ದಾಖಲೆ/ವಿವರಗಳೊಂದಿಗೆ ಆನ್‌ಲೈನ್ ಮೂಲಕ (ಕೆಯುಎಂ ಪೋರ್ಟಲ್‌ನಿಂದ) ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಜಮೀನುಗಳ ವಾಸ್ತವಾಂಶದ ಬಗ್ಗೆ ವರದಿ ಹಾಗೂ ನಿಯಮ ಅನುಸಾರ ಭೂ ಸುಧಾರಣಾ ಶುಲ್ಕ ನಿಗದಿಪಡಿಸಿ, ಕರ್ನಾಟಕ ಉದ್ಯೋಗ ಮಿತ್ರ ಮೂಲಕ ಕಳುಹಿಸಬೇಕು. 15 ದಿನಗಳೊಳಗೆ ಜಿಲ್ಲಾಧಿಕಾರಿಗಳು ಎಲ್ಲವನ್ನೂ ಪರಿಶೀಲಿಸಿ ವರದಿ ನೀಡಬೇಕು.
- ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ಎಸ್‌ಎಚ್‌ಎಲ್‌ಸಿಸಿ ಅನುಮೋದನೆ ಬಳಿಕ ಕೈಗಾರಿಕಾಭಿವೃದ್ಧಿ ಆಯುಕ್ತರು ಹೊರಡಿಸುವ ಆದೇಶ ಮಾತ್ರ ಅನ್ವಯ, ಭೂ ಸುಧಾರಣೆ ಕಾಯ್ದೆ 1961 ಕಲಂ 109ರಡಿ ನೀಡುವ ಆದೇಶವಾಗಿರುತ್ತದೆ. ಈ ಆದೇಶದ ಮೇಲೆ ನೋಂದಾಣಾಧಿಕಾರಿ ನೋಂದಣಿ ಮಾಡಬೇಕು.
- ಕಲಂ 109 ಮುಖಾಂತರ ಕ್ರಮಬದ್ಧವಾಗಿ ಅನುಮೋದನೆ ಮತ್ತು ನೋಂದಣಿಯಾದ ಜಮೀನು ಮಾತ್ರ ನಿಯಮಾನುಸಾರ ಕಂದಾಯ ಇಲಾಖೆಯಿಂದ ಭೂಮಿ ತಂತ್ರಾಂಶದಲ್ಲಿ ಆನ್‌ಲೈನ್ ಮೂಲಕ ಹಕ್ಕು ಬದಲಾವಣೆ ಮಾಡತಕ್ಕದ್ದು.
- ಹಕ್ಕು ಬದಲಾವಣೆ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಜಮೀನಿಗೆ ಸಂಬಂಧಿಸಿದಂತೆ ತಗಲುವ ಭೂ ಪರಿವರ್ತನಾ ಶುಲ್ಕ ಪಾವತಿಗೆ ಆನ್‌ಲೈನ್ ಪೇಮೆಂಟ್, ಡಿಡಿ ಮೂಲಕ ಜನರೇಟ್ ಮಾಡಬೇಕು. ಅದನ್ನು ಕೆಯುಎಂ ಪೋರ್ಟಲ್ ಮೂಲಕ ಶುಲ್ಕ ಪಾವತಿಸಬೇಕು.

- ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿದ ಬಳಿಕ ಡಿಜಿಟಲ್ ಸಹಿ ಮೂಲಕ ಭೂ ಪರಿವರ್ತನೆ ಆದೇಶ ಭೂಮಿ ಆನ್‌ಲೈನ್ ಪೋರ್ಟಲ್‌ನಲ್ಲಿ ಹೊರಡಿಸಬೇಕು. ಈ ಆದೇಶವನ್ನು ಕೆಯುಎಂ ಪೋರ್ಟಲ್‌ನಲ್ಲಿ ಪಡೆಯಲು ಇಂಟಿಗ್ರೇಷನ್ ಮಾಡಬೇಕು.
- ಮೇಲ್ಕಂಡ ಮಾರ್ಗಸೂಚಿಗಳನ್ವಯ ಭೂಮಿ ತಂತ್ರಾಂಶ, ಕಾವೇರಿ ತಂತ್ರಾಂಶ ಹಾಗೂ ಕರ್ನಾಟಕ ಉದ್ಯೋಗ ಮಿತ್ರ ತಂತ್ರಾಂಶದಲ್ಲಿ ಅಗತ್ಯ ಮಾರ್ಪಾಡು ಮಾಡಬೇಕು. ಭೂಮಿ ಹಕ್ಕು ಬದಲಾವಣೆ ಪ್ರಕ್ರಿಯೆ ಸಂದರ್ಭ ಈ 10 ನಿಯಮಗಳನ್ನು ಪಾಲಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:17.06.2020

## 114. ಖಾಸಗಿ ಆಸ್ಪತ್ರೆ ಚಿಕಿತ್ಸೆಗೆ ದರ ನಿಗದಿ

ಕೊರೋನಾ ಸೋಂಕಿತರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಆಗುವ ಸುಲಿಗೆ ತಪ್ಪಿಸಲು ರಾಜ್ಯ ಸರ್ಕಾರದ ವತಿಯಿಂದಲೇ ನಡೆದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ದರ ನಿಗದಿ ಅಂತಿಮಗೊಳಿಸಿದ್ದು, ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ.

ಆರೋಗ್ಯ ಸಚಿವ ಬಿ.ಶ್ರೀರಾಮುಲು ನೇತೃತ್ವದಲ್ಲಿ ನಡೆದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಖಾಸಗಿ ಆಸ್ಪತ್ರೆಗಳ ಒಕ್ಕೂಟ, ಜೂನ್.4 ರಂದು ಸರ್ಕಾರದಿಂದ ಚಿಕಿತ್ಸಾ ದರ ನಿಗದಿಗೆ ರಚಿಸಿದ್ದ 8 ಮಂದಿ ಸದಸ್ಯರ ಸಮಿತಿಯ ಶಿಫಾರಸ್ಸುಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ದರ ನಿಗದಿ ಮಾಡಲು ನಿರ್ಧರಿಸಿದ್ದಾರೆ.

ಇದರಂತೆ ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ (ಎಬಿ-ಎಆರ್‌ಕೆ) ಯೋಜನೆಯಡಿ ಚಿಕಿತ್ಸೆ ಪಡೆಯುವ ಬಿಪಿಎಲ್ ಕಾರ್ಡ್‌ದಾರರಿಗೆ ಒಂದು ದರ ಹಾಗೂ ನಗದು ಪಾವತಿ, ವಿಮಾ ಯೋಜನೆಗಳಡಿ ಚಿಕಿತ್ಸೆ ಪಡೆಯುವವರಿಗೆ ಪ್ರತ್ಯೇಕ ದರ ನಿಗದಿ ಮಾಡಲಾಗಿದೆ.

ಎಬಿ-ಎಆರ್‌ಕೆ ಯೋಜನೆಯಡಿ ದಿನಕ್ಕೆ ಜನರಲ್ ವಾರ್ಡ್‌ಗೆ ರೂ.5,200 ಆಕ್ಸಿಜನ್ ವ್ಯವಸ್ಥೆಯುಳ್ಳ ವಾರ್ಡ್‌ಗೆ ನಿತ್ಯ ರೂ.7 ಸಾವಿರ, ಐಸಿಯು ವಾರ್ಡ್‌ಗೆ ರೂ.8,500, ಐಸಿಯು ಜೊತೆಗೆ ವೆಂಟಿಲೇಟರ್ ಉಳ್ಳ ವಾರ್ಡ್‌ಗೆ ರೂ.10 ಸಾವಿರ ನಿಗದಿ ಮಾಡಲಾಗಿದೆ.

ಉಳಿದಂತೆ ನಗದು ಹಾಗೂ ವಿಮಾ ಯೋಜನೆ ಹೊಂದಿರುವವರಿಗೆ ಜನರಲ್ ವಾರ್ಡ್‌ಗೆ ದಿನಕ್ಕೆ ರೂ.10 ಸಾವಿರ, ಆಕ್ಸಿಜನ್ ವ್ಯವಸ್ಥೆಯುಳ್ಳ ವಾರ್ಡ್‌ಗೆ ರೂ.12 ಸಾವಿರ, ಐಸಿಯು ವಾರ್ಡ್‌ಗೆ ರೂ.15,000, ಐಸಿಯು ಮತ್ತು ವೆಂಟಲೇಟರ್ ಹೊಂದಿರುವ ವಾರ್ಡ್‌ಗೆ ರೂ.25,000 ನಿಗದಿ ಮಾಡಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

**ಸಮಿತಿ ಸೂಚಿಸಿದ್ದ ದರ ಪರಿಷ್ಕರಣೆ**

ಜೂನ್ 4 ರಂದು ದರ ನಿಗದಿಗೆ ರಚಿಸಿದ್ದ ಎಂಟು ಜನರ ಸಮಿತಿಗೆ ಖಾಸಗಿ ಆಸ್ಪತ್ರೆಗಳು ಸಲ್ಲಿಸಿದ್ದ ಬೇಡಿಕೆಗೆ ದರಗಳನ್ನು ಬಹುತೇಕ ಕಡಿತಗೊಳಿಸಲಾಗಿದೆ. ಎಬಿ-ಎಆರ್‌ಕೆ ಫಲಾನುಭವಿಗಳಿಗೆ ಸಾಮಾನ್ಯ ವಾರ್ಡ್‌ಗೆ ರೂ.8,500ಗೆ ಶಿಫಾರಸ್ಸು ಮಾಡಿತ್ತು.

ಆಧಾರ:ಕನ್ನಡಪ್ರಭ, ದಿನಾಂಕ:19.06.2020

## 115. ಅನ್‌ಲಾಕ್ ಮಾಡಿ, ಆರ್ಥಿಕತೆ ಉತ್ತೇಜಿಸಿ

ಕೊರೋನಾ ಹೋರಾಟದ ಜೊತೆಗೆ ಆರ್ಥಿಕ ಚಟುವಟಿಕೆಗೆ ಪುನಶ್ಚೇತನ ನೀಡಲು ಕರ್ನಾಟಕ ಸೇರಿದಂತೆ ನಾನಾ ರಾಜ್ಯಗಳ ಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮುಖ್ಯಮಂತ್ರಿಗಳ ಜೊತೆ ವಿಡಿಯೋ ಸಂವಾದ ನಡೆಸಿದ ಅವರು, "ರಾಜ್ಯಗಳು ಇನ್ನು ಅನ್‌ಲಾಕ್‌ನತ್ತ ಹೆಜ್ಜೆಯಿರಿಸಬೇಕು ಆರ್ಥಿಕತೆಗೆ ಉತ್ತೇಜನ ನೀಡುವ ದೃಷ್ಟಿಯಿಂದಲೇ ಆತ್ಮ ನಿರ್ಭರ್ ಪ್ಯಾಕೇಜ್‌ನಡಿ ಆರ್ಥಿಕತೆಗೆ ಪುಷ್ಠಿ ನೀಡುವ ಚೇತರಿಕೆಯ ಚಟುವಟಿಕೆ ಚುರುಕಾಗಲಿ," ಎಂದು ಸಲಹೆ ನೀಡಿದರು.

ಸಿಎಂ ಯಡಿಯೂರಪ್ಪ **"ಕೋವಿಡ್ ನಿಯಂತ್ರಣಕ್ಕೆ ರಾಜ್ಯದಲ್ಲಿ 5ಟಿ ಸೂತ್ರದಡಿ ಸೋಂಕಿತರನ್ನು ಪತ್ತೆ ಹಚ್ಚಿ ಚಿಕಿತ್ಸೆ ನೀಡಲಾಗಿದೆ. ಈ ಉದ್ದೇಶಕ್ಕೆ ತಂತ್ರಜ್ಞಾನದ ಸದ್ಬಳಕೆ ಮಾಡಿಕೊಳ್ಳಲಾಗಿದೆ. ರಾಜ್ಯದಲ್ಲಿ ಸದ್ಯಕ್ಕೆ 1 ಲಕ್ಷ ಕೋವಿಡ್ ಸೋಂಕಿತರ ಚಿಕಿತ್ಸೆಗೆ ಸೌಕರ್ಯ ಒದಗಿಸಲಾಗಿದೆ. ಸೋಂಕು ಹರಡುವ ತಾಣವಾಗದಂತೆ ನೋಡಿಕೊಳ್ಳಲು ಮುನ್ನೆಚ್ಚರಿಕೆ ವಹಿಸಲಾಗಿದೆ,"** ಎಂದು ತಿಳಿಸಿದರು.

ರಾಜ್ಯದಲ್ಲಿನ 1.68 ಕೋಟಿ ಕುಟುಂಬಗಳ ಪೈಕಿ 1.5 ಕೋಟಿ ಕುಟುಂಬಗಳ ಸಮೀಕ್ಷೆ ನಡೆಸಲಾಗಿದೆ. ಕೋವಿಡ್ ಸೋಂಕಿನಿಂದ ಅಪಾಯಕ್ಕೆ ಸಿಲುಕುವ ಸಾಧ್ಯತೆಯಿರುವ ವ್ಯಕ್ತಿಗಳ ಮಾಹಿತಿ ಸಂಗ್ರಹಿಸಲಾಗಿದೆ ಎಂದು ಸಿಎಂ ಮಾಹಿತಿ ಒದಗಿಸಿದರು.

ರಾಜ್ಯದ ಎಲ್ಲ ಭಾಗಗಳಲ್ಲಿಯೂ ಕೋವಿಡ್ ಸೋಂಕಿತರಿಗೆ ಉತ್ತಮ ಚಿಕಿತ್ಸೆ ಒದಗಿಸಲು ಟೆಲಿ ಐಸಿಯು ವ್ಯವಸ್ಥೆ ಮಾಡಲಾಗಿದೆ. ತಜ್ಞ ವೈದ್ಯರೊಂದಿಗೆ ಸಂಪರ್ಕದಲ್ಲಿರುವ ರಾಜ್ಯದ ನಾನಾ ಪ್ರದೇಶದ ರೈತರು ಸೋಂಕಿತರಿಗೆ ಚಿಕಿತ್ಸೆ ನೀಡಲು ಸಲಹೆ, ಮಾರ್ಗದರ್ಶನ ಪಡೆಯುತ್ತಿದ್ದಾರೆ ಎಂದು ಪ್ರಧಾನಿ ಅವರಿಗೆ ಸಿಎಂ ವಿವರಿಸಿದರು. ಸಚಿವರಾದ ಸುಧಾಕರ್, ಬಸವರಾಜ ಬೊಮ್ಮಾಯಿ, ಶ್ರೀರಾಮುಲು, ಮುಖ್ಯ ಕಾರ್ಯದರ್ಶಿ ವಿಜಯ ಭಾಸ್ಕರ್ ಮತ್ತಿತರರು ಭಾಗಿಯಾಗಿದ್ದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:18.06.2020

## 116. ಕಟ್ಟುನಿಟ್ಟಿನ ಸೀಲ್‌ಡೌನ್

ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚಿರುವ ಪ್ರದೇಶಗಳನ್ನು ಜೂನ್ 30ರ ವರೆಗೆ ಸಂಪೂರ್ಣ ಸೀಲ್‌ಡೌನ್ ಮಾಡಲು ಸರ್ಕಾರ ನಿರ್ಧರಿಸಿದೆ.

ಕ್ವಾರಂಟೈನ್ ನಿಯಮ ಉಲ್ಲಂಘಿಸುವವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ಬಂಧಿಸಲು ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಸೋಂಕು ಹರಡುವಿಕೆ ತಡೆಯಲು ಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸಚಿವರು ಹಾಗೂ ಅಧಿಕಾರಿಗಳ ಸಭೆಯನ್ನು ನಡೆಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಆರ್.ಅಶೋಕ್, 'ಸೀಲ್‌ಡೌನ್ ಈವರೆಗೆ ಸೋಂಕಿತರ ಮನೆಗಳಿಗಷ್ಟೇ ಸೀಮಿತವಾಗಿತ್ತು. ಇನ್ನು ಮುಂದೆ ಇಡೀ ರಸ್ತೆಗೆ ಮತ್ತು ಅಕ್ಕಪಕ್ಕದ ರಸ್ತೆಗಳಿಗೂ ಅನ್ವಯವಾಗಲಿದೆ. ಬೀದರ್, ಕಲಬುರ್ಗಿ ಸಹಿತ ಕೊರೊನಾ ಸೋಕು ಬಂದಿರುವ ಕಡೆಗಳಲ್ಲಿ ಸಹ ಇದು ಜಾರಿಗೆ ಬರಲಿದೆ' ಎಂದು ತಿಳಿಸಿದರು.

**ಆಸ್ಪತ್ರೆ ಕೊರತೆ ನಿವಾರಣೆ:** ವಿಕ್ಟೋರಿಯಾ ಸಹಿತ ಕೆಲವು ಆಸ್ಪತ್ರೆಗಳಲ್ಲಿ ಬೆಡ್‌ಗಳು ಭರ್ತಿಯಾಗಿರುವುದರಿಂದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ನೀಡಲಾಗುವುದು. ಯಾವ ಆಸ್ಪತ್ರೆಗಳಲ್ಲಿ ಎಷ್ಟು ಬೆಡ್‌ಗಳು ಲಭ್ಯ ಇವೆ ಎಂಬ ಮಾಹಿತಿಯನ್ನು ವಾರ್‌ರೂಂನಲ್ಲೇ ನೀಡುವ ವ್ಯವಸ್ಥೆ ಇರುತ್ತದೆ, ಜೊತೆಗೆ ಸೋಂಕಿತರ ಮೊಬೈಲ್‌ಗೆ ಸಂದೇಶವೂ ಬರಲಿದೆ. ಇನ್ನು ಮುಂದೆ ಸೋಂಕಿತರಿಗೆ ತಕ್ಷಣ ಚಿಕಿತ್ಸಾ ಸೌಲಭ್ಯ ಒದಗಿಸಲಾಗುವುದು ಎಂದು ಹೇಳಿದರು.

ಆಧಾರ:ಪ್ರಜಾವಾಣಿ, ದಿನಾಂಕ:23.06.2020

## 117. ಕೋವಿಡ್ ಚಿಕಿತ್ಸೆ ದರ ನಿಗದಿ

ಕರ್ನಾಟಕದಲ್ಲಿ ಕೋವಿಡ್-19 ಪ್ರಕರಣಗಳು ಏರಿಕೆ ಆಗುತ್ತಿರುವ ಬೆನ್ನಲ್ಲೇ ಸೋಂಕಿತರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರ ಸೌಲಭ್ಯವಾರು ದರ ನಿಗದಿ ಮಾಡಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಾರ್ಯನಿರ್ವಾಹಕ ನಿರ್ದೇಶಕರ ಅಧ್ಯಕ್ಷತೆಯ ಸಮಿತಿಯು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ದರ ಪ್ಯಾಕೇಜ್ ಬಗ್ಗೆ ಸಚಿವರ ಕಾರ್ಯಪಡೆಗೆ ವರದಿ ಸಲ್ಲಿಸಿತ್ತು. ಅದಕ್ಕೆ ಕಾರ್ಯಪಡೆ ಒಪ್ಪಿಗೆ ಸೂಚಿಸಿದೆ. ಈ ಸಂಬಂಧ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ಅವರು ಆದೇಶ ಹೊರಡಿಸಿದ್ದಾರೆ.

ರಾಜ್ಯದ 483 ಖಾಸಗಿ ಆಸ್ಪತ್ರೆಗಳಲ್ಲಿ ಶೇ.50ರಷ್ಟು ಹಾಸಿಗೆಗಳನ್ನು ಸರ್ಕಾರ ಶಿಫಾರಸ್ಸು ಮಾಡಿ ಕಳುಹಿಸುವ ರೋಗಿಗಳಿಗೆ ಮೀಸಲಿಡಬೇಕು. ಬಿಪಿಎಲ್, ಎಪಿಎಲ್ ಕಾರ್ಡ್ ಹೊಂದಿರುವವರಿಗೆ ಆಯುಷ್ಮಾನ್ ಭಾರತ್ ಮತ್ತು ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಚಿಕಿತ್ಸೆ ನೀಡಲಾಗುವುದು.

ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಸಂಪೂರ್ಣ ಉಚಿತ ಮತ್ತು ಎಪಿಎಲ್ ಕಾರ್ಡ್ ಹೊಂದಿರುವವರ ಚಿಕಿತ್ಸಾ ವೆಚ್ಚದಲ್ಲಿ ಶೇ.30ರಷ್ಟು ಮೊತ್ತವನ್ನು ಸರ್ಕಾರವೇ ಭರಿಸಲಿದೆ. ಉಳಿದ ಮೊತ್ತವನ್ನು ರೋಗಿಯೇ ಭರಿಸಬೇಕು. ಆದರೆ, ಎರಡೂ ವರ್ಗಗಳ ಚಿಕಿತ್ಸಾ ವೆಚ್ಚವನ್ನು ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರವೇ ಪಾವತಿಸುವುದರಿಂದ ಚಿಕಿತ್ಸಾ ದರ ಪಟ್ಟಿಯನ್ನು ನಿಗದಿ ಮಾಡಲಾಗಿದೆ.

**ನಿಯಮ ಉಲ್ಲಂಘಿಸಿದರೆ ಶಿಕ್ಷೆ:** ಖಾಸಗಿ ಆಸ್ಪತ್ರೆಗಳು ಷರತ್ತುಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಪಡಿಸಲಾಗುವುದು ಎಂದು ಆದೇಶ ಎಚ್ಚರಿಸಿದೆ. ಸರಾಸರಿ ರೂ.1.7 ಲಕ್ಷ ಒಬ್ಬ ರೋಗಿ ಸಾಮಾನ್ಯ ವಾರ್ಡ್‌ನಲ್ಲಿ 17 ದಿನಗಳು ಚಿಕಿತ್ಸೆ ಪಡೆದರೆ ಸುಮಾರು ರೂ.1.7 ಲಕ್ಷ ವೆಚ್ಚವಾಗುತ್ತದೆ ಎಂದು ಅಂದಾಜಿಸಲಾಗಿದೆ.

**ಸರ್ಕಾರ ವಿಧಿಸಿರುವ ಷರತ್ತುಗಳು:–**

- ಸಾರ್ವಜನಿಕ ಆರೋಗ್ಯ ಇಲಾಖೆ ಅಧಿಕಾರಿಗಳು ಶಿಫಾರಸ್ಸು ಮಾಡಿ ಕಳುಹಿಸುವ ಕೋವಿಡ್–19 ರೋಗಿಗಳಿಗೆ ಶೇ.50ರಷ್ಟು ಹಾಸಿಗೆಗಳನ್ನು ಚಿಕಿತ್ಸೆಗಾಗಿ ಮೀಸಲಿಡಬೇಕು. ಇದು ಎಚ್‌ಡಿಯು ಮತ್ತು ಐಸಿಯು ಬೆಡ್‌ಗಳು (ವೆಂಟಿಲೇಟರ್ ಸಹಿತ ಮತ್ತು ವೆಂಟಿಲೇಟರ್ ರಹಿತ) ಒಳಗೊಂಡಿರುತ್ತದೆ. ಉಳಿದ ಶೇ.50ರಷ್ಟು ಹಾಸಿಗೆಗಳನ್ನು ತಾವಾಗಿಯೇ ಬರುವ ಕೋವಿಡ್ ರೋಗಿಗಳಿಗೆ ಬಳಸಿಕೊಳ್ಳಬಹುದು.
- ಯಾವುದೇ ರೀತಿಯ ಆರೋಗ್ಯ ವಿಮೆ ಅಡಿ ಚಿಕಿತ್ಸೆ ಪಡೆಯುವವರಿಗೆ ಸರ್ಕಾರದ ದರ ಪಟ್ಟಿ ಅನ್ವಯಿಸುವುದಿಲ್ಲ.
- ಖಾಸಗಿ ಆಸ್ಪತ್ರೆಗಳಲ್ಲಿ ಇರುವ ಸಾಮಾನ್ಯ ವಾರ್ಡ್, ಶೇರಿಂಗ್ ವಾರ್ಡ್ ಮತ್ತು ಖಾಸಗಿ ವಾರ್ಡ್‌ಗಳ ಬೆಡ್‌ಗಳ ಒಟ್ಟು ಸಂಖ್ಯೆಯಲ್ಲಿ ಶೇ.50 ಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.
- ಖಾಸಗಿಯಾಗಿ ಬರುವ ರೋಗಿಗಳಿಗೆ ಚಿಕಿತ್ಸಾ ದರದ ಮಿತಿ (ಸೀಲಿಂಗ್) ಸಾಮಾನ್ಯ ವಾರ್ಡ್/ ಮಲ್ಟಿ ಶೇರಿಂಗ್ ವಾರ್ಡ್‌ಗಳಿಗೆ ಅನ್ವಯವಾಗುತ್ತದೆ. ಇಬ್ಬರು ರೋಗಿಗಳು ವಾರ್ಡ್ ಹಂಚಿಕೊಂಡರೆ ಶೇ.10ರಷ್ಟು ಹೆಚ್ಚುವರಿಯಾಗಿ, ಸಿಂಗಲ್ ರೂಂಗೆ ಶೇ.25ರಷ್ಟು ಹೆಚ್ಚು ವಿಧಿಸಬಹುದು. ಸೂಟ್‌ಗಳಿಗೆ ದರ ಮಿತಿ ವಿಧಿಸಿಲ್ಲ.
- ಬೆಂಗಳೂರಿನಲ್ಲಿ ಬಿಬಿಎಂಪಿ ಆಯುಕ್ತರು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು, ಉಳಿದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳೇ ರೋಗಿಗಳಿಗೆ ಶಿಫಾರಸ್ಸು ಮಾಡುತ್ತಾರೆ.
- ರೋಗಿಗಳಲ್ಲಿ ಸಂಕೀರ್ಣತೆ, ಶಸ್ತ್ರ ಚಿಕಿತ್ಸೆ ಅಗತ್ಯತೆ ಇದ್ದರೆ ಮತ್ತು ಗರ್ಭಿಣಿಯರು ಇದ್ದರೆ ಅದಕ್ಕೆ ಪ್ರತ್ಯೇಕ ದರದ ಪ್ಯಾಕೇಜ್.

ಕೊರೋನಾ ಸೋಂಕಿತರ ಸಂಖ್ಯೆ ದಿನೇ ದಿನೇ ದ್ವಿಗುಣಗೊಳ್ಳುತ್ತಿರುವುದರಿಂದ ಸೋಂಕು ಸಮುದಾಯಕ್ಕೆ ಹರಡಿದೆಯೇ ಎಂಬ ಅನುಮಾನ ಮೂಡಿದೆ. ಮಾರುಕಟ್ಟೆ ಸೇರಿದಂತೆ ಜನದಟ್ಟಣೆ ಇರುವ ಪ್ರದೇಶಗಳೇ ಸೋಂಕು ಹರಡುವ ತಾಣಗಳಾಗಿದ್ದು, ಇನ್ನು ಎರಡು ತಿಂಗಳು ಅತ್ಯಂತ ನಿರ್ಣಾಯಕ ಎಂದು ಆರೋಗ್ಯ ಕ್ಷೇತ್ರದ ತಜ್ಞರು ಎಚ್ಚರಿಸಿದ್ದಾರೆ. ಲಾಕ್‌ಡೌನ್ ನಿಯಮಗಳನ್ನು ಸಡಿಲಿಸಿದ ಬೆನ್ನಲ್ಲಿಯೇ ಬೆಂಗಳೂರು ನಗರದಲ್ಲಿ ಸೋಂಕಿತರ ಸಂಖ್ಯೆ ಏರುಗತಿ ಪಡೆದಿದೆ. ಬಹುತೇಕ ಪ್ರಕರಣಗಳಲ್ಲಿ ಹೇಗೆ ಸೋಂಕು ತಗುಲಿತು ಎನ್ನುವುದೇ ಪತ್ತೆಯಾಗುತ್ತಿಲ್ಲ.

ಆಧಾರ:ಪ್ರಜಾವಾಣಿ, ದಿನಾಂಕ:24.06.2020

## 118. ಡಿಕೆಶಿ ಪದಗ್ರಹಣಕ್ಕೆ ಭರ್ಜರಿ ಡಿಜಿಟಲ್ ತಾಲೀಮು

ರಾಜ್ಯದ ಮೂಲೆ ಮೂಲೆಯ ಕಾಂಗ್ರೆಸ್ ಕಾರ್ಯಕರ್ತರನ್ನು ಹೊಸ ಭರವಸೆ, ಉತ್ಸಾಹದೊಂದಿಗೆ ಹುರುಪುಗೊಳಿಸಿ, ತಳಮಟ್ಟದಿಂದ ಪಕ್ಷ ಸಂಘಟಿಸುವ ಪ್ರಯತ್ನಕ್ಕೆ ಮುನ್ನುಡಿ ಬರೆಯುವ

ಮಹತ್ವಾಕಾಂಕ್ಷೆಯೊಂದಿಗೆ ಕೆಪಿಸಿಸಿ ನೂತನ ಅಧ್ಯಕ್ಷ ಹಾಗೂ ಮೂವರು ಕಾರ್ಯಾಧ್ಯಕ್ಷರ ಜುಲೈ 2ರ ಪದಗ್ರಹಣ ಸಮಾರಂಭಕ್ಕೆ ಪೂರ್ವತಾಲೀಮು ಪೂರ್ಣಗೊಂಡಿದೆ.

ಕೊರೊನಾ ಸಂಕಷ್ಟ ಕಾಲದಲ್ಲೂ ಕನಿಷ್ಠ 20 ಲಕ್ಷ ಜನರು ಪಾಲ್ಗೊಳ್ಳಲು ಸಾಧ್ಯವಾಗುವಂತೆ ತಂತ್ರಜ್ಞಾನದ ಸದ್ಬಳಕೆಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಅಣಿಗೊಳಿಸಿ, ಗುಂಪುಗಾರಿಕೆ ಮುಕ್ತವಾಗಿ ಹಿರಿಯ, ಕಿರಿಯರೆನ್ನದೆ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವ ಮಹದಾಶಯದೊಂದಿಗೆ ನೂತನ ಸಾರಥಿ ಪಟ್ಟಾಭಿಷೇಕದ ಸಿದ್ಧತೆ ಪೂರ್ಣಗೊಂಡಿದೆ.

ರಾಜ್ಯದ 7,831 ಕಡೆಗಳಲ್ಲಿ ಏಕಕಾಲಕ್ಕೆ ಕನಿಷ್ಠ 20 ಲಕ್ಷ ಮಂದಿ ಪದಗ್ರಹಣ ಸಮಾರಂಭಕ್ಕೆ ಸಾಕ್ಷಿಯಾಗುವಂತೆ ಅಭೂತಪೂರ್ವವಾಗಿ ಕಾರ್ಯಕ್ರಮ ಸಂಘಟಿಸಲಾಗುತ್ತಿದೆ. ಕೆಪಿಸಿಸಿ ನೂತನ ಕಟ್ಟಡದ ಸಭಾಂಗಣದಲ್ಲಿ ಡಿ.ಕೆ.ಶಿವಕುಮಾರ್, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಹಿರಿಯ ನಾಯಕರು, ವಿಧಾನ ಸಭಾ ಕ್ಷೇತ್ರವಾರು ಪಕ್ಷದ ವೀಕ್ಷಕರು ಮತ್ತಿತರ ನಾಯಕರು ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಂಡರು. ಜುಲೈ.2ರ ಸಭೆಯ ಈ ರಿಹರ್ಸಲ್ ಸಭೆಯೇ ಸ್ಪಷ್ಟ ಸಂದೇಶ ನೀಡಿತು.

ಮುಂದಿನ ವಿಧಾನ ಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವ ಗುರಿಗಾಗಿ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿಕೊಂಡು ಅಖಾಡಕ್ಕಿಳಿಯುವ ಸಂದೇಶವೊಂದು ಈ ಸಭೆ ಮೂಲಕ ರವಾನೆಯಾಯಿತು. ಸೇವಾದಳದಿಂದ ಮೊದಲ್ಗೊಂಡು ವಿದ್ಯಾರ್ಥಿ ಕಾಂಗ್ರೆಸ್, ಮಹಿಳಾ ಕಾಂಗ್ರೆಸ್ ಎಲ್ಲಾ ಮುಂಚೂಣಿ ಘಟಕಗಳು ಹಾಗೂ ಮುಖಂಡರು 'ಪದಗ್ರಹಣ'ದ ವೇದಿಕೆಯಲ್ಲಿ ಒಟ್ಟುಗೂಡುತ್ತಿದ್ದಾರೆ.

**ವಿಳಂಬವಾದರೂ ಅಭೂತಪೂರ್ವ:** ಕಾಂಗ್ರೆಸ್ ಕಾರ್ಯಕರ್ತ ಪಡೆಯಲ್ಲಿ ಹೊಸ ಹುಮ್ಮಸ್ಸು ತುಂಬುವ ಅನಿವಾರ್ಯತೆಗಾಗಿ ಮೂರು ಬಾರಿ ಮುಂದೂಡಿಕೆಯಾಗಿದ್ದರೂ 'ಪದಗ್ರಹಣ' ಸಮಾರಂಭ ಅಭೂತಪೂರ್ವ ರೀತಿ ನಡೆಯಲು ಸಿದ್ಧತೆಯಾಗಿದೆ. "ನೂತನ ಸಾರಥಿ ವೈಭವೀಕರಣವಲ್ಲ, ಕಾರ್ಯಕರ್ತರು ಮತ್ತು ಮುಖಂಡರಲ್ಲಿ ಹುಮ್ಮಸ್ಸು ತುಂಬಲು ಈ ಕಾರ್ಯಕ್ರಮವನ್ನು ಸಂಘಟಿಸಲಾಗುತ್ತಿದೆ," ಎಂದು ಸಿದ್ಧತಾ ಸಭೆಯಲ್ಲಿ ಸಿದ್ದರಾಮಯ್ಯ ಹೇಳಿದರು.

ಸಂಸದ ಡಿ.ಕೆ.ಸುರೇಶ್ ಅವರು ತಂತ್ರಜ್ಞಾನ ನಿರ್ವಹಣೆಯ ಉಸ್ತುವಾರಿ ವಹಿಸಿದ್ದರೆ, ಬಿ.ಎಲ್.ಶಂಕರ್ ಮತ್ತಿತರ ರಾಜ್ಯ ಕಾಂಗ್ರೆಸ್ 'ಥಿಂಕ್ ಟ್ಯಾಂಕ್' ಬಳಗವು ಕಾರ್ಯಕ್ರಮದ ರೂಪುರೇಷೆ ಸಿದ್ಧಮಾಡಿದೆ. ತಳಮಟ್ಟದಿಂದ ಪಕ್ಷ ಸಂಘಟನೆ ಶುರು ಮಾಡಲು ಈ ಸಮಾರಂಭವನ್ನು ಆರಂಭಿಕ ವೇದಿಕೆಯಾಗಿ ಬಳಸಲಾಗುತ್ತಿದೆ.

ಸಭೆಗೆ ಮಾರ್ಗದರ್ಶನ ಮಾಡಿದ ಹಿರಿಯ ಮುಖಂಡ ಬಿ.ಎಲ್.ಶಂಕರ್, "ಈ ಕಾರ್ಯಕ್ರಮದ ಯಶಸ್ಸು ಮುಂದಿನ ದಿನಗಳಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖವಾಗಲಿದೆ," ಎಂದು ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:24.06.2020

## 119. ಮೀನುಗಾರರಿಗೂ ಕಿಸಾನ್ ಕಾರ್ಡ್

ಪ್ರಧಾನ ಮಂತ್ರಿಯವರ ಯೋಜನೆಯಂತೆ ಮುಂದಿನ ದಿನಗಳಲ್ಲಿ ರೈತರ ಮಾದರಿಯಲ್ಲಿ ಮೀನುಗಾರರಿಗೂ ಕಿಸಾನ್ ಕಾರ್ಡ್ ಮೂಲಕ ಸೌಲಭ್ಯ ನೀಡಲಾಗುವುದು ಎಂದು ಮುಜರಾಯಿ, ಮೀನುಗಾರಿಕೆ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಮೈಸೂರಿನ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಮುಜರಾಯಿ, ಮೀನುಗಾರಿಕೆ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ಭವಿಷ್ಯದಲ್ಲಿ ಮೀನುಗಾರಿಕೆ ಇಲಾಖೆಗೆ ಸಂಬಂಧಿಸಿದ ಯಾವುದೇ ಸೌಲಭ್ಯಗಳ ವಿತರಣೆಗೆ ರೈತರ ಮಾದರಿಯಲ್ಲಿ ಮೀನುಗಾರರಿಗೂ ಕಿಸಾನ್ ಕಾರ್ಡ್ ನೀಡಲಾಗುವುದು. ಇದರಿಂದ ನೇರವಾಗಿ ಮೀನುಗಾರರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎಂದು ಮಾಹಿತಿ ನೀಡಿದರು.

ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರಿಗೆ ಶೂನ್ಯ ಬಡ್ಡಿದರದಲ್ಲಿ ರೂ.50,000ದವರೆಗೆ ಸಾಲ ಸೌಲಭ್ಯ ನೀಡಲಾಗುವುದು. ಕರಾವಳಿ, ಒಳನಾಡು ಮೀನುಗಾರಿಕೆ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದಲ್ಲಿರುವ 28,000 ಕೆರೆಗಳನ್ನು ಮೀನುಗಾರಿಕೆಗೆ ಯಾವ ರೀತಿ ಬಳಕೆ ಮಾಡಿಕೊಳ್ಳಬೇಕು ಎಂಬ ಬಗ್ಗೆ

ಚಿಂತಿಸಲಾಗುತ್ತಿದೆ. ಬಡವರು, ನಿರುದ್ಯೋಗಿಗಳು ನಿರ್ವಹಣೆ ಮಾಡುವುದಾದರೆ ಅವರಿಗೆ ಕಿಸಾನ್ ಕಾರ್ಡ್ ಮುಖಾಂತರ ಕೆರೆಗಳಲ್ಲಿ ಮೀನುಗಾರಿಕೆ ನಡೆಸಲು ಅವಕಾಶ ನೀಡಲು ಚರ್ಚಿಸಲಾಗುತ್ತಿದೆ.

ರಾಜ್ಯದ ಎರಡು ಲಕ್ಷ ಹೆಕ್ಟೇರ್ ಸವಳು–ಜವಳು ಭೂಮಿಯನ್ನು ಅಭಿವೃದ್ಧಿಪಡಿಸಿ ಮೀನುಗಾರಿಕೆಗೆ ಬಳಕೆ ಮಾಡಿಕೊಳ್ಳಲು ಚಿಂತನೆ ನಡೆದಿದೆ. ಈ ಬಗ್ಗೆ ಚರ್ಚಿಸಲು ಜೂನ್ 30ರಂದು ಮೀನುಗಾರರ ಸಭೆ ಕರೆದು ಚರ್ಚಿಸಲಾಗುವುದು, ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯಲ್ಲಿ ನಾಲ್ಕೂವರೆ ಲಕ್ಷ, ಕರಾವಳಿಯಲ್ಲಿ ನಾಲ್ಕು ಲಕ್ಷ ಸೇರಿದಂತೆ ರಾಜ್ಯದಲ್ಲಿ ಒಟ್ಟು ಅಂದಾಜು ಎಂಟೂವರೆ ಲಕ್ಷ ಕುಟುಂಬಗಳು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಇವರಿಗೆ ಅಗತ್ಯ ಸೌಲಭ್ಯ ನೀಡುವ ಮುಖಾಂತರ ಉತ್ಪಾದನೆ ಹೆಚ್ಚಿಸಲಾಗುವುದು. ಒಳನಾಡು ಮೀನುಗಾರಿಕೆಯಿಂದ ಮೈಸೂರು ಜಿಲ್ಲೆಯಲ್ಲಿ 9000 ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗುತ್ತಿದೆ. ಇದನ್ನು ದುಪ್ಪಟ್ಟು ಮಾಡುವ ಬಗ್ಗೆ ಆಲೋಚಿಸಲಾಗುತ್ತಿದೆ," ಎಂದು ತಿಳಿಸಿದರು

ಆಧಾರ:ವಿಜಯ ಕರ್ನಾಟಕ, ದಿನಾಂಕ:25.06.2020

### 120. ಶಾಸಕ, ಸಚಿವರಿಗೆ ಕುಮಾರ ಕೃಪಾ ಅತಿಥಿಗೃಹವೇ 'ಕೊರೋನಾ ಆಸ್ಪತ್ರೆ'

ರಾಜ್ಯ ಸರ್ಕಾರದ ಸಚಿವ, ಶಾಸಕರು ಸೇರಿದಂತೆ ಯಾವುದೇ ಜನಪ್ರತಿನಿಧಿಗಳು ಹಾಗೂ ಹಿರಿಯ ಶ್ರೇಣಿಯ ಅಧಿಕಾರಿಗಳು ಕೊರೋನಾ ಸೋಂಕಿಗೆ ತುತ್ತಾದರೆ ಅವರ ಚಿಕಿತ್ಸೆಗೆ ಕುಮಾರ ಕೃಪಾ ಅತಿಥಿ ಗೃಹವನ್ನು ನಿಗದಿಪಡಿಸಲಾಗಿದೆ. ಅತಿಥಿ ಗೃಹದ ಒಂದು ವಿಭಾಗವನ್ನು 100 ಹಾಸಿಗೆಗಳುಳ್ಳ ಕೋವಿಡ್ ಕೇರ್ ಸೆಂಟರ್‌ನ್ನಾಗಿ ಪರಿವರ್ತಿಸಲಾಗುವುದು. ಉಳಿದ ವಿಭಾಗದ ಕೊಠಡಿಗಳಲ್ಲಿ ಶೇ.30 ನೋಂದಣಿ ಮೀರದಂತೆ ಕ್ರಮ ಕೈಗೊಳ್ಳಬೇಕು. ಈ ಕೇಂದ್ರದಲ್ಲಿ ಶಾಸಕರು, ಸಚಿವರು, ವಿಧಾನ ಪರಿಷತ್ ಸದಸ್ಯರು, ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು, ಹಿರಿಯ ಶ್ರೇಣಿಯ ಅಧಿಕಾರಿಗಳಿಗೆ ಇಲ್ಲಿ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಲಾಗಿದೆ. ಸಾರ್ವಜನಿಕರು ಗುಂಪುಗೂಡದಂತೆ ಎಚ್ಚರ ವಹಿಸುವುದರ ಜೊತೆಗೆ ಸಂದರ್ಶಕರ ಭೇಟಿ ನಿರ್ಬಂಧಿಸಬೇಕು. ಪ್ರವೇಶ ದ್ವಾರದಲ್ಲಿ ಥರ್ಮಲ್ ಸ್ಕ್ಯಾನಿಂಗ್ ಬಳಸಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕೆಂದು ಎಂದು ಆದೇಶದಲ್ಲಿ ಹೇಳಲಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:25.06.2020

### 121. ಪಾಲಿಕೆ ವಾರ್ಡ್‌ವಾರು ಪುನರ್ ವಿಂಗಡಣೆ ಕರಡು ಅಧಿಸೂಚನೆ

ಬಿಬಿಎಂಪಿ ಚುನಾವಣೆ ಹೊಸ್ತಿಲಲ್ಲಿ ಇರುವಾಗಲೇ 198 ವಾರ್ಡ್‌ಗಳನ್ನು ಪುನರ್ ವಿಂಗಡಣೆ ಮಾಡಿ ಸರ್ಕಾರ ಅಧಿಸೂಚನೆ ಪ್ರಕಟಿಸಿದೆ.

ಕಳೆದ 2011ರ ಜನಗಣತಿ ಆಧಾರದ ಮೇಲೆ ಮುನಿಸಿಪಲ್ ಕಾರ್ಪೊರೇಷನ್ ಕಾಯಿದೆ–1976, ಕಲಂ (7)(2)(ಎ) ಅನ್ವಯ ಈ ಮರುವಿಂಗಡಣೆ ಮಾಡಲಾಗಿದ್ದು, ಬಿಬಿಎಂಪಿಯ ಬಹುತೇಕ ವಾರ್ಡ್‌ಗಳ ಸಂಖ್ಯೆ ಬದಲಾವಣೆಯಾಗಿದ್ದರೆ ಇನ್ನೂ ಕೆಲ ವಾರ್ಡ್‌ಗಳ ಹೆಸರು ಬದಲಾಗಿದೆ.

ಬಿಬಿಎಂಪಿಯು 2007ರಲ್ಲಿ ರಚನೆಯಾಗಿದ್ದು, 198 ವಾರ್ಡ್‌ಗಳನ್ನು ಅಂದಿನ ಜನಸಂಖ್ಯೆ ಮಾಹಿತಿ ಆಧರಿಸಿ ವಿಂಗಡಿಸಲಾಗಿತ್ತು. ನಂತರ 2011ರ ಜನಗಣತಿ ಆಧಾರದ ಮೇಲೆ ಪುನರ್ ವಿಂಗಡಿಸುವ ಪ್ರಕ್ರಿಯೆ ಇತ್ತೀಚೆಗೆ ಶುರುವಾಗಿತ್ತು.

ಕಳೆದ ಮಾರ್ಚ್‌ನಲ್ಲಿ ವಾರ್ಡ್‌ವಾರು ಕ್ಷೇತ್ರ ಪುನರ್ ವಿಂಗಡಿಸಿ ಕರಡು ಅಧಿಸೂಚನೆ ಹೊರಡಿಸಿ 15 ದಿನಗಳ ಕಾಲ ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಸಲ್ಲಿಕೆಯಾಗಿದ್ದ ಆಕ್ಷೇಪಣೆಗಳು, ಸಲಹೆಗಳನ್ನು ಪರಿಶೀಲಿಸಿ ಕೆಲವನ್ನು ಪರಿಗಣಿಸಲಾಗಿತ್ತು. ಅದರಂತೆ 2011ರ ಜನಗಣತಿಯ ಆಧಾರದ ಮೇರೆಗೆ ಬಿಬಿಎಂಪಿಯ 198 ವಾರ್ಡ್‌ಗಳನ್ನು ಪುನರ್‌ವಿಂಗಡಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳ ಆಡಳಿತಾವಧಿ ಸೆಪ್ಟೆಂಬರ್‌ಗೆ ಅಂತ್ಯವಾಗಲಿದ್ದು, ಮುಂದೆ ನಡೆಯುವ ಚುನಾವಣೆಗೆ ಅಧಿಸೂಚನೆಯಲ್ಲಿ ಹೊರಡಿಸುವ ವಾರ್ಡ್ ಪುನರ್ ವಿಂಗಡಣೆ ಆಧಾರದ ಮೇಲೆ ಮತದಾನ ನಡೆಯಲಿದೆ. ಈ ಸಂಬಂಧ ರಾಜ್ಯಪತ್ರ ಹೊರಡಿಸಿದ ದಿನ ಸಾರ್ವಜನಿಕರಿಗೆ ಪ್ರತಿ ಲಭ್ಯವಾಗಲಿದೆ. ರಾಜ್ಯದಲ್ಲಿ

ಬಿಜೆಪಿ ಸರ್ಕಾರ ಅಧಿಕಾರದಲ್ಲಿರುವುದರಿಂದ ಹಾಗೂ ಬಿಬಿಎಂಪಿ ಆಡಳಿತವೂ ಬಿಜೆಪಿ ಕೈಯಲ್ಲಿರುವುದರಿಂದ ಸಹಜವಾಗಿ ಆ ಪಕ್ಷಕ್ಕೆ ಅನುಕೂಲವಾಗುವ ಸಾಧ್ಯತೆ ಇದೆ.

ಆಧಾರ:ಉದಯವಾಣಿ, ದಿನಾಂಕ:25.06.2020

## 122. ನಗರದಲ್ಲಿ 10 ಸಾವಿರ ಹಾಸಿಗೆ ಸೌಲಭ್ಯ

'ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅವರ ಚಿಕಿತ್ಸೆಗಾಗಿ ಕನಿಷ್ಠ 10 ಸಾವಿರ ಹಾಸಿಗೆಗಳನ್ನು ಸಂಜೆಯೊಳಗಾಗಿ ವ್ಯವಸ್ಥೆ ಮಾಡುವ ಕಾರ್ಯ ಪ್ರಗತಿಯಲ್ಲಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಹೇಳಿದರು.

ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದ ಅವರು, ನಗರದಾದ್ಯಂತ ಚಿಕಿತ್ಸೆಗೆ ಅಗತ್ಯವಿರುವ ಸರ್ಕಾರಿ ಮತ್ತು ಖಾಸಗಿ ಪ್ರದೇಶಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಸಂಜೆ ವೇಳೆಗೆ ಖಚಿತ ಮಾಹಿತಿ ಲಭ್ಯವಾಗಲಿದೆ. ಅಧಿಕಾರಿಗಳು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ವೆಂಟಿಲೇಟರ್, ಹೈ ಫ್ಲೋ ಆಕ್ಸಿಜನ್ ಮತ್ತು ಇತರೆ ಅಗತ್ಯ ಸೌಲಭ್ಯಗಳಿರುವ ಕಡೆ ಕೋವಿಡ್ ಸಂತ್ರಸ್ತರ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು. ನಗರದಲ್ಲಿ ಒಂದು ವಾರದಿಂದ ಕೊರೊನಾ ಸೋಂಕಿತರ ಪೈಕಿ ಶೇ.30ರಿಂದ ಶೇ.50ರ ವರೆಗೆ ರೋಗದ ಲಕ್ಷಣಗಳು ಕಾಣಿಸಿಕೊಳ್ಳುತ್ತಿವೆ. ಸೋಂಕಿತರ ಲಕ್ಷಣ ಆಧರಿಸಿ ಲಘು, ಮಧ್ಯಮ ಮತ್ತು ತೀವ್ರ ಸ್ವರೂಪ ಎಂದು ವಿಂಗಡಿಸಿ ಚಿಕಿತ್ಸೆ ನೀಡಲು ನಿರ್ಧರಿಸಲಾಗಿದೆ. ಇದಕ್ಕಾಗಿ ಚಿಕಿತ್ಸೆಯ ವಿಧಿ ವಿಧಾನಗಳನ್ನು ಅಂತಿಮಗೊಳಿಸಲು ತಜ್ಞರಿಗೆ ಸೂಚನೆ ನೀಡಲಾಗಿದೆ' ಎಂದು ವಿವರಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಶೇ.50ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಬಿಟ್ಟುಕೊಡಲು ಸೂಚನೆ ನೀಡಲಾಗಿದೆ. ಮಾಲೀಕರ ಜೊತೆ ಮಾತುಕತೆ ನಡೆಸಲಾಗುವುದು. ಅವರಿಗೆ ನಿಗದಿತ ದರ ನೀಡಲಾಗುವುದು ಆ ಕುರಿತು ಒಪ್ಪಂದವನ್ನು ಮಾಡಿಕೊಳ್ಳಲಾಗುವುದು' ಎಂದರು.

ಆಧಾರ:ಪ್ರಜಾವಾಣಿ, ದಿನಾಂಕ:28.06.2020

## 123. ಬೃಹತ್ ಕೆಂಪೇಗೌಡ ಪ್ರತಿಮೆಗೆ ಶಂಕು ಸ್ಥಾಪನೆ

ಬೆಂಗಳೂರಿನ ದೇವನಹಳ್ಳಿ ಸಮೀಪದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿರ್ಮಿಸಲಾಗುತ್ತಿರುವ ವಿಶ್ವದ ಅತಿ ಎತ್ತರದ ಕೆಂಪೇಗೌಡ ಪ್ರತಿಮೆ ಹಾಗೂ ಸೆಂಟ್ರಲ್ ಪಾರ್ಕ್‌ಗೆ ಶಂಕು ಸ್ಥಾಪನೆ ಮಾಡಲಾಯಿತು. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಆದಿಚುಂಚನಗಿರಿ, ಸುತ್ತೂರು ಸೇರಿದಂತೆ ವಿವಿಧ ಮಠಗಳ ಪೀಠಾಧ್ಯಕ್ಷರು ಉಪಸ್ಥಿತರಿದ್ದರು. 108 ಅಡಿ ಎತ್ತರದ ಈ ಪ್ರತಿಮೆ ನಿರ್ಮಾಣ ಕಾರ್ಯ 1.5 ವರ್ಷದಲ್ಲಿ ಪೂರ್ಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಆಧಾರ:ಕನ್ನಡಪ್ರಭ, ದಿನಾಂಕ:28.06.2020

## 124. ನಿರಂತರ ಉತ್ಪಾದನೆಗೆ ಅನುವು

ಕೊರೊನಾ ಪೀಡಿತ ಕಾಲದಲ್ಲಿ ಲಾಕ್‌ಡೌನ್ ಅವಧಿಯಲ್ಲಿ ಮತ್ತು ಅನಂತರ ಅಗತ್ಯ ವಸ್ತುಗಳೂ ಸೇರಿದಂತೆ ಎಲ್ಲ ರೀತಿಯ ಉತ್ಪಾದನೆಗಳು ನಿರಂತರವಾಗಿ ನಡೆಯಲು ಅನುವು ಮಾಡಿಕೊಡಲಾಗುತ್ತಿರುವುದು ಕರ್ನಾಟಕ ಮಾತ್ರ ಎಂದು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಹೇಳಿದರು. ಪ್ರಸಕ್ತ 2020ರ ಮಧ್ಯಮ ಮತ್ತು ಸಣ್ಣ ಕೈಗಾರಿಕಾ ದಿನಾಚರಣೆ ಸಮಾರಂಭದಲ್ಲಿ ಉದ್ಯಮಿಗಳ ನೆರವಿಗಾಗಿ ಕೋವಿಡ್–19 ಸಹಾಯವಾಣಿಯನ್ನು ಪ್ರಾರಂಭಿಸುವ ಕಾರ್ಯಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹೊಸದಾಗಿ ಉದ್ಯಮ ಪ್ರಾರಂಭಿಸುವವರ ಹಾದಿ ಸರಳಗೊಳಿಸುವ ಸಲುವಾಗಿ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಉದ್ದಿಮೆದಾರರು ಈಗ ಮೊದಲಿನಂತೆ ತೊಂದರೆ ಪಡಬೇಕಿಲ್ಲ. ಜೊತೆಗೆ ಕೃಷಿಕರಲ್ಲದವರಿಗೂ ಸಹ ಭೂಮಿ ಖರೀದಿಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತಂದಿರುವುದು ಕರ್ನಾಟಕದ ಕೈಗಾರಿಕಾ

ವಲಯದಲ್ಲಿ ಮಹತ್ವದ ಬೆಳವಣಿಗೆಯಾಗಿದೆ ಎಂದು ತಿಳಿಸಿದರು. ಸಹಾಯವಾಣಿಯ ನಿರ್ಮಾಣಕಾರ್ಯಕ್ಕೆ ಚಾಲನೆ ನೀಡಲಾಗಿದ್ದು, ಪೀಣ್ಯ, ಬೆಂಗಳೂರಿನ ಕಾಸಿಯಾ ಮತ್ತು ಮೈಸೂರಿನಿಂದ ಏಕಕಾಲದಲ್ಲಿ ಕಾರ್ಯನಿರ್ವಹಿಸಲಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:29.06.2020

## 125. ಕೋವಿಡ್–19 ಜಿಲ್ಲಾವಾರು ವರದಿ

| ಜಿಲ್ಲೆ | ಸೋಂಕಿತರು | ಗುಣಮುಖ | ಸಕ್ರಿಯ ಪ್ರಕರಣ | ಸಾವು |
|---|---|---|---|---|
| ಬೆಂಗಳೂರು ನಗರ | 3314 | 533 | 2692 | 88 |
| ಕಲಬುರ್ಗಿ | 1398 | 1009 | 371 | 18 |
| ಉಡುಪಿ | 1179 | 1042 | 135 | 02 |
| ಯಾದಗಿರಿ | 930 | 799 | 130 | 01 |
| ಬಳ್ಳಾರಿ | 697 | 313 | 373 | 11 |
| ದಕ್ಷಿಣ ಕನ್ನಡ | 665 | 380 | 272 | 11 |
| ಬೀದರ್ | 562 | 456 | 87 | 19 |
| ರಾಯಚೂರು | 469 | 397 | 70 | 02 |
| ಮಂಡ್ಯ | 406 | 338 | 68 | 00 |
| ಹಾಸನ | 359 | 236 | 121 | 02 |
| ವಿಜಯಪುರ | 338 | 286 | 45 | 07 |
| ಬೆಳಗಾವಿ | 326 | 300 | 25 | 01 |
| ಧಾರವಾಡ | 311 | 464 | 141 | 06 |
| ದಾವಣಗೆರೆ | 295 | 248 | 42 | 07 |
| ಮೈಸೂರು | 253 | 162 | 89 | 02 |
| ಉತ್ತರ ಕನ್ನಡ | 189 | 142 | 47 | 00 |
| ಚಿಕ್ಕಬಳ್ಳಾಪುರ | 186 | 158 | 25 | 02 |
| ಬಾಗಲಕೋಟೆ | 180 | 113 | 63 | 04 |
| ಗದಗ | 170 | 53 | 114 | 03 |
| ರಾಮನಗರ | 148 | 21 | 123 | 04 |
| ಶಿವಮೊಗ್ಗ | 146 | 104 | 40 | 02 |
| ಕೋಲಾರ | 115 | 52 | 62 | 01 |
| ಕೊಪ್ಪಳ | 84 | 21 | 62 | 01 |
| ಬೆಂಗಳೂರು ಗ್ರಾಮಾಂತರ | 105 | 14 | 87 | 04 |
| ತುಮಕೂರು | 75 | 39 | 31 | 05 |
| ಹಾವೇರಿ | 69 | 25 | 44 | 00 |
| ಚಿತ್ರದುರ್ಗ | 57 | 41 | 16 | 00 |
| ಚಿಕ್ಕಮಗಳೂರು | 53 | 27 | 25 | 01 |
| ಅನ್ಯ ಜಿಲ್ಲೆಯವಾರು | 75 | 04 | 71 | 00 |
| ಇತರೆ (ಅನ್ಯ ರಾಜ್ಯದವರು) | 36 | 32 | 01 | 03 |
| **ಒಟ್ಟು** | **13.190** | **7.507** | **5.472** | **202** |

ಆಧಾರ:ಪ್ರಜಾವಾಣಿ, ದಿನಾಂಕ:29.06.2020

## 126. ಹಂಗಾಮಿ ಮಾರ್ಗಸೂಚಿ

ಬಹುವಿವಾದಾತ್ಮಕ ಆನ್‌ಲೈನ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆ ಈಗ ಹಂಗಾಮಿ ಮಾರ್ಗಸೂಚಿ ಹೊರಡಿಸಿದೆ. ರಾಜ್ಯ ಹೈಕೋರ್ಟಿನ ತಜ್ಞರ ಸಮಿತಿ ಅಂತಿಮ ವರದಿ ಸಲ್ಲಿಸುವವರೆಗೆ ಈ ಹಂಗಾಮಿ ಮಾರ್ಗಸೂಚಿ ಜಾರಿಯಲ್ಲಿರುತ್ತದೆ ಎಂದು ಅಧಿಕೃತ ಆದೇಶದಲ್ಲಿ ಹೇಳಲಾಗಿದೆ.

ಎಲ್‌ಕೆಜಿಯಿಂದ 5ನೇ ತರಗತಿ ಹಾಗೂ ಆರರಿಂದ ಹತ್ತನೇ ತರಗತಿವರೆಗೆ ಆನ್‌ಲೈನ್ ಶಿಕ್ಷಣವನ್ನು ಮಕ್ಕಳ ವಯೋಮಾನಕ್ಕನುಗುಣವಾಗಿ ವೈಜ್ಞಾನಿಕ ರೀತಿಯಲ್ಲಿ ಸಿದ್ಧಪಡಿಸುವುದಕ್ಕೆ ತಜ್ಞರ ಸಮಿತಿ ರಚಿಸಲಾಗಿದೆ. ಪ್ರಸ್ತುತ ಈ ಸಮಿತಿ ಕಾರ್ಯನಿರ್ವಹಿಸುತ್ತಿದ್ದು, ಹೈಕೋರ್ಟ್ ನೇಮಿಸಿದ ತಜ್ಞರ ಸಮಿತಿ ವರದಿ ನೀಡುವವರೆಗೂ ಸೀಮಿತ ಆನ್‌ಲೈನ್ ಶಿಕ್ಷಣ ನೀಡುವ ವಿಚಾರವನ್ನು ಸರ್ಕಾರ ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟಿತ್ತು. ಈ ಹಿನ್ನೆಲೆಯಲ್ಲಿ ಹಂಗಾಮಿ ಮಾರ್ಗಸೂಚಿಯನ್ನು ಹೊರಡಿಸಲಾಗಿದ್ದು, ಪೂರ್ವ ಪ್ರಾಥಮಿಕ ಶಾಲಾ ಮಕ್ಕಳಿಗೆ ಆನ್‌ಲೈನ್ ಶಿಕ್ಷಣ ನೀಡುವಂತಿಲ್ಲ. ಆದರೆ ವಾರಕ್ಕೊಮ್ಮೆ 30 ನಿಮಿಷಗಳ ಅವಧಿ ಮೀರದಂತೆ ಪಾಲಕರ ಉಪಸ್ಥಿತಿಯಲ್ಲಿ ಆನ್‌ಲೈನ್ ಶಿಕ್ಷಣ ನೀಡಲು ಅವಕಾಶ ಕಲ್ಪಿಸಲಾಗಿದೆ.

ಒಂದರಿಂದ ಐದನೇ ತರಗತಿ ಮಕ್ಕಳಿಗೆ ದಿನಬಿಟ್ಟು ದಿನ ಗರಿಷ್ಠ 30 ರಿಂದ 40 ನಿಮಿಷಗಳ ಅವಧಿ ಮೀರದಂತೆ ಶಿಕ್ಷಣ ನೀಡಬಹುದು. ಆದರೆ ಹೈಕೋರ್ಟ್ ತಜ್ಞರು ಅಂತಿಮ ಮಾರ್ಗಸೂಚಿ ನೀಡುವವರೆಗೆ ಈ ಹಂಗಾಮಿ ಮಾರ್ಗಸೂಚಿ ಜಾರಿಯಲ್ಲಿರುತ್ತದೆ ಎಂದು ಆದೇಶದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆನ್‌ಲೈನ್ ಶಿಕ್ಷಣಕ್ಕೆ ಹೆಚ್ಚುವರಿ ಶುಲ್ಕ ವಸೂಲಿ ಮಾಡುವಂತಿಲ್ಲ ಎಂದು ಆದೇಶ ಕಟ್ಟಪ್ಪಣೆ ಮಾಡಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:29.06.2020

## 127. ಕೌಶಲ ಸಂಪರ್ಕ, ಪೋರ್ಟಲ್‌ಗೆ ಚಾಲನೆ

ಕೋವಿಡ್ ಹಿನ್ನೆಲೆಯಲ್ಲಿ ಸೃಷ್ಟಿಯಾಗಿರುವ ಆರ್ಥಿಕ ಹಾಗೂ ಕೈಗಾರಿಕಾ ಚಟುವಟಿಕೆ ಹಿನ್ನಡೆ ಸರಿದೂಗಿಸಿ ಉದ್ಯೋಗ ಸೃಷ್ಟಿ ಮಾಡುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದ್ದಾರೆ.

ಕೌಶಲಾಭಿವೃದ್ಧಿ ನಿಗಮ, ಉದ್ಯೋಗದಾತರು ಹಾಗೂ ಉದ್ಯೋಗಾಕಾಂಕ್ಷಿಗಳನ್ನು ಒಂದೇ ವೇದಿಕೆಗೆ ತರುವ ಉದ್ದೇಶದಿಂದ ಕೌಶಲಾಭಿವೃದ್ಧಿ ಇಲಾಖೆ ರೂಪಿಸಿರುವ **'ಕೌಶಲ ಸಂಪರ್ಕ ವೇದಿಕೆ'** ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆ, ವಲಸೆ ಕಾರ್ಮಿಕರಿಗೆ ಇದು ವರದಾನವಾಗಲಿದೆ ಎಂದು ಹೇಳಿದರು.

ಎಲ್ಲೆಲ್ಲಿ ಉದ್ಯೋಗಾವಕಾಶಗಳು ಲಭ್ಯವಿದೆ, ಯಾರಿಗೆ ಕೆಲಸದ ಅಗತ್ಯವಿದೆ ಎಂಬ ಮಾಹಿತಿ ಈ ಪೋರ್ಟಲ್‌ನಲ್ಲಿ ಲಭಿಸುತ್ತದೆ. ಉದ್ಯೋಗಾಕಾಂಕ್ಷಿಗಳಿಗೆ ಕುಶಲತೆ ಹೆಚ್ಚಿಸಲು ಇದರಿಂದ ನೆರವಾಗುತ್ತದೆ. ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡವರಿಗೆ ಖಚಿತವಾಗಿ ಕೆಲಸ ಸಿಗುತ್ತದೆ. ಕುಶಲ ಮಾನವ ಸಂಪನ್ಮೂಲ ಸೃಷ್ಟಿಗೆ ಇದರಿಂದ ಸಾಧ್ಯವಾಗುತ್ತದೆ ಎಂದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ಯುವಜನರಿಗೆ ವರದಾನವಾಗಬಲ್ಲ ಈ ಪೋರ್ಟಲ್‌ನಿಂದ ಗಣನೀಯವಾಗಿ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ. ಉದ್ಯೋಗ ಬಯಸುವವರು ಹಾಗೂ ಉದ್ಯೋಗದಾತರ ಮಧ್ಯೆ ಇದ್ದ ಸಂಪರ್ಕ ಕೊರತೆ ತಪ್ಪಿಸುವಲ್ಲಿ ಇದು ಮಹತ್ವದ್ದಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಈ ಹಿಂದೆ ಉದ್ಯೋಗ ಎಲ್ಲಿ ಲಭ್ಯವಿದೆ ಎಂಬ ಮಾಹಿತಿ ಇರಲಿಲ್ಲ. ಅದೇ ರೀತಿ ಉದ್ಯೋಗದಾತರಿಗೆ ಕುಶಲ ನೌಕರರ ಲಭ್ಯತೆ ಎಲ್ಲಿದೆ ಎಂಬುದು ಗೊತ್ತಾಗುತ್ತಿರಲಿಲ್ಲ. ಮಾರುಕಟ್ಟೆಯ ಬೇಡಿಕೆಯನ್ನು ಗಮನಿಸದೇ ತರಬೇತಿ ನೀಡುವ ಅವೈಜ್ಞಾನಿಕ ಪದ್ಧತಿ ಇತ್ತು. ಸರ್ಕಾರ ಕಂಪನಿಗಳ ಜೊತೆಗೆ ಒಪ್ಪಂದ ಮಾಡಿಕೊಂಡು ಅದಕ್ಕೆ ತಕ್ಕಂತೆ ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತದೆ. ರಾಜ್ಯದ ಪ್ರಗತಿಗೆ ಇದು ನಿರ್ಣಾಯಕ ಪಾತ್ರ ವಹಿಸಲಿದೆ ಎಂದು ಹೇಳಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:30.06.2020

## 128. ಕರ್ಫ್ಯೂ: ರಾತ್ರಿ 8ರಿಂದ ಸಂಚಾರ ನಿರ್ಬಂಧ

ಕೊರೋನಾ ಮಹಾಮಾರಿ ನಿಯಂತ್ರಣಕ್ಕೆ ಸರ್ಕಾರದ 'ರಾತ್ರಿ ಕರ್ಫ್ಯೂ' ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮುಂದಾಗಿರುವ ನಗರ ಪೊಲೀಸರು, ಮೊದಲ ದಿನ ರಾತ್ರಿ 8 ಗಂಟೆ ಬಳಿಕ ಜನ ಸಂಚಾರಕ್ಕೆ ಸಂಪೂರ್ಣವಾಗಿ ನಿರ್ಬಂಧ ವಿಧಿಸಿದರು.

ನಗರದ ಪ್ರಮುಖ ರಸ್ತೆ ಹಾಗೂ ಜಂಕ್ಷನ್‌ಗಳಲ್ಲಿ ಬ್ಯಾರಿಕೇಡ್‌ಗಳನ್ನು ಹಾಕಿ ಓಡಾಡಕ್ಕೆ ಬ್ರೇಕ್ ಹಾಕಿದ ಪೊಲೀಸರು, ರಾತ್ರಿ 7.30 ಗಂಟೆ ಹೊತ್ತಿಗೆ ಅಂಗಡಿ ಮುಗ್ಗಟ್ಟುಗಳ ವ್ಯಾಪಾರ ವಹಿವಾಟನ್ನು ಸ್ಥಗಿತಗೊಳಿಸಿದರು. ನಿಯಮ ಉಲ್ಲಂಘಿಸಿ ಅನಗತ್ಯ ಓಡಾಟ ನಡೆಸಲು ಮುಂದಾದರೆ ಮುಲಾಜಿಲ್ಲದೆ ಪ್ರಕರಣ ದಾಖಲಿಸುವುದಾಗಿ ಎಚ್ಚರಿಕೆ ನೀಡಿದರು.

ಕೊರೋನಾ ಸೋಂಕು ಹರಡುವಿಕೆಗೆ ನಿಯಂತ್ರಣ ಹಾಕುವ ಸಲುವಾಗಿ ರಾಜ್ಯ ಸರ್ಕಾರ ರಾತ್ರಿ 8 ಗಂಟೆಯಿಂದ ಬೆಳಿಗ್ಗೆ 5 ಗಂಟೆವರೆಗೆ 'ಕರ್ಫ್ಯೂ ಮಾದರಿ ವ್ಯವಸ್ಥೆ ಜಾರಿಗೊಳಿಸಿದೆ. ಈ ಅವಧಿಯಲ್ಲಿ ಹಣ್ಣು, ತರಕಾರಿ, ಹಾಲು, ದಿನಸಿ, ಔಷಧ ಮಾರಾಟ, ದಿನಪತ್ರಿಕೆಗಳ ಸೇರಿದಂತೆ ಅಗತ್ಯ ವಸ್ತುಗಳ ಪೂರೈಕೆ ಮತ್ತು ಸೇವಾ ವಲಯದ ಸಂಚಾರಕ್ಕೆ ಮಾತ್ರ ಅವಕಾಶ ನೀಡಿದೆ. ಇವುಗಳ ಹೊರತುಪಡಿಸಿ ಜನರು ಬೇಕಾಬಿಟ್ಟಿಯಾಗಿ ಮನೆಯಿಂದ ಹೊರ ಬಂದರೆ ಕಠಿಣ ಕ್ರಮ ಜರುಗಿಸಲು ಪೊಲೀಸರು ಸಜ್ಜಾಗಿದ್ದಾರೆ.

ಈ ಕರ್ಫ್ಯೂ ಜಾರಿ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದ ಆಣಿಗೊಂಡಿದ್ದ ಪೊಲೀಸರು, ರಸ್ತೆಗಳಲ್ಲಿ ಕರ್ಫ್ಯೂ ಅನುಷ್ಠಾನ ಕುರಿತು ಪ್ರಚಾರ ನಡೆಸಿದರು. ಹೊಯ್ಸಳ ವಾಹನಗಳಲ್ಲಿ ಮೈಕ್ ಅಳವಡಿಸಿಕೊಂಡು ಜನರಿಗೆ ಪ್ರಚಾರಪಡಿಸಿದರು. ಆನಂತರ ರಾತ್ರಿ 8 ಗಂಟೆಗೆ ಬಳಿಕ ತುಮಕೂರು, ಮೈಸೂರು, ಕನಕಪುರ, ಬಳ್ಳಾರಿ, ಹೊಸೂರು, ದೇವನಹಳ್ಳಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗಳಲ್ಲಿ ಬ್ಯಾರಿಕೇಡ್ ಹಾಕಿ ವಾಹನಗಳ ಓಡಾಟಕ್ಕೆ ನಿರ್ಬಂಧಿಸಿದರು. ಅಂಗಡಿಗಳ ಬಾಗಿಲು ಬಂದ್ ಮಾಡಿಸಿದರು. ಪ್ರಮುಖ ರಸ್ತೆಗಳಲ್ಲಿ ವಾಹನಗಳ ತಪಾಸಣೆ ಕೂಡಾ ಆರಂಭಿಸಿದರು. ಈ ವೇಳೆ ಸುಖಾಸುಮ್ಮನೆ ಮನೆಯಿಂದ ಹೊರ ಬಂದವರಿಗೆ ಬಿಸಿ ಮುಟ್ಟಿಸಿದರು.

ಆಧಾರ:ಕನ್ನಡಪ್ರಭ, ದಿನಾಂಕ:30.06.2020

## 129. ಯಂತ್ರದಿಂದ ಸೋಂಕು ನಿವಾರಕ ಸ್ಪ್ರೇ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ನಿಯಂತ್ರಿಸುವ ನಿಟ್ಟಿನಲ್ಲಿ 8 ಸಾವಿರ ಲೀಟರ್ ಸಾಮರ್ಥ್ಯದ ಹಾಗೂ ವೃತ್ತಾಕಾರದಲ್ಲಿ ಸೋಂಕು ನಿವಾರಕ ದ್ರಾವಣ ಸಿಂಪಡಣೆ ಮಾಡಲು ಮಿಸ್ಟ್ ಕೆನಾನ್ ಯಂತ್ರ ಬಳಕೆ ಮಾಡಲಾಗುತ್ತದೆ ಎಂದು ಕಂದಾಯ ಸಚಿವ ಹಾಗೂ ವಿಪತ್ತು ನಿರ್ವಹಣೆ ಪ್ರಾಧಿಕಾರದ ಉಪಾಧ್ಯಕ್ಷ ಆರ್.ಅಶೋಕ್ ತಿಳಿಸಿರುತ್ತಾರೆ.

ವಿಧಾನ ಸೌಧ ಪೂರ್ವದ್ವಾರದ ಬಳಿ ದ್ರಾವಣ ಸಿಂಪಡಣಾ ಯಂತ್ರಕ್ಕೆ ಚಾಲನೆ ನೀಡಿ ಮಾತನಾಡಿದರು. ನಗರದಲ್ಲಿ ಸೋಂಕಿತರ ಸಂಖ್ಯೆ ತೀವ್ರವಾಗಿ ಹೆಚ್ಚುತ್ತಿದೆ. ಅದನ್ನು ತಡೆಯುವ ನಿಟ್ಟಿನಲ್ಲಿ ವ್ಯಾಪಕವಾಗಿ ಸೋಂಕು ನಿವಾರಕ ಸಿಂಪಡಣೆ ಮಾಡಬೇಕಿದೆ. ಮಿಸ್ಟ್ ಕೆನಾನ್ ಯಂತ್ರಕ್ಕೆ ಚಾಲನೆ ನೀಡಲಾಗಿದೆ. ಈ ಯಂತ್ರವು 8 ಸಾವಿರ ಲೀಟರ್ ಸಾಮರ್ಥ್ಯ ಹೊಂದಿದ್ದು, ವೃತ್ತಾಕಾರದಲ್ಲಿ 50 ಮೀಟರ್ ದೂರದವರೆಗೆ ಸಿಂಪಡಣೆ ಮಾಡಲಿದೆ. ಯಂತ್ರಕ್ಕೆ 17 ಚಿಮ್ಮುನಗಳಿಗೆ ಅಳವಡಿಸಲಾಗಿದೆ. ಕಿರಿದಾದ ಸ್ಥಳಗಳಲ್ಲಿ ಸೋಂಕು ಸಿಂಪಡಿಸಲು ಅಳವಡಿಸಿರುವ 30 ಮೀಟರ್ ಉದ್ದದ ಪೈಪ್ ಇದ್ದು, ರಿಮೋಟ್ ಕಂಟ್ರೋಲ್ ಮೂಲಕ ದ್ರಾವಣ ಸಿಂಪಡಿಸಬಹುದಾಗಿದೆ ಎಂದರು.

ಯಂತ್ರವು 11 ಕೆವಿ ಸಾಮರ್ಥ್ಯ ಹೊಂದಿದ್ದು, 45 ಎಚ್.ಪಿ ಸಾಮರ್ಥ್ಯ ಜನರೇಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಎಚ್ಚರಿಕೆಯ ಸೈರನ್ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸುವ ಉದ್ದೇಶದಿಂದ ಧ್ವನಿವರ್ಧಕವನ್ನು ಕೂಡ ಅಳವಡಿಸಲಾಗಿದೆ. ಈ ಯಂತ್ರದಿಂದ ವೇಗವಾಗಿ ಸೋಂಕು ನಿವಾರಕ ಸಿಂಪಡಣೆ ಮಾಡಬಹುದಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಎಸ್.ಆರ್. ವಿಶ್ವನಾಥ್, ಮೇಯರ್ ಗೌತಮ್‌ಕುಮಾರ್, ಉಪ ಮೇಯರ್ ರಾಮಮೋಹನರಾಜು, ಅಪೀಲು ಸ್ಥಾಯಿ ಸಮಿತಿ ಅಧ್ಯಕ್ಷ ಲಕ್ಷ್ಮೀನಾರಾಯಣ, ಪಾಲಿಕೆ ಆಯುಕ್ತ ಅನಿಲ್‌ಕುಮಾರ್, ವಿಶೇಷ ಆಯುಕ್ತ ಡಿ. ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜೇಂದ್ರ ಅಮೇರಿಕನ್ ಹಾಗೂ ರೋಡ್ ಟೆಕ್ನಾಲಜಿ ಅಂಡ್ ಸಲ್ಯೂಷನ್ಸ್ ಎಂಡಿ ಭಾನುಪ್ರಭಾ ಮತ್ತಿತರರು ಉಪಸ್ಥಿತರಿದ್ದರು.

ಆಧಾರ:ವಿಜಯವಾಣಿ, ದಿನಾಂಕ:30.06.2020

# ಭಾಗ–4

# ರಾಜ್ಯ ನೆಲ, ಜಲ, ಭಾಷೆ ಸುದ್ದಿಗಳು

## 1. ಇಂಗ್ಲೀಷ್ ಮಾಧ್ಯಮ ಶಾಲೆ ರದ್ದುಪಡಿಸಿ: ಕಸಾಪ ಪತ್ರ

ಆಂಧ್ರ ಪ್ರದೇಶದ ಮಾತೃಭಾಷಾ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ಆರಂಭಿಸಿದ ಕ್ರಮವನ್ನು ಅಲ್ಲಿನ ಹೈಕೋರ್ಟ್ ರದ್ದು ಪಡಿಸಿದೆ. ರಾಜ್ಯದಲ್ಲೂ ಈಗಾಗಲೇ ಆರಂಭಿಸಿರುವ ಒಂದು ಸಾವಿರ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ರದ್ದುಪಡಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ ಸರ್ಕಾರವನ್ನು ಒತ್ತಾಯಿಸಿದೆ.

ಕಸಪಾ ಅಧ್ಯಕ್ಷ ಡಾ:ಮನು ಬಳಿಗಾರ್ ಅವರು ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಈ ಮನವಿಗೆ ಕಲಬುರ್ಗಿಯಲ್ಲಿ ನಡೆದ 85ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ:ಎಚ್.ಎಸ್.ವೆಂಕಟೇಶಮೂರ್ತಿ ಮತ್ತು ಅಭಿವೃದ್ಧಿ ಶಿಕ್ಷಣ ತಜ್ಞ ಡಾ:ವಿ.ಪಿ.ನಿರಂಜನಾರಾಧ್ಯ ಅವರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ಹಿಂದಿನ ಸರ್ಕಾರ ಒಂದು ಸಾವಿರ ಇಂಗ್ಲೀಷ್ ಮಾಧ್ಯಮ ಶಾಲೆ ಆರಂಭಿಸುವ ನಿಟ್ಟಿನಲ್ಲಿ ಹೊರಡಿಸಿದ್ದ ಆದೇಶ ರದ್ದುಪಡಿಸುವುದರ ಜೊತೆಗೆ ಹೊಸದಾಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸುವ ಎಲ್ಲಾ ಪ್ರಸ್ತಾವನೆಗಳನ್ನು ಪುನರ್ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ. ಕನ್ನಡ ಮಾಧ್ಯಮ ಶಾಲೆಗಳನ್ನು ಬಲವರ್ಧನೆಗೊಳಿಸಬೇಕು. ಇಂಗ್ಲೀಷ್ ಅನ್ನು ಪ್ರಬುದ್ಧವಾಗಿ ಬಳಸಲು ಸಾಧ್ಯವಾಗುವಷ್ಟರ ಮಟ್ಟಿಗೆ ಒಂದು ಭಾಷೆಯನ್ನಾಗಿ ಕಲಿಸುವ ಬಗ್ಗೆ ಗಂಭೀರ ಯೋಚನೆ ಮಾಡಬೇಕು. ಖಾಸಗಿ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡುವ ಬಗ್ಗೆಯೂ ಸರ್ಕಾರ ಪುನರ್ ಪರಿಶೀಲನೆ ನಡೆಸಬೇಕು ಎಂದು ಮನವಿ ಮಾಡಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ: 21.04.2020

## 2. ನಗರದಲ್ಲಿ ತಗ್ಗಿತು ವಾಯುಮಾಲಿನ್ಯ

ಕೋವಿಡ್–19 ನಿಯಂತ್ರಣಕ್ಕಾಗಿ ಸರ್ಕಾರ ಘೋಷಿಸಿರುವ ಲಾಕ್‌ಡಾನ್ ಹಿನ್ನೆಲೆಯಲ್ಲಿ ನಗರದಲ್ಲಿ ವಾಹನ ಸಂಚಾರ ವಿರಳವಾಗಿದೆ. ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳು ಬಂದ್ ಆಗಿವೆ. ಇದರಿಂದಾಗಿ 34ರಷ್ಟು (ಸೂಚ್ಯಂಕ) ವಾಯು ಮಾಲಿನ್ಯವೂ ತಗ್ಗಿದೆ.

ಲಾಕ್‌ಡೌನ್ ನಂತರ ಮಾರ್ಚ್ 24ರಿಂದ ಏಪ್ರಿಲ್ 17ರವರೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಅಂತರ್ಜಾಲ ಸತತ ವಾಯುಮಾಲಿನ್ಯ ನಿರ್ವಹಣಾ ಕೇಂದ್ರಗಳು ಆಯಾ ಪ್ರದೇಶದಲ್ಲಿನ ಗಾಳಿಯ ಗುಣಮಟ್ಟವನ್ನು ದಾಖಲು ಮಾಡಿವೆ. ಆ ಪ್ರಕಾರ ನಗರದಲ್ಲಿ ಒಟ್ಟಾರೆ 34ರಷ್ಟು (ಸೂಚ್ಯಂಕ) ವಾಯುಮಾಲಿನ್ಯ ತಗ್ಗಿದೆ.

ಬಸ್ ಸಂಚಾರ ಸೇರಿದಂತೆ ಸಮೂಹ ಸಾರಿಗೆ, ಖಾಸಗಿ ವಾಹನಗಳ ಓಡಾಟ ವಿರಳಗೊಂಡಿರುವುದೇ ನಗರದ ಗಾಳಿ ಗುಣಮಟ್ಟ ಉತ್ತಮವಾಗಲು ಮುಖ್ಯ ಕಾರಣ ಎಂದು ಕೆಎಸ್‌ಪಿಸಿಬಿ ಸದಸ್ಯ ಕಾರ್ಯದರ್ಶಿ ಬಸವರಾಜ್ ಪಾಟೀಲ ಮಾಹಿತಿ ನೀಡಿದ್ದಾರೆ.

ನಗರದ ವಾಯುಗುಣಮಟ್ಟ ಸೂಚ್ಯಂಕದ ಪ್ರಕಾರ ನಗರದ ಗಾಳಿಯಲ್ಲಿ ಕಾರ್ಬನ್ ಡೈ ಆಕ್ಸೈಡ್ ಸಲ್ಫರ್, ನೈಟ್ರೋಜನ್ ಪ್ರಮಾಣ ಕಡಿಮೆಯಾಗಿದೆ. ಕೊರೊನಾ ಸೋಂಕು ಹರಡುತ್ತಿರುವ ಈ ಹೊತ್ತಿನಲ್ಲಿ ಲಾಕ್‌ಡೌನ್‌ನಿಂದಾಗಿ ಸ್ವಲ್ಪವಾದರೂ ಶುದ್ಧವಾದ ಗಾಳಿ ಸೇವಿಸುವ ಭಾಗ್ಯ ನಮ್ಮದಾಗಿದೆ. ವಾಯು ಗುಣಮಟ್ಟದ ಸೂಚ್ಯಂಕ ಒಟ್ಟು ಎಂಟು ಅಂಶಗಳನ್ನು (PM10, PM2.5, NO2, SO2, CO, 03, NH3 ಮತ್ತು Pb) ಅಳೆದು ನಿರ್ಧರಿಸಲಾಗುತ್ತದೆ. 24 ಗಂಟೆಗಳ ಕಾಲ ಅಳತೆ ಮಾಡಿ, ಸರಾಸರಿ ಮೌಲ್ಯವನ್ನು ತೆಗೆದುಕೊಂಡು ಸೂಚ್ಯಂಕ ನಿರ್ಧರಿಸಲ್ಪಡುತ್ತದೆ.

ವಾಯು ಗುಣಮಟ್ಟದ ಸೂಚ್ಯಂಕ ಮಾಹಿತಿ ಪ್ರಕಾರ ನಗರದ ಅತಿ ಹೆಚ್ಚು ಟ್ರಾಫಿಕ್ ಪ್ರದೇಶವಾದ ಸಿಲ್ಕ್‌ಬೋರ್ಡ್‌ನಲ್ಲಿ ಈ ಹಿಂದೆ ವಾಯು ಗುಣಮಟ್ಟ ಶೇ.93ರಷ್ಟಿತ್ತು ಈಗ ವಾಯು ಗುಣಮಟ್ಟ ಶೇ.50ರಷ್ಟು ಆಗಿದೆ. ಒಟ್ಟಾರೆ ಈ ಪ್ರದೇಶದಲ್ಲಿ ಶೇಕಡ 46.23ರಷ್ಟು ಮಾಲಿನ್ಯ ಕಡಿಮೆಯಾಗಿದೆ.

ಲಾಕ್‌ಡೌನ್ ಅವಧಿ ಮುಗಿದ ಬಳಿಕ ಯಥಾಪ್ರಕಾರ ನಗರದಲ್ಲಿ ಮಾಲಿನ್ಯ ಹೆಚ್ಚಾಗುತ್ತದೆ. ಶುದ್ಧ ಇಂಧನ ಬಳಕೆ, ಗ್ರೀನ್ ಬೆಲ್ಟ್ ಪ್ರದೇಶ ಹೆಚ್ಚಳ, ಕಾರ್ಖಾನೆ ತ್ಯಾಜ್ಯ ಕಟ್ಟಡ ನಿರ್ಮಾಣ ಹಾಗೂ ನೆಲಸಮದ ಹಂತದಲ್ಲಿ ಬರುವ ಧೂಳು ಗಾಳಿಗೆ ಸೇರುತ್ತಿರುವುದು, ತ್ಯಾಜ್ಯಗಳಿಗೆ ಬೆಂಕಿ ಹಾಕಿದಾಗ ಉತ್ಪತ್ತಿಯಾಗುವ ಕಾರ್ಬನ್ ಹಾಗೂ ತ್ಯಾಜ್ಯಗಳ ವಿಲೇವಾರಿ ವೈಜ್ಞಾನಿಕವಾಗಿ ನಡೆದಿದೆ. ಮತ್ತಷ್ಟು ಮಾಲಿನ್ಯವನ್ನು ತಡೆಯಬಹುದು. ಪರಿಸರ ಸಂರಕ್ಷಣೆಯ ಅಗತ್ಯ ಈ ಅವಧಿಯಲ್ಲಾದರೂ ಮನವರಿಕೆಯಾಗಬೇಕು ಎನ್ನುತ್ತಾರೆ ಬಸವರಾಜ್ ಪಾಟೀಲ.

ಧೂಮಪಾನಿಗಳ ಶ್ವಾಸಕೋಶ ಹೇಗಿರುತ್ತದೋ ಹಾಗೆಯೇ ಸಂಚಾರ ದಟ್ಟಣೆಯಲ್ಲಿ ಓಡಾಡುವವರ ಶ್ವಾಸಕೋಶದ ಸ್ಥಿತಿಯೂ ಇರುತ್ತದೆ. ವಾಯು ಮಾಲಿನ್ಯ ತಂಬಾಕಿನಷ್ಟೇ ಶ್ವಾಸಕೋಶಕ್ಕೆ ಹಾನಿ ಮಾಡುತ್ತದೆ. ಇಂಥ ಮಾಲಿನ್ಯಕಾರಕ ಚಟುವಟಿಕೆಗಳಿಂದ ಶ್ವಾಸಕೋಶ ದುರ್ಬಲವಾಗಲಿದ್ದು, ಕೊರೊನಾದಂಥ ಸೋಂಕುಗಳಿಗೆ, ಹೃದ್ರೋಗದಂತಹ ತೊಂದರೆಗಳಿಗೆ ಸಿಲುಕುತ್ತಾರೆ. ಈಗಿರುವ ಶುದ್ಧವಾದ ಗಾಳಿ ಗುಣಮಟ್ಟವನ್ನು ಕಾಯ್ದುಕೊಂಡರೆ ನಮ್ಮ ಆರೋಗ್ಯವೂ ಉತ್ತಮ ಸ್ಥಿತಿಯಲ್ಲಿ ಇರುತ್ತದೆ ಎನ್ನುತ್ತಾರೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ:ಸಿ.ಎನ್.ಮಂಜುನಾಥ್.

ಆಧಾರ:ಪ್ರಜಾವಾಣಿ, ದಿನಾಂಕ:24.04.2020

## 3. ಜಲಶಕ್ತಿ ಸಚಿವಾಲಯ ವ್ಯಾಪ್ತಿಗೆ ಕಾವೇರಿ ಪ್ರಾಧಿಕಾರ

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಹೊಣೆಯನ್ನು ಕೇಂದ್ರ ಸರ್ಕಾರದ ಜಲಶಕ್ತಿ ಸಚಿವಾಲಯಕ್ಕೆ ವಹಿಸಿ ಎಂದು ರಾಷ್ಟ್ರಪತಿಯವರು ಅಧಿಸೂಚನೆ ಹೊರಡಿಸಿದ್ದಾರೆ. ಇದುವರೆಗೆ ಅಸ್ತಿತ್ವದಲ್ಲಿದ್ದ ಜಲಸಂಪನ್ಮೂಲ ಸಚಿವಾಲಯದ ಹೆಸರನ್ನು, ಜಲಶಕ್ತಿ ಸಚಿವಾಲಯ ಎಂದು ಬದಲಿಸಿರುವ ಹಿನ್ನೆಲೆಯಲ್ಲಿ ನದಿ ನೀರು ನಿರ್ವಹಣಾ ಮಂಡಳಿ ಮತ್ತು ಪ್ರಾಧಿಕಾರಗಳನ್ನು ಅದರ ವ್ಯಾಪ್ತಿಗೆ ತಂದಿರುವುದಾಗಿ ಅಧಿಸೂಚನೆ ತಿಳಿಸಿದೆ. ಕಾವೇರಿ ಪ್ರಾಧಿಕಾರ ಮಾತ್ರವಲ್ಲದೆ, ಕೃಷ್ಣಾ, ಗೋದಾವರಿ ನೀರು ನಿರ್ವಹಣಾ ಮಂಡಳಿಗಳನ್ನೂ ಜಲಶಕ್ತಿ ಸಚಿವಾಲಯದ ಸುಪರ್ದಿಗೆ ವಹಿಸಲಾಗಿದೆ.

ಕಣಿವೆ ವ್ಯಾಪ್ತಿಯ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಪುದುಚೇರಿಗಳಿಗೆ ಕಾವೇರಿ ನದಿ ನೀರಿನ ಹಂಚಿಕೆ ಮಾಡಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, ನೀರು ಹಂಚಿಕೆಗಾಗಿ ಪ್ರಾಧಿಕಾರ ಸ್ಥಾಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚಿಸಿದ್ದರಿಂದ, 2018ರಿಂದ ಪ್ರಾಧಿಕಾರವು ಕಾರ್ಯನಿರ್ವಹಿಸುತ್ತಿದೆ. ಇನ್ನು ಮುಂದೆ ಪ್ರಾಧಿಕಾರವು ಕೈಗೊಳ್ಳುವ ನಿರ್ಣಯಗಳ ಕುರಿತ ವರದಿಯನ್ನು ಜಲಶಕ್ತಿ ಸಚಿವಾಲಯದ ಮುಖ್ಯಸ್ಥರ ಹೆಸರಲ್ಲಿ ಸಲ್ಲಿಸಬೇಕಿದೆ.

ಆಧಾರ:ಪ್ರಜಾವಾಣಿ, ದಿನಾಂಕ:29.04.2020

## 4. ಮೈಸೂರಿಗೆ ಮತ್ತೆ ಫೈವ್ ಸ್ಟಾರ್

ಸಾಂಸ್ಕೃತಿಕ ನಗರಿ ಮೈಸೂರು ಸ್ವಚ್ಛ ಸರ್ವೇಕ್ಷಣೆಯಲ್ಲಿ ಸತತ ಎರಡನೇ ಬಾರಿಗೆ ಫೈವ್‌ಸ್ಟಾರ್ ರ್‍ಯಾಂಕಿಂಗ್‌ನೊಂದಿಗೆ ತ್ಯಾಜ್ಯಮುಕ್ತ ನಗರಿ (ಗಾರ್ಬೆಜ್‌ಫ್ರೀ ಸಿಟಿ) ಪಟ್ಟವನ್ನು ಮುಡಿಗೇರಿಸಿಕೊಂಡಿದೆ. ಮೈಸೂರು, ಅಂಬಿಕಾಪೂರ್, ರಾಜ್‌ಕೋಟ್, ಸೂರತ್ ಹಾಗೂ ಇಂದೋರ್ ಸೆವೆನ್ ಸ್ಟಾರ್ ರ್‍ಯಾಂಕಿಂಗ್‌ಗಾಗಿ ಸ್ಪರ್ಧಿಸಿದ್ದವಾದರೂ ಯಾವುದೇ ನಗರಕ್ಕೆ ಈ ಪಟ್ಟ ಸಿಕ್ಕಿಲ್ಲ. 2010ರಲ್ಲಿ ನಡೆದ ಪ್ರಥಮ ಸ್ವಚ್ಛ ಸರ್ವೇಕ್ಷಣೆಯಲ್ಲಿ ಚಂಢೀಗಡಕ್ಕೆ ಪ್ರಥಮ, ಮೈಸೂರಿಗೆ ದ್ವಿತೀಯ ಸ್ಥಾನ ಸಿಕ್ಕಿತ್ತು.

ಆಧಾರ:ವಿಜಯವಾಣಿ, ದಿನಾಂಕ:20.05.2020

## 5. ಆರೋಗ್ಯ ವಿವಿ ಬೆಳ್ಳಿಹಬ್ಬ : ಮೋದಿ ಚಾಲನೆ

ದೇಶದಲ್ಲೇ ಅತ್ಯಂತ ದೊಡ್ಡ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಎಂದು ಖ್ಯಾತಿ ಪಡೆದಿರುವ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಬೆಳ್ಳಿ ಮಹೋತ್ಸವ ಹಾಗೂ ಕೊರೊನಾ ನಿಗ್ರಹಕ್ಕೆ ವಿಶ್ವ ವಿದ್ಯಾಲಯ ವತಿಯಿಂದ ಆರಂಭಿಸಿರುವ ಕೊರೋನಾ ಆವಿಷ್ಕಾರ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೆಹಲಿಯಿಂದ ವಿಡಿಯೋ ಲಿಂಕ್ ಮೂಲಕ ಚಾಲನೆ ನೀಡಲಿದ್ದಾರೆ.

ಜೂನ್.1ಕ್ಕೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಆರಂಭವಾಗಿ 25 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯ ಕಛೇರಿಯಲ್ಲಿರುವ ಧನ್ವಂತರಿ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಸಲಾಗುತ್ತಿದೆ. ಕೊರೊನಾ ಕಾರಣ ಕಾರ್ಯಕ್ರಮವನ್ನು ಅದ್ದೂರಿಯಾಗಿ ನೆರವೇರಿಸಲು ಸಾಧ್ಯವಾಗದ ಹಿನ್ನೆಲೆಯಲ್ಲಿ ಅರ್ಥಪೂರ್ಣವಾಗಿ ನಡೆಸಲಾಗುತ್ತಿದೆ.

ಕಾರ್ಯಕ್ರಮದಲ್ಲಿ ರಾಜ್ಯಪಾಲ ವಿ.ಆರ್.ವಾಲಾ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ವೈದ್ಯಕೀಯ ಶಿಕ್ಷಣ ಸಚಿವ ಡಾ:ಕೆ.ಸುಧಾಕರ್, ಕುಲಪತಿ ಡಾ:ಎಸ್.ಸಚ್ಚಿದಾನಂದ, ಕುಲಸಚಿವ ಡಾ:ನಿಂಗೇಗೌಡ, ವಿಶ್ವವಿದ್ಯಾಲಯ ಸಿಂಡಿಕೇಟ್ ಸಿಬ್ಬಂದಿ, ಬೋಧಕ ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಆರ್‌ಜಿಯುಎಚ್‌ಎಸ್ ದೇಶದಲ್ಲೇ ಅತ್ಯಂತ ದೊಡ್ಡ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಆಗಿದೆ. ವೈದ್ಯಕೀಯ ಕಾಲೇಜುಗಳು, ನರ್ಸಿಂಗ್, ಪ್ಯಾರಾ ಮೆಡಿಕಲ್ ಸೇರಿದಂತೆ ವಿವಿಧ 800 ಅಂಗ ಸಂಸ್ಥೆಗಳನ್ನು ಒಳಗೊಂಡಿದೆ. 2.5ಲಕ್ಷ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. 23 ಸಾವಿರ ಬೋಧಕ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

ನರೇಂದ್ರ ಮೋದಿ ಮೇ 5ರಂದು ವೈದ್ಯಕೀಯ, ತಂತ್ರಜ್ಞಾನ ಹಾಗೂ ಕೈಗಾರಿಕೋದ್ಯಮಿಗಳ ಸಹಯೋಗದೊಂದಿಗೆ ಕೋವಿಡ್ ವಿರುದ್ಧ ನೂತನ ಅವಿಷ್ಕಾರ ಕೈಗೊಳ್ಳುವಂತೆ ಕರೆ ನೀಡಿದ್ದರು. ಅದರಂತೆ ಐಐಎಂ, ಐಐಐಟಿ, ಜಿಲ್ಲಾ ವೈದ್ಯಕೀಯ ಕಾಲೇಜುಗಳ ಪರಿಣಿತರು ಸೇರಿದಂತೆ ಹಲವಾರು ಸಂಸ್ಥೆಗಳ ಸಹಯೋಗದಲ್ಲಿ ಆವಿಷ್ಕಾರ ಮಾಡಲಾಗುತ್ತಿದೆ. ಈ ಆವಿಷ್ಕಾರಕ್ಕೆ ಪ್ರಧಾನಿ ಚಾಲನೆ ನೀಡುತ್ತಿದ್ದಾರೆ ಎಂದು ಆರ್‌ಜಿಯುಎಚ್‌ಎಸ್ ಕುಲಪತಿ ಡಾ:ಎಸ್.ಸಚ್ಚಿದಾನಂದ ತಿಳಿಸಿದ್ದಾರೆ.

ವೈವಿಧ್ಯಮಯ ರೀತಿಯಲ್ಲಿ ಪರೀಕ್ಷೆ, ಚಿಕಿತ್ಸಾ ಪದ್ಧತಿ, ಕ್ವಾರೈಂಟೈನ್, ಸಾರ್ವಜನಿಕ ಆರೋಗ್ಯ, ಪ್ರಯೋಗಾಲಯ ಸೇರಿ ವಿವಿಧ ಆರು ಕ್ಷೇತ್ರಗಳಲ್ಲಿ ಆವಿಷ್ಕಾರ ನಡೆಸಲಾಗುತ್ತದೆ. ಉತ್ತಮ ಎನಿಸುವ 100 ಐಡಿಯಾಗಳನ್ನು ಆಯ್ಕೆ ಮಾಡಲಾಗುತ್ತದೆ. ಒಂದೇ ರೀತಿಯಲ್ಲಿರುವ ಪ್ರಾಜೆಕ್ಟ್‌ಗಳನ್ನು ಮೆಂಟರ್‌ಶಿಪ್ ಎಂಬ ತಂಡ ರಚಿಸಿ ಸಂಶೋಧನೆ ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ: 01.06.2020

## 6. ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸೂಚನೆ

ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಮುಂಚಿತವಾಗಿಯೇ ಸಾಕಷ್ಟು ನಿಗಾವಹಿಸಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಗರಾಭಿವೃದ್ಧಿ ಇಲಾಖೆ ಪ್ರಗತಿ ಪರಿಶೀಲನಾ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮುಂದಿನ ಎರಡು ತಿಂಗಳ ಅವಧಿಯಲ್ಲಿ 23 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿಗೆ ತತ್ವಾರ ಉಂಟಾಗುವ ಸಾಧ್ಯತೆ ಇದ್ದು, ಈ ನಿಟ್ಟಿನಲ್ಲಿ ಯಾವುದೇ ಕಾರಣಕ್ಕೂ ಜನ ನೀರಿಗಾಗಿ ಪರದಾಡುವಂತಾಗಬಾರದು. ನಗರ ಪ್ರದೇಶಗಳ ಜನರ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಪ್ರತಿಯೊಬ್ಬ ಜಿಲ್ಲಾಧಿಕಾರಿಗಳ ಬಳಿಯೂ ರೂ.47.24 ಕೋಟಿಗಳ ಲಭ್ಯತೆ ಇದ್ದು, ಆಯಾಯ ಜಿಲ್ಲೆಗಳ ಡಿಸಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಸ್ಥಳೀಯ ನಗರಗಳ ಕುಡಿಯುವ ನೀರಿನ ಸಮಸ್ಯೆಯನ್ನು ಕೂಡಲೇ ನಿವಾರಿಸುವತ್ತ ಮುಂದಾಗಬೇಕು ಹಾಗೂ ಪ್ರಸಕ್ತ ಸಾಲಿನಲ್ಲಿ ಏಪ್ರಿಲ್ ಅಂತ್ಯದವರೆಗೆ ರಾಜ್ಯದ 12 ನಗರಗಳಲ್ಲಿ ಉಂಟಾಗಿದ್ದ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗಾಗಿ ಸರ್ಕಾರ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿದೆ ಎಂದು ಸಭೆಯಲ್ಲಿ ಅವರು ವಿವರಿಸಿದರು. ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ.ವಿಜಯಭಾಸ್ಕರ್ ರೆಡ್ಡಿ ಸೇರಿದಂತೆ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:06.06.2020

## 7. ಕನ್ನಡ ನಿರ್ಲಕ್ಷಿಸುವ ಶಾಲೆಗಳ ವಿರುದ್ಧ ಕ್ರಮ

ಕಡ್ಡಾಯ ಕನ್ನಡ ಕಲಿಕಾ ವಿಧೇಯಕ–2015ರ ಅನುಷ್ಠಾನಕ್ಕೆ ಅನಾದರ ಇಲ್ಲವೇ ನಿರ್ಲಕ್ಷ್ಯ ತೋರುವ ಶಿಕ್ಷಣ ಸಂಸ್ಥೆಗಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಸಚಿವ ಎಸ್. ಸುರೇಶ್‌ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಶ್ರಯದಲ್ಲಿ ಕಡ್ಡಾಯ ಕನ್ನಡ ಕಲಿಕಾ ವಿಧೇಯಕ–2015ರ ಅನುಷ್ಠಾನದ ಪರಾಮರ್ಶೆ ಕುರಿತು ರಾಜ್ಯದ ಎಲ್ಲ ಡಿಡಿಪಿಐಗಳೊಂದಿಗೆ ನಡೆದ ವಿಡಿಯೋ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಇದಕ್ಕಾಗಿ 2015ರಲ್ಲಿ ಜಾರಿಗೆ ತರಲಾದ ಕನ್ನಡ ಕಲಿಕಾ ಕಾಯ್ದೆಯ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಶಿಕ್ಷಣ ಇಲಾಖೆ ಕಟಿಬದ್ಧವಾಗಿದೆ ಎಂದು ಹೇಳಿದರು.

ಈ ನೆಲದ ಕಾನೂನು ಅನುಷ್ಠಾನದ ವಿಷಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಶಿಕ್ಷಣ ಇಲಾಖೆಯೊಂದಿಗೆ ನಿರ್ವಹಿಸುತ್ತಿರುವ ಸಮನ್ವಯ ಜವಾಬ್ದಾರಿ ನಿಜಕ್ಕೂ ಪ್ರೇರಣಾದಾಯಕ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಇಲಾಖೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರಗಳು ಜೋಡೆತ್ತಿನಂತೆ ಕೆಲಸ ಮಾಡಲಿದೆ. ಕನ್ನಡ ನೆಲದಲ್ಲಿ ಓದುವ ಪ್ರತಿಯೊಂದು ಮಗುವೂ ಕನ್ನಡವನ್ನು ಕಲಿಯಬೇಕು. ಅರ್ಹ ಶಿಕ್ಷಕರು ಈ ಮಕ್ಕಳಿಗೆ ಕನ್ನಡ ಕಲಿಸಬೇಕು. ಇದನ್ನು ರಾಜ್ಯದ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳು ಅರ್ಥೈಸಿಕೊಂಡು ಮಕ್ಕಳ ಹಿತದೃಷ್ಟಿಯಿಂದ ಸರ್ಕಾರದ ಈ ಕ್ರಮವನ್ನು ಬೆಂಬಲಿಸಬೇಕೆಂದರು.

ಜಾಗತಿಕ ನಿರೀಕ್ಷೆಗೆ ತಕ್ಕಂತೆ ನಮ್ಮ ಸರ್ಕಾರಿ ಶಾಲೆ ಮಕ್ಕಳನ್ನು ತಯಾರು ಮಾಡಬೇಕು ಮತ್ತು ನಮ್ಮ ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸಿ ಉಳಿಸಿ ಬೆಳೆಸುವ ಮಹೋನ್ನತ ಉದ್ದೇಶದಿಂದ ಈ ವರ್ಷದಿಂದಲೇ ರಾಜ್ಯದಲ್ಲಿ 1000 'ಉಭಯ ಮಾಧ್ಯಮ ಶಾಲೆ'ಗಳನ್ನು ಆರಂಭಿಸಲಾಗುವುದೆಂದರು.

ಸರ್ಕಾರಿ ಶಾಲೆಗಳನ್ನು ಸಬಲೀಕರಣಗೊಳಿಸುವಂತಹ ಇಂತಹ ಉಪಕ್ರಮಕ್ಕೆ ಸಾರ್ವಜನಿಕರ ಬೆಂಬಲ ಮತ್ತು ಸಹಕಾರ ಅಗತ್ಯವಿದೆ ಎಂದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:06.06.2020

## 8. ಅಂತರ್ಜಲ ವೃದ್ಧಿಗಾಗಿ ಇಂಗುಗುಂಡಿಗಳ ಪರ್ವ

ಕೋವಿಡ್ 19 ಲಾಕ್‌ಡೌನ್‌ನಿಂದಾಗಿ ಅನೇಕ ಬಡವರು, ಕೂಲಿಕಾರ್ಮಿಕರ ಬದುಕು ಹೈರಾಣಾಗಿತ್ತು. ದಿನದ ಅನ್ನಕ್ಕಾಗಿ ಪರದಾಡುವ ಸ್ಥಿತಿ ತಲುಪಿತ್ತು. ಆದರೆ ಅದಕ್ಕೊಂದು ಹೊಸ ಚೈತನ್ಯ ಬಂದಿದೆ. ಉದ್ಯೋಗ ಖಾತ್ರಿ ಯೋಜನೆಯಡಿ ಉದ್ಯೋಗ ಸಿಗುತ್ತಿದ್ದು, ಹಣ ದುಡಿದವರ ಅಕೌಂಟಿಗೆ ಬರುತ್ತಿದೆ. ಕೆಲಸ, ಹೊಟ್ಟೆ ಎರಡೂ ಸಾಧ್ಯವಾಗಿದ್ದು, ಬಡವರು, ಕೂಲಿಕಾರರು ಹಾಗೂ ವಲಸಿಗರಿಗೆ ಇದು ವರದಾನವಾಗಿದೆ.

ಪಶ್ಚಿಮಘಟ್ಟ ಪ್ರದೇಶಗಳನ್ನೊಂಡ ಉತ್ತರ ಕನ್ನಡ ಜಿಲ್ಲೆಯು ಶೇಕಡ 80 ಅರಣ್ಯ ಪ್ರದೇಶವನ್ನು ಹೊಂದಿದ್ದು, ಈ ಹಿಂದೆ ಮಳೆ ನಾಡಾಗಿ ಹೆಸರಾಗಿದ್ದರೂ ಇತ್ತೀಚಿನ ವರ್ಷಗಳಲ್ಲಿ ಮಳೆ ಪ್ರಮಾಣ ಕಡಿಮೆಯಾಗಿ ಸಾಕಷ್ಟು ನೀರಿನ ಅಭಾವ ಎದುರಿಸುವಂತಾಗಿತ್ತು. ಆ ಕಾರಣಕ್ಕಾಗಿ ಪ್ರಧಾನ ಮಂತ್ರಿ ಮನ್ರೇಗಾ ಯೋಜನೆಯಡಿಯಲ್ಲಿ ಕೋವಿಡ್ ಲಾಕ್‌ಡೌನ್ ವೇಳೆಯಲ್ಲಿ ಕೂಲಿಕಾರರು, ಬಡವರಿಗೆ ಅನುಕೂಲ ಕಲ್ಪಿಸಿ, ಅಂತರ್ಜಲ ಮಟ್ಟ ಹೆಚ್ಚಿಸಿ, ಭೂಮಿ ಫಸಲನ್ನು ಹಸಿರಾಗಿಸಿ ಎಲ್ಲರ ಬದುಕು ಹಸನಾಗಿಸುವ ಉದ್ದೇಶದಿಂದ ಕೆರೆಗಳ ಕಾಮಗಾರಿ ಹಾಗೂ ಅರಣ್ಯದಲ್ಲಿ ಇಂಗು ಗುಂಡಿ ನಿರ್ಮಾಣದ ಕಾಮಗಾರಿ ಆರಂಭಿಸಿದೆ.

ಸಿದ್ದಾಪುರ, ಶಿರಸಿ, ಯಲ್ಲಾಪುರ, ಮುಂಡಗೋಡ, ಹಳಿಯಾಳ ಹಾಗೂ ಜೋಯಿಡಾ ತಾಲ್ಲೂಕುಗಳು ಹೆಚ್ಚು ಕೃಷಿ ಭೂಮಿ ಹಾಗೂ ಅರಣ್ಯ ಪ್ರದೇಶವನ್ನು ಹೊಂದಿದ್ದು, ಪ್ರಧಾನ ಮಂತ್ರಿ ಮಹತ್ವಾಕಾಂಕ್ಷಿ ಯೋಜನೆಯಲ್ಲೊಂದಾದ ಮನ್ರೇಗಾ ಯೋಜನೆಯಡಿ ಕೆರೆ ಹೂಳೆತ್ತುವುದು ಮತ್ತು ಅರಣ್ಯದಲ್ಲಿ ಇಂಗು ಗುಂಡಿ ನಿರ್ಮಾಣ ಕಾಮಗಾರಿ ಆರಂಭವಾಗಿದೆ. ಪ್ರತಿ ತಾಲ್ಲೂಕಿನ ಪ್ರತಿ ಪಂಚಾಯಿತಿಯಲ್ಲಿಯೂ ಸಾವಿರಾರು ಸಂಖ್ಯೆಯಲ್ಲಿ ಬಡವರು, ಕೂಲಿ ಕಾರ್ಮಿಕರು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ. ರಾಜ್ಯದಾದ್ಯಂತ ಈ ಯೋಜನೆ ಚಾಲನೆಯಲ್ಲಿದ್ದು, ಉತ್ತರ ಕನ್ನಡ ಜಿಲ್ಲೆ ಕೆಲಸ ಸಾಧಿಸುವಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡಿದೆ.

ಅಂತೆಯೇ ಜಿಲ್ಲೆಯಲ್ಲಿಯೇ ಹಳಿಯಾಳ ತಾಲ್ಲೂಕು ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಸಾವಿರಾರು ಬಡ ಕಾರ್ಮಿಕರ ಜೀವನ ಹಸನಾಗಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:06.06.2020

## 9. ಅರಸು ಕೊಡುಗೆಗಳ ಸ್ಮರಣೆ

ದೇವರಾಜ ಅರಸು ಅವರು ಕನ್ನಡ ನಾಡು ಕಂಡ ವಿಶಿಷ್ಟ ನಾಯಕ. ಮುಖ್ಯಮಂತ್ರಿಯಾಗಿ ಅವರು ರಾಜ್ಯದ ಅಭಿವೃದ್ಧಿ ಬಗ್ಗೆ ದೂರದೃಷ್ಟಿ ಹೊಂದಿದವರಾಗಿದ್ದರು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಣ್ಣಿಸಿದರು. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸು ಅವರ 38ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ವಿಧಾನ ಸೌಧ ಆವರಣದಲ್ಲಿರುವ ಅರಸು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪುಷ್ಪನಮನ ಸಲ್ಲಿಸಿ, ವಿಶೇಷ ಸಸಿ ನೆಟ್ಟು ನಂತರ ಸುದ್ದಿಗಾರರ ಜೊತೆ ಮಾತನಾಡಿದ ಸಿಎಂ. ದೇವರಾಜ ಅರಸು ಅವರು ಎಂಟು ವರ್ಷಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿದ್ದು, ಉತ್ತಮ ನಾಯಕರಾಗಿ ಮಾನವೀಯ ನೆಲೆ ಒಳಗೊಂಡು ಆಡಳಿತ ನಡೆಸಿದ್ದರು. ಮುಖ್ಯಮಂತ್ರಿಯಾಗಿ ಅವರು ಕೈಗೊಂಡ ನಿರ್ಧಾರಗಳು ಚರಿತ್ರಾರ್ಹವಾದದ್ದು ಎಂದು ಅವರ ಕೊಡುಗೆಗಳನ್ನು ಸ್ಮರಿಸಿದರು.

ಅರಸು ಅವರು ಜಾರಿಗೆ ತಂದ ಜೀತ ವಿಮುಕ್ತಿ ಭೂ ಸುಧಾರಣಾ ಹಾಗೂ ಋಣ ಪರಿಹಾರ ಕಾಯ್ದೆಯಂತಹ ಕ್ರಾಂತಿಕಾರಕ ನಿರ್ಧಾರಗಳು ಮನನೀಯ. ಬಡವರು ಹಾಗೂ ದಲಿತರು ಸಮಾಜದಲ್ಲಿ ಗೌರವದಿಂದ ಬದುಕಲು ಅವಕಾಶ ಕಲ್ಪಿಸಿದ್ದಾರೆ. ಸಾಮಾಜಿಕ ನ್ಯಾಯದ ಹರಿಕಾರ ಎನಿಸಿಕೊಂಡ ಅರಸು ಅವರು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಕಲ್ಪಿಸಿದ ಅವರ ಸಾಧನೆಗೆ ಸಾಟಿ ಇಲ್ಲ. ಮಾಜಿ ಪ್ರಧಾನಿ ಇಂದಿರಾಗಾಂಧಿ ಜಾರಿಗೆ ತಂದ 20 ಅಂಶಗಳ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ರಾಜ್ಯದಲ್ಲಿ ಜಾರಿಗೆ ತಂದ ಕೀರ್ತಿ ಅವರಿಗೆ ಸಲ್ಲುತ್ತದೆ ಹಾಗೂ ಇಂತಹ ನಾಯಕರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ನಡೆದು ಸಮಾಜವನ್ನು ಅಭಿವೃದ್ಧಿಮುಖವಾಗಿ ಕೊಂಡೊಯ್ಯಬೇಕು ಎಂದರು. ಉಪ ಮುಖ್ಯಮಂತ್ರಿ ಗೋವಿಂದ ಎಂ. ಕಾರಜೋಳ, ಸಚಿವರಾದ ಶ್ರೀರಾಮುಲು, ಭೈರತಿ ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:07.06.2020

## 10. ಕೃಷ್ಣೆ ಒಡಲಿಗೆ ನೀರು

ನೆರೆಯ ಮಹಾರಾಷ್ಟ್ರದ ಶಿರೋಳ ತಾಲ್ಲೂಕಿನ ರಾಜಾಪೂರ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ 4,400 ಕ್ಯೂಸೆಕ್ ನೀರು ಬಿಡುಗಡೆ ಮಾಡಿದ್ದು ಕಳೆದ ಎರಡು ದಿನಗಳಲ್ಲಿ ಸುಮಾರು 4 ಅಡಿ ನೀರು ಏರಿಕೆಯಾಗಿದ್ದರಿಂದ ಕೃಷ್ಣಾ ನದಿಯ ಒಡಲು ತುಂಬಿದೆ.

ಸಂಭವನೀಯ ಪ್ರವಾಹ ಪರಿಸ್ಥಿತಿಯನ್ನು ಅರಿತುಕೊಂಡು ಮುನ್ನೆಚರಿಕೆ ಕ್ರಮವಾಗಿ 3000, ನಂತರ 4,800 ಕ್ಯೂಸೆಕ್ ಬಿಡುಗಡೆ ಮಾಡಿದ್ದು, ಅನಂತರ 4,400 ಕ್ಯೂಸೆಕ್ ಬಿಡುಗಡೆ ಮಾಡಿದ್ದಾರೆ. ಪ್ರವಾಹ ಸಂದರ್ಭದಲ್ಲಿ ಬ್ಯಾರೇಜ್‌ಗೆ ಧಕ್ಕೆ ಬಾರದಂತೆ ಮಹಾರಾಷ್ಟ್ರ ಸರ್ಕಾರದ ಆದೇಶದ ಮೇರೆಗೆ 4,800 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿತ್ತು ಎಂದು ಸಾಂಗಲಿಯ ವಿಭಾಗೀಯ ಅಭಿಯಂತರಾದ ಶಿರೀಷ ಪಾಟೀಲ ತಿಳಿಸಿದ್ದಾರೆ.

ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಸುರಿದಿದ್ದರಿಂದ ಮಹಾರಾಷ್ಟ್ರ ಸರ್ಕಾರ ನೀರು ಬಿಡುತ್ತಿದೆ. ಬೇಸಿಗೆಯಲ್ಲಿ ಎರಡು ತಿಂಗಳು ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ನೀರು ಬಿಡುಗಡೆ ಮಾಡದಿರುವುದಕ್ಕೆ ಚಿಕ್ಕೋಡಿ ತಾಲ್ಲೂಕಿನ ಕೃಷ್ಣಾ ನದಿ ತೀರದ ಕಲ್ಲೋಳ, ಯಡೂರ, ಚಂದೂರ, ಅಂಕಲಿ, ಮಾಂಜರಿ, ಇಂಗಳಿ ಗ್ರಾಮಗಳ ರೈತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕಳೆದ ಸಾಲಿನಲ್ಲಿ ಮಹಾರಾಷ್ಟ್ರದಿಂದ ಅಪಾರ ಪ್ರಮಾಣದಲ್ಲಿ ನೀರು ಹರಿದುಬಂದು ಈ ಭಾಗದ ಸಾವಿರಾರು ಕುಟುಂಬಗಳು ಬೀದಿ ಪಾಲಾಗಿದ್ದವು. ಪ್ರಸಕ್ತ ಸಾಲಿನಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಉಭಯ ಸರ್ಕಾರಗಳು ಒಂದು ಸಮಿತಿ ರಚಿಸಿ ಪ್ರವಾಹ ನಿಯಂತ್ರಿಸಲು ಪ್ರಯತ್ನಿಸಬೇಕೆಂದು ಕೃಷ್ಣಾ ತೀರದ ರೈತರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:08.06.2020

## 11. ಕನ್ನಡ ಜಾರಿಗೆ ಮತ್ತೊಂದು ಯತ್ನ

ರಾಜ್ಯದಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬರೂ ಕನ್ನಡ ಕಲಿಯಬೇಕು ಎಂಬುದು ಸರ್ಕಾರದ ಆಶಯವಾಗಿದೆ. ಕೆಲವು ಖಾಸಗಿ ಶಾಲೆಗಳು ತೃತೀಯ ಭಾಷೆಯಾಗಿ ಪ್ರಾಥಮಿಕ ಹಂತದಲ್ಲಿ ಮಾತ್ರ ಕನ್ನಡವನ್ನು ಕಲಿಸುತ್ತಿದ್ದು, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಹಂತದಲ್ಲಿ ಕೈಬಿಟ್ಟಿವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ಹಂತ ಹಂತವಾಗಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಕಲಿಸುವ ಸಂಬಂಧ 2015ರಲ್ಲಿ 'ಕನ್ನಡ ಭಾಷಾ ಕಲಿಕಾ ಅಧಿನಿಯಮ' ಜಾರಿಗೆ ತರಲಾಗಿದೆ. ಇದರ ಅನ್ವಯ 2017ರಲ್ಲಿ 'ಕನ್ನಡ ಭಾಷಾ ಕಲಿಕಾ ನಿಯಮ'ಗಳನ್ನು ಪ್ರಕಟಿಸಲಾಗಿದೆ.

2026–27ನೇ ಸಾಲಿನ ಹೊತ್ತಿಗೆ ರಾಜ್ಯದ ಎಲ್ಲಾ ಶಾಲೆಗಳು 1 ರಿಂದ 10ನೇ ತರಗತಿವರೆಗೆ ಕನ್ನಡವನ್ನು ಪ್ರಥಮ ಇಲ್ಲವೇ ದ್ವಿತೀಯ ಭಾಷೆಯಾಗಿ ಬೋಧಿಸುವುದು ಕಡ್ಡಾಯ ಮಾಡಲಾಗಿದ್ದು, ನಿಯಮ ಜಾರಿಯ ಪರಿಶೀಲನೆಗೆ ಸರ್ಕಾರ ಉನ್ನತಮಟ್ಟದ ಸಮಿತಿ ರಚಿಸಿ, ಈ ಸಂಬಂಧ ಆದೇಶ ಹೊರಡಿಸಿದೆ.

ಕನ್ನಡ ಭಾಷಾ ಕಲಿಕಾ ನಿಯಮ ಜಾರಿಗೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ ಆಯುಕ್ತರು, ಶಿಕ್ಷಣ ತಜ್ಞ ಡಾ.ವಿ.ಪಿ.ನಿರಂಜನಾರಾಧ್ಯ ಸೇರಿ ಇಲಾಖೆಯ ಇತರೆ ಉನ್ನತ ಅಧಿಕಾರಿಗಳು ಈ ಸಮಿತಿಯ ಸದಸ್ಯರಾಗಿದ್ದಾರೆ. ಈ ಸಮಿತಿಯು ಶಾಲೆಗಳಿಗೆ ಭೇಟಿ ನೀಡಿ ಕನ್ನಡವನ್ನು ಕಡ್ಡಾಯವಾಗಿ ಪ್ರಥಮ, ದ್ವಿತೀಯ ಭಾಷೆಯಾಗಿ ಕಲಿಸಲಾಗುತ್ತಿದೆಯೇ ಎಂಬುದನ್ನು ಪರಿಶೀಲಿಸಲಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:12.06.2020

## 12. ಉನ್ನತ ಶಿಕ್ಷಣದಲ್ಲಿ ಬೆಂಗಳೂರು ಬೆಸ್ಟ್

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ 'ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳ ರ್‍ಯಾಂಕಿಂಗ್ ವ್ಯವಸ್ಥೆ'ಯು (ಎನ್‌ಐಆರ್‌ಎಫ್) ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸಿದ್ದು, ಇದರಲ್ಲಿ ಬೆಂಗಳೂರಿನ ಶಿಕ್ಷಣ ಸಂಸ್ಥೆಗಳು ಉತ್ತಮ ಸಾಧನೆ ಮಾಡಿವೆ.

ಸಮಗ್ರ ರ್‍ಯಾಂಕಿಂಗ್‌ನಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ(ಐಎಸ್ಸಿ) ಎರಡನೇ ಸ್ಥಾನ ಲಭಿಸಿದ್ದರೆ, ಅಗ್ರ ಮೂರು ಶ್ರೇಷ್ಠ ವಿವಿಗಳಲ್ಲಿ ಮೊದಲ ಸ್ಥಾನ ಪಡೆದಿದೆ. ಭಾರತೀಯ ನಿರ್ವಹಣಾ ಸಂಸ್ಥೆಗಳು(ಐಐಎಂ) ಪೈಕಿ ಐಐಎಂ ಬೆಂಗಳೂರು ಎರಡನೇ ಸ್ಥಾನದಲ್ಲಿದೆ. ಕಾನೂನು ವಿಭಾಗದಲ್ಲಿ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯನ್ ಯೂನಿವರ್ಸಿಟಿ ಮೊದಲ ಸ್ಥಾನ ಪಡೆದಿದೆ. ದಂತ ವೈದ್ಯಕೀಯ ವಿಭಾಗದಲ್ಲಿ ಮಣಿಪಾಲ ದಂತ ವೈದ್ಯಕೀಯ ಕಾಲೇಜು ಎರಡನೇ ಸ್ಥಾನದಲ್ಲಿದೆ.

ಬೋಧನೆ, ಕಲಿಕೆ, ಸಂಪನ್ಮೂಲ, ಸಂಶೋಧನೆ ಮತ್ತು ವೃತ್ತಿಪರ ತರಬೇತಿ, ಪದವೀಧರರ ಪ್ರಾವೀಣ್ಯತೆ, ಪ್ರಭಾವ ಮತ್ತು ಒಳಗೊಳ್ಳುವಿಕೆ ಇತ್ಯಾದಿ ಮಾನದಂಡಗಳನ್ನು ಅನುಸರಿಸಿ ರ್‍ಯಾಂಕಿಂಗ್ ಪಟ್ಟಿ ತಯಾರಿಸಲಾಗುತ್ತದೆ. ಇಲ್ಲಿ ರ್‍ಯಾಂಕ್ ಪಡೆದ ಸಂಸ್ಥೆಗಳಿಗೆ ಜಾಗತಿಕ ಸ್ಪರ್ಧೆಗೆ ಪ್ರವೇಶಿಸಲು ಅನುಕೂಲವಾಗುತ್ತದೆ. ಶ್ರೇಷ್ಠ ವಿವಿಗಳು, ಕಾಲೇಜು, ವೈದ್ಯಕೀಯ, ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್, ಫಾರ್ಮಸಿ ಹೀಗೆ ಹಲವು ವಿಭಾಗಗಳಲ್ಲಿ ಟಾಪ್ 10 ಸ್ಥಾನಗಳನ್ನು ಪ್ರಕಟಿಸಲಾಗಿದೆ.

ಎಚ್‌ಆರ್‌ಡಿ ಸಚಿವಾಲಯ ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ಈ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸುತ್ತದೆಯಾದರೂ ಈ ಬಾರಿ ಕೋವಿಡ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ತಡವಾಗಿ ಪಟ್ಟಿ ಬಿಡುಗಡೆ ಮಾಡಿದೆ. ದೇಶದಾದ್ಯಂತ 3,771 ವಿವಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ರ್‍ಯಾಂಕಿಂಗ್ ಪ್ರಕ್ರಿಯೆಯಲ್ಲಿ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಈ ರ್‍ಯಾಂಕಿಂಗ್ ವ್ಯವಸ್ಥೆಯನ್ನು 2015ರಿಂದ ಆರಂಭಿಸಲಾಗಿದೆ. ಪ್ರತಿವರ್ಷ ಎಂಜಿನಿಯರಿಂಗ್, ವೈದ್ಯಕೀಯ, ತಾಂತ್ರಿಕತೆ ಮತ್ತು ಆಡಳಿತ ನಿರ್ವಹಣೆ ವಿಭಾಗಗಳನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಈ ವರ್ಷ ದಂತ ವೈದ್ಯಕೀಯ ವಿಭಾಗವನ್ನೂ ಸೇರ್ಪಡೆ ಮಾಡಲಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:12.06.2020

## 13. ಮೈಸೂರು ಮುಕ್ತ ವಿವಿಯಲ್ಲಿ ಮಾತ್ರವೇ ದೂರಶಿಕ್ಷಣ

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಹೊರತುಪಡಿಸಿ ಬೇರೆ ವಿಶ್ವವಿದ್ಯಾಲಯಗಳಲ್ಲಿ ದೂರಶಿಕ್ಷಣ ವಿಭಾಗ ರದ್ದುಗೊಳಿಸಲು ಸರ್ಕಾರ ತೀರ್ಮಾನಿಸಿದೆ. ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ಇನ್ಮುಂದೆ ದೂರ ಶಿಕ್ಷಣ ಬೇರೆ ವಿವಿಗಳಲ್ಲಿ ಇರುವುದಿಲ್ಲ.

ಸಚಿವ ಸಂಪುಟದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಮೈಸೂರಿನ ಮುಕ್ತ ವಿಶ್ವವಿದ್ಯಾಲಯ ಹೊರತು ಪಡಿಸಿ ಇತರೆ ವಿಶ್ವವಿದ್ಯಾಲಯಗಳಲ್ಲಿ ದೂರ ಶಿಕ್ಷಣ ಇರುವುದಿಲ್ಲ ಮತ್ತು ಕೇಂದ್ರ ವಿವಿಗೆ ಬೆಂಗಳೂರು ಸಿಟಿ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲು, ಬೆಂಗಳೂರು ಸೆಂಟ್ರಲ್ ಕಾಲೇಜು ವ್ಯಾಪ್ತಿಯ ಸರ್ಕಾರಿ ವಿಜ್ಞಾನ ಕಾಲೇಜು ಬೇರ್ಪಡಿಸಿ ವಿಶ್ವವಿದ್ಯಾಲಯ ಸ್ವಾಯತ್ತತೆ ನೀಡಲು ಸಂಪುಟ ತೀರ್ಮಾನಿಸಿದೆ ಎಂದು ಹೇಳಿದರು.

ಆಧಾರ:ಉದಯವಾಣಿ, ದಿನಾಂಕ:12.06.2020

## 14. ರಾಜ್ಯದ ಕರಾವಳಿ, ದಕ್ಷಿಣ ಒಳನಾಡಿನಲ್ಲಿ ಭಾರಿ ವರ್ಷಧಾರೆ

ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ಧಾರಾಕಾರ ಮಳೆಯಾಗಿ ನದಿ ಹಳ್ಳಕೊಳ್ಳಗಳು, ಪ್ರಮುಖ ಜಲಾಶಯಗಳು ತುಂಬತೊಡಗಿದ್ದು, ಕೆಲವೆಡೆ ತಗ್ಗು ಪ್ರದೇಶಗಳಲ್ಲಿ ಮಳೆ ನೀರು ನುಗ್ಗಿ ಜನ ಸಂಕಷ್ಟ ಅನುಭವಿಸುವಂತಾಗಿದೆ.

ಕರಾವಳಿಯ ಕಾರವಾರ, ಅಂಕೋಲಾ, ಭಟ್ಕಳ, ಘಟ್ಟದ ಮೇಲ್ಭಾಗದ ಶಿರಸಿ ಸಿದ್ದಾಪುರದಲ್ಲಿ ಬೆಳಗ್ಗೆಯಿಂದಲೇ ಮಳೆ ಜೋರಾಗಿ ಸುರಿಯಿತು. ದಿನವಿಡೀ ಬಿಡುವು ಕೊಡದೆ ಎಡೆಬಿಡದೆ ಮಳೆಯಾದ ಪರಿಣಾಮ ಗಂಗಾವಳಿ, ಕಾಳಿ ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದೆ.

**ತುಂಬುತ್ತಿವೆ ಜಲಾಶಯಗಳು:** ನದಿಗಳಲ್ಲಿ ಹರಿವು ಹೆಚ್ಚಿದ ಪರಿಣಾಮ ಜಿಲ್ಲೆಯ ಪ್ರಮುಖ ಜಲಾಶಯಗಳು ಭರ್ತಿಯಾಗತೊಡಗಿವೆ. ಸೂಪಾ ಜಲಾಶಯ ಗರಿಷ್ಠ ನೀರಿನ ಮಟ್ಟ 564 ಮೀ. ಆಗಿದ್ದು ನೀರಿನ ಮಟ್ಟ 530.02 ಮೀ.ಗೆ ಏರಿದೆ. ಗರಿಷ್ಠ ಮಟ್ಟ 34.50 ಮೀ. ಆಗಿರುವ ಕದ್ರಾದಲ್ಲಿ 29.75 ಮೀ. ಹಾಗೂ ಗರಿಷ್ಠ ಮಟ್ಟ 75.50 ಮೀ. ಇರುವ ಕೊಡಸಳ್ಳಿಯಲ್ಲಿ 68.60 ಮೀ.ಗೆ ಏರಿಕೆಯಾಗಿದೆ. ಮಹಾರಾಷ್ಟ್ರ ರಾಜ್ಯದ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಕೃಷ್ಣಾನದಿಗೆ ಹೆಚ್ಚಿನ ನೀರು ಹರಿದು ಬರುವ ಸಾಧ್ಯತೆ ಇದೆ. ಕೃಷ್ಣಾ ನದಿ ಪ್ರದೇಶದಲ್ಲಿಯೂ ಉತ್ತಮ ಮಳೆ ಸುರಿಯುತ್ತಿದೆ.

ಬೆಳಗಾವಿಯ ಜಿಲ್ಲೆಯಾದ್ಯಂತ ಮುಂಗಾರು ಮಳೆ ಚುರುಕುಗೊಂಡಿದ್ದು, ಬೆಳಿಗ್ಗೆಯಿಂದಲೇ ಹಲವೆಡೆ ಮಳೆ ಸುರಿದಿದೆ. ಖಾನಾಪುರ, ಬೆಳಗಾವಿ ನಗರ ಮತ್ತು ಗ್ರಾಮೀಣ, ಚಿಕ್ಕೋಡಿ, ಹುಕ್ಕೇರಿ, ಬೈಲಹೊಂಗಲ, ನಿಪ್ಪಾಣಿ, ರಾಯಭಾಗ, ಹಾಗೂ ಕಿತ್ತೂರು ತಾಲ್ಲೂಕು ಸೇರಿದಂತೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ. ಜಿಲ್ಲೆಯಲ್ಲಿ ಮುಂಗಾರಿನ ವಾಡಿಕೆ ಮಳೆ 43 ಮಿ.ಮೀ ಇದ್ದು, 48 ಮಿ.ಮೀ ಮಳೆಯಾಗಿದೆ.

ಭತ್ತ ಮತ್ತು ಮೆಕ್ಕೆ ಜೋಳ ಪ್ರಮುಖ ಕೃಷಿ ಬೆಳೆಯಾಗಿರುವ ಕಾರವಾರದಲ್ಲಿ ಮುಂಗಾರು ಮಳೆ ಚುರುಕಾಗಿರುವುದು ರೈತರಿಗೆ ಸಂತಸ ತಂದಿದೆ. ಜಿಲ್ಲೆಯಲ್ಲಿ ಒಟ್ಟು 51139 ಹೆಕ್ಟೇರ್ ಬಿತ್ತನೆಯಾಗಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:17.06.2020

## 15. ಮಹಾ ಮಳೆಗೆ ಬೆಳಗಾವಿಯ 3 ಸೇತುವೆ ಜಲಾವೃತ

ರಾಜ್ಯ ಕರಾವಳಿ, ಮಲೆನಾಡು ಮತ್ತು ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ಮುಂಗಾರು ಮಳೆಯಬ್ಬರ ಮುಂದುವರಿದಿದ್ದು, ಕೆಲವೆಡೆ ಹೊಲಗದ್ದೆಗಳಿಗೆ ನೀರು ನುಗ್ಗಿ ಬೆಳೆಗಳಿಗೆ ಹಾನಿಯಾಗಿದೆ. ಇದೇ ವೇಳೆ ನೆರೆಯ ಮಹಾರಾಷ್ಟ್ರದಲ್ಲಿ ಕಳೆದ ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಉತ್ತರ ಕರ್ನಾಟಕದ ಜೀವನದಿ ಕೃಷ್ಣಾ ಮತ್ತದರ ಉಪ ನದಿಗಳ ಒಳಹರಿವಿನ ಪ್ರಮಾಣ ಹೆಚ್ಚಳಗೊಂಡಿದ್ದು, ಕೆಳಹಂತದ ಮೂರು ಸೇತುವೆಗಳು ಜಲಾವೃತಗೊಂಡಿವೆ.

ಮಹಾರಾಷ್ಟ್ರದ ಜಲಾನಯನ ಪ್ರದೇಶದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಬೆಳಗಾವಿ ಜಿಲ್ಲೆಯ ಕೃಷ್ಣಾ ನದಿ ಹಾಗೂ ಅದರ ಉಪ ನದಿಗಳಾದ ವೇದಗಂಗಾ, ದೂಧಗಂಗಾ ನದಿಗಳ ಒಳಹರಿವಿನ ಪ್ರಮಾಣ ಕೂಡ ಹೆಚ್ಚಳವಾಗಿದೆ. ನಿಪ್ಪಾಣಿ ತಾಲ್ಲೂಕಿನಲ್ಲಿ ಕೆಳಹಂತದ ಮೂರು ಸೇತುವೆ ಜಲಾವೃತಗೊಂಡಿದ್ದು ರಸ್ತೆ ಸಂಪರ್ಕ ಕಡಿತಗೊಂಡಿದೆ. ಚಿಕ್ಕೋಡಿ ಮತ್ತು ಖಾನಾಪುರ ತಾಲೂಕಿನಲ್ಲಿ ಭರ್ಜರಿ ಮಳೆಯಾಗಿದ್ದು, ಖಾನಾಪುರ ತಾಲೂಕಿನಲ್ಲಿ ಮಲಪ್ರಭ ನದಿಗೆ ನೀರಿನ ಹರಿವು ಹೆಚ್ಚಳವಾಗಿದೆ. ಇದರಿಂದಾಗಿ ತಾಲ್ಲೂಕಿನ ಹಬ್ಬಾನಟ್ಟಿಯ ಆಂಜನೇಯ ದೇವಸ್ಥಾನ ಜಲವೃತಗೊಂಡಿದೆ. ಪಶ್ಚಿಮ ಭಾಗದ ಬಹುತೇಕ ಭತ್ತದ ಜಮೀನುಗಳು ನೀರಿನಿಂದ ತುಂಬಿವೆ. ಅರಣ್ಯ ಪ್ರದೇಶದಂಚಿನ ಗ್ರಾಮಗಳ ಸುತ್ತಮುತ್ತ ಹರಿಯುವ ಹಳ್ಳಗಳ ಪ್ರವಾಹ ಏರ್ಪಟ್ಟು ಸೇತುವೆಗಳ ಮೇಲೆ ಅಪಾಯದ ಮಟ್ಟದಲ್ಲಿ ನೀರು ಹರಿಯುತ್ತಿದೆ.

ಕಲಬುರಗಿ ಜಿಲ್ಲೆಯ ಬಹುತೇಕ ಕಡೆಗಳಲ್ಲೂ ಧಾರಾಕಾರ ಮಳೆಯಾಗಿದ್ದು, ಅಫಜಲಪುರ ಮತ್ತು ಚಿಂಚೋಳಿ ಪಟ್ಟಣಗಳಲ್ಲಿ ಎಲ್ಲೆಂದರಲ್ಲಿ ನೀರು ಮಡುಗಟ್ಟಿ ನಿಲ್ಲುವ ಮೂಲಕ ಜನಜೀವನ ಅಸ್ತವ್ಯಸ್ತಗೊಂಡಿದೆ. ಇದಲ್ಲದೆ ಹಳ್ಳಿಗಳಲ್ಲಿಯೂ ಮಳೆಯಿಂದ ರಸ್ತೆಗಳೆಲ್ಲವೂ ಜಲಾವೃತಗೊಂಡಿದ್ದರಿಂದ ಅನೇಕ ಕಡೆ ವಾಹನ ಸಂಚಾರಕ್ಕೂ ಸಂಚಕಾರ ಬಂದಿದೆ.

**ಕದ್ರಾ ಡ್ಯಾಂ ಮಟ್ಟ ಏರಿಕೆ:** ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಬಹುತೇಕ ಭಾಗಗಳ ಪ್ರದೇಶಗಳಲ್ಲಿ ನೀರು ತುಂಬಿ ಹರಿಯುತ್ತಿದೆ. ಅದರಲ್ಲೂ ಉತ್ತರ ಕನ್ನಡದ ಕಾರಾವಾರ, ಶಿರಸಿ, ಯಲ್ಲಾಪುರ, ಕುಮಟಾ ಸುತ್ತಮುತ್ತ ಹಲವಾರು ಕಡೆಗಳಲ್ಲಿ ಹೊಲಗದ್ದೆಗಳಿಗೆ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಜೊತೆಗೆ ಪಟ್ಟಣ ಪ್ರದೇಶಗಳಲ್ಲೂ, ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. ಕಾಳಿನದಿ ಯೋಜನೆಯ ಕದ್ರಾ ಅಣೆಕಟ್ಟು ಜಲಾನಯನ ಪ್ರದೇಶದಲ್ಲಿ ಮಳೆ ಸತತವಾಗಿ ಬೀಳುತ್ತಿರುವ ಹಿನ್ನೆಲೆಯಲ್ಲಿ ಜಲಾಶಯದ ಒಳ ಹರಿವಿನ ಪ್ರಮಾಣದಲ್ಲಿ ಏರಿಕೆಯಾಗುತ್ತಿದ್ದು 30.15 ಮೀ. (ಗರಿಷ್ಠ ಮಟ್ಟ 34.50 ಮೀ.) ಇತ್ತು. ಇದೇ ರೀತಿ ಮಳೆ ಮುಂದುವರಿದಲ್ಲಿ ಶೀಘ್ರ ಗರಿಷ್ಠಮಟ್ಟ ತಲುಪುವ ಸಾಧ್ಯತೆ ಇದೆ.

ಮಲೆನಾಡು ಪ್ರದೇಶವಾದ ಚಿಕ್ಕಮಗಳೂರಿನ ಶೃಂಗೇರಿ ತಾಲ್ಲೂಕಿನಾದ್ಯಂತ ವ್ಯಾಪಕ ಮಳೆಯಾಗಿದ್ದು, ತುಂಗಾ ನದಿ ಮೈತುಂಬಿ ಹರಿಯುತ್ತಿದೆ. ಕೊಡಗಿನ ಜಿಲ್ಲಾ ಕೇಂದ್ರ ಮಡಿಕೇರಿ ಸೇರಿದಂತೆ ಭಾಗಮಂಡಲ, ತಲಕಾವೇರಿ, ಶುಂಟಿಕೊಪ್ಪ, ಸೋಮವಾರಪೇಟೆ, ವಿರಾಜಪೇಟೆ ಹಾಗೂ ಮತ್ತಿತರ ಪ್ರದೇಶದಲ್ಲಿ ಮಳೆ ಸುರಿಯುತ್ತಿದೆ.

ಆಧಾರ:ಕನ್ನಡಪ್ರಭ, ದಿನಾಂಕ:18.06.2020

## 16. ಕಾರವಾರ–ಅಣಶಿ ಘಟ್ಟದಲ್ಲಿ ಭಾರಿ ಮಳೆ

ಕಾರವಾರ ಅರಣ್ಯ ವಲಯ ವ್ಯಾಪ್ತಿ ಹಾಗೂ ಅಣಶಿ ಘಟ್ಟದಲ್ಲಿ ಭಾರೀ ಮಳೆಯಾಗಿದೆ. ಅಣೆಕಟ್ಟಿಗೆ ಹರಿದು ಬರುವ ನೀರಿನ ಒಳ ಹರಿವು ಹೆಚ್ಚಾಗಿದೆ. ಅಣೆಕಟ್ಟು ಸುರಕ್ಷಾ ದೃಷ್ಟಿಯಿಂದ ಹೆಚ್ಚುವರಿಯಾದ ಜಲಾಶಯದ ನೀರನ್ನು ಯಾವುದೇ ಸಮಯದಲ್ಲಿ ಹೊರಬಿಡಲಾಗುವುದು. ಅಣೆಕಟ್ಟು ಕೆಳದಂಡೆಯಲ್ಲಿ ಹಾಗೂ ನದಿಯ ದಂಡೆಯ ಪಾತ್ರದಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ತಮ್ಮ ಜನ, ಜಾನುವಾರುಗಳೊಂದಿಗೆ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಿಕೊಳ್ಳಬೇಕು. ಕದ್ರಾ ಅಣೆಕಟ್ಟೆಯ ಕೆಳಭಾಗದ ನದಿಪಾತ್ರದಲ್ಲಿ ದೋಣಿ ಸಂಚಾರ, ಮೀನುಗಾರಿಕೆ ಮತ್ತು ಇತರೆ ಚಟುವಟಿಕೆಗಳನ್ನು ಮಳೆಗಾಲದ ಅವಧಿಯಲ್ಲಿ ನಡೆಸದಂತೆ ಕೆಪಿಸಿ ಅಧಿಕಾರಿಗಳು ಮನವಿ ಮಾಡಿರುತ್ತಾರೆ.

**ಮಲೆನಾಡಲ್ಲೂ ಅಬ್ಬರಿಸುತ್ತಿರುವ ಮುಂಗಾರು–** ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಯಲ್ಲೂ ಮುಂಗಾರು ಮಳೆ ಜೋರಾಗಿದೆ. ಮೂರು ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಧಾರವಾಡ ಜಿಲ್ಲೆಯಲ್ಲೂ ಸಾಧಾರಣ ಮಳೆಯಾಗಿದೆ. ಉಳಿದಂತೆ ಉತ್ತರ ಕರ್ನಾಟಕದ ಇತರೆ ಜಿಲ್ಲೆಗಳಲ್ಲಿ ಮೋಡ ಮುಸುಕಿದ ವಾತಾವರಣವಿದೆ.

ಆಧಾರ:ಉದಯವಾಣಿ, ದಿನಾಂಕ:18.06.2020

## 17. ಗಾಜನೂರು ಡ್ಯಾಮ್ ಭರ್ತಿಗೆ ಕ್ಷಣಗಣನೆ

ಮಲೆನಾಡಿನಾದ್ಯಂತ ಸಂಜೆಯಿಂದ ಜೋರು ಮಳೆ ಸುರಿಯುತ್ತಿದ್ದು, ಶಿವಮೊಗ್ಗ ಸಮೀಪದ ಗಾಜನೂರು ಜಲಾಶಯ ಭರ್ತಿಯಾಗುವ ಹಂತದಲ್ಲಿದೆ. ಪಶ್ಚಿಮಘಟ್ಟ ವ್ಯಾಪ್ತಿ ಪ್ರದೇಶದಲ್ಲಿ ಇಡಿ ದಿನ ಸಾಧಾರಣದಿಂದ

ಜೋರು ಮಳೆ ಸುರಿಯಿತು. ಅರೆ ಮಲೆನಾಡು ಪ್ರದೇಶದಲ್ಲಿ ಜಿಟಿಜಿಟಿ ಮಳೆ ಸುರಿಯಿತು. ನಿರಂತರ ಮಳೆಯಿಂದಾಗಿ ನದಿಗಳ ನೀರಿನ ಮಟ್ಟ ಏರಿಕೆಯಾಗುತ್ತಿದೆ.

ತುಂಗಾ ನದಿಗೆ ಗಾಜನೂರು ಬಳಿ ನಿರ್ಮಿಸಿರುವ ಜಲಾಶಯದ ನೀರಿನ ಮಟ್ಟ 587.57 ಮೀ.ಗೆ ತಲುಪಿದೆ. ಪೂರ್ಣಮಟ್ಟ 588.24 ಮೀ.ಗೆ ಕೇವಲ 2 ಅಡಿ ಬಾಕಿ ಇದೆ. 5 ಸಾವಿರ ಕ್ಯೂಸೆಕ್ ಒಳಹರಿವು ಇದ್ದು, ವಿದ್ಯುತ್ ಉತ್ಪಾದನೆಗೆ 4 ಸಾವಿರ ಕ್ಯೂಸೆಕ್ ನೀರು ಬಳಸಿಕೊಳ್ಳಲಾಗುತ್ತಿದೆ. ಶೃಂಗೇರಿ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿ ನಿರಂತರ ಮಳೆಯಾಗುತ್ತಿದೆ. ಒಳಹರಿವು ದಿಢೀರ್ ಏರಿಕೆಯಾದಲ್ಲಿ ಯಾವುದೇ ಕ್ಷಣದಲ್ಲಿ ಕ್ರಸ್ಟ್‌ಗೇಟ್‌ಗಳನ್ನು ತೆರೆದು ಹರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿರುತ್ತಾರೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:18.06.2020

## 18. ಮಲಪ್ರಭಾ, ಕೃಷ್ಣಾ ನೀರಿನ ಪ್ರಮಾಣ ಏರಿಕೆ

ಕರಾವಳಿ, ಮಲೆನಾಡಿನ ವಿವಿಧ ಜಿಲ್ಲೆಗಳಲ್ಲಿ ಮಳೆ ಮುಂದುವರೆದಿದೆ. ದಕ್ಷಿಣ ಕನ್ನಡದಲ್ಲಿ ಮಳೆ ಕಡಿಮೆ ಆಗಿದ್ದರೆ, ಸಮುದ್ರದ ಅಬ್ಬರ ತೀವ್ರಗೊಂಡಿದೆ. ಹರಪನಳ್ಳಿ ತಾಲ್ಲೂಕಿನಲ್ಲಿ ಮನೆ ಕುಸಿದು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಬೆಳಗಾವಿ ಜಿಲ್ಲೆಯಲ್ಲಿ ಮಲಪ್ರಭಾ ನದಿಗೆ ಒಳಹರಿವು ಹೆಚ್ಚಳವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರದ ಅಬ್ಬರ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಉಳ್ಳಾಲದ ಸೋಮೇಶ್ವರ ಉಚ್ಚಿಲ ಪ್ರದೇಶದಲ್ಲಿ ಎರಡು ಮನೆಗಳು ಸಮುದ್ರ ಪಾಲಾಗುವ ಸ್ಥಿತಿ ತಲುಪಿದ್ದು, 2 ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಸೋಮೇಶ್ವರ–ಉಚ್ಚಿಲದಲ್ಲಿ 15 ತೆಂಗಿನ ಮರಗಳು ಸಮುದ್ರದ ಪಾಲಾಗಿವೆ. ಜಿಲ್ಲೆಯಲ್ಲಿ ಸರಾಸರಿ 1.7 ಸೆಂಟಿ ಮೀಟರ್ ಮಳೆ ಬಿದ್ದಿದೆ.

ಉಡುಪಿ ಜಿಲ್ಲೆಯ ಕುಂದಾಪುರ, ಬೈಂದೂರು, ಕಾಪು, ಬ್ರಹ್ಮಾವರ, ಹೆಬ್ರಿ, ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ಬೈಂದೂರು ತಾಲ್ಲೂಕಿನ ಹೇರೂರಿನಲ್ಲಿ ಸಿಡಿಲಿಗೆ ಮನೆ ಭಾಗಶಃ ಹಾನಿಯಾಗಿದೆ. ಕಾಪು, ಬೈಂದೂರು ಭಾಗದಲ್ಲಿ ಕಡಲ್ಕೊರೆತ ಶುರುವಾಗಿದೆ. ಸ್ವರ್ಣಾ, ಸೀತಾ ನದಿಗಳ ಒಳಹರಿವು ಹೆಚ್ಚಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ನಗರ, ಎನ್.ಆರ್.ಪುರ, ಬಾಳೆಹೊನ್ನೂರು, ಶೃಂಗೇರಿ ಭಾಗದಲ್ಲಿ ತುಂತುರು, ಕೊಪ್ಪ ಭಾಗದಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆಯ ಶಿವಮೊಗ್ಗ, ಸಾಗರ, ತೀರ್ಥಹಳ್ಳಿ, ಹೊಸನಗರ ತಾಲ್ಲೂಕಿನ ಹಲವೆಡೆ ಸಾಧಾರಣ ಮಳೆಯಾಗಿದೆ. ರಾಜಾಪುರ ಬ್ಯಾರೇಜ್ ಮೂಲಕ 48.250 ಕ್ಯುಸೆಕ್ ಹಾಗೂ ದೂಧ್‌ಗಂಗಾ ನದಿಯ 15 ಸಾವಿರ ಕ್ಯುಸೆಕ್ಸ್ ಸೇರಿದಂತೆ ಚಿಕ್ಕೋಡಿಯ ಕಲ್ಲೋಳ ಬಳಿ ಕೃಷ್ಣಾ ನದಿಗೆ 63,250 ಕ್ಯುಸೆಕ್ ನೀರು ಸೇರಿಕೊಳ್ಳುತ್ತಿದೆ. ರಬಕವಿ ಬನಹಟ್ಟಿ ಸಮೀಪದ ಹಿಪ್ಪರಗಿ ಜಲಾಶಯಕ್ಕೆ 55.800 ಕ್ಯುಸೆಕ್ ನೀರು ಹರಿದಿದೆ. ಆಲಮಟ್ಟಿ ಜಲಾಶಯಕ್ಕೆ ಒಂದೇ ದಿನ 3.6 ಟಿಎಂಸಿ ಅಡಿ ನೀರು ಹರಿದು ಬಂದಿದೆ.

ಆಧಾರ:ಉದಯವಾಣಿ, ದಿನಾಂಕ:12.06.2020

## 19. ಕರ್ನಾಟಕ ಮುಕ್ತ ವಿವಿಯಲ್ಲಿ ಮಾತ್ರ ದೂರಶಿಕ್ಷಣ: ಸರ್ಕಾರ ಸುಗ್ರೀವಾಜ್ಞೆ

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳು ನಡೆಸುತ್ತಿರುವ ದೂರ ಶಿಕ್ಷಣ ವ್ಯವಸ್ಥೆಯನ್ನು ರದ್ದುಗೊಳಿಸಿ ಇನ್ನು ಮುಂದೆ ರಾಜ್ಯದಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯ ಮಾತ್ರ ದೂರ ಶಿಕ್ಷಣ ವ್ಯವಸ್ಥೆ ಹಾಗೂ ಇತರೆ ವಿಶ್ವವಿದ್ಯಾಲಯಗಳ ಹೆಸರು ಬದಲಾವಣೆ ಸಂಬಂಧ ಸುಗ್ರೀವಾಜ್ಞೆ ಹೊರಡಿಸಿದೆ. ಬೆಂಗಳೂರು ಕೇಂದ್ರ ವಿವಿ 'ಸೆಂಟ್ರಲ್ ವಿಶ್ವವಿದ್ಯಾಲಯ' ಎಂಬ ಹೆಸರನ್ನು ಬದಲಿಸಿ 'ಬೆಂಗಳೂರು ಸಿಟಿ ವಿಶ್ವವಿದ್ಯಾಲಯ' ಎಂದು ಮರು ನಾಮಕರಣವಾಗಲಿದೆ. ಬೆಂಗಳೂರು ಸೆಂಟ್ರಲ್ ಕಾಲೇಜು ಆವರಣದಲ್ಲಿರುವ ಸರ್ಕಾರಿ ವಿಜ್ಞಾನ ಕಾಲೇಜಿಗೆ ವಿಶ್ವವಿದ್ಯಾಲಯ ಸ್ವರೂಪ ನೀಡಿ ಪ್ರತ್ಯೇಕ 'ನೃಪತುಂಗ ವಿಶ್ವವಿದ್ಯಾಲಯ' ಎಂದು ಹೆಸರಿಡಲು ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:21.06.2020

## 20. ರಾಜ್ಯದಲ್ಲಿ 2 ತಿಂಗಳಲ್ಲಿ ಸಿಡಿಲು, ಗಾಳಿ–ಮಳೆ ಆರ್ಭಟಕ್ಕೆ 50 ಬಲಿ

ಕರುನಾಡಿನಲ್ಲಿ ಕಳೆದ ಎರಡು ತಿಂಗಳಲ್ಲಿ ಮಳೆ–ಗಾಳಿ, ಸಿಡಿಲಿಗೆ ಬರೋಬ್ಬರಿ 50 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ 46 ಮಂದಿ ಸಿಡಿಲು ಬಡಿದು ಅಸು ನೀಗಿದ್ದಾರೆ. ಪೂರ್ವ ಮುಂಗಾರು ಮತ್ತು ಮುಂಗಾರು

ಅವಧಿಯಲ್ಲಿ (ಏಪ್ರಿಲ್ 1 ರಿಂದ ಜೂನ್ 13) ರಾಜ್ಯದ 30 ಜಿಲ್ಲೆಗಳ ಪೈಕಿ 20 ಜಿಲ್ಲೆಗಳಲ್ಲಿ ಬರೋಬ್ಬರಿ 50 ಮಂದಿ ಮಳೆ, ಗಾಳಿ, ಸಿಡಿಲು ಅನಾಹುತಗಳಿಗೆ ಬಲಿಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಡಿಆರ್‌ಎಫ್) ಮಾಹಿತಿ ನೀಡಿದೆ. ಇದರಲ್ಲಿ ಅತಿ ಹೆಚ್ಚು ಮಂದಿ ಅಂದರೆ 46 ಮಂದಿ ಸಿಡಿಲಿಗೆ ಬಲಿಯಾಗಿದ್ದಾರೆ.

ಮಳೆ–ಗಾಳಿ ಅನಾಹುತಕ್ಕೆ ಬರೋಬ್ಬರಿ 206 ಕುರಿ, ಕೋಳಿ, ಹಸು, ಎತ್ತು, ಮೇಕೆ ಸೇರಿದಂತೆ ಇನ್ನಿತರ ಪ್ರಾಣಿಗಳು ಬಲಿಯಾಗಿವೆ. ಇನ್ನು 155 ಮನೆಗಳು ನೆಲಸಮವಾಗಿವೆ. 2,478 ಮನೆಗಳು ಭಾಗಶಃ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:22.06.2020

## 21. ರಾಜ್ಯದ ಹಲವೆಡೆ ಧಾರಾಕಾರ ಮಳೆ

ರಾಜ್ಯದ ಮೈಸೂರು ಭಾಗ, ಮಲೆನಾಡು ಹಾಗೂ ಕಲ್ಯಾಣ ಕರ್ನಾಟಕದ ಹಲವೆಡೆ ಧಾರಾಕಾರ ಮಳೆಯಾಗಿದೆ. ಯಾದಗಿರಿ ಜಿಲ್ಲೆಯ ಶಹಾಪುರ ನಗರದಲ್ಲಿ ತಗ್ಗು ಪ್ರದೇಶದ 300ಕ್ಕೂ ಹೆಚ್ಚು ಮನೆಗಳಿಗೆ ನೀರು ನುಗ್ಗಿದ್ದು, 8 ಮನೆಗಳು ಭಾಗಶಃ ಕುಸಿದಿವೆ. ಈ ಭಾಗದಲ್ಲಿ 30 ಸೆಂ.ಮೀ. ಮಳೆಯಾಗಿದೆ. ಸಗರ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ನೀರು ನುಗ್ಗಿದೆ. ನಾಗರಕೆರೆ ಹಾಗೂ ಮಾವಿನ ಕೆರೆಗಳು ಭರ್ತಿಯಾಗಿವೆ. ಸೈದಾಪುರದಲ್ಲಿ ಸಂಗ್ವಾರ–ಗೊಂದಡಗಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ, ಸೇತುವೆ ಸಂಪೂರ್ಣವಾಗಿ ಮಳೆಗೆ ಕೊಚ್ಚಿಹೋಗಿದೆ.

ರಾಯಚೂರು ತಾಲ್ಲೂಕಿನ ಇಡಪನೂರು ಗ್ರಾಮಕ್ಕೆ ಸಂಪರ್ಕಿಸುವ ಮಾರ್ಗದಲ್ಲಿ ಹಳ್ಳದ ಸೇತುವೆ ಅರ್ಧ ಭಾಗ ಕೊಚ್ಚಿ ಹೋಗಿದೆ. ಶಕ್ತಿನಗರದಿಂದ ಕಾಡ್ಲೂರು ಮಾರ್ಗದಲ್ಲಿರುವ ರೈಲ್ವೆ ಕೆಳಸೇತುವೆಯಲ್ಲಿ ನೀರು ಸಂಗ್ರಹವಾಗಿದೆ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದಲ್ಲಿ 2.2 ಸೆಂ.ಮೀ. ಮಳೆಯಾಗಿದೆ. ಚಿಕ್ಕಮಗಳೂರು, ಶೃಂಗೇರಿ, ಎನ್.ಆರ್.ಪುರ, ಬಾಳೆಹೊನ್ನೂರು, ಕೊಪ್ಪ ಮತ್ತು ಕಳಸ ಭಾಗದಲ್ಲಿ ಸಾಧಾರಣ ಮಳೆಯಾಗಿದ್ದು, ಕರಾವಳಿ ಪ್ರದೇಶದಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಬಹುತೇಕ ಭಾಗಗಳಲ್ಲಿ ಜಿಟಿ ಜಿಟಿ ಮಳೆ.

ಕಲಬುರ್ಗಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳ ವಿವಿಧೆಡೆ ಮಧ್ಯರಾತ್ರಿ ಧಾರಾಕಾರ ಮಳೆ ಸುರಿದ ಕಾರಣ ಕೆಲ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಹಳ್ಳದ ಸೇತುವೆಗಳು ಕೊಚ್ಚಿ ಹೋಗಿವೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಹಾಲಹಿಪ್ಪರ್ಗಾ ಗ್ರಾಮದ ಹೊರವಲಯದಲ್ಲಿ ಹಳ್ಳದ ಸೇತುವೆಯ ತಡೆಗೋಡೆ ಕೊಚ್ಚಿ ಹೋಗಿದೆ. ಹಳ್ಳ ಉಕ್ಕಿ ಹರಿದು ಹೊಲದ ಮಣ್ಣು ಸಹ ಕೊಚ್ಚಿ ಹೋಗಿದೆ. ಬಿತ್ತನೆ ಮಾಡಿದ ಬೀಜ ನೀರು ಪಾಲಾಗಿದೆ.

ಕಲಬುರ್ಗಿ ನಗರ ಸೇರಿ ಜಿಲ್ಲೆಯ ಚಿಂಚೋಳಿ, ಕಾಳಗಿ, ಜೇವರ್ಗಿ ಅಫಜಲಪುರ, ಶಹಬಾದ್, ಯಡ್ರಾಮಿ, ಕಮಲಾಪುರ ಮತ್ತು ಆಳಂದ ತಾಲ್ಲೂಕಿನ ಗ್ರಾಮಗಳಲ್ಲಿ ಮಳೆಯಾಗಿದೆ. ನಗರದ ಹಲವು ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿದೆ. ಚಿಂಚೋಳಿ ತಾಲ್ಲೂಕಿನ ಕುಂಚಾವರಂನ ಹೊಲವೊಂದರಲ್ಲಿ ಭಾರಿ ಮಳೆ ಹಾಗೂ ಗಾಳಿಗೆ ಟೊಮೊಟೊ ಹಾಗೂ ಬೆಂಡೆ ಬೆಳೆಗಳು ಹಾನಿಯಾಗಿದೆ.

ಸಂಜೆ ಒಂದು ತಾಸು ಸುರಿದ ಧಾರಾಕಾರ ಮಳೆಗೆ ಮೈಸೂರು ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡಿದ್ದವು. ಆನಂದನಗರದ ಕೆಲ ಮನೆಗಳಿಗೆ ನೀರು ನುಗ್ಗಿತು. ಕೊಡಗು ಜಿಲ್ಲೆಯಲ್ಲೂ ಮುಂಗಾರು ಚುರುಕಾಗಿದೆ. ಮಡಿಕೇರಿ, ತಲಕಾವೇರಿ, ಭಾಗಮಂಡಲ, ನಾಪೋಕ್ಲು, ವಿರಾಜಪೇಟೆ ವ್ಯಾಪ್ತಿಯಲ್ಲಿ ನಿರಂತರವಾಗಿ ಮಳೆಯಾಗಿದೆ.

ಹಾಸನ ಜಿಲ್ಲೆಯ ವಿವಿಧೆಡೆ ಅಲ್ಪ ಪ್ರಮಾಣದ ಮಳೆ ಹಾಗೂ ಚನ್ನರಾಯಪಟ್ಟಣ, ನುಗ್ಗೇಹಳ್ಳಿ, ಸಕಲೇಶಪುರ ಮತ್ತು ಶ್ರವಣಬೆಳಗೊಳದಲ್ಲಿ ಸಾಧಾರಣ ಮಳೆ ಸುರಿದಿದೆ. ಹಾಸನ ನಗರದಲ್ಲಿ ಒಂದು ತಾಸು ತುಂತುರು ಮಳೆಯಾಗಿದೆ. ಚಾಮರಾಜನಗರ ಜಿಲ್ಲೆಯ ವಿವಿಧ ಕಡೆಗಳಲ್ಲಿ ತುಂತುರು ಮಳೆ. ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ಹಾಗೂ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ಸಾಧಾರಣ ಮಳೆ ಆಗಿದೆ.

ಯಾದಗಿರಿ ಜಿಲ್ಲೆ ಭೀಮರಾಯನ ಗುಡಿಯಲ್ಲಿ 12 ಸೆಂ.ಮೀ ಗರಿಷ್ಠ ಮಳೆ. ದೇವದುರ್ಗದಲ್ಲಿ 10 ಸೆಂ.ಮೀ., ಕಲಬುರ್ಗಿ 11, ಕುಂದಾಪುರ 8, ಪಣಂಬೂರು, ಉಡುಪಿ, ಕಲ್ಲೂರು 4, ಕೋಟ, ಗೋಕರ್ಣ, ನಿಪ್ಪಾಣಿ, ಚಿಂಚೋಳಿ, ಹೊಸನಗರ, ಮೊಳಕಾಲ್ಮೂರು 3, ಭಟ್ಕಳ, ಮುದ್ದೇಬಿಹಾಳ, ಸಿಂಧನೂರು, ಕೊಟ್ಟಿಗೆಹಾರ, ಭರಮಸಾಗರ 2 ಸೆಂ.ಮೀ. ಮಳೆಯಾಗಿದೆ.

ಧರ್ಮಸ್ಥಳ, ಉಪ್ಪಿನಂಗಡಿ, ಸುಳ್ಯ, ಸೋಮವಾರಪೇಟೆ ಹಾಗೂ ಚಾಮರಾಜನಗರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ:29.06.2020

## 22. ವಿಜಯಪುರದಲ್ಲಿ ಕುಂಭದ್ರೋಣ ಮಳೆ

ವಿಜಯಪುರ ಜಿಲ್ಲೆಯಲ್ಲಿ ಭಾರಿ ವರ್ಷಧಾರೆಯಾಗಿದೆ. ನಾಲತವಾಡದಲ್ಲಿ 24 ಗಂಟೆ ಅವಧಿಯಲ್ಲಿ ದಾಖಲೆಯ 97 ಮಿ. ಮೀ. ಮಳೆಯಾಗುವ ಮೂಲಕ 2009ರ ಪ್ರವಾಹ ಪರಿಸ್ಥಿತಿ ನೆನಪಿಸಿದೆ. ಇದರಿಂದ ವಸತಿ ಪ್ರದೇಶಕ್ಕೆ ನೀರು ನುಗ್ಗಿದೆ. 2 ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಹತ್ತು ಮನೆಗಳು ಕುಸಿದು ಬಿದ್ದಿವೆ.

ಮಳೆಯಿಂದಾಗಿ ನಾಲತವಾಡ ಬಳಿಯ ಚವನಬಾವಿ ಹಾಗೂ ಅಡವಿ ಹುಲಗಬಾಳ ಗ್ರಾಮಗಳ ಸೇತುವೆ ಮೇಲೆ ಅಪಾರ ನೀರು ಹರಿದು ಸಂಪರ್ಕ ಕಡಿತಗೊಂಡಿದೆ. ಐದಾರು ವಿದ್ಯುತ್ ಕಂಬಗಳು ಬಿದ್ದು, ಮೇವಿನ ಬಣವೆಗಳು ಕೊಚ್ಚಿ ಹೋಗಿರುತ್ತದೆ.

ಮುದ್ದೇಬಿಹಾಳ ತಾಲ್ಲೂಕಿನ ತಾರನಾಳ ಗ್ರಾಮದ ಕೆರೆ ಹಲವು ವರ್ಷಗಳ ನಂತರ ಒಂದೇ ರಾತ್ರಿ ಭರ್ತಿಯಗಿದೆ. ನಾಲತವಾಡ ಭಾಗಕ್ಕೆ ಶಾಸಕ ಎ.ಎಸ್. ಪಾಟೀಲ್ ನಡಹಳ್ಳಿ, ಅಧಿಕಾರಿಗಳು ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:30.06.2020

## 23. ಜಲ ವಿದ್ಯುತ್ ಯೋಜನೆಗೆ ಸಹಿ

ಖೊಲೊಂಗ್ಚು 600 ಮೆಗಾವ್ಯಾಟ್ ಇಂಡೋ–ಭೂತಾನ್ ಜಂಟಿ ಜಲವಿದ್ಯುತ್ ಯೋಜನೆ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಇದರ ನಿರ್ಮಾಣ ಮತ್ತು ಇತರ ಸಂಬಂಧಿತ ಕಾರ್ಯಗಳನ್ನು ಪ್ರಾರಂಭಿಸಲು ದಾರಿ ಸುಗಮವಾಗಿದೆ.

ಭೂತಾನ್ ಸರ್ಕಾರ ಮತ್ತು ಖೊಲೊಂಗ್ಚು ಹೈಡ್ರೊ ಎನರ್ಜಿ ಲಿಮಿಟೆಡ್ ನಡುವಿನ ಈ ಯೋಜನೆಯ ಒಪ್ಪಂದಕ್ಕೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹಾಗೂ ಭೂತಾನ್ ಪ್ರತಿನಿಧಿ ತಾಂಡಿ ದೋರ್ಜಿ ಅವರ ಸಮ್ಮುಖದಲ್ಲಿ ಸಹಿ ಹಾಕಲಾಗಿದೆ ಎಂದು ವಿದೇಶಾಂಗ ಸಚಿವಾಲಯದ (ಎಂಇಎ) ಹೇಳಿಕೆ ತಿಳಿಸಿದೆ. ಒಪ್ಪಂದಕ್ಕೆ ಸಹಿ ಹಾಕುವಿಕೆಯು ಭಾರತ ಮತ್ತು ಭೂತಾನ್ ನಡುವಿನ ಜಲವಿದ್ಯುತ್ ಯೋಜನೆಯ ನಿರ್ಮಾಣ ಮತ್ತು ಇತರ ಕಾರ್ಯಗಳನ್ನು ಪ್ರಾರಂಭಿಸಲು ಸುಲಭವಾಗುತ್ತದೆ. ಈ ಯೋಜನೆಯು 2025ರ ದ್ವಿತೀಯಾರ್ಧದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ ಎಂದು ಸಚಿವಾಲಯ ಹೇಳಿದೆ.

600 ಮೆಗಾವ್ಯಾಟ್ ರನ್–ಆಫ್–ದಿ–ರಿವರ್ ಯೋಜನೆಯು ಪೂರ್ವ ಭೂತಾನ್‌ನ ಟ್ರಾಶಿಯಾಂಗ್ಟ್ಸೆ ಜಿಲ್ಲೆಯ ಖೊಲೊಂಗ್ಚು ನದಿಯ ಕೆಳಭಾಗದಲ್ಲಿದೆ. ನಾಲ್ಕು 150 ಮೆಗಾವ್ಯಾಟ್ ಟರ್ಬೈನ್‌ಗಳ ಭೂ ಭಾಗದಲ್ಲಿರುವ ವಿದ್ಯುತ್ ಕೇಂದ್ರಕ್ಕೆ 95 ಮೀಟರ್ ಎತ್ತರದ ಕಾಂಕ್ರೀಟ್ ಗುರುತ್ವಾಕರ್ಷಣೆಯ ಅಣೆಕಟ್ಟಿನಿಂದ ನೀರನ್ನು ಹರಿಸಲಾಗುತ್ತದೆ ಎಂದು ಎಂಇಎ ತಿಳಿಸಿದೆ.

ಭೂತಾನ್‌ನ ಸ್ರುಕ್ ಗ್ರೀನ್ ಪವರ್ ಕಾರ್ಪೊರೇಷನ್ (ಡಿಜಿಪಿಸಿ) ಮತ್ತು ಭಾರತದ ಸತ್ಲಜ್ ಜಲ ವಿದ್ಯುತ್ ನಿಗಮ್ ಲಿಮಿಟೆಡ್ (ಎಸ್‌ಜಿವಿಎನ್‌ಎಲ್) ನಡುವೆ ರಚಿಸಲಾಗಿರುವ ಜಂಟಿ ಉದ್ಯಮ ಕಂಪನಿಯಾದ ಖೊಲೊಂಗ್ಚು ಹೈಡ್ರೊ ಎನರ್ಜಿ ಲಿಮಿಟೆಡ್ ಇದನ್ನು ಕೈಗೆತ್ತಿಕೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನಡೆದ ಸಹಿ ಸಮಾರಂಭದಲ್ಲಿ ಭೂತಾನ್ ಆರ್ಥಿಕ ವ್ಯವಹಾರಗಳ ಸಚಿವ ಲೋಕನಾಥ್ ಶರ್ಮಾ ಮತ್ತು ಭಾರತದ ವಿದೇಶಾಂಗ ಕಾರ್ಯದರ್ಶಿ, ಭಾರತ ಸರ್ಕಾರದ ಕಾರ್ಯದರ್ಶಿ (ಅಧಿಕಾರ), ಭೂತಾನ್ ರಾಯಭಾರಿ ಸೇರಿದಂತೆ ಹಿರಿಯ ಸರ್ಕಾರಿ ಅಧಿಕಾರಿಗಳು ಉಪಸ್ಥಿತರಿದ್ದರು.

ಆಧಾರ:ವಿಶ್ವವಾಣಿ, ದಿನಾಂಕ:30.06.2020

# ಭಾಗ–5

## ಚುನಾವಣೆ ಸುದ್ದಿಗಳು

### 1. ಪಾಲಿಕೆ ಚುನಾವಣೆ ಮುಂದೂಡಿಕೆ ಸುಳಿವು

ಪಾಲಿಕೆಯ ಈಗಿನ ಸದಸ್ಯರ ಅವಧಿ ಇದೇ ಸೆಪ್ಟೆಂಬರ್‌ನಲ್ಲಿ ಕೊನೆಗೊಳ್ಳಲಿದೆ. ಆದರೂ, ಅಕ್ಟೋಬರ್‌ಗೆ ಮುನ್ನ ಬಿಬಿಎಂಪಿಗೆ ಚುನಾವಣೆ ನಡೆಸುವ ಬಗ್ಗೆ ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಚಿವರು 'ಬೆಂಗಳೂರಿನ ಆಡಳಿತಕ್ಕೆ ಕೆಎಂಸಿ ಕಾಯ್ದೆ ಬದಲು ಪ್ರತ್ಯೇಕ ಕಾಯ್ದೆ ರೂಪಿಸಲಾಗುತ್ತಿದೆ. ಇದರ ಕರಡು ವಿಧಾನ ಸಭೆಯಲ್ಲಿ ಮಂಡನೆಯಾಗಿದ್ದು, ಜಂಟಿ ಸಲಹಾ ಸಮಿತಿಗೆ ವಹಿಸಲಾಗಿದೆ. ಎಲ್ಲ ಪಕ್ಷದವರೂ ಈ ಸಮಿತಿಯಲ್ಲಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ಈ ಬಗ್ಗೆ ಜನಾಭಿಪ್ರಾಯ ಸಂಗ್ರಹಿಸಿ ನಂತರ ನಿರ್ಧಾರಕ್ಕೆ ಬರಬೇಕಾಗುತ್ತದೆ ಎಂದರು.

ಆಧಾರ:ಕನ್ನಡ ಪ್ರಭ, ದಿನಾಂಕ:21.04.2020

### 2. ರಾಜ್ಯ ಸಭೆಗೆ ಅವಿರೋಧ ಆಯ್ಕೆಯಾಗುವ ಸಾಧ್ಯತೆ

ಕರ್ನಾಟಕ ವಿಧಾನ ಸಭೆಯಿಂದ ನಾಲ್ವರು ರಾಜ್ಯಸಭಾ ಸದಸ್ಯರನ್ನು ಅಯ್ಕೆ ಮಾಡಲು ಜೂನ್ 19 ರಂದು ಚುನಾವಣೆ ನಡೆಯಲಿದೆ. ಅಭ್ಯರ್ಥಿಗಳ ಚಿತ್ರಣ ಸ್ಪಷ್ಟವಾಗುತ್ತಿರುವುದರಿಂದ ನಾಲ್ವರು ಸದಸ್ಯರು ಅವಿರೋಧವಾಗಿ ಆಯ್ಕೆ ಆಗುವ ಸಾಧ್ಯತೆ ಇದೆ.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ರಾಜೀವ್ ಗೌಡ, ಬಿ.ಜೆ.ಪಿಯ ಪ್ರಭಾಕರ ಕೋರೆ ಮತ್ತು ಜೆ.ಡಿ.ಎಸ್.ನ ಕುಪೇಂದ್ರ ರೆಡ್ಡಿ ಅವರಿಂದ ತೆರವಾಗಿರುವ ಸ್ಥಾನಕ್ಕೆ ಜೂನ್ 19 ರಂದು ಚುನಾವಣೆ ನಡೆಯಲಿದೆ.

ಕರ್ನಾಟಕ ವಿಧಾನ ಸಭೆಯಿಂದ ರಾಜ್ಯಸಭೆಗೆ ಒಬ್ಬ ಸದಸ್ಯ ಆಯ್ಕೆಯಾಗಲು 48 ಮತಗಳು ಬೇಕು. ಕಾಂಗ್ರೆಸ್ ಒಂದು ಸ್ಥಾನದಲ್ಲಿ ಗೆಲ್ಲುವುದು ನಿಶ್ಚಿತ. ಬಿ.ಜೆ.ಪಿ. ಸುಲಭವಾಗಿ ಎರಡು ಸ್ಥಾನ ಗೆಲ್ಲಲಿದೆ. ಮೂರನೇ ಸ್ಥಾನ ಆಯ್ಕೆಗೆ ಯಾವುದೇ ಸಮಸ್ಯೆ ಇಲ್ಲ. ಆದರೆ, ನಾಲ್ಕನೇ ಸ್ಥಾನ ಯಾರಿಗೆ ಎಂಬುದು ಕುತೂಹಲಕ್ಕೆ ಕಾರಣವಾಗಿದ್ದರೂ ದೇವೇಗೌಡರ ಸ್ಪರ್ಧೆ ಬಹುತೇಕ ಖಚಿತ ಎಂದು ಹೇಳುತ್ತಿರುವುದರಿಂದ ಅವರು ಸ್ಪರ್ಧೆ ಮಾಡಿದಲ್ಲಿ ಬಿ.ಜೆ.ಪಿ ಅಥವಾ ಕಾಂಗ್ರೆಸ್ ಪಕ್ಷಗಳು ವಿರೋಧ ಮಾಡುವುದು ಕಡಿಮೆ. ಈ ಹಿನ್ನೆಲೆಯಲ್ಲಿ ನಾಲ್ಕು ಸ್ಥಾನಗಳಲ್ಲಿ ಅವಿರೋಧ ಆಯ್ಕೆ ಸುಲಭ ಎಂದು ಹೇಳಲಾಗಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:07.06.2020

### 3. ವಿಧಾನ ಪರಿಷತ್ 29 ರಂದು ಚುನಾವಣೆ

ದ್ವೈವಾರ್ಷಿಕವಾಗಿ ನಡೆಯುವ ಚುನಾವಣೆಯಲ್ಲಿ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದ ನಜೀರ್ ಅಹಮ್ಮದ್, ಜಯಮ್ಮ, ಎಂ.ಸಿ. ವೇಣುಗೋಪಾಲ್, ಎನ್. ಎಸ್. ಬೋಸರಾಜು, ಎಚ್. ಎಂ. ರೇವಣ್ಣ, ಟಿ.ಎ. ಶರವಣ ಹಾಗೂ ಡಿ.ಯು. ಮಲ್ಲಿಕಾರ್ಜುನ ಅವರ ಸದಸ್ಯತ್ವದ ಅವಧಿ ಅಂತ್ಯವಾಗುತ್ತಿದ್ದು, ಮೇ 30 ರಂದು ತೆರವಾಗಲಿರುವ ಕರ್ನಾಟಕ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಜೂನ್ 29 ರಂದು ಚುನಾವಣೆ ನಿಗದಿಯಾಗಿದೆ.

**ಚುನಾವಣೆ ಪ್ರಕ್ರಿಯೆಯ ವಿವರ**

ಜೂನ್ 11: ಅಧಿಸೂಚನೆ ಪ್ರಕಟಣೆ

ಜೂನ್ 18: ನಾಮಪತ್ರ ಸಲ್ಲಿಕೆಗೆ ಕೊನೆಯ ದಿನ

ಜೂನ್ 19: ನಾಮಪತ್ರ ಪರಿಶೀಲನೆ

ಜೂನ್ 22: ನಾಮಪತ್ರ ಹಿಂದೆ ಪಡೆಯಲು ಕೊನೆಯ ದಿನ

ಜೂನ್ 29: ಬೆಳಿಗ್ಗೆ 9 ರಿಂದ ಸಂಜೆ 4ರವರೆಗೆ ಮತದಾನ, ಸಂಜೆ 5 ರಿಂದ ಮತಗಳ ಎಣಿಕೆ

ಜೂನ್ 30: ಚುನಾವಣೆ ಪ್ರಕ್ರಿಯೆ ಮುಕ್ತಾಯ.

ಆಧಾರ:ಪ್ರಜಾವಾಣಿ, ದಿನಾಂಕ:10.06.2020

## 4. ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳ ನೇಮಕ

ಕೋವಿಡ್‌ನಿಂದಾಗಿ ಚುನಾವಣೆ ನಡೆಸುವುದು ಕಷ್ಟವಾಗಿರುವುದರಿಂದ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಿಸಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಕೊರೊನಾ ಇರುವುದರಿಂದ ಸಕಾಲದಲ್ಲಿ ಚುನಾವಣೆ ನಡೆಸಲು ಸಾಧ್ಯವಾಗುತ್ತಿಲ್ಲ. ಪಂಚಾಯಿತಿಗಳ ಅವಧಿ ಪೂರ್ಣಗೊಂಡಿರುವುದರಿಂದ ಆಡಳಿತಾಧಿಕಾರಿಗಳನ್ನು ನೇಮಿಸಲು ಸರ್ಕಾರ ನಿರ್ಧರಿಸಿದೆ. ಜೊತೆಗೆ ಮುಂದಿನ 2 ರಿಂದ 3 ತಿಂಗಳಲ್ಲಿ ಚುನಾವಣೆ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಳ್ಳುವಂತೆಯೂ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. 6 ತಿಂಗಳ ಒಳಗೆ ಚುನಾವಣೆ ನಡೆಸಲಾಗುತ್ತದೆ ಹಾಗೂ ಸಕ್ಕರೆ ಕಾರ್ಖಾನೆ ಹೊರತು ಪಡಿಸಿ ರಾಜ್ಯದ ಸಹಕಾರ ಸಂಘ ಸಂಸ್ಥೆಗಳ ಚುನಾವಣೆ ನಡೆಸಲು ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ. ಹೆಚ್ಚು ಸದಸ್ಯರು ಇರುವ ಕಾರಣ ಸಕ್ಕರೆ ಕಾರ್ಖಾನೆಗಳ ಚುನಾವಣೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗುತ್ತಿದೆಯೆಂದು ಎಂದು ಸಂಪುಟ ಸಭೆಯ ವಿವರವನ್ನು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ತಿಳಿಸಿದರು.

ರಾಜ್ಯದ 8 ಜಿಲ್ಲೆಗಳ 47 ತಾಲ್ಲುಕುಗಳಲ್ಲಿ ಈ ಯೋಜನೆ ಜಾರಿಯಾಗಲಿದೆ. ಬ್ಯಾಡಗಿ, ಹಾನಗಲ್, ಹಾವೇರಿ, ಹಿರೇಕೆರೂರು, ರಾಣೆಬೆನ್ನೂರು, ಸವಣೂರು, ಶಿಗ್ಗಾಂವ್, ಭಟ್ಕಳ, ಹಳಿಯಾಳ, ಹೊನ್ನಾವರ, ಕಾರವಾರ, ಕುಮಟ, ಮುಂಡಗೋಡ್, ಶಿರಸಿ ಸಿದ್ದಾಪುರ, ಜೋಯಿಡಾ, ಶಿವಮೊಗ್ಗ, ಸಾಗರ, ಶಿಕಾರಿಪುರ, ಸೊರಬ, ಹೊಸನಗರ, ರೋಣ, ಶಿರಹಟ್ಟಿ, ಮುಂಡರಗಿ, ನರಗುಂದ, ಮಾಲೂರು, ಕೋಲಾರ, ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು ಚಳ್ಳಕೆರೆ, ಹಿರಿಯೂರು, ಹೊಸದುರ್ಗ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳು ಇದರಲ್ಲಿ ಸೇರಿವೆ. ಕೇಂದ್ರ ಸರ್ಕಾರ ಈ ಕೇಂದ್ರಗಳಿಗೆ ರೂ.12.62 ಕೋಟಿ ನೀಡಲಿದೆ. 3 ವರ್ಷದಲ್ಲಿ ಈ ಯೋಜನೆ ಜಾರಿಯಾಗಲಿದೆ ಎಂದು ಕಾನೂನು ಸಚಿವರು ತಿಳಿಸಿದರು.

ಆಧಾರ:ವಿಜಯ ಕರ್ನಾಟಕ, ದಿನಾಂಕ:12.06.2020

## 5. ರಾಜ್ಯಸಭೆಗೆ ಅವಿರೋಧ ಆಯ್ಕೆ

ರಾಜ್ಯ ವಿಧಾನ ಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಿಗದಿಯಾಗಿದ್ದ ದ್ವೈವಾರ್ಷಿಕ ಚುನಾವಣೆಯಲ್ಲಿ ನಿರೀಕ್ಷೆಯಂತೆ ಮೂರು ಪಕ್ಷಗಳ ನಾಲ್ವರು ಅಭ್ಯರ್ಥಿಗಳು ಅವಿರೋಧ ಆಯ್ಕೆಯಾಗಿದ್ದಾರೆ. ಜೆ.ಡಿ.ಎಸ್.ನ ಮಾಜಿ ಪ್ರಧಾನಿ ಹೆಚ್. ಡಿ. ದೇವೇಗೌಡ, ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ, ಬಿಜೆಪಿಯ ಈರಣ್ಣ ಕಡಾಡಿ ಹಾಗೂ ಅಶೋಕ್ ಗಸ್ತಿ ಅವಿರೋಧ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾದ ವಿಧಾನ ಸಭೆಯ ಕಾರ್ಯದರ್ಶಿ ಎಂ. ಕೆ. ವಿಶಾಲಾಕ್ಷಿ ಪ್ರಕಟಿಸಿದರು. ಯಾರೊಬ್ಬರೂ ನಾಮಪತ್ರ ಹಿಂಪಡೆಯದ ಹಿನ್ನೆಲೆಯಲ್ಲಿ ಅವಿರೋಧ ಆಯ್ಕೆಯನ್ನು ಘೋಷಿಸಿದರು. ಖರ್ಗೆ, ಕಡಾಡಿ, ಗಸ್ತಿ ಸ್ವತ: ಬಂದು ಆಯ್ಕೆಯ ಪ್ರಮಾಣ ಪತ್ರ ಪಡೆದರೆ, ದೇವೇಗೌಡರ ಪರವಾಗಿ ಅವರ ಪ್ರತಿನಿಧಿ ಪ್ರಮಾಣ ಪತ್ರ ಪಡೆದುಕೊಂಡರು.

ಆಧಾರ:ವಿಜಯವಾಣಿ, ದಿನಾಂಕ:13.06.2020

## 6. ರಾಜ್ಯ ಸಭೆಯಲ್ಲಿ ಮೇಲುಗೈ ಸಾಧಿಸಿದ ಬಿಜೆಪಿ

ರಾಜ್ಯ ಸಭೆಯ 19 ಸ್ಥಾನಗಳಿಗೆ ಹತ್ತು ರಾಜ್ಯಗಳಿಂದ ನಡೆದ ಚುನಾವಣೆಗಳಲ್ಲಿ ಬಿಜೆಪಿ 8, ಕಾಂಗ್ರೆಸ್ ಮತ್ತು ವೈ.ಎಸ್.ಆರ್. ಕಾಂಗ್ರೆಸ್ ತಲಾ 4 ರಲ್ಲಿ ಗೆಲುವು ಸಾಧಿಸಿದೆ. 3 ಸ್ಥಾನ ಇತರ ಪಕ್ಷಗಳ ಪಾಲಾಗಿದೆ. ಕಾಂಗ್ರೆಸ್‌ನ ನಾಯಕ ದಿಗ್ವಿಜಯ ಸಿಂಗ್, ಬಿಜೆಪಿಯ ಜ್ಯೋತಿರಾದಿತ್ಯ ಸಿಂಧಿಯಾ, ಮಧ್ಯಪ್ರದೇಶದಿಂದ ಗೆಲುವು ಸಾಧಿಸಿದ್ದಾರೆ. ಬಿಜೆಪಿಯ ಇನ್ನೊಬ್ಬ ಅಭ್ಯರ್ಥಿ ಸುಮೇರ್ ಸಿಂಗ್ ಸೋಳಂಕಿ ಕೂಡ ಗೆದ್ದಿದ್ದಾರೆ. ಇದು ಸಿಂಗ್‌ಗೆ ಸತತ 2ನೇ ಗೆಲುವಾದರೆ, ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದ ಸಿಂಧಿಯಾ ಮೊದಲ ಬಾರಿಗೆ ಮೇಲ್ಮನೆ ಪ್ರವೇಶಿಸಿದ್ದಾರೆ. ರಾಜಸ್ಥಾನದಲ್ಲಿ ಕಾಂಗ್ರೆಸ್ 2 ಸ್ಥಾನ, ಪ್ರತಿಪಕ್ಷ ಬಿಜೆಪಿ ಒಂದರಲ್ಲಿ ಗೆದ್ದಿದೆ. ಕಾಂಗ್ರೆಸ್‌ನ ಕೆ.ಸಿ. ವೇಣುಗೋಪಾಲ್, ನೀರಜ್ ಡಾಂಗಿ, ಬಿಜೆಪಿಯ ರಾಜೇಂದ್ರ ಗೆಹ್ಲೋಟ್ ರಾಜಸ್ಥಾನ ವಿಧಾನ ಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾದರು.

ಗುಜರಾತ್‌ನಲ್ಲಿ ಒಟ್ಟು ನಾಲ್ಕು ಸ್ಥಾನದಲ್ಲಿ ಬಿಜೆಪಿ 3 ಮತ್ತು ಕಾಂಗ್ರೆಸ್ ಒಂದು ಸ್ಥಾನದಲ್ಲಿ ಜಯಗಳಿಸಿದೆ. ಫೆಬ್ರವರಿಯಲ್ಲಿ ಘೋಷಣೆಯಾದ 55 ಸ್ಥಾನಗಳ ಪೈಕಿ 37 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾದರು. ಉಳಿದ 18 ಸ್ಥಾನಗಳಿಗೆ ಮಾರ್ಚ್ ಕಡೆಯ ವಾರದಲ್ಲಿ ಚುನಾವಣೆ ನಡೆಯಬೇಕಿತ್ತು. ಆದರೆ, ಕೊರೋನಾ ಹಾವಳಿ ಕಾರಣ ಲಾಕ್‌ಡೌನ್ ಘೋಷಣೆ ಮಾಡಿದ್ದರಿಂದ ಚುನಾವಣಾ ಆಯೋಗ ಚುನಾವಣೆಯನ್ನು ಮುಂದೂಡಿತ್ತು. ಪ್ರಸ್ತುತ ಜೂನ್‌ನಲ್ಲಿ ಕರ್ನಾಟಕದ ನಾಲ್ಕು ಮತ್ತು ಮಿಜೋರಾಂ ಹಾಗೂ ಅರುಣಾಚಲದ ಒಂದು ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆಯಿತು.

ಕೋವಿಡ್ –19 ರೋಗದಿಂದ ಬಳಲುತ್ತಿರುವ ಮಧ್ಯ ಪ್ರದೇಶದ ಕಾಂಗ್ರೆಸ್ ಶಾಸಕ ಕುಣಾಲ್ ಚೌಧರಿ ಪಿಪಿಇ ಸೂಟ್ ಧರಿಸಿ ಮತದಾನ ಮಾಡಿದರು. ಗುಜರಾತ್‌ನಲ್ಲಿ ಅನಾರೋಗ್ಯ ಪೀಡಿತ ಬಿಜೆಪಿ ಶಾಸಕ ಕೇಸರಿಸಿಂಹ ಜೇಸಂಗಭಾಯ್ ಸೋಳಂಕಿ ಆಂಬುಲೆನ್ಸ್‌ನಲ್ಲಿ ಆಗಮಿಸಿ ರಾಜ್ಯಸಭೆ ಚುನಾವಣೆಯಲ್ಲಿ ಮತದಾನ ಮಾಡಿದರು.

| ರಾಜ್ಯಸಭೆಯ ಒಟ್ಟು 19 ಸ್ಥಾನಕ್ಕೆ ಚುನಾವಣೆ | | |
|---|---|---|
| ಗುಜರಾತ್ | ಬಿಜೆಪಿ–3<br>ಕಾಂಗ್ರೆಸ್–1 | ಒಟ್ಟು–4 |
| ಆಂಧ್ರಪ್ರದೇಶ | ವೈಎಸ್‌ಆರ್<br>ಕಾಂಗ್ರೆಸ್–4 | ಒಟ್ಟು–4 |
| ರಾಜಸ್ಥಾನ | ಕಾಂಗ್ರೆಸ್–2<br>ಬಿಜೆಪಿ–1 | ಒಟ್ಟು–3 |
| ಜಾರ್ಖಂಡ್ | ಜೆಎಂಎಂ–1<br>ಬಿಜೆಪಿ–1 | ಒಟ್ಟು–2 |
| ಮಧ್ಯಪ್ರದೇಶ | ಬಿಜೆಪಿ–2<br>ಕಾಂಗ್ರೆಸ್–1 | ಒಟ್ಟು–3 |
| ಮಣಿಪುರ | ಬಿಜೆಪಿ–1 | ಒಟ್ಟು–1 |
| ಮೇಘಾಲಯ | ಎನ್‌ಪಿಪಿ–1 | ಒಟ್ಟು–1 |
| ಮಿಜೋರಾಂ | ಎಂಎನ್‌ಎಫ್–1 | ಒಟ್ಟು–1 |

ಆಧಾರ:ವಿಜಯವಾಣಿ, ದಿನಾಂಕ:20.06.2020

## 7. ಮೂರು ರಾಜ್ಯಗಳಲ್ಲಿ ಬಿಜೆಪಿ ಅಭ್ಯರ್ಥಿಗಳ ಜಯ

ರೆಸಾರ್ಟ್ ರಾಜಕೀಯ, ರಾಜೀನಾಮೆ ಮತ್ತು ಲಂಚದ ಆರೋಪಗಳ ನಡುವೆಯೇ 8 ರಾಜ್ಯಗಳ 19 ಸ್ಥಾನಗಳಿಗೆ ನಡೆದ ಚುನಾವಣೆಯ ಫಲಿತಾಂಶ ಹೊರ ಬಿದ್ದಿದೆ. ತಡ ರಾತ್ರಿ ಗುಜರಾತ್‌ನ 4 ಸ್ಥಾನಗಳ ಫಲಿತಾಂಶ ಪ್ರಕಟವಾಗಿದೆ. ಬಿಜೆಪಿಗೆ 3, ಕಾಂಗ್ರೆಸ್‌ಗೆ 1 ಸ್ಥಾನ ಸಿಕ್ಕಿದೆ. ಫಲಿತಾಂಶದ ಬಗ್ಗೆ ತಕರಾರು ಎದ್ದ ಹಿನ್ನೆಲೆಯಲ್ಲಿ ರಾತ್ರಿ 10 ಗಂಟೆ ಬಳಿಕ ಮತ್ತೊಮ್ಮೆ ಮತ ಎಣಿಕೆ ನಡೆಸಿ ಫಲಿತಾಂಶ ಪ್ರಕಟಿಸಲಾಯಿತು. ಇದಕ್ಕೂ ಮೊದಲು 7 ರಾಜ್ಯಗಳ 15 ಸ್ಥಾನಗಳ ಪೈಕಿ ಬಿಜೆಪಿ 5, ಕಾಂಗ್ರೆಸ್ 3, ವೈಎಸ್ಸಾರ್ ಕಾಂಗ್ರೆಸ್ 4 ಸ್ಥಾನಗಳನ್ನು ಬಾಚಿಕೊಂಡವು. ಮಿಜೋರಾಂ ಮತ್ತು ಮೇಘಾಲಯದಲ್ಲಿ ಪ್ರಾದೇಶಿಕ ಪಕ್ಷಗಳು ಗೆದ್ದಿವೆ. ಜಾರ್ಖಂಡ್‌ನಲ್ಲಿ ಒಂದು ಸ್ಥಾನವನ್ನು ಆಡಳಿತಾರೂಢ ಜೆಎಂಎಂ ಪಡೆದುಕೊಂಡಿದೆ.

ರಾಜಸ್ಥಾನದಲ್ಲಿ 3 ಸೀಟುಗಳ ಪೈಕಿ ಎರಡು ಕಾಂಗ್ರೆಸ್ ಹಾಗೂ ಒಂದು ಬಿಜೆಪಿ ಪಾಲಾಗಿದೆ. ಕಾಂಗ್ರೆಸ್‌ನಿಂದ ಕೆ.ಸಿ ವೇಣುಗೋಪಾಲ್ ಮತ್ತು ನೀರಜ್ ಡಾಂಗಿ, ಬಿಜೆಪಿಯಿಂದ ರಾಜೇಂದ್ರ ಗೆಹ್ಲೋಟ್ ಯಾವುದೇ ಅಡ್ಡಮತದಾನವಿಲ್ಲದೇ ರಾಜ್ಯಸಭೆಗೆ ಪ್ರವೇಶ ಪಡೆದಿದ್ದಾರೆ. ಈ ಮೂಲಕ ರಾಜ್ಯಸಭೆಗೆ ಈವರೆಗೆ

ರಾಜಸ್ಥಾನದಿಂದ ಮೂವರು ಆಯ್ಕೆಯಾದಂತಾಗಿದ್ದು, ಮಧ್ಯಪ್ರದೇಶದಲ್ಲಿ ನಿರೀಕ್ಷೆಯಂತೆ ಬಿಜೆಪಿಯಿಂದ ಜ್ಯೋತಿರಾದಿತ್ಯ ಸಿಂಧಿಯಾ, ಸುಮೇರ್‌ಸಿಂಗ್ ಸೋಲಂಕಿ, ಕಾಂಗ್ರೆಸ್‌ನಿಂದ ಹಿರಿಯ ನಾಯಕ ದಿಗ್ವಿಜಯ ಸಿಂಗ್ ಮೇಲ್ಮನೆಗೆ ಎಂಟ್ರಿ ಪಡೆದಿದ್ದಾರೆ.

ಕಾಂಗ್ರೆಸ್‌ನ ಮತ್ತೊಬ್ಬ ಅಭ್ಯರ್ಥಿ, ದಲಿತ ನಾಯಕ ಫೂಲ್ ಸಿಂಗ್ ಬರಿಯಾ ಸೋಲುಂಡಿದ್ದಾರೆ. ಇದೇ ವೇಳೆ, ಸಮಾಜವಾದಿ ಪಕ್ಷದ ಶಾಸಕ ರಾಜೇಶ್ ಶುಕ್ಲಾ ಅವರು ಬಿಜೆಪಿ ಪರ ಮತ ಚಲಾಯಿಸಿದ ಹಿನ್ನೆಲೆಯಲ್ಲಿ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ. ಬಿಜೆಪಿಯ ಇಬ್ಬರು ಶಾಸಕರು ಅಡ್ಡ ಮತದಾನ ಮಾಡಿರುವ ಆರೋಪ ಎದುರಿಸಿದ್ದಾರೆ.

ನಿರೀಕ್ಷೆಯಂತೆಯೇ ಎಲ್ಲ ನಾಲ್ಕು ಸ್ಥಾನಗಳನ್ನೂ ಆಡಳಿತಾರೂಢ ವೈಎಸ್ಸಾರ್ ಕಾಂಗ್ರೆಸ್ ಬಾಚಿಕೊಂಡಿದೆ. ಜಾರ್ಖಂಡ್‌ನ 2 ರಾಜ್ಯಸಭಾ ಸ್ಥಾನಗಳಲ್ಲಿ ಒಂದನ್ನು ಬಿಜೆಪಿಯ ದೀಪಕ್ ಪ್ರಕಾಶ್, ಮತ್ತೊಂದನ್ನು ಆಡಳಿತಾರೂಢ ಜೆಎಂಎಂ ಸ್ಥಾಪಕ, ಮಾಜಿ ಸಿಎಂ ಶಿಬು ಸೊರೇನ್ ತಮ್ಮದಾಗಿಸಿಕೊಂಡಿದ್ದಾರೆ. ಮೇಘಾಲಯದಲ್ಲಿ ಆಡಳಿತಾರೂಢ ನ್ಯಾಷನಲ್ ಪೀಪಲ್ಸ್ ಪಾರ್ಟಿ, ಮಣಿಪುರದಲ್ಲಿ ಬಿಜೆಪಿ ಗೆದ್ದಿದೆ. ಮಿಜೋರಾಂನಲ್ಲಿ ಪ್ರಾದೇಶಿಕ ಪಕ್ಷದ ಅಭ್ಯರ್ಥಿ ಗೆದ್ದಿದ್ದಾರೆ.

ಆಧಾರ:ಉದಯವಾಣಿ ದಿನಾಂಕ:20.06.2020

## 8. ವಿಧಾನ ಪರಿಷತ್‌ಗೆ ಏಳು ಮಂದಿ ಅವಿರೋಧ ಆಯ್ಕೆ

ಜೂನ್ 30 ರಂದು ವಿಧಾನ ಪರಿಷತ್ತಿನ ಸದಸ್ಯರ ಅವಧಿ ಮುಕ್ತಾಯವಾಗಲಿರುವುದರಿಂದ ಸದರಿ ಏಳು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ 7 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ಆ ಪೈಕಿ ಆಡಳಿತಾರೂಢ ಬಿಜೆಪಿಯ ನಾಲ್ವರು, ಕಾಂಗ್ರೆಸ್‌ನ ಇಬ್ಬರು ಮತ್ತು ಜೆಡಿಎಸ್‌ನ ಒಬ್ಬರು ಸದಸ್ಯರುಗಳು ಮೇಲ್ಮನೆ ಪ್ರವೇಶಿಸಿದ್ದಾರೆ. ಏಳು ಸ್ಥಾನಕ್ಕೆ ಏಳು ಅಭ್ಯರ್ಥಿಗಳು ಮಾತ್ರ ಕಣದಲ್ಲಿದ್ದರು. ಯಾರೊಬ್ಬರು ಹೆಚ್ಚುವರಿಯಾಗಿ ಕಣದಲ್ಲಿ ಇಲ್ಲದ ಕಾರಣ ವಿಧಾನಸಭೆ ಕಾರ್ಯದರ್ಶಿ ಮತ್ತು ಚುನಾವಣಾಧಿಕಾರಿ ಎಂ. ಕೆ. ವಿಶಾಲಾಕ್ಷಿ ಅವರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಿಸಿದರು.

ಬಿಜೆಪಿಯಿಂದ ಮಾಜಿ ಸಚಿವರಾದ ಎಂ.ಟಿ.ಬಿ ನಾಗರಾಜ್, ಆರ್. ಶಂಕರ್, ಸುನೀಲ್ ವಲ್ಯಾಪುರೆ ಮತ್ತು ಪಕ್ಷದ ಮುಖಂಡ ಪ್ರತಾಪ್‌ಸಿಂಹ ನಾಯಕ್, ಕಾಂಗ್ರೆಸ್‌ನಿಂದ ಹಿರಿಯ ನಾಯಕರಾದ ಬಿ.ಕೆ. ಹರಿಪ್ರಸಾದ್, ನಸೀರ್ ಆಹಮ್ಮದ್ ಹಾಗೂ ಜೆ.ಡಿ.ಎಸ್‌ನಿಂದ ಪಕ್ಷದ ಕಾರ್ಯಕರ್ತ ಗೋವಿಂದರಾಜು ಅವರುಗಳು ವಿಧಾನ ಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ವಿಧಾನ ಸೌಧಕ್ಕೆ ಆಗಮಿಸಿದ ಅಭ್ಯರ್ಥಿಗಳು ಆಯ್ಕೆಯ ಪ್ರಮಾಣ ಪತ್ರವನ್ನು ಪಡೆದುಕೊಂಡರು.

ಪರಿಷತ್ ಚುನಾವಣೆಗೆ ಒಂಭತ್ತು ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದರು. ಆ ಪೈಕಿ 2 ನಾಮಪತ್ರಗಳಲ್ಲಿ ಸೂಚಕರ ಹೆಸರಿಲ್ಲದ ಕಾರಣ 2 ನಾಮಪತ್ರಗಳನ್ನು ಅಸಿಂಧುಗೊಳಿಸಲಾಯಿತು. ಉಳಿದ ಏಳು ಅಭ್ಯರ್ಥಿಗಳ ನಾಮಪತ್ರಗಳನ್ನು ಸಿಂಧುಗೊಳಿಸಲಾಗಿ, ಸದರಿಯವರುಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ವಿಶಾಲಾಕ್ಷಿ ತಿಳಿಸಿದರು.

ಆಧಾರ:ಕನ್ನಡ ಪ್ರಭ, ದಿನಾಂಕ:23.06.2020

## 9. ಗ್ರಾಮ ಪಂಚಾಯಿತಿ ಚುನಾವಣೆ ಮುಂದಕ್ಕೆ

ಕೋವಿಡ್–19ನಿಂದಾಗಿ ದೇಶವೇ ತತ್ತರಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಮುಂದಿನ ತಿಂಗಳು ನಡೆಯಬೇಕಾಗಿದ್ದ ಗ್ರಾಮ ಪಂಚಾಯಿತಿಯ ಸಾರ್ವತ್ರಿಕ ಚುನಾವಣೆಯನ್ನು ರಾಜ್ಯ ಚುನಾವಣಾ ಆಯೋಗವು ತಾತ್ಕಾಲಿಕವಾಗಿ ಮುಂದೂಡಿ ಆದೇಶಿಸಿದೆ. ಆಯೋಗದ ಈ ಆದೇಶದಿಂದ ರಾಜ್ಯ ಸರ್ಕಾರಕ್ಕೆ ಆಡಳಿತ ಸಮಿತಿ ರಚನೆ ಮಾಡುವ ಹಾದಿ ಸುಗಮವಾದಂತಾಗಿದೆ. ಚುನಾವಣೆ ನಡೆಸುವ ಸಂಬಂಧ ಇತ್ತೀಚೆಗೆ ರಾಜ್ಯ ಚುನಾವಣಾ ಆಯೋಗವು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ತಮ್ಮ ಅಭಿಪ್ರಾಯವನ್ನು ತಿಳಿಸುವಂತೆ ಪತ್ರ ಬರೆದಿತ್ತು.

ಎಲ್ಲ ಸಿಬ್ಬಂದಿ ಕೊರೊನಾ ನಿಯಂತ್ರಣ ಕಾರ್ಯದಲ್ಲಿ ತೊಡಗಿರುವುದರಿಂದ ಚುನಾವಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳಲು ಕಷ್ಟಕರವಾಗಲಿದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಎಲ್ಲರ ಅಭಿಮತಕ್ಕೆ ಮನ್ನಣೆ ನೀಡಿದ ರಾಜ್ಯ ಚುನಾವಣಾ ಆಯೋಗವು ಗ್ರಾಮ ಪಂಚಾಯತಿಗಳ ಸಾರ್ವತ್ರಿಕ ಚುನಾವಣೆಯನ್ನು ನಡೆಸುವ ಸಾಧ್ಯತೆಗಳ ಬಗ್ಗೆ ಪರಿಶೀಲಿಸಿದೆ. ಪ್ರಸ್ತುತ ಸ್ಥಿತಿ ಅಸಾಧಾರಣ ಪರಿಸ್ಥಿತಿ ಎಂದು ಪರಿಗಣಿಸಿ ಚುನಾವಣೆಯನ್ನು ತಾತ್ಕಾಲಿಕವಾಗಿ ಮುಂದೂಡಲು ತೀರ್ಮಾನಿಸಿದೆ. ಮುಂದಿನ ದಿನದಲ್ಲಿ ಪರಿಸ್ಥಿತಿಯನ್ನು ಅವಲೋಕಿಸಿ ಚುನಾವಣೆ ನಡೆಸುವ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದೆ. ಚುನಾವಣೆಗೆ ಸಂಬಂಧಿಸಿದ ಮತದಾರರ ಪಟ್ಟಿ ತಯಾರಿಕೆ, ಮತದಾನ, ಮತಗಳ ಎಣಿಕೆ ದಿನಾಂಕದಂದು ಜನ ಸಾಮಾನ್ಯರು ಮತ್ತು ಚುನಾವಣಾ ಕರ್ತವ್ಯ ನಿರತ ಅಧಿಕಾರಿಗಳು, ಸಿಬ್ಬಂದಿ, ಪೋಲಿಂಗ್ ಏಜೆಂಟರು, ರಾಜಕೀಯ ಪಕ್ಷಗಳು, ಸಹಾಯಕ ಸಿಬ್ಬಂದಿಗಳ ಓಡಾಟ ಮತ್ತು ಒಂದು ಕಡೆ ಸೇರಬೇಕಾದ ಸಂದರ್ಭಗಳು ಅನಿವಾರ್ಯವಾಗಿ ಉಂಟಾಗುತ್ತದೆ. ಇದರಿಂದ ಜನ ಸಾಮಾನ್ಯರ ಆರೋಗ್ಯದ ರಕ್ಷಣೆಗೆ ಬಾಧಕ ಉಂಟಾಗುತ್ತದೆ. ಹೀಗಾಗಿ ಚುನಾವಣೆ ಮುಂದೂಡಲು ತೀರ್ಮಾನಿಸಲಾಗಿದೆ ಎಂದು ಹೇಳಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:29.06.2020

# ಭಾಗ–6

## ನ್ಯಾಯಾಲಯ ಸುದ್ದಿಗಳು

### 1. ಕೃಷಿ ಉತ್ಪನ್ನ ರವಾನೆ: ರಾಜ್ಯಕ್ಕೆ ನಿರ್ದೇಶನ

ರೈತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ರವಾನಿಸಲು ಕಲ್ಪಿಸಲಾಗಿರುವ ವ್ಯವಸ್ಥೆ ಬಗ್ಗೆ ಸಮಗ್ರ ಮಾಹಿತಿ ನೀಡಿ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ. ಈ ಕುರಿತು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಕೃಷಿ ಕಾರ್ಮಿಕರಿಗೆ ಪಾಸ್ ನೀಡಲಾಗಿದೆಯೇ, ಎಪಿಎಂಸಿಗಳಲ್ಲಿ ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆಯೇ, ಹೊಲಗಳಿಂದ ಸಾಗಾಟಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ವರದಿ ನೀಡಿ ಎಂದು ನ್ಯಾಯಪೀಠ ಸೂಚಿಸಿದೆ. ಮಕ್ಕಳಿಗೆ, ಬಾಣಂತಿಯರಿಗೆ ಹಾಲು ಹಾಗೂ ಇತರೆ ಆಹಾರ ಪದಾರ್ಥ ಪೂರೈಸಲು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆಯೂ ಮುಂದಿನ ವಿಚಾರಣೆ ವೇಳೆಗೆ ತಿಳಿಸಬೇಕು ಎಂದು ನ್ಯಾಯಪೀಠ ತಿಳಿಸಿ, ವಿಚಾರಣೆಯನ್ನು ಏಪ್ರಿಲ್ 7ಕ್ಕೆ ಮುಂದೂಡಿತು.

ಆಧಾರ:ಪ್ರಜಾವಾಣಿ, ದಿನಾಂಕ: 04.04.2020

### 2. ಕೇರಳ ಗಡಿ: ಕ್ರಮಕ್ಕೆ ಮುಂದಾಗಬೇಡಿ

ಕೇರಳ ಹಾಗೂ ಕರ್ನಾಟಕ ಗಡಿ ನಡುವಿನ ರಸ್ತೆ ತೆರವಿಗೆ ಸಂಬಂಧಿಸಿದಂತೆ ಏಪ್ರಿಲ್ 7ರವರೆಗೆ ಯಾವುದೇ ಕ್ರಮಕ್ಕೆ ಮುಂದಾಗಬಾರದು ಎಂದು ಕೇರಳ ರಾಜ್ಯ ಸರ್ಕಾರಕ್ಕೆ ಸುಪ್ರಿಂಕೋರ್ಟ್ ನಿರ್ದೇಶಿಸಿದೆ.

ಕರ್ನಾಟಕ ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಲ್.ನಾಗೇಶ್ವರರಾವ್ ಹಾಗೂ ದೀಪಕ್ ಗುಪ್ತಾ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ಸಮಸ್ಯೆ ಪರಿಹರಿಸುವ ದಿಸೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯದ ಕಾರ್ಯದರ್ಶಿಗಳು, ಕರ್ನಾಟಕ ಮತ್ತು ಕೇರಳ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಚರ್ಚೆ ನಡೆಸಿ ಸೌಹಾರ್ದ ರೀತಿಯಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಬೇಕು ಎಂದು ನ್ಯಾಯಪೀಠ ಸೂಚಿಸಿದೆ. ರಾಜ್ಯದ ಪರವಾಗಿ ಅಡ್ವೋಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಅವರು, ವಾಟ್ಸ್ ಆಪ್ ಕಾಲ್ ಮೂಲಕ ವಿಡಿಯೊ ಕಾನ್ಫರೆನ್ಸ್‌ನಲ್ಲಿ ವಾದ ಮಂಡಿಸಿದ್ದು ವಿಶೇಷವಾಗಿತ್ತು.

ಆಧಾರ:ಪ್ರಜಾವಾಣಿ, ದಿನಾಂಕ: 04.04.2020

### 3. ಉಚಿತ ಪರೀಕ್ಷೆಗೆ ಸುಪ್ರೀಂ ಸೂಚನೆ

ಕೋವಿಡ್–19 ಇರುವುದನ್ನು ದೃಢಪಡಿಸಲು ನಡೆಸುವ ಪರೀಕ್ಷೆಯನ್ನು ಖಾಸಗಿ ಪ್ರಯೋಗಾಲಯಗಳು ಉಚಿತವಾಗಿ ಕೈಗೊಳ್ಳುವಂತೆ ನಿರ್ದೇಶನ ನೀಡಬೇಕು ಎಂದು ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಪರೀಕ್ಷೆ ನಡೆಸಲು ಖಾಸಗಿ ಪ್ರಯೋಗಾಲಯಗಳು ರೂ.4500 ಅನ್ನು ತೆಗೆದುಕೊಳ್ಳಬಾರದು, ಈ ಸಂಕಷ್ಟದ ಸಮಯದಲ್ಲಿ ಖಾಸಗಿ ಆಸ್ಪತ್ರೆಗಳು ಮತ್ತು ಪ್ರಯೋಗಾಲಯಗಳಿಗೆ ಮಹತ್ವದ ಜವಾಬ್ದಾರಿ ಇದೆ. ರಾಷ್ಟ್ರವು ಬಿಕ್ಕಟ್ಟು ಎದುರಿಸುತ್ತಿರುವಾಗ ಸಮಾಜ ಸೇವೆಯೇ ಮುಖ್ಯ ಧ್ಯೇಯ ಎನ್ನುವುದನ್ನು ಅರಿತುಕೊಳ್ಳಬೇಕು ಎಂದು ಹೇಳಿದೆ.

ಎನ್‌ಎಬಿಎಲ್ ಮಾನ್ಯತೆ ಹೊಂದಿರುವ ಪ್ರಯೋಗಾಲಯಗಳಲ್ಲಿ ಅಥವಾ ಐಸಿಎಂಆರ್‌ನಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಪರೀಕ್ಷೆ ಕೈಗೊಳ್ಳುವಂತೆ ಸೂಚಿಸಿದೆ. ಈ ಬಗ್ಗೆ ನಿಗಾ ವಹಿಸಲು ವ್ಯವಸ್ಥೆಯೊಂದನ್ನು ರೂಪಿಸಬೇಕು. ಖಾಸಗಿ ಲ್ಯಾಬ್‌ಗಳು ಆಕರಿಸುವ ಶುಲ್ಕವನ್ನು ಜನರಿಗೆ ಮರುಪಾವತಿ ಮಾಡಬೇಕು ಎಂದು ನ್ಯಾಯಪೀಠ ಸೂಚನೆ ನೀಡಿತು. ಪ್ರಕರಣಗಳು ಹೆಚ್ಚುತ್ತಿರುವ ಕಾರಣ, ರೋಗ ಪತ್ತೆ ಪರೀಕ್ಷೆ ಸೌಲಭ್ಯವನ್ನು ಉಚಿತವಾಗಿ ಒದಗಿಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡುವಂತೆ ಕೋರಿ ವಕೀಲ ಶಶಾಂಕದೇವ್ ಸುಧಿ ಎಂಬುವವರು ಅರ್ಜಿ ಸಲ್ಲಿಸಿದ್ದರು. ಪರೀಕ್ಷೆಗೆ ದುಬಾರಿ ಶುಲ್ಕ ನೀಡಬೇಕಾಗುತ್ತದೆ. ಹೀಗಾಗಿ ಉಚಿತವಾಗಿಯೇ ಪರೀಕ್ಷೆ ನಡೆಸಬೇಕು ಎಂದು ಅರ್ಜಿದಾರ ಸುಧಿ ಪ್ರತಿಪಾದಿಸಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ: 09.04.2020

## 4. ಕೋವಿಡ್ ಎದುರಿಸಲು ಸಿದ್ಧತೆ

ಒಂದು ವೇಳೆ ಈ ತಿಂಗಳ ಅಂತ್ಯಕ್ಕೆ ರಾಜ್ಯದಲ್ಲಿ 10 ಸಾವಿರ ಕೊರೊನಾ ಸೋಂಕಿತ ಪ್ರಕರಣಗಳಾದರೂ ಅಂತಹ ಸಂದರ್ಭವನ್ನು ಸಮರ್ಥವಾಗಿ ಎದುರಿಸಲು ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ. ಕೊರೊನಾ ವೈರಸ್ ಸೋಂಕು ಹಿನ್ನೆಲೆಯಲ್ಲಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಈ ಕುರಿತಂತೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ್ ಹುಯಿಲಗೋಳ ಅವರು ನ್ಯಾಯಪೀಠಕ್ಕೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿರುವ ನ್ಯಾಯಪೀಠ, ಅಂಕಿ–ಅಂಶಗಳನ್ನು ಗಮನಿಸಿದರೆ ಗಣನೀಯ ಕೊರತೆ ಕಂಡು ಬರುತ್ತಿದೆ ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿದೆ. ಸೌಕರ್ಯಗಳ ಸಮ ಪ್ರಮಾಣದ ಹಂಚಿಕೆ ಮತ್ತು ಲಭ್ಯತೆಯನ್ನು ಖಾತರಿಪಡಿಸಬೇಕು ಎಂದು ಸರ್ಕಾರಕ್ಕೆ ಸೂಚಿಸಿದೆ.

**ಸರ್ಕಾರ ಹೇಳಿರುವ ಮುಖ್ಯಾಂಶಗಳು:**

- ಈಗಾಗಲೇ ಸಾಕಷ್ಟು ಪ್ರಮಾಣದಲ್ಲಿ ಎನ್–95 ಮಾಸ್ಕ್, ಮೂರು ಪದರದ ಮಾಸ್ಕ್, ಪಿಪಿಇ ಕಿಟ್‌ಗಳು, ಸ್ಯಾನಿಟೈಸರ್‌ಗಳು ಇವೆ.
- ಆಪತ್ಕಾಲಿನ ಯೋಜನೆ ಅಂದಾಜಿನ ಪ್ರಕಾರ ಈ ತಿಂಗಳ ಅಂತ್ಯಕ್ಕೆ ಪ್ರಕರಣಗಳು 10 ಸಾವಿರ ಮುಟ್ಟಿದರೂ ಸಂಭವನೀಯ ಪರಿಸ್ಥಿತಿ ಎದುರಿಸಲು ಅಗತ್ಯ ವಸ್ತುಗಳ ಪೂರೈಕೆಗೆ ಎಲ್ಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.
- ಮುಂದಿನ ಎರಡು ವಾರಗಳಲ್ಲಿ ಹೆಚ್ಚುವರಿ 5 ಲ್ಯಾಬ್ ಸ್ಥಾಪಿಸಲಾಗುವುದು.
- ಈಗಾಗಲೇ 1,574 ವೆಂಟಿಲೇಟರ್ ಖರೀದಿಗೆ ಆದೇಶಿಸಲಾಗಿದೆ.
- ಆಪತ್ಕಾಲಿನ ಯೋಜನೆ ಅಂದಾಜಿನ ಪ್ರಕಾರ 18.33 ಲಕ್ಷ ಎನ್–95 ಮಾಸ್ಕ್ ಪೂರೈಕೆಗೆ ಆದೇಶ ನೀಡಲಾಗಿದೆ. ಈತನಕ 5,46,700 ಮಾಸ್ಕ್‌ಗಳನ್ನು ಸ್ವೀಕರಿಸಲಾಗಿದೆ.
- 10.50 ಲಕ್ಷ ಪಿಪಿಇ ಕಿಟ್‌ಗಳ ಪೈಕಿ 1,82,600 ಸ್ವೀಕರಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 11.04.2020

## 5. ಕೋರ್ಟ್‌ಗಳ ಬೇಸಿಗೆ ರಜೆ ರದ್ದು

ಲಾಕ್‌ಡೌನ್ ಹಿನ್ನೆಲೆಯಲ್ಲಿ ಮಾರ್ಚ್ 24ರಿಂದ ಮೇ 3ರವರೆಗೆ ಹೈಕೋರ್ಟ್ ಸೇರಿದಂತೆ ರಾಜ್ಯದ ಎಲ್ಲ ಕೋರ್ಟ್‌ಗಳಿಗೂ ರಜೆ ಘೋಷಿಸಿರುವ ಕಾರಣ ಈ ವರ್ಷದ ಬೇಸಿಗೆ ರಜೆ ರದ್ದುಪಡಿಸಲಾಗಿದೆ. ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿಯ (ಕೆಎಟಿ) ಬೇಸಿಗೆ ರಜೆಯನ್ನು ಎರಡು ವಾರಕ್ಕೆ ಸೀಮಿತಗೊಳಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 18.04.2020

## 6. ಮೀಸಲಾತಿ ಪಟ್ಟಿ ಪರಿಷ್ಕರಣೆ ಸರ್ಕಾರಗಳ ಕರ್ತವ್ಯ: ಸುಪ್ರೀಂಕೋರ್ಟ್

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಅಗತ್ಯವಿರುವವರಿಗೆ ಮೀಸಲಾತಿಯ ಅನುಕೂಲಗಳು ದೊರೆಯುವಂತೆ ಮಾಡಲು, ಮೀಸಲಾತಿ ಪಟ್ಟಿಯನ್ನು ಪರಿಷ್ಕರಿಸಬೇಕು. ಇದು ಸರ್ಕಾರದ ಕರ್ತವ್ಯ ಎಂದು ಸುಪ್ರೀಂಕೋರ್ಟ್ ಹೇಳಿದೆ. ನ್ಯಾಯಮೂರ್ತಿ ಅರುಣ್ ಮಿಶ್ರಾ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠವು ಈ ಆದೇಶ ನೀಡಿದೆ. ಮೀಸಲಾತಿಯ ಫಲಾನುಭವಿಗಳಾಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದೊಳಗೆ ಹಲವು ತೊಡಕುಗಳಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲೇ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿದ ವರ್ಗಗಳಿವೆ. ಆದರೆ, ಈ ಜಾತಿ ಮತ್ತು ಪಂಗಡಗಳಲ್ಲಿ ಕೆಲವು ವರ್ಗಗಳು ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣದ ಕಾರ್ಯಕ್ರಮಗಳಿಂದ ವಂಚಿತವಾಗಿವೆ. ವಂಚಿತವಾದ ವರ್ಗಗಳಿಗೆ ಮೀಸಲಾತಿಯ ಅನುಕೂಲಗಳು ದೊರೆಯುತ್ತಿಲ್ಲ ಎಂದು ಪೀಠವು ಅಭಿಪ್ರಾಯಪಟ್ಟಿದೆ.

ಮೀಸಲಾತಿಯ ಪ್ರಮಾಣವನ್ನು ಬದಲಿಸದೆಯೇ, ಮೀಸಲಾತಿ ಪಟ್ಟಿಯನ್ನು ಪರಿಷ್ಕರಿಸಲು ಸಾಧ್ಯವಿದೆ. 70 ವರ್ಷಗಳಿಂದ ಮೀಸಲಾತಿಯಿಂದ ಮತ್ತು ಮೀಸಲಾತಿಯ ವ್ಯಾಪ್ತಿಗೆ ಬಂದ ನಂತರ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿದವರಿಗೆ ಮೀಸಲಾತಿಯ ಅನುಕೂಲ ದೊರೆಯದಂತೆ ತಡೆಯಬಹುದು. ನಂತರ ನಿಜವಾಗಿಯೂ ಮೀಸಲಾತಿಗೆ ಅರ್ಹರಾದವರಿಗೆ ಅದರ ಪ್ರಯೋಜನ ದೊರೆಯುವಂತೆ ಮಾಡಬಹುದು. ಸರ್ಕಾರಗಳು ಈ ದಿಸೆಯಲ್ಲಿ ಕೆಲಸ ಮಾಡಬೇಕು ಎಂದು ಪೀಠವು ಹೇಳಿದೆ. ರಾಜ್ಯಪಟ್ಟಿಯ ಅಡಿ ರಾಜ್ಯ ಸರ್ಕಾರಗಳು ನೀಡುತ್ತಿರುವ ಮೀಸಲಾತಿಯನ್ನು ಬದಲಿಸಬಹುದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ 9 ಸದಸ್ಯರ ಪೀಠ ಹೇಳಿತ್ತು. ಸರ್ಕಾರಗಳು ಮೀಸಲಾತಿ ಪಟ್ಟಿಯನ್ನು ಪರಿಷ್ಕರಿಸುವುದು ಕಡ್ಡಾಯ, ಮೀಸಲಾತಿ ಪರಿಷ್ಕರಣೆಗೆ ಸಂವಿಧಾನದ ಬೆಂಬಲವಿರುತ್ತದೆ ಎಂದು ಈ ಪೀಠವು ಹೇಳಿದೆ.

ಆಂಧ್ರಪ್ರದೇಶ ಸರ್ಕಾರವು ತನ್ನ ಗುಡ್ಡಗಾಡು ಜಿಲ್ಲೆಗಳಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಶೇ.100ರಷ್ಟು ಹುದ್ದೆಗಳನ್ನು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿಡಲು ಮುಂದಾಗಿತ್ತು. ಈ ಸಂಬಂಧ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಂತರ ಸರ್ಕಾರದ ಈ ನಿರ್ಧಾರಕ್ಕೆ ಪೀಠವು ತಡೆ ನೀಡಿದೆ.

ಒಂದೇ ವರ್ಗಕ್ಕೆ ಶೇ.100ರಷ್ಟು ಮೀಸಲಾತಿ ನೀಡುವುದು ಸಂವಿಧಾನಕ್ಕೆ ವಿರುದ್ಧವಾದುದು ಮತ್ತು ನಾಗರಿಕರ ಮೂಲಭೂತ ಹಕ್ಕುಗಳ ಉಲ್ಲಂಘನೆ. ಮೀಸಲಾತಿಯ ವ್ಯಾಪ್ತಿಯಲ್ಲಿ ಬರುವ ವರ್ಗಗಳಲ್ಲೇ ಅಗತ್ಯವಿರುವವರಿಗೆ ಮೀಸಲಾತಿ ದೊರೆಯುವಂತೆ ಮಾಡಬೇಕು ಎಂದು ಪೀಠವು ಹೇಳಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 24.04.2020

## 7. ಆರೋಗ್ಯ ಕಾರ್ಯಕರ್ತರ ರಕ್ಷಣೆ ಮಾಹಿತಿ

ಕೋವಿಡ್–19 ಕರ್ತವ್ಯಕ್ಕೆ ತೆರಳುವ ಆರೋಗ್ಯ ಕಾರ್ಯಕರ್ತರು ಹಾಗೂ ಇತರ ಸಿಬ್ಬಂದಿ ಜೊತೆಗೆ ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ ಸಶಸ್ತ್ರ ಪೊಲೀಸರನ್ನು ನಿಯೋಜಿಸುವ ಬಗ್ಗೆ ರಾಜ್ಯದ ಎಲ್ಲ ಪೋಲಿಸ್ ಠಾಣೆಗಳಿಗೆ ಸೂಚನೆ ನೀಡಲಾಗಿದೆ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ. ಈ ಕುರಿತಂತೆ ವಕೀಲೆ ಗೀತಾ ಮಿಶ್ರಾ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಅಭಯ್ ಎಸ್.ಓಕಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ವೇಳೆ ಸರ್ಕಾರಿ ವಕೀಲ ವಿಕ್ರಂ ಹುಯಿಲಗೋಳ ಲಿಖಿತ ಹೇಳಿಕೆ ಸಲ್ಲಿಸಿದರು. ಆರೋಗ್ಯ ಕಾರ್ಯಕರ್ತರು ತೆರಳುವ ಸ್ಥಳದ ಬಗ್ಗೆ ಮುಂಚಿತವಾಗಿ ಮಾಹಿತಿ ಪಡೆಯಲಾಗುತ್ತದೆ. ಅಲ್ಲಿನ ಪರಿಸ್ಥಿತಿಗೆ ಅನುಗುಣವಾಗಿ ಸಶಸ್ತ್ರ ಪೊಲೀಸರನ್ನು ನಿಯೋಜಿಸುವ ಬಗ್ಗೆ ಸೂಚಿಸಲಾಗಿದೆ ಎಂದು ತಿಳಿಸಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ: 25.04.2020

## 8. ಹೈಕೋರ್ಟ್ ನ್ಯಾಯಮೂರ್ತಿಯಾಗಿ ಎಸ್.ವಿಶ್ವಜಿತ್ ಶೆಟ್ಟಿ ನೇಮಕ

ರಾಜ್ಯ ಹೈಕೋರ್ಟ್‌ಗೆ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಎಸ್.ವಿಶ್ವಜಿತ್ ಶೆಟ್ಟಿ ಅವರನ್ನು ನೇಮಕ ಮಾಡಲಾಗಿದೆ. ಸುಪ್ರೀಂಕೋರ್ಟ್ ಕೊಲಿಜಿಯಂ ಶಿಫಾರಸ್ಸು ಆಧಾರಿಸಿ ರಾಷ್ಟ್ರಪತಿ ಅವರ ಆದೇಶಾನುಸಾರ ಕೇಂದ್ರ ಸರ್ಕಾರ ನೇಮಕ ಮಾಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 25.04.2020

## 9. ವಲಸೆ ಕಾರ್ಮಿಕರ ಕುರಿತ ಅರ್ಜಿ ವಿಚಾರಣೆ – ಪ್ರಶಾಂತ್ ವಿರುದ್ಧ ಕಿಡಿಕಾರಿದ ಸುಪ್ರೀಂಕೋರ್ಟ್

ನ್ಯಾಯಾಂಗ ಸರ್ಕಾರದ ಒತ್ತೆಯಾಳು ಅಲ್ಲ ಎಂದು ಸುಪ್ರೀಂಕೋರ್ಟ್ ಕಿಡಿಕಾರಿದೆ. ದೇಶದಾದ್ಯಂತ ಸಿಲುಕಿರುವ ವಲಸೆ ಕಾರ್ಮಿಕರಿಗೆ ಕೊರೊನಾ ವೈರಸ್ ಪರೀಕ್ಷೆಯ ಬಳಿಕ ಸ್ವಗ್ರಾಮಗಳಿಗೆ ಹಿಂತಿರುಗಲು ಅನುಮತಿ ನೀಡಬೇಕು. ಈ ಕುರಿತು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ತಿಳಿಸಿತು.

ಲಾಕ್‌ಡೌನ್ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ವಲಸೆ ಕಾರ್ಮಿಕರ ಬಗ್ಗೆ ಕಣ್ಣುಮುಚ್ಚಿ ಕುಳಿತಿದೆ. ಶೇ.90ರಷ್ಟು ಕಾರ್ಮಿಕರಿಗೆ ವೇತನವಾಗಲೀ, ಪಡಿತರವಾಗಲೀ ದೊರಕಿಲ್ಲ. ಹತಾಶ ಸ್ಥಿತಿಯಲ್ಲಿರುವ ಕಾರ್ಮಿಕರಿಗೆ ತಮ್ಮ ಮನೆಗಳಿಗೆ ಹಿಂತಿರುಗಲು ಅನುಮತಿ ನೀಡಬೇಕೆಂದು ಅರ್ಜಿದಾರರ ಪರ ವಕೀಲ ಪ್ರಶಾಂತ್ ಭೂಷಣ್

ಕೋರಿದರು. ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಸರ್ಕಾರವು ವಲಸೆ ಕಾರ್ಮಿಕರ ಪರ ಕಾಳಜಿ ಹೊಂದಿದ್ದು, ಅವರಿಗೆ ಅಗತ್ಯ ಸಹಾಯವನ್ನು ಮಾಡಲು ಯತ್ನಿಸುತ್ತಿದೆ. ಈ ನಿಟ್ಟಿನಲ್ಲಿ ಆಯಾ ರಾಜ್ಯಗಳೊಂದಿಗೆ ಸಮಾಲೋಚಿಸುತ್ತಿದೆ. ಪ್ರಶಾಂತ್ ಅವರು ತಮ್ಮ ಅರ್ಜಿದಾರರು ನೀಡಿದ ಮಾಹಿತಿ ಆಧಾರದ ಮೇಲೆ ತಪ್ಪಾದ ವರದಿಗಳನ್ನು ನೀಡುತ್ತಿದ್ದಾರೆ ಎಂದು ದೂರಿದರು.

ಈ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಾಲಯವು ಸರ್ಕಾರಕ್ಕೆ ಯಾವುದೇ ನೋಟಿಸ್ ಅಥವಾ ನಿರ್ದೇಶನ ನೀಡಬಾರದು ಎಂದು ಮೆಹ್ತಾ ಅವರು ಮನವಿ ಮಾಡಿದರು. ಇದು ತಪ್ಪು ಸಂದೇಶಕ್ಕೆ ಎಡೆ ಮಾಡಿಕೊಡುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ವಾರದೊಳಗೆ ಉತ್ತರಿಸುವುದಾಗಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳಾದ ಎನ್.ವಿ.ರಮಣ, ಸಂಜಯ್ ಕಿಶನ್ ಕೌಲ್ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ಪೀಠವು, ಸರ್ಕಾರಕ್ಕೆ ಒಂದುವಾರ ಕಾಲಾವಕಾಶ ನೀಡುವುದಾಗಿ ಹೇಳಿತು. ಅರ್ಜಿದಾರರಾದ ಅಹಮದಾಬಾದ್ ಐಐಎಂನ ಮಾಜಿ ನಿರ್ದೇಶಕ ಜಗದೀಪ್ ಎಸ್.ಚೋಕರ್, ವಕೀಲ ಗೌರವ್ ಜೈನ್ ಅವರ ಪರ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿದರು.

ಆಧಾರ:ಪ್ರಜಾವಾಣಿ , ದಿನಾಂಕ:28.04.2020

## 10. ವಿಡಿಯೋ ಕಾನ್ಫರೆನ್ಸ್ ವಿಚಾರಣೆ ಸಹಾಯವಾಣಿ ಆರಂಭ

ಲಾಕ್‌ಡೌನ್ ಪರಿಣಾಮ ಕೋರ್ಟ್‌ಗಳ ಕಲಾಪ ಸ್ಥಗಿತಗೊಂಡಿರುವುದರಿಂದ ತುರ್ತು ಅರ್ಜಿಗಳನ್ನು ಇ–ಫೈಲಿಂಗ್ ಮೂಲಕ ದಾಖಲಿಸಲು ಮತ್ತು ವಿಡಿಯೋ ಕಾನ್ಫರೆನ್ಸ್‌ನಲ್ಲಿ ವಿಚಾರಣೆ ನಡೆಸಲು ಹೈಕೋರ್ಟ್ ಸಹಾಯವಾಣಿ ಆರಂಭಿಸಿದೆ. ಇದರಿಂದ ವಕೀಲರಿಗೆ ಸ್ವಯಂವಾದ ಮಂಡಿಸುವವರಿಗೆ ಮತ್ತು ವ್ಯಾಜ್ಯಕರ್ತರಿಗೆ ಅಗತ್ಯ ಮಾರ್ಗದರ್ಶನ ಸಿಗಲಿದೆ. ಸುಪ್ರೀಂಕೋರ್ಟ್ ಏಪ್ರಿಲ್ 6ರಂದು ಹೊರಡಿಸಿದ ಆದೇಶದ ಮೇರೆಗೆ ಹೈಕೋರ್ಟ್ ಬೆಂಗಳೂರು ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರ್ಗಿ ಪೀಠಗಳಲ್ಲಿ ಈ ಸಹಾಯವಾಣಿ ಆರಂಭಿಸಲಾಗಿದ್ದು, ಅರ್ಜಿ ಸಲ್ಲಿಸುವವರು ಬೆಂಗಳೂರು ಪ್ರಧಾನ ಪೀಠ 14620, ಧಾರವಾಡ 14621 ಮತ್ತು ಕಲಬುರ್ಗಿ ಪೀಠ 14622 ಸಹಾಯವಾಣಿಗೆ ಕೋರ್ಟ್ ಕಛೇರಿ ಸಮಯದಲ್ಲಿ ಕರೆ ಮಾಡಬಹುದು ಎಂದು ರಿಜಿಸ್ಟ್ರಾರ್ ಜನರಲ್ ರಾಜೇಂದ್ರ ಬಾದಾಮಿಕರ ಪ್ರಕಟಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:28.04.2020

## 11. ನೈಸ್ ವಾದಕ್ಕೆ ಸುಪ್ರೀಂನಲ್ಲಿ ಹಿನ್ನಡೆ

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಮತ್ತು ರಾಜ್ಯ ಸರ್ಕಾರದ ಒಪ್ಪಂದದಲ್ಲಿ ಅಡಕವಾಗಿರುವ ಅಂಶಗಳಿಗೆ ಬದ್ಧವಾಗಿ ವಸತಿ ಯೋಜನೆಗಳನ್ನು ಜಾರಿ ಮಾಡಬೇಕು. ಸರ್ಕಾರದ ಅನುಮತಿ ಇಲ್ಲದೆ ತಮ್ಮಿಷ್ಟದಂತೆ ಯೋಜನೆ ಅನುಷ್ಠಾನಕ್ಕೆ ಮುಂದಾಗುವುದನ್ನು ಒಪ್ಪಲಾಗದು ಎಂದು ಸುಪ್ರೀಂಕೋರ್ಟ್ ತೀರ್ಪು ನೀಡಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎ.ಎಂ.ಖಾನ್ವಿಲ್ಕರ್ ಹಾಗೂ ದಿನೇಶ್ ಮಹೇಶ್ವರಿ ಅವರಿದ್ದ ಪೀಠ, ಒಪ್ಪಂದದಲ್ಲಿ ಇಲ್ಲದ ಅಂಶಗಳಿಗೆ ಜಮೀನು ಬಳಕೆ ಮಾಡಬೇಕೆಂದಿದ್ದರೆ ಸರ್ಕಾರ ಮತ್ತು ಯೋಜನಾ ಪ್ರಾಧಿಕಾರದ ಅನುಮತಿ ಅವಶ್ಯಕ. ಯೋಜನೆದಾರರ ಉದ್ದೇಶ ಹಾಗೂ ಪ್ರಸ್ತಾವನೆಗೆ 6 ತಿಂಗಳೊಳಗೆ ಸರ್ಕಾರ ತನ್ನ ನಿರ್ಧಾರ ತಿಳಿಸಬೇಕು. ಇದಾದ ಬಳಿಕವಷ್ಟೇ ಯೋಜನೆ ಬಗ್ಗೆ ಯೋಜನಾ ಪ್ರಾಧಿಕಾರಕ್ಕೆ ಯೋಜನೆದಾರರು ಮನವಿ ಸಲ್ಲಿಸಬೇಕು ಎಂದು ಸ್ಪಷ್ಟಪಡಿಸಿದೆ.

ಮೂಲ ಒಪ್ಪಂದದಲ್ಲಿ ದಾಖಲಾಗಿರದ ಅಂಶಗಳನ್ನು ರಾಜ್ಯ ಸರ್ಕಾರ ಮತ್ತು ಬೆಂಗಳೂರು–ಮೈಸೂರು ಮೂಲಸೌಕರ್ಯ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಒಪ್ಪಿಗೆ ಪಡೆಯದೆ ವಸತಿ ಯೋಜನೆ ಕೈಗೆತ್ತಿಕೊಳ್ಳಲು ನೈಸ್ ಮುಂದಾಗಿತ್ತು. ಆದರೆ, ಈ ಕ್ರಮವನ್ನು ಸುಪ್ರೀಂಕೋರ್ಟ್ ತಳ್ಳಿಹಾಕಿರುವುದರಿಂದ ನೈಸ್ ಸಂಸ್ಥೆಗೆ ಹಿನ್ನಡೆಯಾಗಿದೆ. 2012ರಲ್ಲಿ 53.5 ಎಕರೆ ಭೂಮಿಯಲ್ಲಿ ಸಮೂಹ ವಸತಿ ಯೋಜನೆ ಕೈಗೆತ್ತಿಕೊಳ್ಳಲು ಯೋಜನಾ ಪ್ರಾಧಿಕಾರದ ಬಳಿ ನೈಸ್ ಅನುಮತಿ ಕೇಳಿತ್ತು. ಇದರಲ್ಲಿ ಕೆಲ ಭೂಮಿಗಳ ಸೇಲ್‌ಡೀಡ್ ಆಗಿರಲಿಲ್ಲ. 42.30 ಎಕರೆ ಭೂಮಿಯಲ್ಲಿ ಪರಿಷ್ಕೃತ ಯೋಜನೆ ಬಗ್ಗೆ ನೈಸ್ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪ್ರಾಧಿಕಾರ

ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ನೈಸ್ ಸಂಸ್ಥೆ ಹೈಕೋರ್ಟ್ ಮೆಟ್ಟಿಲೇರಿತ್ತು. ಹೈಕೋರ್ಟ್ ನೈಸ್‌ವಾದ ಪುರಸ್ಕರಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸರ್ಕಾರ ಸುಪ್ರೀಂಕೋರ್ಟ್ ಮೆಟ್ಟಿಲೇರಿತ್ತು.

ಆಧಾರ:ವಿಜಯವಾಣಿ, ದಿನಾಂಕ:20.05.2020

## 12. ಮಾಧ್ಯಮಗಳ ಸ್ವಾತಂತ್ರ್ಯ ಪ್ರಶ್ನಾತೀತವೆಂದ ಸುಪ್ರೀಂ

ಪತ್ರಕರ್ತರಿಗೆ ಹೆಚ್ಚಿನ ಹಕ್ಕಿದೆ. ಮಾಧ್ಯಮದವರು ಮಾತನಾಡಲು ಸಾಧ್ಯವಾಗದಿದ್ದರೆ ನಾಗರಿಕರು ಅಸ್ತಿತ್ವದಲ್ಲೇ ಉಳಿಯುವುದಿಲ್ಲ. ಆದ್ದರಿಂದ ಪತ್ರಿಕೋದ್ಯಮದ ಸ್ವಾತಂತ್ರ್ಯವನ್ನು ಕಟ್ಟಿಹಾಕುವ ಪ್ರಯತ್ನ ಸಲ್ಲದು ಎಂದು ಹಿರಿಯ ಪತ್ರಕರ್ತ ಅರ್ನಾಬ್ ಗೋಸ್ವಾಮಿ ವಿರುದ್ಧದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ. ಅರ್ನಾಬ್ ವಿರುದ್ಧ ವಿವಿಧ ರಾಜ್ಯಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ದಾಖಲಿಸಿದ್ದ 14 ಪ್ರಕರಣಗಳ ಪೈಕಿ ಒಂದನ್ನುಳಿದು ಉಳಿದೆಲ್ಲ ದೂರುಗಳಿಗೆ ತಡೆ ನೀಡಿದ್ದ ನ್ಯಾಯಪೀಠ, ಮುಂಬೈ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಲು ಹಾಗೂ ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಲು ನಿರಾಕರಿಸಿದೆ. ಆದರೆ, ಅರ್ನಾಬ್‌ಗೆ ನೀಡಿರುವ ಮಧ್ಯಂತರ ನಿರೀಕ್ಷಣಾ ಜಾಮೀನನ್ನು ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ ನೇತೃತ್ವದ ಪೀಠ ಮೂರು ವಾರ ವಿಸ್ತರಿಸಿದೆ. ಸಂವಿಧಾನದ 32ರ ವಿಧಿ ಅನ್ವಯ ಎಫ್‌ಐಆರ್ ರದ್ದು ಪಡಿಸಲು ಸಾಧ್ಯವಿಲ್ಲ ಮುಂಬೈ ಪೊಲೀಸರಿಗೆ ಪ್ರಕರಣದ ತನಿಖೆ ನಡೆಸುವ ಹಕ್ಕಿದೆ. ಅರ್ಜಿದಾರರು ಈ ಹಕ್ಕನ್ನು ತೆಗೆದುಹಾಕಲು ಬಯಸುವುದಾದರೆ ಸಹಜ ಪ್ರಕ್ರಿಯೆಯ ಮುಖಾಂತರವೇ ಹೋಗಬೇಕು. ಅಂದರೆ ಮೊದಲು ಬಾಂಬೆ ಹೈಕೋರ್ಟ್‌ನ್ನು ಸಂಪರ್ಕಿಸಬೇಕು ಎಂದು ತಿಳಿಸಿದೆ. ವಾಹಿನಿಯ ಕಾರ್ಯಕ್ರಮದಲ್ಲಿ ಕೋಮು ದ್ವೇಷ ಹರಡುವ ಪ್ರಯತ್ನ ಮಾಡಿದ್ದಾರೆ ಎಂದು ಅರ್ನಾಬ್ ವಿರುದ್ಧ ಅನೇಕ ರಾಜ್ಯಗಳಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:20.05.2020

## 13. ಮಾರ್ಗಸೂಚಿ ಪಾಲನೆ ಬಗ್ಗೆ ವಿವರಣೆ ನೀಡಿ

ಪಿಪಿಇ ಕಿಟ್‌ಗಳ ತಯಾರಿಕೆ, ಖರೀದಿ ಹಾಗೂ ವಿತರಣೆ ಸಂಬಂಧ ಕೇಂದ್ರ ಆರೋಗ್ಯ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿ ಪಾಲಿಸುತ್ತಿರುವ ಬಗ್ಗೆ ವಿವರಣೆ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ. ಡಾ: ರಾಜೀವ್ ರಮೇಶ್ ಗೋಥೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ಪೀಠ ಈ ಸೂಚನೆ ನೀಡಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ವಾದ ಮಂಡಿಸಿ, ರಾಜ್ಯದಲ್ಲಿ ಪಿಪಿಇ ಕಿಟ್‌ಗಳ ತಯಾರಿಕೆ, ಖರೀದಿ ಮತ್ತು ವಿತರಣೆಗೆ ನಿರ್ದಿಷ್ಟ ಮಾನದಂಡಗಳಿಲ್ಲ. ಈ ವಿಚಾರದಲ್ಲಿ ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿ ಪಾಲಿಸಲಾಗುತ್ತಿಲ್ಲ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಈ ಕುರಿತು ವಿವರಣೆ ನೀಡುವಂತೆ ಸರ್ಕಾರಕ್ಕೆ ಸೂಚಿಸಿದ ಪೀಠ ಮೇ 28ಕ್ಕೆ ವಿಚಾರಣೆ ಮುಂದೂಡಿತು.

ಆಧಾರ:ವಿಜಯವಾಣಿ, ದಿನಾಂಕ: 27.05.2020

## 14. ಭೂ ನ್ಯಾಯಮಂಡಳಿ ರಚನೆ

ನೆನೆಗುದಿಗೆ ಬಿದ್ದಿದ್ದ 164 ತಾಲ್ಲೂಕುಗಳಲ್ಲಿ ಭೂ ನ್ಯಾಯಮಂಡಳಿ ರಚಿಸಲು ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೂಚನೆ ನೀಡಿದ್ದಾರೆ. ಕಂದಾಯ ಹಾಗೂ ಮುಜರಾಯಿ ಇಲಾಖೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಸಿಎಂ, ಬಹಳ ಮುಖ್ಯವಾಗಿರುವ ಈ ಇಲಾಖೆ, ಇನ್ನಷ್ಟು ಕ್ರಿಯಾಶೀಲವಾಗಲು ಮುಂದಾಗಬೇಕು ಎಂದರು. ಡ್ರೋಣ್ ಆಧಾರಿತ ಸರ್ವೇ ಸಮಿತ್ವ ಯೋಜನೆಯಡಿ 16,000 ಗ್ರಾಮಗಳನ್ನು ಗುರುತಿಸಲಾಗಿದೆ. ಗ್ರಾಮ ನಿವಾಸಿಗಳಿಗೆ ಅವರ ವಾಸಸ್ಥಳದ ಆಸ್ತಿಗಳಿಗೆ ಪ್ರಾಪರ್ಟಿ ಕಾರ್ಡ್ ವಿತರಿಸುವ ಯೋಜನೆ ಇದಾಗಿದೆ. ದೇಶದ 7 ರಾಜ್ಯಗಳ ಪೈಕಿ ಕರ್ನಾಟಕದಲ್ಲೂ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದ್ದು, ಇದನ್ನು ತ್ವರಿತವಾಗಿ ಕಾರ್ಯಗತಗೊಳಿಸಲು ಕ್ರಮಕೈಗೊಳ್ಳಬೇಕೆಂದು ಎಂದು ಮುಖ್ಯಮಂತ್ರಿ ಸೂಚಿಸಿದರು. ಕೈಗೆಟುಕುವ ದರಗಳ ಮನೆಗಳನ್ನು ಪ್ರೋತ್ಸಾಹಿಸಲು ರೂ.20 ಲಕ್ಷ ಮೌಲ್ಯದ ಅಪಾರ್ಟ್‌ಮೆಂಟ್‌ಗಳ ಮೊದಲ ನೋಂದಣಿಗೆ ಮುದ್ರಾಂಕ ಶುಲ್ಕವನ್ನು ಶೇ.5 ರಿಂದ 2ಕ್ಕೆ ಇಳಿಸಲು ಹಾಗೂ ರೂ.35 ಲಕ್ಷ ಮೌಲ್ಯದವರೆಗಿನ ನೋಂದಣಿ ಶೇ.5 ರಿಂದ ಶೇ.3ಕ್ಕೆ ಇಳಿಸಲು ಸರ್ಕಾರ ತೀರ್ಮಾನಿಸಿದೆ.

ಈ ಬಗ್ಗೆ ಮುಖ್ಯಮಂತ್ರಿ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಕೋವಿಡ್– 19 ಹಿನ್ನೆಲೆಯಲ್ಲಿ 2020–21ನೇ ಸಾಲಿನಲ್ಲಿ ರೂ.3524 ಕೋಟಿಯಷ್ಟು ಕಡಿಮೆ ರಾಜಸ್ವ ಸಂಗ್ರಹ ಆಗಬಹುದೆಂದು ಅಂದಾಜಿಸಲಾಗಿದೆ. ಸಚಿವರುಗಳಾದ ಆರ್.ಅಶೋಕ, ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಎಸ್.ಆರ್. ವಿಶ್ವನಾಥ್, ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಸಭೆಯಲ್ಲಿದ್ದರು.

ಆಧಾರ:ವಿಜಯವಾಣಿ, ದಿನಾಂಕ:27.05.2020

## 15. ಕೋರ್ಟ್‌ಗಳಿಗೆ ಮಾರ್ಗಸೂಚಿ

ಲಾಕ್‌ಡೌನ್ ಸಡಿಲಿಕೆಯಿಂದಾಗಿ ಜೂನ್ 1ರಿಂದ ಕೋರ್ಟ್‌ಗಳ ದೈನಂದಿನ ಕಲಾಪ ಆರಂಭಗೊಳ್ಳುವ ಹಿನ್ನೆಲೆಯಲ್ಲಿ ಜಿಲ್ಲಾ ನ್ಯಾಯಾಲಯಗಳಿಗೆ 38 ಅಂಶಗಳ ಮಾರ್ಗಸೂಚಿ ಪ್ರಕಟಿಸಲಾಗಿದೆ. ಹೈಕೋರ್ಟ್ ರಿಜಿಸ್ಟಾರ್ ಜನರಲ್ ರಾಜೇಂದ್ರ ಬದಾಮಿಕರ್ ಮಾರ್ಗಸೂಚಿ ಪ್ರಕಟಿಸಿದ್ದು, ರಾಜ್ಯದ ಎಲ್ಲ ಜಿಲ್ಲಾ ನ್ಯಾಯಾಲಯಗಳಿಗೂ ಸುತ್ತೋಲೆ ಕಳುಹಿಸಲಾಗಿದೆ. ಪ್ರತಿ ಕೋರ್ಟ್ ಹಾಲ್‌ಗಳಲ್ಲಿ 20ಕ್ಕಿಂತ ಹೆಚ್ಚು ವಕೀಲರು, ಸಿಬ್ಬಂದಿ ಇರುವಂತಿಲ್ಲ. ಒಂದು ವೇಳೆ ಇದ್ದರೆ ಕೋರ್ಟ್ ಕಲಾಪ ಸ್ಥಗಿತಗೊಳಿಸಬೇಕಾಗುತ್ತದೆ. ಮೊದಲೆರಡು ವಾರ ಸಾಕ್ಷ್ಯ ವಿಚಾರಣೆಗೆ ಅವಕಾಶವಿಲ್ಲ. ಕೇವಲ ವಕೀಲರ ವಾದ ಮಂಡನೆಗಷ್ಟೇ ಅವಕಾಶ ನೀಡಲಾಗುವುದು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಕೆಮ್ಮು, ನೆಗಡಿ, ಜ್ವರ ಇದ್ದವರಿಗೆ ಕೋರ್ಟ್‌ಗೆ ಪ್ರವೇಶವಿಲ್ಲ. ಕಕ್ಷಿದಾರರ ಪ್ರವೇಶಕ್ಕೆ ನಿರ್ಬಂಧವಿರಲಿದ್ದು, ಕೋರ್ಟ್‌ಗಳಿಗೆ ಬರುವ ವಕೀಲರು ತಾವು ಹೊರದೇಶ, ಹೊರ ರಾಜ್ಯ ಹಾಗೂ ನಿರ್ಬಂಧಿತ ವಲಯಕ್ಕೆ ಭೇಟಿ ನೀಡಿಲ್ಲವೆಂದು ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ. ವಕೀಲರು, ನ್ಯಾಯಾಧೀಶರು ಮಾಸ್ಕ್ ಧರಿಸಬೇಕು. ವಕೀಲರು, ಸಿಬ್ಬಂದಿ 1 ಮೀಟರ್ ಅಂತರ ಕಾಯ್ದುಕೊಳ್ಳಬೇಕು. ಬೆಳಗ್ಗೆ 10 ಹಾಗೂ ಮಧ್ಯಾಹ್ನ 10 ಪ್ರಕರಣಗಳನ್ನು ಮಾತ್ರ ವಿಚಾರಣೆ ನಡೆಸಬೇಕು ಎಂದು ತಿಳಿಸಿರುತ್ತಾರೆ.

ಆಧಾರ:ವಿಜಯವಾಣಿ, ದಿನಾಂಕ:27.05.2020

## 16. ಜೂನ್.1 ರಿಂದ ಕೋರ್ಟ್‌ನಲ್ಲಿ ವರ್ಚುವಲ್ ಕಲಾಪ

ಲಾಕ್‌ಡೌನ್‌ನಿಂದ ಸ್ಥಗಿತಗೊಂಡಿದ್ದ ನ್ಯಾಯಾಲಯಗಳ ಕಲಾಪಗಳು ಜೂನ್ 1 ರಿಂದ ಮತ್ತೆ ಕಾರ್ಯ ಆರಂಭಿಸುವ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ವಕೀಲರ ಸಂಘಗಳ ಪದಾಧಿಕಾರಿಗಳೊಂದಿಗೆ ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಎ.ಎಸ್.ಓಕಾ ಹಾಗೂ ಹಿರಿಯ ನ್ಯಾಯಮೂರ್ತಿಗಳು ವಿಡಿಯೋ ಕಾನ್ಫರೆನ್ಸ್ ನಡೆಸಿದರು. ಈ ವೇಳೆ ನ್ಯಾಯಮೂರ್ತಿ ಓಕಾ ಅವರು, ಮುಂದಿನ ಎರಡು ವಾರದವರೆಗೆ ವರ್ಚುಯಲ್ ಕೋರ್ಟ್‌ಗಳು (ವಿಡಿಯೋ ಸಂವಾದ ಆಧಾರಿತ) ನಡೆಸಲು ಒತ್ತು ನೀಡಲಾಗುವುದು. ನಂತರದ ಪರಿಸ್ಥಿತಿ ಪರಿಗಣಿಸಿ ಹೆಚ್ಚಿನ ಪ್ರಮಾಣದಲ್ಲಿ ಫಿಸಿಕಲ್ ಕೋರ್ಟ್ ನಡೆಸುವ ಬಗ್ಗೆ ಪರಿಶೀಲಿಸೋಣ ಎಂದು ತಿಳಿಸಿರುತ್ತಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:29.05.2020

## 17. ಮನೆಯಲ್ಲೇ ಕೂತು ಕೋರ್ಟ್‌ಗೆ ಹಾಜರಾಗಿ

ಕೊರೋನಾ ವ್ಯಾಪಿಸುವುದನ್ನು ತಡೆಯಲು ಲಾಕ್‌ಡೌನ್ ಘೋಷಿಸಿದ ಪರಿಣಾಮ ಕೋರ್ಟ್‌ಗಳ ಕಾರ್ಯನಿರ್ವಹಣೆ ಸ್ಥಗಿತಗೊಂಡು ನ್ಯಾಯದಾನದಿಂದ ವಿಳಂಬವಾಗಿ ಕಕ್ಷಿದಾರರಿಗೆ ಸಾಕಷ್ಟು ಅನಾನುಕೂಲತೆ ಆಗುತ್ತಿರುವ ಹಿನ್ನೆಲೆಯಲ್ಲಿ ಹೈಕೋರ್ಟ್ ಈಗ ಮೋಟಾರು ವಾಹನ ಕಾಯ್ದೆಯಡಿಯ ಪ್ರಕರಣಗಳಿಗೆ ವರ್ಚುಯಲ್ ಕೋರ್ಟ್ ಆರಂಭಿಸಲು ಸಜ್ಜಾಗಿದೆ. ಇದರಿಂದ ಮನೆಯಲ್ಲೇ ಕುಳಿತು ಅಥವಾ ಇರುವ ಸ್ಥಳದಿಂದ ಆನ್‌ಲೈನ್ ಮೂಲಕವೇ ಕೋರ್ಟ್‌ಗೆ ಹಾಜರಾಗಬಹುದು. ಕೋರ್ಟ್ ಕಲಾಪ ನಡೆಸುವುದು, ಅರ್ಜಿಗಳು ಸಲ್ಲಿಸುವ ವಿಚಾರದಲ್ಲಿ ಸಾಕಷ್ಟು ಡಿಜಿಟಲ್ ವಿಧಾನಗಳನ್ನು ಹೈಕೋರ್ಟ್ ಜಾರಿ ಮಾಡಿದೆ. ಲಾಕ್‌ಡೌನ್ ಅವಧಿಯಲ್ಲಿ ವಕೀಲರು ಅರ್ಜಿಗಳನ್ನು ಸಲ್ಲಿಸಲು ಅನುಕೂಲವಾಗುವಂತೆ ಇ–ಫೈಲಿಂಗ್, ಆನ್‌ಲೈನ್ ಮೂಲಕ ಆದೇಶದ ಸರ್ಟಿಫೈಡ್ ಕಾಪಿಗಳಿಗೆ ಅರ್ಜಿ ಸಲ್ಲಿಸುವ ವ್ಯವಸ್ಥೆಯನ್ನು ಪರಿಚಯಿಸಿತ್ತು. ಪ್ರಸ್ತುತ ವರ್ಚುಯಲ್ ಕೋರ್ಟ್ ಆರಂಭಿಸಲು ಸಿದ್ಧತೆ ನಡೆಸಿದೆ. ಅತಿ ಶೀಘ್ರವೇ ಈ ವರ್ಚುಯಲ್ ಕೋರ್ಟ್

ಆರಂಭವಾಗಲಿದ್ದು, ಇದು ನ್ಯಾಯಾಂಗ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದೆ ಎಂದು ವಕೀಲರು ವ್ಯಾಖ್ಯಾನಿಸುತ್ತಿದ್ದಾರೆ.

ಮೋಟಾರು ವಾಹನ ಕಾಯ್ದೆಯಡಿ ದಾಖಲಾದ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ ಬೆಂಗಳೂರು ನಗರಕ್ಕೆ ಸೀಮಿತವಾಗಿ ವರ್ಚ್ಯುವಲ್ ಕೋರ್ಟ್ ಆರಂಭಿಸಲಾಗುತ್ತಿದೆ. ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಸಾಕಷ್ಟು ಸಾರ್ವಜನಿಕರಿಗೆ ದಂಡ ಪಾವತಿಯ ಶುಲ್ಕದ ರಸೀದಿ ಮನೆಗೆ ಹೋಗುತ್ತದೆ. ಸದ್ಯದ ವ್ಯವಸ್ಥೆಯಲ್ಲಿ ರಸೀದಿ ಪಡೆದವರು ಸಂಬಂಧಪಟ್ಟ ಕ್ರಿಮಿನಲ್ ಕೋರ್ಟ್‌ಗೆ ತೆರಳಿ ವಿಚಾರಣೆಗೆ ಹಾಜರಾಗಬೇಕು. ಕೆಲ ಸಂದರ್ಭದಲ್ಲಿ ಇದು ಶಿಕ್ಷಾರ್ಹ ಅಪರಾಧವೂ ಆಗಿರುತ್ತದೆ. ನ್ಯಾಯಾಲಯಕ್ಕೆ ಹೋಗುವುದರಿಂದ ಸಾರ್ವಜನಿಕರ ಇಡೀ ದಿನ ವ್ಯರ್ಥವಾಗುತ್ತದೆ. ಆದರೆ, ವರ್ಚುವಲ್ ಕೋರ್ಟ್ ಆರಂಭವಾದರೆ ಸಾರ್ವಜನಿಕರು ಕ್ರಿಮಿನಲ್ ಕೋರ್ಟ್‌ನ ನ್ಯಾಯಾಧೀಶರ ಮುಂದೆ ಆನ್‌ಲೈನ್ ಮೂಲಕವೇ ಹಾಜರಾಗಬಹುದು. ನಂತರ ಅವರು ತಪ್ಪು ಒಪ್ಪಿಕೊಂಡಿರೆ ಆ ಕ್ಷಣವೇ ನ್ಯಾಯಾಧೀಶರು ತೀರ್ಮಾನ ಕೈಗೊಳ್ಳುತ್ತಾರೆ. ದಂಡ ವಿಧಿಸಿದರೆ ಆನ್‌ಲೈನ್ ಮೂಲಕವೇ ದಂಡ ಪಾವತಿ ಮಾಡಬಹುದು. ಆಗ ಇಡೀ ಪ್ರಕರಣವೇ ಮುಕ್ತಾಯ ಕಾಣುತ್ತದೆ. ಇದರಿಂದ ಸಾರ್ವಜನಿಕರು ಕ್ರಿಮಿನಲ್ ಕೋರ್ಟ್‌ಗಳಿಗೆ ಹಾಜರಾಗುವುದು ಹಾಗೂ ಸಮಯ ವ್ಯರ್ಥ ಮಾಡುವುದು ತಪ್ಪುತ್ತದೆ.

**ಯಶಸ್ವಿಯಾದರೆ ಇತರ ಕಡೆಗೂ ವಿಸ್ತರಣೆ:–** ವರ್ಚುಯಲ್ ಕೋರ್ಟ್‌ಗಳು ಆರಂಭವಾದರೆ ಸಾರ್ವಜನಿಕರು ತಮ್ಮ ಕಚೇರಿ ಹಾಗೂ ಮನೆಯಲ್ಲಿ ಕುಳಿತು ಆನ್‌ಲೈನ್ ಮೂಲಕ ಕೋರ್ಟ್‌ಗೆ ಹಾಜರಾಗುವುದಕ್ಕೆ ಸಾಧ್ಯವಾಗುತ್ತದೆ. ಈ ವ್ಯವಸ್ಥೆ ಯಶಸ್ವಿಯಾದರೆ ಬೇರೆ ನ್ಯಾಯಾಲಯಗಳು ಹಾಗೂ ಜಿಲ್ಲೆಗಳಿಗೆ ವರ್ಚುಯಲ್ ಕೋರ್ಟ್ ವ್ಯವಸ್ಥೆಯನ್ನು ವಿಸ್ತರಿಸಲಾಗುತ್ತದೆ ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ಅವರು ವಕೀಲರೊಂದಿಗೆ ನಡೆಸಿದ ಸಂವಾದದಲ್ಲಿ ತಿಳಿಸಿರುತ್ತಾರೆ

ಆಧಾರ:ಕನ್ನಡ ಪ್ರಭ, ದಿನಾಂಕ: 01.06.2020

## 18. ವಲಸಿಗರ ಬವಣೆ ನಿವಾರಣೆಗೆ ಸುಪ್ರೀಂ ಕಟ್ಟಪ್ಪಣೆ

ವಿವಿಧ ರಾಜ್ಯಗಳಲ್ಲಿ ಅತಂತ್ರರಾಗಿರುವ ವಲಸೆ ಕಾರ್ಮಿಕರನ್ನು 15 ದಿನಗಳೊಳಗೆ ತವರಿಗೆ ತಲುಪಿಸಲು ಅಗತ್ಯ ಸೌಲಭ್ಯ ಕಲ್ಪಿಸುವಂತೆ ಸುಪ್ರೀಂಕೋರ್ಟ್ ತಾಕೀತು ಮಾಡಿದೆ. ಇದೇ ವೇಳೆ ಅವರಿಗೆಲ್ಲಾ ಪರ್ಯಾಯ ಉದ್ಯೋಗ ಮತ್ತು ಇತರೆ ಪರಿಹಾರಗಳನ್ನು ಒದಗಿಸಲು ಯಾವ ಯೋಜನೆ ರೂಪಿಸಿದ್ದೀರಿ ಎಂಬುದನ್ನು ಆಯಾ ರಾಜ್ಯ ಸರ್ಕಾರಗಳು ದಾಖಲೆ ಸಮೇತ ಮಂಡಿಸುವಂತೆ ಆದೇಶಿಸಿದೆ.

ವಲಸೆ ಕಾರ್ಮಿಕರ ಸಮಸ್ಯೆಯನ್ನು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್ ಕೊರೊನಾ ಬಿಕ್ಕಟ್ಟಿನ ಕಾರಣ ತಮ್ಮ ಸ್ವಂತ ರಾಜ್ಯಗಳಿಗೆ ಮರಳಲು ಬಯಸಿರುವ ಶ್ರಮಿಕರಿಗೆ ಉಚಿತ ಪ್ರಯಾಣದ ವ್ಯವಸ್ಥೆ ಒದಗಿಸುವಂತೆ ಕೆಲದಿನಗಳ ಹಿಂದೆ ಸೂಚಿಸಿತ್ತು. ಜೂನ್ 3 ರವರೆಗೆ ಒಟ್ಟು 1 ಕೋಟಿ ಕಾರ್ಮಿಕರನ್ನು ಸಾಗಿಸಲಾಗಿದ್ದು, 4228 ವಿಶೇಷ ರೈಲುಗಳಲ್ಲಿ, 57 ಲಕ್ಷ ಜನರನ್ನು ಹಾಗೂ 41 ಲಕ್ಷ ಜನರನ್ನು ಬಸ್‌ಗಳಲ್ಲಿ ಕರೆದೊಯ್ಯಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾ. ಅಶೋಕ್‌ಭೂಷಣ್ ನೇತೃತ್ವದ ತ್ರಿಸದಸ್ಯ ಪೀಠದ ಮುಂದೆ ನಿವೇದಿಸಿಕೊಂಡರು. ಬಾಕಿ ಕಾರ್ಮಿಕರ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, ಆದಷ್ಟು ಬೇಗ ಅವರ ಪ್ರಯಾಣಕ್ಕೆ ಸೂಕ್ತ ಏರ್ಪಾಡು ಮಾಡಲಾಗುತ್ತದೆ ಎಂದು ಅವರು ಕೇಂದ್ರ ಸರ್ಕಾರದ ಪರವಾಗಿ ಭರವಸೆಯಿತ್ತರು. ಕರ್ನಾಟಕ ಸೇರಿದಂತೆ ಹಲವಾರು ರಾಜ್ಯಗಳು ಪೀಠಕ್ಕೆ ಈ ಕುರಿತ ವಿವರಗಳನ್ನು ಸಲ್ಲಿಸಿವೆ. ಜೂನ್ 9ಕ್ಕೆ ಅಂತಿಮ ತೀರ್ಪು ಪ್ರಕಟವಾಗಲಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 06.06.2020

## 19. ಚಿಕಿತ್ಸೆಗೆ ಶುಲ್ಕದ ಮಿತಿ

ಕೊರೊನಾ ವೈರಾಣು ಸೋಂಕಿತರಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ ನಿಗದಿಪಡಿಸಿರುವ ದರದಲ್ಲಿ ಚಿಕಿತ್ಸೆ ನೀಡಲು ಸಾಧ್ಯವೇ ಎಂದು ಖಾಸಗಿ ಆಸ್ಪತ್ರೆಗಳನ್ನು ಸುಪ್ರಿಂಕೋರ್ಟ್ ಪ್ರಶ್ನಿಸಿದೆ. ಚಿಕಿತ್ಸೆ ಶುಲ್ಕಕ್ಕೆ ನಿಯಂತ್ರಣ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೊಬ್ಡೆ, ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಮತ್ತು ಹೃಷಿಕೇಷ್‌ರಾಯ್ ಅವರ ಪೀಠವು ಸದರಿ ಯೋಜನೆಯಡಿ ನಿಗದಿಪಡಿಸಿರುವ ದರದಲ್ಲಿ ಚಿಕಿತ್ಸೆ ನೀಡಲು ಸಾಧ್ಯವೇ ಎಂದು ಖಾಸಗಿ ಆಸ್ಪತ್ರೆ ಪರ ವಕೀಲರನ್ನು ಪ್ರಶ್ನಿಸಿದೆ. ಆಯುಷ್ಮಾನ್ ಭಾರತ್ ಕೇಂದ್ರ ಸರ್ಕಾರದ ಆರೋಗ್ಯ ವಿಮಾ ಯೋಜನೆಯಾಗಿದ್ದು, ಬಡವರಿಗೆ ಚಿಕಿತ್ಸೆಯನ್ನು ನೀಡುವುದು ಇದರ ಹಿಂದಿನ ಉದ್ದೇಶವಾಗಿದೆ. ಪ್ರತಿಯೊಂದು ಕಾಯಿಲೆಯ ಚಿಕಿತ್ಸೆಗೆ ಗರಿಷ್ಠ ಮಿತಿಯನ್ನು ನಿಗದಿಪಡಿಸಿದೆ ಎನ್ನುವುದು ಇಲ್ಲಿ ಉಲ್ಲೇಖಾರ್ಹ, ಎಲ್ಲಾ ಕೊರೊನಾ ಸೋಂಕಿತರಿಗೂ ಉಚಿತವಾಗಿ ಚಿಕಿತ್ಸೆ ನೀಡಿ ಎಂದು ಖಾಸಗಿ ಆಸ್ಪತ್ರೆಗಳನ್ನು ನ್ಯಾಯಾಲಯ ಕೇಳುತ್ತಿಲ್ಲ. ಆದರೆ ಸರ್ಕಾರದಿಂದ ರಿಯಾಯಿತಿ ದರದಲ್ಲಿ ಭೂಮಿ ಪಡೆದುಕೊಂಡಿರುವ ಖಾಸಗಿ ಆಸ್ಪತ್ರೆಗಳು ಸಾಕಷ್ಟು ಪ್ರಮಾಣದ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಬೇಕು ಎಂದು ಸುಪ್ರೀಂಕೋರ್ಟ್ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿದೆ.

ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ಈ ವಿಚಾರಣೆಯಲ್ಲಿ ಖಾಸಗಿ ಆಸ್ಪತ್ರೆಗಳ ಪರವಾಗಿ, ಕೇಂದ್ರ ಸರ್ಕಾರದ ಪರವಾಗಿ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಯಾರಿಗೆ ಚಿಕಿತ್ಸೆ ಸಾಧ್ಯವಿಲ್ಲವೋ ಅವರಿಗೆ ಸರ್ಕಾರ ಆಯುಷ್ಮಾನ್ ಯೋಜನೆಯಡಿ ಚಿಕಿತ್ಸೆಯನ್ನು ಕೊಡಿಸಲಾಗುತ್ತಿದೆ ಎಂದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 06.06.2020

## 20. ವಲಸಿಗರ ರಕ್ಷಣೆಗೆ ಹುಕುಂ

ಕೊರೊನಾ ವೈರಾಣು ಸೋಂಕಿನಿಂದಾಗಿ ತಮ್ಮ ತವರು ರಾಜ್ಯಗಳಿಗೆ ಹೋಗಲು ತವಕಿಸುತ್ತಿರುವ ಕಾರ್ಮಿಕರ ಬೆಂಬಲಕ್ಕೆ ಸುಪ್ರೀಂಕೋರ್ಟ್ ನಿಂತಿದ್ದು, ಇನ್ನು ಹದಿನೈದು ದಿನಗಳೊಳಗೆ ಅವರವರ ರಾಜ್ಯಗಳಿಗೆ ತಲುಪಿಸುವ ಪ್ರಕ್ರಿಯೆ ಪೂರ್ಣಗೊಳಿಸಿ ಎಂದು ಆದೇಶ ನೀಡಿದೆ.

ವಲಸಿಗ ಕಾರ್ಮಿಕರನ್ನು ಸಾಗಿಸುವ ಸಲುವಾಗಿ ಕೋರಿಕೆ ಬಂದ 24 ಗಂಟೆಗಳ ಒಳಗೆ ಶ್ರಮಿಕ್ ರೈಲುಗಳನ್ನು ಒದಗಿಸುವುದಾಗಿ ರೈಲ್ವೆ ಇಲಾಖೆ ಹೇಳಿದೆ. ಆದ್ದರಿಂದ ಇದನ್ನು ಬಳಸಿಕೊಂಡು ಯಾರು ಅವರ ರಾಜ್ಯಕ್ಕೆ ಹೋಗಲು ಇಚ್ಚಿಸುತ್ತಿದ್ದಾರೋ ಅವರನ್ನು ತಲುಪಿಸಿ ಎಂದು ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಸಂಜಯ್ ಕಿಷನ್ ಮತ್ತು ಎಂ.ಆರ್.ಶಾ ಅವರ ಪೀಠ ಆದೇಶಿಸಿದೆ. ರಾಜ್ಯ ಸರ್ಕಾರಗಳು ಇದುವರೆಗೆ ಕೇವಲ 171 ಶ್ರಮಿಕ್ ರೈಲುಗಳಿಗೆ ಮಾತ್ರ ಬೇಡಿಕೆ ಇಟ್ಟಿವೆ ಎಂದು ಕೇಂದ್ರ ಸರ್ಕಾರ ತಿಳಿಸಿತ್ತು. ಕೇವಲ ಅವರನ್ನು ರಾಜ್ಯಗಳಿಗೆ ತಲುಪಿಸುವುದಷ್ಟೆ ಅಲ್ಲ, ತಮ್ಮ ರಾಜ್ಯಗಳಿಗೆ ವಾಪಸ್ ಮರಳಿರುವ ಕಾರ್ಮಿಕರ ಕೌಶಲ್ಯವನ್ನು ಪರಿಶೀಲಿಸಿ ಅವರಿಗೆ ಉದ್ಯೋಗ ಯೋಜನೆ ರೂಪಿಸುವಂತೆಯೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದೆ. ಲಾಕ್‌ಡೌನ್ ಅವಧಿಯಲ್ಲಿ ತಮ್ಮೂರಿಗೆ ಹೋಗಲು ಬಂದು ನಿಯಮ ಮೀರಿದ ಕಾರಣಕ್ಕಾಗಿ ವಲಸಿಗ ಕಾರ್ಮಿಕರ ಮೇಲೆ ದೇಶದಾದ್ಯಂತ ದಾಖಲಾಗಿರುವ ಪ್ರಕರಣಗಳನ್ನೆಲ್ಲ ರದ್ದುಗೊಳಿಸುವಂತೆಯೂ ಪೀಠ ನಿರ್ದೇಶಿಸಿದೆ. ಈ ಪ್ರಕರಣವನ್ನು ಸುಪ್ರೀಂಕೋರ್ಟ್ ಸ್ವಯಂ ಇಚ್ಛೆಯಿಂದ ದಾಖಲಿಸಿಕೊಂಡಿರುತ್ತದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 10.06.2020

# ಭಾಗ–7

## ಹೊರ ರಾಜ್ಯದ ಸುದ್ದಿಗಳು

### 1. ಮುಖಗವಸು ಧರಿಸದಿದ್ದರೆ ಬಂಧನ

ಮುಂಬೈನಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ, ಸಾರ್ವಜನಿಕ ಸ್ಥಳಗಳಲ್ಲಿ ಜನರು ಮುಖಗವಸು ಧರಿಸುವುದನ್ನು ನಗರಾಡಳಿತ ಕಡ್ಡಾಯಗೊಳಿಸಿದೆ. 'ನಿಯಮ ಉಲ್ಲಂಘಿಸಿದರೆ ಬಂಧಿಸಲಾಗುವುದು' ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ. ದೆಹಲಿಯಲ್ಲೂ ಮುಖಗವಸು ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:09.04.2020

### 2. ಮುಖಗವಸು ಧರಿಸದಿದ್ದರೆ ರೂ.5 ಸಾವಿರ ದಂಡ

ಕೋವಿಡ್–19 ಪ್ರಕರಣ ತೀವ್ರಗತಿಯಲ್ಲಿ ಏರುತ್ತಿರುವ ಹಿನ್ನೆಲೆಯಲ್ಲಿ ಅಹಮದಾಬಾದ್‌ನಲ್ಲಿ ಮುಖಗವಸು ಧರಿಸುವುನ್ನು ಕಡ್ಡಾಯಪಡಿಸಲಾಗಿದೆ. ನಿಯಮ ಉಲ್ಲಂಘಿಸಿದಲ್ಲಿ ರೂ.5 ಸಾವಿರವರೆಗೂ ದಂಡ ಮತ್ತು ಮೂರು ವರ್ಷದವರೆಗೂ ಜೈಲು ಶಿಕ್ಷೆ ವಿಧಿಸುವ ಸಂಬಂಧ ಆದೇಶ ಹೊರಡಿಸಲಾಗಿದೆ.

ಸಾಂಕ್ರಮಿಕ ರೋಗ ನಿಯಂತ್ರಣ ಕಾಯ್ದೆ ಅನ್ವಯ ಈ ಬಗ್ಗೆ ಆದೇಶ ಹೊರಡಿಸಲಾಗಿದೆ. ಮಾರುಕಟ್ಟೆಯಲ್ಲಿ ಲಭ್ಯವಿರುವ ಮುಖಗವಸು ಧರಿಸಬಹುದು ಅಥವಾ ಕರವಸ್ತ್ರವನ್ನಾದರೂ ಬಳಸಿ ಮೂಗು ಮತ್ತು ಬಾಯಿ ಮುಚ್ಚಿಕೊಳ್ಳಬೇಕು ಎಂದು ನಗರಸಭೆಯ ಆಯುಕ್ತ ವಿಜಯ್ ನೆಹ್ರಾ ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:13.04.2020

### 3. ದೇಶದ ಅತಿದೊಡ್ಡ ಚಿಕಿತ್ಸಾ ಕೇಂದ್ರ

'ಕೋವಿಡ್–19'ಕ್ಕೆ ಚಿಕಿತ್ಸೆ ನೀಡುವ ದೇಶದ ಅತಿದೊಡ್ಡದಾದ ಕೇಂದ್ರ ಗುಜರಾತ್‌ನ ಅಹಮದಾಬಾದ್‌ನಲ್ಲಿ ಸಿದ್ಧಗೊಂಡಿದೆ. ಗುಜರಾತ್ ವಿಶ್ವವಿದ್ಯಾಲಯದ ಸಮೀಪ ಇರುವ ಹಾಸ್ಟೆಲ್ ಕಾಂಪ್ಲೆಕ್ಸ್‌ನಲ್ಲಿ 2000 ರೋಗಿಗಳಿಗೆ ಚಿಕಿತ್ಸೆ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಇದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡುವ ಒತ್ತಡ ಕಡಿಮೆಯಾಗುತ್ತದೆ ಎಂದು ಅಹಮದಾಬಾದ್ ಮುನ್ಸಿಪಾಲ್ ಆಯುಕ್ತ ವಿಜಯ್ ನೆಹ್ರಾ ತಿಳಿಸಿರುತ್ತಾರೆ

ಪ್ರತ್ಯೇಕ ಹಾಸಿಗೆ, ಸೋಪ್, ಬ್ರಶ್ ಹಾಗೂ ಬಕೆಟ್ ಇರುವ ಕಿಟ್ ನೀಡಲಾಗುತ್ತದೆ. ದಿನಕ್ಕೆ ಎರಡು ಬಾರಿ ರೋಗಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ. ಕೇಂದ್ರದ ಹೊರಗೆ ತಯಾರಿಸಿದ ಆಹಾರವನ್ನು ರೋಗಿಗಳಿಗೆ ನೀಡಲಾಗುತ್ತದೆ. ಸೋಂಕು ಹರಡುವುದನ್ನು ತಡೆಯುವ ಸಲುವಾಗಿ ವೈದ್ಯಕೀಯ ಸಿಬ್ಬಂದಿ ಕೇಂದ್ರದಲ್ಲಿಯೇ ವಾಸಿಸುತ್ತಾರೆ ಎಂದು ಉಪ ಆಯುಕ್ತ ನಿತಿನ್ ಸಂಗ್ವಾನ್ ವಿವರಿಸಿರುತ್ತಾರೆ.

ಗುಜರಾತ್‌ನಲ್ಲಿ ಸೋಂಕು ದೃಢಪಟ್ಟಿರುವ 617 ಪ್ರಕರಣಗಳಲ್ಲಿ 346 ಸೋಂಕಿತರು ಅಹಮದಾಬಾದ್‌ನವರೇ ಇದ್ದಾರೆಂದು ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:15.04.2020

### 4. ಮಹಾರಾಷ್ಟ್ರದಲ್ಲೇ ಅಧಿಕ ಮರಣ ಪ್ರಮಾಣ

ವಿಶ್ವದ ಮತ್ತು ಭಾರತದ ಸರಾಸರಿಗೆ ಹೋಲಿಸಿದರೆ ಮಹಾರಾಷ್ಟ್ರದಲ್ಲಿ ಕೋವಿಡ್–19ಕ್ಕೆ ಮೃತಪಡುತ್ತಿರುವವರ ಸಂಖ್ಯೆ ಅತ್ಯಧಿಕವಾಗಿದೆ ಎನ್ನುವ ಆಘಾತಕಾರಿ ಮಾಹಿತಿಯನ್ನು ರಾಜ್ಯದ ವೈದ್ಯಕೀಯ ಶಿಕ್ಷಣ ಮತ್ತು ಔಷಧ ಇಲಾಖೆ ವರದಿ ಬಹಿರಂಗಗೊಳಿಸಿದೆ. ಇಲಾಖೆ ನೀಡಿರುವ ದತ್ತಾಂಶದಂತೆ ಮಹಾರಾಷ್ಟ್ರದಲ್ಲಿ ಮರಣ ಪ್ರಮಾಣ ಶೇ.6.84 ಇದ್ದರೆ, ಭಾರತದಲ್ಲಿ ಈ ಪ್ರಮಾಣ ಶೇ. 3.27 ಹಾಗೂ ವಿಶ್ವದಲ್ಲಿ ಶೇ.6.29ರಷ್ಟಿದೆ.

ಸೋಂಕಿತರ ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಮುಂಬೈ ನಗರಕ್ಕೆ ಹಾಗೂ ಮಹಾರಾಷ್ಟ್ರದ ಉಳಿದ ಪ್ರದೇಶಕ್ಕಾಗಿ ಎರಡು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ಸರ್ಕಾರ ರಚಿಸಿದೆ ಎಂದು ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ತೋಪೆ ತಿಳಿಸಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:15.04.2020

## 5. ಕೇರಳದಲ್ಲಿ ಕೋವಿಡ್‌ಗೆ ದಿಗ್ಬಂಧನ

ಕೇರಳದಲ್ಲಿ ಕೋವಿಡ್–19ಗೆ ತುತ್ತಾಗುತ್ತಿರುವವರ ಏರಿಕೆ ಪ್ರಮಾಣ ಇಳಿಕೆಯತ್ತ ಸಾಗುತ್ತಿರುವುದು. ಕೇರಳದಲ್ಲಿ ಮಾತ್ರ ಸೋಂಕು ನಿಯಂತ್ರಣಕ್ಕೆ ಆ ಸರ್ಕಾರವು ಕೈಗೊಂಡಿರುವ ಕ್ರಮಗಳೇ ಕಾರಣ ಎಂಬ ಪ್ರತಿಕ್ರಿಯೆ ತಜ್ಞರಿಂದ ವ್ಯಕ್ತವಾಗಿದೆ.

**ಕೈಗೊಂಡ ಕ್ರಮಗಳ ವಿವರ**

- ಏಪ್ರಿಲ್–12 ರಿಂದ ಏಪ್ರಿಲ್–17ರ ನಡುವೆ ಕೇರಳದಲ್ಲಿ 20 ಪ್ರಕರಣಗಳಷ್ಟೇ ಪತ್ತೆಯಾಗಿವೆ.
- ಇದೇ ಅವಧಿಯಲ್ಲಿ 76 ಜನರು ಕೋವಿಡ್ –19 ನಿಂದ ಗುಣಮುಖರಾಗಿದ್ದಾರೆ.
- ಕೇರಳದಲ್ಲಿ ಸೋಂಕು ದೃಢಪಟ್ಟ 395 ಜನರಲ್ಲಿ 277 ಜನರು ವಿದೇಶಗಳಿಂದ ಹಿಂದಿರುಗಿದ್ದವರು.
- ವಿದೇಶಗಳಿಂದ ಹಿಂತಿರುಗಿದವರ ಸಂಪರ್ಕಕ್ಕೆ ಬಂದಿದ್ದ ಸುಮಾರು 100 ಜನರಿಗೆ ಸೋಂಕು ತಗುಲಿತ್ತು.
- ವಿದೇಶಗಳಿಂದ ಹಿಂತಿರುಗಿದವರಿಗೆ ಜನವರಿ ಮೂರನೇ ವಾರದಿಂದಲೇ ಪ್ರತ್ಯೇಕವಾದ (ಕ್ವಾರಂಟೈನ್) ಜಾರಿ ಮಾಡಲಾಗಿತ್ತು.
- 14 ದಿನಗಳ ಪ್ರತ್ಯೇಕವಾಸ ಮಾಡಬೇಕು ಎಂದು ವಿಶ್ವಸಂಸ್ಥೆ ಘೋಷಿಸಿದ್ದರೂ, ಕೇರಳ ಸರ್ಕಾರವು 28 ದಿನಗಳ ಕ್ವಾರಂಟೈನ್ ಜಾರಿಗೆ ತಂದಿತ್ತು.
- ಏಪ್ರಿಲ್ 15ರ ಹೊತ್ತಿಗೆ ಕೇರಳದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ 500 ದಾಟಲಿದೆ ಎಂದು ತಜ್ಞರು ನಿರೀಕ್ಷಿಸಿದ್ದರು. ಆದರೆ, ರಾಜ್ಯದಲ್ಲಿ 395 ಪ್ರಕರಣಗಳಷ್ಟೇ ಪತ್ತೆಯಾದವು.
- ಮುನ್ನೆಚ್ಚರಿಕೆ ಕ್ರಮವಾಗಿ ಮೊದಲೇ ಪ್ರತ್ಯೇಕವಾಸ ಜಾರಿಗೆ ತಂದಿದ್ದು, ವಿದೇಶಗಳಿಂದ ಹಿಂತಿರುಗಿದವರ ಪತ್ತೆ ಮತ್ತು ಕಟ್ಟುನಿಟ್ಟಿನ ಪ್ರತ್ಯೇಕವಾಸ ಜಾರಿಗೆ ತರಲಾಯಿತು.
- ಭಾರಿ ಪ್ರಮಾಣದಲ್ಲಿ ತಪಾಸಣೆ ಮಾಡಿದ್ದರಿಂದ ಸೋಂಕು ನಿಯಂತ್ರಣ ಸಾಧ್ಯವಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ:19.04.2020

## 6. ಕೇಂದ್ರ–ಪಶ್ಚಿಮ ಬಂಗಾಳ ಜಟಾಪಟಿ

ಪಶ್ಚಿಮ ಬಂಗಾಳದಲ್ಲಿ ಲಾಕ್‌ಡೌನ್ ಹಾಗೂ ಕೊರೊನಾ ಮಹಾಮಾರಿಯ ಸ್ಥಿತಿಗತಿಯ ಅಧ್ಯಯನ ನಡೆಸಲು ಕೇಂದ್ರ ಸರ್ಕಾರವು ಅಂತರ ಸಚಿವಾಲಯದ ತಂಡಗಳನ್ನು ಕಳುಹಿಸಿರುವುದು ರಾಜ್ಯ ಮತ್ತು ಕೇಂದ್ರದ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ.

ಕೇಂದ್ರವು ಪಶ್ಚಿಮ ಬಂಗಾಳಕ್ಕೆ ಎರಡು ತಂಡಗಳನ್ನು ಕಳುಹಿಸಿದೆ. ರಕ್ಷಣಾ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ ಹಾಗೂ ಒಂದು ತಂಡದ ನಾಯಕರಾಗಿರುವ ಅಪೂರ್ವ ಚಂದ್ರ ಅವರು ರಾಜ್ಯ ಸರ್ಕಾರವು ನಮಗೆ ಸಂಪೂರ್ಣ ಸಹಕಾರ ನೀಡುತ್ತಿಲ್ಲ ಎಂದಿದ್ದಾರೆ.

ನಾವು ಮುಖ್ಯ ಕಾರ್ಯದರ್ಶಿ ರಾಜೀವ್ ಸಿನ್ಹಾ ಅವರನ್ನು ಭೇಟಿ ಮಾಡಿ, ರಾಜ್ಯದ ಅಧಿಕಾರಿಗಳು ಜೊತೆಗಿದ್ದರೆ ಮಾತ್ರ ನಮ್ಮ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ ಎಂದು ಮನವರಿಕೆ ಮಾಡಿಕೊಟ್ಟಿದ್ದೆವು. ಆದರೆ, ಅವರಿಂದ ಸಹಕಾರ ಲಭಿಸಿಲ್ಲ. ಮುಖ್ಯ ಕಾರ್ಯದರ್ಶಿ ನಮ್ಮನ್ನು ಪುನ: ಭೇಟಿ ಮಾಡುವ ನಿರೀಕ್ಷೆ ಇದೆ. ಅವರ ಜೊತೆ ಇನ್ನೊಂದು ಸಭೆ ನಡೆಸುತ್ತೇವೆ ಎಂದು ಅವರು ಮಾಧ್ಯಮದವರ ಜೊತೆ ಮಾತನಾಡುತ್ತಾ ತಿಳಿಸಿದರು.

ಪಶ್ಚಿಮ ಬಂಗಾಳ ಮಾತ್ರವಲ್ಲ ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ ಮುಂತಾದ ರಾಜ್ಯಗಳಿಗೂ ಇಂಥ ತಂಡಗಳು ಹೋಗಿವೆ. ಆ ರಾಜ್ಯಗಳಲ್ಲಿ ನಮಗೆ ಸರ್ಕಾರದ ಬೆಂಬಲ ಲಭಿಸಿದೆ. ಪಶ್ಚಿಮ ಬಂಗಾಳಕ್ಕೆ ನೀಡಿದ್ದಂಥ ನೋಟಿಸ್ ಅನ್ನೇ ಆ ರಾಜ್ಯಗಳಿಗೂ ನೀಡಲಾಗಿದೆ. ಅಲ್ಲಿ ಯಾವುದೇ ಸಮಸ್ಯೆ ಬಂದಿಲ್ಲ ಎಂದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯ ಕಾರ್ಯದರ್ಶಿ ಸಿನ್ಹಾ , ರಾಜ್ಯಕ್ಕೆ ತಂಡಗಳನ್ನು ಕಳುಹಿಸುವುದಕ್ಕೂ ಮುನ್ನ ಕೇಂದ್ರ ಸರ್ಕಾರವು ರಾಜ್ಯದ ಜೊತೆಗೆ ಮಾತುಕತೆ ನಡೆಸಬೇಕಾಗಿತ್ತು ಎಂಬುದು ನಮ್ಮ ನಿಲುವು. ರಾಜ್ಯದ ಸ್ಥಿತಿಗತಿಯ ಎಲ್ಲಾ ಮಾಹಿತಿಯನ್ನು ಇನ್ನೊಂದು ತಂಡದ ಮುಖ್ಯಸ್ಥರಾದ ವಿನೀತ್ ಜೋಶಿ ಅವರಿಗೆ ಈಗಾಗಲೇ ಸಲ್ಲಿಸಿದ್ದೇವೆ.

ಯಾವುದಾದರೂ ಸ್ಥಳಕ್ಕೆ ತಂಡದವರು ಭೇಟಿ ನೀಡಲು ಇಚ್ಚಿಸುವುದಾದರೆ ಅವರನ್ನು ಕರೆದೊಯ್ಯಲು ಸಿದ್ಧ. ಕೇಂದ್ರ–ರಾಜ್ಯ ಸರ್ಕಾರಗಳ ಮಧ್ಯೆ ಯಾವುದೇ ಸಂಘರ್ಷವಿಲ್ಲ. ಈ ವಿಚಾರದಲ್ಲಿ ರಾಜ್ಯ ಸರ್ಕಾರವನ್ನಷ್ಟೇ ದೂಷಿಸುವುದು ಸರಿಯಲ್ಲ. ಎರಡೂ ಕಡೆಗಳಿಂದ ಶಿಸ್ತಿನ ಪ್ರದರ್ಶನವಾಗಬೇಕು ಎಂದರು. ಈ ಗೊಂದಲಗಳ ನಡುವೆಯೂ ತಂಡವು ರಾಜ್ಯದ ಕೆಲವು ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:22.04.2020

## 7. ಲಾಕ್‌ಡೌನ್ ಸಡಿಲವಾದರೆ ಕೋವಿಡ್ ಎಚ್ಚರಿಕೆ: ಮುಂಬೈ ವಿಜ್ಞಾನಿಗಳ ತಂಡ

ಮುಂಬೈ ಮತ್ತು ಬೆಂಗಳೂರು ನಗರಗಳಲ್ಲಿ ಮೇ–3ರಂದು ಲಾಕ್‌ಡೌನ್ ತೆರವುಗೊಳಿಸಿದರೆ, ಆ ಬಳಿಕ ಕೋವಿಡ್–19 ರೋಗವು ಮತ್ತೆ ಕಾಣಿಸಿಕೊಳ್ಳಬಹುದು ಎಂದು ವಿಜ್ಞಾನಿಗಳು ಮುನ್ನೆಚ್ಚರಿಕೆ ನೀಡಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಹಾಗೂ ಮುಂಬೈನ ಟಿಐಎಫ್‌ಆರ್‌ನ 18 ವಿಜ್ಞಾನಿಗಳ ತಂಡ ಗಣಿತ ಹಾಗೂ ನಗರದಲ್ಲಿ ಸಾಂಕ್ರಾಮಿಕ ರೋಗ ಹರಡುವ ವಿಧಾನದ ಪಡಿಯಚ್ಚನ್ನು (ಸಿಮುಲೇಟರ್) ಬಳಸಿ ಈ ಅಧ್ಯಯನ ನಡೆಸಿದೆ. ಕೋವಿಡ್–19 ರೋಗಿಗಳನ್ನು ಪತ್ತೆ ಹಚ್ಚಿ ಬೇರ್ಪಡಿಸದೇ ಇದ್ದರೆ ಮೇ ಬಳಿಕ ಪ್ರಕರಣಗಳ ಸಂಖ್ಯೆಯಲ್ಲಿ ತೀವ್ರ ಏರಿಕೆ ಕಂಡುಬರಲಿದೆ ಎಂದು ವಿಜ್ಞಾನಿಗಳ ತಂಡ ಮುನ್ಸೂಚನೆ ನೀಡಿದೆ.

ದಂಡಗಳನ್ನು (ರೋಗ ಲಕ್ಷಣ ಕಾಣಿಸಿಕೊಳ್ಳುವ ಸರಾಸರಿ ಅವಧಿ ಸೇರಿದಂತೆ) ಒಳಗೊಂಡಂತೆ ಬದಲಾಗುವ ಅನೇಕ ಮಾನದಂಡಗಳ ಆಧಾರದಲ್ಲಿ ದೈನಂದಿನ ಸಂಪರ್ಕ ದರಗಳನ್ನು ಲೆಕ್ಕಹಾಕಲಾಗುತ್ತದೆ. ಲಾಕ್‌ಡೌನ್, 25 ದಿನಗಳ ಲಾಕ್‌ಡೌನ್ 40 ದಿನಗಳ ಲಾಕ್ ಡೌನ್ (ಈಗಿನ ಹಂತ) ಸೇರಿದಂತೆ 11 ನಿಯಂತ್ರಣಾ ಕ್ರಮಗಳ ಆಧಾರದಲ್ಲಿ ಪರಿಶೀಲನೆಗೆ ಒಳಪಡಿಸಲಾಗುತ್ತದೆಯೆಂದು ತಿಳಿಸಿರುತ್ತಾರೆ

ಆಧಾರ:ಪ್ರಜಾವಾಣಿ, ದಿನಾಂಕ:22.04.2020

## 8. ಕೇರಳ : ತಿಂಗಳ ವೇತನ ಕಂತುಗಳಲ್ಲಿ

ಕೇರಳದಲ್ಲಿ ಸರ್ಕಾರಿ ಉದ್ಯೋಗಿಗಳ ಒಂದು ತಿಂಗಳ ವೇತನವನ್ನು 5 ಮಾಸಿಕ ಕಂತುಗಳಲ್ಲಿ ನೀಡಲಾಗುವುದು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ. ಆದರೆ, ಮಾಸಿಕ 20 ಸಾವಿರಕ್ಕಿಂತ ಕಡಿಮೆ ವೇತನ ಪಡೆಯುತ್ತಿರುವವರಿಗೆ ಇದು ಅನ್ವಯವಾಗುವುದಿಲ್ಲ. ಸಚಿವರು, ಶಾಸಕರು ಹಾಗೂ ಸ್ಥಳೀಯ ಆಡಳಿತಗಳ ಪ್ರತಿನಿಧಿಗಳ ವೇತನವನ್ನು ಶೇ:30 ರಷ್ಟು ಕಡಿತಗೊಳಿಸಲು ಸಹ ರಾಜ್ಯ ಸರ್ಕಾರ ನಿರ್ಧರಿಸಿದೆಯೆಂದು ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:23.04.2020

## 9. ಅಂತ್ಯಕ್ರಿಯೆಗೆ ಅಡ್ಡಿಪಡಿಸಿದರೆ ಜೈಲು

ಕೋವಿಡ್–19ರಿಂದ ಮೃತಪಟ್ಟ ರೋಗಿಯ ಅಂತ್ಯಕ್ರಿಯೆಗೆ ಅಡ್ಡಿಪಡಿಸುವುದು ಅಥವಾ ಅಡ್ಡಿಪಡಿಸಲು ಪ್ರಯತ್ನಿಸುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಕನಿಷ್ಠ ಒಂದು ವರ್ಷದಿಂದ ಮೂರು ವರ್ಷದವರೆಗೆ ಜೈಲು ಶಿಕ್ಷೆ ವಿಧಿಸುವುದಾಗಿ ತಮಿಳುನಾಡು ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿದೆ.

ಸೋಂಕಿನಿಂದ ಮೃತಪಟ್ಟ ರೋಗಿಗಳ ಅಂತ್ಯಕ್ರಿಯೆಗೆ ರಾಜ್ಯದ ಹಲವೆಡೆ ಅಡ್ಡಿ ಪಡಿಸಿದ ಘಟನೆಗಳು ವರದಿಯಾದ ಬೆನ್ನಲ್ಲೇ ಸರ್ಕಾರ ಈ ನಿರ್ಧಾರಕ್ಕೆ ಬಂದಿದೆ. ಶವವನ್ನು ಹೂಳುವುದರಿಂದ ವೈರಸ್ ಹರಡುತ್ತದೆ

ಎನ್ನುವ ತಪ್ಪು ಕಲ್ಪನೆಯಿಂದಾಗಿ ಏಪ್ರಿಲ್–19ರಂದು ಕೋವಿಡ್–19 ರಿಂದ ಮೃತಪಟ್ಟ ವೈದ್ಯ ಡಾ:ಸೈಮನ್ ಹರ್ಕ್ಯುಲಿಸ್ ಶವವನ್ನು ಹೂಳುವುದನ್ನು ವಿರೋಧಿಸಿ ಪ್ರತಿಭಟನೆ ನಡೆದಿತ್ತು. ಈ ಸಂದರ್ಭದಲ್ಲಿ ಪ್ರತಿಭಟನಕಾರರು ಆರೋಗ್ಯ ಕಾರ್ಯಕರ್ತರು ಹಾಗೂ ಮಹಾನಗರ ಪಾಲಿಕೆ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:27.04.2020

## 10. ವಿನಾಯಿತಿ ಇಲ್ಲ : ಕೇಜ್ರಿವಾಲ್

ಕೇಂದ್ರ ಗೃಹ ಸಚಿವಾಲಯದ ನಿಯಮಾವಳಿಗಳಿಗೆ ಹೊರತಾಗಿ ದೆಹಲಿಯಲ್ಲಿ ಲಾಕ್‌ಡೌನ್‌ಗೆ ವಿನಾಯಿತಿ ನೀಡುವುದಿಲ್ಲ ಎಂದು ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹೇಳಿದ್ದಾರೆ.

ಮೇ 3 ರವರೆಗೂ ದೇಶದಾದ್ಯಂತ ಲಾಕ್‌ಡೌನ್ ಇರುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದರು. ಇದಾದ ಬಳಿಕ ಲಾಕ್‌ಡೌನ್ ಮುಂದುವರಿಸಬೇಕೆ ಅಥವಾ ಬೇಡವೇ ಎನ್ನುವ ಕುರಿತು ಕೇಂದ್ರ ಸರ್ಕಾರ ನಿರ್ಣಯ ಕೈಗೊಳ್ಳಲಿ, ಬಳಿಕ ನಾವು ಮುಂದಿನ ಕ್ರಮಗಳನ್ನು ನಿರ್ಧರಿಸುತ್ತೇವೆ. ಮೇ–3ರವರೆಗೆ ಮಾರುಕಟ್ಟೆ ಹಾಗೂ ಮಾಲ್‌ಗಳನ್ನು ತೆರೆಯಲು ಅವಕಾಶ ನೀಡುವುದಿಲ್ಲ. ಆದರೆ ಪ್ರತ್ಯೇಕವಾಗಿರುವ ಅಂಗಡಿಗಳನ್ನು ತೆರೆಯುವ ಕುರಿತು ಕೇಂದ್ರ ನೀಡಿರುವ ಮಾರ್ಗಸೂಚಿಯನ್ನು ಮಾತ್ರ ಜಾರಿಗೆ ತರಲಾಗುತ್ತಿದೆ. ಸೋಂಕಿಗೆ ಯಾವುದೇ ಧರ್ಮದ ತಾರತಮ್ಯ ಇಲ್ಲ, ಮುಸ್ಲಿಮರ ಪ್ಲಾಸ್ಮಾವನ್ನು ಹಿಂದೂವಿನ ಹಾಗೂ ಹಿಂದೂವಿನ ಪ್ಲಾಸ್ಮಾವನ್ನು ಮುಸ್ಲಿಮರ ಚಿಕಿತ್ಸೆಗೆ ಬಳಸಿಕೊಳ್ಳಬಹುದು. ಪ್ಲಾಸ್ಮಾ ಚಿಕಿತ್ಸೆಯಿಂದ ಆಶಾದಾಯಕ ಬೆಳವಣಿಗೆಯಾಗುತ್ತಿದೆ. ಕೋವಿಡ್–19ರಿಂದ ಗುಣಮುಖರಾದವರು ಪ್ಲಾಸ್ಮಾ ನೀಡಲು ಮುಂದಾಗಬೇಕು ಎಂದು ಕೇಜ್ರಿವಾಲ ತಿಳಿಸಿರುತ್ತಾರೆ.

ಆಧಾರ:ಪ್ರಜಾವಾಣಿ, ದಿನಾಂಕ:27.04.2020

## 11. ಚಂಡಮಾರುತ: ಬಂಗಾಳಕ್ಕೆ ರೂ.1,000 : ಒಡಿಶಾಗೆ ರೂ.500 ಕೋಟಿ ನೆರವು

ಅಂಫಾನ್ ಚಂಡಮಾರುತ ಪೀಡಿತ ಪಶ್ಚಿಮ ಬಂಗಾಳದಲ್ಲಿ ಪರಿಹಾರ ಕಾರ್ಯಗಳಿಗೆ ರೂ.1,000 ಕೋಟಿ ನೆರವನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ಒಡಿಶಾ ರಾಜ್ಯಕ್ಕೆ ರೂ.500 ಕೋಟಿ ನೆರವು ಘೋಷಿಸಲಾಗಿದೆ. ಎರಡು ರಾಜ್ಯಗಳ ಚಂಡಮಾರುತ ಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆಯನ್ನು ನಡೆಸಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ಈ ನೆರವು ಪ್ರಕಟಿಸಿದರು. ಚಂಡಮಾರುತ ಸಂಬಂಧಿತ ಘಟನೆಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ರೂ.2 ಲಕ್ಷ ಗಾಯಗೊಂಡವರಿಗೆ ರೂ.50,000ಗಳ ಪರಿಹಾರ ನೀಡುವುದಾಗಿ ಹಾಗೂ ಚಂಡಮಾರುತದಿಂದ ಬಾಧಿತವಾಗಿರುವ ಪಶ್ಚಿಮ ಬಂಗಾಳಕ್ಕೆ ಕೇಂದ್ರ ಸರ್ಕಾರ ಅಗತ್ಯ ನೆರವು ಒದಗಿಸಲಿದೆ. ರಕ್ಷಣಾ ಕಾರ್ಯಗಳಿಗೆ ಹೆಚ್ಚುವರಿ ಕೇಂದ್ರದ ತಂಡಗಳನ್ನು ಕಳುಹಿಸಲಾಗುವುದು. ಹಾನಿಯ ಪ್ರಮಾಣವನ್ನು ಅಂದಾಜು ಮಾಡಲು ಕೇಂದ್ರ ತಂಡ ಶೀಘ್ರದಲ್ಲೇ ರಾಜ್ಯಕ್ಕೆ ಆಗಮಿಸಲಿದೆ ಎಂದು ಮೋದಿಯವರು ತಿಳಿಸಿದರು.

ಆಧಾರ:ವಿಶ್ವವಾಣಿ, ದಿನಾಂಕ:23.05.2020

## 12. ಮಹಾರಾಷ್ಟ್ರದತ್ತ ಮಿಡತೆ ದಂಡು

ಪಾಕ್‌ನಿಂದ ರಾಜಸ್ಥಾನದ ಮೂಲಕ ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲಿ ಬೆಳೆಗಳನ್ನು ತಿಂದು ತೇಗಿದ ಮಿಡತೆಗಳ ಹಿಂಡು ಈಗ ಮಹಾರಾಷ್ಟ್ರದತ್ತ ತಿರುಗಿದೆ. ವಿದರ್ಭಕ್ಕೆ ದಾಂಗುಡಿ ಇರಿಸಿರುವ ಲಕ್ಷೋಪಲಕ್ಷ ಮಿಡತೆಗಳು ಐದಾರೂ ಹಳ್ಳಿಗಳಲ್ಲಿ ಬೆಳೆ ಬರಿದು ಮಾಡಿವೆ.

ಅಮರಾವತಿ ಜಿಲ್ಲೆಯ ಮೂಲಕ ರಾಜ್ಯ ಪ್ರವೇಶಿಸಿದ ಮಿಡತೆಗಳ ಹಿಂಡು, ನಾಗಪುರ ಜಿಲ್ಲೆಯ ಕಟ್ತೋಲ್ ತಾಲ್ಲೂಕಿನ ರೈತರ ಹೊಲಗಳಿಗೆ ದಾಳಿ ಇರಿಸಿದೆ. ಮಿಡತೆಗಳನ್ನು ನಿಯಂತ್ರಿಸಲು ರಾಸಾಯನಿಕ ಸಿಂಪಡಣೆ ಮಾಡಲಾಗುತ್ತಿದೆ ಎಂದು ಮಹಾರಾಷ್ಟ್ರದ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಭೋಸ್ಲೆ ತಿಳಿಸಿರುತ್ತಾರೆ. ಮಹಾರಾಷ್ಟ್ರದಲ್ಲಿ ಮಿಡತೆಗಳ ಹತೋಟಿ ಸಾಧ್ಯವಾಗದಿದ್ದರೆ ಈ ರಾಜ್ಯದ ಜೊತೆ ಗಡಿ ಹಂಚಿಕೊಂಡಿರುವ ಕರ್ನಾಟಕದ ಜಿಲ್ಲೆಗಳಿಗೂ ಅವು ಪ್ರವೇಶಿಸುವ ಸಾಧ್ಯತೆ ಇದೆ. ಮಿಡತೆಗಳ ಹಾವಳಿಗೆ ತುತ್ತಾಗಿರುವ ರಾಜ್ಯಗಳ ಜೊತೆ ಗಡಿ ಹಂಚಿಕೊಂಡಿರುವ ಗುಜರಾತ್, ಪಾಕ್ ಗಡಿ ಹಂಚಿಕೊಂಡಿರುವ ಪಂಜಾಬ್, ಹರಿಯಾಣಗಳಲ್ಲಿ ಸಂಭಾವ್ಯ ದಾಳಿ ತಡೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

**ಮಿಡತೆ ತಡೆಗೆ ವಿಮಾನ:** ರಾಜಸ್ಥಾನದಲ್ಲಿ ಮಿಡತೆಗಳ ಹಾವಳಿ ನಿಯಂತ್ರಿಸಲು ವಿಮಾನ, ಡ್ರೋಣ್ ಮೂಲಕ ಕೀಟನಾಶಕದ ಸಿಂಪಡಣೆ ಮಾಡಲಾಗುತ್ತಿದೆ ಎಂದು ಕೃಷಿ ತಾಂತ್ರಿಕ ನಿರ್ವಹಣಾ ಸಂಸ್ಥೆ ತಿಳಿಸಿದೆ. ಈ ಮಿಡತೆಗಳು ಸಾಮಾನ್ಯವಾಗಿ ಪಶ್ಚಿಮ ರಾಜಸ್ಥಾನದಲ್ಲಿ ಪ್ರತಿವರ್ಷ ಉಪಟಳ ನೀಡುತ್ತವೆ. ಆದರೆ, ಈ ವರ್ಷ ಜೈಪುರ ಜಿಲ್ಲೆಗೂ ಕಾಲಿರಿಸಿ, ಗಿಡ–ಮರಗಳನ್ನೂ ಬಿಟ್ಟಿಲ್ಲ ಎಂದು ಸಂಸ್ಥೆಯ ಯೋಜನಾ ನಿರ್ದೇಶಕ ಬಿ.ಆರ್. ಕರ್ವಾ ತಿಳಿಸಿದರು. ರೈತರ ಬೆಳೆಯನ್ನು ರಕ್ಷಿಸಲು ಹೆಚ್ಚು ವಿಮಾನ ಸೇವೆ ಒದಗಿಸುವಂತೆ ಕೇಂದ್ರ ಕೃಷಿ ಸಚಿವ ಕೈಲಾಶ್ ಚೌಧರಿ, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ ಮನವಿ ಮಾಡಿಕೊಂಡಿರುತ್ತಾರೆ.

ಆಧಾರ:ವಿಜಯವಾಣಿ, ದಿನಾಂಕ:27.05.2020

## 13. ಸಚಿವರಿಗೆ ಸೋಂಕು: ಉತ್ತರಾಖಂಡದ ಇಡೀ ಸಂಪುಟ ಕ್ವಾರಂಟೈನ್

ಉತ್ತರಾಖಂಡದ ಸಚಿವ ಸತ್ಪಾಲ್ ಮಹಾರಾಜ್ ಅವರ ಪತ್ನಿ ಅಮೃತಾ ರಾವತ್ ಹಾಗೂ ಪುತ್ರನಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಇವರಲ್ಲದೆ ಕುಟುಂಬದ ಸದಸ್ಯರು ಹಾಗೂ ಸಿಬ್ಬಂದಿ ಸೇರಿ 22 ಮಂದಿಗೆ ಕೊರೊನಾ ತಗುಲಿದೆ. ಇದೇ ವೇಳೆ ಮಹಾರಾಜ್ ಸಚಿವ ಸಂಪುಟ ಸಭೆಯಲ್ಲಿ ಪಾಲ್ಗೊಂಡಿದ್ದರು. ಹೀಗಾಗಿ ಮುಖ್ಯಮಂತ್ರಿ ಹಾಗೂ ಇಡೀ ಸಂಪುಟದ ಸಚಿವರಿಗೆ ಕೊರೊನಾ ಭೀತಿ ಆರಂಭವಾಗಿದ್ದು, ಎಲ್ಲರನ್ನೂ ಮನೆಯಲ್ಲಿ ಕ್ವಾರಂಟೈನ್ ಮಾಡಲಾಗಿದೆಯೆಂದು ತಿಳಿದು ಬಂದಿದೆ.

ಆಧಾರ:ಕನ್ನಡ ಪ್ರಭ, ದಿನಾಂಕ:01.06.2020

## 14. ಪ್ರಕೋಪ ತೋರಿದ ನಿಸರ್ಗ

ರಾಷ್ಟ್ರದ ವಾಣಿಜ್ಯ ನಗರಿ ಮುಂಬೈ ಕೊರೊನಾ ಹೊಡೆತದಿಂದ ಸುಧಾರಿಸಿಕೊಳ್ಳುವ ಮೊದಲೇ, ನಿಸರ್ಗ ಚಂಡಮಾರುತ ದೊಡ್ಡ ಪ್ರಮಾಣದಲ್ಲಿಯೇ ದೇಶದ ಕರಾವಳಿಗೆ ಅಪ್ಪಳಿಸಿದ್ದು ಭಾರಿ ಅನಾಹುತ ಸೃಷ್ಟಿಸಿದೆ. ಮುಂಬೈ, ಪುಣೆಯಲ್ಲಿ ಸೈಕ್ಲೋನ್ ಎಫೆಕ್ಟ್ ಭಾರಿ ಪ್ರಮಾಣದಲ್ಲಿ ಕಾಣಿಸಿಕೊಳ್ಳುವ ಮೂಲಕ, ಜನ ಜೀವನ ಸಂಪೂರ್ಣ ಅಸ್ತವ್ಯಸ್ತವಾಯಿತು. ಅರಬ್ಬಿ ಸಮುದ್ರದಲ್ಲಿ ಉಂಟಾಗಿರುವ ನಿಸರ್ಗ ಚಂಡಮಾರುತ ತೀವ್ರ ಸ್ವರೂಪ ಪಡೆದುಕೊಂಡು ರಾಜ್ಯದ ಸಮುದ್ರ ತೀರವನ್ನು ಅಪ್ಪಳಿಸಿದ್ದು, ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಅಲಿಬಾಗ್ ಸಮೀಪದಲ್ಲಿ ತೀರ ದಾಟುವ ಪ್ರಕ್ರಿಯೆ ಮುಂದುವರಿಸಿದೆ. ಮುಂದಿನ ಆರು ಗಂಟೆಗಳಲ್ಲಿ ಚಂಡಮಾರುತದ ತೀವ್ರತೆ ದುರ್ಬಲಗೊಳ್ಳುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿದೆ. ಚಂಡಮಾರುತ ಹಿನ್ನೆಲೆಯಲ್ಲಿ ಮಹಾರಾಷ್ಟ್ರ, ಗುಜರಾತ್ ರಾಜ್ಯಗಳು ಕಟ್ಟೆಚ್ಚರ ವಹಿಸಿವೆ. ತೀರ ದಾಟುವ ಸಮಯದಲ್ಲಿ 90 ರಿಂದ 110 ಕಿಮೀ ವೇಗದಲ್ಲಿ ಬಿರುಗಾಳಿ ಬೀಸುವ ಸಾಧ್ಯತೆಯಿದೆ ಎಂದು ಅಂದಾಜಿಸಿದ್ದು, ಈ ಸಮಯದಲ್ಲಿ ಭಾರಿ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ (ಎನ್‌ಡಿಆರ್‌ಎಫ್) ಪಡೆಗಳು ರಂಗಕ್ಕೆ ಇಳಿದಿವೆ.

**ಮುಂಬೈನಲ್ಲಿ ನಿಷೇದಾಜ್ಞೆ:** ಮುಂಬೈನಲ್ಲಿ ಈಗಾಗಲೇ 144 ಸೆಕ್ಷನ್ ವಿಧಿಸಲಾಗಿದೆ. ಎರಡು ದಿನಗಳ ಕಾಲ ಮನೆಗಳಿಂದ ಹೊರಬರದಂತೆ ಎಚ್ಚರಿಕೆ ನೀಡಲಾಗಿದೆ. ಮುಂಬೈ ವಿಮಾನ ನಿಲ್ದಾಣದಲ್ಲಿ ಐ ಅಲರ್ಟ್ ಘೋಷಿಸಲಾಗಿದೆ. ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಪುಣೆಯ ತಗ್ಗು ಪ್ರದೇಶಗಳು ಜಲಾವೃತಗೊಂಡಿವೆ. ಮಹಾರಾಷ್ಟ್ರದ ರಾಯಗಢ, ರತ್ನಗಿರಿ, ಪಲ್ಘರ್, ಸಿಂಧು ದುರ್ಗ್, ಥಾಣೆ ಜಿಲ್ಲೆಗಳಲ್ಲಿ ಚಂಡಮಾರುತದ ಪರಿಣಾಮ ಅಧಿಕವಾಗಿರುತ್ತದೆ ಎಂದು ಅಧಿಕಾರಿಗಳು ಅಂದಾಜಿಸಿದ್ದು, ರಾಯಗಢ ಜಿಲ್ಲೆಯಲ್ಲಿ ಈವರೆಗೆ 13 ಸಾವಿರ ಮಂದಿಯನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಿದ್ದಾರೆ. ಗುಜರಾತ್ ನವಸಾರಿ ಜಿಲ್ಲೆಯ 7 ಗ್ರಾಮಗಳ ಜನರನ್ನು ತೆರವುಗೊಳಿಸಿದ್ದಾರೆ. ನೆರವಿನ ಕಾರ್ಯಗಳಿಗಾಗಿ ವಿಜಯವಾಡ ಸೇರಿದಂತೆ ಹಲವು ಪ್ರದೇಶಗಳಿಂದ ಎನ್‌ಡಿಆರ್‌ಆಫ್ ಪಡೆಗಳನ್ನು ಮಹಾರಾಷ್ಟ್ರಕ್ಕೆ ರವಾನಿಸಲಾಗಿದೆ.

ಮಹಾರಾಷ್ಟ್ರದಿಂದ ಚಂಡಮಾರುತದ ಎಫೆಕ್ಟ್ ಗುಜರಾತ್‌ನತ್ತ ತಿರುಗುವ ಸಾಧ್ಯತೆಯಿರುವುದರಿಂದ ಗುಜರಾತ್ ಸರ್ಕಾರ ಸಹ ಕಟ್ಟೆಚ್ಚರವಹಿಸಿದ್ದು, ತೀರ ಪ್ರದೇಶಗಳ ಜಿಲ್ಲೆಗಳಿಂದ 78 ಸಾವಿರ ಮಂದಿ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಕಳುಹಿಸಿದ್ದಾರೆ. ಚಂಡಮಾರುತ ತೀವ್ರತೆ ಕಡಿಮೆ ಇರಲಿದೆ ಎಂಬ ಮುನ್ಸೂಚನೆ ಹಿನ್ನೆಲೆಯಲ್ಲಿ ಸೂಕ್ತ ಮುನ್ನೆಚ್ಚರಿಕೆ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿರುತ್ತಾರೆ.

ಚಂಡಮಾರುತ ಹಿನ್ನೆಲೆಯಲ್ಲಿ ಈಗಾಗಲೇ ಹಲವು ರೈಲುಗಳನ್ನು ರದ್ದುಪಡಿಸಲಾಗಿದೆ. ಮತ್ತಷ್ಟು ರೈಲುಗಳ ಮಾರ್ಗ ಬದಲಿಸಲಾಗಿದೆ. ಮುಂಬೈ ಸಮುದ್ರ ತೀರದಲ್ಲಿ ಸಂಚಾರ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ವಿಪತ್ತು ಎದುರಿಸಲು ನೆರವಿಗಾಗಿ ಪಶ್ಚಿಮ ನೌಕಾದಳವನ್ನು ಸಹ ವ್ಯವಸ್ಥೆ ಮಾಡಲಾಗಿದೆ. ನಾಗರಿಕ ವಿಮಾನಯಾನ ಮಹಾನಿರ್ದೇಶಕರು ಎಚ್ಚರಿಕೆಗಳ ಬಗ್ಗೆ ವಿಮಾನಯಾನ ಸಂಸ್ಥೆಗಳು, ಪೈಲೆಟ್‌ಗಳಿಗೆ ಮಾರ್ಗಸೂಚಿ ಜಾರಿಗೊಳಿಸಿದ್ದಾರೆ.

**ಮಹಾರಾಷ್ಟ್ರಕ್ಕೆ ನಿಸರ್ಗ ಮಾರುತ: ಕರ್ನಾಟಕದಲ್ಲಿ ಹೈ ಅಲರ್ಟ್:**

ನಿಸರ್ಗಕ್ಕೆ ತತ್ತರಿಸಿರುವ ಮಹಾರಾಷ್ಟ್ರದಿಂದ ಎಚ್ಚೆತ್ತುಕೊಂಡಿರುವ ಕರ್ನಾಟಕ, ಕರಾವಳಿ ಭಾಗದಲ್ಲಿ ಹೈ ಅಲರ್ಟ್ ಘೋಷಿಸಿದೆ. ರಾಜ್ಯದಲ್ಲಿ 100–110 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಆದ್ದರಿಂದ ಕರ್ನಾಟಕ ಕರಾವಳಿ ಭಾಗದಲ್ಲೂ ಹೈ ಅಲರ್ಟ್ ಘೋಷಣೆ ಮಾಡಲಾಗಿದೆ. ಬೆಳಗ್ಗೆ 5.30ಕ್ಕೆ ನಿಸರ್ಗ ಚಂಡಮಾರುತ ತೀವ್ರತೆ ಪಡೆದುಕೊಂಡಿದೆ. ಈ ಸೈಕ್ಲೋನ್ ಗಂಟೆಗೆ 120 ಕಿ.ಮೀ. ವೇಗ ಪಡೆದುಕೊಳ್ಳುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಸಿದೆ. ಹೀಗಾಗಿ, ಮುಂಬೈ ಹಾಗೂ ಸುತ್ತಮುತ್ತ ಭಾಗದಲ್ಲಿ ಭಾರೀ ಹಾನಿ ಸೃಷ್ಟಿಯಾಗಬಹುದೆಂದು ಹೆಚ್ಚಿನ ಮುಂಜಾಗ್ರತೆ ಕೈಗೊಳ್ಳಲಾಗಿದೆ. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಸೂಚಿಸಲಾಗಿದೆ. ಕಾರವಾರ, ಕುಮಟಾ, ಉಡುಪಿ, ಮಂಗಳೂರು ಭಾಗದಲ್ಲಿ ನಿಸರ್ಗ ಚಂಡಮಾರುತದ ಎಫೆಕ್ಟ್ ಕೊಂಚ ಪ್ರಮಾಣದಲ್ಲಿ ಇರಲಿದೆ. ಕರಾವಳಿ ಭಾಗದಲ್ಲಿ ಭಾರಿ ಮಳೆ ಆಗುತ್ತಿದ್ದು, ಈ ಮಳೆ ಮುಂದುವರಿಯಲಿದೆ ಎಂದು ತಿಳಿದುಬಂದಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 04.06.2020

## 15. ಚೀನಾ ಸೇನೆ ಹಿಂತೆಗೆತಕ್ಕೆ ಪಟ್ಟು.

ಲಡಾಖ್‌ನಲ್ಲಿ ಗಡಿ ಬಿಕ್ಕಟ್ಟಿಗೆ ಕಾರಣವಾದ ಪಾಂಗ್‌ಗೊಂಗ್ ಸರೋವರ ಪ್ರದೇಶದಲ್ಲಿ ಚೀನಾ ಸೇನೆ 2020ರ ಏಪ್ರಿಲ್ ಹಿಂದಿನ ಸ್ಥಿತಿಗೆ ಮರಳಬೇಕೆಂದು ಭಾರತ ಪಟ್ಟು ಹಿಡಿದಿದೆ. ಪೂರ್ವ ಲಡಾಖ್‌ನಲ್ಲಿ ಕಳೆದೊಂದು ತಿಂಗಳಿನಿಂದ ಉದ್ಭವಿಸಿರುವ ಬಿಕ್ಕಟ್ಟು ಪರಿಹರಿಸುವ ಸಲುವಾಗಿ ಎರಡೂ ದೇಶಗಳ ಮಿಲಿಟರಿ ಕಮಾಂಡರ್‌ಗಳ ನಡುವಣ ಮೂರು ತಾಸುಗಳ ಮಾತುಕತೆಯಲ್ಲಿ ಭಾರತ ಮೇಲಿನ ಬೇಡಿಕೆ ಮುಂದಿಟ್ಟಿತು. ಗಲ್ವಾನ್ ಕಣಿವೆ ಬಳಿ ಚೀನಾ ತನ್ನ ಸೇನಾ ಜಮಾವಣೆಯನ್ನು ನಿಲ್ಲಿಸಿ ತನ್ನ ಪಡೆಗಳನ್ನು ಮೂಲ ಸ್ಥಾನಕ್ಕೆ ವಾಪಸ್ ಕರೆಸಿಕೊಳ್ಳಬೇಕೆಂದು ಭಾರತ ಒತ್ತಾಯಿಸಿದೆ. ವಾಸ್ತವ ನಿಯಂತ್ರಣ ರೇಖೆ ಪ್ರದೇಶದಲ್ಲಿ ಚೀನಾ ಭಾಗದಲ್ಲಿರುವ ಮೊಲ್ಡೊ ಎಂಬಲ್ಲಿ ಈ ಮಾತುಕತೆ ನಡೆದಿದೆ.

ಚೀನಾ ಕಡೆಯ ಪೀಪಲ್ಸ್ ಲಿಬರೇಷನ್ ಆರ್ಮಿಯ ದಕ್ಷಿಣ ಕ್ಸಿನ್‌ಜಿಯಾಂಗ್ ಮಿಲಿಟರಿ ವಲಯದ ಕಮಾಂಡರ್ ಮೇಜರ್ ಜನರಲ್ ಲಿಯು ಲಿನ್ ಹಾಗೂ ಭಾರತದ ಕಡೆಯಿಂದ 14ನೇ ಕಾರ್ಪ್ಸ್‌ನ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಹರಿಂದರ್ ಸಿಂಗ್ ನೇತೃತ್ವದಲ್ಲಿ ಉಭಯತ್ರರರ ಮಧ್ಯೆ ಚರ್ಚೆ ನಡೆಯಿತು. ಗಡಿಯಲ್ಲಿ ಭಾರತ ತನ್ನ ರಸ್ತೆ ನಿರ್ಮಾಣ ಕಾರ್ಯವನ್ನು ಸ್ಥಗಿತಗೊಳಿಸಬೇಕೆಂದು ಚೀನಾ ಒತ್ತಾಯಿಸಿದಾಗ ಈ ರಸ್ತೆ ನಿರ್ಮಾಣ ಕಾರ್ಯ ವಾಸ್ತವ ನಿಯಂತ್ರಣ ರೇಖೆಯೊಳಗೆ ನಡೆಯುತ್ತಿದೆ. ಈ ರಸ್ತೆ ನಿರ್ಮಾಣ ಕಾರ್ಯಕ್ಕೆ ಚೀನಾದ ಹಸ್ತಕ್ಷೇಪ ಸರಿಯಲ್ಲ ಎಂದು ಭಾರತ ವಾದಿಸಿತು. ಈ ಮಿಲಿಟರಿ ಮಾತುಕತೆ ಕುರಿತು ಅಧಿಕೃತ ಹೇಳಿಕೆಯನ್ನು ಹೊರಡಿಸಲಾಗಿಲ್ಲ. ಹಾಲಿ ಬಿಕ್ಕಟ್ಟು ಬಗೆಹರಿಸುವ ದಿಸೆಯಲ್ಲಿ ರಾಜ ತಾಂತ್ರಿಕ ಹಾಗೂ ಮಿಲಿಟರಿ ಮಟ್ಟದಲ್ಲಿ ಮಾತುಕತೆ ಮುಂದುವರೆಯುತ್ತಿರುವ ನಡುವೆ ಎರಡೂ ಕಡೆಯ ಅಧಿಕಾರಿಗಳು ಗಡಿಯಲ್ಲಿ ಶಾಂತಿ ಮರುಕಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಭಾರತೀಯ ಸೇನೆ ವಕ್ತಾರರು ತಿಳಿಸಿರುತ್ತಾರೆ.

ಹಾಲಿ ಬಿಕ್ಕಟ್ಟು ಶಮನಕ್ಕೆ ವಿವಿಧ ಮಟ್ಟದಲ್ಲಿ ಇನ್ನಷ್ಟು ಸುತ್ತಿನ ಮಾತುಕತೆಗಳು ಮುಂದುವರೆಯಲಿದೆ. ಆದರೆ ಚೀನಾ ಸೇನೆಯು ಕಳೆದ ಏಪ್ರಿಲ್‌ಗಿಂತ ಹಿಂದಿನ ಸ್ಥಿತಿಗೆ ಮರಳಬೇಕೆಂಬುದು ಭಾರತದ ವಾದ. ಕಳೆದ ತಿಂಗಳಲ್ಲಿ ಎರಡೂ ಕಡೆಯ ಮಧ್ಯೆ ಹಿಂಸಾತ್ಮಕ ಕಾದಾಟ ನಡೆದಿದ್ದಾಗ ಉಭಯ ಸೇನೆಗಳ ಸಿಬ್ಬಂದಿಗಳೂ ಗಾಯಗೊಂಡಿದ್ದರು.

**ಗಡಿಯಲ್ಲಿ ಕೆಂಪು ಸೇನೆ ಚಟುವಟಿಕೆ:–**

ಲಡಾಖ್‌ನ ಪಾಂಗೊಂಗ್ ತ್ಸೊ ಪ್ರದೇಶದ ಫಿಂಗರ್ ಹಾಗೂ ಪರ್ವತ ಭಾಗಗಳಲ್ಲಿ ಚೀನಾದ ತೀವ್ರ ಚಟುವಟಿಕೆಗಳು ಕಂಡು ಬಂದಿದ್ದು ಯಥಾಸ್ಥಿತಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿರುವುದು ಉಪಗ್ರಹ ಚಿತ್ರಗಳಿಂದ ಗೊತ್ತಾಗಿದೆ. ವಾಸ್ತವ ನಿಯಂತ್ರಣ ರೇಖೆಯು ದಟ್ಟಣೆ ಪ್ರದೇಶಗಳಲ್ಲಿ ಸಾಕಷ್ಟು ನಿರ್ಮಾಣ ಕಾರ್ಯಗಳು ನಡೆದಿವೆ, ಮೇ 27ರ ಉಪಗ್ರಹ ಚಿತ್ರಗಳನ್ನು ಅವಲೋಕಿಸಿದಾಗ ಈ ನಿರ್ಮಾಣ ಕಾರ್ಯಗಳೆಲ್ಲವೂ ಈ ಹಿಂದೆ ಇದ್ದಿರಲಿಲ್ಲ ಎಂದು ಕರ್ನಲ್ ದಿನ್ನಿ ಹೇಳುತ್ತಾರೆ. ಅವರು 2015ರಿಂದ 2017ರವರೆಗಿನ ಅವಧಿಯಲ್ಲಿ ತ್ಸೊ ಗಡಿಯಲ್ಲಿ ಕಮಾಂಡರ್ ಆಗಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:07.06.2020

## 16. ಮೂರು ರಾಜ್ಯಗಳಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ರದ್ದು

ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ತೆಲಂಗಾಣ, ತಮಿಳುನಾಡು ಮತ್ತು ಪುದುಚೇರಿಗಳಲ್ಲಿ 10ನೇ ತರಗತಿ ವಿದ್ಯಾರ್ಥಿಗಳನ್ನು ತ್ರೈಮಾಸಿಕ, ಅರ್ಧವಾರ್ಷಿಕ ಪರೀಕ್ಷೆ ಮತ್ತು ಹಾಜರಾತಿ ಆಧರಿಸಿ ಮುಂದಿನ ತರಗತಿಗೆ ತೇರ್ಗಡೆ ಮಾಡಲು ನಿರ್ಧರಿಸಲಾಗಿದೆ. ತಮಿಳುನಾಡಿನಲ್ಲಿ 9 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿಗಳು 10ನೇ ತರಗತಿಯಲ್ಲಿದ್ದು, ಅವರೆಲ್ಲರನ್ನು ಮುಂದಿನ ತರಗತಿಗೆ ತೇರ್ಗಡೆ ಮಾಡಿರುವುದಾಗಿ ತಿಳಿಸಲಾಗಿದೆ. ಲಾಕ್‌ಡೌನ್ ಕಾರಣದಿಂದಾಗಿ ಮುಂದೂಡಲಾಗಿದ್ದ ಪರೀಕ್ಷೆ ಜೂನ್ 15 ರಿಂದ ನಡೆಸಲು ನಿರ್ಧರಿಸಲಾಗಿತ್ತು. ಹೈಕೋರ್ಟ್ ಸೂಚನೆ ಮೇರೆಗೆ ಪಾಲಕರು ಮತ್ತು ಶಿಕ್ಷಕರೊಂದಿಗೆ ಸಭೆ ನಡೆಸಿ, ಪರೀಕ್ಷೆ ರದ್ದು ಮಾಡುವ ನಿರ್ಧಾರ ತೆಗೆದುಕೊಳ್ಳಲಾಗಿದೆ. ತೆಲಂಗಾಣದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ರದ್ದು ಮಾಡಿರುವುದಾಗಿ ಮುಖ್ಯಮಂತ್ರಿ ಕೆ.ಚಂದ್ರಶೇಖರರಾವ್ ತಿಳಿಸಿದ್ದಾರೆ. 5.35ಲಕ್ಷ ವಿದ್ಯಾರ್ಥಿಗಳಿಗೆ 6 ವಿಷಯಗಳ 11 ಪರೀಕ್ಷೆ ನಡೆಯಬೇಕಿತ್ತು. 3 ಪರೀಕ್ಷೆಗಳು ಮುಗಿಯುವಷ್ಟರಲ್ಲಿ ಲಾಕ್‌ಡೌನ್ ಜಾರಿಯಾಯಿತು. ಪುದುಚೇರಿಯಲ್ಲಿಯೂ ಪರೀಕ್ಷೆ ರದ್ದು ಮಾಡಿರುವುದಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿದೆ.

ಆಧಾರ:ವಿಜಯವಾಣಿ, ದಿನಾಂಕ: 10.06.2020

# ಭಾಗ-8

## ಅಂತಾರಾಷ್ಟ್ರೀಯ ಸುದ್ದಿಗಳು

### 1. ಜಾಗತಿಕ ಆರ್ಥಿಕತೆಯ ಕುಸಿತಃ ವಿಶ್ವಸಂಸ್ಥೆಯ ವರದಿಯಲ್ಲಿ ವ್ಯಕ್ತವಾದ ಆತಂಕ.

ವಿಶ್ವದಾದ್ಯಂತ ತಲ್ಲಣ ಮೂಡಿಸಿರುವ ಕೊರೊನಾ-2 ವೈರಸ್ ಪಿಡುಗಿನಿಂದಾಗಿ 2020ರಲ್ಲಿ ಜಾಗತಿಕ ಆರ್ಥಿಕ ವೃದ್ಧಿ ದರ ಶೇ 1ರಷ್ಟಕ್ಕೆ ಕುಸಿಯಲಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ. ಸರ್ಕಾರಗಳು ಅಗತ್ಯವಾದ ವಿತ್ತೀಯ ಉತ್ತೇಜನಾ ಕೊಡುಗೆಗಳನ್ನು ಪ್ರಕಟಿಸದಿದ್ದರೆ ಮತ್ತು ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧಗಳು ಮುಂದುವರೆಸಿದರೆ ವೃದ್ಧಿ ದರ ಇನ್ನಷ್ಟು ಕಡಿಮೆಯಾಗಬಹುದು ಎಂದು ಎಚ್ಚರಿಸಿದೆ.

ಕೋವಿಡ್-19 ಪಿಡುಗು ಜಾಗತಿಕ ಸರಕು ಪೂರೈಕೆ ಸರಣಿ ಮತ್ತು ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಗಮನಾರ್ಹ ಪ್ರಮಾಣದಲ್ಲಿ ಅಡ್ಡಿಪಡಿಸಿದೆ. ಸರಿಸುಮಾರು 100 ದೇಶಗಳು ಮಾರ್ಚ್‌ನಲ್ಲಿ ತಮ್ಮ ಅಂತರರಾಷ್ಟ್ರೀಯ ಗಡಿ ಮುಚ್ಚಿದ್ದವು. ಇದರಿಂದ ಜನರ ಚಲನವಲನ ಮತ್ತು ಪ್ರವಾಸಿಗರ ಭೇಟಿ ಸಂಪೂರ್ಣವಾಗಿ ನಿಂತಿದೆ. ಈ ದೇಶಗಳಲ್ಲಿನ ಲಕ್ಷಾಂತರ ಕಾರ್ಮಿಕರು ಉದ್ಯೋಗ ಕಳೆದುಕೊಳ್ಳುವ ಆತಂಕ ಎದುರಿಸುತ್ತಿದ್ದಾರೆ. ಆರ್ಥಿಕ ವ್ಯವಸ್ಥೆ ಕುಸಿದು ಬೀಳುವುದನ್ನು ತಡೆಯಲು ಸರ್ಕಾರಗಳು ದೊಡ್ಡ ಮೊತ್ತದ ಉತ್ತೇಜನಾ ಕೊಡುಗೆ ಘೋಷಿಸುತ್ತಿವೆ. ಇಂತಹ ಕೊಡುಗೆಗಳ ಹೊರತಾಗಿಯೂ ಒಟ್ಟಾರೆ ಜಾಗತಿಕ ಆರ್ಥಿಕತೆ ತೀವ್ರ ಸ್ವರೂಪದ ಹಿಂಜರಿತಕ್ಕೆ ಒಳಗಾಗಿದೆ. ಜಾಗತಿಕ ಆರ್ಥಿಕತೆಯ ವೃದ್ಧಿ ದರವು ಶೇ.0.9ರಷ್ಟಕ್ಕೆ ಕುಸಿಯುವ ಸಾಧ್ಯತೆ ಇದೆ. ಒಂದು ವೇಳೆ ಸರ್ಕಾರಗಳು ಹಣಕಾಸು ಬೆಂಬಲ ನೀಡದಿದ್ದರೆ, ಗ್ರಾಹಕರ ವೆಚ್ಚ ಹೆಚ್ಚಲು ನೆರವಾಗದಿದ್ದರೆ ಕುಸಿತದ ಪ್ರಮಾಣವು ಇನ್ನಷ್ಟು ಹೆಚ್ಚಲಿದೆ ಎಂದು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಹಾರಗಳ ಇಲಾಖೆಯು (ಡಿಇಎಸ್ಎ) ಎಚ್ಚರಿಸಿದೆ.

ಕೊರೊನಾ ಹಾವಳಿ ಕಂಡುಬರುವುದಕ್ಕಿಂತ ಮುಂಚೆ 2020ರಲ್ಲಿ ಜಾಗತಿಕ ಆರ್ಥಿಕ ವೃದ್ಧಿ ದರವು ಶೇ 2.5ರಷ್ಟು ಇರಲಿದೆ ಎಂದು ಅಂದಾಜಿಸಲಾಗಿತ್ತು. ಆರ್ಥಿಕ ವೃದ್ಧಿಯ ಕುಸಿತದ ತೀವ್ರತೆಯು ಎರಡು ಪ್ರಮುಖ ಸಂಗತಿಗಳನ್ನು ಆಧರಿಸಿರುತ್ತದೆ. ಪ್ರಮುಖ ದೇಶಗಳಲ್ಲಿ ಜಾರಿಯಲ್ಲಿ ಇರುವ ಜನರ ಚಲನವಲನ, ಆರ್ಥಿಕ ಚಟುವಟಿಕೆಗಳ ಮೇಲಿನ ನಿರ್ಬಂಧದ ಅವಧಿ ಮತ್ತು ಸರ್ಕಾರಗಳು ಘೋಷಿಸಿರುವ ವಿತ್ತೀಯ ಕೊಡುಗೆಗಳ ಯಶಸ್ಸು ಪ್ರಮುಖ ಪಾತ್ರ ನಿರ್ವಹಿಸಲಿದೆ ಎಂದು ಇಲಾಖೆ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ:03.04.2020

### 2. ವುಹಾನ್: ಮತ್ತೆ ಕೊರೊನಾ ಸೋಂಕು ಭೀತಿ

ಚೀನಾದ ವುಹಾನ್ ಪ್ರಾಂತ್ಯದಲ್ಲಿ ಮತ್ತೆ ಕೊರೊನಾ ವೈರಸ್ ಸೋಂಕು ವ್ಯಾಪಿಸುವ ಭೀತಿ ಎದುರಾಗಿದೆ. ಪ್ರಾಂತ್ಯದ 742 ಜನರಲ್ಲಿ ಕೋವಿಡ್-19 ದೃಢಪಟ್ಟಿದೆ. ಆದರೆ ಇವರ ತಪಾಸಣೆ ನಡೆಸಿದ ವೇಳೆ ರೋಗದ ಗುಣಲಕ್ಷಣಗಳು ಕಂಡುಬರದೇ ಇರುವುದು ಆತಂಕಕ್ಕೆ ಕಾರಣವಾಗಿದೆ.

ಯಾವುದೇ ಲಕ್ಷಣಗಳು ಗೋಚರಿಸದೆ (ಅಸಿಂಮ್ಟೊವ್ಯಾಟಿಕ್) ಕೋವಿಡ್-19 ಪ್ರಕರಣಗಳ ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿರುವ ಕಾರಣದಿಂದ ನಿವಾಸಿಗಳಿಗೆ ಮನೆಯೊಳಗೆ ಇರಲು ಸೂಚಿಸಲಾಗಿದೆ. ಅನಗತ್ಯವಾಗಿ ಹೊರಗಡೆ ತಿರುಗಾಡದಂತೆ ಎಚ್ಚರಿಸಲಾಗಿದೆ. ಪ್ರಸ್ತುತ ಚೀನಾದಲ್ಲಿ ಒಟ್ಟು 1,075 ಜನರು ಈ ರೀತಿ ಗುಣಲಕ್ಷಣಗಳು ಗೋಚರಿಸದೆ ಕೋವಿಡ್-19ಗೆ ತುತ್ತಾಗಿದ್ದಾರೆ. ಈ ಕಾರಣದಿಂದ ಸೋಂಕು ಮೊದಲು ಪತ್ತೆಯಾದ ವುಹಾನ್‌ನಲ್ಲಿರುವ 1.1 ಕೋಟಿ ಜನರನ್ನು ಆರೋಗ್ಯ ಪರೀಕ್ಷೆಗೆ ಒಳಪಡಿಸಲು ಚೀನಾ ಸರ್ಕಾರ ಚಿಂತನೆ ನಡೆಸಿದೆ. ಒಂಭತ್ತು ವಾರ ಅವಧಿಯ ಲಾಕ್‌ಡೌನ್ ಅನ್ನು ಮಾರ್ಚ್ 25ಕ್ಕೆ ಹಿಂಪಡೆಯಲಾಗಿತ್ತು.

ಕೊರೊನಾ ವೈರಸ್ ಸೋಂಕಿನ ಕುರಿತು ಮೊಟ್ಟ ಮೊದಲು ಎಚ್ಚರಿಸಿದ್ದ ಡಾ.ಲಿ.ವೆನ್ ಲಿಯಾಂಗ್ ಹಾಗೂ ಸೋಂಕಿನಿಂದ ಮೃತಪಟ್ಟವರನ್ನು ಸ್ಮರಿಸಿ ಏಪ್ರಿಲ್ 4ರಂದು ದೇಶದಾದ್ಯಂತ ಶೋಕ ಆಚರಿಸಲು ಚೀನಾ ನಿರ್ಧರಿಸಿದೆ. ದೇಶದಲ್ಲಿರುವ ಎಲ್ಲ ಸರ್ಕಾರಿ ಕಛೇರಿಗಳಲ್ಲಿ, ವಿಶ್ವದಾದ್ಯಂತ ಇರುವ ಚೀನಾದ ರಾಯಭಾರಿ ಕಛೇರಿಗಳಲ್ಲಿ ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ಇಳಿಸಲಾಗುವುದು ಎಂದು ತಿಳಿಸಿದೆ.

**ಭಾರತಕ್ಕೆ ನೆರವು:** ಕೊರೊನಾ ವೈರಸ್ ಸೋಂಕು ಪ್ರಸರಣ ತಡೆಯಲು ಭಾರತಕ್ಕೆ ರೂ.7,618ಕೋಟಿ (1 ಶತಕೋಟಿ ಡಾಲರ್) ತುರ್ತು ನೆರವು ನೀಡುವುದಕ್ಕೆ ವಿಶ್ವಬ್ಯಾಂಕ್ ಅನುಮೋದನೆ ನೀಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 04.04.2020

## 3. ಅಮೆರಿಕ: 10 ಸಾವಿರಕ್ಕೂ ಹೆಚ್ಚು ಸಾವು

ಅಮೆರಿಕದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ 10 ಸಾವಿರ ದಾಟಿದೆ. ಆತಂಕ ಮಡುಗಟ್ಟಿದಂತೆ, ಜನ ಪರಸ್ಪರ ಅಂತರ ಕಾಯ್ದುಕೊಳ್ಳಬೇಕು, ಆದಷ್ಟು ಮನೆಯಲ್ಲೇ ಇರಬೇಕು ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

ಈವರೆಗೂ 16 ಲಕ್ಷ ಮಾದರಿಗಳ ಪರೀಕ್ಷೆ ನಡೆದಿದೆ. ದೇಶದಾದ್ಯಂತ ಇದನ್ನು ವಿಕೋಪ ಎಂದು ಘೋಷಿಸಲಾಗಿದೆ. 3.3 ಕೋಟಿ ಜನರು ಮನೆಯಲ್ಲಿಯೇ ಉಳಿದಿದ್ದಾರೆ ಕೋವಿಡ್‌ನಿಂದಾಗಿ ಅಮೆರಿಕದಲ್ಲಿ 9,500 ಮಂದಿ ಸತ್ತಿದ್ದರು. ಇದು, 9/11ರ ಭಯೋತ್ಪಾದಕ ದಾಳಿಯಲ್ಲಿ ಮೃತಪಟ್ಟವರಿಗಿಂತಲೂ ಮೂರು ಪಟ್ಟು ಅಧಿಕ. ದೇಶದಲ್ಲಿ ಸುಮಾರು 3.47 ಲಕ್ಷ ಜನರು ಸೋಂಕು ಪೀಡಿತರಾಗಿದ್ದಾರೆ. ಸೋಂಕು ವಿರುದ್ಧ ಮಿಲಿಟರಿ ಶೈಲಿಯ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಬಣ್ಣಿಸಿದ ಟ್ರಂಪ್, ವಿವಿಧ ದೇಶಗಳಿಂದ ಸಾವಿರಾರು ಮುಖಗವಸು, ವೈದ್ಯಕೀಯ ಪರಿಕರಗಳನ್ನು ತರಿಸಲಾಗುತ್ತಿದೆ ಎಂದು ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಂಪ್ ಹೇಳಿದರು.

**ಕೆಲವು ಪ್ರಮುಖ ಸುದ್ದಿಗಳು:–**

- ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಕೋವಿಡ್–19 ಸೋಂಕಿಗೆ ಸಂಬಂಧಿಸಿದಂತೆ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಗಾಗಿದ್ದಾರೆ.
- ಯುದ್ಧಕಾಲದಲ್ಲಿ ಸೈನಿಕರು ತೋರುವ ಶಿಸ್ತು, ಹೋರಾಡುವ ಮನೋಭಾವವನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ಕೊರೊನಾ ವೈರಾಣು ವಿರುದ್ಧದ ಈ ಹೋರಾಟದಲ್ಲಿ ನಮಗೆ ಗೆಲುವು ಸಿಕ್ಕೇಸಿಗುತ್ತದೆ ಎಂದು ಬ್ರಿಟನ್ ರಾಣಿ ಎಲಿಜಬೆತ್–2 ವಿಶ್ವಾಸ ವ್ಯಕ್ತಪಡಿಸಿದ್ದಾರೆ.
- ಕೊರೊನಾ ವೈರಾಣು ಪರಿಣಾಮದ ಹಿನ್ನೆಲೆಯಲ್ಲಿ ಜಪಾನ್‌ನಲ್ಲಿ ತುರ್ತು ಸ್ಥಿತಿ ಘೋಷಣೆಯಾಗುವ ಸಂಭವವಿದೆ ಎಂಬ ಸುಳಿವನ್ನು ಪ್ರಧಾನಿ ಶಿಂಜೊ ಅಬೆ ನೀಡಿದ್ದಾರೆ.
- ಚೀನಾದಲ್ಲಿ ಹೊಸದಾಗಿ 39 ಜನರಲ್ಲಿ ಕೊರೊನಾ ಸೋಂಕು ಪತ್ತೆಯಾದ ವರದಿಯಾಗಿದೆ. ಅದರಲ್ಲಿ 38 ಪ್ರಕರಣಗಳು ವಿದೇಶಗಳಿಂದ ದೇಶಕ್ಕೆ ಮರಳಿದವರಲ್ಲಿ ಕಾಣಿಸಿಕೊಂಡಿವೆ.
- ಕೊರೊನಾ ವೈರಸ್ ಸೋಂಕು ಭೀತಿ ಹಿನ್ನೆಲೆಯಲ್ಲಿ ಬೈಸಾಕಿ ಉತ್ಸವವನ್ನು ರದ್ದುಗೊಳಿಸಿರುವುದಾಗಿ ಪಾಕಿಸ್ತಾನ ಹೇಳಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 07.04.2020

## 4. ಟ್ರಂಪ್ ಬೆದರಿಕೆ: ಔಷಧ ರಫ್ತಿಗೆ ಭಾರತ ನಿರ್ಧಾರ

ಕೊರೊನಾ ಸೋಂಕು ನಿವಾರಣೆಗೆ ಬಳಸುವ ಮಾತ್ರೆಗಳನ್ನು ಪೂರೈಸದಿದ್ದರೆ ಪ್ರತೀಕಾರ ತೆಗೆದುಕೊಳ್ಳುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದ ಬೆನ್ನಲ್ಲೇ ಭಾರತ ಕ್ರಮಕ್ಕೆ ಮುಂದಾಗಿದೆ. ಮಲೇರಿಯಾ ನಿರೋಧಕ ಮಾತ್ರೆ ಹೈಡ್ರಾಕ್ಸಿಕ್ಲೊರೊಕ್ವಿನ್ ಹಾಗೂ ಪ್ಯಾರಾಸಿಟಾಮೋಲ್ ಮಾತ್ರೆಗಳ ರಫ್ತಿನ ಮೇಲೆ ಇದ್ದ ನಿರ್ಬಂಧವನ್ನು ತಾತ್ಕಾಲಿಕವಾಗಿ ಸಡಿಲಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಹೈಡ್ರಾಕ್ಸಿಕ್ಲೊರೊಕ್ವಿನ್ ಮಾತ್ರೆಗಳನ್ನು ಕೊರೊನಾ ಸೋಂಕಿನಿಂದ ಬಳಲುವ ರೋಗಿಗಳ ಚಿಕಿತ್ಸೆಗೆ ಶಿಫಾರಸ್ಸು ಮಾಡಲಾಗಿದೆ. ಭಾರತ, ಅಮೆರಿಕ ಸೇರಿದಂತೆ ಹಲವು ದೇಶಗಳಲ್ಲಿ ಈ ಮಾತ್ರೆಗಳನ್ನು ಬಳಸಲಾಗುತ್ತದೆ. ಈ ಮಾತ್ರೆಗಳ ರಫ್ತು ನಿಷೇಧಿಸಿ ಕೇಂದ್ರ ಸರ್ಕಾರದ ವಿದೇಶಿ ವ್ಯಾಪಾರ ನಿರ್ದೇಶನಾಲಯವು (ಡಿಜಿಎಫ್‌ಟಿ) ಏಪ್ರಿಲ್

4ರಂದು ಆದೇಶ ಹೊರಡಿಸಿತ್ತು. ಆದರೆ ಟ್ರಂಪ್ ಅವರು ಮಾತ್ರೆ ಪೂರೈಸುವಂತೆ ಭಾರತಕ್ಕೆ ಒತ್ತಡ ಹೇರಿದರು. ನಿಷೇಧ ಹೇರಿ ಮೂರು ದಿನಗಳಲ್ಲೇ ಭಾರತ ನಿರ್ಧಾರವನ್ನು ಪರಿಷ್ಕರಿಸಿದೆ.

ಸೋಂಕಿನಿಂದ ಜಗತ್ತಿನ ಹಲವಾರು ದೇಶಗಳು ತೀವ್ರವಾಗಿ ತತ್ತರಿಸಿವೆ. ಮಾನವೀಯತೆ ನೆಲೆಗಟ್ಟಿನಲ್ಲಿ ಔಷಧ ರಫ್ತು ಮಾಡಲು ನಡೆದ ಉನ್ನತ ಮಟ್ಟದ ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅನುರಾಗ್ ಶ್ರೀವಾಸ್ತವ ಹೇಳಿದ್ದಾರೆ. ಆದರೆ ಯಾವ ದೇಶಗಳಿಗೆ ಮಾತ್ರೆಗಳನ್ನು ರಫ್ತು ಮಾಡಲಾಗುತ್ತದೆ ಎಂಬ ಬಗ್ಗೆ ಅವರು ಖಚಿತವಾಗಿ ಹೇಳಲಿಲ್ಲ.

ನರೇಂದ್ರ ಮೋದಿ ಅವರಿಗೆ ಕರೆ ಮಾಡಿದ್ದ ಟ್ರಂಪ್, ಮಾತ್ರೆಗಳ ರಫ್ತಿನ ಮೇಲಿನ ನಿರ್ಬಂಧ ತೆರವುಗೊಳಿಸಲು ಮನವಿ ಮಾಡಿದ್ದರು. ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಮೋದಿ ಅವರು ಔಷಧ ರಫ್ತು ಮಾಡಲು ಒಪ್ಪದಿದ್ದರೆ ತೊಂದರೆಯಿಲ್ಲ. ಕೋವಿಡ್ ಪಿಡುಗು ವಿಶ್ವವ್ಯಾಪಿಯಾಗಿ ಹರಡುತ್ತಿರುವ ಈ ಹೊತ್ತಿನಲ್ಲಿ ಅಂತರರಾಷ್ಟ್ರೀಯ ಸಮುದಾಯದ ಜೊತೆ ಸೌಹಾರ್ದ ಮತ್ತು ಬಾಂಧವ್ಯ ಗಟ್ಟಿಗೊಳಿಸಲು ಭಾರತ ಯಾವಾಗಲೂ ಬಯಸುತ್ತದೆ ಎಂದು ವಿದೇಶಾಂಗ ಇಲಾಖೆ ವಕ್ತಾರರು ತಿಳಿಸಿದ್ದಾರೆ.

ಹೈಡ್ರಾಕ್ಸಿಕ್ಲೋರೊಕ್ವಿನ್ ಪೂರೈಕೆ ಮಾಡುವಂತೆ ನೆರೆಯ ಶ್ರೀಲಂಕಾ, ನೇಪಾಳ ಸೇರಿದಂತೆ ಕನಿಷ್ಠ 20 ರಾಷ್ಟ್ರಗಳು ಈಗ ಬೇಡಿಕೆ ಸಲ್ಲಿಸಿವೆ. ಬೇಡಿಕೆ ಸಲ್ಲಿಸಿರುವ ಎಲ್ಲ ದೇಶಗಳಿಗೆ ಮಲೇರಿಯಾ ನಿರೋಧಕ ಮಾತ್ರೆಗಳನ್ನು ಹಂತಹಂತವಾಗಿ ಭಾರತ ಪೂರೈಸಲಿದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 08.04.2020

### 5. ವಿಶ್ವಸಂಸ್ಥೆಯ ಅಂಗವಾಗಿರುವ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಆತಂಕ

ಕೊರೊನಾ–2 ವೈರಾಣು ಸೃಷ್ಟಿಸಿರುವ ಬಿಕ್ಕಟ್ಟಿನಿಂದಾಗಿ ಭಾರತದ ಅಸಂಘಟಿತ ವಲಯದಲ್ಲಿ ಉದ್ಯೋಗ ಭದ್ರತೆ ಇಲ್ಲದೇ ದುಡಿಯುವ ಅಂದಾಜು 40 ಕೋಟಿ ಜನರು ತೀವ್ರ ಸ್ವರೂಪದ ಬಡತನಕ್ಕೆ ಸಿಲುಕಿಕೊಳ್ಳಲಿದ್ದಾರೆ ಎಂದು ವಿಶ್ವಸಂಸ್ಥೆಯ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ.

ಜೀವನೋಪಾಯಕ್ಕೆ ಕೆಲಸದ ಅಭದ್ರತೆ ಇರುವ ಅನೌಪಚಾರಿಕ ಆರ್ಥಿಕತೆಯ ಚಟುವಟಿಕೆಗಳನ್ನೇ ಹೆಚ್ಚಾಗಿ ನೆಚ್ಚಿಕೊಂಡಿರುವ ಅಸಂಖ್ಯ ಜನರು ಲಾಕ್‌ಡೌನ್ ಮತ್ತಿತರ ನಿರ್ಬಂಧನಾತ್ಮಕ ಕ್ರಮಗಳಿಂದ ತೀವ್ರವಾಗಿ ಬಾಧಿತರಾಗಿದ್ದಾರೆ. ನಗರಗಳಲ್ಲಿ ದುಡಿಮೆಗೆ ಎರವಾಗಿರುವ ಲಕ್ಷಾಂತರ ಜನರು ಅನ್ಯ ಮಾರ್ಗ ಇಲ್ಲದೇ ತಮ್ಮ ಹಳ್ಳಿಗಳಿಗೆ ಮರಳಿದ್ದಾರೆ. ಇಂತಹ 40 ಕೋಟಿ ಜನರು ಬಡತನದ ಬೇಗೆಗೆ ಸಿಲುಕುವ ಅಪಾಯ ಎದುರಿಸುತ್ತಿದ್ದಾರೆ.

ವಿಶ್ವದಾದ್ಯಂತ ಪ್ರವರ್ಧಮಾನಕ್ಕೆ ಬರುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 200 ಕೋಟಿ ಜನರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಇವರೆಲ್ಲರ ಬದುಕು ಸಂಕಷ್ಟಕ್ಕೆ ಸಿಲುಕಿದೆ. ಭಾರತ, ನೈಜೀರಿಯಾ ಮತ್ತು ಬ್ರೆಜಿಲ್‌ನಲ್ಲಿ ತೊಂದರೆಗೆ ಸಿಲುಕಿರುವ ಅನೌಪಚಾರಿಕ ಆರ್ಥಿಕ ವಲಯಗಳಲ್ಲಿ ದುಡಿಯುವ ಇಂತಹ ಉದ್ಯೋಗಿಗಳ ಸಂಖ್ಯೆ ಗಣನೀಯವಾಗಿದೆ. ಕೊರೊನಾ ಪಿಡುಗು ಭಾರಿ ವಿನಾಶಕಾರಿ ಸ್ವರೂಪದ ಪರಿಣಾಮಗಳನ್ನು ಉಂಟು ಮಾಡಿರುವುದರಿಂದ ವಿಶ್ವದಾದ್ಯಂತ 19.50 ಕೋಟಿಗಳಷ್ಟು ಪೂರ್ಣಾವಧಿ ಉದ್ಯೋಗ ಅವಕಾಶಗಳೂ ಕೈತಪ್ಪಲಿವೆ.

ವಿಶ್ವದಾದ್ಯಂತ ದುಡಿಯುವ ಗಂಟೆಗಳು ಮತ್ತು ಆದಾಯದ ಮೇಲೆಯೂ ಕೊರೊನಾ ವಿನಾಶಕಾರಿ ಸ್ವರೂಪದ ಪರಿಣಾಮ ಬೀರುತ್ತಿದೆ. ಕೊರೊನಾ ಬಾಧಿತ ಜಾಗತಿಕ ಆರ್ಥಿಕತೆಯಲ್ಲಿ ಶೇ 6.7ರಷ್ಟು ದುಡಿಮೆಯ ಗಂಟೆಗಳು ದ್ವಿತೀಯ ತ್ರೈಮಾಸಿಕದ ವೇಳೆಗೆ ನಷ್ಟಗೊಳ್ಳಲಿವೆ. ಇದು 19 ಕೋಟಿ ಉದ್ಯೋಗ ಅವಕಾಶಗಳಿಗೆ ಸಮನಾಗಿರಲಿದೆ.

**ವಿಶ್ವದ ಅತಿದೊಡ್ಡ ಸವಾಲು:** ಅಂತರರಾಷ್ಟ್ರೀಯ ಸಮುದಾಯದ ಪಾಲಿಗೆ ಇದೊಂದು ಅತಿದೊಡ್ಡ ಸವಾಲಾಗಿ ಪರಿಣಮಿಸಿದೆ. ಕೊರೊನಾ ವೈರಾಣು ವಿರುದ್ಧದ ಸಮರದಲ್ಲಿ ದೇಶವೊಂದು ವಿಫಲವಾದರೆ ಎಲ್ಲ ದೇಶಗಳೂ ವಿಫಲವಾದಂತೆ, ಜಾಗತಿಕ ಸಮುದಾಯಕ್ಕೆ ಅದರಲ್ಲೂ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಮತ್ತು ಸ್ವಂತ

ಬಲದ ಮೇಲೆ ಬಿಕ್ಕಟ್ಟಿನಿಂದ ಹೊರ ಬರಲು ಸಾಧ್ಯವಿಲ್ಲದವರಿಗೆ ನೆರವಾಗುವ ಮಾರ್ಗೋಪಾಯಗಳನ್ನು ತುರ್ತಾಗಿ ಕಂಡುಕೊಳ್ಳಬೇಕಾಗಿದೆ ಎಂದು 'ಐಎಲ್‌ಒ'ದ ಮಹಾನಿರ್ದೇಶಕ ಗಾಯ್ ರೈಡರ್ ಹೇಳಿದ್ದಾರೆ.

ವಿಶ್ವದಾದ್ಯಂತ ಅಸಂಘಟಿತ ಆರ್ಥಿಕ ವಲಯದಲ್ಲಿ ದುಡಿಯುತ್ತಿರುವ 200 ಕೋಟಿ ಜನರು ಕೆಲಸ ಕಳೆದುಕೊಳ್ಳುವ ಅಪಾಯ ಎದುರಿಸುತ್ತಿದ್ದಾರೆ. ಈಗಾಗಲೇ ಲಕ್ಷಾಂತರ ಜನರಿಗೆ ಇದರ ಬಿಸಿ ತಟ್ಟಿದೆ. ಮುಂಬರುವ ದಿನಗಳಲ್ಲಿನ ಬೆಳವಣಿಗೆಗಳು ಮತ್ತು ನೀತಿ ನಿರ್ಧಾರದ ಕ್ರಮಗಳು ಪ್ರಸಕ್ತ ಸಾಲಿನಲ್ಲಿ ಜಾಗತಿಕ ನಿರುದ್ಯೋಗದ ಚಿತ್ರಣ ನಿರ್ಧರಿಸಲಿವೆ. ಉದ್ಯೋಗಕ್ಕೆ ಎರವಾಗುವವರ ಕುರಿತ ಸದ್ಯದ ಅಂದಾಜು ವರ್ಷಾಂತ್ಯದ ವೇಳೆಗೆ ಬದಲಾಗುವ ಸಾಧ್ಯತೆ ಇದೆ.

ತಾತ್ಕಾಲಿಕ ಇಲ್ಲವೇ ಶಾಶ್ವತವಾಗಿ ಕೆಲಸದಿಂದ ವಜಾಗೊಳ್ಳುವ, ಕೆಲಸದ ಅವಧಿ ಕಡಿತಗೊಳ್ಳುವ ಮತ್ತು ವೇತನಕ್ಕೆ ಕತ್ತರಿ ಬೀಳಲಿದೆ ಎಂದು ಗುರುತಿಸಿರುವ ತೀವ್ರ ಬಾಧಿತ ವಲಯಗಳಲ್ಲಿ ವಿಶ್ವದಾದ್ಯಂತ 125 ಕೋಟಿ ಜನರು ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಬಹುತೇಕರು ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಇವರೆಲ್ಲರ ಆದಾಯ ಹಠಾತ್ತಾಗಿ ಕಡಿತಗೊಂಡರೆ ಅದರ ಪರಿಣಾಮಗಳು ಅನಾಹುತಕಾರಿ ಸ್ವರೂಪದಲ್ಲಿ ಇರಲಿವೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 09.04.2020

## 6. ಹಲವು ದೇಶಗಳು ಈಗ ನಿರಾಳ

ಬ್ರೆಜಿಲ್‌ನಲ್ಲಿ ಗಡಿಗಳನ್ನು ಕಳೆದೊಂದು ತಿಂಗಳಿನಿಂದ ಬಂದ್ ಮಾಡಿದ ಪರಿಣಾಮ, ಮಾದಕ ವಸ್ತು ಕಳ್ಳಸಾಗಣೆ ಬಹುತೇಕ ನಿಂತು ಹೋಗಿದೆ. ಇಂಗ್ಲೆಂಡ್ ಮತ್ತು ವೇಲ್‌ನಲ್ಲಿ ಅಪರಾಧ ಪ್ರಕರಣಗಳು ಶೇ.20ರಷ್ಟು ಇಳಿಕೆಯಾಗಿವೆ. ಇದೇ ವೇಳೆ ಕೌಟುಂಬಿಕ ದೌರ್ಜನ್ಯ ಸಂಬಂಧ ಸಹಾಯವಾಣಿಗೆ ಬರುತ್ತಿರುವ ಕರೆಗಳ ಪ್ರಮಾಣ ಶೇ.25ರಷ್ಟು ಏರಿಕೆಯಾಗಿದೆ. ಅಮೆರಿಕದ ಷಿಕಾಗೊದಲ್ಲಿ ಮಾದಕವಸ್ತು ಸಂಬಂಧಿ ಬಂಧನ ಪ್ರಕರಣಗಳಲ್ಲಿ ಶೇ.43ರಷ್ಟು ಇಳಿಕೆಯಾಗಿದೆ. ಲಾಸ್ ಏಂಜಲೀಸ್‌ನಲ್ಲಿ ಮಾರ್ಚ್ 15ರ ಬಳಿಕ ಶೇ.30ರಷ್ಟು ಪ್ರಕರಣಗಳು ಕಡಿಮೆಯಾಗಿವೆ.

ದಕ್ಷಿಣ ಆಫ್ರಿಕಾದಲ್ಲಿ ಅಪರಾಧ ಪ್ರಮಾಣ ತಗ್ಗಿದೆ, ಕೊಲೆ ಪ್ರಕರಣಗಳು 94ಕ್ಕೆ ಇಳಿಕೆ ಕಂಡಿವೆ. ಕಳೆದ ವರ್ಷದ ಅವಧಿಯಲ್ಲಿ 326 ಕೊಲೆ ಪ್ರಕರಣ ವರದಿಯಾಗಿದ್ದವು. ಅತ್ಯಾಚಾರ ಪ್ರಕರಣಗಳು 699 ರಿಂದ 101ಕ್ಕೆ ಕುಸಿದಿದ್ದರೆ, ದೈಹಿಕ ಹಲ್ಲೆ ಘಟನೆಗಳು 2,673 ರಿಂದ 456ಕ್ಕೆ ಇಳಿಕೆಯಾಗಿವೆ.

ಫಿಲಿಪ್ಪೀನ್ಸ್‌ನಲ್ಲಿ ಅಪರಾಧಗಳ ಪ್ರಮಾಣ ಶೇ.55ರಷ್ಟು ಕಡಿಮೆಯಾಗಿವೆ. ಫೆಬ್ರುವರಿ 22 ರಿಂದ ಮಾರ್ಚ್ 16ರವರೆಗೆ ನಡೆದ ಅಪರಾಧ ಪ್ರಕರಣಗಳಿಗೆ ಹೋಲಿಸಿದರೆ, ಮಾರ್ಚ್ 17 ರಿಂದ ಏಪ್ರಿಲ್ 9ರ ಅವಧಿಯಲ್ಲಿ ಅಪರಾಧಗಳು ಅರ್ಧಕ್ಕಿಂತ ಹೆಚ್ಚು ತಗ್ಗಿವೆ. 3,361ರಷ್ಟಿದ್ದ ಪ್ರಕರಣಗಳು 1,509ಕ್ಕೆ ಇಳಿದಿವೆ.

ಅರ್ಜೆಂಟೀನಾದಲ್ಲಿ ಜನರು ಮನೆಯಲ್ಲೇ ಇರುವಂತೆ ಕಟ್ಟುನಿಟ್ಟಾಗಿ ಆದೇಶ ಹೊರಡಿಸಿದ ಕಾರಣ, ಅಪರಾಧ ಘಟನೆಗಳು ಶೇ. 90ರಷ್ಟು ಕುಸಿದಿವೆ. ರಾಜಧಾನಿಯಲ್ಲಿ ದಿನಕ್ಕೆ 225ರಷ್ಟಿದ್ದ ಪ್ರಕರಣಗಳು 30ಕ್ಕೆ ಇಳಿದಿವೆ.

ಆಧಾರ:ಪ್ರಜಾವಾಣಿ, ದಿನಾಂಕ: 15.04.2020

## 7. ಚೀನಾದ ಹಿಡಿತದಿಂದ ಮುಕ್ತವಾಗಿದೆ ಎಂಬುದನ್ನು ಸಾಬೀತುಪಡಿಸಲು ತಾಕೀತು

ಚೀನಾದ ಪ್ರಭಾವಕ್ಕೊಳಗಾಗಿ ಕಾರ್ಯನಿರ್ವಹಿಸುವುದರಿಂದ ಹೊರಬಂದು ಸ್ವತಂತ್ರವಾಗಿ ಕಾರ್ಯನಿರ್ವಹಿಸದಿದ್ದರೆ ವಿಶ್ವ ಆರೋಗ್ಯ ಸಂಸ್ಥೆಯಿಂದ (ಡಬ್ಲ್ಯೂಎಚ್‌ಒ) ಹೊರನಡೆಯುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಕೆ ನೀಡಿದ್ದಾರೆ. ಡಬ್ಲ್ಯೂಎಚ್‌ಒ ಮುಂದಿನ 30 ದಿನದೊಳಗೆ ಸ್ವತಂತ್ರವಾಗಿ ಕೆಲಸ ಮಾಡುವ ಮನೋಭಾವ ಪ್ರದರ್ಶಿಸದಿದ್ದರೆ ಅದಕ್ಕೆ ಆರ್ಥಿಕ ನೆರವು ನೀಡುವುದನ್ನು ಕಾಯಂ ಸ್ಥಗಿತಗೊಳಿಸುವುದಾಗಿಯೂ ಗುಡುಗಿದ್ದಾರೆ. ಡಬ್ಲ್ಯೂಎಚ್‌ಒಗೆ ನೀಡಬೇಕಾದ 500 ಮಿಲಿಯನ್ ಡಾಲರ್ ವಾರ್ಷಿಕ ನೆರವನ್ನು ಟ್ರಂಪ್ ಕಳೆದ ತಿಂಗಳು ತಡೆಹಿಡಿದಿದ್ದಾರೆ. ಜಿನೀವಾದಲ್ಲಿ ನಡೆಯುತ್ತಿರುವ ವಿಶ್ವ ಆರೋಗ್ಯ 73ನೇ ಅಧಿವೇಶನದ ಸಂದರ್ಭದಲ್ಲೇ ಡಬ್ಲ್ಯೂಎಚ್‌ಒ ಮಹಾನಿರ್ದೇಶಕ ಟೆಡ್ರೋಸ್ ಅಧಾನೊಮ್

ಫೆಬ್ರಿಯೆಸಸ್‌ರಿಗೆ ಮೇ 18ರಂದು ಬರೆದ ನಾಲ್ಕು ಪುಟಗಳ ಪತ್ರದಲ್ಲಿ ಟ್ರಂಪ್ ಈ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಡಬ್ಲ್ಯೂಎಚ್‌ಒ ಸುಧಾರಣೆಗೆ ತಮ್ಮೊಂದಿಗೆ ಚರ್ಚೆ ಆರಂಭಿಸಿದ್ದು, ತುರ್ತಾಗಿ ಕ್ರಮಕೈಗೊಳ್ಳಬೇಕಾಗಿದೆ ಎಂದು ಮಹಾನಿರ್ದೇಶಕರಿಗೆ ಟ್ರಂಪ್ ಹೇಳಿದ್ದಾರೆ. ಡಬ್ಲ್ಯೂಎಚ್‌ಒ ಸಾಂಕ್ರಾಮಿಕವನ್ನು ಸರಿಯಾಗಿಯೇ ನಿಭಾಯಿಸಿದೆ. ಇದನ್ನು ರಾಜಕೀಯಗೊಳಿಸಬಾರದು. ಎಲ್ಲರೂ ಒಗ್ಗಟ್ಟಾಗುವುದೇ ರೋಗ ಸೋಲಿಸಲು ಇರುವ ಏಕೈಕ ಮಾರ್ಗ ಎಂದು ಟೆಡ್ರೋಸ್ ಟ್ರಂಪ್ ಟೀಕೆಗೆ ಉತ್ತರಿಸಿದ್ದರು.

ಅಮೆರಿಕದ ಬೆದರಿಕೆಯಿಂದ ಆತಂಕಕ್ಕೆ ಈಡಾಗಿರುವ ವಿಶ್ವ ಆರೋಗ್ಯ ಸಂಸ್ಥೆಯ ನೆರವಿಗೆ ಫ್ರಾನ್ಸ್, ದಕ್ಷಿಣ ಕೊರಿಯಾ, ದಕ್ಷಿಣ ಆಫ್ರಿಕಾ ಮತ್ತು ಜರ್ಮನಿ ಬಂದಿವೆ, ಸಂಸ್ಥೆಯ ಕಾರ್ಯನಿರ್ವಹಣೆಗೆ ಅಡ್ಡಿಯಾಗದಂತೆ ನೋಡಿಕೊಳ್ಳುವುದಾಗಿ ಈ ರಾಷ್ಟ್ರಗಳ ಚುನಾಯಿತ ಮುಖ್ಯಸ್ಥರು ಅಭಯ ನೀಡಿದ್ದಾರೆ.

ವೈರಸ್ ವ್ಯಾಪಿಸುವಲ್ಲಿ ಚೀನಾದ ಪಾತ್ರವಿದೆ ಹಾಗೂ ಡಬ್ಲ್ಯೂಎಚ್‌ಒ ಚೀನಾದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ. ಮಾರಕ ಕೊರೊನಾ ಸಾಂಕ್ರಾಮಿಕ ವ್ಯಾಧಿಗೆ ಸ್ಪಂದಿಸಲು ಟೆಡ್ರೋಸ್ ಮತ್ತು ಡಬ್ಲ್ಯೂಎಚ್‌ಒ ಸರಿಯಾದ ಕ್ರಮ ಕೈಗೊಳ್ಳಲಿಲ್ಲ ಹಾಗೂ ಮುಚ್ಚಿಹಾಕಲು ಪ್ರಯತ್ನಿಸಿದೆ. ಡಬ್ಲ್ಯೂಎಚ್‌ಒ ಮಾಡಿದ ಮುಚ್ಚುಮರೆಯು ಜಗತ್ತಿಗೆ ಅತಿ ದುಬಾರಿಯಾಗಿ ಪರಿಣಮಿಸಿತು ಎಂದು ಟ್ರಂಪ್ ಆರೋಪ ಮಾಡಿರುತ್ತಾರೆ.

**ಸ್ವತಂತ್ರ ತನಿಖೆಗೆ ಅಸ್ತು :** ಕೊರೊನಾ ಸೋಂಕಿನ ಹಾವಳಿಗೆ ಡಬ್ಲ್ಯೂಎಚ್‌ಒ ಹೇಗೆ ಪ್ರತಿಕ್ರಿಯಿಸಿತು ಮತ್ತು ನಿಭಾಯಿಸಿತು ಎನ್ನುವ ಬಗ್ಗೆ ಸ್ವತಂತ್ರ ತನಿಖೆ ನಡೆಸಬೇಕೆಂಬ ಸದಸ್ಯ ದೇಶಗಳ ಒತ್ತಾಯಕ್ಕೆ ಮಣಿದಿರುವ ಡಬ್ಲ್ಯೂಎಚ್‌ಒ ತನಿಖೆಗೆ ಸಮ್ಮತಿಸಿದೆ. ಭಾರತ ಸೇರಿದಂತೆ ಸುಮಾರು 123 ದೇಶಗಳು ತಮ್ಮ ಆಗ್ರಹವುಳ್ಳ ಗೊತ್ತುವಳಿಯೊಂದನ್ನು ಮಂಡಿಸಿದ್ದವು. ಆಫ್ರಿಕಾ ದೇಶಗಳ ಒಕ್ಕೂಟ, ಐರೋಪ್ಯ ಒಕ್ಕೂಟ ಮತ್ತು ಇತರ ದೇಶಗಳು ತನಿಖೆಗೆ ಒಕ್ಕೊರಲ ದನಿಯೆತ್ತಿದ್ದವು. ಸೋಂಕು ನಿರ್ವಹಣೆ ಬಗೆಗಿನ ತನಿಖೆಗೆ ಒಪ್ಪಿರುವ ಜಾಗತಿಕ ಆರೋಗ್ಯ ವೇದಿಕೆ, ವೈರಸ್ ಮೂಲದ ಬಗ್ಗೆ ತನಿಖೆ ನಡೆಸುವ ಬಗ್ಗೆ ಮಾತ್ರ ಮೌನವಾಗಿದೆ. ಈ ವಿಷಯವೇ ಅತ್ಯಂತ ಮಹತ್ವದ್ದಾಗಿದ್ದು ವೈರಾಣು ಮೂಲದ ಬಗ್ಗೆ ಚೀನಾ ಮತ್ತು ಅಮೆರಿಕ ಪರಸ್ಪರರ ವಿರುದ್ಧ ದೋಷಾರೋಪ ಮಾಡಿ ಕಚ್ಚಾಡುತ್ತಿವೆ. ಚೀನಾದ ಪ್ರಯೋಗಾಲಯದಲ್ಲಿ ವೈರಸ್ ಸೃಷ್ಟಿಯಾಗಿರುವುದಕ್ಕೆ ತಮ್ಮ ಬಳಿ ಸಾಕ್ಷ್ಯವಿದೆ ಎಂದು ಟ್ರಂಪ್ ಬಲವಾಗಿ ಪ್ರತಿಪಾದಿಸುತ್ತಿದ್ದಾರೆ.

**ಮುಕ್ತವಾಗಿ ಮಾಹಿತಿ ನೀಡಿದ್ದೇವೆ :** ವುಹಾನ್‌ನಲ್ಲಿ ವ್ಯಾಧಿ ಕಾಣಿಸಿಕೊಂಡ ನಂತರ ಚೀನಾ ಮುಕ್ತವಾಗಿ, ಪಾರದರ್ಶಕತೆ ಹೊಣೆಗಾರಿಕೆಯಿಂದ ವರ್ತಿಸಿದೆ. ವೈರಸ್‌ನ ಅನುವಂಶೀಯ ವಿವರ ಸೇರಿ ಎಲ್ಲ ಮಾಹಿತಿಗಳನ್ನು ಚೀನಾ ಡಬ್ಲ್ಯೂಎಚ್‌ಒ ಹಾಗೂ ಇತರ ದೇಶಗಳಿಗೆ ಒದಗಿಸಿದೆ ಎಂದು ಅಧ್ಯಕ್ಷ ಕ್ಸಿಜಿನ್‌ಪಿಂಗ್ ಹೇಳಿದ್ದಾರೆ. ಕೊರೊನಾ ವಿರುದ್ಧ ಹೋರಾಡಲು 200 ಕೋಟಿ ಡಾಲರ್ ನೆರವು ನೀಡುವುದಾಗಿಯೂ ಪ್ರಕಟಿಸಿದ್ದಾರೆ.

**ಭಾರತಕ್ಕೆ ಡಬ್ಲ್ಯೂಎಚ್‌ಒ ಕಾರ್ಯಕಾರಿ ನೇತೃತ್ವ :** ವಿಶ್ವ ಆರೋಗ್ಯ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಮುಖ್ಯಸ್ಥ ಸ್ಥಾನವನ್ನು ಭಾರತ ಅಲಂಕರಿಸಿದೆ. ಮೇ 18 ಮತ್ತು 19ರಂದು ನಡೆದ 73ನೇ ವಿಶ್ವ ಆರೋಗ್ಯ ಸಭೆಯಲ್ಲಿ ಭಾರತವನ್ನು ಈ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ. ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಕೇಂದ್ರ ಆರೋಗ್ಯ ಸಚಿವ ಡಾ:ಹರ್ಷವರ್ಧನ್ ಹೆಸರನ್ನು ಭಾರತ ಪ್ರಸ್ತಾಪಿಸಿದೆ. ಕಳೆದ ಒಂದು ವರ್ಷದಿಂದ ಜಪಾನ್ ಮುಖ್ಯಸ್ಥ ಸ್ಥಾನದಲ್ಲಿತ್ತು.

ಆಧಾರ:ವಿಜಯವಾಣಿ, ದಿನಾಂಕ:20.05.2020

## 8. ವಿಶ್ವದಾದ್ಯಂತ ಸೋಂಕಿತರ ಸಂಖ್ಯೆ:50 ಲಕ್ಷ ಸನಿಹ

ಜಾಗತಿಕವಾಗಿ ಮಾರಕ ಕೊರೊನಾ ವೈರಸ್ ಸೋಂಕಿಗೆ ಒಳಗಾದವರ ಸಂಖ್ಯೆ 50 ಲಕ್ಷದ ಗಡಿ ಸಮೀಪಿಸಿದ್ದು, ಪ್ರತಿ ದಿನ ಸರಾಸರಿ 80 ರಿಂದ 90 ಸಾವಿರ ಹೊಸ ಪ್ರಕರಣಗಳು ವರದಿಯಾಗುತ್ತಿವೆ 58 ಸಾವಿರ ಹೊಸ ಪ್ರಕರಣಗಳೊಂದಿಗೆ, ಒಟ್ಟು ಸೋಂಕಿತರ ಸಂಖ್ಯೆ 49.47ಲಕ್ಷಕ್ಕೆ ಏರಿಕೆಯಾಗಿದೆ. ವಿಶ್ವದಾದ್ಯಂತ ಈವರೆಗೆ 3.22ಲಕ್ಷ ಜನರು ಸಾವನ್ನಪ್ಪಿದ್ದಾರೆ. 19.36ಲಕ್ಷ ರೋಗಿಗಳು ಈವರೆಗೆ ಚೇತರಿಸಿಕೊಂಡಿದ್ದು, ಇನ್ನೂ 26 ಲಕ್ಷ ಸಕ್ರಿಯ ಪ್ರಕರಣಗಳಿವೆ. ಇದರಲ್ಲಿ 45 ಸಾವಿರ ರೋಗಿಗಳ ಸ್ಥಿತಿ ಚಿಂತಾಜನಕವಾಗಿದೆ. ಅಮೆರಿಕದಲ್ಲಿ ಈವರೆಗೆ

92 ಸಾವಿರ ಜನರು ಮೃತಪಟ್ಟಿದ್ದು, ಸೋಂಕಿತರ ಸಂಖ್ಯೆ 15.58 ಲಕ್ಷಕ್ಕಿಂತ ಅಧಿಕವಾಗಿದೆ. ನಂತರದ ಸ್ಥಾನದಲ್ಲಿ ರಷ್ಯಾ ಇದ್ದು, ಅಲ್ಲಿನ ಸೋಂಕಿತರ ಸಂಖ್ಯೆ 2.99 ಲಕ್ಷಕ್ಕೆ ಏರಿಕೆಯಾಗಿದೆ.

ದೇಶದಲ್ಲಿ ಒಟ್ಟು ಸೋಂಕಿತರ ಸಂಖ್ಯೆ ಈಗಾಗಲೇ ಲಕ್ಷ ದಾಟಿದೆ. ಜಾಗತಿಕವಾಗಿ 1 ಲಕ್ಷಕ್ಕೂ ಅಧಿಕ ಸೋಂಕು ಪ್ರಕರಣಗಳನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ 11ನೇ ಸ್ಥಾನಕ್ಕೇರಿದೆ. 6,119 ಹೊಸ ಪ್ರಕರಣಗಳೊಂದಿಗೆ ಒಟ್ಟು ಸೋಂಕಿತರ ಸಂಖ್ಯೆ 1,06,446ಕ್ಕೆ ಏರಿಕೆಯಾಗಿದೆ. ಹೊಸದಾಗಿ 145 ಸಾವು ಪ್ರಕರಣಗಳು ವರದಿಯಾಗಿದ್ದು, ಮೃತರ ಸಂಖ್ಯೆ 3,301ಕ್ಕೆ ಏರಿದೆ. ಈವರೆಗೆ 42 ಸಾವಿರಕ್ಕೂ ಅಧಿಕ ರೋಗಿಗಳು ಚೇತರಿಸಿಕೊಂಡಿದ್ದಾರೆ. 60 ಸಾವಿರಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿವೆ. ಮಹಾರಾಷ್ಟ್ರದಲ್ಲಿ 37 ಸಾವಿರಕ್ಕೂ ಅಧಿಕ ಕೇಸ್ ವರದಿಯಾಗಿದೆ. ಮೃತರ ಸಂಖ್ಯೆ 1300ಕ್ಕಿಂತ ಹೆಚ್ಚಿದ್ದು, ದೇಶದ ಒಟ್ಟು ಸೋಂಕು ಮತ್ತು ಸಾವಿನಲ್ಲಿ ಮಹಾರಾಷ್ಟ್ರದಲ್ಲೇ ಶೇ. 30ಕ್ಕಿಂತ ಅಧಿಕ ಪಾಲು ಹೊಂದಿದೆ.

ಭಾರತದಲ್ಲಿ ಪ್ರತಿ ಲಕ್ಷ ಜನರಲ್ಲಿ ಕೊರೊನಾಗೆ ಸಾವನ್ನಪ್ಪುವವರ ಪ್ರಮಾಣ 0.2 ಇದ್ದು, ಜಾಗತಿಕವಾಗಿ ಈ ಪ್ರಮಾಣ 4.1 ಇದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಕೊರೊನಾದಿಂದ ತೀವ್ರ ಬಾಧಿತವಾಗಿರುವ ಅಮೆರಿಕದಲ್ಲಿ ಪ್ರತಿ 1 ಲಕ್ಷ ಜನರಿಗೆ 26.6 ಸಾವು ಸಂಭವಿಸುತ್ತಿವೆ. ಬ್ರಿಟನ್‌ನಲ್ಲಿ 52, ಇಟಲಿಯಲ್ಲಿ 52.8, ಫ್ರಾನ್ಸ್‌ನಲ್ಲಿ 41.9 ಹಾಗೂ ಸ್ಪೇನ್‌ನಲ್ಲಿ 59.2 ಸಾವುಗಳು ಪ್ರತಿ 1 ಲಕ್ಷಕ್ಕೆ ಸಂಭವಿಸುತ್ತಿವೆ. ಭಾರತದಲ್ಲಿ ಈವರೆಗೆ 24.25ಲಕ್ಷ ಮಾದರಿಗಳ ಪರೀಕ್ಷೆ ನಡೆಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

ಆಧಾರ:ವಿಜಯವಾಣಿ, ದಿನಾಂಕ: 20.05.2020

## 9. ನಿಶ್ಯಸ್ತ್ರಯುದ್ಧದಿಂದ ಫ್ರಾನ್ಸ್ ಕಂಗಾಲು

ಜಾಗತಿಕ ಮಹಾಮಾರಿ ಕೊರೊನಾ ವಿರುದ್ಧ ಯುದ್ಧ ಘೋಷಣೆ ಮಾಡಿದ್ದ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್ ಈಗ ಮೌನವಾಗಿದ್ದಾರೆ. ಯುದ್ಧ ಗೆಲ್ಲಲು ಅವರಿಗೆ ಸಾಧ್ಯವಾಗುತ್ತಿಲ್ಲ. ಸಮರ ಸೇನಾನಿಗಳು ಸರಿಯಾದ ಶಸ್ತ್ರಾಸ್ತ್ರಗಳಿಲ್ಲದೆ. ಅರ್ಥಾತ್ ಕೊರೊನಾ ಕೇಸ್‌ಗಳ ನಿರ್ವಹಣೆಗೆ ಬೇಕಾಗಿರುವ ಆರೋಗ್ಯ ಸಾಮಗ್ರಿಗಳಿಲ್ಲದೆ ದೇಶ ಪರದಾಡುತ್ತಿದೆ. ಅದಕ್ಕಾಗಿ ವಿದೇಶಗಳನ್ನು ಅವಲಂಬಿಸಿದೆ. ಸಕಾಲದಲ್ಲಿ ಜನರಿಗೆ ಸೂಕ್ತ ಚಿಕಿತ್ಸೆ ಸಿಗಲಿಲ್ಲ ಎಂಬ ವ್ಯಾಪಕ ಟೀಕೆಗೆ ಸರ್ಕಾರ ಗುರಿಯಾಗಿದೆ.

ಕೊರೊನಾ ಕೇಸುಗಳ ಪಟ್ಟಿಯಲ್ಲಿ ಫ್ರಾನ್ಸ್‌ಗೆ ಜಾಗತಿಕವಾಗಿ 7ನೇ ಸ್ಥಾನ. ಈವರೆಗೆ ದೇಶದಲ್ಲಿ 1.80 ಲಕ್ಷ ಪ್ರಕರಣಗಳು ವರದಿಯಾಗಿದ್ದು, 28,239 ಮಂದಿ ಮೃತಪಟ್ಟಿದ್ದಾರೆ. 61 ಸಾವಿರ ಮಂದಿ ಗುಣಮುಖರಾಗಿದ್ದರೂ, 90 ಸಾವಿರದಷ್ಟು ಕೇಸು ಇನ್ನೂ ಸಕ್ರಿಯವಾಗಿವೆ. ಕೊರೊನಾ ನಿರ್ವಹಣೆಗೆ ಅಗತ್ಯವಿರುವ ಔಷಧ ಸಾಮಗ್ರಿಗಳಿಗೆ ವಿದೇಶಿ ಕಾರ್ಖಾನೆಗಳ ಮೇಲೆ ಅವಲಂಬಿತವಾಗಿರುವ ಫ್ರಾನ್ಸ್‌ಗೆ ಫೇಸ್ ಮಾಸ್ಕ್, ಪರೀಕ್ಷಾ ಕಿಟ್, ವೆಂಟಿಲೇಟರ್, ಥರ್ಮಾಮೀಟರ್ ಜ್ವರ ಕಡಿಮೆ ಮಾಡುವ ಔಷಧಗಳ ದೇಶೀಯ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಾಗುತ್ತಿಲ್ಲ. ಈ ನಡುವೆ, ಲಾಕ್‌ಡೌನ್ ದಿನಗಳಲ್ಲಿ ಜಾರಿ ಮಾಡಿದ್ದ ಕಠಿಣ ನಿಯಮಗಳನ್ನು ಸಡಿಲಗೊಳಿಸಲಾಗುತ್ತಿದೆ.

ಸಾಂಕ್ರಾಮಿಕ ರೋಗಗಳನ್ನು ನಿಭಾಯಿಸಲು ಫೇಸ್ ಮಾಸ್ಕ್ ಅನಿವಾರ್ಯವೆಂದು ಫ್ರಾನ್ಸ್ ಬಹಳ ಹಿಂದೆಯೇ ಗುರುತಿಸಿತ್ತು. ಆದರೆ, ಕಳೆದ ದಶಕದಲ್ಲಿ, ಮುಖ್ಯವಾಗಿ ಹಣಕಾಸು ಕಾರಣಗಳಿಗಾಗಿ ಸರ್ಕಾರವು ಅವುಗಳನ್ನು ದಾಸ್ತಾನು ಮಾಡುವುದನ್ನು ನಿಲ್ಲಿಸಿತ್ತು. ಅದೇ ವೇಳೆ ದೇಶೀಯ ಉತ್ಪಾದನೆ ಕುಸಿದಿದ್ದಲ್ಲದೆ ಔಷಧ ಉದ್ಯಮಗಳೂ ವಿದೇಶದತ್ತ ಮುಖ ಮಾಡಿದವು.

ಬೃಹತ್ ಪ್ರಮಾಣ ಔಷಧೋಪಕರಣಗಳ ದಾಸ್ತಾನು ಈಗ ಅಗತ್ಯವಿಲ್ಲ ಎನ್ನುವುದು ನಮ್ಮ ಅಭಿಪ್ರಾಯ. ಈಗಿರುವ ಉತ್ಪಾದನಾ ಘಟಕಗಳು ತ್ವರಿತಗತಿಯಲ್ಲಿ ಕಾರ್ಯನಿರ್ವಹಿಸಲು ಸಮರ್ಥವಾಗಿವೆ ಎಂದು ಆರೋಗ್ಯ ಸಚಿವ ಆಲಿವಿಯರ್ ವೆರಾನ್ ಕಳೆದ ಮಾರ್ಚ್‌ನಲ್ಲಿ ತಿಳಿಸಿದ್ದರು. ಆದರೆ ಕೊರೊನಾ ವೈರಾಣುವಿನ ವ್ಯಾಪ್ತಿ ಮತ್ತು ವೇಗವು ಆ ತರ್ಕವನ್ನು ತಳ್ಳಿಹಾಕಿತು. ಫೇಸ್ ಮಾಸ್ಕ್‌ಗಳ ತಯಾರಿಕೆಯಲ್ಲಿ ವಿಶ್ವದಲ್ಲೇ ಮುಂಚೂಣಿಯಲ್ಲಿರುವ ಚೀನಾಕ್ಕೆ ವಿದೇಶಗಳಿಂದ ಬಂದ ಭಾರಿ ಪ್ರಮಾಣದ ಮಾಸ್ಕ್‌ಗಳ ಬೇಡಿಕೆಯನ್ನು ನಿರ್ವಹಿಸುವುದೇ ಕಷ್ಟಸಾಧ್ಯವಾಯಿತು. ಔಷಧೋತ್ಪನ್ನಗಳ ಪ್ರಮುಖ ರಫ್ತುದಾರ ಭಾರತವು ಕೊರತೆಯ ಭಯದಿಂದಾಗಿ ರಫ್ತುಗಳನ್ನು ತಾತ್ಕಾಲಿಕವಾಗಿ ನಿಷೇಧಿಸಿತು. ಜಾಗತಿಕ ಪೂರೈಕೆ ಸರಪಳಿ ನಿಷ್ಕ್ರಿಯಗೊಳ್ಳುತ್ತಿದ್ದರಿಂದ ಚೀನಾ ಮತ್ತು ಇತರೆಡೆಗಳಿಂದ ನೇರವಾಗಿ ಔಷಧೋತ್ಪನ್ನಗಳನ್ನು ಖರೀದಿಸಲು ಫ್ರೆಂಚ್

ಸರ್ಕಾರ ಪರದಾಡಿತು. ಈ ವಿಳಂಬ ಪ್ರಕ್ರಿಯೆ ಜನರ ಆರೋಗ್ಯದ ಮೇಲೂ ಪರಿಣಾಮ ಬೀರಿತು. ಕೊನೆಗೂ ಹೇಗೋ ಕಷ್ಟಪಟ್ಟು ಚೀನಾದಿಂದ ಮಾಸ್ಕ್‌ಗಳನ್ನು ತರಿಸಿಕೊಳ್ಳಲಾಯಿತು. ಬಹುಶಃ ಇದೇ ಕಾರಣಕ್ಕೆ ಫ್ರಾನ್ಸ್‌ನಲ್ಲಿ ಕೊರೊನಾ ಸಾವಿನ ಪ್ರಮಾಣ ನಿರೀಕ್ಷೆಗಿಂತ ಹೆಚ್ಚೇ ಇದೆ. ಅಮೆರಿಕಕ್ಕೆ ಹೋಲಿಸಿದರೆ ಸಾವಿನ ಪ್ರಮಾಣ ಶೇ.60 ಹೆಚ್ಚು ಎನ್ನುವುದು ನಿಜಕ್ಕೂ ಆತಂಕಕಾರಿ. ಯೂರೋಪಿಯನ್ ಒಕ್ಕೂಟದಲ್ಲಿ ಫ್ರಾನ್ಸ್‌ಗೆ ಪ್ರತಿಸ್ಪರ್ಧಿಯಾಗಿರುವ ಜರ್ಮನಿ ಸಾವಿನ ಪ್ರಮಾಣ ತಗ್ಗಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:20.05.2020

## 10. ಪೋಲೆಂಡ್ ಬಾವಿಯಲ್ಲಿ ಹಿಟ್ಲರ್‌ನ 28 ಟನ್ ಚಿನ್ನ

ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಅಡಾಲ್ಫ್ ಹಿಟ್ಲರ್‌ನ ನಾಜಿ ಸೇನೆ 1945ರಲ್ಲಿ 28 ಟನ್ ಚಿನ್ನ ಹೂತಿಟ್ಟಿದ್ದ ಸ್ಥಳ ಈಗ ಬಹಿರಂಗವಾಗಿದ್ದು, ಭಾರಿ ಸಂಚಲನಕ್ಕೆ ಕಾರಣವಾಗಿದೆ. ಈಗಿನ ಮಾರುಕಟ್ಟೆ ಮೌಲ್ಯದ ಪ್ರಕಾರ ಆ ಚಿನ್ನದ ಬೆಲೆ ರೂ.11600ಕೋಟಿ.

ಪೋಲೆಂಡ್‌ನಲ್ಲಿರುವ ಹೋಚ್‌ಬರ್ಗ್ ಅರಮನೆಯ ಮುಂಭಾಗದ ಮುಚ್ಚಲ್ಪಟ್ಟಿರುವ ಬಾವಿಯಲ್ಲಿ 28 ಟನ್ ಚಿನ್ನ ಸಂಗ್ರಹವಿದೆ ಎಂದು ನಾಜಿಯ ಸೇನಾಧಿಕಾರಿಯೊಬ್ಬರು 75 ವರ್ಷಗಳ ಹಿಂದೆ ಬರೆದಿದ್ದ ಡೈರಿಯಲ್ಲಿ ಉಲ್ಲೇಖಿಸಲಾಗಿದೆ. ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪ್ರತಿಷ್ಠಾನದ ಮುಖ್ಯಸ್ಥ ಆ ಡೈರಿಯಲ್ಲಿನ ಅಂಶವನ್ನು ಸಾರ್ವಜನಿಕವಾಗಿ ಬಹಿರಂಗ ಪಡಿಸಿದ್ದಾರೆ.

ಆಧಾರ:ಕನ್ನಡಪ್ರಭ, ದಿನಾಂಕ:29.05.2020

## 11. ಸಾಮಾಜಿಕ ಜಾಲತಾಣಗಳಿಗೆ ಮೂಗುದಾರ: ಟ್ರಂಪ್ ಸಿದ್ಧತೆ

ತಾವು ಮಾಡಿದ್ದ ಎರಡು ಟ್ವೀಟ್‌ಗಳ ಸತ್ಯಾಸತ್ಯೆಯ ಬಗ್ಗೆಯೇ ಸಾಮಾಜಿಕ ಜಾಲತಾಣವಾಗಿರುವ ಟ್ವೀಟರ್ ಅನುಮಾನ ವ್ಯಕ್ತಪಡಿಸಿದ್ದರಿಂದ ಕೋಪೋದ್ರಿಕ್ತಗೊಂಡಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸೋಷಿಯಲ್ ಮೀಡಿಯಾಗಳ ವಿರುದ್ಧ ಸಮರ ಸಾರಿದ್ದಾರೆ. ಅಮೆರಿಕದಲ್ಲಿ ಈ ಜಾಲತಾಣಗಳಿಗೆ ಕಾನೂನಿನ ಹೊಣೆಗಾರಿಕೆಯಿಂದ ಇರುವ ರಕ್ಷಣೆಯನ್ನೇ ವಾಪಸ್ ಪಡೆಯುವ ಅಧ್ಯಾದೇಶ ಹೊರಡಿಸಲು ಸಜ್ಜಾಗಿದ್ದಾರೆ.

ಈ ಆದೇಶ ಹೊರಬಿದ್ದರೆ, ಆಕ್ಷೇಪಾರ್ಹ ಬರಹದ ಕಾರಣಕ್ಕೆ ಸಾಮಾಜಿಕ ಜಾಲತಾಣಗಳು ತಮ್ಮ ಬಳಕೆದಾರರ ಖಾತೆಯನ್ನು ನಿಷ್ಕ್ರಿಯಗೊಳಿಸುವುದು ವಾಕ್ ಸ್ವಾತಂತ್ರ್ಯದ ಉಲ್ಲಂಘನೆಯಾಗಲಿದೆ. ಜಾಲತಾಣಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಕಾನೂನಿನ ನಿಷ್ಕರ್ಷೆಗೆ ಒಳಪಟ್ಟಾಗ ಜಾಲತಾಣಗಳನ್ನೂ ಪ್ರಕಾಶನ ಸಂಸ್ಥೆಗಳ ರೀತಿ ಕಾಣಲಾಗುತ್ತದೆ. ಇದರಿಂದ ಜಾಲತಾಣಗಳಿಗೆ ತೀವ್ರ ಸಂಕಷ್ಟ ಎದುರಾಗಲಿದೆ ಎಂದು ಹೇಳಲಾಗುತ್ತಿದೆ. ಇಂಟರನೆಟ್ ಬೆಳವಣಿಗೆಗೆ ಒತ್ತು ನೀಡುವ ಉದ್ದೇಶದಿಂದ ಎರಡು ದಶಕಗಳ ಹಿಂದೆ ಆ ಕ್ಷೇತ್ರದ ಕಂಪನಿಗಳಿಗೆ ಒಂದಷ್ಟು ರಕ್ಷಣೆಯನ್ನು ನೀಡಲಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:29.05.2020

## 12. ಹಾಂಕಾಂಗ್ ಮೇಲೆ ಚೀನಾ ಕಪಿಮುಷ್ಟಿಗೆ ಸಂಸತ್ ಸಮ್ಮತಿ

ಹಾಂಕಾಂಗ್ ಮೇಲೆ ಚೀನಾದ ಹಿಡಿತ ಬಲಗೊಳಿಸಲು ಅವಕಾಶ ಕಲ್ಪಿಸುವ ರಾಷ್ಟ್ರೀಯ ಭದ್ರತಾ ಕಾಯ್ದೆಗೆ ಚೀನಾ ಸಂಸತ್ ಅನುಮೋದನೆ ನೀಡಿದೆ. ಅವಿರೋಧವಾಗಿ ಅಂಗೀಕಾರಗೊಂಡಿರುವ ಈ ಮಸೂದೆಯನ್ನು ಕಮ್ಯುನಿಸ್ಟ್ ಪಕ್ಷದ ಸ್ಥಾಯಿ ಸಮಿತಿಗೆ ಕಳುಹಿಸಿಕೊಡಲಾಗಿದ್ದು, ಆಗಸ್ಟ್‌ನಲ್ಲಿ ಕಾಯ್ದೆ ಜಾರಿಗೆ ಬರುವ ಸಾಧ್ಯತೆ ಇದೆ.

ಹಿಂದೊಮ್ಮೆ ಬ್ರಿಟಿಷ್ ವಸಾಹತು ಎನಿಸಿದ್ದ ಹಾಂಕಾಂಗ್ ಬಳಿಕ ಚೀನಾ ತೆಕ್ಕೆಗೆ ಬಂದಿತ್ತು. ಅಲ್ಲಿ ಒಂದು ದೇಶ ಎರಡು ವ್ಯವಸ್ಥೆ (ಚೀನಾದ ನಿಯಂತ್ರಿತ ಪ್ರದೇಶ) ಜಾರಿಯಲ್ಲಿದೆ. ಕಾನೂನು ಸುವ್ಯವಸ್ಥೆ, ಆಡಳಿತ, ಭದ್ರತೆಯನ್ನು ಹಾಂಕಾಂಗ್ ಕಾನೂನು ವ್ಯವಸ್ಥೆ ನಿಯಂತ್ರಿಸುವ ಅಧಿಕಾರ ಚೀನಾಕ್ಕೆ ದೊರೆಯಲಿದೆ. ಯಾರಾದರೂ ಚೀನಾದ ಕಾನೂನಿನ ವಿರುದ್ಧವಾಗಿ ನಡೆದುಕೊಂಡರೆ ಅದು ಅಪರಾಧ

ಎನಿಸಿಕೊಳ್ಳಲಿದೆ. ಚೀನಾದ ಭದ್ರತಾ ಸಂಸ್ಥೆಗಳು ಹಾಂಕಾಂಗ್‌ನಿಂದಲೇ ಕಾರ್ಯನಿರ್ವಹಿಸಬಹುದಾಗಿದೆ. ಇದಕ್ಕೆ ಹಾಂಕಾಂಗ್‌ನಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ: 29.05.2020

## 13. ಅಮೆರಿಕದಲ್ಲಿ ಭುಗಿಲೆದ್ದ ಜನಾಂಗೀಯ ಸಂಘರ್ಷ

ಮಿನ್ನಿಯಪೊಲಿಸ್ ಪ್ರಾಂತ್ಯದಲ್ಲಿ ಕಪ್ಪು ಜನಾಂಗದ ವ್ಯಕ್ತಿಯೊಬ್ಬನನ್ನು ಬಿಳಿಯ ಪೊಲೀಸ್ ಅಧಿಕಾರಿಗಳು ಹಿಂಸಿಸಿ ಕೊಂದ ಘಟನೆ ಅಮೆರಿಕಾದಲ್ಲಿ ಉಗ್ರ ಪ್ರತಿಭಟನೆಗೆ ಕಾರಣವಾಗಿದ್ದು, ಹಿಂಸಾಚಾರ ಇತರೆ ಪ್ರದೇಶಗಳಿಗೂ ಹಬ್ಬತೊಡಗಿದೆ.

ಮಾಲ್‌ವೊಂದರಲ್ಲಿ ನಕಲಿ ಡಾಲರ್ ಚಲಾವಣೆ ಮಾಡಲು ಯತ್ನಿಸಿದ ಆರೋಪದ ಮೇಲೆ ಜಾರ್ಜ್ ಫ್ಲಾಯ್ಡ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಕೈಕೋಳ ತೊಡಿಸಲಾದ ಆರೋಪಿಯನ್ನು ನೆಲದ ಮೇಲೆ ಮಲಗಿಸಿ ಪೊಲೀಸ್ ಅಧಿಕಾರಿಯೊಬ್ಬ ಆತನ ಕುತ್ತಿಗೆಗೆ ಮಂಡಿಯಿಂದ ಗುದ್ದಿ ಸಾಯಿಸಿದ್ದನು. ಈ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು.

ಸಹಸ್ರಾರು ಸಂಖ್ಯೆಯಲ್ಲಿ ಜಮಾಯಿಸಿದ ಉದ್ರಿಕ್ತ ಪ್ರತಿಭಟನಾಕಾರರು ಮಿನ್ನಿಯಪೊಲಿಸ್ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿದರು. ಪೊಲೀಸ್ ದಬ್ಬಾಳಿಕೆಯ ಈ ಘಟನೆ ಅಮೆರಿಕಾದ ಇತರೆ ಪ್ರಮುಖ ನಗರಗಳಲ್ಲೂ ಅಪಾರ ಜನಾಕ್ರೋಶಕ್ಕೆ ಕಾರಣವಾಗಿದೆ. ನ್ಯೂಯಾರ್ಕ್, ವಾಷಿಂಗ್ಟನ್, ಹೂಸ್ಟನ್, ಅಟ್ಲಾಂಟಾ, ಪೋರ್ಟ್‌ಲ್ಯಾಂಡ್, ಜಾರ್ಜಿಯಾ, ಒರೆಗಾನ್ ಮುಂತಾದ ಅನೇಕ ಕಡೆ ಪ್ರಚಂಡ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ಅಟ್ಲಾಂಟಾದಲ್ಲಿ ಪೊಲೀಸ್ ಕಾರಿಗೆ ಬೆಂಕಿ ಹಚ್ಚಲಾಗಿದ್ದು, ಪೊಲೀಸರ ಮೇಲೆ ಬಾಟಲ್‌ಗಳ ತೂರಾಟ ಮಾಡಲಾಗಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶದ ಮೇರೆಗೆ ಗಲಭೆಗ್ರಸ್ಥ ಪ್ರದೇಶಗಳಿಗೆ ಮಿಲಿಟರಿ ಪೊಲೀಸ್ ಪಡೆಗಳನ್ನು ರವಾನಿಸಲಾಗಿದೆ. ಲೂಟಿಕೋರರಿಗೆ ಗೋಲಿಬಾರ್ ಎಚ್ಚರಿಕೆ ನೀಡಲಾಗಿದ್ದು, ಆಯಕಟ್ಟಿನ ಸ್ಥಳಗಳಲ್ಲಿ ಸೇನೆಯನ್ನು ಸಜ್ಜಾಗಿಡಲು ಸೂಚಿಸಲಾಗಿದೆ.

ಜಾರ್ಜ್ ಫ್ಲಾಯ್ಡ್‌ನ ಹತ್ಯೆಗೈದ ಪೊಲೀಸ್ ಅಧಿಕಾರಿ ಡೆರಿಕ್ ಚೌವಿನ್‌ನನ್ನು (44) ಬಂಧಿಸಲಾಗಿದ್ದು, ಅಮಾನುಷ ಕೊಲೆ ಮತ್ತು ನರಹತ್ಯೆಯ ಆರೋಪದ ಮೇರೆಗೆ ಮೊಕದ್ದಮೆ ದಾಖಲಿಸಲಾಗಿದೆ. ಆಫ್ರೋ–ಏಷ್ಯನ್‌ರ ಮೇಲಿನ ಅನೇಕ ವರ್ಷಗಳ ನಿರಂತರ ಪೊಲೀಸ್ ದಬ್ಬಾಳಿಕೆ ಕಪ್ಪು ವರ್ಣೀಯರಲ್ಲಿ ಭಾರೀ ಆಕ್ರೋಶವನ್ನು ಉಂಟುಮಾಡಿದೆ.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 31.05.2020

## 14. ಜಿ7 ವಿಸ್ತರಿಸಿ ಭಾರತಕ್ಕೂ ಸ್ಥಾನ ನೀಡಲು ಟ್ರಂಪ್ ಒಲವು

ವಿಶ್ವದ ಮುಂದುವರೆದ 7 ದೇಶಗಳ ಒಕ್ಕೂಟವನ್ನು ವಿಸ್ತರಿಸಿ ಅದರಲ್ಲಿ ಭಾರತ ಸೇರಿದಂತೆ 4 ದೇಶಗಳಿಗೆ ಸ್ಥಾನ ಕಲ್ಪಿಸುವ ಪ್ರಸ್ತಾಪವೊಂದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮುಂದಿಟ್ಟಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಅಮೆರಿಕ ಜೊತೆ ಹೆಚ್ಚಿರುವ ಭಾರತದ ಆತ್ಮೀಯ ಸಂಬಂಧ ಮತ್ತು ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಭಾರತದ ಪ್ರತಿಷ್ಠೆಗೆ ಇದೊಂದು ಉದಾಹರಣೆ ಎಂದು ವಿಶ್ಲೇಷಿಸಲಾಗಿದೆ. ಸದ್ಯದಲ್ಲೇ ಅಮೆರಿಕ ತಮ್ಮ ಖಾಸಗಿ ಎಸ್ಟೇಟ್‌ನಲ್ಲಿ ನಡೆಸಲು ಉದ್ದೇಶಿಸಿದ್ದ ಜಿ7 ನಾಯಕರ ಶೃಂಗಸಭೆಯನ್ನು ಸೆಪ್ಟೆಂಬರ್‌ಗೆ ಮುಂದೂಡಲು ಟ್ರಂಪ್ ನಿರ್ಧರಿಸಿದ್ದಾರೆ. ಸುದ್ದಿಗಾರರ ಜೊತೆ ಮಾತನಾಡಿದ ಟ್ರಂಪ್ ವಿಶ್ವದಲ್ಲಿನ ಬೆಳವಣಿಗೆಗಳನ್ನು ಅಥವಾ ಜಿ11ಕ್ಕೆ ವಿಸ್ತರಿಸುವುದು ಸೂಕ್ತ ಎಂದು ಹೇಳಿದರು.

ಪ್ರಭಾವಿ 7 ದೇಶಗಳ ಒಕ್ಕೂಟ. ವಾಸ್ತವವಾಗಿ ರಷ್ಯಾ ಒಳಗೊಂಡ ಜಿ8 ಕೂಟ ಇದಾಗಿತ್ತು. ರಷ್ಯಾವನ್ನು ದೂರವಿಟ್ಟಿರುವ ಹಿನ್ನೆಲೆಯಲ್ಲಿ ಜಿ7 ಆಗಿದೆ.

ಆಧಾರ:ಕನ್ನಡಪ್ರಭ, ದಿನಾಂಕ:01.06.2020

## 15. ಕಮರಿದ ಅಮೆರಿಕ ಕನಸು

ಕೊರೊನಾ ಹಾವಳಿ, ಲಾಕ್‌ಡೌನ್ ಬಿಕ್ಕಟ್ಟಿನ ನಡುವೆ ಭಾರತದ ಟೆಕ್ಕಿಗಳಿಗೆ ಮತ್ತೊಂದು ಶಾಕ್ ತಟ್ಟಿದೆ. ಅಮೆರಿಕದಲ್ಲಿ ಉದ್ಯೋಗದ ಕನಸಿಗೆ ವಿಘ್ನ ಎದುರಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್–1ಬಿ, ಎಲ್–1 ಮತ್ತಿತರ ಎಲ್ಲ ವೃತ್ತಿಪರ ವಿದೇಶಿ ವೀಸಾಗಳನ್ನು ಜೂನ್ 24ರಿಂದ 2020ರ ಡಿಸೆಂಬರ್ 31ರ ತನಕ ಅಮಾನತ್ತಿನಲ್ಲಿಟ್ಟಿದ್ದಾರೆ. ಈ ಸಂಬಂಧ ಆದೇಶಕ್ಕೆ ಟ್ರಂಪ್ ಅಧಿಕೃತವಾಗಿ ಸಹಿ ಹಾಕಿದ್ದಾರೆ.

ಕೊರೊನಾ ಬಿಕ್ಕಟ್ಟಿನ ಪರಿಣಾಮ ಅಮೆರಿಕದಲ್ಲಿ ಸ್ಥಳೀಯರಿಗೆ ಉದ್ಯೋಗ ನಷ್ಟವಾಗದಂತೆ ತಡೆಯಲು ಈ ಕ್ರಮ ಕೈಗೊಂಡಿರುವುದಾಗಿ ಟ್ರಂಪ್ ಸಮರ್ಥಿಸಿಕೊಂಡಿದ್ದಾರೆ. ಆದರೆ ಇದಕ್ಕೆ ಸ್ವತಃ ಅಮೆರಿಕದ ಐಟಿ ವಲಯದಲ್ಲೇ ತೀವ್ರ ವಿರೋಧ ವ್ಯಕ್ತವಾಗಿದೆ. ಇದರಿಂದ ಸಂಶೋಧನೆ ಮತ್ತು ಅಭಿವೃದ್ಧಿಗೆ ತೀವ್ರ ಹಿನ್ನಡೆಯಾಗಲಿದೆ ಹಾಗೂ ಅಮೆರಿಕದ ಆರ್ಥಿಕತೆಯ ಚೇತರಿಕೆಗೆ ಧಕ್ಕೆಯಾಗಲಿದೆ ಎಂದು ಅಲ್ಲಿನ ಟೆಕ್ ಕಂಪನಿಗಳು ಎಚ್ಚರಿಸಿವೆ.

2017ರಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬೆನ್ನಲ್ಲೇ ಡೊನಾಲ್ಡ್ ಟ್ರಂಪ್ "ಅಮೆರಿಕ ಫಸ್ಟ್" ನೀತಿಗೆ ಒತ್ತು ನೀಡಲು ಎಚ್1–ಬಿ ವೀಸಾ ಮೇಲೆ ಕಣ್ಣಿಟ್ಟಿದ್ದರು. ಕೊರೊನಾ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಮೊದಲಿಗೆ ಜೂನ್ 23ವರೆಗೂ ಹೊಸ ವೀಸಾ ವಿತರಣೆ ಇಲ್ಲ ಎಂದು ಘೋಷಿಸಿದ್ದರು. ಈಗ ನಿರ್ಬಂಧವನ್ನು ವರ್ಷಾಂತ್ಯದವರೆಗೂ ವಿಸ್ತರಣೆ ಮಾಡಿದ್ದಾರೆ. ಚುನಾವಣೆ ಪ್ರಚಾರದುದ್ದಕ್ಕೂ ಟ್ರಂಪ್ "ಅಮೆರಿಕ ಫಸ್ಟ್" ನೀತಿಯನ್ನು ಪ್ರತಿಪಾದಿಸಿದ್ದರು.

ಟ್ರಂಪ್ ಸರ್ಕಾರ ವಿಧಿಸಿರುವ ನಿರ್ಬಂಧಗಳು ಹೊಸತಾಗಿ ಎಚ್1–ಬಿ ವೀಸಾಗೆ ಅರ್ಜಿ ಸಲ್ಲಿಸುವವರಿಗೆ ಅನ್ವಯಿಸಲಿದೆ. ಈಗಾಗಲೇ ಕೆಲಸ ಮಾಡುವವರಿಗೆ ಮತ್ತು ಅಮೆರಿಕದಲ್ಲಿ ನೆಲೆಸಿರುವ ಟೆಕ್ಕಿಗಳು ಹಾಗೂ ಅವರ ಕುಟುಂಬದವರಿಗೆ ಅನ್ವಯವಾಗುವುದಿಲ್ಲ. ಆದರೆ ಈಗಾಗಲೇ ವೀಸಾ ಪಡೆದು ಹೊರಗಿರುವವರಿಗೆ ಅಮೆರಿಕಕ್ಕೆ ಮರಳಲು ಸಾಧ್ಯವಾಗದು.

ಪ್ರತಿ ವರ್ಷ ಬಿಡುಗಡೆಯಾಗುವ 85000 ಎಚ್1 ಬಿ ವೀಸಾಗಳಲ್ಲಿ ಶೇ.70ರಷ್ಟು ಭಾರತೀಯರ ಪಾಲಾಗುತ್ತಿತ್ತು. ಟ್ರಂಪ್ ನಿರ್ಣಯ ಅಮೆರಿಕದಲ್ಲಿ ಉನ್ನತ ಕೆರಿಯರ್ ಭವಿಷ್ಯದ ಕನಸು ಕಾಣುತ್ತಿರುವ ಭಾರತೀಯರಿಗೆ ಅಡ್ಡಿಯಾಗಿ ಪರಿಣಮಿಸಿದೆ.

ಅಮೆರಿಕದಲ್ಲಿ ಕೆಲಸ ಮಾಡಲು ಬಯಸುವ ಟೆಕ್ಕಿಗಳಿಗೆ, ಉನ್ನತ ವೃತ್ತಿಪರರಿಗೆ ಅಲ್ಲಿನ ಸರ್ಕಾರ ನೀಡುವ ವೀಸಾ 1952ರಿಂದಲೂ ಇದು ಜಾರಿಯಲ್ಲಿದೆ. ಅಮೆರಿಕ ಮತ್ತು ಭಾರತೀಯ ಐಟಿ ಕಂಪನಿಗಳು 2021ರ ಅಕ್ಟೋಬರ್ 1 ರಿಂದ ಅನ್ವಯವಾಗುವ ವಿತ್ತೀಯ ವರ್ಷಕ್ಕಾಗಿ ಈಗಾಗಲೇ ಪಡೆದಿರುವ ಎಚ್–1ಬಿ ವೀಸಾಗಳ ಮೇಲೂ ಹೊಸ ನಿರ್ಬಂಧ ಪರಿಣಾಮ ಬೀರಲಿದೆ. ಅಮೆರಿಕದ ರಾಜತಾಂತ್ರಿಕ ಕಛೇರಿಗಳಿಂದ ವೀಸಾಗಳಿಗೆ ಅನುಮೋದನೆ ಪಡೆಯಲು ಇದೀಗ ಈ ಸಂಸ್ಥೆಗಳು ವರ್ಷಾಂತ್ಯದ ತನಕ ಕಾಯಬೇಕಾಗುತ್ತದೆ. ಎಚ್–1–ಬಿ ವೀಸಾ ನವೀಕರಣಕ್ಕೂ ಸಮಸ್ಯೆಯಾಗಲಿದೆ.

ಟ್ರಂಪ್ ಸರ್ಕಾರದ ಅಮೆರಿಕ ಫಸ್ಟ್ ನೀತಿಯ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಒಟ್ಟು 5,25,000 ಉದ್ಯೋಗಗಳು ಸ್ಥಳೀಯರಿಗೆ ಮುಕ್ತವಾಗುವ ಸಾಧ್ಯತೆ ಇದೆ ಎಂದು ಅಲ್ಲಿನ ಅಧಿಕಾರಿಗಳು ತಿಳಿಸಿದ್ದಾರೆ. ಅಮೆರಿಕದ ಆರ್ಥಿಕತೆಯ ಯಶಸ್ಸಿಗೆ ವಲಸಿಗರ ಕೊಡುಗೆ ಅಪಾರ. ಅಮೆರಿಕ ತಂತ್ರಜ್ಞಾನದಲ್ಲಿ ನಾಯಕನಾಗಲು ಅವರೇ ಕಾರಣ. ಸರ್ಕಾರದ ನಿರ್ಧಾರ ನಿರಾಸೆ ಮೂಡಿಸಿದೆ.

ಆಧಾರ:ವಿಜಯ ಕರ್ನಾಟಕ, ದಿನಾಂಕ:24.06.2020

## ಭಾಗ–9

# ಶ್ರದ್ಧಾಂಜಲಿ

### 1. ಪ್ರೊ : ಕೆ. ಎಸ್. ನಿಸಾರ್‌ಅಹಮದ್, ನಿತ್ಯೋತ್ಸವ ಕವಿ

ನಿತ್ಯೋತ್ಸವ ಕವಿ ಪ್ರೊ ಕೆ.ಎಸ್.ನಿಸಾರ್‌ಅಹಮದ್ ಅವರು ದಿನಾಂಕ:03.04.2020ರಂದು ನಿಧನರಾದರು. ಕವಿ ಅವರ ಅಗಲಿಕೆ ಕನ್ನಡ ಸಾರಸ್ವತ ಲೋಕದಲ್ಲಿ ದೊಡ್ಡ ಶೂನ್ಯ ಸೃಷ್ಟಿಸಿದೆ. ಜೋಗದ ಸಿರಿ ಬೆಳಕಿನಲ್ಲಿ ಕವಿತೆಯೊಂದಿಗೆ ಕನ್ನಡಿಗರ ಹೃದಯಕ್ಕೆ ಲಗ್ಗೆ ಇಟ್ಟರು. 1978ರಲ್ಲಿ ನಿತ್ಯೋತ್ಸವ ಭಾವಗೀತೆ ಧ್ವನಿಸುರುಳಿ ಕನ್ನಡ ಸಂಗೀತ ಲೋಕದಲ್ಲಿ ಬಿರುಗಾಳಿ ಎಬ್ಬಿಸಿತು.

ಕನ್ನಡ ನಿತ್ಯೋತ್ಸವ ಕವಿ ಎಂದೇ ಖ್ಯಾತರಾಗಿದ್ದ ಹಿರಿಯ ಸಾಹಿತಿ ಡಾ: ಕೆ. ಎಸ್. ನಿಸಾರ್ ಆಹಮದ್ ಅವರು ನವೋದಯ ಸಾಹಿತ್ಯದ ಹರಿಕಾರರೆಂದೇ ಹೆಸರಾಗಿದ್ದರು. ಕಿರಿಯ ವಯಸ್ಸಿನಿಂದಲೇ ಸಾಹಿತ್ಯಾಸಕ್ತಿ ಬೆಳೆಸಿಕೊಂಡಿದ್ದರು. 65ಕ್ಕೂ ಹೆಚ್ಚು ಉತ್ತಮ ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದರು. ನವೋದಯ ಮತ್ತು ಕಾವ್ಯ ಪರಂಪರೆಗಳನ್ನು ತಮ್ಮ ಕಾವ್ಯದಲ್ಲಿ ಪ್ರಯೋಗಿಸಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಬೆಳಗಿಸಿದ ಶ್ರೇಷ್ಠ ಕವಿಗಳಲ್ಲೊಬ್ಬರು.

ಆಧಾರ:ಉದಯವಾಣಿ, ದಿನಾಂಕ:04.04.2020

### 2. ಎಂ.ವಿ ರಾಜಶೇಖರನ್, ಕೇಂದ್ರದ ಮಾಜಿ ಸಚಿವ

ಕಾಂಗ್ರೆಸ್ಸಿನ ಹಿರಿಯ ಮುಖಂಡ ಕೇಂದ್ರದ ಮಾಜಿ ಸಚಿವ ಎಂ.ವಿ. ರಾಜಶೇಖರನ್ ಅವರು ದಿನಾಂಕ:13.04.2020ರಂದು ನಿಧನರಾದರು. 1928ರ ಸೆಪ್ಟಂಬರ್ 12ರಂದು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮರಳವಾಡಿಯಲ್ಲಿ ಜನಿಸಿದ್ದ ರಾಜಶೇಖರನ್, ಸಜ್ಜನ ಮೌಲ್ಯಾಧಾರಿತ ರಾಜಕಾರಣಿಯಾಗಿ ಗುರುತಿಸಿಕೊಂಡಿದ್ದರು. ಉತ್ತಮ ಸಂಸದೀಯ ಪಟು ಆಗಿದ್ದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನಡೆದ ಮೈಸೂರು ಚಲೋ ಚಳುವಳಿಯಲ್ಲಿಯೂ ಪಾಲ್ಗೊಂಡಿದ್ದ ರಾಜಶೇಖರನ್ ನಂತರ ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 1967ರಲ್ಲಿ ಕನಕಪುರ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದ ಇವರು 1999ರಲ್ಲಿ ವಿಧಾನ ಪರಿಷತ್ ಸದಸ್ಯರು ಹಾಗೂ 2002ರಲ್ಲಿ ರಾಜ್ಯಸಭಾ ಸದಸ್ಯರು ಮತ್ತು ಮನಮೋಹನ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಯೋಜನಾ ಮತ್ತು ಸಾಂಖ್ಯಿಕ ರಾಜ್ಯ ಸಚಿವರಾಗಿದ್ದರು.

ರಾಜಶೇಖರನ್ ಅವರು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಗ್ರಾಮೀಣ ಅಭಿವೃದ್ಧಿ ಕುರಿತಂತೆ 100ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ. ಸರಳತೆ, ಸಜ್ಜನಿಕೆ, ತಾಳ್ಮೆಗಳನ್ನು ರೂಡಿಸಿಕೊಂಡಿದ್ದ ಇವರು ಮಹಾತ್ಮ ಗಾಂಧೀಜಿ ಹೇಳಿದ ಜೀವನ ಮೌಲ್ಯಗಳನ್ನು ಪಾಲಿಸುತ್ತಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:14.04.2020.

### 3. ವಿನ್ನಿಫ್ರೆಡ್ ಫರ್ನಾಂಡಿಸ್, ಮಾಜಿ ಶಾಸಕಿ

ಕಾಂಗ್ರೆಸ್‌ನ ಹಿರಿಯ ನಾಯಕಿ ಹಾಗೂ ಮಾಜಿ ಶಾಸಕಿ ವಿನ್ನಿಫ್ರೆಡ್ ಫರ್ನಾಂಡಿಸ್ ಅವರು ದಿನಾಂಕ:28.04.2020ರಂದು ನಿಧನರಾದರು.

ಉದ್ಯಮಿ ಲೂಯಿಸ್ ಎಂ. ಫರ್ನಾಂಡಿಸ್ ಅವರ ಪತ್ನಿಯಾದ ವಿನ್ನಿಫ್ರೆಡ್ ಫರ್ನಾಂಡಿಸ್ ಪ್ರಜಾ ಸೋಷಲಿಸ್ಟ್ ಪಕ್ಷದ ಮೂಲಕ ರಾಜಕೀಯ ಜೀವನ ಆರಂಭಿಸಿದ್ದ ಇವರು ಕುಂದಾಪುರ ಪಟ್ಟಣ ಪಂಚಾಯಿತಿ, ಪುರಸಭೆ ಸದಸ್ಯೆ, ಅಧ್ಯಕ್ಷೆಯಾಗಿ, 1972ರಲ್ಲಿ ಕಾಂಗ್ರೆಸ್‌ನಿಂದ ಶಾಸಕರು ಹಾಗೂ 2001ರಲ್ಲಿ ವಿಧಾನ ಪರಿಷತ್ತಿನ ಸದಸ್ಯೆಯಾಗಿದ್ದರು.

ಆಧಾರ:ಪ್ರಜಾವಾಣಿ, ದಿನಾಂಕ:14.04.2020

### 4. ಗಜಾನನ ಭಟ್ಟ, ಯಕ್ಷಗಾನ ಕಲಾವಿದ

ಯಕ್ಷಗಾನಕ್ಕಾಗಿ ಬದುಕನ್ನು ಮುಡಿಪಾಗಿಟ್ಟಿದ್ದ ಹೊಸ್ತೋಟದ ಗಜಾನನ ಭಟ್ಟ ಅವರು ದಿನಾಂಕ:16.04.2020ರಂದು ನಿಧನರಾದರು.

ಉತ್ತರ ಕನ್ನಡ ಜಿಲ್ಲೆಯ ನೂರಾರು ಯಕ್ಷ ಪ್ರತಿಭೆಗಳಿಗೆ ಗುರುವಾಗಿ 170 ಕ್ಕೂ ಹೆಚ್ಚು ಕಡೆಗಳಲ್ಲಿ ಯಕ್ಷಗಾನ ತರಬೇತಿ ನಡೆಸಿದ್ದರು. ವೃಕ್ಷ ಮಹಾತ್ಮೆ, ಸಾಧ್ವಿ ಜಯಂತಿ, ಕಲ್ಪನಾ ವಿಲಾಸ ಸೇರಿ 27ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದರು. ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಕೆರೆಮನೆ ಗಜಾನನ ಹೆಗಡೆ ಪ್ರಶಸ್ತಿ, ಸರ್ಣವಲ್ಲಿಯ ಯಕ್ಷಶಾಲ್ಮಲಾ ನೀಡುವ ಪ್ರಶಸ್ತಿಗಳು ಇವರಿಗೆ ಸಂದಿವೆ.

ಆಧಾರ:ಪ್ರಜಾವಾಣಿ, ದಿನಾಂಕ:17.04.2020.

### 5. ರಾಜಾ ರಂಗಪ್ಪನಾಯಕ, ಮಾಜಿ ಸಂಸದ

ರಾಯಚೂರು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ರಾಜಾ ರಂಗಪ್ಪನಾಯಕ ಅವರು ದಿನಾಂಕ:11.05.2020ರಂದು ನಿಧನರಾದರು.

ಅಭಿವೃದ್ಧಿ ಹರಿಕಾರ ಮತ್ತು ಬಡವರ ಬಂಧು ಎಂದೇ ಛಾಪು ಮೂಡಿಸಿದ್ದರು. 1959ರ ಮೇ 24ರಂದು ಜನಿಸಿದ್ದ ಅವರು ಸುರಪುರ ಮತ್ತು ಹೈದರಾಬಾದ್‌ನಲ್ಲಿ ಶಿಕ್ಷಣ ಪಡೆದು 1987–92ರಲ್ಲಿ ಖಾನಾಪುರ ಎಸ್. ಎಚ್. ಮಂಡಲ ಪ್ರಧಾನರಾಗಿ ಆಯ್ಕೆಯಾಗಿ ರಾಜಕೀಯ ಜೀವನ ಆರಂಭಿಸಿದರು. 1992ರಲ್ಲಿ ಖಾನಾಪುರ ಎಸ್ ಎಚ್ ಜಿಲ್ಲಾ ಪಂಚಾಯಿತಿ ಕ್ಷೇತ್ರದಿಂದ ಚುನಾಯಿತರಾಗಿ ಗುಲಬರ್ಗಾ ಜಿಲ್ಲಾ ಪಂಚಾಯತಿನಲ್ಲಿ ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1996ರಲ್ಲಿ 11ನೇ ಲೋಕಸಭೆಗೆ ರಾಯಚೂರು ಲೋಕಸಭಾ ಕ್ಷೇತ್ರದಿಂದ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಸ್ಪರ್ಧಿಸಿ ಪ್ರಥಮ ಬಾರಿಗೆ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದರು.

ಆಧಾರ:ಉದಯವಾಣಿ, ದಿನಾಂಕ:12.05.2020

### 6. ಶಾಂತದೇವಿ ಕಣವಿ, ಹಿರಿಯ ಕವಿ

ಹಿರಿಯ ಕವಿ ನಾಡೋಜ ಚನ್ನವೀರ ಕಣವಿ ಅವರ ಪತ್ನಿ ಕಥೆಗಾರ್ತಿ ಶಾಂತದೇವಿ ಕಣವಿ ಅವರು ದಿನಾಂಕ:22.05.2020ರಂದು ನಿಧನರಾದರು.

ಪತಿ ಚನ್ನವೀರ ಕಣವಿ ಜೊತೆ ಸಾಹಿತ್ಯಲೋಕದಲ್ಲೂ ಹೆಜ್ಜೆ ಹಾಕಿದ ಶಾಂತದೇವಿ ವಿಭಿನ್ನ ಬರಹಗಳಿಂದ ಗುರುತಿಸಿಕೊಂಡಿದ್ದರು. 60ನೇ ದಶಕದಿಂದಲೇ ಕಥೆ ಬರೆಯಲು ಪ್ರಾರಂಭಿಸಿದ್ದ ಶಾಂತಾದೇವಿ ಒಂದು ರೀತಿಯಲ್ಲಿ ಸಂಖ್ಯೆಯ ದೃಷ್ಟಿಯಿಂದ ಮಾಸ್ತಿ ಅವರಿಗಿಂತ ಹೆಚ್ಚಿನ ಕಥೆಗಳನ್ನು ಬರೆದಿದ್ದಾರೆ. ಉತ್ತರ ಕರ್ನಾಟಕದ ದೇಶಿ ಧ್ವನಿಪೂರ್ಣ ಭಾಷೆ, ತಂತ್ರಗಾರಿಕೆ ಬರವಣಿಗೆ ಇವರ ವೈಶಿಷ್ಟ್ಯವಾಗಿತ್ತು. ಬಯಲು–ಆಲಯ ಕಥಾ ಸಂಕಲನಕ್ಕೆ 1974ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಪಡೆದಿದ್ದರು. ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಅತ್ತಿಮಬ್ಬೆ, ರಾಜ್ಯೋತ್ಸವ ಪ್ರಶಸ್ತಿ ಸೇರಿ ಹತ್ತು ಹಲವು ಪ್ರಶಸ್ತಿಗಳನ್ನು ಪಡೆದಿದ್ದರು. ಹಲವಾರು ಕಥೆಗಳನ್ನು ಹಿಂದಿ ಇಂಗ್ಲೀಷ್ ಮಲೆಯಾಳಂಗೂ ಭಾಷಾಂತರಿಸಿದ ಹೆಗ್ಗಳಿಕೆ ಶಾಂತಾದೇವಿ ಅವರದ್ದಾಗಿದೆ.

ಆಧಾರ:ವಿಜಯವಾಣಿ, ದಿನಾಂಕ:23.05.2020.

### 7. ಶ್ಯಾಮಲಾ ಜಿ. ಭಾವೆ, ಗಾನಕೋಗಿಲೆ

ಉಭಯ ಗಾನ ವಿದುಷಿ ಡಾ:ಶ್ಯಾಮಲಾ ಜಿ. ಭಾವೆ ಅವರು ದಿನಾಂಕ:22.05.2020ರಂದು ನಿಧನರಾದರು. ಸಂಗೀತ ಕ್ಷೇತ್ರದ ಅಪಾರ ಸಾಧನೆಗಾಗಿ ಶ್ಯಾಮಲಾ ಜಿ ಭಾವೆ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ, ಉಭಯಗಾನ ವಿಶಾರದೆ, ಉಭಯ ಗಾನ ವಿದುಷಿ, ಕರ್ನಾಟಕ ಸಂಗೀತ ಅಕಾಡೆಮಿಯ ಕಲಾ ತಿಲಕ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಅರಸಿ ಬಂದಿದ್ದವು.

ಸುಮಾರು 9 ಭಾಷೆಯ 1,500ಕ್ಕೂ ಹೆಚ್ಚಿನ ಗೀತೆಗಳಿಗೆ ರಾಗಸಂಯೋಜನೆ ಮಾಡಿದ್ದಾರೆ. ದೇಶವಷ್ಟೆ ಅಲ್ಲ ವಿದೇಶಗಳಲ್ಲೂ ಸಂಗೀತಾಭಿಮಾನಿಗಳನ್ನು ಹೊಂದಿದ್ದ ಶ್ಯಾಮಲಾ ಜಿ. ಭಾವೆ ಅವರು ಅನೇಕ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟಿದ್ದಾರೆ ಅಲ್ಲದೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಆಧಾರ:ಉದಯವಾಣಿ, ದಿನಾಂಕ:23.05.2020.

## 8. ವೀರೇಂದ್ರ ಕುಮಾರ್, ಕೇಂದ್ರದ ಮಾಜಿ ಮಂತ್ರಿ

ಮಾತೃಭೂಮಿ ದಿನಪತ್ರಿಕೆಯ ಆಡಳಿತ ನಿರ್ದೇಶಕ, ಮಾಜಿ ಕೇಂದ್ರ ಸಚಿವ ಮತ್ತು ರಾಜ್ಯಸಭಾ ಸದಸ್ಯರಾದ ಎಂ.ಪಿ. ವೀರೇಂದ್ರ ಕುಮಾರ್‌ರವರು ದಿನಾಂಕ: 29.05.2020ರಂದು ನಿಧನರಾದರು. ಸ್ವತ: ಸಾಹಿತಿಗಳೂ ಆಗಿದ್ದ ಇವರು ಹಲವು ಕೃತಿಗಳನ್ನು ರಚಿಸಿದ್ದು, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ ಸಹ ಭಾಜನರಾಗಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:30.05.2020.

## 9. ಎಂ.ಸಿ.ನರಸಿಂಹನ್, ಮಾಜಿ ಶಾಸಕ

ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ, ಹಿರಿಯ ಕಾರ್ಮಿಕ ಮುಖಂಡ, ಮಾಜಿ ಶಾಸಕ ಹಾಗೂ ರಾಜ್ಯ ಹೈಕೋರ್ಟ್‌ನ ಹಿರಿಯ ವಕೀಲರಾಗಿದ್ದ ಕಾಮ್ರೇಡ್ ಎಂ.ಸಿ.ನರಸಿಂಹನ್ (98) ದಿನಾಂಕ:10.06.2020ರಂದು ನಿಧನರಾದರು.

ಹಲವಾರು ಹೋರಾಟಗಳ ಮೂಲಕ ಕಾರ್ಮಿಕ ನಾಯಕರಾಗಿ ಬೆಳೆದ ಅವರು, 1957ರಲ್ಲಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಕೆ.ಜಿ.ಎಫ್ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದರು. 1962ರ ಚೀನಾ ಮಹಾಯುದ್ಧದ ಸಂದರ್ಭದಲ್ಲಿ ಜೈಲುವಾಸ ಅನುಭವಿಸಿದ್ದರು. 1962 ರಿಂದ 1968ರವರೆಗೂ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಶಾಸನ ಸಭೆಗಳಲ್ಲಿ ದುಡಿಯುವ ಜನರ ಧ್ವನಿಯಾಗಿದ್ದರು ಹಾಗೂ ರೈತ–ಕಾರ್ಮಿಕರ ಹಿತಾಸಕ್ತಿಯನ್ನು ಪರಿಣಾಮಕಾರಿಯಾಗಿ ಪ್ರತಿನಿಧಿಸಿದ್ದರು. ತದನಂತರ ಮದ್ರಾಸ್ ವಿಶ್ವವಿದ್ಯಾನಿಲಯದ ಕಾನೂನು ವಿದ್ಯಾರ್ಥಿಯಾಗಿ ಉನ್ನತ ಶ್ರೇಣಿಯಲ್ಲಿ ಕಾನೂನು ಪದವಿ ಪಡೆದು, ರಾಜ್ಯದ ಸಮರ್ಥ ವಕೀಲರಾಗಿ ಕಾನೂನು ಸಮರದಲ್ಲಿ ಕಾರ್ಮಿಕ ವರ್ಗದ ಪರ ಕಾನೂನು ಹೋರಾಟ ನಡೆಸಿದರು. ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಯಾಗುವ ಅವಕಾಶವನ್ನು ಎರಡು ಬಾರಿ ವಿನಯವಾಗಿಯೇ ನಿರಾಕರಿಸಿದ್ದರು.

ಆಧಾರ: ಪ್ರಜಾವಾಣಿ, ದಿನಾಂಕ:11.06.2020

## 10. ಗೀತಾ ನಾಗಭೂಷಣ, ಖ್ಯಾತ ಕಾದಂಬರಿಗಾರ್ತಿ

ನಾಡಿನ ಹಿರಿಯ ಸಾಹಿತಿ, ಖ್ಯಾತ ಕಾದಂಬರಿಗಾರ್ತಿ ನಾಡೋಜ ಗೀತಾ ನಾಗಭೂಷಣ ಇವರು ದಿನಾಂಕ:18.06.2020ರಂದು ನಿಧನರಾದರು. ಅವರು ಮೂಲತ: ಕಲಬುರಗಿ ತಾಲ್ಲೂಕಿನ ಸಾವಳಗಿ ಗ್ರಾಮದವರು. ಕೇಂದ್ರ ಸಾಹಿತ್ಯ ಆಕಾಡೆಮಿ ಪ್ರಶಸ್ತಿ, ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್, ಹಂಪಿ ಕನ್ನಡ ವಿಶ್ವವಿದ್ಯಾಲಯ ನಾಡೋಜ ಸೇರಿದಂತೆ ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದರು. 2010ರಲ್ಲಿ ಗದಗಿನಲ್ಲಿ ನಡೆದಿದ್ದ 77 ನೇ ಆಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು.

ಬಂಡಾಯ ಲೇಖಕಿಯಾಗಿ ನಾಡಿನ ಗಮನ ಸೆಳೆದಿದ್ದ ಇವರು ದಮನಿತ ಮಹಿಳೆಯರ ನೋವು, ಕಷ್ಟ, ತುಮುಲಗಳ ಬಗ್ಗೆ ಕತೆ, ಕಾದಂಬರಿ ರಚಿಸಿದ್ದರು. 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತ್ತು. ನಾಡೋಜ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಮಹಿಳಾ ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮೊದಲ ಮಹಿಳಾ ಸಾಹಿತಿಯೆಂಬ ಹೆಗ್ಗಳಿಕೆಯನ್ನು ಹೊಂದಿದ್ದರು.

ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ:29.06.2020

# ಭಾಗ–10

# ಪ್ರಶಸ್ತಿಗಳು

## 1. ಡಾ ಪ್ರಭಾಶಂಕರಗೆ ಹಿಂದಿ ರಾಷ್ಟ್ರ ಪ್ರಶಸ್ತಿ

ಹಿಂದಿ ಭಾಷೆಯಲ್ಲಿ ಶಿಕ್ಷಣ, ತರಬೇತಿ ಮತ್ತು ಸಂಶೋಧನೆಯ ಪ್ರಸಾರಕ್ಕಾಗಿ ಇರುವ ಆಗ್ರಾದ ಕೇಂದ್ರೀಯ ಹಿಂದಿ ಸಂಸ್ಥಾನ ನೀಡುವ ಗಂಗಾಶರಣ ಸಿನ್ಹಾ ರಾಷ್ಟ್ರ ಪ್ರಶಸ್ತಿಗೆ ನಗರದ ಹಿರಿಯ ವಿದ್ವಾಂಸ ಡಾ: ಟಿ.ಜಿ. ಪ್ರಭಾಶಂಕರ ಪ್ರೇಮಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ರೂ.5 ಲಕ್ಷಗಳ ನಗದು ಒಳಗೊಂಡಿದೆ.

ಈ ರಾಷ್ಟ್ರೀಯ ಸಂಸ್ಥೆಯು ಹಿಂದಿ ಭಾಷೆಯ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡಿರುವ ಹಿಂದಿಯೇತರ ರಾಜ್ಯಗಳ ವಿದ್ವಾಂಸರು ಮತ್ತು ಸಾಹಿತಿಗಳಿಗೆ 1989 ರಿಂದ ಪ್ರಶಸ್ತಿ ನೀಡುತ್ತಿದೆ. ಪ್ರಭಾಶಂಕರ ಅವರು ಇತರ ಮೂವರ ಜೊತೆಗೆ ಈ ಪ್ರಶಸ್ತಿಯನ್ನು ರಾಷ್ಟ್ರಪತಿ ಅವರಿಂದ ಪಡೆಯಲಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರಭಾಶಂಕರ ಅವರು ಹಿರಿಯ ಕವಿ ಮತ್ತು ವಿಮರ್ಶಕರು. ಅವರು ವಚನ ಸಾಹಿತ್ಯವನ್ನು ಹಿಂದಿ ಭಾಷೆಗೆ ಅನುವಾದಿಸಿ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದ್ದಾರೆ.

ಆಧಾರ:ಪ್ರಜಾವಾಣಿ, ದಿನಾಂಕ:15.04.2020

## 2. ಸಾಹಿತ್ಯ ಸಂಸ್ಕೃತಿ ಪ್ರಶಸ್ತಿಗೆ ಆಯ್ಕೆ

ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಸಾಹಿತ್ಯ ಸಂಸ್ಕೃತಿ ವಿಭಾಗದ ಪ್ರಶಸ್ತಿ ಪುರಸ್ಕೃತರ ಹೆಸರು ಪ್ರಕಟವಾಗಿದೆ. ದಾನಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿಗೆ ಡಾ: ಚೂಡಾಮಣಿ ನಂದಗೋಪಾಲ್ ಆಯ್ಕೆಯಾಗಿದ್ದರೆ, ಪ್ರೊ ಕೆ.ಜಿ. ಕುಂದಣಗಾರ ಗಡಿನಾಡ ಪ್ರಶಸ್ತಿಗೆ ಪ್ರೊ ಸಿದ್ದಣ್ಣ ಉತ್ನಾಳ (ಬೆಳಗಾವಿ) ಅಕ್ಕಮಹಾದೇವಿ ಪ್ರಶಸ್ತಿಗೆ ಡಾ: ಜಯಶ್ರೀ ದಂಡೆ (ಕಲಬುರಗಿ) ಸಂಗೊಳ್ಳಿ ರಾಯಣ್ಣ ಪ್ರಶಸ್ತಿಗೆ ರಾ.ನಂ. ಚಂದ್ರಶೇಖರ್ ಅವರನ್ನು ಆಯ್ಕೆ ಮಾಡಲಾಗಿದೆ. ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ಗಣ್ಯರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಈ ಎಲ್ಲಾ ಪ್ರಶಸ್ತಿಗಳು ತಲಾ ರೂ.5 ಲಕ್ಷ ನಗದು ಮತ್ತು ಪ್ರಶಸ್ತಿ ಫಲಕವನ್ನು ಹೊಂದಿವೆ.

ಆಧಾರ:ಪ್ರಜಾವಾಣಿ, ದಿನಾಂಕ:25.06.2020

## 3. ಗದ್ದಿಗೌಡರ ಸ್ಥಾಯಿ ಸಮಿತಿಗೆ ಸಂಸದ್ ರತ್ನ

ಲೋಕಸಭೆಯ 8 ಸದಸ್ಯರು ಹಾಗೂ ರಾಜ್ಯಸಭೆಯ ಇಬ್ಬರಿಗೆ 2020ನೇ ಸಾಲಿನ "ಸಂಸದ್ ರತ್ನ" ಪ್ರಶಸ್ತಿ ಘೋಷಿಸಲಾಗಿದೆ. ಪ್ರೈ, ಪಾಯಿಂಟ್ ಫೌಂಡೇಷನ್ ಈ ಪ್ರಶಸ್ತಿ ಘೋಷಣೆ ಮಾಡಿದೆ. ಸಂಸದರಿಗೆ ವೈಯಕ್ತಿಕ ಪ್ರಶಸ್ತಿ ಅಲ್ಲದೆ, ಉತ್ತಮ ಕೆಲಸ ಮಾಡಿದ ಬಾಗಲಕೋಟೆಯ ಬಿಜೆಪಿ ಸಂಸದ ಪಿ.ಸಿ. ಗದ್ದಿಗೌಡರ ಅವರ ಅಧ್ಯಕ್ಷತೆಯ ಕೃಷಿ ಸಂಸದೀಯ ಸ್ಥಾಯಿ ಸಮಿತಿಗೂ 'ಸಂಸದ್ ರತ್ನ' ಪ್ರಶಸ್ತಿ ಪ್ರಕಟಿಸಲಾಗಿದೆ. 2010 ರಿಂದ ಫೌಂಡೇಷನ್ ಈ ಪ್ರಶಸ್ತಿ ಘೋಷಿಸುತ್ತಿದೆ. ಈ ಸಲ ಸುಪ್ರಿಯಾ ಸುಳೆ, ಸುಭಾಷ್ ಭಾಮ್ರೆ, ಹೀನಾ ಗ್ರಾಮಿತ್, ಅಮೋಲ್ ಕೂಲೆ, ಶಶಿತರೂರ್, ನಿಶಿಕಾಂತ್ ದುಬೆ, ಅಜಯ ಮಿಶ್ರಾ, ರಾಮಮೋಹನ ನಾಯ್ಡು, ವಿಶ್ವಂಭರ ನಿಷಾದ್, ಛಾಯ ವರ್ಮಾ ಅವರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಆಧಾರ:ಕನ್ನಡ ಪ್ರಭ, ದಿನಾಂಕ:25.06.2020

# ಭಾಗ–11

## ಪ್ರಮುಖ ಲೇಖನಗಳು

### 1. ಜೀವ ಜಗತ್ತು ಮತ್ತು ಜೈವಿಕ ವಿಪತ್ತು

2019ರ ಡಿಸೆಂಬರ್. 26ರಂದು ಜರುಗಿದ ಸೂರ್ಯಗ್ರಹಣದ ಆಗುಹೋಗುಗಳನ್ನು ವಿಶ್ಲೇಷಿಸಿದೆ. ಬಹುತೇಕ ಟಿ.ವಿ.ಚಾನೆಲ್‌ಗಳು ಮತ್ತು ಜ್ಯೋತಿಷಿಗಳು, ಮುಂಬರುವ ದಿನಗಳಲ್ಲಿ ಜಗತ್ತಿನಾದ್ಯಂತ ಭಾರಿ ದುರಂತಗಳು ಸಂಭವಿಸುತ್ತವೆ ಎಂದು ಹೇಳುತ್ತಾ ಭೂಕಂಪ, ಜ್ವಾಲಾಮುಖಿ, ಅತಿವೃಷ್ಟಿ, ಪ್ರವಾಹ, ಬರಗಾಲದಂಥ ನೈಸರ್ಗಿಕ ವಿಕೋಪಗಳನ್ನು ಉದಾಹರಿಸಿದರು. ಯಾರೊಬ್ಬರೂ ಕೊರೊನಾದಂತಹ ಅಗೋಚರ 'ಕ್ರಿಮಿ' ಉಂಟುಮಾಡಲಿರುವ ವಿಪತ್ತಿನ ಬಗ್ಗೆ ಊಹೆ ಕೂಡ ಮಾಡಲಾಗಿಲಿಲ್ಲ. ಆದರೆ ಯಾರ ಹಿಡಿತದಲ್ಲಿಯೂ ಇರದ ಪ್ರಕೃತಿ, ತನ್ನ ಶಕ್ತಿ ಏನೆಂಬುದನ್ನೂ ಮನುಷ್ಯನ ಇತಿಮಿತಿಯನ್ನು ಅನಾವರಣಗೊಳಿಸಿದೆ.

ಪರಮಾಣು ಸಿಡಿತಲೆಗಳನ್ನು ಒಂದಾದ ಮೇಲೆ ಒಂದರಂತೆ ಹಾರಿಸುತ್ತಾ ಅಮೆರಿಕವನ್ನೇ ಹೆದರಿಸುತ್ತಿದ್ದ ಉತ್ತರ ಕೊರಿಯಾದ ಕಿಮ್ ಜಾಂಗ್ ಉನ್, ಇರಾನ್ ದೇಶವನ್ನು ತನ್ನ ಮಿಲಿಟರಿ ಶಕ್ತಿಯಿಂದ ನಾಮಾವಶೇಷ ಮಾಡಬಲ್ಲೆ ಎನ್ನುತ್ತಿದ್ದ ಡೊನಾಲ್ಡ್ ಟ್ರಂಪ್, ಹಿಂಸೆಯ ಪರಾಕಾಷ್ಠೆ ಮೆರೆಯುತ್ತಿದ್ದ ಉಗ್ರರು, ಹೀಗೆ ತಮ್ಮ ಬಲಾಬಲಗಳ ಪರಾಕ್ರಮ ತೋರುತ್ತಿದ್ದ ಎಲ್ಲರೂ ಕೊರೊನಾ ಎಂಬ ಯಕಃಶ್ಚಿತ್ ಸೂಕ್ಷ್ಮಾಣುವಿಗೆ ಹೆದರಿ ಅವಿತುಕೊಳ್ಳುವಂತಾಗಿದೆ.

ಜನರಿಂದ ತುಂಬಿ ತುಳುಕುತ್ತಿದ್ದ ಪ್ರಪಂಚದ ಎಲ್ಲ ನಗರಗಳೂ ಬಿಕೋ ಎನ್ನುತ್ತಿವೆ. ಲಕ್ಷಾಂತರ ಮಂದಿ ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದರೆ, ಆರ್ಥಿಕ ವಹಿವಾಟು ಧೂಳೀಪಟವಾಗಿದೆ. ಮುಂದೇನು ಕಾದಿದೆಯೋ ಎಂಬ ಭೀತಿಯಲ್ಲಿ ದಿನ ದೂಡಬೇಕಾದ ಪರಿಸ್ಥಿತಿಯನ್ನು ಯಾರೊಬ್ಬರೂ ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ.

ಕೊರೊನಾ ವೈರಾಣುವಿನ ಮೂಲದ ಬಗ್ಗೆ ಅನೇಕ ಊಹಾಪೋಹಗಳನ್ನು ತೇಲಿಬಿಡಲಾಗಿದೆ. ಈ ಮಧ್ಯೆ, ಕುತೂಹಲಕರ ಮತ್ತು ಪ್ರಮುಖವಾದ ಸಂಶೋಧನೆಯೊಂದರ ಜಾಡು ನಮಗೆ ಸಿಗುತ್ತದೆ. ಅಮೆರಿಕನ್ ಸೊಸೈಟಿ ಆಫ್ ಮೈಕ್ರೊಬಯಾಲಜಿ ಹೊರತರುವ 'ಕ್ಲಿನಿಕಲ್ ಮೈಕ್ರೊಬಯಾಲಜಿ ರಿವ್ಯೂಸ್' ಎನ್ನುವ ನಿಯತಕಾಲಿಕದಲ್ಲಿ ಹಾಂಗ್‌ಕಾಂಗ್ ವಿಶ್ವವಿದ್ಯಾಲಯದ ವಿನ್ಸೆಂಟ್ ಮತ್ತು ಅವರ ವಿಜ್ಞಾನಿಗಳ ತಂಡ 2007ರ ಅಕ್ಟೋಬರ್‌ನಲ್ಲಿ ಪ್ರಕಟಿಸಿದ ಲೇಖನವೊಂದರಲ್ಲಿ ಬೆಚ್ಚಿ ಬೀಳಿಸುವ ಅಂಶವೊಂದನ್ನು ದಾಖಲಿಸಿದೆ. ಅದೇನೆಂದರೆ, ಸಾರ್ಸ್ ಮತ್ತು ಕೊರೊನಾ ವೈರಾಣುಗಳು ಒಂದು ಜಾತಿಯ ಬಾವಲಿಗಳಲ್ಲಿ ಶೇಖರಗೊಂಡು ಕ್ರಿಯಾಶೀಲವಾಗಿರುವುದು ಮತ್ತು ದಕ್ಷಿಣ ಚೀನಾದ ಪ್ರಾಂತ್ಯಗಳಲ್ಲಿ ಜನ ನಾನಾ ತರಹದ ಪ್ರಾಣಿಗಳನ್ನು ತಿನ್ನುವ ಕಾರಣದಿಂದ ವೈರಾಣು ರೋಗದ ಮಹಾಸ್ಫೋಟ ಸಂಭವಿಸಬಹುದೆಂದು ಎಚ್ಚರಿಸಿತ್ತು. ಅದನ್ನೊಂದು ಟೈಮ್‌ಬಾಂಬ್ ಎಂದು ಆಗಲೇ ಹೇಳಿ, ಅದನ್ನು ತಡೆಯಲು ಸೂಕ್ತ ಕ್ರಮಗಳತ್ತ ಗಮನಹರಿಸಬೇಕು ಎಂದು ಕೋರಿತ್ತು.

ಅಧಿಕಾರಶಾಹಿ ಮತ್ತು ರಾಜಕಾರಣಿಗಳು ವಿಜ್ಞಾನಿಗಳ ಮಾತನ್ನು ಎಂದಾದರೂ ಗಂಭೀರವಾಗಿ ಪರಿಗಣಿಸಿದ್ದುಂಟೇ! 'ನಮ್ಮ ನಗರ ಜ್ವಾಲಾಮುಖಿಯ ಮೇಲೆ ಕುಳಿತಿದೆ' ಎಂಬ ಪತ್ರಕರ್ತರ ಗಂಭೀರ ಎಚ್ಚರಿಕೆಯನ್ನು ಕಡೆಗಣಿಸಿದ್ದರಿಂದ, ಮಧ್ಯಪ್ರದೇಶ ಭೋಪಾಲ್‌ನಲ್ಲಿ ಯೂನಿಯನ್ ಕಾರ್ಬೈಡ್ ಕಂಪನಿಯ ಕ್ರಿಮಿನಾಶಕ ಕಾರ್ಖಾನೆಯಿಂದ 1984ರ ಡಿಸೆಂಬರ್. 2ರಂದು ವಿಷಾನಿಲ ಸೋರಿಕೆಯಾಗಿ 10,000ಕ್ಕೂ ಹೆಚ್ಚು ಜನ ಸಾವಿಗೀಡಾದ ಮಹಾದುರಂತವನ್ನು ಮರೆಯಲು ಸಾಧ್ಯವೇ.

ಜೀವಜಗತ್ತಿನ ಸಂಕೀರ್ಣತೆಯನ್ನು ಅರಿಯದಿದ್ದರೆ ಇನ್ನು ಮುಂದೆ ಮನುಷ್ಯ ಎದುರಿಸುವ ಅತ್ಯಂತ ದೊಡ್ಡ ವಿಪತ್ತು ಜೈವಿಕ ಪ್ರಳಯವೇ ಆಗಲಿದೆ ಎಂಬುದನ್ನು ನಾವೀಗ ಅರಿಯಬೇಕಾಗಿದೆ. ಈ ಭೂಮಿಯಲ್ಲಿ ಜೀವ ಸೃಷ್ಟಿಯಾದದ್ದೇ ಒಂದು ಸೂಕ್ಷ್ಮಾಣು ಜೀವಿಯ ರೂಪದಲ್ಲಿ, ಬ್ರಹ್ಮಾಂಡದಲ್ಲಿ ಜರುಗಿದ ಮಹಾಸ್ಫೋಟದ ನಂತರ ಸುಮಾರು 500 ಕೋಟಿ ವರ್ಷಗಳ ಹಿಂದೆ ಈ ಭೂಮಿ ಅವತರಿಸಿದಾಗ ಅದೊಂದು ಉರಿಯುತ್ತಿದ್ದ ಕೆಂಡದ ಉಂಡೆ, ಸುಮಾರು 50 ಕೋಟಿ ವರ್ಷಗಳ ಅಂತರದಲ್ಲಿ ತಣ್ಣಗಾದ ಭೂಮಿಯ ಮೇಲೆ ನೀರು ಉತ್ಪತ್ತಿಯಾಗಿ, ಸಮುದ್ರಗಳಾಗಿ ವಾತಾವರಣದ ವಿಕಸನಕ್ಕೆ ನಾಂದಿಯಾಯಿತು. ಸಮುದ್ರ ತಳದಲ್ಲಿ ಬಿಸಿನೀರ ಜ್ವಾಲಾಮುಖಿಗಳು

ಕಬ್ಬಿಣ, ತಾಮ್ರ, ಸೀಸ, ಸತುವಿನಂಥ ಲೋಹ ಧಾತುಗಳಿಗೂ, ಇಂಗಾಲ, ಧಾತುಗಳಿಗೂ ಕಾರಣವಾಗಿ, ಅಂತಲ್ಲೇ ಭೂಮಿಯ ಮೊದಲ ಏಕಕೋಶ ಜೀವಿಯ ಸೃಷ್ಟಿಯಾಯಿತು ಎಂಬುದನ್ನು ಭೂವಿಜ್ಞಾನಿಗಳು ಸಾದರಪಡಿಸಿದ್ದಾರೆ.

ಭೂಮಿಯ ಅಜೈವಿಕ ಮೂಲದಿಂದ ಜೈವಿಕ ಸೃಷ್ಟಿಯ ಪಥದಲ್ಲಿ ಜೀವೋತ್ಪಾದನೆ ಹೇಗಾಯಿತು ಎಂಬುದಕ್ಕೆ ನಿಖರವಾದ ಉತ್ತರ ಇನ್ನೂ ದೊರೆಯದಿದ್ದರೂ ಜೀವಿಯ ಉಗಮ ಒಂದು ಸೂಕ್ಷ್ಮಾಣು ಜೀವಿಯಿಂದಲೇ ಪ್ರಾರಂಭವಾಯಿತೆಂಬುದು ಬಹುತೇಕ ಒಪ್ಪಿಕೊಂಡ ವಿಚಾರವಾಗಿದೆ. ಅಂದಿನಿಂದ ಇಂದಿನವರೆಗಿನ ಜೀವವಿಕಾಸದ ಪಥ ಅತ್ಯಂತ ಸಂಕೀರ್ಣವೂ ವಿಸ್ಮಯವೂ ಆಗಿದೆ. ಸುಮಾರು 350 ಕೋಟಿ ವರ್ಷಗಳ ದೀರ್ಘ ಜೀವ ವಿಕಸನದ ಹಾದಿಯಲ್ಲಿ 300 ಕೋಟಿ ವರ್ಷಗಳ ಅಗಾಧ ಅವಧಿಯನ್ನು ಆಳಿದ್ದು ಈ ಸೂಕ್ಷ್ಮ ಜೀವಿಗಳೇ.

ಜೀವವಿಕಾಸದ ಹಾದಿಯಲ್ಲಿ ಸೂಕ್ಷ್ಮಾಣುಗಳ ಜೀವ ಧಾತುವಿನಲ್ಲಿ ಅನೇಕ ಮಾರ್ಪಾಡುಗಳಾಗಿರುವುದನ್ನು ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ. ಡೈನೊಸಾರ್‌ಗಳು ಅಳಿದ ಕಾಲಘಟ್ಟದಲ್ಲಿ ವಾತಾವರಣವನ್ನು ಆವರಿಸಿದ್ದ ಇಂಗಾಲ ಮತ್ತು ಗಂಧಕದ ಆಕ್ಸೈಡ್‌ಗಳು, ಅಪ್ಪಳಿಸುತ್ತಿದ್ದ ಅಕಾಶಕಾಯಗಳು ಅನೇಕ ಸೂಕ್ಷ್ಮಾಣು ಜೀವಿಗಳನ್ನು ರೂಪಾಂತರಿಸಿ, ಆಹಾರ ಸರಪಳಿಯ ಮೂಲಕ ಸಸ್ಯ ಮತ್ತು ಪ್ರಾಣಿಗಳನ್ನು ಹೊಕ್ಕು, ಅವುಗಳ ಪ್ರತಿರೋಧ ಶಕ್ತಿಯನ್ನು ಮೀರಿ ಅವುಗಳ ಅಳಿವಿಗೆ ಕಾರಣವಾಗಿರಬಹುದೆಂಬ ಇನ್ನೊಂದು ಅಯಾಮವನ್ನು ಈಗ ವಿಶ್ಲೇಷಿಸಬೇಕಾಗಿದೆ. ಈ ದಿಸೆಯಲ್ಲಿ ದೊಡ್ಡ ಸಂಶೋಧನೆಯೇ ಆಗಬೇಕಾಗಿದೆ ಮತ್ತು ಅದರಿಂದ ವೈರಾಣು ವಿರುದ್ಧದ ಹೋರಾಟದಲ್ಲಿ ಹೊಸ ಸುಳಿವುಗಳು ಸಿಗಬಹುದು. ಇನ್ನು ಆಧುನಿಕ ಜಗತ್ತಿನ ಇತಿಹಾಸದಲ್ಲಿ ಪ್ಲೇಗ್, ಇನ್‌ಫ್ಲುಯೆಂಜಾ, ಎಚ್1ಎನ್1, ಸಾರ್ಸ್ ಮತ್ತು ಈಗಿನ ಕೊರೊನಾ ವೈರಾಣು ಮನುಷ್ಯನಿಗೆ ಸವಾಲೊಡ್ಡಿರುವುದು ನೋಡಿದರೆ, ಮನುಷ್ಯ ತನ್ನ ಉಳಿವಿನ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ ಎನಿಸುತ್ತದೆ.

ಹವಾಮಾನ ಬದಲಾವಣೆ, ಭೂಮಿಯ ಮೇಲೆ ಮತ್ತು ಸಮುದ್ರದ ತಳದಲ್ಲಿ ಸ್ಫೋಟಿಸುತ್ತಿರುವ ಜ್ವಾಲಾಮುಖಿಗಳು ಜೀವಜಗತ್ತಿನ ಮೇಲೆ ಹೇಗೆ ಪರಿಣಾಮ ಬೀರುತ್ತಿವೆ ಎಂಬುದನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವುದು ಕಷ್ಟದ ಕೆಲಸವೇ ಸರಿ. ಏಕೆಂದರೆ ಜೀವಸೃಷ್ಟಿಗೆ ಅನೇಕ ರಾಸಾಯನಿಕ ಕ್ರಿಯೆಗಳು ಮತ್ತು ಆ ಕ್ರಿಯೆಗಳನ್ನು ಪ್ರಚೋದಿಸಲು ಗುಡುಗು, ಸಿಡಿಲು, ವಿಕಿರಣ ಕ್ರಿಯೆ ಮುಂತಾದವು ಹೇಗೆ ನೆರವಾಗಿರಬಹುದೋ ಅಂತಹದೇ ಕ್ರಿಯೆಗಳು ಈಗಲೂ ಜರುಗುತ್ತಿದ್ದು ಸೂಕ್ಷ್ಮಾಣುಜೀವಿಗಳು ರೂಪಾಂತರಗೊಳ್ಳಲು ನೆರವಾಗುತ್ತಿರಬಹುದು ಮತ್ತು ಹಾಗೆ ರೂಪಾಂತರಗೊಂಡ ಸೂಕ್ಷ್ಮಜೀವಿಗಳು (ವೈರಾಣು) ನಾನಾ ರೀತಿಯಲ್ಲಿ ಮನುಷ್ಯನನ್ನು ಹೊಕ್ಕು ಅವನ ಅಳಿವಿಗೇ ಸಂಚಕಾರ ತರಬಹುದು.

ಈ ಕ್ರಿಯೆಗಳು ಮನುಷ್ಯನ ನಿಯಂತ್ರಣಕ್ಕೆ ಮೀರಿದ್ದವಾದ್ದರಿಂದ, ಅವುಗಳಿಂದ ಉಂಟಾಗಬಲ್ಲ ದುಷ್ಪರಿಣಾಮಗಳನ್ನು ನಿಯಂತ್ರಿಸಲು ಹೊಸ ತಂತ್ರಗಳನ್ನು ರೂಪಿಸಬೇಕಾಗಿದೆ. ಬಹಳ ಮುಖ್ಯವಾಗಿ ನಮ್ಮ ರಾಷ್ಟ್ರೀಯ ವಿಪತ್ತುಗಳ ಪಟ್ಟಿಯಲ್ಲಿ ಜೈವಿಕ ವಿಕೋಪವನ್ನು ಅಗ್ರಸ್ಥಾನದಲ್ಲಿ ಸೇರಿಸುವ ಕಾಲ ಬಂದಿದೆ. ಇದರ ಜೊತೆಗೆ, ಅನೇಕ ರೀತಿಯ ಸೂಕ್ಷ್ಮಾಣು ಜೀವಿಗಳು ಉಂಟುಮಾಡಬಹುದಾದ ಆರೋಗ್ಯ ಸಮಸ್ಯೆಗಳನ್ನು ಗುಣಪಡಿಸುವ ವ್ಯಾಪಕ ವಿಧಾನಗಳ ಬಗ್ಗೆ ಆಳವಾದ ಸಂಶೋಧನೆ ನಡೆಸಲು ಪ್ರತಿ ರಾಜ್ಯದಲ್ಲೂ ಜೈವಿಕ ತಂತ್ರಜ್ಞಾನದ ಪ್ರಯೋಗಾಲಯಗಳನ್ನು ಸ್ಥಾಪಿಸಬೇಕಾಗಿದೆ. ಏಕೆಂದರೆ ದೊಡ್ಡ ಯುದ್ಧಗಳನ್ನು ಗೆಲ್ಲಬಹುದು. ದೊಡ್ಡ ಪ್ರಾಣಿಗಳನ್ನು ಮಣಿಸಬಹುದು, ದೊಡ್ಡ ವಿಕೋಪಗಳನ್ನು ನಿಭಾಯಿಸಬಹುದು, ಆದರೆ ಅಗೋಚರ ವೈರಾಣುವಿನೊಂದಿಗೆ ಹೋರಾಡಲು ಮನುಷ್ಯ ನಿರಾಯುಧನಂತಾಗಿ ಬಿಡುತ್ತಾನೆ. ಇದು ಕೊರೊನಾ ಬಾರಿಸಿರುವ ಎಚ್ಚರಿಕೆಯ ಗಂಟೆ.

ಲೇಖಕರು:–ಡಾ.ಬಿ.ಸಿ. ಪ್ರಭಾಕರ್

ಭೂ ವಿಜ್ಞಾನ ನಿವೃತ್ತ ಪ್ರಾಧ್ಯಾಪಕ

ಆಧಾರ:ಪ್ರಜಾವಾಣಿ, ದಿನಾಂಕ:03.04.2020

## 2. ದಿಗ್ಬಂಧನದ ಅವಧಿಯ ಆಲೋಚನೆ.

ಮನುಷ್ಯ ತನ್ನ ಜೊತೆಗಾರನನ್ನು ಕೊಲ್ಲುವುದಕ್ಕೆ ಹಲವು ಕಾರಣಗಳಿರುತ್ತವೆ. ಅದಕ್ಕೆ ದ್ವೇಷ ಕಾರಣವಾಗಬಹುದು, ಹಳೆಯ ಸಿಟ್ಟನ್ನು ತೀರಿಸಿಕೊಳ್ಳಲು ಕೊಲೆ ಮಾಡಬಹುದು, ದುರಾಸೆಗೆ ಬಲಿಯಾಗಿ ಕೂಡ ಕೊಲೆ ಮಾಡಬಹುದು, ಮನುಷ್ಯನು ಸಿಟ್ಟಿನ ಹಿಡಿತಕ್ಕೆ ಸಿಲುಕಿ, ಕೊಲೆಯಂತಹ ಕೃತ್ಯಗಳನ್ನು ಎಸಗುವುದೇ ಜಾಸ್ತಿ. ಮನುಷ್ಯ ಎಸಗುವ ಹಿಂಸಾಕೃತ್ಯಗಳ ವಿವರಗಳು ಮಾಧ್ಯಮಗಳಲ್ಲಿ ಬಹಳಷ್ಟಿವೆ. ವ್ಯಕ್ತಿಯೊಬ್ಬ ಯಾವುದಾದರೂ ಧಾರ್ಮಿಕ ಗುಂಪಿನ ಸದಸ್ಯನಾಗಿದ್ದರೆ, ಪುಡಿ ಸಂಘಟನೆಗಳಿಗೆ ಸೇರದವ ಆಗಿದ್ದರೆ, ರಾಜಕೀಯ ಅಥವಾ ತೀವ್ರಗಾಮಿ ಸಿದ್ಧಾಂತವನ್ನು ವಿವೇಚನೆ ಇಲ್ಲದೆ ಒಪ್ಪಿಕೊಂಡಿದ್ದರೆ, ಮುಂದೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆಯಿಂದಲೂ ಇತರರನ್ನು ಹತ್ಯೆ ಮಾಡುವುದಿದೆ.

ಪ್ರಾಣಿಗಳೂ ಇತರ ಪ್ರಾಣಿಗಳನ್ನು ಕೊಲ್ಲುತ್ತವೆ. ಆದರೆ ಅವು ತಮ್ಮ ಹಸಿವು ನೀಗಿಸಿಕೊಳ್ಳಲು ಹಾಗೆ ಮಾಡುತ್ತವೆ. ಆದರೆ, ಸಾಂಕ್ರಾಮಿಕಗಳು, ಭೂಕಂಪ, ಪ್ರವಾಹ ಇಂಥವುಗಳ ಮೂಲಕ ದೇವರು ಮನುಷ್ಯನನ್ನು ಕೊಂದಾಗ, 'ದೇವರು ಇಷ್ಟೊಂದು ಕ್ರೂರಿಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಇದೊಂದು ಕ್ರೂರ ಆಟವೇ ಅಥವಾ ದೇವರ ಆಟದಲ್ಲಿ ಒಂದು ಕ್ರಮ ಎಂಬುದಿದೆಯೇ.

ಮುಗ್ಧರು ಸಹಸ್ರಾರು ಸಂಖ್ಯೆಯಲ್ಲಿ ಸರ್ವಶಕ್ತನೂ ದಯಾಮಯನೂ ಆದ ದೇವರ ಕೈಯಲ್ಲೇ ಸಾಯುವುದಕ್ಕೆ ಕಾರಣವೇನು ಎಂಬುದನ್ನು ತೃಪ್ತಿಕರವಾಗಿ ವಿವರಿಸಲು ಯಾವುದೇ ಧಾರ್ಮಿಕ ಮುಖಂಡನಿಗೆ ಅಥವಾ ಅವಧೂತನಿಗೆ ಸಾಧ್ಯವಾಗಿಲ್ಲ. 'ಕೆಡಕು' ಏಕಿದೆ ಎಂಬ ಪ್ರಶ್ನೆಯನ್ನು ಟ್ಯಾಗೋರ್ ಅವರಲ್ಲಿ ಕೇಳಿದಾಗ, 'ಒಳಿತು ಎಂಬುದು ಏಕಿದೆ ಎಂದು ಕೇಳಿದಂತಿದೆ ಇದು' ಎನ್ನುವ ಉತ್ತರ ನೀಡಿದ್ದರು. ಈಗ ಕೊರೊನಾ ವೈರಾಣು ಬಂದಿದೆ. ಇದರ ಉದ್ದೇಶ ಏನು? ಇದು, ವಿಶ್ವದ ಪೂರ್ವನಿರ್ಧರಿತ ನಿಯಮಗಳಿಗೆ ಅನುಸಾರವಾಗಿ ಪ್ರಕೃತಿ ನಡೆದುಕೊಳ್ಳುತ್ತಿರುವ ಬಗೆಯೇ? ಇದರಲ್ಲಿ ದೇವರ ಕೈವಾಡ ಏನೂ ಇಲ್ಲವೇ?

ಮನುಷ್ಯನಿಗೆ ಎದುರಾಗುವ ಹತ್ತು ಹಲವು ಸಮಸ್ಯೆಗಳನ್ನು ಬೇರೆ ಬೇರೆ ಬಗೆಗಳಲ್ಲಿ ವಿವರಿಸಲಾಗಿದೆ. 'ಹಳೆಯ ಒಡಂಬಡಿಕೆ'ಯಲ್ಲಿ ಹೇಳಿರುವ 'ನಿಮ್ಮ ತಂದೆ–ತಾಯಿ ಮಾಡಿದ ಕೆಟ್ಟ ಕೆಲಸಗಳ ಫಲವನ್ನು ನೀವು ಅನುಭವಿಸಬೇಕು' ಎಂಬುದನ್ನು ಹಲವರು ನಂಬುತ್ತಾರೆ. ಈ ಜನ್ಮದಲ್ಲಿ ಮಾಡಿರುವ ಪಾಪಕೃತ್ಯಗಳು ಎಂದು ಹಿಂದೂಗಳು ಹೇಳಬಹುದು. ತಂತ್ರಜ್ಞಾನದಲ್ಲಿ ಮುಂದುವರಿದ ಮನುಷ್ಯನ ಅಹಂಕಾರವೇ ಸಂಕಷ್ಟಗಳಿಗೆ ಕಾರಣ ಎಂದು ತತ್ವಜ್ಞಾನಿ ಅಥವಾ ವೈಜ್ಞಾನಿಕ ಮನೋಭಾವದ ವ್ಯಕ್ತಿಗಳು ಹೇಳಬಹುದು. ಮನುಷ್ಯ ತನ್ನನ್ನು ಮಾತ್ರ ಗಮನದಲ್ಲಿ ಇರಿಸಿಕೊಂಡು ಆಲೋಚಿಸಿ, ಸಂಪನ್ಮೂಲಗಳನ್ನು ಅತಿಯಾಗಿ ದುರ್ಬಳಕೆ ಮಾಡಿಕೊಂಡು, ನಿಸರ್ಗದ ಸಹಜ ಸಮತೋಲನವನ್ನು ಹಾಳು ಮಾಡಿದ್ದಕ್ಕಾಗಿ ನಿಸರ್ಗದ, ದೇವತೆಗಳು ಕೊಟ್ಟಿರುವ ಶಿಕ್ಷೆ ಈ ಸಾಂಕ್ರಾಮಿಕಗಳು ಎಂದು ಹೇಳಬಹುದು. ಎಲ್ಲ ಕ್ರಿಯೆಗಳಿಗೂ ಒಂದು ಪರಿಣಾಮ ಎಂಬುದಿರುತ್ತದೆ. ಎಲ್ಲದಕ್ಕೂ ಒಂದಲ್ಲ ಒಂದು ರೀತಿಯಲ್ಲಿ ಬೆಲೆ ತೆರಬೇಕಾಗುತ್ತದೆ.

ಅಣ್ವಸ್ತ್ರಗಳನ್ನು ಬಳಸಿ ನಡೆಯುವ ಹತ್ಯಾಕಾಂಡವು ಮನುಕುಲಕ್ಕೆ ಎಷ್ಟು ಕಂಟಕಪ್ರಾಯ ಆಗಬಲ್ಲದೋ, ಕೀಟಗಳು, ಸೂಕ್ಷ್ಮಾಣು ಜೀವಿಗಳು ಕೂಡ ಅಷ್ಟೇ ಕಂಟಕಪ್ರಾಯ ಆಗಬಲ್ಲವು ಎಂದು 85 ವರ್ಷಗಳ ಹಿಂದೆ ಬರೆದಿದ್ದ 'ಮೆನ್ ವರ್ಸಸ್ ಇನ್‌ಸೆಕ್ಟ್ಸ್' ಪ್ರಬಂಧದಲ್ಲಿ ಬರ್ಟ್ರಾಂಡ್ ರಸೆಲ್ ಬರೆದಿದ್ದ. ಆದರೆ, ಅಣ್ವಸ್ತ್ರ ಅಥವಾ ಜೈವಿಕ ಸಮರಕ್ಕಿಂತ ಹೊರತಾದ ಮಾರ್ಗವೊಂದರ ಮೂಲಕ ಮನುಷ್ಯ ತನ್ನನ್ನು ತಾನೇ ನಿರ್ಮೂಲಗೊಳಿಸಿಕೊಳ್ಳುವತ್ತ ಧಾವಿಸುತ್ತಿದ್ದಾನೆ ಎಂಬುದನ್ನು ಕಲ್ಪಿಸಿಕೊಳ್ಳಲು ರಸೆಲ್‌ಗೆ ಸಾಧ್ಯವಾಗಿರಲಿಲ್ಲ. ಅಹಂಕಾರ ಬೆಳೆಸಿಕೊಂಡಿರುವ ಹಾಗೂ ಲೌಕಿಕ ಸಂಪತ್ತಿನ ಬಗ್ಗೆ ಅತಿಯಾದ ಮೋಹ ಹೊಂದಿರುವ ಮನುಷ್ಯ, ತಾನು ಕುಳಿತಿರುವ ನಿಸರ್ಗ ವೃಕ್ಷದ ಬುಡವನ್ನು ತಾನೇ ಕಡಿದು ಹಾಕುತ್ತಿದ್ದಾನೆ ಎಂಬುದು ರಸೆಲ್‌ಗೆ ಗೊತ್ತಾಗಿರಲಿಲ್ಲ.

ಪ್ರಕೃತಿಯಲ್ಲಿ ಮಿತಿಮೀರಿ ನಡೆವ ಯಾವುದೂ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ಎಲ್ಲ ಬಗೆಯ ಉಲ್ಲಂಘನೆಗಳಿಗೂ ಇಲ್ಲಿ ಶಿಕ್ಷೆಯಿದೆ. ನಾನು ಚಿಕ್ಕವನಾಗಿದ್ದಾಗ ನಾಟಿ ಸಂದರ್ಭದಲ್ಲಿ ನನ್ನ ತಂದೆಯ ಜೊತೆ ಗದ್ದೆಗೆ ಹೋಗುತ್ತಿದ್ದ ದಿನಗಳು ನೆನಪಿನಲ್ಲಿವೆ. ಮಳೆಯಲ್ಲಿ ತಲೆಯ ಮೇಲೊಂದು ಕೊಪ್ಪೆ ಕಟ್ಟಿಕೊಂಡು, ಹಾಡಿಕೊಳ್ಳುತ್ತ, ನಾಟಿ ಕೆಲಸ ಮಾಡುತ್ತಿದ್ದ ಕೃಷಿ ಕಾರ್ಮಿಕರನ್ನು ನನ್ನ ತಂದೆ ನನಗೆ ತೋರಿಸುತ್ತಿದ್ದರು. ಮೈಮೇಲೆ

ಎರಡೂ ಕಡೆ ಬಟ್ಟೆಯ ಚೀಲ ಇಳಿಬಿಟ್ಟುಕೊಳ್ಳುತ್ತಿದ್ದರು. ಒಂದರಲ್ಲಿ ಸಸಿಗಳನ್ನು ಇಟ್ಟುಕೊಳ್ಳುತ್ತಿದ್ದರು. ಗದ್ದೆಯ ನೀರಿನಲ್ಲಿ ಸಿಗುತ್ತಿದ್ದ ಏಡಿಗಳನ್ನು ಅವರು ತಮ್ಮ ಇನ್ನೊಂದು ಚೀಲಕ್ಕೆ ಹಾಕಿಕೊಳ್ಳುತ್ತಿದ್ದರು. ಕೆಲಸಗಾರರು ಬಡವರು, ಹಾಗಾಗಿ ಅವರಿಗೆ ದೇವರು ಏಡಿಗಳನ್ನು ಉಚಿತವಾಗಿ ನೀಡುತ್ತಾನೆ ಎಂದು ಅಪ್ಪ ನನ್ನಲ್ಲಿ ಹೇಳುತ್ತಿದ್ದರು. 'ನಾವು ಮನೆಯಲ್ಲಿ ಸೇವಿಸುವ ಆಹಾರಕ್ಕಿಂತ ಏಡಿಗಳು ಹೆಚ್ಚು ಪೌಷ್ಟಿಕ' ಎಂದು ಕೂಡ ಅವರು ಹೇಳುತ್ತಿದ್ದರು. ಈ ಮಾತು ನನ್ನ ಮನಸ್ಸಿನಲ್ಲಿ ಉಳಿದುಕೊಂಡಿದೆ.

ಒಂದನ್ನು ಕಳೆದುಕೊಂಡರೆ ಇನ್ನೊಂದು ಸಿಗುತ್ತದೆ ಎನ್ನುವ ನಿಯಮ ವಿಶ್ವದಲ್ಲಿದೆ. ಆ ರೀತಿ ಸಿಗುವುದು ಇದೇ ಜೀವನದಲ್ಲೇ ಹೊರತು ಮುಂದೆ ಇರಬಹುದಾದ ಜನ್ಮದಲ್ಲಿ ಅಲ್ಲ. ಒಬ್ಬನಿಂದ ಏನನ್ನಾದರೂ ಕಸಿದುಕೊಂಡರೆ ಅಥವಾ ಆತನಿಗೆ ವಂಚನೆ ಮಾಡಿದರೆ, ಪ್ರಕೃತಿ ಅವನಿಗೆ ಇನ್ಯಾವುದೋ ರೀತಿಯಲ್ಲಿ ಪರಿಹಾರ ಕೊಡುತ್ತದೆ. ವ್ಯಕ್ತಿಯೊಬ್ಬ ತನ್ನ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡರೆ, ಪ್ರಕೃತಿ ಆ ಅಧಿಕಾರವನ್ನು ಆತನಿಂದ ಹಿಂದಕ್ಕೆ ಪಡೆಯುತ್ತದೆ ಕೂಡ.

ನನ್ನ ಜೀವನಕ್ಕೆ ಸಂಬಂಧಿಸಿದ ಕೆಲವು ವಿಚಾರಗಳು, ಆಲೋಚನೆಗಳು ಕಣ್ಣ ಮುಂದೆ ಹಾದು ಹೋದಾಗ ನನಗೆ ಕಾಶ್ಮೀರದಲ್ಲಿ ಈಚೆಗೆ ನಡೆದ ಕೆಲವು ಘಟನೆಗಳು ನೆನಪಿಗೆ ಬಂದವು. ಕೊರೊನಾ ವೈರಾಣು ದಾಳಿ ನಡೆಸುವ ಮುನ್ನವೇ ಸರ್ಕಾರವು ಕಾಶ್ಮೀರದ ಜನರನ್ನು ಕ್ವಾರಂಟೈನ್ ಮಾಡಿಯಾಗಿತ್ತು. ಭಾರತದಲ್ಲಿ ಈಗ ಕೊರೊನಾ ಚಾಟಿಯಿಂದ ತಪ್ಪಿಸಿಕೊಂಡು, ಅತ್ಯಂತ ಸುರಕ್ಷಿತವಾಗಿ ಇರುವವರು ಕಾಶ್ಮೀರದ ಜನ ಎನ್ನುವ ಆಲೋಚನೆ ನನ್ನ ಮನಸ್ಸಿನಲ್ಲಿ ಬಾರದೆ ಇರಲಿಲ್ಲ. ಕಾಶ್ಮೀರದ ಜನರನ್ನು ದಿಗ್ಬಂಧನಕ್ಕೆ ಒಳಪಡಿಸಿದ್ದು ಒಂದು ರೀತಿಯಲ್ಲಿ ಶಾಪದ ರೂಪದಲ್ಲಿನ ವರವಾಗಿತ್ತೇ? ಪರಿಹಾರವನ್ನು ಕೊಡುವ, ನ್ಯಾಯ ನಿರ್ಣಯ ಮಾಡುವ ದೇವರ ವಿಧಾನ ಇದುವೇ.

ತಪ್ಪುಗಳನ್ನು ತಾನಾಗಿಯೇ ಸರಿಪಡಿಸುವ, ಪರಿಹಾರವನ್ನೂ ಕೊಡುವ ವಿಶ್ವದ ಈ ಧೋರಣೆಯ ಬಗ್ಗೆ ಎಮರ್ಸನ್ ಕೆಲವು ಮಾತುಗಳನ್ನು ಹೇಳಿದ್ದಾನೆ. 'ಸರ್ಕಾರ ಕ್ರೂರವಾಗಿದೆ ಎಂದಾದರೆ, ಸರ್ಕಾರದಲ್ಲಿ ಇರುವವರ ಜೀವ ಕೂಡ ಸುರಕ್ಷಿತವಾಗಿ ಇರುವುದಿಲ್ಲ. ತೆರಿಗೆಯನ್ನು ವಿಪರೀತ ಪ್ರಮಾಣದಲ್ಲಿ ವಿಧಿಸಿದರೆ, ಆದಾಯದ ರೂಪದಲ್ಲಿ ಕೊನೆಗೆ ಏನೂ ಗಿಟ್ಟುವುದಿಲ್ಲ. ರಕ್ತಪಾತಕ್ಕೆ ದಾರಿಯಾಗುವಂತಹ ಅಪರಾಧ ಸಂಹಿತೆಯನ್ನು ರೂಪಿಸಿದರೆ, ನ್ಯಾಯಮೂರ್ತಿಗಳು ಯಾರನ್ನೂ ಶಿಕ್ಷೆಗೆ ಗುರಿಪಡಿಸುವುದಿಲ್ಲ. ಕಾನೂನು ತೀರಾ ಮೃದುವಾಗಿದ್ದರೆ, ಖಾಸಗಿ ನೆಲೆಯ ದ್ವೇಷ ತಲೆ ಎತ್ತುತ್ತದೆ. ಜೀವನದ ಎಲ್ಲವುಗಳಲ್ಲೂ ಸಮತೋಲನ ತಂದುಕೊಂಡಾಗ, ಎಲ್ಲವನ್ನೂ ಸಮಾನವಾಗಿ ಕಾಣುವ ಸ್ಥಿತಿ ಪ್ರಾಪ್ತವಾಗುತ್ತದೆ. ಎಲ್ಲವಕ್ಕೂ ಇಲ್ಲಿ ಅವುಗಳದೇ ಆದ ಪ್ರಾಧಾನ್ಯ ಇದೆ.'

ವೈಜ್ಞಾನಿಕವಾದ, ಸಾಬೀತು ಮಾಡಲು ಸಾಧ್ಯವಾದ ನಿಯಮಗಳಿಗೆ ಅನುಗುಣವಾಗಿ ವಿಶ್ವ ನಡೆಯುತ್ತಿದೆ ಎಂದು ನಂಬಲಾಗಿತ್ತು. ಈ ನಿಯಮಗಳನ್ನು ದೇವರೂ ಮೀರಲಾರ ಎನ್ನಲಾಗಿತ್ತು. ಆದರೆ, ವಿಶ್ವವು ನಡೆವ ಬಗೆಯನ್ನು ಊಹಿಸಲು ಸಾಧ್ಯವಿಲ್ಲ ಎನ್ನುವುದನ್ನು ಕ್ವಾಂಟಂ ವಿಜ್ಞಾನ ಸಾಬೀತು ಮಾಡಿದೆ.

ಈಗ ಎದುರಾಗಿರುವ ಸಾಂಕ್ರಾಮಿಕವು ದೇವರ ಇನ್ನೊಂದು ಆಟವೇ ಎಂದು ಕೇಳಿಕೊಳ್ಳಬಹುದು ಅಥವಾ ಇದು ನಮ್ಮ ಸಣ್ಣತನ, ದ್ವೇಷ, ಹಿಂಸಾಚಾರ, ದುರಾಸೆ, ಸೊಕ್ಕು ಮತ್ತು ಎಲ್ಲೆ ಮೀರುವಿಕೆಗಳಿಗೆ ವಿರುದ್ಧವಾಗಿ ಪ್ರಕೃತಿ ಸಾಧಿಸುತ್ತಿರುವ ಹಗೆಯೇ.

ಲೇಖಕರು:– ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಆಧಾರ:ಪ್ರಜಾವಾಣಿ, ದಿನಾಂಕ:08.04.2020

## 3. ಪರೀಕ್ಷೆಯ ನಿರೀಕ್ಷೆಯಲ್ಲಿ.

ಎಸ್‌ಎಸ್‌ಎಲ್‌ಸಿಯ ಎಲ್ಲ ಪರೀಕ್ಷೆಗಳು ಮತ್ತು ಪಿಯುಸಿಯ ಒಂದು ಪರೀಕ್ಷೆಯನ್ನು ಮಾತ್ರ ಬರೆಯಬೇಕಾಗಿರುವ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಯನ್ನು ನಿರೀಕ್ಷಿಸುತ್ತಾ ಮನೆಯಲ್ಲಿದ್ದಾರೆ. ಈ ರೀತಿಯ ಸ್ಥಿತಿ ಎಲ್ಲರಿಗೂ ಹೊಸ ಅನುಭವವೇ ಆಗಿದೆ.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರು ಕರೆ ಮಾಡಿ ವಿಚಾರಿಸುವುದು, ಏನು ಸಮಸ್ಯೆ ಇದೆ ಎಂದು ಕೇಳುವುದು ಸಹಜ. ಈ ರೀತಿ ಪ್ರತಿದಿನ ಶಿಕ್ಷಕರು ಕರೆ ಮಾಡುವುದು ಕೆಲವು ವಿದ್ಯಾರ್ಥಿಗಳಿಗೆ ಕಿರುಕುಳದಂತೆ ಭಾಸವಾಗಿ, ಕರೆಯನ್ನು ತಪ್ಪಿಸಿಕೊಳ್ಳುವಂತಹ ಚಟುವಟಿಕೆಗಳೂ ನಡೆಯುತ್ತವೆ. ವಿದ್ಯಾರ್ಥಿಗಳು ಪರೀಕ್ಷೆಯನ್ನೆಲ್ಲಾ ಮುಗಿಸಿ ರಜೆಯನ್ನು ಅನುಭವಿಸುವ ನಿರೀಕ್ಷೆಯಲ್ಲಿದ್ದಾಗ ಪರೀಕ್ಷೆ ಮುಂದೆ ಹೋದದ್ದು ಕಿರುಕುಳವೆನಿಸಿ ಈ ರೀತಿ ವರ್ತಿಸುವುದು ಸಹಜ ಎಂಬ ಅರಿವು ಶಿಕ್ಷಕರಿಗೆ ಮತ್ತು ಪಾಲಕರಿಗೆ ಅಗತ್ಯ. ಶಿಕ್ಷಕರ ಸಂಪರ್ಕವಿದ್ದಾಗ ವಿದ್ಯಾರ್ಥಿಗಳಲ್ಲಿ ಪರೀಕ್ಷಾ ಸಿದ್ಧತೆಯ ಎಚ್ಚರ ಚೆನ್ನಾಗಿ ಉಳಿದಿರುತ್ತದೆ. ಶಿಕ್ಷಕರೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಲು ಪಾಲಕರು ಉತ್ತೇಜಿಸಬೇಕು.

ಈ ರೀತಿಯ ಮನಃಸ್ಥಿತಿ ರೂಪುಗೊಳ್ಳಲು ಮುಖ್ಯ ಕಾರಣ, ಕಲಿಕೆಯನ್ನು ನಾವು ಪರೀಕ್ಷೆ ನಿರ್ದೇಶಿತವಾಗಿ ನಡೆಸುವುದು. ಹಾಗಾಗಿ, ಒಮ್ಮೆ ಪರೀಕ್ಷೆ ಮುಗಿದುಬಿಡಬೇಕಿತ್ತು ಎಂದು ಅನಿಸುವುದು ಸಹಜ. ಆದರೆ ನಿಜವಾಗಿ ಕಲಿಕೆಯ ಉದ್ದೇಶ ಜ್ಞಾನಾರ್ಜನೆಯೇ ಆಗಿರುತ್ತದೆ. ಇದರ ಅರಿವಿರುವ ವಿದ್ಯಾರ್ಥಿಗಳಿಗೆ ಈ ರೀತಿಯ ಯಾವ ಸಮಸ್ಯೆಯೂ ಆಗುವುದಿಲ್ಲ. ಯಾವ ವಿದ್ಯಾರ್ಥಿಗಳಿಗೆ ಪರೀಕ್ಷೆ ಮುಂದೆ ಹೋಗಿರುವುದು ಮನಸ್ಸಿಗೆ ಕಿರಿಕಿರಿ ಎನಿಸುತ್ತದೆಯೋ ಅಂತಹವರು ಕಲಿಕೆಯ ಕುರಿತ ತಮ್ಮ ಆಲೋಚನೆಯನ್ನು ಬದಲಾಯಿಸಿಕೊಳ್ಳಲು ಇದು ಸಕಾಲ.

ವಿದ್ಯಾರ್ಥಿಗಳು ಈಗ ನೇರವಾಗಿ ಪಾಲಕರ ಜವಾಬ್ದಾರಿಯಲ್ಲಿದ್ದರೆ. ಎರಡು ದಶಕಗಳ ಹಿಂದೆ, ಮಕ್ಕಳು ಪರೀಕ್ಷೆ ಮುಗಿಸಿ ಬಂದಾಗ ಪಾಲಕರು ಪ್ರಶ್ನೆಪತ್ರಿಕೆಗಳನ್ನು ಇರಿಸಿಕೊಂಡು ಪ್ರಶ್ನೆ ಕೇಳಿ ಉತ್ತರ ಪಡೆಯುವ ಪದ್ಧತಿಯನ್ನು ಇಟ್ಟುಕೊಂಡಿದ್ದರು. ನಂತರದ ದಿನಗಳಲ್ಲಿ ಪಾಲಕರಿಗೆ ಆರ್ಥಿಕ ಒತ್ತಡ ಹೆಚ್ಚಾಗಿ, ಮಕ್ಕಳ ಶಿಕ್ಷಣದ ಬಗ್ಗೆ ವಿಶೇಷವಾಗಿ ಚಿಂತಿಸಲು ಪುರಸೊತ್ತಿಲ್ಲದಂತಾಗಿ, ವಿದ್ಯಾರ್ಥಿಗಳ ಕಲಿಕಾ ಜವಾಬ್ದಾರಿ ಬಹುಮಟ್ಟಿಗೆ ಶಿಕ್ಷಕರ ಹೆಗಲಿಗೆ ವರ್ಗಾವಣೆಯಾಗುತ್ತಾ ಹೋಯಿತು. ಆದರೆ, ಇಂದಿನ ಪರಿಸ್ಥಿತಿ ಬಹಳ ಭಿನ್ನವಾಗಿದೆ. ಪಾಲಕರಿಗೂ ಮಕ್ಕಳೊಂದಿಗೆ ಯಥೇಚ್ಛವಾಗಿ ಸಮಯವನ್ನು ಕಳೆಯಲು ಅವಕಾಶವಿದೆ. ಆದರೆ ಮಕ್ಕಳ ಕಲಿಕಾ ಪ್ರಕ್ರಿಯೆಯೊಂದಿಗೆ ತೊಡಗಿಕೊಳ್ಳುವ ಪದ್ಧತಿ ರೂಢಿಯಾಗಿಲ್ಲ ಅಷ್ಟೆ. ಅದನ್ನು ರೂಢಿಸಿಕೊಳ್ಳುವುದಕ್ಕೂ ಇದು ಸಕಾಲ.

ಪಾಲಕರು ಮಕ್ಕಳನ್ನು ಹೇಗೆ ಅಭ್ಯಾಸದಲ್ಲಿ ತೊಡಗಿಸಬೇಕು ಎನ್ನುವುದು ಒಬ್ಬೊಬ್ಬ ವಿದ್ಯಾರ್ಥಿಯ ಗುಣ ಸ್ವಭಾವಕ್ಕನುಗುಣವಾಗಿ ಬೇರೆ ಬೇರೆಯಾಗಿರುತ್ತದೆ. ಉದಾಹರಣೆಗೆ, ಕೆಲವು ವಿದ್ಯಾರ್ಥಿಗಳಿಗೆ ಪಾಲಕರು ತಮ್ಮೆದುರೇ, ಇದ್ದರೆ ಓದಲು ಕಷ್ಟವೆನಿಸುತ್ತದೆ. ಇನ್ನು ಕೆಲವು ವಿದ್ಯಾರ್ಥಿಗಳು, ಪಾಲಕರು ಎದುರಿಗಿದ್ದರೆ ಮಾತ್ರ ಅಭ್ಯಾಸ ಮಾಡುತ್ತಾರೆ. ಇನ್ನೂ ಕೆಲವರು ವಿಶಿಷ್ಟ ರೀತಿಯವರಿರುತ್ತಾರೆ. ಪಾಲಕರು ಎದುರಿಗಿದ್ದರೆ ಓದುವುದು ಅವರಿಗೆ ಕಷ್ಟವಾಗುತ್ತದೆ. ಆದರೆ, ಪಾಲಕರು ಎದ್ದುಹೋದ ಕೂಡಲೇ ಅಧ್ಯಯನವನ್ನು ನಿಲ್ಲಿಸಿಯೇ ಬಿಡುತ್ತಾರೆ ಇಂತಹ ಸ್ವಭಾವದವರೊಂದಿಗೆ ಅಧ್ಯಯನದಲ್ಲಿ ಪಾಲಕರು ಜೊತೆಯಾಗಿ ಇರಬೇಕಾಗುತ್ತದೆ.

ಪಾಲಕರು ವಿದ್ಯಾರ್ಥಿಗಳೊಂದಿಗೆ ಕಲಿಕಾ ಸಹವರ್ತಿಗಳಾಗಿ ಇರುವುದು ಹೇಗೆ. ಅಕ್ಷರಜ್ಞಾನ ಇರುವ ಪಾಲಕರು, ಮಕ್ಕಳು ಯಾವ ಭಾಗವನ್ನು ಅಭ್ಯಾಸ ಮಾಡಿದೆವೆಂದು ಹೇಳುತ್ತಾರೆಯೋ ಅದರಿಂದ ಎರಡೋ ಮೂರೋ ಪ್ರಶ್ನೆಗಳನ್ನು ಕೇಳಿದರೆ ಸಾಕು; ಮಕ್ಕಳ ಅಭ್ಯಾಸ ಸಮರ್ಪಕವಾಗಿ ನಡೆದಿದೆಯೋ ಇಲ್ಲವೋ ಎಂದು ಗೊತ್ತಾಗುತ್ತದೆ. ಅಕ್ಷರಜ್ಞಾನ ಇಲ್ಲದ ಪಾಲಕರೋ ಚಿಂತಿಸಬೇಕಾಗಿಲ್ಲ. ಮಕ್ಕಳು ಅಭ್ಯಾಸ ಮಾಡಿದ ಭಾಗದಲ್ಲಿ ಬರುವ ಪ್ರಶ್ನೆಗಳೇನು, ಅದಕ್ಕೆ ಉತ್ತರವೇನು ಎಂದು ಮಕ್ಕಳ ಬಳಿಯೇ ಕೇಳಿದರೆ ಅವರೇ ಉತ್ತರಿಸುತ್ತಾರೆ.

ಆದರೆ, ಇಂಗ್ಲೀಷ್ ಮಾಧ್ಯಮವಾದಾಗ ಅಥವಾ ಕೆಲವೊಮ್ಮೆ ಕನ್ನಡ ಮಾಧ್ಯಮದಲ್ಲಿ ಕೂಡ ಪರೀಕ್ಷೆಗಾಗಿ ನಡೆಸುವ ಅಭ್ಯಾಸದಲ್ಲಿ ಒಂದು ಮುಖ್ಯ ಸಮಸ್ಯೆ ಬರುತ್ತದೆ. ವಿದ್ಯಾರ್ಥಿಗಳಿಗೆ ವಿಷಯಜ್ಞಾನ ಇರುತ್ತದೆ. ಆದರೆ ಓದಿದ ವಾಕ್ಯಗಳೇನಾದರೂ ನೆನಪಿನಿಂದ ಹೊರಟು ಹೋದರೆ ಸ್ವತಃ ತಾವೇ ವಾಕ್ಯ ರಚಿಸಿ ಬರೆಯಲು

ಸಾಧ್ಯವಾಗದೆ, ಪರೀಕ್ಷೆಯಲ್ಲಿ ಸಮಸ್ಯೆಯನ್ನು ಎದುರಿಸುವ ಸಾಧ್ಯತೆಗಳಿರುತ್ತವೆ. ಶಾಲಾ ಪರಿಸರ, ಮನೆಯ ಪರಿಸರ ಎಲ್ಲವೂ ಕನ್ನಡ ಮಾಧ್ಯಮದಲ್ಲಿದ್ದು, ಪರೀಕ್ಷೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಉತ್ತರಿಸಬೇಕಾದ ವಿದ್ಯಾರ್ಥಿಗಳಲ್ಲಿ ಕೆಲವರಲ್ಲಿ ಈ ಸಮಸ್ಯೆ ಕಂಡುಬರುತ್ತದೆ. ಇದು ನಿವಾರಣೆಯಗಬೇಕಾದರೆ ವಿದ್ಯಾರ್ಥಿಗಳ ಪ್ರತಿದಿನ ಮಾಡಿದ ಅಭ್ಯಾಸದ ಕೆಲವು ಪರಿಕಲ್ಪನೆಗಳನ್ನು ಒಂದು ಅಥವಾ ಎರಡು ಪ್ಯಾರಾದಷ್ಟು ಸ್ವಂತ ವಾಕ್ಯದಲ್ಲಿ ಬರೆಯಬೇಕು. ಆಗ ವಿಷಯವನ್ನು ವಾಕ್ಯಗಳಾಗಿ ಬರೆದು ಹೇಳುವ ಸಾಮರ್ಥ್ಯ ಬರುತ್ತದೆ. ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದುಕೊಳ್ಳಲು ಈ ಕೌಶಲವು ಬಹಳ ಸಹಾಯ ಮಾಡುತ್ತದೆ.

ಒಟ್ಟಾರೆಯಾಗಿ, ಮಕ್ಕಳಲ್ಲಿ ಇರುವ ಅಭ್ಯಾಸದ ಮನಃಸ್ಥಿತಿ ಹೊರಟುಹೋಗದ ಹಾಗೆ ಪಾಲಕರು ನೋಡಿಕೊಳ್ಳಬೇಕು. ಆದರೆ ಮಕ್ಕಳನ್ನು ಬೈಯ್ಯಬಾರದು. ಬೈದರೆ ನಾನು ಪರೀಕ್ಷೆಯನ್ನು ನಡೆಸಬಾರದೆಂದು ಹೇಳಿದ್ದೇನಾ ಎನ್ನುವ ಹದಿಹರೆಯದ ಬಂಡಾಯದ ಮನಃಸ್ಥಿತಿಯು ಮಕ್ಕಳು ಸಿಟ್ಟಿಗೇಳುವಂತಹ ಅವಕಾಶ ನೀಡುತ್ತದೆ. ಓದಿನ ನಡುವೆ ನಿರಾಳತೆಯನ್ನೂ ಒದಗಿಸಬೇಕು. ಪಾಲಕರು ಮನರಂಜನಾ ಕಾರ್ಯಕ್ರಮಗಳನ್ನು ನೋಡಿಕೊಂಡು, ಮಕ್ಕಳಿಗೆ ಓದಲು ಹೇಳಿದರೆ ಉಪಯೋಗವಾಗಲಾರದು. ಮನರಂಜನೆ ಮಕ್ಕಳಿಗೂ ಇರಲಿ. ಆದರೆ ಮಕ್ಕಳು ಮನರಂಜನೆಯಲ್ಲೇ ಮುಳುಗಿಹೋಗದೆ ಕಲಿಕಾ ಎಚ್ಚರವನ್ನು ಉಳಿಸಿಕೊಳ್ಳಬೇಕು.

ಕೆಲವೊಮ್ಮೆ ಕೆಲವು ವಿಚಾರಗಳು ಮಕ್ಕಳಿಗೆ ಅರ್ಥವಾಗದಿರಲು ಸಾಧ್ಯತೆ ಇದೆ. ಆಗ ಪಾಲಕರು ಸಂಬಂಧಿಸಿದ ವಿಷಯ ಶಿಕ್ಷಕರಿಗೆ ಫೋನ್ ಮಾಡಿ, ಮಕ್ಕಳು ಶಿಕ್ಷಕರೊಂದಿಗೆ ಪಾಲಕರೂ ನಿರಂತರ ಸಂಪರ್ಕದಲ್ಲಿರಬೇಕು. ತನ್ನ ಯಾವ ವಿದ್ಯಾರ್ಥಿ ಹೇಗೆ ಎಂದು ಗೊತ್ತಿದ್ದು, ಯಾವ ರೀತಿ ಅಭ್ಯಾಸ ಮಾಡಿಸಬೇಕು ಎಂದು ಸಂಬಂಧಿಸಿದ ಶಿಕ್ಷಕರಿಗೆ ಗೊತ್ತಿರುವಷ್ಟು ಚೆನ್ನಾಗಿ ಬೇರೆ ಯಾರಿಗೂ ಗೊತ್ತಿರುವುದಿಲ್ಲ.

ಇದರ ಜೊತೆಯಲ್ಲೇ ವಿದ್ಯಾರ್ಥಿಗಳು ಕೂಡ ಕೆಲವು ಆತಂಕಗಳನ್ನು ಅನುಭವಿಸುತ್ತಾರೆ. ಆಧುನಿಕ ಮಾಧ್ಯಮಗಳ ಪರಿಣಾಮ ವಿದ್ಯಾರ್ಥಿಗಳ ಮೇಲೂ ಆಗುತ್ತದೆ. 'ಕೊರೊನಾ ವೈರಸ್ ವಯಸ್ಸಾದವರನ್ನೇ ಹೆಚ್ಚು ಬಾಧಿಸುತ್ತದೆ' ಎಂದು ಮಾಧ್ಯಮಗಳಲ್ಲಿ ಪದೇ ಪದೇ ಬಂದಾಗ, ಒಬ್ಬ ಹದಿಹರೆಯದ ಹುಡುಗನಿಗೆ ತನ್ನ ಮುದ್ದಿನ ಅಜ್ಜಿಗೆ ಏನಾಗುತ್ತದೆಯೋ ಎಂಬ ಚಿಂತೆಯೇ ಶುರುವಾಗಿಬಿಡುತ್ತದೆ. ನಮ್ಮಲ್ಲಿ ಮಾಧ್ಯಮಗಳು ತಾವು ಕೊಡುವ ಸುದ್ದಿಗಳು ಭವಿಷ್ಯದ ತಲೆಮಾರಿನ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಬಹುದು ಎಂಬ ಎಚ್ಚರದಿಂದ ಹೇಳುವ ವಿಧಾನವನ್ನು ರೂಪಿಸಿಕೊಂಡಿರುವುದು ತುಂಬಾ ಕಡಿಮೆ. ಆಗ ಶಿಕ್ಷಕರು ಮತ್ತು ಪಾಲಕರೇ ಈ ಸಮಸ್ಯೆಯನ್ನು ನಿರ್ವಹಿಸಬೇಕಾಗುತ್ತದೆ. ಈ ರೀತಿಯ ಪರಿಣಾಮಕ್ಕೆ ಒಳಗಾದ ಮಕ್ಕಳು, ಒಂದೋ ಏನನ್ನೂ ಮಾತನಾಡದೆ ಮೌನಿಗಳಾಗಿ ಚಿಂತೆಗೊಳಗಾದವರಂತೆ ಇರುತ್ತಾರೆ ಅಥವಾ ತಮ್ಮನ್ನು ಕಾಡುವ ವಿಷಯವನ್ನು ಮತ್ತೆ ಮತ್ತೆ ಕೇಳುತ್ತಿರುತ್ತಾರೆ. ಆಗ ಮಕ್ಕಳಲ್ಲಿ ಧೈರ್ಯ ತುಂಬಿ ಅಧ್ಯಯನದ ಕಡೆಗೆ ಸೆಳೆದು ತರಬೇಕಾಗುತ್ತದೆ.

ಮಕ್ಕಳನ್ನು ನಿರ್ವಹಿಸುವ ಪಾಲಕರು ಮತ್ತು ಶಿಕ್ಷಕರು ಕೇವಲ ಅಭ್ಯಾಸವನ್ನಷ್ಟೇ ನಿರ್ವಹಿಸುವುದಲ್ಲ. ಅವರ ಮನಃಸ್ಥಿತಿಯು ಹಿತಕಾರಿಯಾಗಿ ಉಳಿಯುವಂತೆಯೂ ನೋಡಿಕೊಳ್ಳಬೇಕು. ಪಾಠದ ವಿಚಾರದ ಆಚೆಗೂ ಮಕ್ಕಳ ಆಸಕ್ತಿಯ ವಿಷಯಗಳ ಬಗ್ಗೆ ಮಾತನಾಡುತ್ತಿರಬೇಕು. ಮಕ್ಕಳೊಂದಿಗಿನ ಈ ಅವಧಿಯನ್ನು ಕೌಟುಂಬಿಕ ಸಂಬಂಧದ ವೃದ್ಧಿಗೂ ಸಹಾಯಕವಾಗುವಂತೆ ರೂಪಿಸಿಕೊಳ್ಳಬೇಕು.

ಲೇಖಕರು:– ಅರವಿಂದ ಚೊಕ್ಕಾಡಿ

ಆಧಾರ:ಪ್ರಜಾವಾಣಿ, ದಿನಾಂಕ:16.04.2020

## 4. ಸಮಷ್ಟಿ ಹಿತ ಎಂಬ ಭ್ರಮೆ

ದೇಶದ ಸದ್ಯದ ಪರಿಸ್ಥಿತಿಯಲ್ಲಿ 'ಒಳಗೊಳ್ಳುವಿಕೆಯ ಅಭಿವೃದ್ಧಿ'ಯ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿ ಎಂದು ಭಾವಿಸುವುದು ಸಾಧ್ಯವೂ ಅಲ್ಲ, ಸೂಕ್ತವೂ ಅಲ್ಲ. ಒಳಗೊಳ್ಳುವಿಕೆಯ ಅಭಿವೃದ್ಧಿ ಎಂದರೆ, ಆರ್ಥಿಕ ಪ್ರಗತಿಯ ಲಾಭಗಳಿಂದ ಈ ತನಕ ವಂಚಿತವಾದ ಸಾಮಾಜಿಕ ವರ್ಗಗಳಿಗೆ ಈ ಲಾಭಗಳನ್ನು ಆದ್ಯತೆಯ ಮೇರೆಗೆ ತಲುಪಿಸುವ ಪ್ರಕ್ರಿಯೆ ಎಂದು ಅರ್ಥೈಸಬೇಕಾಗಿದೆ.

ಪೆರು ದೇಶದಲ್ಲಿ 2011ರ ಜುಲೈನಲ್ಲಿ ಮೂರು ದಿನಗಳ ದೊಡ್ಡ ಕಾರ್ಯಗಾರವೊಂದು ನಡೆಯಿತು. ಬಜೆಟ್ ತಜ್ಞ ವಾರೆನ್ ಕ್ರಾಪ್ಟಿಕ್, ಆರ್ಥಿಕ ಬೆಳವಣಿಗೆ ಪ್ರಕ್ರಿಯೆಯ ಲಾಭಗಳಿಂದ ಈ ತನಕ ವಂಚಿತರಾದವರಿಗೆ ಈ ಲಾಭಗಳನ್ನು ತಲುಪಿಸುವ ಅಗತ್ಯವನ್ನು ಅಲ್ಲಿ ಮನೋಜ್ಞವಾಗಿ ವಿವರಿಸಿದ್ದರು. ಒಳಗೊಳ್ಳುವಿಕೆ ಹೂಡಿಕೆ ಮತ್ತು ಒಳಗೊಳ್ಳುವಿಕೆಯ ಅಭಿವೃದ್ಧಿ ಸಾಧನೆಯು ವಾಸ್ತವದಲ್ಲಿ ಅಸಾಧ್ಯ ಎನ್ನುವ ಅವರ ವಾದದಲ್ಲಿ ಸತ್ಯಾಂಶವಿದೆ. ದುರ್ಬಲ ವರ್ಗಗಳಿಗೆ ಸೇರಿದವರು ಇಂಥ ನೀತಿಗಳಿಗಾಗಿ ಈ ದೇಶದಲ್ಲಿ ಈಗ ಕಾಯುವಂತಾಗಿದ್ದು ವಿಪರ್ಯಾಸ.

ಭಾರತದ ಬಡತನದ ನಿಕಟ ಪರಿಚಯವುಳ್ಳ, ನೊಬೆಲ್ ಪ್ರಶಸ್ತಿ ಪುರಸ್ಕೃತ ಆರ್ಥಿಕ ತಜ್ಞರಾದ ಅಮಾರ್ತ್ಯಸೇನ್, ಅಭಿಜಿತ್ ಬ್ಯಾನರ್ಜಿ ಹಾಗೂ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ರಘುರಾಂ ರಾಜನ್, ಕೊರೊನಾ ಹಾವಳಿಯಿಂದ ನಲುಗುತ್ತಿರುವ ಬಡವರಿಗೆ ಹೆಚ್ಚು ನೆರವಾಗುವ ಅಗತ್ಯವನ್ನು ಇತ್ತೀಚೆಗೆ ಜಂಟಿಯಾಗಿ ಪ್ರತಿಪಾದಿಸಿದ್ದಾರೆ. ಒಳಗೊಳ್ಳುವಿಕೆ ತತ್ವ ಆಧಾರಿತ 'ಸಾರ್ವಜನಿಕ ವೆಚ್ಚದ ನೀತಿ'ಯನ್ನು ರೂಪಿಸಬೇಕೆಂಬ ಅವರ ಕರೆಗೆ ಮಹತ್ವವಿದೆ.

ವ್ಯಾಪಕವಾಗುತ್ತಿರುವ ಕೊರೊನಾ ಬಾಧೆಯಿಂದ 2020ರ ಸಾಲಿನಲ್ಲಿ ಆರ್ಥಿಕ ಬೆಳವಣಿಗೆ ದರ ಶೇ.2.5ರಷ್ಟಾಗಲಿದೆ ಎಂದು ಮೂಡಿಸ್ ಇನ್ವೆಸ್ಟರ್ ಸರ್ವೀಸ್ 2020–21ರ 'ಜಾಗತಿಕ ಮುನ್ನೋಟ'ದ ವರದಿಯಲ್ಲಿ ತಿಳಿಸಿದೆ. ಅದು ಶೇ 2ರಷ್ಟಾಗಬಹುದೆಂದು ಇಕ್ರಾ ರೇಟಿಂಗ್ ಏಜೆನ್ಸಿ ಅಂದಾಜಿಸಿದೆ. ನಾಲ್ಕು ದಿನಗಳ ಹಿಂದೆ ಮುಂಬೈನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, ಬೆಳವಣಿಗೆ ದರ ಶೇ. 1.9ಕ್ಕೆ ಕುಸಿಯುವ ಸಾಧ್ಯತೆಯನ್ನು ಒಪ್ಪಿಕೊಂಡರು. ಬ್ಯಾಂಕಿನ ಹಳೆಯ ಸಂಪ್ರದಾಯದಂತೆ ಮುಂಗಾರಿನ ಮೇಲೆ ವಿಶ್ವಾಸ ಇಟ್ಟು ದಾಸ್, 2021–22ರಲ್ಲಿ ಒಮ್ಮೆಲೇ ಇದು 7.4ಕ್ಕೆ ಜಿಗಿಯುವ ಆಶಾಭಾವ ವ್ಯಕ್ತಪಡಿಸಿದರು. ನೈಜತೆಯ ತಳಹದಿಯೇ ಇಲ್ಲದ ಅವರ ಈ ಹೇಳಿಕೆಯನ್ನು ಗಮನಿಸಿದರೆ, ಒಳಗೊಳ್ಳುವಿಕೆಯ ಅಭಿವೃದ್ಧಿಯು ಹಿಂದಿನಂತೆ ಮುಂದೆಯೂ ಕೇವಲ ಭ್ರಮೆಯಾಗಿಯೇ ಉಳಿಯಲಿದೆಯೆಂಬ ಭಾವನೆ ಇನ್ನಷ್ಟು ಪ್ರಬಲವಾಗುತ್ತದೆ.

ಕೊರೊನಾ ಸೋಂಕು 'ದೇಶಾವಾಸಿ'ಗಳನ್ನು ಪೀಡಿಸಲು ಪ್ರಾರಂಭಿಸುವುದಕ್ಕೆ ಮೊದಲೇ ನಮ್ಮ ಆರ್ಥಿಕತೆಯು ಕೇಂದ್ರ ಸರ್ಕಾರದ ನೀತಿಗಳಿಂದಾಗಿ ಬಳಲುತ್ತಿದ್ದ ಸತ್ಯವನ್ನು ಅಡಗಿಸುವುದರಲ್ಲಿ ಯಾವ ಅರ್ಥವಿದೆ. ನೋಟು ರದ್ದತಿ ಹುಟ್ಟಿಸಿದ ನಿರುದ್ಯೋಗ ಸಮಸ್ಯೆಯ ಭೀಕರ ಸ್ವರೂಪವನ್ನು 2019ರ ಏಪ್ರಿಲ್‌ನಲ್ಲಿ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧ್ಯಯನ ವರದಿಯು ಎತ್ತಿ ಹಿಡಿದಿತ್ತು. ನೋಟು ರದ್ದತಿಯ ನಂತರ 50 ಲಕ್ಷಕ್ಕೂ ಹೆಚ್ಚು ಜನ ಉದ್ಯೋಗ ಕಳೆದುಕೊಂಡರು.

2017–18ರಲ್ಲಿ ಶೇ. 6.1ಕ್ಕೆ ಏರಿದ ನಿರುದ್ಯೋಗದ ಪ್ರಮಾಣ, ಹಿಂದಿನ 45 ವರ್ಷಗಳಲ್ಲಿಯೇ ಅತ್ಯಂತ ಹೆಚ್ಚಿನದು ಎಂದು ರಾಷ್ಟ್ರೀಯ ಸಾಂಖ್ಯಿಕ ಆಯೋಗ ವರದಿ ಮಾಡಿತು. ಸಮೀಪಿಸುತ್ತಿದ್ದ 2019ರ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಮೊದಲು ಈ ಮಾಹಿತಿಯನ್ನೇ ಬಚ್ಚಿಡುವ ಪ್ರಯತ್ನ ಮಾಡಿತ್ತಾದರೂ ನಂತರ ಒಪ್ಪಿಕೊಳ್ಳಬೇಕಾಯಿತು. ಈಗ ಕೊರೊನಾ ಹಾವಳಿಯಿಂದ ನಿರುದ್ಯೋಗ ಸಮಸ್ಯೆ ಮತ್ತಷ್ಟು ತೀವ್ರವಾಗುತ್ತಿದೆ. ಒಳಗೊಳ್ಳುವಿಕೆ ಅಭಿವೃದ್ಧಿಯ ಸಾಧ್ಯತೆ ಇನ್ನಷ್ಟು ಕುಂಠಿತಗೊಂಡಿದೆ. ಇದರ ಪ್ರತಿಕೂಲ ಪರಿಣಾಮವು ದೀರ್ಘಕಾಲಿಕವಾಗುವ ಸಂಭವ ಇದೆ.

ಯುಪಿಎ ನೇತೃತ್ವದ ಸರ್ಕಾರದಲ್ಲಿ ಪ್ರಧಾನ ಆರ್ಥಿಕ ಸಲಹೆಗಾರರಾಗಿದ್ದ ಕೌಶಿಕ ಬಸು ಅವರ 'ಭಾರತ ಅಂಕಿ–ಸಂಖ್ಯೆಗಳನ್ನು ಅಡಗಿಸಬಹುದೇ ಹೊರತು ಸತ್ಯವನ್ನಲ್ಲ' ಎನ್ನುವ ಮಾರ್ಮಿಕ ಲೇಖನ 'ದಿ ನ್ಯೂಯಾರ್ಕ್ ಟೈಮ್ಸ್'ನಲ್ಲಿ ಫೆಬ್ರುವರಿಯಲ್ಲಿ ಪ್ರಕಟವಾಗಿದೆ. ಜಿಎಸ್‌ಟಿಯಿಂದ ಸಣ್ಣ ಕೈಗಾರಿಕೆಗಳಿಗಾದ ಅಘಾತವನ್ನು ಈ ಲೇಖನದಲ್ಲಿ ಅವರು ವಿವರಿಸಿದ್ದಾರೆ. ಜಿಎಸ್‌ಟಿಯನ್ನು ಪ್ರಾರಂಭಿಕ ಹಂತದಲ್ಲಿ ಸ್ವಾಗತಿಸಿದ ಅವರು, ನಂತರ

ಆದರಿಂದ ಎದುರಾದ ತೊಡಕುಗಳಿಂದ ನಿರಾಶೆಗೊಂಡು ಹೀಗೆ ಹೇಳಿದ್ದಾರೆ. ಮೋದಿ ನೇತೃತ್ವದ ಸರ್ಕಾರವು ದೊಡ್ಡ ಕಂಪನಿಗಳ ಪರವಾದ ನೀತಿಯನ್ನು ಅನುಸರಿಸಿದೆ ಎಂದು ಬಸು ಬರೆದಿದ್ದರೆ, ಸಣ್ಣ ಕೈಗಾರಿಕೆಗಳ ಮಾಲೀಕರು, ಕೃಷಿಕರು ಮತ್ತು ಕಾರ್ಮಿಕರು ಬಳಲುವಂತಾಗಿದೆ ಎಂದಿದ್ದಾರೆ. ಕೊರೊನಾ ಈಗ ಈ ವರ್ಗಗಳನ್ನೇ ತೀವ್ರವಾಗಿ ಬಾಧಿಸುತ್ತಿದೆ.

ಭಾರತ, ನೈಜೀರಿಯಾ ಮತ್ತು ಬ್ರೆಜಿಲ್‌ನಲ್ಲಿ ಅನೌಪಚಾರಿಕ ಆರ್ಥಿಕ ವಲಯಗಳಲ್ಲಿ ದುಡಿಯುವ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿದ್ದು, ಕೊರೊನಾ ವಿರುದ್ಧದ ಸಮರದಲ್ಲಿ ಅವರು ಗೆಲ್ಲುವುದು ಅಷ್ಟು ಸುಲಭವಲ್ಲ. ಭಾರತದ ಅಸಂಘಟಿತ ವಲಯದಲ್ಲಿ ಉದ್ಯೋಗ ಭದ್ರತೆ ಇಲ್ಲದೆ ದುಡಿಯುವ ಸುಮಾರು 40 ಕೋಟಿ ಜನ ತೀವ್ರ ಸ್ವರೂಪದ ಬಡತನಕ್ಕೆ ಸಿಲುಕಲಿದ್ದಾರೆ ಎಂದು ವಿಶ್ವಸಂಸ್ಥೆ ವರದಿ ಮಾಡಿದೆ.

ಒಳಗೊಳ್ಳುವಿಕೆ ಅಭಿವೃದ್ಧಿಯ ಉದ್ದೇಶದಿಂದ ಯುಪಿಎ ಅವಧಿಯಲ್ಲಿ ಪ್ರಾರಂಭವಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯ ಅನುಷ್ಠಾನ ಹಂತದ ಇತಿಮಿತಿಗಳು ಯೋಜನೆಯ ಉದ್ದೇಶವನ್ನೇ ನಿಷ್ಕ್ರಿಯಗೊಳಿಸುವಷ್ಟು ತೀವ್ರವಾಗಿಲ್ಲ. ನರೇಗಾದಡಿ ಬಂದ ಅನುದಾನವು ಭೂ ಅಭಿವೃದ್ಧಿ, ಅರಣ್ಯೀಕರಣ, ರಸ್ತೆ ನಿರ್ಮಾಣ ಮುಂತಾದ ಉದ್ದೇಶಗಳಿಗೆ ಬಳಕೆಯಾಗಿದ್ದರಿಂದ ಮಹಾರಾಷ್ಟ್ರದಲ್ಲಿ ಅದು (2010–13) ಅನೇಕ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೇರವಾಗಿ, ಒಳಗೊಳ್ಳುವಿಕೆಯ ಅಭಿವೃದ್ಧಿಗೆ ದಾರಿ ಮಾಡಿತು. ಅರುಣ್ ಜೇಟ್ಲೆ ಅವರು ಕೇಂದ್ರ ಹಣಕಾಸು ಸಚಿವರಾಗಿದ್ದಾಗ ತಮ್ಮ ಬಜೆಟ್‌ನಲ್ಲಿ ನರೇಗಾಕ್ಕೆ ಹೆಚ್ಚು ಅನುದಾನ ನೀಡಿದ್ದರು. ಕೃಷಿಗೆ ಈ ಯೋಜನೆ ಹೆಚ್ಚು ಪೂರಕವಾಗಬೇಕೆಂದು ಆಶಿಸಿದ್ದರು. ಈಗಿನ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2020–21ನೇ ಬಜೆಟ್‌ನಲ್ಲಿ ನರೇಗಾಕ್ಕೆ ಕಡಿಮೆ ಅನುದಾನ ನೀಡಿದ್ದು, ಒಳಗೊಳ್ಳುವಿಕೆ ಅಭಿವೃದ್ಧಿಗೆ ಅದು ಪೂರಕವಾಗಿ ಇರಲಿಲ್ಲ. ಕೊರೊನಾ ಹಾವಳಿ ಜಾಸ್ತಿಯಾದಂತೆ ಸಚಿವೆಯು ಈ ಯೋಜನೆಯಡಿ ನೀಡುವ ಕೂಲಿಯ ಮೊತ್ತವನ್ನು ಹೆಚ್ಚಿಸಿದ್ದು ಸ್ವಾಗತಾರ್ಹ. ಮೂಲತಃ ಬಡತನ ನಿವಾರಣಾ ಕಾರ್ಯಕ್ರಮವಾದ ನರೇಗಾವು ಕೊರೊನಾ ಸೃಷ್ಟಿಸಿದ ಸಂಕಷ್ಟಗಳಿಂದ ತತ್ತರಿಸಿರುವ ಕೃಷಿರಂಗದ ಪುನಶ್ಚೇತನಕ್ಕೆ ಇನ್ನಷ್ಟು ಪೂರಕವಾಗುವ ರೀತಿಯಲ್ಲಿ ಪರಿವರ್ತನೆಗೊಳ್ಳಬೇಕು.

ಹಸಿವುಮುಕ್ತ ಭಾರತ ಎಂದು ಸೃಷ್ಟಿಯಾಗಲಿದೆ ಎನ್ನುವ ಪ್ರಶ್ನೆಗೆ ಇನ್ನೂ ಉತ್ತರ ಕಾಣುತ್ತಿಲ್ಲ. 2019ರ ಅಕ್ಟೋಬರ್ ತಿಂಗಳಿನಲ್ಲಿ ಬಿಡುಗಡೆಯಾದ ಜಾಗತಿಕ ಹಸಿವು ಸೂಚ್ಯಂಕದ ವರದಿಯಿಂದಲೂ ಈ ದಾರುಣ ಸತ್ಯ ಬಯಲಾಗಿತ್ತು. ಈ ಸೂಚ್ಯಂಕದ ಪ್ರಕಾರ ಭಾರತವು 102ನೇ ಸ್ಥಾನಕ್ಕೆ ಕುಸಿದಿದೆ. ಚೀನಾ, ಶ್ರೀಲಂಕಾ, ನೇಪಾಳ, ಬಾಂಗ್ಲಾದೇಶ ಮತ್ತು ಪಾಕಿಸ್ತಾನವು ಭಾರತಕ್ಕಿಂತ ಮೇಲಿನ ಸ್ಥಾನಗಳಲ್ಲಿವೆ. ದಕ್ಷಿಣ ಏಷ್ಯಾ ಮತ್ತು ಬ್ರಿಕ್ಸ್ ದೇಶಗಳಲ್ಲಿ ಅತ್ಯಂತ ಹೆಚ್ಚು ಜನ ಹಸಿವಿನಿಂದ ಬಳಲುತ್ತಿರುವ ದೇಶ ಭಾರತ ಎನ್ನುವುದು ಜಗತ್ತಿಗೇ ತಿಳಿದ ಸಂಗತಿ.

ಅಸಂಘಟಿತ ವಲಯದಲ್ಲಿನ ಅನೇಕ ಕಾರ್ಮಿಕರು ಕೊರೊನಾ ಹಾವಳಿಯಿಂದ ತಮ್ಮ ಬದುಕನ್ನೇ ಕಳೆದುಕೊಂಡು ತತ್ತರಿಸಿಹೋಗಿದ್ದಾರೆ. ಕೂಳು ಸಿಗದೇ ಇರುವವರ ಗೋಳು ನೇರವಾಗಿ ನಮಗೆ ಕೇಳುತ್ತಿದೆ. ಒಳಗೊಳ್ಳುವಿಕೆಯ ಅಭಿವೃದ್ಧಿಯು ಭ್ರಮೆಯಾಗಿಯೇ ಉಳಿಯಲಿದೆ ಎಂಬ ಭಾವನೆಗೆ ಇನ್ನಷ್ಟು ಬಲ ಬರುತ್ತಿದೆ.

ಲೇಖಕರು:– ಜಿ.ವಿ.ಜೋಶಿ

ಆಧಾರ:ಪ್ರಜಾವಾಣಿ, ದಿನಾಂಕ:21.04.2020

## 5. ಹರಿಯಲಿ ಚಿತ್ತ ಸರ್ಕಾರಿ ಶಾಲೆಯತ್ತ

ಕೊರೊನಾ ಸೋಂಕಿನ ಕಾಟದಿಂದ ಜನ ಸಂಕಷ್ಟಕ್ಕೆ ಈಡಾಗಿದ್ದರೆ. ಇದರ ಪರಿಣಾಮ ಕನ್ನಡ ಶಾಲೆಗಳ ಮೇಲೂ ಆಗಿದೆ. ಮೊದಲೇ ಸೊರಗಿ ಹೋಗಿದ್ದ ಸರ್ಕಾರಿ ಶಾಲೆಗಳು ಈಗ ಇನ್ನಷ್ಟು ಸಂಕಟಕ್ಕೆ ಈಡಾಗಿವೆ. ಈಗ ನಾವು ಮೈಮರೆತರೆ ಈ ಶಾಲೆಗಳು ಸಂಪೂರ್ಣ ಮಾಯವಾಗುತ್ತವೆ. ಕನ್ನಡ ಶಾಲೆಗಳು ಮಾಯವಾದರೆ ಕನ್ನಡವೂ ಮಾಯವಾಗಲು ಬಹಳ ದಿನ ಬೇಕಾಗುವುದಿಲ್ಲ.

ಬಹಳಷ್ಟು ಶ್ರೀಮಂತರು ಕೊರೊನಾ ಕಾಲದಲ್ಲಿ ಬಡವರಿಗೆ ಸಹಾಯ ಮಾಡುತ್ತಿದ್ದರೆ. ಜನಪ್ರತಿನಿಧಿಗಳು ಪೈಪೋಟಿ ಮೇಲೆ ನೆರವಾಗುತ್ತಿದ್ದಾರೆ. ಈ ಪೈಪೋಟಿ ಸರ್ಕಾರಿ ಶಾಲೆಗಳನ್ನು ಉಳಿಸುವಲ್ಲಿಯೂ ಬೆಳೆಸುವಲ್ಲಿಯೂ ಕಾಣುವಂತೆ ಆಗಬೇಕು. ಸರ್ಕಾರಿ ಶಾಲೆಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವತ್ತಾ ದಾನಿಗಳ ದೃಷ್ಟಿ ಹರಿಯಬೇಕು.

ರಾಜ್ಯ ಸರ್ಕಾರಕ್ಕೆ ಈಗ ಶಿಕ್ಷಕರಿಗೆ ಸಂಬಳ ನೀಡುವುದೇ ಕಷ್ಟವಾಗಿರುವಾಗ, ಇತರ ಸೌಲಭ್ಯ ಒದಗಿಸುವುದು ಕಷ್ಟದ ಮಾತು. ಸರ್ಕಾರಿ ಶಾಲೆಗಳನ್ನು ಉಳಿಸಲು ರಾಜ್ಯ ಸರ್ಕಾರ ಬಹಳಷ್ಟು ಕ್ರಮಗಳನ್ನು ಕೈಗೊಂಡಿದೆ. ಆದರೆ, ಸರ್ಕಾರದ ಕ್ರಮ ರಾಕ್ಷಸನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎನ್ನುವಂತೆ ಆಗಿದೆ. ಬಡವರ ಮಕ್ಕಳಿಗೆ ನೆರವಾಗಲೆಂದು ಜಾರಿಗೆ ತಂದ ಆರ್‌ಟಿಇ ಕೂಡ ನಿರೀಕ್ಷಿತ ಮಟ್ಟದಲ್ಲಿ ಉಪಯೋಗ ಆಗಿಲ್ಲ. 'ಸರ್ಕಾರಿ ಶಾಲೆಗಳನ್ನು ಉಳಿಸಲು ಕೈಜೋಡಿಸಿ' ಎಂದು ರಾಜ್ಯ ಸರ್ಕಾರ ಮನವಿ ಮಾಡಿಕೊಂಡರೆ ಸಾಲದು, ದಾನಿಗಳು ನೆರವಿಗೆ ಬರುವಂತೆ ಅಗತ್ಯ ಶಾಸನಬದ್ಧ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ.

ಈಗೊಂದು ಸಣ್ಣ ಲೆಕ್ಕಾಚಾರ ಮಾಡೋಣ. ನಮ್ಮ ವಿಧಾನಸಭೆಯಲ್ಲಿ 224 ಮಂದಿ ಚುನಾಯಿತ ಸದಸ್ಯರಿದ್ದಾರೆ. ಒಬ್ಬ ನಾಮನಿರ್ದೇಶಿತ ಸದಸ್ಯ ಇದ್ದರೆ. ಪ್ರತಿಯೊಬ್ಬ ಶಾಸಕರೂ ತಲಾ 3 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿಪಡಿಸಿದರೆ, 5 ವರ್ಷದ ಅವಧಿಯಲ್ಲಿ 675 ಶಾಲೆಗಳು ಅಭಿವೃದ್ಧಿಯಾಗುತ್ತವೆ. ಜೊತೆಗೆ ವಿಧಾನ ಪರಿಷತ್ ಸದಸ್ಯರೂ ಕೈಜೋಡಿಸಿದರೆ ಇನ್ನೂ 225 ಶಾಲೆಗಳಿಗೆ ಅಭಿವೃದ್ಧಿ ಭಾಗ್ಯ ಸಿಗುತ್ತದೆ. ಇದನ್ನು ಬೇಕಾದರೆ ಶಾಸನಬದ್ಧವಾಗಿಯೇ ಮಾಡಬಹುದು. ನಮ್ಮ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ತಮ್ಮ ಕ್ಷೇತ್ರದ ತಲಾ 10 ಶಾಲೆಗಳನ್ನು ದತ್ತು ಪಡೆದುಕೊಂಡರೆ ಇನ್ನೂ 320 ಶಾಲೆಗಳಿಗೆ ಹೊಸ ರೂಪ ಬರುತ್ತದೆ. ಅಂದರೆ ಐದು ವರ್ಷಗಳಲ್ಲಿ ಸರ್ಕಾರದ ಅನುದಾನ ಇಲ್ಲದೆ 1,220 ಶಾಲೆಗಳನ್ನು ಅಭಿವೃದ್ಧಿಪಡಿಸಬಹುದು. ಇದಕ್ಕೆ ಶಾಸಕರು, ಸಂಸದರು ಸ್ವಯಂ ಇಚ್ಛೆಯಿಂದ ಮುಂದೆ ಬರಬೇಕು. ಸ್ವಂತ ಹಣವನ್ನು ವೆಚ್ಚ ಮಾಡಬೇಕು.

ರಾಜ್ಯದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳೂ ತಮ್ಮ ವ್ಯಾಪ್ತಿಯಲ್ಲಿ ತಲಾ ಇಂತಿಷ್ಟು ಶಾಲೆಗಳನ್ನು ದತ್ತು ಪಡೆಯಬೇಕು. ಖಾಸಗಿ ವಿಶ್ವವಿದ್ಯಾಲಯಗಳೂ ಡೀಮ್ಡ್ ವಿಶ್ವವಿದ್ಯಾಲಯಗಳೂ ಈ ಕಾರ್ಯಕ್ಕೆ ಮುಂದಾಗಬೇಕು. ಹೀಗೆ ಮಾಡಿದಾಗ ಮಾತ್ರ ಅವರು ಈ ನೆಲ, ಜಲ, ಸಮಾಜದ ಋಣವನ್ನು ತೀರಿಸಲು ಸಾಧ್ಯ.

ರಾಜ್ಯ ಸರ್ಕಾರ ಇನ್ನು ಮುಂದೆ ಯಾವುದೇ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜಿಗೆ ಅನುಮತಿ ನೀಡುವಾಗ ಸರ್ಕಾರಿ ಶಾಲೆಗಳನ್ನು ದತ್ತು ಪಡೆಯುವುದನ್ನು ಕಡ್ಡಾಯ ಮಾಡಬೇಕು. ಈಗಿರುವ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳೂ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಅನುವಾಗುವಂತೆ ಸೂಕ್ತ ನಿಯಮಾವಳಿ ರೂಪಿಸಬೇಕು.

ಶ್ರೀಮಂತರು ಮತ್ತು ಬಡವರಿಗೆ ಏಕರೂಪದ ಶಿಕ್ಷಣ ಸಿಗುವಂತೆ ಮಾಡಲು ಕೆಲವು ಕಠಿಣ ಕ್ರಮ ಕೈಗೊಳ್ಳುವುದರಲ್ಲಿ ಸರ್ಕಾರ ಹಿಂದೆ ಬೀಳಬಾರದು. ಇದರ ಜೊತೆಗೆ ಕಾರ್ಪೊರೇಟ್ ಕಂಪನಿಗಳು, ಇತರ ಉದ್ದಿಮೆಗಳು, ಸಮಾಜ ಸೇವಾ ಸಂಸ್ಥೆಗಳನ್ನೂ ಬಳಸಿಕೊಳ್ಳಬೇಕು. ಉದ್ಯಮ ಆರಂಭಕ್ಕೆ ಅನುಮತಿ ನೀಡುವಾಗ ಉದ್ದಿಮೆದಾರರಿಗೆ ಕೆಲವು ರಿಯಾಯಿತಿಗಳನ್ನು ರಾಜ್ಯ ಸರ್ಕಾರ ನೀಡುತ್ತದೆ. ಆದರೆ, ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಒಂದು ಸಣ್ಣ ಷರತ್ತನ್ನೂ ಸರ್ಕಾರ ವಿಧಿಸಬಹುದು. ಇಡೀ ಶಾಲೆಯನ್ನು ದತ್ತುಪಡೆಯಲು ಸಾಧ್ಯವಾಗದೇ ಇದ್ದರೆ ಕೊಠಡಿಗಳ ನಿರ್ಮಾಣ, ಶೌಚಾಲಯ, ಗಣಕಯಂತ್ರ, ಗ್ರಂಥಾಲಯ, ಪ್ರಯೋಗಾಲಯ, ಕಾಂಪೌಂಡ್, ವಿದ್ಯಾರ್ಥಿ ವೇತನ, ವಿದ್ಯಾರ್ಥಿ ನಿಲಯಗಳ ನಿರ್ಮಾಣದತ್ತಲೂ ಅವರ ಗಮನವನ್ನು ಸೆಳೆಯಬಹುದು.

ದಾನಿಗಳು ತಮಗೆ ಇಷ್ಟವಾದ ಹಂತ ಮತ್ತು ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಬಹುದು ಅಥವಾ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ, ಪ್ರಕೃತಿ ವಿಕೋಪದಿಂದ ನಲುಗಿದ ಸಾಮಾಜಿಕ ಅಸಮಾನತೆಗೆ ಒಳಗಾದ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಇಂತಹ ವ್ಯವಸ್ಥೆ ಜಾರಿಗೆ ಬಂದರೆ ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ. ಕನ್ನಡವೂ ಉಳಿಯುತ್ತದೆ.

ಆಧಾರ:ವಿಜಯಕರ್ನಾಟಕ, ದಿನಾಂಕ:20.05.2020

## 6. ಪಂಚಾಯತ್ ಚುನಾವಣೆ ನಡೆಯಲಿ

ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಕಾನೂನನ್ನು ಜಾರಿಗೊಳಿಸಿ, ಕ್ರಾಂತಿಕಾರಕ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಪ್ರಯತ್ನದಿಂದ ಕರ್ನಾಟಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಬಲಪಡಿಸಲಾಗಿದೆ. ಕಳೆದ 5–6 ವರ್ಷಗಳಲ್ಲಿ ಪಂಚಾಯಿತಿಗಳ ಸ್ವರೂಪ, ಅವುಗಳ ಅಧಿಕಾರ ವ್ಯಾಪ್ತಿ, ಅಧಿಕಾರ ಬಲ, ಆರ್ಥಿಕ ಸಾಮರ್ಥ್ಯ ಪಂಚಾಯಿತಿಗಳು ಪ್ರಜಾಪ್ರಭುತ್ವದ ಅತ್ಯಂತ ಮಹತ್ವದ ಘಟಕಗಳಾಗಿವೆ.

ರಾಜ್ಯದಲ್ಲಿ ಪಂಚಾಯಿತಿಗಳ ಪುನರ್ ವಿಂಗಡಣೆಯಾಗಿ 5–6 ವರ್ಷವಾಗಿದೆ. ಪುನರ್ ವಿಂಗಡಣೆ ನಂತರ ಪಂಚಾಯಿತಿಗಳ ಸಂಖ್ಯೆ 5628 ರಿಂದ 6041ಕ್ಕೆ ಏರಿದೆ. ಈ ಎಲ್ಲಾ ಪಂಚಾಯಿತಿಗಳಿಗೆ 2015ರಲ್ಲಿ ಚುನಾವಣಾ ಸುಧಾರಣೆಗಳ ಹೊಸ ಕಾನೂನಿನ ಮೂಲಕ ಮೊದಲ ಸಾರ್ವತ್ರಿಕ ಚುನಾವಣೆ ನಡೆದಿದೆ. ಈಗ 2ನೇ ಸಾರ್ವತ್ರಿಕ ಚುನಾವಣೆಯಾಗಬೇಕಿದೆ.

ಕಡ್ಡಾಯ ಮತದಾನ, ನೋಟಾ, ಚುನಾವಣೆಯಲ್ಲಿ ಸಾರಾಯಿ ನಿರ್ಬಂಧದಂಥ ಗಂಭೀರ ಹೆಜ್ಜೆಗಳ ಮೂಲಕ ಚುನಾವಣೆಯನ್ನು ಅರ್ಥಪೂರ್ಣಗೊಳಿಸುವ ಕಾನೂನನ್ನು ಜಾರಿಗೊಳಿಸಲಾಗಿದೆ. 2020ರ ಜೂನ್–ಜುಲೈನಲ್ಲಿ ಮತ್ತೆ ಹೊಸ ಸದಸ್ಯರ ಆಯ್ಕೆ ಮಾಡಬೇಕಾಗಿದೆ. ಕಳೆದ ಸಾರ್ವತ್ರಿಕ ಚುನಾವಣೆ ನಂತರ ಜೂನ್‌ನಲ್ಲಿ 2400, ಜುಲೈನಲ್ಲಿ 3500 ಹೀಗೆ ಪಂಚಾಯಿತಿಗಳ ಚುನಾಯಿತ ಸದಸ್ಯರ ಪ್ರಥಮ ಸಭೆ ತಾರೀಖನ್ನು ಗಮನಿಸಿ ಪಂಚಾಯಿತಿಯ ಅವಧಿ ಪೂರ್ಣಗೊಂಡು ಚುನಾವಣೆ ನಡೆಸಬೇಕು. ಹೊಸ ಕಾನೂನಿನನ್ವಯ ನಡೆಯುವ ಈ ಚುನಾವಣೆ ಒಟ್ಟು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಮಹತ್ವದ ಮೈಲಿಗಲ್ಲಾಗಿದೆ.

ಪಂಚಾಯಿತಿಗೆ ಏನು ಅಧಿಕಾರ ಇದೆ, ಹಣವೇ ಇಲ್ಲ ಕೆಲಸ ಏನು ಮಾಡಬಹುದು ಎಂದು ವಾದಿಸುತ್ತಿದ್ದ ವರ್ಗ ಈಗ ಮೌನವಾಗಿದೆ. ಪಂಚಾಯಿತಿಗಳ ಅಧಿಕಾರ, ಯೋಜನೆಗಳು, ಹಣಕಾಸು, ಆಡಳಿತ ಬಲ ಇವೆಲ್ಲವುಗಳಿಂದ ಪಂಚಾಯಿತಿಗಳು ಸ್ಥಳೀಯ ಸರ್ಕಾರಗಳಂತೆ ಕೆಲಸ ಮಾಡುತ್ತಿವೆ. ಪಂಚಾಯಿತಿಗಳಿಗೆ ಹೆಚ್ಚುತ್ತಿರುವ ಮಹತ್ವದಿಂದಾಗಿ ಬರಲಿರುವ ಚುನಾವಣೆ ಮಹತ್ವ ಪಡೆದಿದೆ.

ಆದರೆ ಕೊರೊನಾ ವೈರಸ್ಸಿನ ಹಾವಳಿಯ ಸಂಕಷ್ಟದ ಕಾಲದಲ್ಲಿ ಚುನಾವಣೆಗಳು ನಡೆಯಬೇಕಿದೆ. ಈ ಸಂದರ್ಭದಲ್ಲಿ ಗಾಬರಿಗೊಂಡ ಸರ್ಕಾರ ಪಂಚಾಯತ್ ಚುನಾವಣೆಗಳನ್ನು ಮುಂದೂಡಲು ಚುನಾವಣಾ ಆಯೋಗಕ್ಕೆ ವಿನಂತಿಸಿಕೊಂಡಿದೆ. ಕಳೆದ ಜುಲೈ ತಿಂಗಳಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ಸರ್ಕಾರ ಪಂಚಾಯತ್ ಕಾನೂನಿನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಮೀಸಲಾತಿ ಕುರಿತಂತೆ ಇದ್ದ ಅವಧಿಯನ್ನು ಬದಲಾಯಿಸಿದ್ದಾರೆ. ಮೀಸಲಾತಿ ಅವಧಿ ಬದಲಾಯಿಸಿರುವುದರಿಂದ ಹೊಸ ಮ್ಯಾಟ್ರಿಕ್ಸ್ ಮಾಡಬೇಕಾಗಿದೆ. ಈ ದಿಸೆಯಲ್ಲಿ ನಡೆಯಬೇಕಿದ್ದ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಚುನಾವಣೆ ಮುಂದೂಡಿಕೆ ಆಯಿತು ಎಂದು ಸರಕಾರ ಭಾವಿಸಿಕೊಂಡಿದೆ. ಸಂವಿಧಾನದ 73ನೇ ತಿದ್ದುಪಡಿಯ ಆಶಯಗಳು, ರಾಜ್ಯಪಂಚಾಯತ್ ಅಧಿನಿಯಮಗಳು ಪಕ್ಷಮುಕ್ತ ಗ್ರಾಮ ಪಂಚಾಯಿತಿಗಳಿಗೆ ಸದಾಕಾಲ ಚುನಾಯಿತ ಸದಸ್ಯರು ಇರಬೇಕು ಎನ್ನುವ ತೀರ್ಮಾನ ಹೊಂದಿವೆ. ಈ ಹಿನ್ನೆಲೆಯಲ್ಲಿ ರಾಜಕೀಯವಾಗಿ ಈ ಸಂಸ್ಥೆಗಳು ದುರ್ಬಳಕೆ ಆಗದಂತೆ ಆಯೋಗ ಎಚ್ಚರಿಕೆ ವಹಿಸಿ ಕೆಲಸ ಮಾಡಬೇಕು.

ಜೂನ್–ಜುಲೈನಲ್ಲಿ ಚುನಾವಣೆ ಮಾಡದೆ ಮುಂದೂಡಿ ಮೂರು ಸಾಧ್ಯತೆಗಳನ್ನು ಸರ್ಕಾರ ಪ್ರಯತ್ನಿಸುತ್ತಿದೆ. ಅವು 1. ಪಂಚಾಯಿತಿಗಳಿಗೆ ಆಡಳಿತಗಾರ ಅಥವಾ ಆಡಳಿತ ಸಮಿತಿ ನೇಮಿಸುವುದು 2. ಸದಸ್ಯರ ನಾಮನಿರ್ದೇಶನ, 3. ಚುನಾಯಿತ ಸದಸ್ಯರನ್ನು 3 ಅಥವಾ 6 ತಿಂಗಳು ಮುಂದುವರೆಸುವುದು.

ಸದ್ಯ ಸರ್ಕಾರ, ಸದಸ್ಯರನ್ನು ನಾಮಕರಣ ಮಾಡಲು ಮುಂದಾಗಿದೆ. ಆ ದಿಸೆಯಲ್ಲಿ, ಸಚಿವ ಸಂಪುಟ ಉಪ ಸಮಿತಿ ವರದಿ ತಯಾರಿಸಿ, ಕಾನೂನಿನಲ್ಲಿರದ ನಾಮಕರಣ ಅವಕಾಶ ಪಡೆದುಕೊಳ್ಳುವ ಬಗೆಯ ಕುರಿತು ಗಂಭೀರ ಪ್ರಯತ್ನದಲ್ಲಿ ಇದೆ. ಸರ್ಕಾರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ–1993ರ ಕಲಂ 8ರ ಪ್ರಕಾರ ಆಡಳಿತ ಸಮಿತಿಯ ಸದಸ್ಯರನ್ನು ಜಿಲ್ಲಾಧಿಕಾರಿಗಳಿಂದ ನಾಮನಿರ್ದೇಶನ ಮಾಡಲು ಹೊರಟಿದೆ. ಆದರೆ ಕಲಂ 8 ಹೊಸದಾಗಿ ಜಿಲ್ಲಾಧಿಕಾರಿಯಿಂದ ಸ್ಥಾಪಿಸಲ್ಪಡುವ ಗ್ರಾಮಪಂಚಾಯಿತಿಗೆ ಚುನಾವಣೆ ನಡೆಸುವುದಕ್ಕೆ ಯಾವುದೇ ತೊಂದರೆ ಇದ್ದಲ್ಲಿ ಮಾತ್ರ ನಾಮನಿರ್ದೇಶನ ಮಾಡಲು ಅವಕಾಶ ಕಲ್ಪಿಸಿದೆ. ಕಲಂ 8

ಹೀಗಿದೆ– 8. ಗ್ರಾಮ ಪಂಚಾಯಿತಿಗಳ ಸದಸ್ಯರನ್ನು ಚುನಾಯಿಸಲು ತಪ್ಪಿದ್ದಲ್ಲಿ ಆಡಳಿತ ಸಮಿತಿಯ ಅಥವಾ ಆಡಳಿತಾಧಿಕಾರಿಯ ನೇಮಕ.

(1) (ಎ) ಡೆಪ್ಯುಟಿ ಕಮಿಷನರ್ ಅವರಿಗೆ ಗ್ರಾಮ ಪಂಚಾಯಿತಿಯನ್ನು ಸ್ಥಾಪಿಸಿದ ತರುವಾಯ ಕೂಡಲೇ ಗ್ರಾಮಕ್ಕಾಗಿ ಅಥವಾ ಗ್ರಾಮಗಳ ಗುಂಪಿಗಾಗಿ ಗ್ರಾಮ ಪಂಚಾಯಿತಿಯನ್ನು;

(1) ಗ್ರಾ.ಪಂ. ಚುನಾವಣೆಯನ್ನು ನಡೆಸುವುದಕ್ಕೆ ಯಾವುದೇ ತೊಂದರೆಯ ಕಾರಣದಿಂದಾಗಿ;

(2) 5ನೇ ಪ್ರಕರಣದ (6)ನೇ ಉಪ ಪ್ರಕರಣದ ಅಡಿಯಲ್ಲಿ ನಡೆಸಲಾದ ಎರಡು ಅನುಕ್ರಮ ಚುನಾವಣೆಗಳಲ್ಲಿ ಅಂಥ ಸದಸ್ಯರನ್ನು ಚುನಾಯಿಸಲು ವಿಫಲವಾಗಿರುವ ಕಾರಣದಿಂದಾಗಿ;

(3) ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ, ರಚಿಸಲು ಸಾಧ್ಯವಿಲ್ಲವೆಂದು ಮನದಟ್ಟಾದರೆ; **ಅಥವಾ**

(ಬಿ) ಗ್ರಾಮ ಪಂಚಾಯತಿಗಳಿಗೆ ಸಾರ್ವತ್ರಿಕ ಚುನಾವಣೆಯಲ್ಲಿ ಯಾವನೇ ಸದಸ್ಯನು ಚುನಾಯಿತನಾಗದಿದ್ದರೆ ಅಥವಾ ಒಟ್ಟು ಸಂಖ್ಯೆಯ ಮೂರನೇ ಎರಡರಷ್ಟಕ್ಕಿಂತಲೂ ಕಡಿಮೆ ಸದಸ್ಯರು ಚುನಾಯಿತರಾಗಿದ್ದರೆ,

ಡೆಪ್ಯುಟಿ ಕಮೀಷನರ್, ಅಧಿಸೂಚನೆಯ ಮೂಲಕ–

(1) ಚುನಾಯಿತರಾಗಲು ಅರ್ಹರಾದ ವ್ಯಕ್ತಿಗಳನ್ನು ಒಳಗೊಂಡ ಆಡಳಿತ ಸಮಿತಿಯನ್ನು ನೇಮಕ ಮಾಡತಕ್ಕದ್ದು. ಅಂಥ ವ್ಯಕ್ತಿಗಳ ಸಂಖ್ಯೆಯು (5)ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನಿರ್ಧರಿಸಿರುವ ಸದಸ್ಯರ ಸಂಖ್ಯೆಗೆ ಸಮನಾಗಿರತಕ್ಕದ್ದು; ಅಥವಾ

(2) ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕದ್ದು. (2)ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯು, (1)ನೇ ಉಪ ಪ್ರಕರಣ ಮೇರೆಗೆ, ಅಧಿಸೂಚನೆಯಲ್ಲಿ, ಡೆಪ್ಯುಟಿ ಕಮೀಷನರ್ ಅವರು ನಿರ್ದಿಷ್ಟ ಪಡಿಸಬಹುದಾದಂತೆ ಆರು ತಿಂಗಳು ಮೀರದಂಥ ಅವಧಿಯವರೆಗೆ ಹುದ್ದೆಯ ಧಾರಣ ಮಾಡತಕ್ಕದ್ದು.

ಹೀಗಾಗಿ ಅಸ್ತಿತ್ವದಲ್ಲಿರುವ ಪಂಚಾಯಿತಿಗಳಿಗೆ ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಗಾರರನ್ನು ಜಿಲ್ಲಾಧಿಕಾರಿಗಳು ನೇಮಿಸುವುದು ಕಾನೂನಾತ್ಮಕವಾಗಿ ಸಾಧ್ಯವಿಲ್ಲ. ಆದರೆ ಸರಕಾರ ಕಲಂ 321ನ್ನು ದುರ್ಬಳಕೆ ಮಾಡಿಕೊಂಡು ತನ್ನ ಆದೇಶದ ಮೂಲಕ ಸಂವಿಧಾನದ ಸದಾಶಯವನ್ನು ಧಿಕ್ಕರಿಸಿ ಸದಸ್ಯರ ನಾಮ ನಿರ್ದೇಶನ ಮಾಡುವ ಪ್ರಯತ್ನದಲ್ಲಿ ಇದೆ. ಕಲಂ 321 ಈ ಕೆಳಗಿನಂತಿದೆ.

**321. ತೊಂದರೆಗಳ ನಿವಾರಣೆ–** ಈ ಅಧಿನಿಯಮವನ್ನು ಜಾರಿಗೆ ತರುವಾಗ ಯಾವುದೇ ತೊಂದರೆಯು ಉದ್ಭವಿಸಿದಲ್ಲಿ ಸರ್ಕಾರ, ಸಂದರ್ಭವು ಅಗತ್ಯಪಡಿಸಬಹುದಾದಂಥ, ತೊಂದರೆಯನ್ನು ನಿವಾರಿಸಲು ಅಗತ್ಯವೆಂದು ಕಂಡುಬರುವಂಥ ಏನನ್ನಾದರೂ ರಾಜ್ಯಪತ್ರದಲ್ಲಿ ಪ್ರಕಟಿಸುವ ಆದೇಶದ ಮೂಲಕ ಮಾಡಬಹುದು.

ಕಲಂ 321 ಸ್ಪಷ್ಟವಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ–1993ರಲ್ಲಿಯ ಪ್ರಕರಣಗಳನ್ನು ಅನುಷ್ಠಾನಗೊಳಿಸುವಾಗ ಯಾವುದಾದರೂ ತೊಂದರೆ ಉದ್ಭವಿಸಿದಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ತೊಂದರೆ ನಿವಾರಿಸಲು ಅನುಕೂಲ ಕಲ್ಪಿಸಿದೆ. ಆದರೆ ಕಾಯ್ದೆಯಡಿ ಯಾವುದೇ ಪ್ರಕರಣವು ಆಡಳಿತ ಸಮಿತಿಯ ಸದಸ್ಯರು ಅಥವಾ ಆಡಳಿತಾಧಿಕಾರಿಯನ್ನು ಪ್ರಸ್ತುತ ಅಸ್ತಿತ್ವದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ ನಾಮ ನಿರ್ದೇಶನ ಮಾಡಲು ಅವಕಾಶ ಕಲ್ಪಿಸುವುದಿಲ್ಲ.

ಕಲಂ 321ನ್ನು ಬಳಸಿ ನಾಮ ನಿರ್ದೇಶನ ಮಾಡುವುದು ಸಂವಿಧಾನದ 73ನೇ ತಿದ್ದುಪಡಿಗೆ ವ್ಯತಿರಿಕ್ತವಾಗುತ್ತದೆ. ಸರ್ಕಾರದ ಈ ಕ್ರಮ ಯಾವುದೇ ನ್ಯಾಯಾಲಯಗಳ ಪರಿಶೀಲನೆಯಲ್ಲಿ ಮನ್ನಣೆ ಪಡೆಯುವುದಿಲ್ಲ. ಕಾನೂನು ಬಾಹಿರವಾದ, ನಾಮ ನಿರ್ದೇಶನ ಬಲದಿಂದ ಪಂಚಾಯಿತಿಗಳ ಮೂಲಕ ರಾಜಕೀಯ ಮಾಡಬೇಕೆನ್ನುವ ಸರ್ಕಾರದ ದುರುದ್ದೇಶ ಅನಾವಶ್ಯಕ ಗೊಂದಲ ಸೃಷ್ಟಿ ಮಾಡಲಿದೆ.

ಈಗಾಗಲೇ 300/400 ಮತದಾರರು ಇರುವ ಮತಗಟ್ಟೆಗಳ ಚುನಾವಣೆಗಳನ್ನು ದೇಶದಲ್ಲಿ ನಡೆಸಲಾಗುತ್ತಿದೆ. ಉದಾ: ಮಹಾರಾಷ್ಟ್ರ ವಿಧಾನ ಪರಿಷತ್ತಿನ ಚುನಾವಣೆ, ಉತ್ತರ ಕೊರಿಯಾದಲ್ಲಿ ಸಾರ್ವತ್ರಿಕ

ಚುನಾವಣೆಗಳು ನಡೆದ ಸ್ಪಷ್ಟ ಉದಾಹರಣೆ. ರಾಜ್ಯದಲ್ಲಿ ಲಾಕ್‌ಡೌನ್ ಸಡಿಲಗೊಳಿಸಲಾಗಿದೆ. ಕಂಟೈನ್‌ಮೆಂಟ್ ಸ್ಥಳ ಹೊರತುಪಡಿಸಿ ದಿನನಿತ್ಯದ ಚಟುವಟಿಕೆಗಳು, ಸಾರಾಯಿ ಅಂಗಡಿಯಿಂದ ಹಿಡಿದು ಎಲ್ಲವನ್ನು ಪ್ರಾರಂಭಿಸುವಾಗ ಚುನಾವಣೆ ಮುಂದೂಡುವ ಯಾವುದೇ ಪಂಚಾಯತ್ ಪ್ರದೇಶದಲ್ಲಿ ಕಂಟೈನ್‌ಮೆಂಟ್ ಇದ್ದಂತಿಲ್ಲ. ಕಂಟೈನ್‌ಮೆಂಟ್ ಪ್ರದೇಶ ಇಲ್ಲದಿದ್ದಲ್ಲಿ ಚುನಾವಣೆ ನಡೆಸಲು ಯಾವುದೇ ತೊಂದರೆ ಇಲ್ಲ. ರಾಜ್ಯ ಚುನಾವಣಾ ಆಯೋಗಕ್ಕೆ ಸಂವಿಧಾನ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್‌ರಾಜ್ ಕಾಯ್ದೆ–1993ನ್ನು ಪಾಲಿಸಲೇಬೇಕಾದ ಉತ್ತರದಾಯಿತ್ವವಿದೆ.

ಸಂವಿಧಾನದ ಅನುಚ್ಛೇದ 243ಇ (3)ರ ಅನ್ವಯ ಹಾಗೂ ರಾಜ್ಯ ಕಾಯ್ದೆಯ 308(ಎಎ) ಸ್ಪಷ್ಟವಾಗಿ ನಿರ್ದೇಶಿಸಿರುವಂತೆ ಪಂಚಾಯಿತಿಯ ಅವಧಿ ಪೂರ್ಣಗೊಳ್ಳುವ ಮುನ್ನ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸುವುದು ಕಡ್ಡಾಯವಾಗಿದೆ. ಕಾರಣ ರಾಜ್ಯ ಚುನಾವಣಾ ಆಯೋಗ ಈ ಪರಿಸ್ಥಿತಿ ಪರಿಗಣಿಸಿ ಸಂವಿಧಾನ ಹಾಗೂ ಕಾನೂನು ವಹಿಸಿರುವ ತನ್ನ ಜವಾಬ್ದಾರಿಯನ್ನು ಅರಿತು ಚುನಾವಣೆ ನಡೆಯುವಂತೆ ಕರ್ತವ್ಯ ನಿರ್ವಹಿಸಬೇಕು.

ಆಧಾರ:ವಿಜಯಕರ್ನಾಟಕ, ದಿನಾಂಕ:20.05.2020

## 7. ಮುನ್ನಡೆಗೆ ಸ್ವಾವಲಂಬನೆ ಅನಿವಾರ್ಯ

ಬಹುಶಃ 'ಕೊರೊನಾ' ಬಿಟ್ಟರೆ ಜನರು ಗೂಗಲ್‌ನಲ್ಲಿ ಅತ್ಯಂತ ಹೆಚ್ಚು ಹುಡುಕಾಟ ನಡೆಸಿದ ಪದಪುಂಜ 'ಆತ್ಮನಿರ್ಭರ' ಇರಬಹುದೇನೋ? ನಾವೀಗ ಭಾರತವನ್ನು ಹೆಚ್ಚು 'ಸ್ವಾವಲಂಬಿ'ಯಾಗಿಸಬೇಕು. ಆ ಮೂಲಕ ಮುಂದಿನ ಒಂದೆರಡು ದಶಕಗಳಲ್ಲಿ ನಾವು ಜಗತ್ತನ್ನು ಆಳುವಷ್ಟು ಸಬಲರಾಗಬೇಕು. ಇದು ನಮ್ಮ ಪ್ರಧಾನ ಮಂತ್ರಿಗಳ ಆಶಯ. ಯಾವುದೇ ಒಂದು ದೇಶವು ಮುಂಚೂಣಿಯಲ್ಲಿರಬೇಕೆಂದರೆ, ದೇಶದ ವಿಜ್ಞಾನದ ತಳಹದಿ ಭದ್ರವಾಗಿರಬೇಕು.

ವಿಜ್ಞಾನ ಕ್ಷೇತ್ರದಲ್ಲಿ ನಮ್ಮ ಭಾರತಕ್ಕೆ ಗಣನೀಯವಾದ ಸಂಪನ್ಮೂಲ ಹಾಗೂ ಸಾಮರ್ಥ್ಯಗಳಿವೆ. ಆದರೆ ಅಗತ್ಯಕ್ಕೆ ತಕ್ಕಂತೆ ಅವುಗಳನ್ನು ಬಳಸುವಲ್ಲಿ ನಾವು ಇತರ ದೇಶಗಳಿಗಿಂತಲೂ ಬಹಳ ಹಿಂದಿದ್ದೇವೆ. ಈ ಕೆಳಕಂಡ ಒಂದೆರಡು ಉದಾಹರಣೆಗಳನ್ನು ಗಮನಿಸಿ. ರೇಡಿಯೋ ಅಲೆಗಳ ಮೂಲಕ ಕಾರ್ಯನಿರ್ವಹಿಸುವ ನಿಸ್ತಂತು ಸಂಪರ್ಕ ಸಾಧನವನ್ನು ಮೊದಲು(1895) ಪರೀಕ್ಷಿಸಿದ್ದು ನಮ್ಮ ವಿಜ್ಞಾನಿ ಜಗದೀಶಚಂದ್ರ ಬೋಸ್ ಅವರು. ಹಾಗೆಯೇ ರೇಡಿಯೋ ಅಲೆಗಳನ್ನು ಗುರುತಿಸಬಲ್ಲ ಅರೆವಾಹಕ ಹರಳನ್ನು (ಗ್ಯಾಲೆನಾ) ಮೊದಲ ಬಾರಿಗೆ ಬಳಸಿದ್ದು ಸಹಾ ಅವರೇ. ಆದರೆ ಜಾಗತಿಕ ರಾಜಕೀಯದಿಂದಾಗಿ 'ರೇಡಿಯೋ ಪಿತಾಮಹ'ರೆಂಬ ಬಿರುದು ಇಟಲಿಯ ಗುಗ್ಲೀಲ್ಮೊ ಮಾರ್ಕೊನಿ ಅವರ ಪಾಲಾಯಿತು. ನಮ್ಮ ಮೊಬೈಲ್ ಟೆಲಿಫೋನ್‌ಗಳ ಸಂಪರ್ಕಕ್ಕೆ ಇಂದಿಗೂ ಬಳಕೆಯಾಗುತ್ತಿರುವುದು ಬೋಸ್ ಅವರು ಅಂದು ಕೋಲ್ಕೊತ್ತಾದಲ್ಲಿ ಪ್ರದರ್ಶಿಸಿದ್ದ ಮಿಲಿಮೀಟರ್ ಅಳತೆಯ ರೇಡಿಯೊ ಸಂಕೇತಗಳೇ. ಉಪಗ್ರಹ ಸಂಪರ್ಕ ಹಾಗೂ ದೂರಸಂವೇದನೆಯೂ ಸೇರಿದಂತೆ ವಿಮಾನ ಹಾರಾಟಗಳನ್ನು ಗಮನಿಸುವ 'ರೇಡಾರ್' ಸಂಪರ್ಕ ಸಾಧನಗಳಿಗೂ ಬೆನ್ನೆಲುಬಾಗಿರುವುದು ಇದೇ 'ಮಿಲಿಮೀಟರ್ ವೇವ್ಸ್' ಇದರ ಸೃಷ್ಟಿ ನಮ್ಮಲ್ಲೇ ಆಗಿದ್ದರೂ, ಇದನ್ನು ಬಳಸಿಕೊಳ್ಳುವ ಸಾಧನಗಳೆಲ್ಲದರ ಅವಿಷ್ಕಾರಗಳು ಹೊರದೇಶಗಳಲ್ಲಾಯಿತು. ಉಪಗ್ರಹ ಆಧರಿತ ದೂರಸಂಪರ್ಕ ಹಾಗೂ ದೂರಸಂವೇದನೆ ಕ್ಷೇತ್ರದಲ್ಲಿ ಜಗತ್ತೇ ಮೆಚ್ಚುವ ಸಾಧನೆಗಳನ್ನು ನಾವು ಮಾಡಿದ್ದೇವೆ, ನಿಜ. ಆದರೆ ಆ ಸಾಧನೆಯ ಹಿನ್ನೆಲೆಯಲ್ಲಿರುವ ಬಹುತೇಕ ಉಪಕರಣಗಳನ್ನು ನಾವು ದುಬಾರಿ ಬೆಲೆಯಲ್ಲಿ ವಿದೇಶಗಳಿಂದ ಕೊಂಡುಕೊಂಡಿದ್ದೇವೆ.

ಸರ್ ಸಿ.ವಿ.ರಾಮನ್ ಎಂದ ಕೂಡಲೇ 'ರಾಮನ್ ಪರಿಣಾಮ' ಮತ್ತು ಆ ಆವಿಷ್ಕಾರಕ್ಕೆ ಅವರಿಗೆ ಸಂದ ನೊಬೆಲ್ ಪುರಸ್ಕಾರ(1930) ಕುರಿತಂತೆ ನಾವು ಥಟ್ಟೆಂದು ಉತ್ತರ ಹೇಳುತ್ತೇವೆ. ತಮ್ಮಲ್ಲಿದ್ದ ವಿವಿಧ ಹರಳುಗಳನ್ನು ಬಳಿಸಿಕೊಂಡು ಸೌರಬೆಳಕನ್ನು ಸಾಂದ್ರೀಕರಿಸುವ ಅನೇಕ ಪ್ರಯೋಗಗಳನ್ನು ರಾಮನ್ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಬೆಳಕಿನ ಕಿರಣಗಳ ಕುರಿತು ಹೊಸ ಹೊಳಹುಗಳನ್ನು ನೀಡಿದ್ದರು. ಬೆಳಕಿನ ಕಿರಣಗಳು ಚೆದುರುವ ಸಂದರ್ಭದಲ್ಲಿ ವಿವಿಧ ವರ್ಣಗಳು ಗೋಚರವಾಗುತ್ತಿದ್ದುದು ಅವರ ಗಮನಕ್ಕೆ ಬಂದಿತ್ತು. ಈ ವರ್ಣಗಳು ಬೆಳಕಿನ ಕಿರಣಗಳನ್ನು ಆವೃತಗೊಂಡ ದ್ರವ್ಯಗಳಿಗೆ ಅನುಸಾರವಾಗಿ ಬದಲಾಗುವುದನ್ನು ಅವರು ಮೊದಲ ಬಾರಿ ಜಗತ್ತಿಗೆ ತೋರಿಸಿಕೊಟ್ಟರು. ಅನಿಲಗಳು, ಭಾಷ್ಪಗಳು, ದ್ರವಗಳು, ಹರಳುಗಳು ಹಾಗೂ ಅಸ್ಫಟಿಕ ಘನಗಳ ಮೇಲೆ ಈ ಪ್ರಯೋಗಗಳನ್ನು ಅವರು ನಡೆಸಿದ್ದರು. ಆ ಮೂಲಕ ವಸ್ತುವೊಂದು ಚೆದುರಿಸುವ ಬಣ್ಣಗಳ ತೋರಣದಿಂದಲೇ ಅದು ಯಾವ ಮೂಲವಸ್ತುವಿನ ಅಣುವೆಂದು ಗುರುತಿಸುವ 'ರಾಮನ್ ಸ್ಪೆಕ್ಟ್ರೋಸ್ಕಪಿ' ಪ್ರಯೋಗ ವಿಧಾನವನ್ನು ರಾಮನ್ ಅವರು ಆವಿಷ್ಕರಿಸಿದರು. ಈ ತಂತ್ರಜ್ಞಾನವನ್ನು ಆಧರಿಸಿದ ಸಹಸ್ರಾರು ಮಾಯಯಂತ್ರಗಳು ಇಂದು ಜಗತ್ತಿನಾದ್ಯಂತ ಬಳಕೆಯಲ್ಲಿವೆ. ಬಾಹ್ಯಾಕಾಶ ಪ್ರಯೋಗಗಳಿಗೆಂದು ಅಭಿವೃದ್ಧಿಯಾದ ಪ್ರಬಲ ಲೇಸರ್ ಸಲಾಕೆಗಳು, ತ್ವರಿತ ವೇಗದ ಡಿಜಿಟಲ್ ಚಿತ್ರ ಸಂಸ್ಕರಣೆಗಳಂಥ ಮುಂಚೂಣಿ ತಂತ್ರಜ್ಞಾನಗಳು 'ರಾಮನ್ ಸ್ಪೆಕ್ಟ್ರೋಸ್ಕಪಿ'ಯ ಜೊತೆಗೂಡಿ ಇಂದು 'ರಾಮನ್ ಟೆಕ್ನಾಲಜಿ'ಯೆಂಬ ಹೊಸ ಜ್ಞಾನಶಾಖೆಯೇ ಹುಟ್ಟಿದೆ. ಇದರ ಒಂದು ಉತ್ಪನ್ನ 'ರಾಮನ್ ಸ್ಕ್ಯಾನರ್' ಕಾಲು ಕಿಲೋಗ್ರಾಂ ತೂಗುವ ಈ ಕೈಪಿಡಿ ಸಾಧನದ ಮೂಲಕ ವಾತಾವರಣದಲ್ಲಿ ಬೆರಕೆಯಾಗಿರಬಹುದಾದ ವಿಷವಸ್ತು ಅಥವಾ ಸ್ಫೋಟಕವಸ್ತುವಿನ ಅಣುಗಳನ್ನು ನಾವು ಗುರುತಿಸಬಹುದು. ಔಷಧ ಮಿಶ್ರಣದ ಶತಕೋಟಿಯ ಒಂದು ಭಾಗದಲ್ಲಿನ ಕಲಬೆರಕೆಯನ್ನು ಸಹಾ ಕಂಡಿಹಿಡಿಯಬಹುದು. ಭವಿಷ್ಯದಲ್ಲಿ ಸ್ವಾಸ್ಥ್ಯ ಸೇವೆಯಿಂದ ಹಿಡಿದು, ಸಾರಿಗೆ ಸುರಕ್ಷೆ ಸೇರಿದಂತ ಅನೇಕ ಕ್ಷೇತ್ರಗಳಲ್ಲಿ ಇಂಥ ಸ್ಕ್ಯಾನರ್‌ಗಳು ವ್ಯಾಪಕವಾಗಿ ಬಳಕೆಯಾಗಲಿದೆ. 'ರಾಮನ್ ಸ್ಪೆಕ್ಟ್ರೋಸ್ಕಪಿ' ಆವಿಷ್ಕಾರವಾದದ್ದು ನಮ್ಮ ಭಾರತದಲ್ಲಿಯೇ, ಆದರೆ ಇಂದು 'ರಾಮನ್ ಟೆಕ್ನಾಲಜಿ'ಯ ಸಾಧನ–ಸಲಕರಣೆಗಳೆಲ್ಲವೂ ನಿರ್ಮಾಣವಾಗುತ್ತಿರುವುದು ಹೊರದೇಶಗಳಲ್ಲಿ.

1997ರಲ್ಲಿ ದಿಲ್ಲಿಯಿಂದ ನ್ಯೂಯಾರ್ಕ್‌ಗೆ ಪಯಣಿಸುತ್ತಿದ್ದಾಗ, ಲಂಡನ್‌ನಲ್ಲಿ ನನ್ನ ಪಕ್ಕ ಬಂದು ಕುಳಿತವರು ಜರ್ಮನಿಯಲ್ಲಿನ ದೂರಸಂಪರ್ಕ ಕಂಪನಿಯಲ್ಲಿ ಅತಿ ದೊಡ್ಡ ಹುದ್ದೆಯಲ್ಲಿದ್ದವರು. ನಾನು ಬೆಂಗಳೂರಿನವನೆಂದು ತಿಳಿದೊಡನೆಯೇ, "ಓಹ್ ನಿಮ್ಮ ಐಟಿಐ ಕಂಪನಿಯ ಆರ್‌ಆ್ಯಂಡ್‌ಡಿ ಒಂದು ಕಾಲದಲ್ಲಿ ಶ್ರೇಷ್ಠಮಟ್ಟದ್ದಾಗಿತ್ತು. ಅದು ನಿರ್ಮಿಸಿದ ರೂರಲ್ ಎಕ್ಸ್‌ಚೇಂಜ್(ರ‍್ಯಾಕ್ಸ್) ವ್ಯವಸ್ಥೆಯು ಮಾರುಕಟ್ಟೆಯಲ್ಲಿ ನಮಗೆ ದೊಡ್ಡ ಸ್ಪರ್ಧೆಯೊಡ್ಡಿತ್ತು. ಐಟಿಐ ಎಂದಿನಂತೆ ಮುಂದುವರೆದಿದ್ದರೆ, ನಾವು ಭಾರತದಲ್ಲಿ ಬ್ಯುಸಿನೆಸ್ ಮಾಡಲು ಆಗುತ್ತಿರಲಿಲ್ಲ" ಎಂದಿದ್ದರು. ಮುಂದಿನ ದಿನಗಳಲ್ಲಿ ಐಟಿಐ ಹೇಳಹೆಸರಿಲ್ಲದಂತಾಯಿತು. ಮದ್ರಾಸ್ ಐಐಟಿಯ ಮಾಜಿ ನಿರ್ದೇಶಕ ಪಿ.ವಿ.ಇಂದಿರೇಸನ್ ಅವರ ಹೆಸರನ್ನು ನೀವು ಕೇಳಿರಬಹುದು. ಅಬ್ದುಲ್ ಕಲಾಂ ಅವರಿಗೆ ಆಪ್ತರಾಗಿದ್ದ ಇಂದಿರೇಸನ್, ಸ್ವದೇಶಿ ಉದ್ದಿಮೆಗಳ ಪ್ರಬಲ ಪ್ರತಿಪಾದಕರಾಗಿದ್ದರು. ಇಂಗ್ಲೀಷ್ ವಾರಪತ್ರಿಕೆಯೊಂದಕ್ಕೆ(2003) ಬರೆದ ಲೇಖನವೊಂದರಲ್ಲಿ ಅವರು ಇಂಥದೇ ಒಂದು ಘಟನೆಯನ್ನು ನೆನಪಿಸಿಕೊಂಡಿದ್ದಾರೆ. "ಡಿಜಿಟಲ್ ಟೆಲಿಫೋನ್ ಎಕ್ಸ್‌ಚೇಂಜ್‌ಗಳ ಸ್ವದೇಶಿ ನಿರ್ಮಾಣಕ್ಕೆಂದು ಸ್ಥಾಪನೆಯಾದ ಕಂಪನಿ 'ಸೆಂಟರ್‌ಫಾರ್ ಡೆವಲಪ್‌ಮೆಂಟ್ ಆಫ್ ಟೆಲಿಮ್ಯಾಟಿಕ್ಸ್' (ಸಿ–ಡಾಟ್). ಅದು ಆಯೋಜಿಸಿದ್ದ ಔತಣಕೂಟವೊಂದರಲ್ಲಿ ಎಂಎನ್‌ಸಿಯೊಂದರ ಮುಖ್ಯಸ್ಥರು ನನಗೆ ಮಾತಿಗೆ ಸಿಕ್ಕರು. ನನ್ನ ಬಳಿ ತಮ್ಮ ದುಃಖವೊಂದನ್ನು ಹಂಚಿಕೊಂಡರು. ಪ್ರೊಫೆಸರ್, ಈ ಸಿ–ಡಾಟ್ ಇರುವ ತನಕ ನಾವು ಇಂಡಿಯಾದಲ್ಲಿ ಬ್ಯುಸಿನೆಸ್ ಮಾಡಲು ಹೇಗೆ ಸಾಧ್ಯ ಎಂದು ಅವರು ನನ್ನನ್ನು ಕೇಳಿದರು." ಆ ಕಾಲದಲ್ಲಿ ದೇಶದ ಮಾರುಕಟ್ಟೆಯ ತೊಂಭತ್ತು ಪ್ರತಿಶತ ಪಾಲು ಸಿ–ಡಾಟ್‌ನದಾಗಿತ್ತು. ನಂತರದ ದಿನಗಳಲ್ಲಿ ಎಂಎನ್‌ಸಿಗಳ ಆಮಿಷಗಳಿಗೆ ಬಲಿಯಾಗಿ ದೂರಸಂಪರ್ಕ ಸಚಿವಾಲಯದ ಭ್ರಷ್ಟ ಅಧಿಕಾರಿಗಳು ಸಿ–ಡಾಟ್ ಅನ್ನು ಮುಚ್ಚಿಸಿದರು. ಮಾರುಕಟ್ಟೆ ಸಂಪೂರ್ಣವಾಗಿ ತಿರುಗು–ಮುರುಗಾಯಿತು. ಈ ಕರೆ, ಬಿಎಸ್‌ಎನ್‌ಎಲ್‌ನ ಬೆನ್ನೆಲುಬು ಮುರಿಯುವಿಕೆಯ ಅಧ್ಯಾಯದೊಂದಿಗೆ ಈಗ ಮುಂದುವರಿದಿದೆ.

ದೇಶದ ಹೆಮ್ಮೆಯ ಬಾಹ್ಯಾಕಾಶ ವಿಜ್ಞಾನಿ ಪ್ರೊ.ಯು.ಆರ್.ರಾವ್ ಅವರು ನನ್ನೊಂದಿಗೆ ಹಂಚಿಕೊಂಡ ಘಟನೆ ನೆನಪಾಗುತ್ತಿದೆ. ಯುಪಿಎ ಸರ್ಕಾರದ ಕಾಲ. ಅತ್ಯಗತ್ಯವಾಗಿದ್ದ ಆ್ಯಂಟೆನಾವೊಂದನ್ನು ಅಭಿವೃದ್ಧಿಪಡಿಸಲು ಇಸ್ರೋದ ಯೋಜನೆಯೊಂದು ಸರ್ಕಾರದ ಅನುಮೋದನೆಗೆ ಕಾದಿತ್ತು. ವಿಜ್ಞಾನ–ತಂತ್ರಜ್ಞಾನ ಸಚಿವಾಲಯವು ಆ್ಯಂಟೆನಾವನ್ನು ಸ್ವದೇಶಿಯಾಗಿ ಅಭಿವೃದ್ಧಿಪಡಿಸುವ ಬದಲು ಅಗ್ಗದ ದರದಲ್ಲಿ ಚೀನಾದಿಂದ ಖರೀದಿಸಬಹುದೆಂಬ ಚಿಂತನೆಯನ್ನು ಹರಿಬಿಟ್ಟಿತ್ತು. ವಿಜ್ಞಾನ–ತಂತ್ರಜ್ಞಾನದ ಅರಿವಿಲ್ಲದಿದ್ದರೂ ವಿತಂಡವಾದ ಮಾಡುವುದರಲ್ಲಿ ಪರಿಣತರಾಗಿದ್ದ ಸಚಿವಾಲಯದ ಬೃಹಸ್ಪತಿಗಳಿಗೆ ಸ್ವದೇಶಿ ತಂತ್ರಜ್ಞಾನದ ಮಹತ್ವವನ್ನು ಮನವರಿಕೆ ಮಾಡಿಕೊಡಲು ಯು.ಆರ್.ರಾವ್ ಅವರು ಸಾಕಷ್ಟು ಹೆಣಗಾಡಬೇಕಾಯಿತು. ಅಂದಿನ ಪ್ರಧಾನಮಂತ್ರಿಗಳು ಯು.ಆರ್.ರಾವ್ ಅವರ ಅಭಿಪ್ರಾಯಕ್ಕೇ ಮನ್ನಣೆಕೊಟ್ಟರು. ನಮ್ಮ ಮುಖ್ಯ ಸಂಪರ್ಕ ವ್ಯವಸ್ಥೆಯೊಂದು ಚೀನಾದ ಕುಣಿಕೆಯಿಂದ ಪಾರಾಯಿತು.

ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಸಾಕಷ್ಟು ಸಂಪನ್ಮೂಲಗಳಿವೆ. ಅವುಗಳನ್ನು ವ್ಯವಸ್ಥಿತವಾಗಿ ಬಳಸಿಕೊಂಡಲ್ಲಿ ಸ್ವಾವಲಂಬಿತನದ ನಮ್ಮ ಹಾದಿ ಸುಗಮ. ಉದಾಹರಣೆಗೆ, ನಮ್ಮ ಎಚ್‌ಎಎಲ್ ನಿರ್ಮಿತ ಹಗುರ ಯುದ್ಧವಿಮಾನ 'ತೇಜಸ್' ಒಂದು ಅತ್ಯದ್ಭುತ ಹಾರುಯಂತ್ರ, ಅದರ ಸಾಮರ್ಥ್ಯಗಳನ್ನು ಅಳೆಯುವ ಮೊದಲೇ ಕೊರತೆಗಳ ಪಟ್ಟಿಯೊಂದಿಗೆ ಅದನ್ನು ಹೀಗೆಳೆಯುವವರ ಸಂಖ್ಯೆ ಸಾಕಷ್ಟಿದೆ. ದುಬಾರಿ ಬೆಲೆ ತೆತ್ತು ವಿದೇಶಿ ವಿಮಾನಗಳನ್ನು ಖರೀದಿಸಬೇಕು. ನಮ್ಮದೇ ಬಳಕೆಯ ಮೂಲಕ ಉತ್ತೇಜನ ನೀಡಿದರೆ ನೂರಾರುಗಟ್ಟಲೆ ಸಂಖ್ಯೆಯಲ್ಲಿ ವಾಯುಪಡೆ ಖರೀದಿಸಬೇಕು. ನಮ್ಮದೇ ಬಳಕೆಯ ಮೂಲಕ ಉತ್ತೇಜನ ನೀಡಿದರೆ ನೂರಾರುಗಟ್ಟಲೆ 'ತೇಜಸ್' ವಿಮಾನಗಳನ್ನು ಹೊರದೇಶಗಳಿಗೆ ಮಾರುವುದು ಸಹ ಸುಲಭವಾಗುತ್ತದೆ.

ಭಾರತವನ್ನು ಸದೃಢವಾಗಿಸಬೇಕೆಂದರೆ ನಾವು ಅಬ್ದುಲ್ ಕಲಾಂ ಅವರ ಚಿಂತನೆಗಳತ್ತ ಗಮನ ಹರಿಸಬೇಕು. ಅವರು ಬರೆದ 'ವಿಷನ್–2020' ಎಂಬ ಮುಂಗಾಣ್ಕೆ ಗ್ರಂಥದಲ್ಲಿ ನಮ್ಮ ದೇಶವನ್ನು ಸ್ವಾವಲಂಬಿಯಾಗಿಸುವುದು ಹೇಗೆಂದು ವಿವರಿಸಿದ್ದಾರೆ. ಅವರ ಆದ್ಯತೆಯ ಪಟ್ಟಿಯಲ್ಲಿ ದೇಶೀಯ ಸಂಶೋಧನೆಗಳ ಉತ್ತೇಜನವೇ ಮೊದಲ ಸ್ಥಾನ ಪಡೆದಿದೆ. ವೈಜ್ಞಾನಿಕ ವ್ಯವಸಾಯ ಪದ್ಧತಿ, ಔಷಧಗಳಿಗೆ ಬೇಕಾದ ರಾಸಾಯನಿಕಗಳ ಉತ್ಪತ್ತಿ, .ಸೌಲಭ್ಯವಿರುವ ಲೋಹದದಿರುಗಳ ಸಮರ್ಥ ಬಳಕೆ, ರಾಕೆಟ್–ಉಪಗ್ರಹ ತಂತ್ರಜ್ಞಾನ ಅಭಿವೃದ್ಧಿಗಳಂಥ ಕ್ಷೇತ್ರಗಳಲ್ಲಿ ನಾವು ಜಾಗತಿಕ ಔನ್ನತ್ಯ ಸಾಧಿಸಬೇಕೆಂದಿದ್ದಾರೆ.

ಇಂಥ ಅನೇಕ ನಿದರ್ಶನಗಳು ಕಣ್ಣಿಗೆ ಬೀಳಬಹುದು. ಅವುಗಳಿಂದ ನಾವು ಕಲಿಯಬೇಕಾಗಿರುವ ನೀತಿ ಪಾಠ–ದೇಶಿಯ ಸಂಶೋಧನಾ ಸಂಸ್ಥೆಗಳಲ್ಲಿ ವಿಜ್ಞಾನವನ್ನು ಬೆಳೆಸಬೇಕು ಹಾಗೂ ಅನ್ವಯಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಬೇಕು. ನಮ್ಮದೇ ಕಂಪನಿಗಳಲ್ಲಿ ಸ್ವದೇಶಿ ಸಾಧನ–ಸಲಕರಣೆಗಳನ್ನು ಉತ್ಪಾದಿಸಬೇಕು. ಸ್ವಾವಲಂಬಿಯಾಗಬೇಕು. ಆದರೆ ಇದು ಅಷ್ಟು ಸುಲಭದ್ದಲ್ಲ. ನಮ್ಮೆಲ್ಲ ಪ್ರಯತ್ನಗಳನ್ನು ಹೊಸಕಲು ವಿದೇಶಿ ಕಂಪನಿಗಳು ವ್ಯವಸ್ಥಿತ ತಂತ್ರಗಳನ್ನು ರೂಪಿಸುತ್ತಿರುತ್ತವೆ. ತಮ್ಮ ಲೇಖನದ ಕೊನೆಯಲ್ಲಿ ಇಂದಿರೇಸನ್ ಅವರು ಗಾಂಧೀಜಿಯವರ ವಿವೇಚನೆಯೊಂದನ್ನು ನೆನಪಿಸುತ್ತಾರೆ. “ತಾಜಾ ತಂಗಾಳಿ ಒಳಬರಬೇಕೆಂದರೆ ನಮ್ಮ ಬಾಗಿಲನ್ನು ತೆರೆದಿರಬೇಕು, ಆದರೆ ಆ ಗಾಳಿಯು ನಮ್ಮನ್ನೇ ನೂಕಿ ಬೀಳಿಸುವಷ್ಟು ಬಿರುಸಾದಾಗ ಬಾಗಿಲನ್ನು ಮುಚ್ಚಬೇಕು”

ಲೇಖಕರು:– ಸುಧೀಂದ್ರ ಹಾಲ್ದೊಡ್ಡೇರಿ, ಹಿರಿಯ ವಿಜ್ಞಾನಿ

ಆಧಾರ:ವಿಜಯಕರ್ನಾಟಕ, ದಿನಾಂಕ:20.05.2020

## 8. ಶಿಕ್ಷಣದ ಪ್ರಗತಿಗೆ ಉನ್ನತ ಮಾರ್ಗದರ್ಶನವೇ ದಾರಿ

**ವಿದ್ಯಾರ್ಥಿಗಳಿಗೂ, ಶಿಕ್ಷಣ ಸಂಸ್ಥೆಗಳಿಗೂ 'ಮೆಂಟರ್' ವ್ಯವಸ್ಥೆ ಕಲ್ಪಿಸುವುದು ಸರಕಾರದ ನೀತಿಯಾಗಬೇಕು.**

ವೈಯುಕ್ತಿಕ ಮತ್ತು ಸಾಂಸ್ಥಿಕ ಸಾಮರ್ಥ್ಯ ಹಾಗೂ ಸಬಲೀಕರಣಗೊಳಿಸುವುದೇ ಕ್ರಿಯಾಶೀಲ ಶಿಕ್ಷಣ ಸಂಸ್ಥೆಗಳ ಶ್ರೇಷ್ಠತೆಯ ಕುರುಹು. ಅವು ಶೈಕ್ಷಣಿಕ ಸೇವೆಯ ಗುಣಮಟ್ಟ ಮತ್ತು ಸಂಸ್ಥೆಗಳ ಫಲಿತಾಂಶವನ್ನು ನಿರೂಪಿಸುತ್ತವೆ. ಮಾರ್ಗದರ್ಶನದ ವಿಭಿನ್ನ ಆಯಾಮಗಳನ್ನು ಮತ್ತು ಅದನ್ನು ಮಾನವ ಕಾರ್ಯಕ್ಷಮತೆ ಮತ್ತು ಸಾಂಸ್ಥಿಕ ಸೇವೆಗಳ ವರ್ಧಕವಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಅನ್ವೇಷಿಸಲು ಇಚ್ಛಿಸುತ್ತೇನೆ.

Mentor (ಮಾರ್ಗದರ್ಶಕ) ಪದವನ್ನು ಗ್ರೀಕ್ ಮೂಲದ ಪದವಾಗಿಯೇ ಗ್ರಹಿಸಿದರೂ ಅಮೆರಿಕ ಮತ್ತು ಯುರೋಪಿಯನ್ ಶೈಕ್ಷಣಿಕ ಸಂಸ್ಥೆಗಳು 1970ರ ದಶಕದಲ್ಲಿ ಅದನ್ನು ತಮ್ಮದಾಗಿಸಿಕೊಂಡವು. ಭಾರತದ ಪ್ರಾಚೀನ 'ಗುರು–ಶಿಷ್ಯ' ಪರಂಪರೆಯಲ್ಲಿ ಕೂಡಾ ಇದರ ಮಹತ್ವಕೇನೂ ಕೊರತೆ ಇಲ್ಲ. ಮೆಂಟರ್ ಪದದ ಜನಪ್ರಿಯತೆಯಿಂದಾಗಿ ನಾವು ಅದನ್ನು ಸುಲಭ ಸಂವಹನವಾಗಿ ಬಳಸುತ್ತಿದ್ದೇವೆ.

ಮೆಂಟರ್ ಪದಕ್ಕೆ ಅನೇಕ ವ್ಯಾಖ್ಯಾನಗಳಿವೆ. ಹೆಚ್ಚು ಜ್ಞಾನವುಳ್ಳ ವ್ಯಕ್ತಿಯಿಂದ ಕಲಿಯುವವ ಅಥವಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಜ್ಞಾನದ ವ್ಯವಸ್ಥೆ ಎನ್ನಿಸಿಕೊಳ್ಳುತ್ತದೆ. ಸಮಕಾಲೀನ ಸನ್ನಿವೇಶದಲ್ಲಿ ಮೆಂಟರ್‌ಗಳು ಶೈಕ್ಷಣಿಕ ಪೋಷಕರಂತೆ (ಮನೆಯಲ್ಲಿರುವ ಜೈವಿಕ ಪೋಷಕರಿಗೆ ಹೋಲಿಸಿದರೆ) ಕಾರ್ಯನಿರ್ವಹಿಸುತ್ತಾ ಶೈಕ್ಷಣಿಕ ಸಂಸ್ಥೆಯಲ್ಲಿನ ಅವರ ಶೈಕ್ಷಣಿಕ ಪ್ರಗತಿಯನ್ನು ನಿರ್ವಹಣೆ ಮಾಡಲು ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪನ್ನು ನಿರ್ವಹಿಸುತ್ತಾರೆ.

ಮೆಂಟರ್ ಕೇವಲ ಶೈಕ್ಷಣಿಕ ನೆರವು ನೀಡುವುದು ಮಾತ್ರವಲ್ಲದೇ ಮಾನಸಿಕ ಸಲಹೆ ಸೇರಿದಂತೆ ಎಲ್ಲ ರೀತಿಯ ಬೆಂಬಲವನ್ನು ನೀಡುತ್ತಾನೆ. ವಿದ್ಯಾರ್ಥಿಯ ಅವನ/ಅವಳ ಪೂರ್ಣ ಸಾಮರ್ಥ್ಯವನ್ನು ನಿರ್ವಹಿಸಲು ಸಹಾಯ ಮಾಡುತ್ತಾನೆ. ಮೆಂಟರ್ ಒಂದೆಡೆ ವಿದ್ಯಾರ್ಥಿ ಮತ್ತು ಮತ್ತೊಂದೆಡೆ ಪೋಷಕರು ಹಾಗೂ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರ ನಡುವೆ ಸಂವಹನದ ಸೇತುವೆಯಾಗಿ ಕೆಲಸ ಮಾಡುವ ಮೂಲಕ, ವಿದ್ಯಾರ್ಥಿಯಿಂದ ಗರಿಷ್ಠ ಲಾಭ ಹೊರ ತೆಗೆಯಲು ಪ್ರಯತ್ನಿಸುತ್ತಾನೆ.

ವಿದ್ಯಾರ್ಥಿಗಳ ಕಾರ್ಯಕ್ಷಮತೆಯ ಮೇಲೆ ಮಾರ್ಗದರ್ಶನದ ಸಕಾರಾತ್ಮಕ ಪರಿಣಾಮವನ್ನು ಗಮನಿಸಿದರೆ, ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಅದರಲ್ಲೂ ವಿಶೇಷವಾಗಿ ಸರಕಾರಿ ಶಾಲೆಗಳು ಮತ್ತು ಕಾಲೇಜುಗಳಲ್ಲಿ ಈ ವ್ಯವಸ್ಥೆಯ ಅಗತ್ಯ ಹೆಚ್ಚಾಗಿದ್ದು, ಅದನ್ನು ಕಡ್ಡಾಯಗೊಳಿಸುವುದು ರಾಜ್ಯ ಸರಕಾರದ ನೀತಿಯಾಗಬೇಕು.

**ಪ್ರಮುಖ ಅಂಶಗಳು:–**

ಎ) ಎಲ್ಲ ಸರಕಾರಿ ಮತ್ತು ಅನುದಾನಿತ ಶೈಕ್ಷಣಿಕ ಸಂಸ್ಥೆಗಳಲ್ಲಿ ಮಾರ್ಗದರ್ಶಕತ್ವ (ಮೆಂಟರ್‌ಶಿಪ್) ಅಳವಡಿಸಿಕೊಳ್ಳುವುದು ಸರಕಾರದ ನೀತಿಯಾಗಬೇಕು.

ಬಿ) ಒಬ್ಬ ಶಿಕ್ಷಕ ಮೆಂಟರ್‌ಗೆ 20 ವಿದ್ಯಾರ್ಥಿಗಳ ಗುಂಪನ್ನು ಒದಗಿಸುವುದೇ ಹೆಚ್ಚು ಸೂಕ್ತ ಎನಿಸುತ್ತದೆ.

ಸಿ) ಶೈಕ್ಷಣಿಕ ಸಂಸ್ಥೆಯಲ್ಲಿ ವಿದ್ಯಾರ್ಥಿ ಪ್ರವೇಶ ಪಡೆದ ತಕ್ಷಣವೇ ಈ ಸಂಗತಿಗಳನ್ನು ಜಾರಿಗೆ ತರಲು ಮುಂದಾಗಬೇಕು.

ಡಿ) ಪ್ರತಿ ವಿದ್ಯಾರ್ಥಿಯ SWOC (Strengths, Weaknesses, Oppurtunities, Challenges - ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು, ಸವಾಲುಗಳು) ವಿಶ್ಲೇಷಿಸಲು ಮತ್ತು ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಗಾಗಿ ಕ್ರಿಯಾ ಯೋಜನೆಯನ್ನು ರೂಪಿಸಲು ಮೆಂಟರ್ ಪ್ರತಿ ತಿಂಗಳಿಗೊಮ್ಮೆ ಮೌಲ್ಯಮಾಪನ ಸಭೆಗಳನ್ನು ನಡೆಸಬೇಕು. ಉದಾಹರಣೆಗೆ –ನಿಧಾನಗತಿಯ ಕಲಿಯುವವರು, ಭಾವನಾತ್ಮಕವಾಗಿ ಸವಾಲು ಹೊಂದಿರುವ, ದೈಹಿಕವಾಗಿ ಸವಾಲು ಹೊಂದಿರುವವರು, ಪ್ರತಿಭಾವಂತರು, ಅಥ್ಲೆಟಿಕ್ಸ್ ಮತ್ತು ಕ್ರೀಡೆಗಳತ್ತ ಒಲವು ತೋರುವವರನ್ನು ಒಳಗೊಳ್ಳಲು ಸರಿಯಾದ ಕ್ರಮಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಇ) ವಿದ್ಯಾರ್ಥಿಗಳಿಗೆ ವೃತ್ತಿಪರ ಮಾನಸಿಕ ಸಮಾಲೋಚನೆ ಸೇವೆ ಒದಗಿಸಬೇಕು. ಹಿಂದುಳಿದ ವಿದ್ಯಾರ್ಥಿಗಳು, ಬೇಗ ಕಲಿಯುವವರು, ಮಹಿಳಾ ಸಬಲೀಕರಣ, ಪ್ರದರ್ಶನ ಕಲೆ ಮತ್ತು ಕ್ರೀಡೆಗಳಲ್ಲಿ ಪ್ರತಿಭೆಯನ್ನು ತೋರಿಸುವ ವಿದ್ಯಾರ್ಥಿಗಳತ್ತ ಸರಿಯಾದ ಗಮನ ಹರಿಸಬೇಕು.

ಎಫ್) ನಿರ್ದಿಷ್ಟ ಅವಧಿಯ ಎಲ್ಲ ರೀತಿಯ ಮೌಲ್ಯಮಾಪನ ವರದಿಗಳು ಮತ್ತು ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರ ಗಮನಕ್ಕೆ ತರಬೇಕು. ಹಾಗೆಯೇ ಈ ಮಾಹಿತಿಯನ್ನು ಪೋಷಕರಿಗೂ ನೀಡಬೇಕು.

ಜಿ) ವಿದ್ಯಾರ್ಥಿಗಳು, ಪೋಷಕರು, ಮಾರ್ಗದರ್ಶಕ ಮತ್ತು ಸಂಸ್ಥೆಯನ್ನು ಒಳಗೊಂಡ ಜಾಲವನ್ನು ಸ್ಥಾಪಿಸುವ ಮೂಲಕ ಮಾರ್ಗದರ್ಶಕತ್ವದ ಗರಿಷ್ಠ ಫಲಿತಾಂಶವನ್ನು ಪಡೆಯುವುದಕ್ಕಾಗಿ ಮೆಂಟರ್ ಇಲ್ಲವೇ ಶೈಕ್ಷಣಿಕ ಸಂಸ್ಥೆಯ ಆಡಳಿತ ಮತ್ತು ಪೋಷಕರು ಇದರಲ್ಲಿ ತೊಡಗಿಸಿಕೊಳ್ಳಬೇಕು.

ಹೆಚ್) ಹಾಸ್ಟೆಲ್‌ಗೆ ಸಂಬಂಧಿಸಿದ ಅಥವಾ ವಿದ್ಯಾರ್ಥಿಯ ಇನ್ನಾವುದೇ ಸಮಸ್ಯೆಯನ್ನು ಮೆಂಟರ್ ಶೈಕ್ಷಣಿಕ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರಬೇಕು. ಆ ಮೂಲಕ ಈ ಸಮಸ್ಯೆಗಳನ್ನು ವಿದ್ಯಾರ್ಥಿಯ ಶೈಕ್ಷಣಿಕ ಸವಾಲುಗಳ ಮೇಲೆ ಮಾತ್ರ ಗಮನಹರಿಸುವಂತೆ ಅವುಗಳನ್ನು ಪರಿಹರಿಸಬಹುದು.

ಐ) ಸಾಮಾಜಿಕ ಹೊಣೆಗಾರಿಕೆಗಳನ್ನು ನಿಭಾಯಿಸುವ ಮೂಲಕ ಸಂಸ್ಥೆಯು ವಿದ್ಯಾರ್ಥಿಯ ಒಟ್ಟಾರೆ ಬೆಳವಣಿಗೆಗೆ ಬದ್ಧರಾಗಿರಬೇಕು. ಅಂತಿಮವಾಗಿ, ವಿದ್ಯಾರ್ಥಿಯನ್ನು ಸಬಲೀಕರಣಗೊಳಿಸುವುದು ಎಂದರೆ ಅಕ್ಷರ ಮತ್ತು ಉತ್ಸಾಹದ ಮೂಲಕ ರಾಷ್ಟ್ರದ ಸಬಲೀಕರಣವೇ ಆಗಿದೆ.

'ಸಾಂಸ್ಥಿಕ ಮಾರ್ಗದರ್ಶನ(Institutional Mentoring)ವು ಸಾಮರ್ಥ್ಯ ವೃದ್ಧಿಯ ಹೊಸ ಆಯಾಮವಾಗಿದೆ. ಕರ್ನಾಟಕದ ಶಿಕ್ಷಣ ಸಂಸ್ಥೆಗಳನ್ನು ಸಶಕ್ತಗೊಳಿಸುವ ಒಂದು ಹೊಸ ಆಯಾಮವನ್ನು ಸೇರಿಸಲು ಮಾರ್ಗದರ್ಶನದ ಪರಿಕಲ್ಪನೆಯಡಿಯೇ ವಿಸ್ತರಿಸಬಹುದಾಗಿದೆ. ಅಂದರೆ, ಉನ್ನತ ಮಟ್ಟದ ಸಂಸ್ಥೆಗಳು (ಅವರ ಶೈಕ್ಷಣಿಕ ಪರಿಣಿತಿಯನ್ನು ಒದಗಿಸುವುದು) ಕೆಳಹಂತದ ಸಂಸ್ಥೆಗಳಿಗೆ ಮಾರ್ಗದರ್ಶಕ ರೀತಿಯಲ್ಲಿ ಕೆಲಸ ಮಾಡಬೇಕು.

ಈ ವ್ಯವಸ್ಥೆಯು ಮಾರ್ಗದರ್ಶನದ ಸಂಸ್ಥೆಗಳ ವಿಸ್ತರಿತ ಚಟುವಟಿಕೆಗಳಿಗೆ ಹೊಸ ಆಯಾಮವನ್ನು ಕಲ್ಪಿಸಬಹುದು. ಉದಾಹರಣೆಗೆ–ಪ್ರತಿಷ್ಠಿತ ಶಾಲೆಗಳು ಮತ್ತು ವಿಶ್ವವಿದ್ಯಾಲಯಗಳು ತಮ್ಮ ತಜ್ಞತೆಯನ್ನು ಸಮಕಾಲೀನ ಶೈಕ್ಷಣಿಕ ಮೂಲಸೌಕರ್ಯಗಳನ್ನು ಒದಗಿಸಲು ಸರಕಾರಿ ಮತ್ತು ಅನುದಾನಿತ ಶಾಲೆಗಳು, ಕಾಲೇಜುಗಳಿಗೆ ಪರಿಣಿತಿಯನ್ನು ನೀಡಬಲ್ಲವು. ಅದು 21ನೇ ಶತಮಾನದ ಜ್ಞಾನ ಆಧಾರಿತ ಶೈಕ್ಷಣಿಕ ಚಟುವಟಿಕೆಗಳು ಮತ್ತು ಸೇವೆಗಳಿಗೆ ಅನುಗುಣವಾಗಿಯೇ ಇರುತ್ತದೆ.

1. ಸರಕಾರಿ ಮತ್ತು ಅನುದಾನಿತ ಶಾಲೆಗಳು ತಮ್ಮ ಸಮೀಪದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಿಂದ ಶೈಕ್ಷಣಿಕ ತಜ್ಞತೆಯನ್ನು ಪಡೆದುಕೊಳ್ಳಬಹುದು. ವಿಶೇಷವಾಗಿ, ಶಿಕ್ಷಕರಿಗೆ ಕ್ಲಾಸ್‌ರೂಮ್ ಮತ್ತು ಬೋಧನಾ–ಕಲಿಕಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹೊಸದನ್ನು ಕಲಿಯಲು ಇದರಿಂದ ಸಾಧ್ಯವಾಗುವುದು.
2. ಸರಕಾರಿ ಮತ್ತು ಅನುದಾನಿತ/ಸ್ವಾಯತ್ತ ಕಾಲೇಜುಗಳು ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ(ಕೆಎಸ್‌ಎಚ್‌ಸಿಇ) ನಿಗದಿಪಡಿಸಿದ ಗುರಿ ಮತ್ತು ಉದ್ದೇಶಗಳಿಗೆ ಅನುಗುಣವಾಗಿ ತಮ್ಮ ಶೈಕ್ಷಣಿಕ ಮೂಲಸೌಕರ್ಯ ಮತ್ತು ಕಾರ್ಯಕ್ರಮಗಳನ್ನು ನವೀಕರಿಸಲು ಹತ್ತಿರದ ಹೆಸರಾಂತ ವಿಶ್ವವಿದ್ಯಾಲಯಗಳಿಂದ ಶೈಕ್ಷಣಿಕ ಪರಿಣಿತಿಯನ್ನು ಪಡೆಯಬಹುದು. ಇದಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಅಂಶಗಳು ಹೀಗಿವೆ.

ಎ) ಉದಾರ ಕಲೆಯ ಪದವಿ ಮೂಲಕ ಪದವಿ ಪೂರ್ವ ಶಿಕ್ಷಣದಲ್ಲಿ ಉದ್ಯೋಗದ ಕೌಶಲ್ಯಗಳನ್ನು ಹೇಳಿಕೊಡಬಹುದು. ಇದೇ ರೀತಿಯ ಕೋರ್ಸ್‌ಗಳನ್ನು ವಿಜ್ಞಾನದ ವಿಭಾಗದಲ್ಲೂ ಮಾಡಬಹುದು.

ಬಿ) ಎನ್‌ಎಸಿ(ನ್ಯಾಕ್) ಸ್ವಯಂ ಮೌಲ್ಯಮಾಪನ ವರದಿಗಾಗಿ ಮತ್ತು ವರಿಷ್ಠ ಸಮಿತಿ ಭೇಟಿಯ ಸಿದ್ಧತೆಗಾಗಿ ಕಾಲೇಜುಗಳು ಮತ್ತು ಸ್ವಾಯತ್ತ ಕಾಲೇಜುಗಳನ್ನು ತಯಾರುಗೊಳಿಸಬೇಕು. ಪ್ರತಿಯೊಂದು ವಿಶ್ವವಿದ್ಯಾಲಯವು

ತಜ್ಞರ ಸಮಿತಿಯನ್ನು ರಚಿಸಬಹುದು ಮತ್ತು ಅದನ್ನು ತಮ್ಮ ಅಧಿಕೃತ ಜಾಲತಾಣಗಳಲ್ಲಿ ಪ್ರಕಟಿಸಬೇಕು. ಇದರಿಂದ ಕಾಲೇಜುಗಳು ತಮ್ಮ ಶೈಕ್ಷಣಿಕ ಅಗತ್ಯಗಳನ್ನು (ವಾಣಿಜ್ಯ, ಕಲೆ, ವಿಜ್ಞಾನ, ಶಿಕ್ಷಣ ಇತ್ಯಾದಿ) ಆಧರಿಸಿ, ತಮ್ಮ ತಜ್ಞತೆಯನ್ನು ಬಳಸಿಕೊಳ್ಳಬಹುದಾಗಿದೆ.

ಸಿ) ಕಾಲೇಜುಗಳು ಮತ್ತು ಸ್ವಾಯತ್ತ ಕಾಲೇಜುಗಳಲ್ಲಿ ಶೈಕ್ಷಣಿಕ ಮೂಲಸೌಕರ್ಯಗಳನ್ನು ಒದಗಿಸಲು ಎಐಸಿಟಿಇ, ಎಂಸಿಐ, ಬಿಸಿಐ ಅಡಿಯಲ್ಲಿರುವ ವಿಶ್ವವಿದ್ಯಾಲಯಗಳನ್ನು ತಜ್ಞ ಸಂಸ್ಥೆಗಳಾಗಿ ಸೇರಿಸಿಕೊಳ್ಳಬಹುದು.

ಡಿ) ಐಐಟಿಗಳು, ಐಐಐಟಿಗಳು, ಐಐಎಸ್ಸಿ ಮತ್ತು ಇತರ ರಾಷ್ಟ್ರೀಯ ಸಂಸ್ಥೆಗಳು ರಾಷ್ಟ್ರೀಯ ವಿಶ್ವವಿದ್ಯಾಲಯಗಳನ್ನು ರಾಷ್ಟ್ರೀಯ ಮತ್ತು ಜಾಗತಿಕ ಪ್ರಯತ್ನಗಳೊಂದಿಗೆ ಕೈಜೋಡಿಸಲು ಸಹಾಯ ಮಾಡುವಂತೆ ಕೇಳಿಕೊಳ್ಳಬಹುದು. ಒಂದು ವೇಳೆ ಅಗತ್ಯ ಬಿದ್ದರೆ, ಕೆಎಸ್‌ಎಚ್‌ಇಸಿ ಜೊತೆಗೂಡಿ ರಾಜ್ಯ ಸರಕಾರಗಳು ಈ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನೂ ಮಾಡಿಕೊಳ್ಳಬಹುದು. 21ನೇ ಶತಮಾನದ ಜ್ಞಾನ ಆಧರಿತ ಆರ್ಥಿಕತೆಯನ್ನು ನಿರ್ಮಿಸುವ ಅಗಾಧ ಸಾಮರ್ಥ್ಯವನ್ನು ಹೊಂದಿರುವ, ರಾಷ್ಟ್ರೀಯ, ಶೈಕ್ಷಣಿಕ ಮತ್ತು ಜಾಗತಿಕವಾಗಿ ಸೂಕ್ಷ್ಮ ವಿಷಯಗಳಿಗೆ ಅವರ ಶೈಕ್ಷಣಿಕ ಚಟುವಟಿಕೆಗಳ ದೃಷ್ಟಿಕೋನಕ್ಕೆ ಅನುಗುಣವಾಗಿ ಸ್ಪಂದಿಸುವ ಉನ್ನತ ಶಿಕ್ಷಣ ಸಂಸ್ಥೆಗಳು ನೀಡುವ ಮಾರ್ಗದರ್ಶನ ಅಮೂಲ್ಯವಾಗಿರುತ್ತದೆ.

ಮಾರ್ಗದರ್ಶನಕ್ಕೆ ಈಗಾಗಲೇ ಹೇಳಿರುವ ಸಮಗ್ರ ವಿಧಾನವು ವಿಶಾಲ, ವೈವಿಧ್ಯ ಮಾರ್ಗದರ್ಶನ ವ್ಯವಸ್ಥೆ ಕೇವಲ ವಿದ್ಯಾರ್ಥಿಗಳನ್ನು ಮಾತ್ರವಲ್ಲದೆ ಎಲ್ಲಾ ಹಂತದ ಶಿಕ್ಷಣ ಸಂಸ್ಥೆಗಳನ್ನೂ ಮರುಪೂರಣ ಮಾಡುವ ಸಂಪೂರ್ಣ ಸಾಮರ್ಥ್ಯಕ್ಕೆ ಬಳಸುವ ಸೃಜನಶೀಲ ಪರಿಹಾರವಾಗಿದೆ.

ಈಗ ತಿಳಿಸಿರುವ ಸಂಗತಿಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯ ಪರಿಶೀಲನೆಯ ಚೌಕಟ್ಟಿನೊಳಗೆ ಸಹಕಾರಿ ಕ್ರಮದಲ್ಲಿ ಅಭಿವೃದ್ಧಿ ಪಡಿಸಿದರೆ ಮತ್ತು ಕಾರ್ಯಗತಗೊಳಿಸಿದರೆ ಕೆಜಿಯಿಂದ ಪಿಜಿಯವರೆಗೆ ಎಲ್ಲಾ ಹಂತದ ಶಿಕ್ಷಣವನ್ನು ಮರುಪೂರಣ ಮಾಡುವ ಎಲ್ಲ ಸಾಮರ್ಥ್ಯವನ್ನು ಹೊಂದಿದೆ. ಜೊತೆಗೆ ಈ ಮಾದರಿ ಇತರ ರಾಜ್ಯಗಳಿಗೂ ಅನುಕರಣೀಯವಾಗಿದೆ.

ಲೇಖಕರು: ಪ್ರೊ. ಎಂ. ಆರ್.ದೊರೆಸ್ವಾಮಿ,
ಪಿ.ಇ.ಎಸ್. ವಿಶ್ವವಿದ್ಯಾಲಯದ ಕುಲಪತಿ ಮತ್ತು
ಕರ್ನಾಟಕ ಸರ್ಕಾರದ ಶಿಕ್ಷಣ ಸುಧಾರಣೆಯ ಸಲಹೆಗಾರರು.
ಆಧಾರ:ವಿಜಯವಾಣಿ, ದಿನಾಂಕ:08.06.2020.

## 9. ಪಕ್ಷಾಂತರ ಪಿಡುಗು–ಸಮ್ಮಿಶ್ರ ಸರ್ಕಾರದ ಗೊಣಗು

ಪಕ್ಷಾಂತರದ ಪಿಡುಗು ನಮ್ಮ ರಾಜಕೀಯ ಜೀವನಕ್ಕೆ ಅಂಟಿಕೊಂಡಿದೆ. ಪಕ್ಷಾಂತರವಿಲ್ಲದೇ ರಾಜಕೀಯವಿಲ್ಲ ಎನ್ನುವಂತಾಗಿದೆ. ಪಕ್ಷಾಂತರ ಒಂದು ರಾಜಕೀಯ ಮೌಲ್ಯಗಳಿಗಾಗಿ ಆಗುವಂಥ ವಿಷಯವಲ್ಲ. ರಾಜಕೀಯ ಮೌಲ್ಯಗಳನ್ನು ಪರಿಪಾಲಿಸುವುದನ್ನು ರಾಜಕಾರಣಿಗಳು ಎಂದೋ ಗಾಳಿಗೆ ತೂರಿದ್ದಾರೆ. ಪಕ್ಷಾಂತರಗಳು ಹಣದ ಆಮಿಷಕ್ಕೆ ಒಳಗಾಗಿಯೋ ಅಥವಾ ಪದವಿ ಆಮಿಷಕ್ಕೆ ಒಳಗಾಗಿಯೇ ಆಗುತ್ತದೆಯೇ ವಿನಹ ಯಾವೊಬ್ಬ ರಾಜಕಾರಣಿಯು ತನ್ನ ರಾಜಕೀಯ ಮೌಲ್ಯಗಳನ್ನು ಬದಲಾಯಿಸಿಕೊಂಡ ಎಂಬುದಕ್ಕಾಗಿ ಅಲ್ಲ. ಸ್ವಾತಂತ್ರ್ಯನಂತರ ನಮ್ಮ ದೇಶವು ಪ್ರಜಾಪ್ರಭುತ್ವ ಗಣರಾಜ್ಯವಾಗಿ ಹೊರಹೊಮ್ಮಿತು. ನಮ್ಮ ದೇಶದ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಬಹು ಪಕ್ಷದ ಆಳ್ವಿಕೆ ಅವಶ್ಯಕತೆ ಇರಲಿಲ್ಲ. ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಬಹು ಮತವನ್ನು ಸ್ಥಾಪಿಸುತ್ತಾ ಒಮ್ಮತದ ಪಕ್ಷವಾಗಿ ಹೊರಹೊಮ್ಮಿತು. ಆದರೆ ಈ ಪರಿಸ್ಥಿತಿ ಬಹುಕಾಲ ಉಳಿಯಲಿಲ್ಲ. 1967ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಗಳ ನಂತರ ಚಿತ್ರ ಬದಲಾವಣೆಯಾಯಿತು. ಕಾಂಗ್ರೆಸ್ ಪಕ್ಷ ಅನೇಕ ರಾಜ್ಯಗಳಲ್ಲಿ ಬಹುಮತ ಗಳಿಸಲಾರದೇ ಹೋಯಿತು. ಆದರೆ ಇತರ ಯಾವ ಒಂದು ಪಕ್ಷವು ಬಹುಮತ ಗಳಿಸುವುದರಲ್ಲಿ ವಿಫಲವಾಯಿತು. ಇದುವರೆವಿಗೂ ವಿರೋಧಪಕ್ಷವಾಗಿದ್ದ ಅನೇಕ ಪಕ್ಷಗಳು ಒಟ್ಟುಗೂಡಿ ಕಿಚಡಿ ಸರ್ಕಾರಗಳನ್ನು ರಚಿಸಲು ಮುಂದೆ ಬಂದವು. ಈ ಬೆಳವಣಿಗೆಯೊಂದಿಗೆ ಶುರುವಾಯಿತು ಸಮ್ಮಿಶ್ರ ಸರ್ಕಾರಗಳು ಮತ್ತು ಪಕ್ಷಾಂತರದ ಆವಾಂತರ.

ಹರಿಯಾಣ ರಾಜ್ಯದಲ್ಲಿ ಶಾಸಕನಾಗಿ ಚುನಾಯಿತನಾಗಿದ್ದ ಗಯಾಲಾಲ್ ಎಂಬ ಶಾಸಕನು 1967ನೇ ವರ್ಷದಲ್ಲಿ ಒಂದೇ ದಿನ 3 ಸಲ ಪಕ್ಷ ಬದಲಾಯಿಸಿದನು. ಇದರೊಂದಿಗೆ ಶುರುವಾಯಿತು ಆಯಾರಾಂ ಗಯಾರಾಂ ಪರಿಪಾಠ. ಪಕ್ಷಾಂತರದ ಪಿಡುಗಿನ ಆವಾಂತರ ಮನವರಿಕೆಯಾಯಿತು. ಇದನ್ನು ತಡೆಗಟ್ಟುವುದು ಹೇಗೆ ಎನ್ನುವುದರ ಬಗ್ಗೆ ಚರ್ಚೆ ವಿಮರ್ಶೆಗಳಾಯಿತು. ಇದೆಲ್ಲಾ ಚರ್ಚೆಗಳ ರೂಪುರೇಖೆ ಪಡೆದು ಕಾನೂನಾಗಿ ಹೊರಹೊಮ್ಮಲು ವಿಮರ್ಶೆಗಳಾಯಿತು. ಇದಕ್ಕೆಲ್ಲಾ 18 ವರ್ಷಗಳ ಸುದೀರ್ಘ ಸಮಯವೇ ಹಿಡಿಯಿತು. ಸಂವಿಧಾನದ ತಿದ್ದುಪಡಿಯ ಮೂಲಕ 10ನೇ ಪರಿಚ್ಛೇಧವನ್ನು ಸೇರಿಸಲಾಯಿತು. ಸಂವಿಧಾನದ ಆರ್ಟಿಕಲ್ಸ್ 102 ಮತ್ತು 190ರಲ್ಲಿ ಸೂಕ್ತ ಬದಲಾವಣೆಗಳನ್ನು ಸೇರಿಸಲಾಯಿತು. ಸಂವಿಧಾನದ 10ನೇ ಪರಿಚ್ಛೇಧದಲ್ಲಿ ಇಂತಹ ಪಕ್ಷಾಂತರಿಗಳಿಗೆ ಯಾವ ರೀತಿಯ ಶಿಕ್ಷೆಯನ್ನು ನೀಡಬೇಕು, ಯಾವ ಸಂದರ್ಭದಲ್ಲಿ ಏನು ಕ್ರಮ ಕೈಗೊಳ್ಳಬೇಕು ಎಂಬುದು ನಿರ್ದಿಷ್ಟಪಡಿಸಲಾಯಿತು. ಇದರ ಪ್ರಕಾರ ಪಕ್ಷಾಂತರ ಮಾಡುವ ಶಾಸಕರು ತಮ್ಮ ಶಾಸಕ ಪದವಿಯಿಂದ ಅನೂರ್ಜಿತಗೊಳ್ಳುತ್ತಾರೆಂದು ಸೂಚಿಸಲಾಯಿತು. ಹಾಗೆಯೇ ಶಾಸಕರು ಯಾವುದಾದರೂ ಹುದ್ದೆಯನ್ನು ತಮ್ಮ ಶಾಸಕ ಸ್ಥಾನದಿಂದ ಪಡೆದಿದ್ದರೆ ಅದರಿಂದಲೂ ಅನರ್ಹತೆಗೊಳಿಸಿ, ಅವರನ್ನು ಮಂತ್ರಿ ಪದವಿಯನ್ನೋ ಅಥವಾ ಇನ್ನಿತರೇ ಶಾಸಕಾಂಗ ಪದವಿಗಳಿಂದಲೋ ಅನೂರ್ಜಿತಗೊಳಿಸುವ ಅಧಿಕಾರವನ್ನು ನಮ್ಮ ಸಂವಿಧಾನದಲ್ಲಿ ಶಾಸನ ಸಭೆಯ ಸಭಾಪತಿ (ಸ್ಪೀಕರ್)ಗೆ ನೀಡಲಾಯಿತು. ಹಾಗೆಯೇ ಸಂಸತ್ತಿನಲ್ಲೂ ಸಂಸದರಾಗಿರುವ ವ್ಯಕ್ತಿಗಳು ಪಕ್ಷಾಂತರ ಅಪರಾಧ ಎಸಗಿದಲ್ಲಿ ಅವರನ್ನೂ ಸಹ ಅನೂರ್ಜಿತಗೊಳಿಸುವ ಅಧಿಕಾರ ಲೋಕಸಭೆ ಅಥವಾ ರಾಜ್ಯಸಭೆಯ ಸಭಾಪತಿಗೆ ನೀಡಲಾಗಿದೆ. ಇಲ್ಲಿ ಒಂದು ಸ್ವಾರಸ್ಯಕರ ಅಂಶವೆಂದರೆ ಶಾಸಕರನ್ನು ಅನರ್ಹತೆಗೊಳಿಸುವ ವಿಷಯದಲ್ಲಿ ಶಾಸಕಾಂಗ ಸಭೆಯ ಸಭಾಪತಿಯ ತೀರ್ಪೇ ಕೊನೆಯದೆಂದೂ, ಇದರ ಮಧ್ಯೆ ಪ್ರವೇಶಿಸುವುದಕ್ಕಾಗಲಿ, ಪರೀಕ್ಷೆಗೆ ಒಳಪಡಿಸುವುದಾಗಲಿ ಯಾವ ನ್ಯಾಯಾಲಯದ ವ್ಯಾಪ್ತಿಗೂ ಬರುವುದಿಲ್ಲವೆಂದು ಹೇಳಲಾಗಿದೆ. ಸಂವಿಧಾನದಲ್ಲಿ ಶಾಸಕರನ್ನು ಅನರ್ಹತೆ ಮಾಡುವ 10ನೇ ಪರಿಚ್ಛೇಧದಲ್ಲಿ ಹೊಸದಾಗಿ ಸೇರಿಸಲಾದ ವಿಷಯವನ್ನು ಸಂವಿಧಾನಕ್ಕೆ ವಿರೋಧವಾಗಿದೆ ಎಂದೂ ಮತ್ತು ಅಂತಹ ತೀರ್ಪನ್ನು ಪರೀಕ್ಷೆಗೆ ತೆಗೆದುಕೊಳ್ಳುವುದಿಲ್ಲ ಎಂಬ ವಿಷಯವನ್ನು ಪರಮೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಲಾಯಿತು. ಇದು ಶಾಸಕರ ಸ್ವಾತಂತ್ರ್ಯವನ್ನು, ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಅವರು ಮುಕ್ತರಾಗಿರುವುದಿಲ್ಲವೆಂದು ವಾಗ್ವಾದ ಮಾಡಲಾಯಿತು. ಇದನ್ನು ಒಂದು ಸಾರ್ವಜನಿಕ ಹಿತಾಸಕ್ತಿಯ ಕಟ್ಟಳೆ ಎಂಬುದಾಗಿ 1992ನೇ ಇಸವಿಯಲ್ಲಿ ದಾಖಲಿಸಲಾಯಿತು. ಕಿಹ್ತೋ ಹಾಲೋಹಾನ್–ವಿ–ಜಚಿಲ್ಲು ಮತ್ತು ಇತರರು ಎಂಬ ಕಟ್ಟಳೆಯಲ್ಲಿ ಪರಮೋಚ್ಚ ನ್ಯಾಯಾಲಯವು ಈ ಪ್ರಶ್ನೆಗಳನ್ನು ಪರಿಶೀಲಿಸಿ ಸಂವಿಧಾನಕ್ಕೆ 10ನೇ ಪರಿಚ್ಛೇಧವನ್ನು ಸೇರಿಸಿರುವ ಬದಲಾವಣೆ ಸಂವಿಧಾನಾತ್ಮಕವಾಗಿದೆ ಎಂದು ತೀರ್ಪಿತ್ತಿತು. ಆದರೆ, ಶಾಸಕಾಂಗ ಸಭೆಯ ಸಭಾಪತಿಯ ಅಪ್ಪಣೆ ಕೊನೆಯದಲ್ಲವೆಂದು ಇದನ್ನು ಉಚ್ಚ ನ್ಯಾಯಾಲಯಗಳು ಮತ್ತು ಪರಮೋಚ್ಚ ನ್ಯಾಯಾಲಯ ಆರ್ಟಿಕಲ್ಸ್ 226 ಮತ್ತು 32ರ ತಮ್ಮ ರಿಟ್ ವ್ಯಾಪ್ತಿಯೊಳಗೆ ಪರಿಶೀಲನೆ ಮಾಡಬಹುದೆಂದು ತೀರ್ಪಿತ್ತಿತು. ಇದಾದ ನಂತರ

ಅನೇಕ ಪ್ರಕರಣಗಳನ್ನು ಉಚ್ಚ ನ್ಯಾಯಾಲಯಗಳು ಮತ್ತು ಪರಮೋಚ್ಚ ನ್ಯಾಯಾಲಯವು ನಡೆಸಿ ಅನೇಕ ತೀರ್ಪುಗಳು ಹೊರಹೊಮ್ಮಿವೆ. ಈ ತೀರ್ಪುಗಳ ಪ್ರಕಾರ ಶಾಸಕಾಂಗ ಸಭೆಯ ಸಭಾಪತಿಯ ತೀರ್ಪು ಕೊನೆ ಮತ್ತು ಇತರ ನ್ಯಾಯಾಲಯಗಳು ಅದನ್ನು ಪರಿಶೀಲಿಸುವಂತಿಲ್ಲ. ಆದರೆ, ಉಚ್ಚ ನ್ಯಾಯಾಲಯಗಳು ಮತ್ತು ಪರಮೋಚ್ಚ ನ್ಯಾಯಾಲಯವು ತಮ್ಮ ರಿಟ್ ವ್ಯಾಪ್ತಿಯಲ್ಲಿ ಅದನ್ನು ಪರಿಶೀಲನೆಗೆ ಒಳಪಡಿಸಬಹುದು. ಶಾಸಕಾಂಗ ಸಭೆಯ ಸಭಾಪತಿಯ ತೀರ್ಪಿಗೆ ನಿರ್ದಿಷ್ಟ ಕಾಲವನ್ನು ನಿಗದಿಪಡಿಸುವಂತಿಲ್ಲ. ಆದರೆ, ಅವರು ಒಂದು ಸಮಂಜಸವಾದ ಸಮಯದೊಳಗೆ ತಮ್ಮ ತೀರ್ಪನ್ನು ತಿಳಿಯಪಡಿಸಬೇಕು. ಶಾಸಕಾಂಗ ಸಭೆಯ ಸಭಾಪತಿಯ ಮುಂದೆ ಯಾರಾದರೂ ಇತರೇ ಶಾಸಕರು ಅರ್ಜಿ ಸಲ್ಲಿಸಿದರೆ ಮಾತ್ರ ಅನರ್ಹತೆಯ ವಿಚಾರವನ್ನು ತೆಗೆದುಕೊಳ್ಳಬಹುದು. ಅನರ್ಹತೆಯ ಅವಧಿಯನ್ನು ನಿಗದಿಪಡಿಸುವಂತಿಲ್ಲ. ಅದು ಸಂವಿಧಾನ ಹೇಳಿದಂತೆ ಆಗಬೇಕು. ಆದರೆ ಪಕ್ಷಾಂತರ ಪಿಡುಗನ್ನು ತಪ್ಪಿಸಬೇಕೆಂದು ಅದನ್ನು ಅಪರಾಧವೆಂದು ಅನರ್ಹತೆಯನ್ನು ಉಂಟುಮಾಡುತ್ತದೆ ಎಂದು ತಿಳಿಸುವ ಸಂವಿಧಾನದ 10ನೇ ಪರಿಚ್ಛೇಧದ ಕಾನೂನು ಮತ್ತು ಈ ಅಧಿಕಾರವನ್ನು ಉಪಯೋಗಿಸಿಕೊಂಡು ಶಾಸಕಾಂಗ ಸಭೆಯ ಸಭಾಪತಿಗಳು ಶಾಸಕರನ್ನು ಅನರ್ಹತೆಗೊಳಿಸಿರುವ ಅಪ್ಪಣೆಗಳನ್ನು ಮಾಡಿದ್ಯಾಗ್ಯೂ ಮತ್ತು ಇಂತಹ ಅಪ್ಪಣೆಗಳನ್ನು ಉಚ್ಚ ನ್ಯಾಯಾಲಯ ಮತ್ತು ಪರಮೋಚ್ಚ ನ್ಯಾಯಾಲಯಗಳಲ್ಲಿ ಪ್ರಶ್ನಿಸಿದ್ದರೂ, ಅವುಗಳ ಮೇಲೆ ತೀರ್ಪುಗಳನ್ನು ನೀಡಿದ್ದರೂ, ಪಕ್ಷಾಂತರದ ಪಿಡುಗನ್ನೂ ಕಾನೂನಿನ ಮೂಲಕ ಪರಿಣಾಮಕಾರಿಯಾಗಿ ತಡೆಗಟ್ಟುವುದು ಸಾಧ್ಯವಾಗಿಲ್ಲ. ನೇರವಾಗಿ ಮಾಡಲಾಗದ ಪಕ್ಷಾಂತರವನ್ನು ಸುತ್ತು ಬಳಸು ದಾರಿಯಲ್ಲಿ ಬಂದು ಅದನ್ನು ಉಪಯೋಗಿಸಿ ಮತ್ತೆ ಅಧಿಕಾರವನ್ನು ಏರುತ್ತಿರುವ ನಮ್ಮ ಶಾಸಕರ ನಡೆಗಳು ಪಕ್ಷಾಂತರ ತಡೆಯ ಕಾನೂನಿನ ಒಂದು ವಿಡಂಬನೆಯೇ ಸರಿ. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ನಡೆದ ರಾಜಕೀಯ ಬೆಳವಣಿಗೆಗಳನ್ನು ಅವಲೋಕಿಸಿದರೆ ಹೇಗೆ ಕಾಂಗ್ರೆಸ್ ಪಕ್ಷದ ಶಾಸಕರು ತಮ್ಮ ನಿಷ್ಠೆಯನ್ನು ಉಳಿಸಿಕೊಂಡರೂ ವಿಧಾನಸಭಾ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಆಡಳಿತ ಪಕ್ಷವು ಹೇಗೆ ಅಲ್ಪಸಂಖ್ಯಾತರ (ಮೈನಾರಿಟಿ) ಸ್ಥಾನಕ್ಕೆ ಇಳಿಯುವಂತೆ ಮಾಡಿ ಅದು ಅಧಿಕಾರವನ್ನು ಕಳೆದುಕೊಳ್ಳುವುದಕ್ಕೆ ಕಾರಣರಾದರು ಮತ್ತು ಈ ಬೆಳವಣಿಗೆಯಿಂದ ಬಹುಮತ ಇಲ್ಲದಿದ್ದರೂ ಬಿಜೆಪಿ ಪಕ್ಷದವರು ಬಹು ಹೆಚ್ಚು ಮತಗಳ ಏಕ ಪಕ್ಷವಾಗಿ ಹೊರಹೊಮ್ಮಿ, ಇಳುವರಿ ಸಂಖ್ಯೆಯ ಶಾಸನ ಸಭೆಯಲ್ಲಿ ತಮ್ಮ ಬಹುಮತವನ್ನು ಸ್ಥಾಪಿಸಿ ಅಧಿಕಾರಕ್ಕೆ ಬಂದಿದ್ದು, ಒಂದು ವಿಪರ್ಯಾಸವೇ ಸರಿ. ಇದೆಲ್ಲಾ ಬೇಳವಣಿಗೆಗಳ ಮುಕುಟಮಣಿಯಾಗಿ ರಾಜೀನಾಮೆ ಕೊಟ್ಟ ಶಾಸಕರು ಉಪ ಚುನಾವಣೆಗಳಲ್ಲಿ (ಬೈ–ಎಲೆಕ್ಷನ್) ಬಿಜೆಪಿ ಪಕ್ಷದ ಪರವಾಗಿ ಜಯ ಸಾಧಿಸಿ ಮತ್ತೊಮ್ಮೆ ಶಾಸಕಾಂಗ ಸಭೆಯನ್ನು ಪ್ರವೇಶಿಸಿ ಈಗ ಮಂತ್ರಿಗಳೂ ಆಗಿರುವುದು ವಿಪರ್ಯಾಸದ ಸಂಗತಿಯೇ ಸರಿ. ಈ ಬೆಳವಣಿಗೆ ನಮ್ಮ ಪಕ್ಷಾಂತರ ವಿರೋಧಿ ಕಾನೂನು ಹೇಗೆ ಪರಿಣಾಮಕಾರಿಯಾಗಿಲ್ಲ ಎಂಬ ಅಂಶವನ್ನು ನಿರೂಪಿಸುತ್ತದೆ.

ಲೇಖಕರು: ಡಿ.ವಿ.ಶೈಲೇಂದ್ರ ಕುಮಾರ್,
ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ,
ಆಧಾರ:ಸಂಯುಕ್ತ ಕರ್ನಾಟಕ, ದಿನಾಂಕ: 10.06.2020

## 10. ನಾಡು ಕಟ್ಟುವವರ ನಡುವೆ ದಕ್ಷ ಸಮುದಾಯ

1916 ನವೆಂಬರ್ 20 ರಂದು ಬ್ರಿಟಿಷ್ ಚಕ್ರಾಧಿಪತ್ಯದ ಭಾಗವಾಗಿದ್ದ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಜಸ್ಟೀಸ್ ಪಾರ್ಟಿ ಎನ್ನುವ ರಾಜಕೀಯ ಸಂಘಟನೆಯೊಂದು ಆರಂಭಗೊಂಡಿತ್ತು. ರಾಜಕಾರಣವೂ ಸೇರಿದಂತೆ ಆಡಳಿತ ವ್ಯವಸ್ಥೆಯ ಉನ್ನತ ಸ್ಥಾನಗಳಲ್ಲಿ ಬ್ರಾಹ್ಮಣ ಸಮುದಾಯವೇ ಪ್ರಭುತ್ವ ಸಾಧಿಸಿದೆ. ಆ ಬ್ರಾಹ್ಮಣರಿಗೆ ಅವಕಾಶವೇ ಇಲ್ಲ. ಪ್ರಸಕ್ತ ಹಿನ್ನೆಲೆಯಲ್ಲಿ ಅ ಬ್ರಾಹ್ಮಣರಿಗೆ ಸಾರ್ವಜನಿಕ ಬದುಕಿನ ಎಲ್ಲಾ ನೆಲೆಗಳಲ್ಲಿ ನ್ಯಾಯಾಯುತ ಅವಕಾಶ ದೊರೆಯಬೇಕು ಎನ್ನುವ ಬೇಡಿಕೆಯೊಡನೆ ಆರಂಭಗೊಂಡದ್ದೇ ಜಸ್ಟೀಸ್ ಪಾರ್ಟಿ. ಡಾ: ಸಿ ನಟೇಸ ಮೊದಲಿಯಾರ್, ತ್ಯಾಗರಾಜ ಚೆಟ್ಟಿ, ಟಿ. ಎಂ. ನಟೇಸನ್, ಇ.ವಿ. ರಾಮಸ್ವಾಮಿ ನಾಯ್ಕರ್ ಮುಂತಾದವರು ಪಾರ್ಟಿಯನ್ನು ಹುಟ್ಟು ಹಾಕಿದರು. ಇದು ಹೆಚ್ಚು ಕಡಿಮೆ ಮೈಸೂರು ರಾಜ್ಯವೂ ಸೇರಿದಂತೆ ದಕ್ಷಿಣ ಭಾರತದಾದ್ಯಂತ ಬ್ರಾಹ್ಮಣ ವಿರೋಧಿ ಅಂದೋಲನವನ್ನು ಯಶಸ್ವಿಯಾಗಿ ಸಂಘಟಿಸಿತ್ತು . ಜಸ್ಟಿಸ್ ಪಾರ್ಟಿಯ ಸ್ಥಾಪಕರ ಉದ್ದೇಶ ಆಶಯಗಳೇನೇ ಇರಬಹುದು, ಕರ್ನಾಟಕದ ಮಟ್ಟಿಗೆ ಬ್ರಾಹ್ಮಣ ಸಮುದಾಯ ದಕ್ಷತೆ, ಪ್ರಾಮಾಣಿಕತೆ ಮತ್ತು ಸಮರ್ಪಣಾ ಮನೋಭಾವದಿಂದ ನಾಡು ಕಟ್ಟುವ ಕಾಯಕದಲ್ಲಿ ಮಹತ್ವದ ಕೊಡುಗೆ ನೀಡಿರುವುದು ಸತ್ಯ.

ಹರಿದು ಹಂಚಿಹೋಗಿದ್ದ ಕರ್ನಾಟಕ ಒಂದುಗೂಡುವುದಕ್ಕೆ ಮೊದಲು ಅವರವರದೇ ಭೌಗೋಳಿಕ ನೆಲೆಗಳಲ್ಲಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ ಸರ್ವಮಾನ್ಯ ಆಡಳಿತಗಾರರಲ್ಲಿ ದಿವಾನ್ ಪೂರ್ಣಯ್ಯ ಮೊದಲಿಗರು. ಕೊಯಮತ್ತೂರಿನಲ್ಲಿ ಜನಿಸಿದ್ದ ಪೂರ್ಣಯ್ಯ , ಹೈದರಾಲಿ, ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ್ದರು. 1799ರ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಮಡಿದ ನಂತರ ಮೈಸೂರೂ ರಾಜ್ಯದ ಅಧಿಕಾರ ಸೂತ್ರ ಹಿಡಿದ ಮಹಾರಾಣಿ ಲಕ್ಷ್ಮೀ ಅಮ್ಮಣಿಯವರ ದಿವಾನರಾಗಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್, ಆಗಿನ್ನೂ ಅಪ್ರಾಪ್ತರಾಗಿದ್ದದರಿಂದ ಅವರಿಗೆ ಬಾಲ್ಯದಿಂದಲೇ ಆಡಳಿತ ತರಬೇತಿ ನೀಡಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಪ್ರೌಢಾವಸ್ಥೆ ತಲುಪಿ ಅಧಿಕಾರ ಸೂತ್ರ ಹಿಡಿದ ಒಂದೆರಡು ವರ್ಷಗಳ ನಂತರ ದಿವಾನ್ ಪೂರ್ಣಯ್ಯ ನಿವೃತ್ತಿ ಹೊಂದಿದ್ದರು. ತಮ್ಮ ಇಪ್ಪತ್ತೊಂಭತ್ತು ವರ್ಷಗಳ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಮಹತ್ವದ ಕೊಡುಗೆಗಳನ್ನು ನೀಡಿದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್ ಉತ್ತರಾಧಿಕಾರಿಯಾಗೀ ಅಧಿಕಾರ ಸೂತ್ರ ಹಿಡಿದ ಚಾಮರಾಜ ಒಡೆಯರ್ ಅವರಿಗೆ ಮೊತ್ತಮೊದಲ ದಿವಾನರಾಗಿದ್ದವರು, ರಂಗಾಚಾರ್ಲು ಇವರ ಆಡಳಿತಾವಧಿಯಲ್ಲಿಯೇ ಮೈಸೂರಿನ ರಾಜಪ್ರಭುತ್ವ ಜನ ಪ್ರಭುತ್ವಕ್ಕೆ ನಾಂದಿ ಹಾಡಿತ್ತು. ಆಖಂಡ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಎನ್ನುವ ಪರಿಕಲ್ಪನೆ ಮೈಸೂರು ರಾಜ್ಯದಲ್ಲಿ ಸಾಕಾರಗೊಂಡಿತ್ತು. ರಂಗಾಚಾರ್ಲು ನಿಧನ ಹೊಂದಿದ ನಂತರ ದಿವಾನರಾಗಿ ಅಧಿಕಾರ ಸೂತ್ರ ಹಿಡಿದವರು ಶೇಷಾದ್ರಿ ಆಯ್ಯರ್. ಹದಿನೆಂಟು (1883–1901) ವರ್ಷಗಳ ಸುದೀರ್ಘ ಅವಧಿ ಆಡಳಿತ ನಡೆಸಿದ ಹೆಗ್ಗಳಿಕೆ ಇವರದು. ನವ ಬೆಂಗಳೂರು ನಿರ್ಮಾತೃ ಎನ್ನುವ ಖ್ಯಾತಿ ಗಳಿಸಿದ ಶೇಷಾದ್ರಿ ಆಯ್ಯರ್ ಆಡಳಿತಾವಧಿಯಲ್ಲಿ ಕೋಲಾರ ಚಿನ್ನದ ಗಣಿ ಪ್ರಾರಂಭ ಆಯಿತು. ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಶಿವನಸಮುದ್ರದಲ್ಲಿ ಏಷ್ಯಾ ಖಂಡದ ಪ್ರಥಮ ಜಲವಿದ್ಯುತ್ ಕೇಂದ್ರ. ಚಿತ್ರದುರ್ಗದಲ್ಲಿ ವಾಣಿ ವಿಲಾಸ ಸಾಗರ ಸ್ಥಾಪನೆಯೂ ಸೇರಿದಂತೆ ಆನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದರು. ಇವರ ನಿವೃತ್ತಿಯ ನಂತರ ವಿ.ಪಿ. ಮಾಧವ ರಾವ್, ಟಿ ಅನಂದ ರಾವ್ ದಿವಾನರಾಗಿದ್ದರು.

ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ದಿಗೆ ಪೂರಕವಾಗಿ ಸ್ಪಂದಿಸುವ ಸಮರ್ಥ ಆಡಳಿತಗಾರನೊಬ್ಬನ ಹುಡುಕಾಟದಲ್ಲಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿದ್ದರು. ಅದೇ ಸಂದರ್ಭದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯ ತಮಿಳು ಬ್ರಾಹ್ಮಣರಿಗೇ ಮೈಸೂರು ದಿವಾನರಾಗುವ ಅವಕಾಶ ದೊರೆಯುತ್ತಿದೆ. ಮೈಸೂರು ರಾಜ್ಯದ ಕನ್ನಡಿಗ ಬ್ರಾಹ್ಮಣರಿಗೆ ದೊರೆಯುತ್ತಿಲ್ಲ ಎನ್ನುವ ಗೊಣಗಾಟ ಆರಂಭವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ 1909ರಲ್ಲಿ ಮೊದಲು ಮೈಸೂರು ರಾಜ್ಯದ ಚೀಫ್ ಎಂಜಿನಿಯರ್ ಆಗಿ ನಂತರ 1912ರಲ್ಲಿ ದಿವಾನರಾಗಿ ಅಧಿಕಾರ ಸೂತ್ರ ಹಿಡಿದವರು ಮೋಕ್ಷಗುಂಡಂ ವಿಶ್ವೇಶ್ವರಯ್ಯ, Industrialise or Perish ಎನ್ನುವ ಘೋಷವಾಕ್ಯದೊಡನೆ ಕ್ರಿಯಾಶೀಲರಾದ ವಿಶ್ವೇಶ್ವರಯ್ಯ ನೀರಾವರಿ, ವಿದ್ಯುತ್, ಶಿಕ್ಷಣ, ಮೂಲಭೂತ ಸೌಕರ್ಯ, ಕೈಗಾರಿಕೆ ಹೀಗೆ ಎಲ್ಲಾ ಕ್ಷೇತ್ರಗಳ ಅಭಿವೃದ್ದಿಗೆ ವಿಶೇಷ ಅದ್ಯತೆ ನೀಡುವ ಮೂಲಕ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿಸಿದ್ದರು. ಕೃಷ್ಣರಾಜ ಸಾಗರ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಮೈಸೂರು ವಿಶ್ವ ವಿದ್ಯಾಲಯ, ಮೈಸೂರು ಬ್ಯಾಂಕ್, ಎಂಜಿನಿಯರಿಂಗ್ ಕಾಲೇಜು, ಇಂಡಿಯನ್ ಇನ್ಸ್ ಟಿಟ್ಯೂಟ್

ಆಫ್ ಸೈನ್ಸ್, ರೈಲ್ವೇ ಅಭಿವೃದ್ದೀ ಹೀಗೆ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಯ ಪರ್ವ ವಿಶ್ವೇಶ್ವರಯ್ಯನವರಿಂದ ಆರಂಭಗೊಂಡಿತ್ತು. 1919ರಲ್ಲಿ ಅವಕಾಶ ವಂಚಿತರಿಗೆ ಮೀಸಲಾತಿ ನೀಡಬೇಕು ಎನ್ನುವ ವಿಷಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೊತೆ ಸೃಷ್ಠಿಯಾದ ಸೈದ್ಧಾಂತಿಕ ಭಿನ್ನಮತದ ಪರಿಣಾಮ ವಿಶ್ವೇಶ್ವರಯ್ಯನವರು ದಿವಾನ್ ಪದವಿಗೆ ರಾಜೀನಾಮೆ ನೀಡಿದ್ದರು. ನಂತರ, ಎನ್. ಮಾಧವರಾವ್ ಅವರು ದಿವಾನರಾಗಿದ್ದರು.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಆಖಂಡ ಕರ್ನಾಟಕ ರಚನೆಗಾಗಿ ಬ್ರಾಹ್ಮಣ ಸಮುದಾಯದ ಅಗ್ರಗಣ್ಯರು ತಮ್ಮ ಬದುಕನ್ನೇ ಮುಡುಪಾಗಿಸಿಕೊಂಡಿದ್ದರು. 1890ರಲ್ಲಿಯೇ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘ ಸ್ಥಾಪಿಸಿದ ರಾ.ಹ. ದೇಶಪಾಂಡೆಯವರಿಂದ ಆರಂಭಗೊಂಡು, ಕನ್ನಡ ಕುಲಪುರೋಹಿತ ಆಲೂರು ವೆಂಕಟಟರಾವ್ ಅವರಿಂದ ಮುಂದುವರಿದು, ಶ್ರೀರಂಗಸ್ವಾಮಿ, ರಮಾನಂದ ತೀರ್ಥ, ದಿಗಂಬರ್ ರಾವ್ ಕಲ್ಮಣಕರ್, ಗಂಗಾಧರ ರಾವ್ ದೇಶಪಾಂಡೆ, ರಂಗನಾಥ ರಾಮಚಂದ್ರ ದಿವಾಕರ, ಕಪಟರಾಳ ಕೃಷ್ಣರಾವ್, ಕೆ. ಆರ್. ಕಾರಂತ, ಕಡಪಾ ರಾಘವೇಂದ್ರ ರಾವ್, ಶಾಮರಾವ್ ವಿಠಲ ಕೈಕಿಣಿ, ದಿನಕರ ದೇಸಾಯಿ, ರೊದ್ದಶ್ರೀನಿವಾಸ ರಾವ್, ಮುದವೀಡು ಕೃಷ್ಣರಾವ್, ಹಾರ್ನಳ್ಳಿ ರಾಮಸ್ವಾಮಿ ಹೀಗೆ ಇನ್ನೂ ಆನೇಕ ಬ್ರಾಹ್ಮಣ ಸಮುದಾಯದ ಆಗ್ರಗಣ್ಯರು ಹಿಂದಿನ ಹೈದರಾಬಾದ್ ಕರ್ನಾಟಕ ಮತ್ತು ಮುಂಬೈ ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ಏಕೀಕರಣ ಕಿಚ್ಚನ್ನು ಜೀವಂತವಾಗಿರಿಸಿದರು.

ಸ್ವಾತಂತ್ರ್ಯ ನಂತರ ಪಂಡಿತ್ ನೆಹರು ರಚಿಸಿದ ಜವಾಬ್ದಾರಿ ಸರ್ಕಾರದಲ್ಲಿ ಅಪ್ಪಟ ಗಾಂಧಿವಾದಿ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದ ರಂಗನಾಥ ರಾಮಚಂದ್ರ ದಿವಾಕರ್ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದರು. ಸಂವಿಧಾನ ರಚನಾ ಸಮಿತಿಯ ಸದಸ್ಯರೂ ಆಗಿದ್ದರು. ಮುಂಬೈ ರಾಜ್ಯದಿಂದ ರಾಜ್ಯ ಸಭೆಗೆ ಆಯ್ಕೆಗೊಂಡಿದ್ದರು. ಮೈಸೂರು ರಾಜ್ಯದಲ್ಲಿ ಕೆ. ಚೆಂಗಲರಾಯ ರೆಡ್ಡಿಯವರ ಸರ್ಕಾರದಲ್ಲಿ ಕೆ.ಟಿ. ಭಾಷ್ಯಂ ಆಯ್ಯಂಗಾರ್, ಕೆಂಗಲ್ ಹನುಂಮಂತಯ್ಯನವರ ಸರ್ಕಾರದಲ್ಲಿ ಎ.ಜಿ. ರಾಮಚಂದ್ರ ರಾವ್ ಏಕೀಕರಣದ ನಂತರ ರಚನೆಗೊಂಡ ನಿಜಲಿಂಗಪ್ಪನವರ ಸಂಪುಟದಲ್ಲಿ ಜಗನ್ನಾಥ್ ರಾವ್ ಚಂದ್ರಿಕೆ ಎಂ.ವಿ. ರಾಮರಾವ್, ಬಸಪ್ಪ ದಾನಪ್ಪ ಜತ್ತಿಯವರ ಸಂಪುಟದಲ್ಲಿ ತಾಳಿಕೆರೆ ಸುಬ್ರಹ್ಮಣ್ಯ ಸಚಿವರಾಗಿದ್ದರು. ಆರವತ್ತರ ದಶಕದ ಅವಧಿಯಲ್ಲಿ ಬ್ರಾಹ್ಮಣ ಸಮುದಾಯದ ಅತ್ಯಂತ ವರ್ಣರಂಜಿತ ರಾಜಕಾರಣಿ ಆಗಿದ್ದವರು ರಾಮಕೃಷ್ಣ ಹೆಗಡೆ, ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲರ ಸಂಪುಟದಲ್ಲಿ ಹೆಚ್ಚುಕಡಿಮೆ ಹತ್ತು ವರ್ಷ ಅತ್ಯಂತ ಪ್ರಭಾವಿ ಸಚಿವರಾಗಿದ್ದ ಹೆಗಡೆ, ನಿಜಲಿಂಗಪ್ಪನವರ ನೀಲಿಕಣ್ಣಿನ ಹುಡುಗ ಆಗಿದ್ದರು. ತುರ್ತು ಪರಿಸ್ಥಿತಿ ವಿರೋಧಿಸಿ ಜೈಲುವಾಸ ಅನುಭವಿಸಿದ್ದರು. ನಂತರ ಜನತಾಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಆಗಿದ್ದರು. 1983 ಮತ್ತು 1985 ರಲ್ಲಿ ಎರಡು ಬಾರಿ ಕರ್ನಾಟಕ ಮುಖ್ಯಮಂತ್ರಿಯಾಗಿದ್ದರು. ಕೇಂದ್ರ ಸಚಿವರಾಗಿದ್ದರು, ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು. ಮೌಲ್ಯಧಾರಿತ ರಾಜಕಾರಣಕ್ಕೆ ಒತ್ತು ನೀಡಿದ್ದ ಹೆಗಡೆ, 1988ರಲ್ಲಿ ಟೆಲಿಫೋನ್ ಕದ್ದಾಲಿಕೆ ಪ್ರಕರಣ ನೈತಿಕ ಹೊಣೆಗಾರಿಕೆ ಹೊತ್ತು ಮುಖ್ಯಮಂತ್ರಿ ಪದತ್ಯಾಗ ಮಾಡಿದ್ದರು, ಹೆಗಡೆಯವರ ರೀತಿಯಲ್ಲಿಯೇ ಮಧುಗಿರಿಯಲ್ಲಿ ಕೃಷಿಕರು, ಕೃಷಿ ಕಾರ್ಮಿಕರ ಹೆಣ್ಣು ಮಕ್ಕಳ ಮೇಲೆ ಪೊಲೀಸರು ನಡೆಸಿದ ದೌರ್ಜನ್ಯದ ನೈತಿಕ ಹೊಣೆಗಾರಿಕೆ ಹೊತ್ತು ನಿಜಲಿಂಗಪ್ಪನವರ ಸಂಪುಟದಲ್ಲಿ ಗೃಹ ಸಚಿವರಾಗಿದ್ದ ಎಂ.ವಿ. ರಾಮರಾವ್ ಸಚಿವ ಪದವಿಗೆ ರಾಜೀನಾಮೆ ನೀಡಿದ್ದರು.

ಎಪ್ಪತ್ತರ ದಶಕದಲ್ಲಿ ದೇವರಾಜ ಅರಸು ಸಂಪುಟದಲ್ಲಿ ಬದರಿ ನಾರಾಯಣ ಆಯ್ಯಂಗಾರ್, ಗುಂಡೂರಾವ್ ಮತ್ತು ಕೆ. ಹೆಚ್. ಶ್ರೀನಿವಾಸ್ ಸಂಪುಟ ದರ್ಜೆ ಸಚಿವರಾಗಿದ್ದರು. ಗುಂಡೂರಾವ್ ಶಾಸಕರಾಗಿ ಆಯ್ಕೆಗೊಂಡ ಎಂಟು ವರ್ಷಗಳ ಅವಧಿಯಲ್ಲಿಯೇ ಮುಖ್ಯಮಂತ್ರಿ ಗಾದಿಗೇರಿದ್ದರು. ಕರ್ನಾಟಕದಲ್ಲಿ ಬ್ರಾಹ್ಮಣರು ಮುಖ್ಯಮಂತ್ರಿ ಆಗಲು ಸಾಧ್ಯವೇ ಇಲ್ಲ ಎನ್ನುವಂತಿದ್ದ ನಂಬಿಕೆಯನ್ನು ಸುಳ್ಳು ಮಾಡಿ ಇಂದಿರಾ ಗಾಂಧಿ ಆರ್ಶೀವಾದದಿಂದ ಮುಖ್ಯಮಂತ್ರಿ ಗಾದಿಗೇರಿದ್ದರು. ಆಷ್ಟೇ ಬೇಗ ಆನೇಕ ವಿವಾದಾತ್ಮಕ ನಿರ್ಧಾರಗಳಿಂದ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರ ಕಳೆದುಕೊಂಡು, ಪ್ರಥಮ ಕಾಂಗ್ರೆಸ್ಸೇತರ ಸರ್ಕಾರ ಬರಲು ಕಾರಣಕರ್ತರಾದರು. 1989ರಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸಂಸತ್ ಪ್ರವೇಶಿಸಿದ್ದರು. ಬ್ರಾಹ್ಮಣ ಸಮುದಾಯದ ರಾಜಕಾರಣಿಗಳಲ್ಲಿ ಪ್ರಸ್ತಾಪಿಸಲೇ ಬೇಕಾದ ಇನ್ನೊಂದು ಹೆಸರು ಆರ್. ವಿ. ದೇಶಪಾಂಡೆ, ರಾಮಕೃಷ್ಣ ಹೆಗಡೆಯವರ ಕೃಪಾಕಟಾಕ್ಷದಿಂದ ರಾಜಕಾರಣದ ಅಂಗಳ ಪ್ರವೇಶಿಸಿದವರು ದೇಶಪಾಂಡೆ 1986 ರಲ್ಲಿ ಮಿನಿಸ್ಟರ್ ಆಫ್ ಸ್ಟೇಟ್ ಆಗಿ ಹೆಗಡೆ ಸಂಪುಟ ಪ್ರವೇಶಿಸಿ ಬೊಮ್ಮಾಯಿ, ದೇವೇಗೌಡ, ಜೆ.ಹೆಚ್.ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಸಿದ್ಧರಾಮಯ್ಯನವರ ಸಂಪುಟದವರೆಗೆ ಏಳು ಸಂಪುಟಗಳಲ್ಲಿ

ಇಪ್ಪತ್ತೆರಡು ವರ್ಷಗಳಿಗೂ ಹೆಚ್ಚು ಕಾಲ ಸಚಿವರಾಗಿದ್ದು ದಾಖಲೆ. ಎಸ್. ಎಂ. ಕೃಷ್ಣ, ಸಂಪುಟದಲ್ಲಿ ಬಿ.ಕೆ. ಚಂದ್ರಶೇಖರ್ ಸಚಿವರಾಗಿದ್ದರು. ಸದ್ಯ ಕೇಂದ್ರದಲ್ಲಿ ಪ್ರಹ್ಲಾದ್ ಜೋಷಿ, ಯಡಿಯೂರಪ್ಪನವರ ಸರ್ಕಾರದಲ್ಲಿ ಸುರೇಶ್ ಕುಮಾರ್ ಸಚಿವರಾಗಿದ್ದರೆ, ವಿಶ್ವೇಶ್ವರ ಹೆಗಡೆ ಕಾಗೇರಿ ಸ್ಪೀಕರ್ ಆಗಿದ್ದಾರೆ. ಇವರ ಜೊತೆಗೆ ಎರಡು ಅವಧಿಗೆ ರಮೇಶ್ ಕುಮಾರ್, ಒಂದು ಅವಧಿ ವೈಕುಂಠ ಬಾಳಿಗ ವಿಧಾನ ಸಭೆಯ ಸ್ಪೀಕರ್ ಆಗಿದ್ದರು. ಡಿ.ಬಿ. ಕಲ್ಮಣಕರ್ ವಿಧಾನ ಪರಿಷತ್ ಸಭಾಪತಿ ಆಗಿದ್ದರು.

ಕರ್ನಾಟಕ ಕಂಡ ಬ್ರಾಹ್ಮಣ ಸಮುದಾಯದ ಇನ್ನೊಬ್ಬ ವರ್ಣರಂಜಿತ ರಾಜಕಾರಣಿ ಅನಂತಕುಮಾರ್, ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ರೂಪುಗೊಂಡ ಅನಂತಕುಮಾರ್, ಕರ್ನಾಟಕದಲ್ಲಿ ಭಾಜಪ ಕಟ್ಟುವ ಪ್ರಕ್ರಿಯೆಯಲ್ಲಿ ಯಡಿಯೂರಪ್ಪನವರಿಗೆ ಹೆಗಲಿಗೆ ಹೆಗಲಾಗಿ ದುಡಿದವರು. 1996 ರಿಂದ 2014ರವರೆಗೆ ಬೆಂಗಳೂರೂ ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸತತ ಆರು ಬಾರಿ ಲೋಕಸಭಾ ಸದಸ್ಯರಾಗಿದ್ದರು. 1998 ರಿಂದ 2019ರವರೆಗೆ ನರೇಂದ್ರ ಮೋದಿಯವರ ಸಂಪುಟದಲ್ಲಿ ಸಚಿವರಾಗಿದ್ದರು. ದಕ್ಷ ಹಾಗೂ ಚಾಣಾಕ್ಷ ರಾಜಕಾರಣಿ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅನಂತ ಕುಮಾರ್ 2004 ರಲ್ಲಿ ಭಾಜಪ ರಾಜಾಧ್ಯಕ್ಷರಾಗಿದ್ದರು. ಕರ್ನಾಟಕದ ಮುಖ್ಯಮಂತ್ರಿ ಆಗುವ ಮಹತ್ವಾಕಾಂಕ್ಷೆ ಅವರಿಗಿತ್ತು. 2004ರಲ್ಲಿ ಭಾಜಪಗೆ ಬಹುಮತ ಬಂದಿದ್ದರೆ, ಅನಂತ ಕುಮಾರ್ ಕರ್ನಾಟಕದ ಮೂರನೇ ಬ್ರಾಹ್ಮಣ ಮುಖ್ಯಮಂತ್ರಿ ಆಗುತ್ತಿದ್ದರು. ಅವರ ಮಹಾತ್ವಾಕಾಂಕ್ಷೆ ಈಡೇರಲಿಲ್ಲ.

ಲೇಖಕರು ಮಹದೇವ್ ಪ್ರಕಾಶ್,
ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರು
ಆಧಾರ: ವಿಜಯ ಕರ್ನಾಟಕ, ದಿನಾಂಕ:24.06.2020

## 11. ಕೆಂಪೇಗೌಡ ಪ್ರತಿಮೆ – ನುಡಿದಂತೆ ನಡೆದ ಸರ್ಕಾರ

ಭಾರತದ ರಾಜಕಾರಣದಲ್ಲಿ ಬೆಂಗಳೂರಿಗೆ ವಿಶಿಷ್ಟ ಸ್ಥಾನವಿದೆ. ಉದ್ಯಾನವನಗಳ ನಗರ ಎಂದು ಪ್ರಖ್ಯಾತಿ ಪಡೆದಿರುವ ಬೆಂಗಳೂರು, ಕರ್ನಾಟಕವಷ್ಟೆ ಅಲ್ಲದೇ ಭಾರತದ ಎಲ್ಲ ಭಾಗಗಳ ಜನರಿಗೆ ಎಲ್ಲಾ ಕಾಲಕ್ಕೂ ಆಕರ್ಷಕವಾಗಿ ಕಾಣುವ ನಗರವಾಗಿದೆ. ಕ್ರಿ.ಶ.890ರಲ್ಲಿ ಬೆಂಗಳೂರಿಗೆ ಸಮೀಪದ ಬೇಗೂರಿನ ನಾಗೇಶ್ವರ ದೇವಸ್ಥಾನದಲ್ಲಿ ದೊರೆತ ಶಾಸನದಲ್ಲಿ ಬೆಂಗಳೂರಿನ ಭವ್ಯ ಇತಿಹಾಸದ ಹೆಜ್ಜೆ ಗುರುತುಗಳನ್ನು ಕಾಣಬಹುದು. ಕ್ರಿ.ಶ.1537ರಲ್ಲಿ ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜ ಕೆಂಪೇಗೌಡ ಬೆಂಗಳೂರಿನಲ್ಲಿ ಮಣ್ಣಿನ ಕೋಟೆಯನ್ನು ಸ್ಥಾಪಿಸುವುದರ ಮೂಲಕ ಬೆಂಗಳೂರನ್ನು ಅತ್ಯಂತ ಸುಸಜ್ಜಿತವಾಗಿ ರೂಪಿಸುವ ಚಿಂತನೆಗೆ ಚಾಲನೆ ನೀಡಿದ್ದರು.

ಬೆಂಗಳೂರು ಸಾಮಾಜಿಕವಾಗಿ, ಆರ್ಥಿಕವಾಗಿ ತನ್ನ ವಿಶೇಷ ಆದ್ಯತೆಯನ್ನು ಮೈಗೂಡಿಸಿಕೊಂಡಿತ್ತು. ಕೆಂಪೇಗೌಡ ಕೃಷಿಗೆ ವಿಶೇಷ ಅದ್ಯತೆಯನ್ನು ನೀಡುವ ಸಲುವಾಗಿ ಬೆಂಗಳೂರು ಮತ್ತು ಇದರ ಆಸುಪಾಸಿನಲ್ಲಿ ಬೃಹತ್ತಾದ ಕೆರೆಗಳನ್ನು ಸ್ಥಾಪನೆ ಮಾಡಿದ್ದರು. ಆ ಕಾಲದಲ್ಲಿಯೂ ಒಂದು ಕೆರೆ ತುಂಬಿ ಕೋಡಿ ಬಿದ್ದರೆ ಆ ಕೋಡಿ ಬಿದ್ದ ನೀರು ನೇರವಾಗಿ ಮತ್ತೊಂದು ಕೆರೆಗೆ ತಲುಪುತ್ತಿತ್ತು. ಆ ಕೆರೆ ತುಂಬಿ ತುಳುಕಾಡಿದಾಗ ಅಲ್ಲಿ ಕೋಡಿ ಬಿದ್ದ ನೀರು ಹರಿಯುತ್ತ ಮತ್ತೊಂದು ಕೆರೆ ತುಂಬುತ್ತಿತ್ತು. ಹೀಗೆ ಬೆಂಗಳೂರು ಮತ್ತು ಇದರ ಸುತ್ತ ಮುತ್ತಲಿನ ನೂರಾರು ಕೆರೆಗಳು ತುಂಬಿ ತುಳುಕಾಡುವ "ನೀರು–ಸರಪಳಿ" ತಂತ್ರಜ್ಞಾನವನ್ನು ಕೆಂಪೇಗೌಡರು ಆ ಕಾಲದಲ್ಲಿ ಅಭಿವೃದ್ಧಿಪಡಿಸಿದ್ದರು. ಇದರ ಪರಿಣಾಮ ಬೆಂಗಳೂರು ಸೇರಿದಂತೆ ಇದರ ಆಸುಪಾಸಿನ ಎಲ್ಲ ಪ್ರದೇಶಗಳಲ್ಲಿ ಸಮೃದ್ಧ ಕೃಷಿ ಚಟುವಟಿಕೆ ಸದಾ ಜೀವಂತವಾಗಿರುತ್ತಿತ್ತು.

ಇಂಥದ್ದೊಂದು ಬೆಂಗಳೂರನ್ನು ಸ್ಥಾಪಿಸಿದ ಕೆಂಪೇಗೌಡರ ನೆನಪು ನೂರು ವರ್ಷಗಳ ಕಾಲ ಚಿರಸ್ಥಾಯಿಯಾಗಿ ಉಳಿಯಬೇಕು. ವಿಶ್ವದ ಮೂಲೆ ಮೂಲೆಯಿಂದ ಬೆಂಗಳೂರಿಗೆ ಆಗಮಿಸುವ ಜನರು, ಯಾರು ಈ ಕೆಂಪೇಗೌಡ ಎನ್ನುವುದನ್ನು ಅರಿತುಕೊಳ್ಳಬೇಕು. ಈ ಮೂಲಕ ಬೆಂಗಳೂರಿನ ಪರಂಪರೆ, ಇತಿಹಾಸ, ಸಂಸ್ಕೃತಿ, ಜನ ಜೀವನ ಮೂಲೆ ಮೂಲೆಗಳಲ್ಲಿ ತಲುಪಿಸಬೇಕೆನ್ನುವ ದೃಷ್ಟಿಯಿಂದ ನನ್ನ ಸರ್ಕಾರ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎದುರು 23 ಎಕರೆ ಪ್ರದೇಶದಲ್ಲಿ ಬೃಹತ್ತಾದ ಕೆಂಪೇಗೌಡ ಪ್ರತಿಮೆಯನ್ನು ಸ್ಥಾಪಿಸುತ್ತಿದೆ. ಅಲ್ಲಿ ಬೆಂಗಳೂರಿನ ಇತಿಹಾಸ, ಪರಂಪರೆ ಇವುಗಳನ್ನು ಪರಿಚಯಿಸುವ ಮುದ್ರಣ, ದೃಶ್ಯ, ಶ್ರವ್ಯ ವಿಭಾಗಗಳು ತಲೆ ಎತ್ತಲಿವೆ.

ಇದು ಕೇವಲ ನಾಡನ್ನು ಸುಭಿಕ್ಷವಾಗಿ ಆಳಿದ ವ್ಯಕ್ತಿಯ ಸ್ಮಾರಕ ಮಾತ್ರವಲ್ಲ. ಈ ಜಗತ್ತು ಇರುವವರೆಗೂ ಮಾಸಿಹೋಗದಂತೆ ನಾಡೊಂದನ್ನು ಕಟ್ಟಿಕೊಟ್ಟ ಮಹಾನ್ ಶಕ್ತಿಯ ನೆನಪನ್ನು ಜೀವಂತವಾಗಿಸುವ ಸ್ಮಾರಕ. ಇಂಥ ಭವ್ಯ ಸ್ಮಾರಕ ನಿರ್ಮಾಣ ಮಾಡುವ ಮೂಲಕ ನನ್ನ ಸರ್ಕಾರ ನುಡಿದಂತೆ ನಡೆದಿದೆ. ರಣಭೈರೇಗೌಡರ ವಂಶೀಕರಾದ ಒಂದನೇ ಕೆಂಪೇಗೌಡ, ಬೆಂಗಳೂರು ನಿರ್ಮಾತೃ ಕೆಂಪೇಗೌಡ, ಧರ್ಮದುರಂದರ ಕೆಂಪೇಗೌಡ ಇತ್ಯಾದಿಯಾಗಿ ಜನ ಮನ್ನಣೆಯನ್ನು ವಿಜಯನಗರ ಸಾಮ್ರಾಜ್ಯದ ಮೇಲೆ ಪರಮ ನಿಷ್ಠೆಯನ್ನು ಹೊಂದಿದ್ದ ಇವರು ದೂರದೃಷ್ಟಿಯಿಂದ ಕಿ.ಶ. 1530 ರಲ್ಲಿ ಆರಂಭಿಸಿ, ನಾಲ್ಕೇ ವರ್ಷಗಳ ಅವಧಿಯಲ್ಲಿ ಬೆಂಗಳೂರು ಎಂಬ ಸುಸಜ್ಜಿತ ಪಟ್ಟಣ ಕಟ್ಟಿದ್ದರು.

ಮೊರಸು ಒಕ್ಕಲಿಗರಾದ ರಣಭೈರೇಗೌಡರು ತಮ್ಮ ಏಳು ಮಂದಿ ಸೋದರರು, ಪತ್ನಿ ಮತ್ತು ಮಗಳೊಡನೆ ನೆರೆ ರಾಜ್ಯದ ಯಣಮುಂಜಿ ಪುತ್ತೂರಿನಿಂದ ಚಿಕ್ಕಬಳ್ಳಾಪುರದ ಆವತಿಗೆ ಬಂದರು ಎಂಬಂತೆಯೇ, ಇದು ಸರಿಯಲ್ಲ ,ಇವರು ಸ್ಥಳೀಕರು ಎಂಬ ವಾದಗಳು ಇತಿಹಾಸತಜ್ಞರಲ್ಲಿವೆ.

ಆವತಿ ನಾಡು ಕಟ್ಟಿದ ರಣಭೈರೇಗೌಡರ ಪುತ್ರ ಜಯಪ್ಪಗೌಡ (ಜಯಗೌಡ)ರು ತಮ್ಮ ಕಾಲದಲ್ಲಿ ಯಲಹಂಕವನ್ನು ರಾಜಧಾನಿ ಮಾಡಿಕೊಂಡರು (ಕ್ರಿ.ಶ.1418) ನಂತರ ಪಟ್ಟಕ್ಕೇರಿದ ಇವರ ಪುತ್ರ ಗಿಡ್ಡೇಗೌಡ, ಆನಂತರ ಪಟ್ಟಕ್ಕೇರಿದ ಇವರ ಪುತ್ರ ಕೆಂಪನಂಜೇಗೌಡರು ಜನಾನುರಾಗಿಗಳು ಎಂಬುದು ದಾಖಲಾಗಿದೆ.

ಕೆಂಪನಂಜೇಗೌಡ–ಲಿಂಗಮಾಂಬೆ ಪುತ್ರರಾಗಿ ಜನಸಿದ ಒಂದನೇ ಕೆಂಪೇಗೌಡರು (1513) ತಮ್ಮ ಹಿರೀಕರಂತೆಯೇ ಹಂಪಿ ಸಾಮ್ರಾಜ್ಯದ ನಿಷ್ಠರಾಗಿ ಜನಪ್ರಿಯತೆಯ ಉತ್ತುಂಗವನ್ನೇರಿದ್ದರು. ಅಂದಿನ ಹಂಪಿ ವೈಭವವನ್ನು ಕಣ್ಣಾರೆ ಕಂಡು ಅಂಥದ್ದೇ ನಗರವನ್ನು ತಾನು ಕಟ್ಟಬೇಕು ಎಂಬ ಮಹದಾಸೆಯನ್ನು

ಕಾರ್ಯಗತಗೊಳಿಸಲು ಅವಿರತವಾಗಿ ಯತ್ನಿಸಿದ್ದರ ಫಲವಾಗಿಯೇ ಬೆಂಗಳೂರು ಸುಸಜ್ಜಿತ ನಗರವಾಗಿ ಮೈದಾಳಿ ನಿಂತಿತ್ತು.

ಚಿಕ್ಕಪೇಟೆ – ದೊಡ್ಡಪೇಟೆ ಸಂಧಿಸುವ ಸ್ಥಳದಲ್ಲಿ ಎತ್ತುಗಳಿಗೆ ನೇಗಿಲು ಹೂಡಿ, ಅವು ಎಲ್ಲಿಯವರೆಗೆ ಸಾಗಿದ್ದವೋ ಆದನ್ನೇ ಬೆಂಗಳೂರು ಸರಹತ್ತುಗಳಾಗಿ ಗುರುತಿಸಿದ್ದರು. ಪೂರ್ವಕ್ಕೆ ಹಲಸೂರು, ಪಶ್ಚಿಮಕ್ಕೆ ಸೊಂಡೇಕೊಪ್ಪ (ಅರಳೇಪೇಟೆ ಅಂಚು), ಉತ್ತರಕ್ಕೆ ಯಲಹಂಕ ಬಾಗಿಲು (ಮೈಸೂರು ಬ್ಯಾಂಕ್) ದಕ್ಷಿಣಕ್ಕೆ ಕೋಟೆ ಬಾಗಿಲು (ಸಂಜಯ ಚಿತ್ರಮಂದಿರ) ಇವು ಆಗಿನ ಗಡಿಯಾಗಿದ್ದವು ಅತಿ ಸಣ್ಣ ಜನಾಂಗವೂ ಸೇರಿದಂತೆ ಸಕಲ ಜಾತಿ ವರ್ಗ ಸಮುದಾಯವನ್ನೂ ಸಮಾನ ದೃಷ್ಟಿಯಿಂದ ನೋಡಿದ್ದರಿಂದಾಗಿಯೇ ಮಗ್ಗದವರಿಗೆ ಅರಳೇ ಪೇಟೆ, ಅರಿಸಿನ ಕುಂಕುಮ ಬಳೆ ಮಾರುವವರಿಗೆ ಬಳೇಪೇಟೆ, ಸಗಟು ವ್ಯಾಪಾರಿಗಳಾಗಿ ದೊಡ್ಡಪೇಟೆ, ಚಿಲ್ಲರೆ ವ್ಯಾಪಾರಿಗಳಿಗಾಗೀ ಚಿಕ್ಕಪೇಟೆ, ಅಕ್ಕಿ ಮಾರುವವರಿಗೆ ಅಕ್ಕಿಪೇಟೆ, ರಾಗಿ ಮಾರುವವರಿಗೆ ರಾಗಿ ಪೇಟೆ, ಕುಂಬಾರರಿಗೆ ಕುಂಬಾರ ಪೇಟೆ ಹೀಗೇ ಹತ್ತು ಹಲವು ವ್ಯವಸ್ಥೆಗಳನ್ನೂ ಹೊಸ ಬೆಂಗಳೂರಿನಲ್ಲಿ ಕೆಂಪೇಗೌಡರು ಮಾಡಿದ್ದರು.

ತೆರಿಗೆ ಸಂಗ್ರಹದಲ್ಲೂ ಸುಧಾರಿತ ಕ್ರಮ ಅನುಸರಿಸುತ್ತಿದ್ದ ಕೆಂಪೇಗೌಡರು ಯಲಹಂಕದಿಂದ ಬೆಂಗಳೂರಿಗೆ ರಾಜಧಾನಿ ಸ್ಥಳಾಂತರಿಸಿಕೊಂಡರೂ, ಆಡಳಿತ ಸುಧಾರಣೆಗಾಗಿ ಬೆಂಗಳೂರು ರಾಮಗಿರಿ ಮತ್ತು ಹುತ್ರಿದುರ್ಗ ಎಂಬ ಪ್ರದೇಶಗಳನ್ನು ವಿಕೇಂದ್ರಿಕರಣಗೊಳಿಸಿದ್ದರು. ಶಿವಗಂಗೆಯಲ್ಲಿ ಖಜಾನೆ ಇರಿಸಿದ್ದ ಕೆಂಪೇಗೌಡರು, ರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವುದಕ್ಕಾಗಿ ರಾಮನಗರ ಬಳಿ ರಾಮಗಿರಿ (ಕಾರ್ಖಾನೆ ಪಾಳ್ಯ)ಯಲ್ಲಿ ಮದ್ದುಗುಂಡುಗಳ ತಯಾರಿಕೆ, ಭದ್ರತೆಗಾಗಿ ಕೋಟೆ ನಿರ್ಮಾಣ ಮಾಡಿ ಅತ್ಯುತ್ತಮ ಪಹರೆ ವ್ಯವಸ್ಥೆ ಜಾರಿಗೊಳಿಸಿದ್ದರು.

ಕುಡಿಯುವ ಮತ್ತು ವ್ಯವಸಾಯದ ನೀರಿಗಾಗಿ ಕೆಂಪಾಂಬುಧಿ (ಗವೀಪುರಂ) ಕೆರೆ, ಧರ್ಮಾಂಬುಧಿ ಕೆರೆ (ಬಸ್ಸ್ ನಿಲ್ದಾಣ). ಸಂಪಂಗಿ ಕೆರೆ, ಗಿಡ್ಡಪ್ಪನ ಕೆರೆ ಕೋರಮಂಗಲ, ಆಡುಗೋಡಿ, ದೊಮ್ಮಲೂರು ಬೆಳ್ಳಂದೂರು ಕೆರೆ, ವರ್ತೂರು ಅಣೆಕಟ್ಟೆ, ಶಿವಗಂಗೆಯಲ್ಲಿ ನೀರು ಸಂಗ್ರಹಣಾ ವ್ಯವಸ್ಥೆ ಹೀಗೇ ಹಲವಾರೂ ನೀರಾವರಿ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದರು.

ಬೆಂಗಳೂರಿನಲ್ಲೇ ರಾಜರ ವಾಸಸ್ಥಳ ಮತ್ತು ಸಾರ್ವಜನಿಕರ ವಾಸಸ್ಥಳವನ್ನು ಗುರುತಿಸಿದ್ದ ಕೆಂಪೇಗೌಡರು ಅನೇಕಾನೇಕ ದೇವಾಲಯಗಳನ್ನು ನಿರ್ಮಿಸಿ, ಪುನರುಜ್ಜೀವನಗೊಳಿದ್ದರು, ಕಾಲುವೆ ಕಟ್ಟೆಗಳ ನಿರ್ವಹಣೆ, ದೇವಾಲಯಗಳ ನಿರ್ವಹಣೆ, ಕೂಲಿ, ಮಠ ಮತ್ತು ಪ್ರಸಾದ ನೀಡುವ ಹೊಣೆಯನ್ನು ಗ್ರಾಮ ಪಂಚಾಯಿತಿಗಳಿಗೆ ವಹಿಸಿದ್ದು, ಅವರ ಚಿಂತನಶೀಲತೆಗೆ ಹಿಡಿದ ಕೈಗನ್ನಡಿಯಾಗಿದೆ.

ನಾಡಪ್ರಭು ಕೆಂಪೇಗೌಡರು ಬದುಕಿದ್ದು ನಿಖರವಾಗಿ ಎಷ್ಟು ವರ್ಷ ಎಂಬುದರ ಬಗ್ಗೆ ಒಮ್ಮತವಿಲ್ಲ. 1510 ರವರೆಗೆ, 1569 ರವರೆಗೆ, 1570 ರವರೆಗೆ, 1527ರವರೆಗೆ ಬದುಕಿದ್ದರು ಎಂಬ ತರ್ಕಗಳಿವೆ, ಹೀಗಾಗಿ ಇವರ ದೇಹಾಂತ್ಯದ ಬಗ್ಗೆ ಒಮ್ಮತದ ಆಂತಿಮ ದಿನಾಂಕ ಗೊತ್ತಿಲ್ಲಾದರೆ ಅವರು ದೂರದೃಷ್ಟಿಯಿಂದ ಸಕಲ ವ್ಯವಸ್ಥೆಗಳನ್ನೂ ಕಲ್ಪಿಸಿ, ನಿರ್ಮಿಸಿದ್ದ ಬೆಂಗಳೂರು ನಗರ ಸೂರ್ಯಚಂದ್ರ ಇರುವ ತನಕ ಹೇಗೆ ಜೀವಂತವಾಗಿ ನಳನಳಿಸುತ್ತಿರುವುದೋ ಅದರ ಜೊತೆಯಲ್ಲಿ ಕೆಂಪೇಗೌಡರ ಹೆಸರೂ ಕೂಡ ಉಳಿದೇ ಇರುತ್ತೇ, ಬೆಳೆಯುತ್ತಲೇ ಇರುತ್ತೆ. ದೂರದೃಷ್ಟಿಯ ನಾಯಕರ ಅಚ್ಚಳಿಯದ ನೆನಪಿನ ಸರಮಾಲೆಗೆ ನಮ್ಮದೊಂದು ಸಣ್ಣ ಕಾಣಿಕೆಯಾಗಿ 'ಕೆಂಪೇಗೌಡ ಪ್ರತಿಮೆ' ಗೆ ಅಸ್ತಿಭಾರ ಹಾಕುತ್ತಿದ್ದೇನೆ.

ಲೇಖಕರು–ಬಿ.ಎಸ್. ಯಡಿಯೂರಪ್ಪ,
ಮಾನ್ಯ ಮುಖ್ಯಮಂತ್ರಿಗಳು
ಆಧಾರ:ಉದಯವಾಣಿ, ದಿನಾಂಕ:27.06.2020

## 12. ಬೆಂಗಳೂರು ಕಟ್ಟಿದ ಕೆಂಪೇಗೌಡರ ಮೌಲ್ಯ ಚಿರಸ್ಥಾಯಿಯಾಗಬೇಕು

ಬೆಂಗಳೂರು ನಿರ್ಮಾತೃ ಕೆಂಪೇಗೌಡರನ್ನು ಪ್ರತಿಯೊಬ್ಬರೂ ಸ್ಮರಿಸುವುದು ಸಹಜವೇ. ಆದರೆ ಅವರ ಆಡಳಿತ ಅಭಿವೃದ್ಧಿಯ ದೃಷ್ಟಿ ಕೃಷಿಗೆ ನೀಡಿದ ಮಹತ್ವ ಸ್ಮರಣೀಯ. ನಾಡಪ್ರಭು ಕೆಂಪೇಗೌಡರ ಜಯಂತಿ ಮತ್ತೆ ಬಂದಿದೆ. ಕೇವಲ ಜಯಂತಿಯಂದು ಮಾತ್ರವಲ್ಲದೆ, ನಾಡಿನ ಪ್ರತಿಯೊಬ್ಬರೂ ಅನುದಿನವೂ ಸ್ಮರಿಸಬೇಕಾದ ಪ್ರಾತ:ಸ್ಮರಣೀಯರಲ್ಲಿ ಅಗ್ರಮಾನ್ಯರು ನಮ್ಮ ನಾಡಪ್ರಭುಗಳು. ಅಪ್ರತಿಮ ಆಡಳಿತಗಾರರೂ, ಪ್ರಖರ ದೂರದೃಷ್ಟಿಯುಳ್ಳವರೂ ಆಗಿದ್ದ ಅವರು, ಐದು ಶತಮಾನಗಳ ಹಿಂದೆ ಕಟ್ಟಿದ ಬೆಂಗಳೂರೆಂಬ ಕನಸಿನ ನಗರಿಯಲ್ಲಿ ನಾವೆಲ್ಲರೂ ಇದ್ದೇವೆ. ನಾನು ಅವರ ಪ್ರಭಾವದಲ್ಲೇ ಇದ್ದೇನೆ ಮಾತ್ರವಲ್ಲದೇ, ಅದೆಷ್ಟೋ ವಿಷಯಗಳ ಬಗ್ಗೆ ಚಕಿತನಾಗಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪ ಅವರು ನನಗೆ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷ ಸ್ಥಾನ ನೀಡಿ ನಾಡಪ್ರಭುಗಳ ವಿಷಯದಲ್ಲಿ ಆಗಬೇಕಿರುವ ಎಲ್ಲ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕೆಂದು ಸೂಚಿಸಿದ್ದನ್ನು ಶಿರಸಾವಹಿಸಿ ಮಾಡುತ್ತಿದ್ದೇನೆ. ಮೂಲತ: ಪ್ರಭುಗಳ ವೀರಸಮಾಧಿಯುಳ್ಳ ಕೆಂಪಾಪುರಕ್ಕೆ ಅನತಿದೂರದ ಗ್ರಾಮದಲ್ಲಿ ಹುಟ್ಟಿದ ನಾನು ಬಾಲ್ಯದಿಂದಲೇ ಪ್ರಭುಗಳ ಕಥೆಗಳನ್ನು ಅವರ ಸಾಹಸಗಾಥೆಗಳನ್ನು ಕೇಳುತ್ತ ಬೆಳೆದವನು. ನಮ್ಮ ತಾಯಿ–ತಂದೆ ಹೇಳುತ್ತಿದ್ದ ಕಥೆಗಳು ನನ್ನ ಸ್ಮೃತಿಪಟಲದಲ್ಲಿ ಪಟ್ಟಾಗಿ ಅಚ್ಚೊತ್ತಿದೆ.

ಜೀವನದಲ್ಲಿ ನನ್ನ ಪಯಣದ ಪಥಗಳೂ ಬದಲಾಗುತ್ತಿದ್ದಂತೆಯೇ ನನಗೆ ಕೆಂಪೇಗೌಡರ ಕುರಿತಾದ ಆಸಕ್ತಿ, ಅವರ ಬಗ್ಗೆ ಅಧ್ಯಯನಶೀಲತೆ ಉತ್ಕಟತೆಯೂ ಹೆಚ್ಚಾಯಿತು. ಅದರಲ್ಲೂ ಶಾಸಕನಾದ ಮೇಲೆ, ಮಲ್ಲೇಶ್ವರ ಕ್ಷೇತ್ರದ ಮಹಾಜನತೆಯ ಆಶೋತ್ತರಗಳನ್ನು ಈಡೇರಿಸಲು ವಿವಿಧ ಕಾರ್ಯಕ್ರಮಗಳನ್ನು ಹಾಕಿಕೊಂಡಾಗಲೆಲ್ಲ ಕೆಂಪೇಗೌಡರ ದಾರ್ಶನಿಕತೆ, ಅವರ ಅಭಿವೃದ್ಧಿಶೀಲತೆಯೂ ನನ್ನನ್ನೂ ಬಹುವಾಗಿ ಕಾಡಿದ್ದರಲ್ಲಿ ಅತಿಶಯವಿಲ್ಲ. ಐದು ಶತಮಾನಗಳೇ ಆಗಿಹೋದ ಮೇಲೆಯೂ ಅವರ ಅಭಿವೃದ್ಧಿಯ ಕುರುಹುಗಳು ಅಚ್ಚಳಿಯದೇ ಉಳಿದಿದೆ ಎಂದರೆ ಅವರಿಂದ ಪ್ರಭಾವಿತನಾಗದೇ ಇರಲು ಹೇಗೆ ಸಾಧ್ಯ.

ವಿಜಯನಗರ, ಅದರಲ್ಲೂ ಶ್ರೀಕೃಷ್ಣದೇವರಾಯರ ಸಮಕಾಲೀನರಾಗಿ ಅವರ ಸಾಮ್ರಾಜ್ಯದ ದಕ್ಷಿಣದಲ್ಲಿ ರಾಮರಾಜ್ಯದಂತ ಆಡಳಿತ ನಡೆಸಿದ ಕೆಂಪೇಗೌಡರ ಬಗ್ಗೆ ಇನ್ನಷ್ಟು ಆಳವಾದ ಅಧ್ಯಯನ ಆಗಬೇಕಿದೆ. ಬೆಂಗಳೂರು ಕಟ್ಟಿದರೆಂಬ ವಿಷಯಕ್ಕಿಂತ ನಂಬಿಕೆ, ಆತ್ಮವಿಶ್ವಾಸ, ನಿಷ್ಠೆ ಮತ್ತು ಮೌಲ್ಯ ಎಂಬ ನಾಲ್ಕು ತತ್ವಗಳ ಮೇಲೆ ಆಡಳಿತವನ್ನು ನಿಲ್ಲಿಸಿದ್ದ ಅವರು, ಜನಪರವಾಗಿ ಕೆಲಸ ಮಾಡಿದ್ದು ಹಾಗೂ ಜೀವಿತದುದ್ದಕ್ಕೂ ಈ ತತ್ವಗಳನ್ನು ಮೀರಿ ನಡೆಯದಿರುವುದು ನನ್ನ ಯೋಚನೆಗಳಲ್ಲಿ ಬದಲಾವಣೆ ತಂದ ಅಂಶಗಳಲ್ಲಿ ಪ್ರಮುಖವು ಎಂದು ನಿಸ್ಸಂಶಯವಾಗಿ ಹೇಳಬಲ್ಲೆ.

ಕುಟಿಲತೆ ಇಲ್ಲದ ರಾಜನೀತಿ, ವಿಸ್ತರಣಾವಾದವಿರದ ರಣನೀತಿ ಇವತ್ತಿಗೂ ಕೆಂಪೇಗೌಡರನ್ನು ರಾಜಕೀಯವಾಗಿಯೂ ಅಜರಾಮರರನ್ನಾಗಿ ಮಾಡಿದೆ. ಅಭಿವೃದ್ಧಿಯ ಅಜೆಂಡಾದೊಂದಿಗೆ ಸಾಗಿದ ಅವರು ಓರ್ವ ಸ್ವತಂತ್ರ ದೊರೆ ಅಥವಾ ಚಕ್ರವರ್ತಿಯೂ ಮಾಡಲು ಸಾಧ್ಯವಾಗದ್ದನ್ನು ನಮಗಾಗಿ ಮಾಡಿಟ್ಟು ಹೋಗಿದ್ದಾರೆ. 59 ವರ್ಷಗಳ ಅವರ ಅವಿಚ್ಛಿನ್ನ ಆಡಳಿತದಲ್ಲಿ ತಲೆತಲೆಮಾರು ಮರೆಯದ ಅದೆಷ್ಟೋ ಮೈಲುಗಲ್ಲುಗಳು ಸ್ಥಾಪನೆಯಾಗಿದ್ದವು. ಇವತ್ತಿನ ಒಕ್ಕೂಟ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬ ನಾಯಕನೂ ಕೆಂಪೇಗೌಡರಿಂದ ಕಲಿಯಲೇಬೇಕಾದ್ದು ಬಹಳಷ್ಟಿದೆ.

ಕೆಂಪೇಗೌಡ ಬೆಂಗಳೂರು ಮತ್ತದರ ಸುತ್ತಮುತ್ತಲಿನ ಪ್ರದೇಶವನ್ನು ಪ್ರಗತಿಪಥದತ್ತ ಕೊಂಡೊಯ್ದರು. ಅತ್ತ ರಾಜಕೀಯ ಮೌಲ್ಯಗಳಿಗೆ ಬೆಲೆ ಕೊಡುತ್ತಲೇ ಮತ್ತೊಂದೆಡೆ ತಮ್ಮ ಪರಿಪಾಲನೆಯ ನೆಲದ ಅಭಿವೃದ್ಧಿಗೆ ಒತ್ತು ನೀಡಿದರು. ಹೀಗಾಗಿ ರಾಜಕೀಯವಾಗಿಯೂ ಕೆಂಪೇಗೌಡರು ವರ್ತಮಾನದ ಪ್ರತಿಯೊಬ್ಬ ನಾಯಕನಿಗೂ ಮಾರ್ಗದರ್ಶಿ ಮತ್ತು ಆದರ್ಶ, ರಾಜಕೀಯ ವಿದ್ಯಾರ್ಥಿಗಳು ಈ ಹಿನ್ನೆಲೆಯಲ್ಲಿ ಗೌಡರನ್ನು ಅಧ್ಯಯನ ಮಾಡಬೇಕಿದೆ.

**ಹೊಸ ತಲೆಮಾರಿಗೆ ಹೇಳಬೇಕು:** ನನ್ನ ಬಹು ಆಸೆ ಎಂದರೆ ಕೆಂಪೇಗೌಡರನ್ನು ಈಗಿನ ಹಾಗೂ ನಂತರದ ತಲೆಮಾರಿನ ಯುವಜನತೆಗೆ ಪರಿಚಯಿಸಬೇಕು. ಅಂತಿಮವಾಗಿ ನನ್ನ ಆಸೆ ಇಷ್ಟೇ. ಮುಂದಿನ ತಲೆಮಾರುಗಳು

ಕೆಂಪೇಗೌಡರ ಬಗ್ಗೆ ಮಾತನಾಡಬೇಕು. ನವಯುಗದ ಯುವಕ ಯುವತಿಯರಿಗೆ, ದೇಶ ವಿದೇಶಗಳ ಜನರು ನಾಡಪ್ರಭುಗಳ ಬಗ್ಗೆ ತಿಳಿಯಬೇಕು. ಅವರ ಅಭಿವೃದ್ಧಿಯ ಮಾದರಿ, ಜನಪರ ಆಡಳಿತ, ರಾಜಕೀಯ ಮೌಲ್ಯಗಳು, ವ್ಯಾಪಾರ–ವಾಣಿಜ್ಯ ಚಟುವಟಿಕೆ, ಪರಿಸರ ಪ್ರೀತಿ ಇತ್ಯಾದಿಗಳು ಚಿರಸ್ಥಾಯಿಯಾಗಿ ಉಳಿಯಬೇಕು. ಇಷ್ಟು ಸಾಕಾರವಾದರೆ ಅದಕ್ಕಿಂತ ಧನ್ಯತೆ ಬೇರೆನಿದೆ.

ಲೇಖಕರು: ಡಾ:ಸಿ.ಎನ್. ಅಶ್ವತ್ಥ ನಾರಾಯಣ,
ಉಪ ಮುಖ್ಯಮಂತ್ರಿ ಹಾಗೂ
ನಾಡಪ್ರಭು ಕೆಂಪೇಗೌಡ ಅಭಿವೃದ್ದಿ ಪ್ರಾಧಿಕಾರದ ಉಪಾಧ್ಯಕ್ಷರು.
ಆಧಾರ:ಉದಯವಾಣಿ, ದಿನಾಂಕ: 27.06.2020

## 13. ಕೋವಿಡ್-19 ವಿರುದ್ಧದ ಹೋರಾಟ ಜನರೇ ನಿಭಾಯಿಸಬೇಕಾದ ಸವಾಲು

ಕೊರೊನಾ ವಿರುದ್ಧದ ನಿರ್ಣಾಯಕ ಹೋರಾಟದಲ್ಲಿ ಜನರು ಮುಖ್ಯ ಪಾತ್ರ ವಹಿಸಬೇಕಾದ ಸಮಯ ಎದುರಾಗಿದೆ. ಲಾಕ್‌ಡೌನ್ ಹೇರಿಕೆಯ ಮೂಲಕ ವಿಧಿಸಿದ ಬಹುತೇಕ ನಿರ್ಬಂಧಗಳು ತೆರವುಗೊಂಡಿರುವ ಸಂದರ್ಭದಲ್ಲಿ ತಮ್ಮ ಸುರಕ್ಷತೆಯ ಬಗ್ಗೆ ನಾಗರಿಕರು ಹೆಚ್ಚಿನ ಎಚ್ಚರ ವಹಿಸಬೇಕಾಗಿದೆ. ಲಾಕ್‌ಡೌನ್ ಎನ್ನುವುದು ಕೊರೊನಾ ನಿಯಂತ್ರಣದ ಪ್ರಯತ್ನವೇ ವಿನಾ ಪರಿಹಾರವಲ್ಲ. ಸೋಂಕಿನ ಬಗ್ಗೆ ಜನಜಾಗೃತಿ ಮೂಡಿಸಲು ಹಾಗೂ ಆರೋಗ್ಯ ಕ್ಷೇತ್ರದ ಮೂಲ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳಲು ಲಾಕ್‌ಡೌನ್ ಸಮಯ ಸರ್ಕಾರಕ್ಕೆ ಅನುಕೂಲಕರವಾಗಿತ್ತು. ಆದರೆ, ಯಾವುದೇ ನಿರ್ಬಂಧವನ್ನು ದೀರ್ಘಕಾಲ ಮುಂದುವರಿಸುವುದು ಅಸಾಧ್ಯ. ಕೊರೊನಾ ಹರಡುವುದನ್ನು ತಡೆಯಲು ದೇಶವ್ಯಾಪಿ ಹೇರಿದ್ದ ಲಾಕ್‌ಡೌನ್, ಆರ್ಥಿಕ ಸ್ಥಿತಿಯನ್ನು ಏರುಪೇರು ಮಾಡಿದೆ. ಜನ ಜೀವನವನ್ನು ಸಂಕಷ್ಟಕ್ಕೀಡು ಮಾಡಿದೆ. ಹಾಗಾಗಿಯೇ, ಕೆಲವು ನಿರ್ಬಂಧಗಳೊಂದಿಗೆ ಎಂದಿನಂತೆ ಜನಜೀವನ ಸಾಗಲು ಸರ್ಕಾರ ಅವಕಾಶ ಕಲ್ಪಿಸಿದೆ. ಜುಲೈ 5ರಿಂದ ಪ್ರತಿ ಭಾನುವಾರ ರಾಜ್ಯದಾದ್ಯಂತ ಕರ್ಫ್ಯೂ ಮಾದರಿಯಲ್ಲಿ ಸಂಪೂರ್ಣ ಲಾಕ್‌ಡೌನ್ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ದೈನಂದಿನ ಕರ್ಫ್ಯೂ ಅವಧಿಯನ್ನು ಒಂದು ತಾಸು ಹಿಗ್ಗಿಸಿದೆ. ಅಂದರೆ, ಪ್ರತಿದಿನ ರಾತ್ರಿ 8ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಜಾರಿಯಲ್ಲಿರುತ್ತದೆ. ಸರ್ಕಾರಿ ಹಾಗು ಸರ್ಕಾರಿ ಸ್ವಾಮ್ಯದ ಕಚೇರಿಗಳ ನೌಕರರಿಗೆ ಜುಲೈ10ರಿಂದ ಅನ್ವಯವಾಗುವಂತೆ ವಾರದ ಕೆಲಸದ ದಿನಗಳನ್ನು ಒಂದು ತಿಂಗಳ ಮಟ್ಟಿಗೆ ಐದು ದಿನಗಳಿಗೆ ಇಳಿಸಿದೆ. ಜನಜೀವನಕ್ಕೆ ಧಕ್ಕೆಯಾಗದಂತೆ ನಿರ್ಬಂಧಗಳನ್ನು ಪಾಲಿಸುವ ಮೂಲಕ ಕೊರೊನಾವನ್ನು ತಡೆಗಟ್ಟುವ ಸಣ್ಣ ಪ್ರಯತ್ನಗಳು ಇವಾಗಿವೆ. ಈ ಕ್ರಮಗಳು ಕೂಡ ವ್ಯಾಪಾರ-ವಹಿವಾಟಿಗೆ ಪೂರಕವಲ್ಲದ ಕಾರಣದಿಂದಾಗಿ ಮುಂದಿನ ದಿನಗಳಲ್ಲಿ ಈ ನಿರ್ಬಂಧಗಳನ್ನೂ ತೆರವುಗೊಳಿಸುವುದು ಅನಿವಾರ್ಯ. ಹೀಗೆ ನಿರ್ಬಂಧಗಳು ತೆರವುಗೊಂಡ ಸಂದರ್ಭದಲ್ಲಿ ಕೊರೊನಾ ವಿರುದ್ಧದ ಸಮುದಾಯದ ಹೋರಾಟ ಮತ್ತಷ್ಟು ಪರಿಣಾಮಕಾರಿ ಆಗಬೇಕಾಗಿದೆ. ಲಾಕ್‌ಡೌನ್ ಹೋರಾಟದಲ್ಲಿ ಜನರನ್ನು ಮುಂಚೂಣಿಗೆ ತಂದು ನಿಲ್ಲಿಸಿದೆ. ಜನರ ಪ್ರಯತ್ನಗಳಿಗೆ ಸರ್ಕಾರವು ಪೂರಕವಾಗಿ ಸ್ಪಂದಿಸಲಿದೆ ಎಂಬ ಸೂಚನೆಗಳು ಈಗಾಗಲೇ ಸ್ಪಷ್ಟವಾಗಿದೆ. 'ಕೊರೊನಾ ವಿರುದ್ಧದ ಭಾರತದ ಹೋರಾಟಕ್ಕೆ ಜನರದೇ ನೇತೃತ್ವವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿರುವುದು ಕೂಡ ಈಗಿನ ಪಿಡುಗನ್ನು ಹಿಮ್ಮೆಟ್ಟಿಸುವಲ್ಲಿ ಜನರ ಪ್ರಯತ್ನಗಳಿಗೆ ಇರುವ ಮಹತ್ವವನ್ನು ಸೂಚಿಸುವಂತಿದೆ.

ಪ್ರಧಾನಿಯ ಕರೆಗೆ ಓಗೊಟ್ಟು ದೀಪ ಹಚ್ಚುವುದಕ್ಕೆ ಹಾಗೂ ಚಪ್ಪಾಳೆ ತಟ್ಟುವುದಕ್ಕೆ ನಾಗರಿಕರು ವ್ಯಕ್ತಪಡಿಸಿದ ಉತ್ಸಾಹವನ್ನು ಸರ್ಕಾರ ಸೂಚಿಸುವ ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದಕ್ಕೂ ತೋರಿಸಬೇಕಿದೆ. ಲಸಿಕೆ ಅಥವಾ ಔಷಧ ಕಂಡುಹಿಡಿಯುವವರೆಗೂ ಕೊರೊನಾ ಸೋಂಕಿನ ಬಿಕ್ಕಟ್ಟಿಗೆ ಪರಿಹಾರವಲ್ಲ. ಮಾಸ್ಕ್ ಹಾಕಿಕೊಳ್ಳುವುದು. ಸಾರ್ವಜನಿಕ ಸ್ಥಳಗಳಲ್ಲಿ ಉಗುಳದಿರುವುದು, ಆಗಾಗ ಕೈತೊಳೆಯುವುದು ಹಾಗೂ ಅಂತರ ಪಾಲಿಸುವ ಮುನ್ನೆಚ್ಚರಿಕೆಗಳು ಜೀವನಕ್ರಮವೇ ಆಗಬೇಕು. ಇಲ್ಲದಿದ್ದರೆ ಕೊರೊನಾ ನಿಯಂತ್ರಣ ಸಾಧ್ಯವಾಗದು. ಈ ಮುನ್ನೆಚರಿಕೆಗಳು ಜನರ ನಡವಳಿಕೆಯಲ್ಲಿ ಅಂತರ್ಗತವಾಗಬೇಕೆ ವಿನಾ ಕಾನೂನು ಮೂಲಕ ಕಾರ್ಯಗತಗೊಳಿಸಲು ಸಾಧ್ಯವಿಲ್ಲ. ಮುನ್ನೆಚರಿಕೆ ಕ್ರಮಗಳನ್ನು ಅನುಸರಿಸುವುದರ ಜೊತೆಗೆ ನಮ್ಮ ಜೀವನ ಶೈಲಿಯನ್ನು ಬದಲಿಸಿಕೊಳ್ಳುವ ಅಗತ್ಯವಿದೆ. ಆರೋಗ್ಯ ಕ್ಷೇತ್ರದ ಮೇಲೆ ಹೆಚ್ಚಿನ ಒತ್ತಡ ಉಂಟಾಗದಂತೆ ಎಚ್ಚರಿಕೆ ವಹಿಸುವುದು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಹಾಗೂ ಆರೋಗ್ಯಕರ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು ಅಗತ್ಯ. ನಾವು ಬದುಕುವುದಲ್ಲದೆ, ನಮ್ಮ ಸುತ್ತಮುತ್ತಲಿನ ಜನರು ಸುರಕ್ಷಿತವಾಗಿರಲು ಅವಕಾಶ ಕಲ್ಪಿಸಬೇಕಾಗಿದೆ. ಹಿರಿಯ ನಾಗರಿಕರು ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕಾಗಿದೆ. ಈ ನಿರ್ಣಾಯಕ ಹೋರಾಟ ವೈಯುಕ್ತಿಕವು ಹೌದು ಸಾಮುದಾಯಿಕವು ಹೌದು. ಸಾರ್ವಜನಿಕರ ಪ್ರಯತ್ನದೊಂದಿಗೆ ಸರ್ಕಾರ ಕೂಡ ಕೊರೊನಾ ತಡೆಗಟ್ಟುವ ವಿಷಯವನ್ನು ಆದ್ಯತೆಯ ಸಂಗತಿಯನ್ನಾಗಿ ಪರಿಗಣಿಸಿ ಕ್ರಿಯಾಶೀಲವಾಗಬೇಕಾಗಿದೆ. ಕಾರ್ಯಾಂಗ ಮತ್ತು ಶಾಸಕಾಂಗದ ಸಂಪೂರ್ಣ ಗಮನ ಆರೋಗ್ಯ ಕ್ಷೇತ್ರದ ಮೇಲೆ ಕೇಂದ್ರಿಕೃತಗೊಳ್ಳಬೇಕಾದ ಸಮಯವಿದು.

ಆಧಾರ:ಪ್ರಜಾವಾಣಿ, ದಿನಾಂಕ: 29.06.2020

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 408 – 500 ಪ್ರತಿಗಳು